ಅಧ್ಯಾಯ ೧೭

# ಪ್ರೇಕ್ಷಣೀಯ ಸ್ಥಳಗಳು

ಕರ್ನಾಟಕದ ಉತ್ತರಕ್ಕೆ ಇರುವ ಗುಲಬರ್ಗಾ ಜಿಲ್ಲೆಯು ಭೌಗೋಳಿಕವಾಗಿ, ಚಾರಿತ್ರಿಕವಾಗಿ, ಧಾರ್ಮಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಫಲವತ್ತಾಗಿದ್ದು ವೈವಿಧ್ಯತೆಯಿಂದ ಕೂಡಿದೆ. ಭೌಗೋಳಿಕವಾಗಿ ಎತ್ತರವಾದ ದಖ್ಖನ್ ಪ್ರಸ್ಥಭೂಮಿಯ ಭಾಗವಾಗಿರುವ ಈ ಪ್ರದೇಶವು ಫಲವತ್ತಾದ ಎರೆ ಮಣ್ಣನ್ನು ಹೊಂದಿದ್ದು, ಕೃಷ್ಣಾ, ಭೀಮಾ, ಕಾಗಿಣಾ, ಅಮರಜಾ, ಬೆಣ್ಣೆತೊರೆ ಮುಂತಾದ ನದಿ ಉಪನದಿಗಳ ಬಯಲು ಬಹು ಹಿಂದಿನಿಂದಲೂ ಜನವಸತಿಯ ನೆಲೆಗಳಿಗೆ ಪ್ರಶಸ್ತವಾಗಿವೆ. ಗುಲಬರ್ಗಾ ಜಿಲ್ಲೆಯ ಹುಣಸಗಿ, ಬೂದಿಹಾಳ, ಹಗರಟಗಿ, ಯಮ್ಮಿಗುಡ್ಡ, ರಾಜನಕೋಳೂರು, ವಿಭೂತಿಹಳ್ಳಿ ಮುಂತಾದ ಸ್ಥಳಗಳಲ್ಲಿ ಇತಿಹಾಸಪೂರ್ವ ಕಾಲಕ್ಕೆ ಸೇರಿದ ಅವಶೇಷಗಳು ಲಭಿಸಿವೆ. ಬಳಿಚಕ್ರ (ಯಾದಗಿರಿ ತಾಲೂಕು), ಹಿರೇಹೆಬ್ಬಾಳ (ಸುರಪುರ ತಾಲೂಕು) ಮುಂತಾದ ಸ್ಥಳಗಳಲ್ಲಿ ಶಿಲಾಯುಗದ ಮಾನವರ ಬಂಡೆ ಚಿತ್ರ-ವರ್ಣಚಿತ್ರಗಳು ಲಭಿಸಿವೆ. ಹುಣಸಗಿಯ ಉತ್ಖನನದಿಂದ ಈ ಭಾಗದ ಪ್ರಾಗೈತಿಹಾಸವನ್ನು ಆದಿ ಶಿಲಾಯುಗ ಸಂಸ್ಕೃತಿಯಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ಮೌರ್ಯರ ಕಾಲದಲ್ಲಿ ಪ್ರಮುಖ ಬೌದ್ಧಕೇಂದ್ರವಾಗಿದ್ದು, ಶಾತವಾಹನರ ಕಾಲದಲ್ಲೂ ಮಹತ್ವ ಪಡೆದಿದ್ದ ಸನ್ನತಿ, ಶಾತವಾಹನರ ಕಾಲದ ಚಾರಿತ್ರಿಕ ಅವಶೇಷಗಳನ್ನುಳ್ಳ ಹಗರಟಗಿ, ಅಣಬಿ, ಹುರಸಗುಂಡಗಿ, ಅವರಾದಿ ಮುಂತಾದ ಸ್ಥಳಗಳಿಂದ ಜಿಲ್ಲೆಯು ಸಮೃದ್ಧವಾಗಿದೆ. ರಾಷ್ಟ್ರಕೂಟರ ರಾಜಧಾನಿಯಾಗಿತ್ತೆಂಬ ಅಭಿಪ್ರಾಯವಿರುವ ಮಳಖೇಡ, ಶಿರವಾಳ, ಸೇಡಂ, ಮಿರ್ಯಾಣ, ಚಿಂಚೋಳಿ, ನಿಡಗುಂದಿ, ಸುಲೇಪೇಟೆ, ಗಡಿಕೇಶ್ವಾರ ಮುಂತಾದ ಸ್ಥಳಗಳಲ್ಲಿ ರಾಷ್ಟ್ರಕೂಟರ ಕಾಲದ ಅವಶೇಷಗಳಿವೆ. ಕಲ್ಯಾಣದ ಚಾಳುಕ್ಯರ ಕಾಲಕ್ಕೆ ಸೇರಿದ ದೇವಾಲಯಗಳಿರುವ ಪ್ರಮುಖ ಸ್ಥಳಗಳು ಜಿಲ್ಲೆಯ ಉದ್ದಗಲಕ್ಕೂ ಕಂಡುಬರುತ್ತಿದ್ದು, ಮುದನೂರು, ಅಗ್ನಿ, ಏವೂರು, ಅರಕೇರಿ(ಜೆ), ಕೆಂಭಾವಿ, ಹಗರಟಗಿ, ಹುಣಸಗಿ, ಶಿರವಾಳ, ಕೊಲ್ಲೂರು, ಕಾಳಗಿ, ನಾಗಾವಿ, ವಡಗೇರಿ, ನಿಂಬರ್ಗಿ, ಸುಲೇಪೇಟೆ, ಹರಸೂರು, ಮರ್ತೂರು, ಮಾಡಿಯಾಳ, ಮಾಶಾಳ, ಸೇಡಂ ಮುಂತಾದ ಸ್ಥಳಗಳನ್ನು ಇಲ್ಲಿ ಉದಾಹರಿಸಬಹುದಾಗಿದೆ. ಕಳಚೂರಿಗಳ ಕಾಲಕ್ಕೆ ಸೇರಿದ ಗುಡಿ ಗುಂಡಾರಗಳನ್ನು ಚಿನಮಳ್ಳಿ, ಹೊಡಲ, ಕಾಳಗಿ, ಕೊಲ್ಲೂರು ಮುಂತಾದ ಕಡೆಗಳಲ್ಲಿ ಕಾಣಬಹುದಾಗಿದೆ. ಜಿಲ್ಲೆಯು ಜೈನಾವಶೇಷಗಳನ್ನು ಸಮೃದ್ಧವಾಗಿ ಹೊಂದಿದ್ದು ಹರಸೂರು, ಹುಣಸಿ ಹಡಗಲಿ, ಅತನೂರು, ಕಾಳಗಿ, ಅಗ್ನಿ, ಏವೂರು, ಸೇಡಂ, ಸುಲೇಪೇಟೆ, ಧುಮ್ಮದ್ರಿ, ಮಳಖೇಡ, ಭಂಕೂರು, ದಂಡೋತಿ, ಪೇಠಶಿರೂರು, ನಾಗಾವಿ, ನೆಲೋಗಿ ಮುಂತಾದೆಡೆಗಳಲ್ಲಿರುವ ಜೈನಬಸದಿಗಳು ಉಲ್ಲೇಖಾರ್ಹವಾಗಿವೆ. ಇದರಿಂದ ಈ ಪ್ರದೇಶವು ಹಿಂದೆ ಜೈನ ಧರ್ಮದ ಗಾಢ ಪ್ರಭಾವಕ್ಕೆ ಒಳಪಟ್ಟಿದ್ದ ಅಂಶ ಗೊತ್ತಾಗುತ್ತದೆ. ಜಿಲ್ಲೆಯಲ್ಲಿ ಪ್ರಾಚೀನ ಕಾಲದ ಕೋಟೆ-ಕೊತ್ತಲಗಳು ಸನ್ನತಿ,

ಹಗರಟಗಿ, ಕೊಲ್ಲೂರು, ಚಿನ್ಮಳ್ಳಿ, ಯಾದಗಿರಿ, ಶಹಾಪುರ, ಗುಲಬರ್ಗಾ, ವಾಗಣಗೇರಿ, ಸುರಪುರ, ವನದುರ್ಗ ಮುಂತಾದ ಕಡೆಗಳಲ್ಲಿವೆ. ಬಹಮನಿ ಹಾಗೂ ಆದಿಲ್‌ಶಾಹಿ ಅರಸರ ಕಾಲಕ್ಕೆ ಸೇರಿದ ಮಸೀದಿ, ದರ್ಗಾ, ಅಷೂರ್‌ಖಾನ ಮುಂತಾದ ಧಾರ್ಮಿಕ ಕಟ್ಟಡಗಳನ್ನು ಗುಲಬರ್ಗಾ, ಶಹಾಪುರ, ಸಗರ, ಗೋಗಿ, ಫಿರೋಜಾಬಾದ್, ಫರಹತಾಬಾದ್, ಮಹಲ್ ರೋಜಾ, ಕೆಂಭಾವಿ, ವಡಗೇರಿ,ಆಳಂದ, ಅಫಜಲಪುರ, ಸುರಪುರ, ಯಾದಗಿರಿ ಮುಂತಾದ ಸ್ಥಳಗಳನ್ನೂ ಒಳಗೊಂಡಂತೆ ಜಿಲ್ಲೆಯ ಉದ್ದಗಲಕ್ಕೂ ನೋಡಬಹುದಾಗಿದೆ, ಮೊಗಲ ಚಕ್ರವರ್ತಿ ಔರಂಗಜೇಬನ ಕಾಲದ ಸ್ಮಾರಕಗಳನ್ನು ಗುಲಬರ್ಗಾದ ಖ್ವಾಜಾ ಬಂದೇ ನವಾಜ್ ದರ್ಗಾದ ಆವರಣದಲ್ಲಿ ನೋಡಬಹುದಾಗಿದೆ. ಜಿಲ್ಲೆಯಲ್ಲಿ ಕ್ರೈಸ್ತ ಧರ್ಮದ ವಿವಿಧ ಪಂಥಗಳಿಗೆ ಸೇರಿದ ಹಲವು ಚರ್ಚುಗಳಿದ್ದು ಅವುಗಳಲ್ಲಿ ಕೆಲವು ಪೋರ್ಚುಗೀಸರಷ್ಟು ಪ್ರಾಚೀನದ್ದಾಗಿದ್ದು, ಗುಲಬರ್ಗಾ ನಗರ ಒಂದರಲ್ಲೇ ಒಂಭತ್ತು ಇಗರ್ಜಿಗಳಿವೆ. ಸುರಪುರದ ನಾಯಕರ ಕಾಲಕ್ಕೆ ಸೇರಿದ ಚಾರಿತ್ರಿಕ ಮಹತ್ವದ ಕಟ್ಟಡಗಳನ್ನು ಸುರಪುರ, ತಿಂಥಿಣಿ, ವಾಗಣಗೇರಿ, ವನದುರ್ಗ, ಹೊಸಕೆರೆ, ದೇವರಗೋನಾಳ ಮುಂತಾದ ಪ್ರದೇಶಗಳಲ್ಲಿ ನೋಡಬಹುದಾಗಿದೆ. ನಿಜಾಮರ ಕಾಲಕ್ಕೆ ಸೇರಿದ ಬಾವಿ, ಕೆರೆಗಳು ಅಲ್ಲಲ್ಲಿ ಕಂಡು ಬರುತ್ತಿದ್ದು, ಸ್ಮಾರಕಗಳನ್ನು ಗುಲಬರ್ಗಾ, ಅಂಕಲಗಿ, ಗೋಗಿ ಮುಂತಾದೆಡೆಗಳಲ್ಲಿ ವೀಕ್ಷಿಸಬಹುದಾಗಿದೆ. ಧಾರ್ಮಿಕ ಮಹತ್ವದ ತಿಂಥಿಣಿ, ಘತ್ತರಗಿ, ದೇವರ ಗಾಣಗಾಪುರ, ನರೋಣಾ, ಸಂಗಮ, ಗೊಟ್ಟಂಗೊಟ್ಟ, ಮೈಲಾರ, ದಂಡಗುಂಡ್, ಸನ್ನತಿ, ಹೊನಗುಂಟಿ, ಮಣ್ಣೂರು, ಮಳಖೇಡ, ನಾಲವಾರ, ಯರಗೋಳ, ಕೊಡೇಕಲ್, ಕಡಕೋಳ, ಛಾಯಾ ಭಗವತಿ, ಆಳಂದ, ಗೋಗಿ, ಗುಲಬರ್ಗಾ ಮುಂತಾದ ಸ್ಥಳಗಳು ವರ್ಷದುದ್ದಕ್ಕೂ ಯಾತ್ರಾರ್ಥಿಗಳಿಗೆ ಪುಣ್ಯಕ್ಷೇತ್ರಗಳಾಗಿವೆ. ಕೊಂಚಾವರಂ ಹಾಗೂ ಗೊಟ್ಟಂಗೊಟ್ಟ ಅರಣ್ಯ ಪ್ರದೇಶಗಳು ಚಾರಣಕ್ಕೆ ಸೂಕ್ತವಾಗಿವೆ. ಎತ್ತಿಪೋತಾ ಹಾಗೂ ಗುರಮಠಕಲ್ ಜಲಪಾತಗಳು, ಚಂದ್ರಂಪಳ್ಳಿ ಜಲಾಶಯ, ಅಮರಜಾ ಅಣೆಕಟ್ಟು, ನಾರಾಯಣಪುರದ ಬಳಿ ಇರುವ ಬಸವಸಾಗರ ಮುಂತಾದವುಗಳು ವಾರಾಂತ್ಯದ ವಿಹಾರಕ್ಕೆ ಅನುಕೂಲವಾಗಿವೆ. ಹೀಗೆ ಯಾತ್ರಾರ್ಥಿಗಳಿಗೆ, ಪ್ರವಾಸಿಗರಿಗೆ, ಪುರಾತತ್ವಜ್ಞರಿಗೆ, ಇತಿಹಾಸಕಾರರಿಗೆ, ಸಂಶೋಧಕರಿಗೆ ಹಾಗೂ ಕೈಗಾರಿಕೋದ್ಯಮಿಗಳಿಗೆ ಜಿಲ್ಲೆಯು ನಾನಾ ರೀತಿಯಿಂದ ಆಕರ್ಷಿಸುತ್ತಿದ್ದು ಜಿಲ್ಲೆಯಲ್ಲಿರುವ ಚಾರಿತ್ರಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಮಹತ್ವದ ಸ್ಥಳಗಳನ್ನು ಇಲ್ಲಿ 'ಅ' ಕಾರಾದಿಯಲ್ಲಿ ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ. ಕಂಸದಲ್ಲಿ ಆಯಾ ಊರಿನ ಜನಸಂಖ್ಯೆಯನ್ನು ೧೯೯೧ರ ಜನಗಣತಿಯಂತೆ ನೀಡಲಾಗಿದೆ.

**ಅಂಕಲಗಿ** (೧೭೪೪)ಯು ತಾಲೂಕು ಕೇಂದ್ರವಾದ ಜೇವರ್ಗಿಯಿಂದ ಪಶ್ಚಿಮಕ್ಕೆ ೩೦ ಕಿ. ಮೀ ದೂರದಲ್ಲಿ ಜೇವರ್ಗಿ-ಸಿಂಧಗಿ ರಸ್ತೆಯಲ್ಲಿ ಜೇರಟಗಿಯಿಂದ ಉತ್ತರಕ್ಕೆ ಸುಮಾರು ೧೫ ಕಿ. ಮೀ. ದೂರದಲ್ಲಿ ಭೀಮಾನದಿಯ ಬಲದಂಡೆಯ ಮೇಲಿರುವ ಚಾರಿತ್ರಿಕ ಮಹತ್ವದ ಊರಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಅಂಕುಲಗೆ' ಎಂದೇ ಉಲ್ಲೇಖಿತಗೊಂಡಿರುವ ಈ ಊರು ಹಿಂದೆ ಅಗ್ರಹಾರವಾಗಿದ್ದು, ತರ್ದವಾಡಿ-೧೦೦೦ಕ್ಕೆ ಸೇರಿದ ಕಂಪಣ, ಅಂಕುಲಗೆ - ೫೦ರ ಮೊದಲ ಸ್ಥಳವಾಗಿ ರಾಜಕೀಯ ಮಹತ್ವ ಪಡೆದಿತ್ತು. ಈ ಊರಿಂದ ಈವರೆಗೆ ಐದು ಶಾಸನಗಳು ವರದಿಯಾಗಿದ್ದು, ಇವುಗಳಲ್ಲಿ ಒಂದು ಕಲ್ಯಾಣದ ಚಾಳುಕ್ಯರ ಕಾಲದ್ದಾಗಿದ್ದು, ಉಳಿದ ನಾಲ್ಕು ಸೇವುಣರ ಕಾಲದ್ದಾಗಿವೆ. ಇವುಗಳಲ್ಲಿ ಶಂಕರಲಿಂಗ ದೇವಾಲಯದಲ್ಲಿರುವ ೧೦೭೭ರ ಶಾಸನವು ಶಂಕರಭಟ್ಟೋಪಾಧ್ಯಾಯರು ತಮಗೆ ದಾನವಾಗಿ ಬಂದ ಅಗ್ರಹಾರ ಅಂಕುಲಗೆಯಲ್ಲಿ ಶಂಕರದೇವರನ್ನೂ ಒಳಗೊಂಡಂತೆ ತ್ರಿಮೂರ್ತಿ ದೇವರ ದೇಗುಲವನ್ನು ನಿರ್ಮಿಸಿದಾಗ, ಆ ದೇವರುಗಳ ಪೂಜಾವಿಧಿಗೆಂದು ಮಾಣಿಕೇಶ್ವರದ ಕೋಲಲ್ಲಿ ೨೦೦ ಮತ್ತರು ಹೊಲ, ೨ ಮತ್ತರು ತೋಟ, ನಾಲ್ಕು ಗಾಣ, ವಿವಿಧ ವಸ್ತುಗಳ ಮಾರಾಟ ಸುಂಕ ಹಾಗೂ ಬ್ರಾಹ್ಮಣರ ಸತ್ರಕ್ಕೆಂದು ೧೦೦ ಮತ್ತರು ಭೂಮಿಯನ್ನೂ ಮಹಾಜನರು ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಇಲ್ಲಿನ ೧೧೭೭ರ ಇನ್ನೊಂದು ಶಾಸನವು ಯಾದವ ಭಿಲ್ಲಮನ ಮಹಾಮಂಡಳೇಶ್ವರ ಮಲ್ಲಿದೇವರರಸನ ಹಿರಿಯ ರಾಣಿ ಮಹಾದೇವಿಯ ಹೆಗ್ಗಡೆ ಮಲ್ಲಯ್ಯನು ನಿರ್ಮಿಸಿದ ಬ್ರಹ್ಮದೇವರಿಗೆ ವಿವಿಧ ವರ್ತಕರು ಬಿಟ್ಟ ದಾನವನ್ನು ತಿಳಿಸಿದರೆ, ಇವರ ಆಳ್ವಿಕೆಗೆ ಸೇರಿದ ೧೧೮೭ರ ಇನ್ನೊಂದು ಶಾಸನವೂ ದಾನ ಬಿಟ್ಟ ವಿಷಯ ತಿಳಿಸುತ್ತದೆ. ಉಳಿದೆರಡು ಶಾಸನಗಳು ಯಾದವ ರಾಮದೇವನ ೪೯ನೇ ವರ್ಷದ್ದಾಗಿದ್ದು ಅಸ್ಪಷ್ಟವಾಗಿವೆ.

ಇಲ್ಲಿಯ ಪ್ರಾಚೀನ ದೇವಾಲಯಗಳಲ್ಲಿ **ಸುಸ್ಥಿತಿ**ಯಲ್ಲಿರುವ ಶಂಕಲಿಂಗ ದೇವಾಲಯವೇ ಮೇಲಿನ ಶಾಸನೋಕ್ತ ಶಂಕರದೇವ ದೇಗುಲವಾಗಿದ್ದು ಸುಂದರವಾಗಿದೆ. ವಿಶಾಲವಾದ ಪ್ರಾಕಾರದಲ್ಲಿ ಪೂರ್ವಾಭಿಮುಖವಾಗಿರುವ ಈ ದೇವಾಲಯವು ತ್ರಿಕೂಟವಾಗಿದ್ದು, ಒಂದೇ ನವರಂಗ ಇವುಗಳನ್ನು ಒಗ್ಗೂಡಿಸಿದೆ. ನವರಂಗದಿಂದ ಪೂರ್ವಕ್ಕೆ

ಸಭಾಮಂಟಪವಿದ್ದು, ದೇವಾಲಯವನ್ನು ಬಳಸಿ ನಿಂತಿರುವ ಪ್ರಾಕಾರಕ್ಕೆ ದ್ವಾರಮಂಟಪವಿದೆ. ಎಲ್ಲಾ ಮೂರು ಗರ್ಭಗೃಹಗಳಲ್ಲಿ ಶಿವಲಿಂಗಗಳಿದ್ದು ಅವುಗಳಲ್ಲೊಂದು ಬಲಹರಿ ಲಿಂಗವಾಗಿದೆ. ಗರ್ಭಗೃಹದ ದ್ವಾರಬಂಧವು ತ್ರಿಶಾಂಖಾಲಂಕೃತವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಇದೆ. ತೆರೆದ ಸಭಾಮಂಟಪವು ಕಕ್ಷಾಸನವನ್ನು ಹೊಂದಿದ್ದು, ನಾಲ್ಕು ಮಾದರಿಯ ಕಂಬಗಳನ್ನಿಲ್ಲಿ ಕಾಣಬಹುದಾಗಿದೆ. ಈ ಕಕ್ಷಾಸನದ ಹಿಂಬದಿಯು ಅಷ್ಟಕೋನಾಕಾರದ ಅಲಂಕಾರಗಳನ್ನು ಹೊಂದಿದ್ದು, ಅಧಿಷ್ಠಾನ ಭಾಗದಲ್ಲಿ ವಜ್ರಪಟ್ಟಿಕೆ ಹಾಗೂ ಆನೆಗಳ ಸಾಲನ್ನು ಕೆತ್ತಲಾಗಿದೆ. ಈ ಗುಡಿಯ ಶಿಖರಗಳು ನಶಿಸಿಹೋಗಿವೆ. ಈ ಗುಡಿಯ ಸಮೀಪದಲ್ಲೇ ಇರುವ ರಾಮಲಿಂಗೇಶ್ವರ ದೇವಾಲಯವೂ ಕೂಡ ಸು ೧೧-೧೨ನೇ ಶತಮಾನದ ದೇವಾಲಯವಾಗಿದ್ದು ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಈ ದೇವಾಲಯದ ನವರಂಗದ ಮುಂಭಾಗವು ಜಾಲಂದ್ರವುಳ್ಳ ಭಿತ್ತಿಯನ್ನು ಹೊಂದಿದ್ದು, ಮುಖಮಂಟಪವೂ ಸೇರಿದಂತೆ ಕಕ್ಷಾಸನ ಸೌಲಭ್ಯವನ್ನು ಹೊಂದಿದೆ. ನವರಂಗದ ಕಂಬದ ಮೇಲೆ ರಾಮ, ಸೂರ್ಯ, ಭೈರವ ವಿಷ್ಣು, ನರ್ತಕಿಯರೇ ಮುಂತಾದ ಕಿರು ಉಬ್ಬು ಶಿಲ್ಪಗಳಿವೆ. ಊರ ಹೊಳೆ ದಾರಿಯ ಬಳಿಯಿರುವ ಮಹಾದೇವ ದೇಗುಲವು ಸು ೧೧ನೇ ಶತಮಾನದ್ದಾಗಿದ್ದು, ಇಂದು ಗರ್ಭಗೃಹ ಹಾಗೂ ಅರ್ಧಮಂಟಪಗಳಷ್ಟೆ ಉಳಿದಿವೆ. ಇದರ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಬಾಗಿಲವಾಡವು ತ್ರಿಶಾಖಾಪಟ್ಟಿಕೆಯಿಂದ ಅಲಂಕೃತಗೊಂಡಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಇದೆ. ಊರಲ್ಲಿ ಶ್ರೀ ಸಮರ್ಥರಾಮದಾಸ ಮಹಾರಾಜರ ಗುಡಿ, ಲಕ್ಷ್ಮಿ ದ್ಯಾವಮ್ಮ ಹನುಮಂತ, ಹಾಲಮ್ಮ ಗಂಗಪ್ಪ, ಯಮನೂರಪ್ಪ ಹಾಗೂ ಮಲ್ಲಪ್ಪನ ಗುಡಿಗಳಿದ್ದು, ಮಸೀದಿ ಹಾಗೂ ಎರಡು ವೀರಶೈವ ಮಠಗಳಿವೆ.

**ಅಗ್ನಿ** (೧೮೪೪) ಯು ತಾಲೂಕು ಕೇಂದ್ರವಾದ ಸುರಪುರದಿಂದ ವಾಯವ್ಯಕ್ಕೆ ೩೨ ಕಿ ಮೀ., ಹುಣಸಗಿಯಿಂದ ಉತ್ತರಕ್ಕೆ ೧೫ ಕಿ.ಮೀ., ಕೆಂಭಾವಿಯಿಂದ ನೈಋತ್ಯಕ್ಕೆ ೧೭ ಕಿ. ಮೀ. ದೂರದಲ್ಲಿ ಸ್ವಲ್ಪ ಒಳಕ್ಕಾದಂತೆ ಇದೆ. ಇಲ್ಲಿಂದ ಈವರೆಗೆ ಯಾವುದೇ ಶಾಸನ ವರದಿಯಾಗಿರದಿದ್ದರೂ, ನೆರೆಯ ಚಿಕ್ಕಮುದನೂರಿನ ೧೧೯೯ರ ಶಾಸನದಲ್ಲಿ 'ಅಗ್ಗಣಿ' ಎಂದೇ ಉಲ್ಲೇಖಿತಗೊಂಡಿರುವ ಈ ಊರು ಜೈನಬಸದಿ ಹಾಗೂ 'ಶಹಾಪತಿ ಶಲಾಲ್' ದರ್ಗಾಗಳಿಂದಾಗಿ ಪ್ರಸಿದ್ಧವಾಗಿದೆ. ಪೋಲೀಸ್ ಪಾಟೀಲರ ಹಿತ್ತಲಿನಲ್ಲಿರುವ ಈ ಬಸದಿಯು ಉತ್ತರಾಭಿಮುಖವಾಗಿದ್ದು ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಸಿಂಹಪೀಠದ ಮೇಲಿರುವ ಮಹಾವೀರ ತೀರ್ಥಂಕರನ ಪದ್ಮಾಸೀನ ಶಿಲ್ಪವು ಸುಂದರವಾಗಿದೆ. ಇದರ ಬಾಗಿಲವಾಡವು ನಾಲ್ಕು ಶಾಖೆಗಳನ್ನು ಹೊಂದಿದ್ದು, ಲಲಾಟದಲ್ಲಿ ತೀರ್ಥಂಕರನ ಕಿರು ಕೆತ್ತನೆ ಇದೆ. ದ್ವಾರಬಂಧದ ಇಕ್ಕೆಲಗಳಲ್ಲಿರುವ ಮಾತಂಗ ಯಕ್ಷ ಹಾಗೂ ಸಿದ್ದಾಯಿಕಾ ಯಕ್ಷಿಯರ ಶಿಲ್ಪಗಳೂ ಆಕರ್ಷಕವಾಗಿವೆ. ಸುಮಾರು ೧೧ನೇ ಶತಮಾನಕ್ಕೆ ಸೇರಿದ ಈ ಬಸದಿಯಿಂದು ಶಿಥಿಲಾವಸ್ಥೆಯಲ್ಲಿದೆ. ಊರ ನಡುವೆ ಇರುವ ಹೊನ್ನಲಿಂಗೇಶ್ವರ ಗುಡಿಯು ಕಲ್ಯಾಣದ ಚಾಳುಕ್ಯರ ಕಾಲದ ಲಿಂಗ ಹಾಗೂ ಸುಮಾರು ೧೩-೧೪ನೇ ಶತಮಾನದ ಎರಡು ವೀರಗಲ್ಲುಗಳನ್ನು ಹೊಂದಿದ್ದು ಪೂರ್ಣ ಜೀರ್ಣೋದ್ಧಾರಗೊಂಡಿದೆ. ಈ ಗುಡಿ ಶರಣ ಅಗ್ಗವಣಿ ಹೊನ್ನಯ್ಯನ ಸಮಾಧಿಯಾಗಿದ್ದು ಇದು ಇವನ ಊರೆಂಬ ಅಭಿಪ್ರಾಯವಿದೆ. ಆದರೆ ಇವನು ಲಕ್ಷ್ಮೇಶ್ವರ (ಧಾರವಾಡ ಜಿಲ್ಲೆ)ದವನೆಂದು ವೀರಶೈವ ಪುರಾಣಗಳು ಹೇಳುತ್ತವೆ. ಊರ ಪೂರ್ವಕ್ಕೆ ಸಿದ್ಧಲಿಂಗೇಶ್ವರ ಗುಡಿ ಇದೆ. ಉಳಿದಂತೆ ಊರಲ್ಲಿ ಹನುಮಂತನ ಗುಡಿ ಇದ್ದು, ಶಹಾಪತಿ ಶಲಾಲ್ ಪೀರ್‌ನ ದರ್ಗಾ ಗಾತ್ರದಲ್ಲಿ ಕಿರಿದಾದರೂ ಸುಂದರವಾಗಿದೆ.

**ಅ(ಆ)ಡಕಿ** (೪೨೨೧)ಯು ತಾಲೂಕು ಕೇಂದ್ರವಾದ ಸೇಡಂನಿಂದ ಆಗ್ನೇಯಕ್ಕೆ ೧೭ ಕಿ. ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಅಡಕ್ಕಿ' ಎಂದೇ ಉಲ್ಲೇಖಿತಗೊಂಡಿರುವ ಇಲ್ಲಿಂದ ಈವರೆಗೆ ಆರು ಶಾಸನಗಳು ವರದಿಯಾಗಿವೆ. ಮಾರುತಿ ದೇವಾಲಯದ ಎರಡು ಕಂಬಗಳ ಮೇಲೆ ಇರುವ ಈ ಶಾಸನಗಳು ಸೀರೆಯ ಕಾಳಿಸೆಟ್ಟಿ ಹಾಗೂ ಕೊಪ್ಪದೇವ ಮಾಡಿಸಿದ ಜೈನ ಬಸದಿಗಳಿಗೆ ಬೇರೆ ಬೇರೆ ಕಾಲಗಳಲ್ಲಿ ನೀಡಿದ ದಾನ ಶಾಸನಗಳಾಗಿವೆ. ಇವುಗಳಲ್ಲಿ ಎರಡು ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ್ದು, ಮಹಾಮಂಡಳೇಶ್ವರ ಕೊಪ್ಪದೇವ ಹಾಗೂ ಜೈನಯತಿ ಗುಣವೀರ ಸಿದ್ಧಾಂತದೇವರ ಬಗ್ಗೆ ಉಲ್ಲೇಖಿಸುತ್ತ, ಪಾರ್ಶ್ವನಾಥ ಬಸದಿಯನ್ನು ಮಾಡಿಸಿ (೧೧೨೫), ಕೊಪ್ಪ ಜಿನಾಲಯ ಎಂದು ಅದಕ್ಕೆ ಹೆಸರಿಟ್ಟು, ದೇವರ ಸೇವೆಗೆಂದು ದಂಡನಾಯ್ಕ ಕೊಪ್ಪರಸರು ಒಂದು ಮತ್ತರು ತೋಟ ಹಾಗೂ ಇನ್ನಿತರ ದಾನಗಳನ್ನು ನೀಡಿದುದನ್ನು ಹೇಳುತ್ತದೆ. ಆ ಸಂದರ್ಭದಲ್ಲಿ ಊರ ನಕರರು ಎರಡೂ ಬಸದಿಯ ದೇವರುಗಳ ನಂದಾದೀವಿಗೆಗೆಂದು ಎಣ್ಣೆಯನ್ನು ದಾನ ಬಿಟ್ಟ ವಿಷಯವನ್ನೂ

ತಿಳಿಸುತ್ತದೆ. ಇಲ್ಲಿಯ ಇನ್ನೊಂದು ಕಂಬದ ಮೇಲಿರುವ ೧೧೬೫ರ ಶಾಸನವು ಕಳಚೂರಿ ರಾಯಮುರಾರಿ ಸೋವಿದೇವನ ಕಾಲಕ್ಕೆ ಸೇರಿದ್ದು, ಮಹಾಮಂಡಳೇಶ್ವರರಾದ ಮಿರಿಂತೆನಾಡ ಏಚರಸರು ಹಾಗೂ ಅಡಕ್ಕಿಯ ಪ್ರಭುಗಳು ಅಯ್ಯಾವೊಳೆ-೫೦೦, ಮುಮ್ಮುರಿದಂಡ ಹಾಗೂ ಉಭಯನಾನಾದೇಶಿಗಳು, ತೆಂಕಣ ಕೊಪ್ಪ ಜಿನಾಲಯದ ಚೆನ್ನಪಾರ್ಶ್ವದೇವರ ಅಂಗಭೋಗಕ್ಕೆ ಹಾಗೂ ಪೂಜಾವಿಧಿಗೆಂದು ವಿವಿಧ 'ಆಯ'ಗಳನ್ನು ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ಇಲ್ಲಿಯ ಇನ್ನೊಂದು ಕಂಬದ ಮೇಲಿರುವ ೧೧೭೨ರ ಶಾಸನವು ರಾಯಮುರಾರಿ ಸೋವಿದೇವನ ಆಳ್ವಿಕೆಯಲ್ಲಿ ಮಹಾಮಂಡಳೇಶ್ವರ ಏಚರಸ, ಊರ ಪ್ರಭುಗಳು, ಹಾಗೂ ವರ್ತಕರು ಕೂಡಿಕೊಂಡು ಘಟಾಂತಕಿ ದೇವಿಯ ತೀರ್ಥದ ಪಿರಿಯ ಬಸದಿಯ ಪಾರ್ಶ್ವದೇವರಸೇವೆಗೆಂದು ವಿವಿಧ ವಸ್ತುಗಳ ಮೇಲಿನ ಸುಂಕವನ್ನು ದಾನ ಬಿಟ್ಟ ಅಂಶವನ್ನು ಹೇಳುತ್ತದೆ. ಜೊತೆಗೆ ಈ ಶಾಸನವೂ ಕೂಡ ಸಾಂದರ್ಭಿಕವಾಗಿ ಎರಡೂ ಬಸದಿಗಳ ನಂದಾದೀಪ ಸೇವೆಗೆಂದು ತಿಂಗಳಿಗೆ ಎರಡು ಸೊಳಸ ಎಣ್ಣೆಯನ್ನು ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ಇಲ್ಲಿಯ ಇನ್ನೊಂದು ಶಾಸನವು ತೆಂಕಣ ಕೊಪ್ಪ ಜಿನಾಲಯಕ್ಕೆ, ಗಾಣಕ್ಕೆ ಸೊಂಟಿಗೆ ಎಣ್ಣೆಯಂತೆ ಎಣ್ಣೆ ಸುಂಕವನ್ನು ದೇವರ ನಂದಾದೀಪದ ಸೇವೆಗೆಂದು ಉಭಯ ನಾನಾದೇಶಿಗಳು, ಪ್ರಭು ಹಾಗೂ ದೇಸಿಗರು ಯಾದವ ಸಿಂಘಣನ (೧೨೧೦) ಆಳ್ವಿಕೆಯಲ್ಲಿ ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ಮೇಲಿನ ಶಾಸನಗಳಿಂದ ಹಿಂದೆ ಇಲ್ಲಿ ಎರಡು ಬಸದಿಗಳಿದ್ದ ಅಂಶ ವೇದ್ಯವಾಗುತ್ತದೆ. ಆದರಿಂದು ಊರಲ್ಲಿ ಪೇಟೆ ಹನುಮಂತನ ಗುಡಿ ಬಳಿ ಬಿದ್ದಿರುವ ಜಿನ ಶಾಸನ ಕಲ್ಲು, ತೀರ್ಥಂಕರರ ಕಿರು ಕೆತ್ತನೆಗಳಿರುವ ಕಂಬದ ಖಂಡ ಭಾಗ, ಮಹಾವೀರ ಹಾಗೂ ಚೌವ್ವಿಸ್ ತೀರ್ಥಂಕರ ಶಿಲ್ಪಗಳನ್ನು ಹೊರತುಪಡಿಸಿ ಇನ್ನಾವುದೇ ಜೈನಾವಶೇಷಗಳು ಉಳಿದಿರದೆ ಆಸಕ್ತರಿಗೆ ನಿರಾಸೆಯಾಗುತ್ತದೆ. ಊರ ಕೋಟೆಯೊಳಗೆ ಇರುವ ಈಶ್ವರ ಗುಡಿಯು ಸುಮಾರು ೧೧-೧೨ನೇಯ ಶತಮಾನದ ರಚನೆಯಾಗಿದ್ದು ಗರ್ಭಗೃಹ ಹಾಗೂ ಅಂತರಾಳ ಭಾಗಗಳಷ್ಟೆ ಉಳಿದಿದ್ದು, ಗರ್ಭಗೃಹದಲ್ಲಿ ಬಲಹರಿ ಶಿವಲಿಂಗವಿದ್ದು, ಅಂತರಾಳದಲ್ಲಿ ಸುಂದರವಾದ ಚಂದ್ರಶಿಲೆ ಇದೆ. ಇಲ್ಲಿಯ ವೆಂಕಟರಮಣ ಗುಡಿಯು ಪೂರ್ಣ ಜೀರ್ಣೋದ್ಧಾರಗೊಂಡಿದ್ದರೂ, ಕಲ್ಯಾಣದ ಚಾಳುಕ್ಯರ ಕಾಲದ ಕಂಬಗಳನ್ನು ಒಳಗೊಂಡಂತೆ ಅನಂತಶಯನನ ಪ್ರಾಚೀನ ಶಿಲ್ಪವನ್ನೂ ಹೊಂದಿದೆ. ಉಳಿದಂತೆ ಊರಲ್ಲಿ ವೀರಭದ್ರ, ಹನುಮಂತ, ಗ್ರಾಮದೇವತೆ, ಮರಗಮ್ಮ ದ್ಯಾವಮ್ಮ ಅಡವಿ ಬಸವಣ್ಣ ಮುಂತಾದ ನವೀನ ಗುಡಿಗಳಿವೆ. ಮೇಲಾಗಿ ಮಸೀದಿ ಹಾಗೂ ದರ್ಗಾ ಕೂಡ ಇದ್ದು, ಹದಿನೈದು ಕಮಾನುಗಳನ್ನುಳ್ಳ ಬೃಹತ್ತಾದ ಇಮಾರತಿಯು ಪಾಳು ಬಿದ್ದಿದ್ದು, ಹಿಂದೆ ಇದನ್ನು ಆನೆಗಳನ್ನು ಕಟ್ಟಲು ಬಳಸಲಾಗುತ್ತಿತ್ತೆಂಬ ಸ್ಥಳೀಯ ಅಭಿಪ್ರಾಯವಿದೆ.

**ಅಣಬಿ**(೫೦೯೮) ಯು ತಾಲೂಕು ಕೇಂದ್ರವಾದ ಶಹಾಪುರದಿಂದ ಈಶಾನ್ಯಕ್ಕೆ ೨೨ ಕಿ. ಮೀ, ಶಿರವಾಳದಿಂದ ಉತ್ತರಕ್ಕೆ ಐದು ಕಿ. ಮೀ. ದೂರದಲ್ಲಿ ಭೀಮಾನದಿಯ ಬಲದಂಡೆಯ ಮೇಲಿರುವ ಚಾರಿತ್ರಿಕ ಮಹತ್ವದ ಊರಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಅಳಂಬೆ', 'ಅಗ್ರಹಾರ ಅಳಂಬೆ' ಎಂದೇ ಉಲ್ಲೇಖಿತಗೊಂಡಿರುವ ಈ ಊರು ಶಾತವಾಹನರ ಕಾಲದಷ್ಟು ಪ್ರಾಚೀನ ನೆಲೆಯಾಗಿದ್ದು ಇಲ್ಲಿಂದ ಈವರೆಗೆ ಶಾತವಾಹನರ ಕಾಲಕ್ಕೆ ಸೇರಿದ ಒಂದು ಪ್ರಾಕೃತ ಶಾಸನ, ಕಲ್ಯಾಣದ ಚಾಳುಕ್ಯರ ಕಾಲಕ್ಕೆ ಸೇರಿದ ಒಂದು ಕನ್ನಡ ಶಾಸನ ಹಾಗೂ ಮಠದ ಬಳಿ ಇರುವ ೧೭೨೮ರ ಶಾಸನವೂ ಸೇರಿದಂತೆ ಮೂರು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಭೀಮಾನದಿಗೆ ಹೋಗುವ ದಾರಿಯಲ್ಲಿ ಹಿರೇಮಠದ ಮುಂದಿರುವ ಶಾಸನ ಕಲ್ಲು ಸುಮಾರು ಎರಡನೆಯ ಶತಮಾನಕ್ಕೆ ಸೇರಿದ್ದು, ನೊಗ ಸಿಡಿದ ಚಕ್ಕಡಿಯ ದೃಶ್ಯ, ಆಸೀನ ದಂಪತಿ, ಪರಿಚಾರಕರು ಹಾಗೂ ಚೈತ್ಯಾಲಂಕೃತ ಮಂಟಪದಲ್ಲಿರುವ ದಂಪತಿಗಳನ್ನುಳ್ಳ ಶಾತವಾಹನ ಕಾಲದ ಮೂರು ಹಂತದ ಕೆತ್ತನೆಯನ್ನು ಹೊಂದಿದೆ. ಅದರ ಮೇಲೆ ಎಂಟು ಅಕ್ಷರದ "ಘರತ ಯಶೋಪಾಲಾಯ" ಎಂಬ ಪ್ರಾಕೃತ ಭಾಷೆಯ ಬ್ರಾಹ್ಮಿ ಶಾಸನವಿದೆ. ಇದೊಂದು ಸ್ಮಾರಕ ಶಿಲ್ಪವಾಗಿದ್ದು, ಇದೇ ಮಾದರಿಯ ಇನ್ನೂ ಮೂರ್‍ನಾಲ್ಕು ಶಾಸನರಹಿತ ಫಲಕಗಳು ಊರ ಹೊಲಗಳಲ್ಲಿ ಲಭಿಸಿವೆ. ಇದು ಈ ಊರು ಶಾತವಾಹನರ ಕಾಲಕ್ಕಾಗಲೇ ಪ್ರಮುಖ ಸ್ಥಳವಾಗಿದ್ದ ಅಂಶವನ್ನು ಸೂಚಿಸುತ್ತದೆ. ಕಲ್ಯಾಣದ ಚಾಳುಕ್ಯರ ಕಾಲಕ್ಕೆ ಸೇರಿದ ೧೦೫೮ರ ಸ್ತಂಭ ಶಾಸನವು ಕುಂಬಾರ ಸಾಲಿ ಗುಡಿ ಮುಂದಿದ್ದು, ಜಗದೇಕಮಲ್ಲನ ಆಳ್ವಿಕೆಯಲ್ಲಿ ಅಗ್ರಹಾರ ಅಳಂಬೆಯ ಕೂಡಲ ಶ್ರೀ ಮಲ್ಲಿಕಾರ್ಜುನ ದೇವರಿಗೆ ತೊರೆಯ ಉತ್ತರ ದಡದಲ್ಲಿ ೨೮ ಗೇಣ ಸಿಂಗನ ಗರುಡನ ಗಳೆಯಲ್ಲಿ ೫೦ ಮತ್ತರು ಭೂಮಿಯನ್ನು ಮಧುಸೂದನಯ್ಯ ನಾಯಕರು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಊರ ನಡುವೆ ಇರುವ ರಾಮಲಿಂಗೇಶ್ವರ ದೇಗುಲವು ಅಂತರ್ಗತ.ದೇಗುಲವಾಗಿದ್ದು, ಗರ್ಭಗೃಹ, ಜಾಲಂದ್ರಾಲಂಕೃತ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು

ಅಂತರಾಳದಲ್ಲಿ ಎರಡು ದೇವಕೋಷ್ಠಗಳಿವೆ. ನವರಂಗದಲ್ಲಿ ಗಣಪತಿ ಹಾಗೂ ನಂದಿಯ ಶಿಲ್ಪಗಳಿವೆ. ಈ ಗುಡಿಯು ಸುಮಾರು ೧೧-೧೨ನೇ ಶತಮಾನದ ರಚನೆಯೆಂದು ಭಾವಿಸಬಹುದಾಗಿದೆ. ಊರಲ್ಲಿ ಕುಂಬಾರ ಓಣಿಯಲ್ಲಿರುವ ಕುಂಬಾರ ಗುಡಿಯು ಐದಾರು ಗರ್ಭಗೃಹಗಳನ್ನು ಹೊಂದಿರುವ ಸುಮಾರು ೧೨ನೇ ಶತಮಾನದ ರಚನೆಯಾಗಿದ್ದು, ಇಂದು ಇದರಲ್ಲಿ ಕುಂಬಾರರು ವಾಸವಿದ್ದಾರೆ. ಊರ ಉತ್ತರಕ್ಕೆ ಭೀಮಾನದಿ ತೀರದಲ್ಲಿ ದೇವಾಲಯದ ದೊಡ್ಡ ಸಂಕೀರ್ಣವಿದ್ದು, ಪ್ರಾಯಶಃ ಶಾಸನೋಕ್ತ ಕೂಡಲ ಶ್ರೀ ಮಲ್ಲಿಕಾರ್ಜುನ ದೇವಾಲಯ ಇದೇ ಆಗಿರಬೇಕೆಂದು ತೋರುತ್ತದೆ. ಎತ್ತರವಾದ ಪ್ರಾಕಾರದ ನಡುವೆ ವಿಶಾಲವಾದ ಪ್ರದೇಶದಲ್ಲಿರುವ ಈ ದೇವಾಲಯ ಸಂಕೀರ್ಣದಲ್ಲಿ ಎತ್ತರವಾದ ವೇದಿಕೆಯಿದ್ದು, ಅದರ ಸುತ್ತ ಐದಾರು ಕಿರು ದೇವಾಲಯಗಳು, ೧೨ ಸಣ್ಣ ಕೊಠಡಿಗಳು ಹಾಗೂ ಒಂದು ಪುಷ್ಕರಣಿ ಇದ್ದು ಇದನ್ನು ಪ್ರವೇಶಿಸಲು ಪೂರ್ವ-ಪಶ್ಚಿಮಗಳಲ್ಲಿ ದ್ವಾರಮಂಟಪಗಳಿವೆ. ಇಲ್ಲಿ ಉತ್ತರಾಭಿಮುಖವಾಗಿ ನಾಲ್ಕು, ಪಶ್ಚಿಮಾಭಿಮುಖವಾಗಿ ಒಂದು, ದಕ್ಷಿಣಾಭಿಮುಖವಾಗಿ ಒಂದು,ಹಾಗೂ ಪೂರ್ವಾಭಿಮುಖವಾಗಿ ಒಂದು ದೇವಾಲಯಗಳಿವೆ. ಇವುಗಳಲ್ಲಿ ಹೆಚ್ಚಿನವು ಗರ್ಭಗೃಹ ಹಾಗೂ ಅರ್ಧಮಂಟಪಗಳನಷ್ಟೇ ಹೊಂದಿದ್ದರೆ, ಒಂದೆರಡಕ್ಕೆ ನವರಂಗವೂ ಇದೆ. ಈ ದೇವಾಲಯಗಳಲ್ಲಿ ಒಂದು ಸ್ವಲ್ಪ ಬೃಹತ್ ಪ್ರಮಾಣದ್ದಾಗಿದೆ. ಆಯಾತಕಾರದ ತಳವಿನ್ಯಾಸವನ್ನುಳ್ಳ ಇದು ಬಹುಶಃ ಹಿಂದೆ ಶಾಲೆಯಾಗಿದ್ದಂತೆ ತೋರುತ್ತದೆ. ಇಲ್ಲಿಯ ಕೆಲವು ಗುಡಿಗಳಿಗೆ ಕದಂಬ ನಾಗರ ಶಿಖರಗಳಿವೆ. ಇಂದು ಪೂರ್ಣ ಜೀರ್ಣಾವಸ್ಥೆಯಲ್ಲಿರುವ ಈ ಸಂಕೀರ್ಣವು ಹಿಂದೆ ವಿದ್ಯಾ ಕೇಂದ್ರವಾಗಿದ್ದು, ನೈಷ್ಠಿಕ ಬ್ರಹ್ಮಚಾರಿಗಳಿಗೆ, ತಪೋಧನರಿಗೆ ಹಾಗೂ ವಿದ್ಯಾರ್ಥಿಗಳಿಗಷ್ಟೆ ಪ್ರವೇಶವಿದ್ದ ನಿರ್ಬಂಧಿತ ಪ್ರದೇಶವಾಗಿತ್ತು. ಊರ ಅಗಸಿ ಮುಂದಿರುವ ಜೋಡಿ ಹನುಮಂತನ ಗುಡಿಯು ನಿಜಾಮರ ಕಾಲದ ರಚನೆಯಾಗಿದ್ದು ಎರಡು ಗರ್ಭಗೃಹಗಳಿಗೂ ಸೇರಿದಂತೆ ಒಂದೇ ಸಭಾಮಂಟಪವಿದೆ. ಈ ದೇವಾಲಯದ ಶಿಖರದಲ್ಲಿ ವೈವಿಧ್ಯಮಯವಾದ ಮಿಥುನ ಶಿಲ್ಪಗಳಿವೆ. ಉಳಿದಂತೆ ಊರಲ್ಲಿ ರಾಮಲಿಂಗೇಶ್ವರ, ಬಸವಣ್ಣ, ಮರಗಮ್ಮ ಮುಂತಾದ ನವೀನ ಗುಡಿಗಳಿದ್ದು, ಭೀಮಾ ನದಿ ತೀರದಲ್ಲಿ ಸಿಹಿ ನೀರಿನ ಬುಗ್ಗೆ ಇದೆ. ಶಹಾಪುರದಿಂದ ಮಂದಾಕಿನಿ ನದಿಯು ಗುಪ್ತಗಾಮಿನಿಯಾಗಿ ಬಂದು ಸಿಹಿ ನೀರಿನ ಬುಗ್ಗೆಯ ಬಳಿ ಭೀಮಾನದಿಯನ್ನು ಕೂಡುತ್ತದೆಂಬ ಅಭಿಪ್ರಾಯವಿದ್ದು ಇದನ್ನು ಶಾಸನವೂ ಸಮರ್ಥಿಸುವಂತೆ ತೋರುತ್ತದೆ.

**ಆತನೂರು** (೩೮೦೫) ತಾಲೂಕು ಕೇಂದ್ರವಾದ ಅಫಜಲಪುರದಿಂದ ಈಶಾನ್ಯಕ್ಕೆ ೧೪ ಕಿ. ಮೀ, ಗುಲಬರ್ಗಾದಿಂದ ನೈಋತ್ಯಕ್ಕೆ ೪೧ ಕಿ. ಮೀ. ದೂರದಲ್ಲಿ ಗುಲಬರ್ಗಾ - ಅಫಜಲಪುರ ರಸ್ತೆಯಲ್ಲಿರುವ ಮಹತ್ವದ ಕೇಂದ್ರವಾಗಿದೆ. ಪ್ರಾಚೀನ ಶಾಸನಗಳಲ್ಲಿ ಅತ್ತಿನೂರು-೮೦ ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಅಲಂದೆ - ೧೦೦೦ಕ್ಕೆ ಸೇರಿದ ಕಂಪಣವಾಗಿದ್ದು, ಎಂಭತ್ತು ಹಳ್ಳಿಗಳ ಆಡಳಿತ ಕೇಂದ್ರವಾಗಿ ಪ್ರಾಮುಖ್ಯತೆ ಪಡೆದಿದ್ದು, ಇಲ್ಲಿಂದ ಈವರೆಗೆ ನಾಲ್ಕು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಒಂದು ಸುಮಾರು ೧೨ ನೇ ಶತಮಾನಕ್ಕೆ ಸೇರಿದ್ದು, ಬಾಚರಸನು ಪುಲ್ಲಿವಿಗೆ ಗ್ರಾಮದ ಸಿದ್ಧಾಯದಲ್ಲಿ ಸೊಡರೆಣ್ಣೆಗೆಂದು ಐದು ಪಣವನ್ನು ದಾನ ಕೊಟ್ಟ ವಿಷಯವನ್ನು ತಿಳಿಸಿದರೆ, ಉಳಿದ ಮೂರು, ಸುಮಾರು ೧೩ನೇ ಶತಮಾನಕ್ಕೆ ಸೇರಿದ ಜೈನ ಶಾಸನಗಳಾಗಿವೆ. ಇವುಗಳಲ್ಲಿ ೧೨೪೩ರ ಶಾಸನ ಚೌವ್ವಿಸ್ ತೀರ್ಥಂಕರ ಪ್ರತಿಮೆಯ ಪ್ರತಿಷ್ಠಾಪನೆಯನ್ನು ದಾಖಲಿಸಿದರೆ, ೧೨೮೫ರ ಶಾಸನವು ಇಳ್ಳಾಪುರದ ಲಿಂಗಪ್ಪನ ಮಗ ಜರಗಪ್ಪನು ಬಸದಿಯನ್ನು ಜೀರ್ಣೋದ್ಧಾರ ಮಾಡಿಸಿದ ಅಂಶವನ್ನು ತಿಳಿಸುತ್ತದೆ.

ಊರಲ್ಲಿಂದು ಪ್ರಾಚೀನ ಕಾಲದ್ದೆನ್ನಬಹುದಾದ ಶಂಕರಲಿಂಗ, ಬಸ್ತಿ ಬೊಮ್ಮಣ್ಣ, ಬಸವಣ್ಣ, ದೊಡ್ಡ ಬಸವಣ್ಣ ಹಾಗೂ ಹನುಮಂತನ ದೇವಾಲಯಗಳಿದ್ದು, ಇವುಗಳಲ್ಲಿ ಶಂಕರಲಿಂಗ ದೇಗುಲವೊಂದನ್ನುಳಿದ್ದು, ಉಳಿದವು ಜೀರ್ಣೋದ್ಧಾರಗೊಂಡಿವೆ. ಈ ದೇವಾಲಯವು ತ್ರಿಕೂಟವಾಗಿದ್ದು ಪ್ರಧಾನ ಗರ್ಭಗೃಹಕ್ಕಷ್ಟೆ ಅಂತರಾಳವಿದ್ದು, ಉಳಿದೆರಡು ಕೇವಲ ಗರ್ಭಗೃಹಗಳನ್ನಷ್ಟೆ ಹೊಂದಿದ್ದು, ಒಂದೇ ನವರಂಗವಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಚತುಶ್ಶಾಖಾಲಂಕೃತವಾದ ಬಾಗಿಲವಾಡವನ್ನು ಹೊಂದಿದೆ. ಈ ದೇವಾಲಯದ ಉಳಿದ ಭಾಗಗಳು ಶಿಥಿಲಗೊಂಡು ಪಾಳು ಬಿದ್ದಿವೆ. ಎತ್ತರವಾದ ಕಮಲಾಕಾರದ ಅಧಿಷ್ಠಾನದ ಮೇಲೆ ಇರುವ ಮೂರು ಸ್ತರದ ಭಿತ್ತಿಯು ನಿರಾಡಂಬರವಾಗಿದ್ದರೂ ವಿಶಿಷ್ಟವಾಗಿದೆ. ಈ ದೇವಾಲಯದ ಮೇಲೆ ಹುಡೆಯನ್ನು ಇತ್ತೀಚಿಗೆ ನಿರ್ಮಿಸಿದ್ದಾರೆ.

ಊರ ಹೊರಗಿರುವ ಬಸ್ತಿ ಬೊಮ್ಮನ ಗುಡಿಯು (ತ್ರಿಕೂಟ) ಪೂರ್ಣ ಜೀರ್ಣೋದ್ಧಾರಗೊಂಡಿದ್ದು ಇಂದು ಎರಡು ಗರ್ಭಗುಡಿಗಳಿಗೂ ಸೇರಿದಂತೆ ಒಂದೇ ನವರಂಗವಿದ್ದು ಇದರಲ್ಲಿ ಚೌವ್ವಿಸ್ ತೀರ್ಥಂಕರ, ಪಾರ್ಶ್ವನಾಥ,

ಪದ್ಮಾಸೀನ ತೀರ್ಥಂಕರರ ಎರಡು ಸುಂದರ ಶಿಲ್ಪಗಳು ಹಾಗೂ ಅಮೃತ ಶಿಲೆಯಲ್ಲಿ ಮಾಡಿರುವ ಸ್ಥಾನಕ ಜಿನಬಿಂಬಗಳಿದ್ದು, ಆಕರ್ಷಕವಾಗಿವೆ. ಶೈಲಿಯ ಆಧಾರದ ಮೇಲೆ ಇವುಗಳ ಕಾಲವನ್ನು ಸುಮಾರು ೧೧ನೇ ಶತಮಾನಕ್ಕೆ ಗುರುತಿಸಬಹುದಾಗಿದೆ. ಇತ್ತೀಚೆಗೆ ಈ ಗುಡಿ ಮುಂದೆ ಆದಿನಾಥ ತೀರ್ಥಂಕರ ಹಾಗೂ ಧರಣೇಂದ್ರ ಯಕ್ಷನ ಶಿಲ್ಪಗಳು ಪತ್ತೆಯಾಗಿರುವ ವಿಷಯ ವರದಿಯಾಗಿದೆ. ಈ ಗುಡಿಯ ಮುಂಭಾಗದಲ್ಲಿ ಚೌಕಾಕಾರದ ಸ್ತಂಭದ ನಾಲ್ಕು ಮುಖಗಳಲ್ಲೂ ಹೋರಾಟದಲ್ಲಿ ಮಡಿದ ಯೋಧ ಕೈಲಾಸ ಸೇರಿದ ಅಂಶವನ್ನು ದಾಖಲಿಸುವ ಕೆತ್ತನೆ ಇದ್ದು ವಿಶಿಷ್ಟವಾಗಿದೆ. ಮೇಲೆ ಚರ್ಚಿಸಿರುವ ಮೂರು ಜೈನ ಶಾಸನಗಳೂ ಇಲ್ಲಿವೆ. ಊರ ಅಗಸಿ ಬಳಿ ಇರುವ ಬಸವಣ್ಣನ ಗುಡಿ ಮೂಲ ವಿನ್ಯಾಸವನ್ನು ಉಳಿಸಿಕೊಂಡಿದ್ದು ಇಲ್ಲಿ ಪಾರ್ವತಿ-ಪರಮೇಶ್ವರ ಹಾಗೂ ವಿಷ್ಣು ಶಿಲ್ಪಗಳಿವೆ. ಊರ ನಡುವೆ ಇರುವ ಹನುಮಂತನ ಗುಡಿಯು ವಿಶಾಲವಾದ ಸಭಾ ಮಂಟಪ ಹಾಗೂ ಪ್ರಾಕಾರಗಳನ್ನು ಹೊಂದಿದ್ದು ಇಲ್ಲಿ ಗುಡಿಯ ಮುಂದೆ ಆತ್ಮಾಹುತಿ ಸ್ತಂಭವಿದ್ದು, ಈ ಸ್ತಂಭದ ನಾಲ್ಕು ಮುಖದ ಮೇಲೆ ಆತ್ಮಾಹುತಿಯ ವಿವಿಧ ಹಂತಗಳನ್ನು ಸೂಚಿಸುವ ಕೆತ್ತನೆಗಳಿದ್ದು, ವಿಶಿಷ್ಟವಾಗಿವೆ. ಅಲ್ಲೇ ಸೂರ್ಯನಾರಾಯಣ, ಗಜಲಕ್ಷ್ಮಿ, ಅನಂತಪದ್ಮನಾಭ, ಗಣಪತಿ ಹಾಗೂ ಕೇಶವನ ಶಿಲ್ಪಗಳಿದ್ದು, ಒಂದು ವೀರಗಲ್ಲು ಕೂಡ ಇದೆ. ಊರ ಪ್ರವೇಶದಲ್ಲಿ ಇರುವ ದೊಡ್ಡ ಬಸವಣ್ಣನ ಗುಡಿಯು ಗುಮ್ಮಟಾಕಾರದ ಶಿಖರವನ್ನು ಹೊಂದಿದ್ದು, ನಡುವೆ ಗರ್ಭಗೃಹದಲ್ಲಿ ಹನುಮಂತನಿದ್ದು, ಸುತ್ತ ಪ್ರದಕ್ಷಿಣಾಪಥವಿದೆ. ದೂರಕ್ಕೆ ಮುಸ್ಲಿಂ ಸ್ಮಾರಕದಂತೆ ಗೋಚರಿಸುವ ಇದು ಅತನೂರಿನ ಇಂದಿನ ಆಕರ್ಷಣೆಯಾಗಿದೆ. ಈ ಗುಡಿಯ ಬಳಿ ಮುಕ್ಕಾದ ಶಾಸನ ಕಲ್ಲೊಂದಿದ್ದು, ಆಗಸಿ ಬಾವಿಯ ಬಳಿ ಮಿಥುನ ಶಿಲ್ಪಗಳಿವೆ. ಉಳಿದಂತೆ ಊರಲ್ಲಿ ವೀರಭದ್ರ, ಜಟ್ಟಿಂಗರಾಯ, ಲಕ್ಷ್ಮಿ, ದ್ಯಾಮವ್ವ ಹಾಗೂ ಮರಗಮ್ಮನ ಗುಡಿಗಳೊಂದಿಗೆ ಮಸೀದಿ ಹಾಗೂ ಮೌಲಾಸಾಬನ ದರ್ಗಾಗಳಿದ್ದು ಆಕ್ಟೋಬರ್ ತಿಂಗಳಲ್ಲಿ ಉರುಸು ನಡೆಯುತ್ತದೆ.

**ಅಫಜಲಪುರ** (೧೪೧೫೦) ವು ೧೯೪೯ ರಿಂದೀಚೆಗೆ ತಾಲೂಕು ಕೇಂದ್ರವಾಗಿದ್ದು, ಗುಲಬರ್ಗಾದಿಂದ ಪಶ್ಚಿಮಕ್ಕೆ ೫೫ ಕಿ. ಮೀ ದೂರದಲ್ಲಿ, ಭೀಮಾ ನದಿಯ ಎಡದಂಡೆಯ ಮೇಲಿರುವ ಚಾರಿತ್ರಿಕ ಸ್ಥಳವಾಗಿದೆ. ಬಿಜಾಪುರದ ಆದಿಲ ಷಾಹಿ ಸುಲ್ತಾನ ಇಮ್ಮಡಿ ಅಲಿ ಆದಿಲ್ ಷಾನ (೧೬೫೬-೧೬೭೨) ಪ್ರಮುಖ ದಂಡನಾಯಕ ಅಫಜಲಖಾನನಿಂದಾಗಿ ಇದಕ್ಕೆ ಅಫಜಲಪುರ ಎಂಬ ಹೆಸರು ಬಂದಿದೆ. ಮುಂದೆ ನಿಜಾಮರ ಕಾಲದಲ್ಲಿ ಇದು ಪೈಗಾ ತಾಲೂಕಾಗಿತ್ತು. ಆದರೆ ಇದು ಆದಿಲ್‌ಷಾಹಿಗಳ ಆಳ್ವಿಕೆಗೆ ಒಳಪಡುವ ಮೊದಲೂ ಪ್ರಮುಖ ಸ್ಥಳವಾಗಿತ್ತೆಂದು ಹೇಳುವ ಶಾಸನ ಮಹಲ್ ಮಸೀದಿಯಲ್ಲಿದೆ. ಇದು ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ್ದು ೧೧೦೭ರಲ್ಲಿ ಯುವರಾಜ ಮಲ್ಲಿಕಾರ್ಜುನನ ಮಹಾಪ್ರಧಾನ ನಾಚಿಮ್ಮರಸ, ಮಹಾಮಂಡಳೇಶ್ವರ ಶಿಲಹಾರ ಡಂಕಾರಸ ಹಾಗೂ ಅವನ ರಾಣಿಯು ಸಂಯುಕ್ತವಾಗಿ ಅಲ್ಲಿಯ ತ್ರೈಕೂಟದ ರೇವಣೇಶ್ವರ ದೇವರ್ಗೆ ೧೦೦ ಮತ್ತರು ಭೂಮಿಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತಾ ಸಾಂದರ್ಭಿಕವಾಗಿ ನಖರೇಶ್ವರ, ಕಾಳಪ್ರಿಯದೇವ ಹಾಗೂ ಬಸದಿಗಳನ್ನು ಉಲ್ಲೇಖಿಸುತ್ತ, ಬೀಚವಳ್ಳಿಯನ್ನು ಹೆಸರಿದೆ. ಬಹುಶಃ ಈ ಬೀಚವಳ್ಳಿಯೇ ಆದಿಲ ಷಾಹಿ ಕಾಲದಲ್ಲಿ ಅಫಜಲಪುರವಾಗಿ ಬೆಳೆದಿರಬೇಕೆಂದು ತೋರುತ್ತದೆ. ಆದರೆ ಊರಲ್ಲಿಂದು ಪ್ರಾಚೀನ ದೇಗುಲಗಳಾವುದೂ ಉಳಿದಿರದೆ, ಜೀರ್ಣೋದ್ಧಾರಗೊಂಡಿರುವ ಸಿದ್ಧರಾಮೇಶ್ವರ ಗುಡಿಯ ಆವರಣದಲ್ಲಿ ಎರಡು ಗಣಪತಿ ಶಿಲ್ಪ, ನಂದಿ, ನಾಗ, ದ್ವಾರಪಾಲಕ ಹಾಗೂ ಗಣಪತಿಯ ಎರಡು ಶಿಲ್ಪಗಳಿದ್ದು, ಒಂದು ವೀರಗಲ್ಲೂ ಕೂಡ ಇದೆ. ಅದೇ ರೀತಿ ಮಲ್ಲಿಕಾರ್ಜುನ ಗುಡಿಯ ಆವರಣದಲ್ಲೂ ಕೂಡ ಮೂರು ಅಡಿ ಎತ್ತರದ ಭೈರವನ ಶಿಲ್ಪವಿದ್ದು, ತಹಶೀಲ್ದಾರರ ಕಛೇರಿ ಆವರಣದಲ್ಲಿ ಆನೆಯ ನಾಲ್ಕು ಕಿರು ಮೂರ್ತಿಗಳಿವೆ. ಇವೆಲ್ಲವೂ ಸುಮಾರು ೧೨ನೇ ಶತಮಾನದ್ದಾಗಿವೆ. ಇಲ್ಲಿಯ ಮಹಲ್ ಮಸೀದಿಯು ಸುಂದರ ಇಸ್ಲಾಂ ವಾಸ್ತು ರಚನೆಯಾಗಿದೆ. ಇಲ್ಲಿಯ ಪಂಚಮಹಲನ್ನು ಆದಿಲ್ ಷಾಹಿ ದಂಡನಾಯಕ ಅಫಜಲಖಾನನ ಮಗನಾದ ಫಾಜಲಖಾನನು ನಿರ್ಮಿಸಿದ್ದು, ಅದರಲ್ಲಿ ಅಫಜಲಖಾನನ ಮಡದಿಯರ ಗೋರಿಗಳಿದ್ದು, ರೂಢಿಯಲ್ಲಿ ಇದನ್ನು ಪಾತರಗಿತ್ತಿ ಮಹಲ್, ಅಫಜಲಖಾನ್ ಮಹಲ್ ಎಂದೂ ಕರೆಯುತ್ತಾರೆ. ಉಳಿದಂತೆ ಊರಲ್ಲಿ ಹನುಮಂತ, ಬೀರದೇವ, ಭಾಗೋಡಿ ಸಿದ್ಧ, ಮರುಳಸಿದ್ಧ, ಯಡ್ರಾಮಿ ಸಿದ್ಧ, ಭೂತಾಳಸಿದ್ಧ, ಅಮೋಘಸಿದ್ಧ, ಲಕ್ಷ್ಮಿ, ಅಂಬಾಬಾಯಿ, ಕಾಳಮ್ಮ, ಮರಗಮ್ಮ ಮುಂತಾದ ನವೀನ ಗುಡಿಗಳಿದ್ದು, ಸಾವಳಗಿ ಶಿವಲಿಂಗೇಶ್ವರ ಹಾಗೂ ಮೂರು ಜಾವದೇಶ್ವರ ಮಠಗಳಿವೆ. ಜೊತೆಗೆ ಸೋಂದೆ ಸಾಬ ದರ್ಗಾ ಕೂಡ ಇದೆ.

**ಆರಕೇರಿ (ಜೆ)** (೧೬೮೧) ಯು ತಾಲೂಕು ಕೇಂದ್ರವಾದ ಸುರಪುರದಿಂದ ಪಶ್ಚಿಮಕ್ಕೆ ೪೦ ಕಿ. ಮೀ, ಹುಣಸಗಿಯಿಂದ ಉತ್ತರಕ್ಕೆ ಒಂಭತ್ತು ಕಿ. ಮೀ. ದೂರದಲ್ಲಿ ಹುಣಸಗಿ-ಕೆಂಭಾವಿ ರಸ್ತೆಯಲ್ಲಿದೆ. ಈ ಊರಿಂದ ಈವರೆಗೆ ಒಂದೇ ಶಾಸನ

ವರದಿಯಾಗಿದ್ದು, ಅದೀಗ ದೇಸಾಯಿಗಳ ಹೊಲದಲ್ಲಿದೆ. ಸುಮಾರು ೧೩ನೇ ಶತಮಾನದ್ದಾದ ಈ ಶಾಸನವು ಸಹಸ್ರಲಿಂಗ ದೇವರಿಗೆ ೪೦ ಮತ್ತರು ಭೂಮಿಯನ್ನು ದತ್ತಿ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಇದಕ್ಕೆ ಪೂರಕವಾಗಿ ಹುಣಸಗಿಯಿಂದ ಈಗಾಗಲೇ ವರದಿಯಾಗಿರುವ ೧೦೩೩ರ ಶಾಸನವು ಇಮ್ಮಡಿ ಜಯಸಿಂಹನ ಮಹಾಮಂಡಳೇಶ್ವರ ಹೈಹಯ ಚಂದರಸನ ರಾಣಿ ಜೋಗಣಬ್ಬರಸಿಯು ಆಲದಕೆರೆಯಲ್ಲಿ ಸಹಸ್ರ ಲಿಂಗ ದೇವಾಲಯವನ್ನು ನಿರ್ಮಿಸಿ ದತ್ತಿ ಬಿಟ್ಟ ವಿಷಯವನ್ನು ತಿಳಿಸುತ್ತಿದ್ದು, ಇಲ್ಲಿಯ ಶಾಸನೋಕ್ತ ಆಲದಕೆರೆಯು ಇಂದಿನ ಅರಕೇರಿ ಎಂದು ಭಾವಿಸುವುದಾದರೆ ಆಗ ಶಾಸನೋಕ್ತ ಸಹಸ್ರ ಲಿಂಗ ದೇವಾಲಯವನ್ನು ಅರಕೇರಿಯಲ್ಲಿರುವ ಸಹಸ್ರಲಿಂಗ ದೇವರ ಗುಡಿಯೊಂದಿಗೆ ಸಮೀಕರಿಸಬಹುದಾಗಿದೆ. ಆದರೆ ನೆರೆಯ ಕಚಕನೂರಿನ ೧೦೫೫ರ ಶಾಸನದಲ್ಲಿ ಅರಕೆರೆಯ ನೀರ ಪ್ರಸ್ತಾಪವಿರುವುದರಿಂದ ಆಲದ ಕೆರೆಯೇ ಇಂದಿನ ಅರಕೇರಿ ಎಂದು ಅರ್ಥೈಸಲಾಗುವುದಿಲ್ಲ.

ಕೋಟೆಯಿಂದ ಆವೃತ್ತವಾಗಿರುವ ಈ ಊರನ್ನು ಪ್ರವೇಶಿಸಲು ಅಗಸಿಯಿದ್ದು, ಸಹಸ್ರಲಿಂಗ ದೇವಾಲಯದ ಮೇಲೆ ಹುಡೆ ಇದೆ. ವಿಶಾಲವಾದ ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿರುವ ಈ ಗುಡಿಯು ಪೂರ್ವಾಭಿಮುಖವಾಗಿದ್ದು, ಹಿಂದೆ ತ್ರಿಕೂಟವಾಗಿತ್ತೆಂಬ ಸುಳಿವು ಲಭಿಸುತ್ತಿದ್ದು, ಪ್ರಧಾನ ಗರ್ಭಗೃಹದ ಉತ್ತರ-ದಕ್ಷಿಣ ದಿಕ್ಕಲ್ಲಿ ನವರಂಗಕ್ಕೆ ಹೊಂದಿಕೊಂಡಂತೆ ಅಂತರಾಳ ಭಾಗವಿದ್ದಂತೆ ತೋರುತ್ತದೆ. ಗರ್ಭಗೃಹದಲ್ಲಿ ಇರುವ ನಾಲ್ಕಡಿ ಎತ್ತರದ ಶಿವಲಿಂಗವು ೨೦ ಸ್ತರಗಳಲ್ಲಿ ಕಿರು ಪ್ರಮಾಣದ ಸಹಸ್ರಲಿಂಗಗಳನ್ನು ಹೊಂದಿದೆ. ಒಳಗೆ ಚೌಕಾಕಾರದಲ್ಲಿರುವ ಈ ಗುಡಿಯು ಹೊರಗೆ ಬಹುಕೋನಕಾರದ ವಿನ್ಯಾಸವನ್ನು ಹೊಂದಿದ್ದು ಅಂತರಾಳದಲ್ಲಿರುವ ಮಕರ ತೋರಣವು ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಹೊಂದಿದ್ದು ಆಕರ್ಷಕವಾಗಿದೆ. ಬೃಹತ್ತಾದ ೧೨ ಕಂಬಗಳ ಮೇಲೆ ನಿಂತಿರುವ ನವರಂಗದಲ್ಲಿ ನಡುವೆ ವಿಶಾಲವಾದ ರಂಗಮಂಟಪವಿದ್ದು, ಇದರ ಛತ್ತು ಸುಂದರವಾಗಿದೆ. ಗರ್ಭಗೃಹದ ಬಾಗಿಲವಾಡವು ಪಂಚಶಾಖಾಲಂಕೃತವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯನ್ನು ಹೊಂದಿದ್ದರೆ, ದೇವಾಲಯದ ಪ್ರಧಾನ ಪ್ರವೇಶ ದ್ವಾರದ ಬಾಗಿಲವಾಡವು ನಾಲ್ಕು ಅಲಂಕಾರ ಪಟ್ಟಿಕೆಗಳನ್ನು ಹೊಂದಿದ್ದು ಚಿತ್ತಾಕರ್ಷಕವಾಗಿದೆ. ಈ ಗುಡಿಯ ಮುಂಭಾಗದಲ್ಲಿ ಗಣಪತಿ, ನಂದಿ ಹಾಗೂ ತೀರ್ಥಂಕರರ ಮೂರು ಭಗ್ನ ಶಿಲ್ಪಗಳಿವೆ.

ಊರ ನಡುವೆ ಇರುವ ಸಂಗಮೇಶ್ವರ ಗುಡಿ ಸಾಕಷ್ಟು ಜೀರ್ಣೋದ್ಧಾರಗೊಂಡಿದ್ದು, ಗರ್ಭಗೃಹ ಹಾಗೂ ವಿಶಾಲವಾದ ತೆರೆದ ಸಭಾಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಒಂದೇ ಪೀಠದ ಮೇಲೆ ಸುಮಾರು ನಾಲ್ಕೂವರೆ ಅಡಿ ಎತ್ತರದ ಸ್ಥಾನಕ ಬ್ರಹ್ಮ ಹಾಗೂ ಸಹಸ್ರಲಿಂಗಗಳಿದ್ದು, ಬಹುಶಃ ಹಿಂದೆ ಇಲ್ಲಿ ವಿಷ್ಣುವಿನ ಮೂರ್ತಿ ಇದ್ದಿರಬಹುದಾದರೂ ಈಗ ಕಾಣಸಿಗುತ್ತಿಲ್ಲ. ಈ ದೇವಾಲಯದ ಸಭಾಮಂಟಪವು ವಿಶಾಲವಾಗಿದ್ದು, ಗರ್ಭಗುಡಿಯಲ್ಲಿ ತ್ರೈಪುರಷರಿದ್ದ ಸುಳಿವು ದೊರೆಯುವುದರಿಂದ ಹಿಂದೆ ಇದು ಶಿಕ್ಷಣ ಒದಗಿಸುವ ತ್ರೈಪುರುಷ ಶಾಲೆಯಾಗಿದ್ದಿರಬಹುದೆಂದು ಭಾವಿಸಬಹುದಾಗಿದೆ. ಇಲ್ಲಿಯ ಮುನೇಶ್ವರ ಗುಡಿಯು ಸುಮಾರು ೧೧-೧೨ನೇ ಶತಮಾನದ ರಚನೆಯಾಗಿದ್ದು ಗರ್ಭಗೃಹ ಹಾಗೂ ಅರ್ಧಮಂಟಪಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲವಾಡವು ನಾಲ್ಕು ಶಾಖೆಗಳನ್ನು ಹೊಂದಿದ್ದು, ಸುಂದರವಾಗಿದೆ. ಉಳಿದಂತೆ ಊರಲ್ಲಿ ಗ್ರಾಮದೇವತೆ, ಪರಮಾನಂದ,ಬಸವಣ್ಣ, ಜಟ್ಟಪ್ಪ, ಹನುಮಂತ, ಕೆಂಚಮ್ಮ ಹಾಗೂ ಮರಗಮ್ಮನ ಗುಡಿಗಳಿವೆ.

**ಅರಳಗುಂಡಗಿ** (೩೮೫೫)ಯು ತಾಲೂಕು ಕೇಂದ್ರವಾದ ಜೇವರ್ಗಿಯಿಂದ ನೈಋತ್ಯಕ್ಕೆ ಸುಮಾರು ೩೫ ಕಿ. ಮೀ, ಸಿಂಧಗಿಯಿಂದ ೩೭ ಕಿ. ಮೀ. ದೂರದಲ್ಲಿದ್ದು, ಕಲ್ಬುರ್ಗಿಯ ಶರಣಬಸವೇಶ್ವರರ (೧೭೪೬-೧೮೨೨) ಜನ್ಮಸ್ಥಳವಾಗಿದೆ. ಇಲ್ಲಿಂದ ಈವರೆಗೆ ವರದಿಯಾಗಿರುವ ಏಕೈಕ ಸ್ತಂಭ ಶಾಸನವು ಬಸವಣ್ಣನ ಗುಡಿ ಬಳಿಯಿದ್ದು ಕಲ್ಯಾಣದ ಚಾಳುಕ್ಯ ಅರಸ ಇಮ್ಮಡಿ ಸೋಮೇಶ್ವರನ ಕಾಲಕ್ಕೆ ಸೇರಿದ್ದಾಗಿದೆ. ಇವನ ಆಳ್ವಿಕೆಯಲ್ಲಿ ಸರ್ವನಮಸ್ಯದಗ್ರಹಾರವಾಗಿದ್ದ ಇಂದಿನ ಅರಳಗುಂಡಗಿಯ ಮಹಾಜನರಿಗೆ ಮಾಣಿಕೇಶ್ವರದ ಕೋಲಲ್ಲಿ ೩೦ ಮತ್ತರು ಭೂಮಿಯನ್ನು ನಾನಾದೇಶಿಗಳು ಸತ್ರಕ್ಕೆಂದು ನಿವೇಶನದೊಂದಿಗೆ ದಾನ ಬಿಟ್ಟ ಅಂಶವನ್ನು ಈ ಶಾಸನವು ತಿಳಿಸುತ್ತದೆ. ಈ ಶಾಸನವನ್ನು ಬಿಟ್ಟರೆ ಊರಲ್ಲಿ ೧೨ನೇ ಶತಮಾನಕ್ಕೆ ಸೇರಿದ ದೇವಾಲಯಗಳಾವುದೂ ಉಳಿದಿಲ್ಲ.

ಕಲ್ಬುರ್ಗಿಯ ಶರಣ ಬಸವೇಶ್ವರರ ಜನ್ಮಸ್ಥಳವಾದ ಇಲ್ಲಿ ಅವರ ಪೂರ್ವಿಕರ ಮನೆಯಿದೆ. ಮೂಲತಃ ಇಲ್ಲಿಯ ವೀರಶೈವ ಕುಟುಂಬದಲ್ಲಿ ಜನಿಸಿ, ಬಸವ ವಿಚಾರವನ್ನು ಸಾರುತ್ತ, ದಾಸೋಹ ಪರಂಪರೆಯನ್ನು ಬೆಳಗುತ್ತ, ಕಲ್ಬುರ್ಗಿಗೆ

ಬಂದು ನೆಲೆ ನಿಂತು ಲಿಂಗೈಕ್ಯರಾದ ಶರಣಬಸವೇಶ್ವರರ ಹುಟ್ಟೂರಲ್ಲಿರುವ ಶರಣಬಸವೇಶ್ವರ ದೇವಾಲಯವು ಗರ್ಭಗೃಹ, ಪ್ರದಕ್ಷಿಣಾ ಪಥ ಹಾಗೂ ಸಭಾಮಂಟಪಗಳನ್ನು ಹೊಂದಿದ್ದು, ಈ ಗುಡಿಯ ನಿರ್ಮಾಣದಲ್ಲಿ ಕಲ್ಯಾಣದ ಚಾಳುಕ್ಯರ ಕಾಲದ ಕಂಬ, ಬಾಗಿಲವಾಡಗಳನ್ನು ಬಳಸಿದ್ದಾರೆ. ಅವರು ಹುಟ್ಟಿದ ಸ್ಥಳದಲ್ಲಿ ಈಗಲೂ ಹಣತೆಯನ್ನು ಸದಾ ಕಾಲ ಬೆಳಗಿಸುವ ಸಂಪ್ರದಾಯವಿದ್ದು, ಶರಣಬಸವೇಶ್ವರ ಜಾತ್ರೆಯು ಹೋಳಿ ಹುಣ್ಣಿಮೆಯಾದ ಐದನೇ ದಿನಕ್ಕೆ ಜರುಗುತ್ತಿದ್ದು, ಸಾವಿರಾರು ಜನ ಪಾಲ್ಗೊಳ್ಳುತ್ತಾರೆ. ಉಳಿದಂತೆ ಊರಲ್ಲಿ ಕ್ಯಾತಲಿಂಗ, ಹನುಮಂತ, ಮಲಖಾನ್, ಮಲ್ಲಯ್ಯ, ಮರಗಮ್ಮ ಹಾಗೂ ಲಕ್ಷ್ಮಿ ಗುಡಿಗಳಿದ್ದು, ಎರಡು ಮಸೀದಿಗಳಿವೆ.

**ಅಲ್ಲೂರು (ಬಿ)** (೩೧೬೭)ಯು ತಾಲೂಕು ಕೇಂದ್ರವಾದ ಚಿತ್ತಾಪುರದಿಂದ ಆಗ್ನೇಯಕ್ಕೆ, ೪೦ ಕಿ.ಮೀ ದೂರದಲ್ಲಿದ್ದು, ಮುನ್ನೂರು ಹಳ್ಳಿಗಳನ್ನು ಒಳಗೊಂಡ ಆಡಳಿತ ವಿಭಾಗವಾಗಿದ್ದು, ಪ್ರಾಚೀನ ಶಾಸನಗಳಲ್ಲಿ "ಅರಲು-೩೦೦", "ಅರಲೂರು-೩೦೦" ಎಂದೇ ಉಲ್ಲೇಖಿತಗೊಂಡಿದೆ. ಕೋಟೆ, ಅಗಸೆಗಳನ್ನು ಹಿಂದೆ ಹೊಂದಿದ್ದ ಈ ಊರಿಂದ ಈವರೆಗೆ ಶಾಸನಗಳಾವುದೂ ವರದಿಯಾಗಿಲ್ಲ. ಇಂಗಳಗಿಯ ೧೦೬೫ರ ಶಾಸನದಿಂದ ಹಿಂದೆ ಇಲ್ಲಿದ್ದ ಪಾಂಡೇಶ್ವರ ಗುಡಿ ಹಾಗೂ ಅಲ್ಲಿದ್ದ ಗಂಡರಾದಿತ್ಯನ ಪಿರಿಯಕೋಲಿನ ಬಗ್ಗೆ ಸುಳಿವು ಲಭಿಸುತ್ತದೆ. ಆದರಿಂದು ಇಲ್ಲಿರುವ ದುರ್ಗಾ ಗುಡಿಯಿಂದಾಗಿ ಇದು ಪ್ರಸಿದ್ಧವಾಗಿದ್ದು, ಕಲ್ಯಾಣದ ಚಾಳುಕ್ಯರ ಕಾಲದ ಅವಶೇಷಗಳಿಂದ ಸಮೃದ್ಧವಾಗಿದ್ದು, ಹೆಚ್ಚಿನ ಸಂಶೋಧನೆಗಳು ಆಗಬೇಕಾಗಿದೆ.

**ಅವರಾದಿ** (೧೭೦೬) ಯು ತಾಲೂಕು ಕೇಂದ್ರವಾದ ಜೇವರ್ಗಿಯಿಂದ ದಕ್ಷಿಣಕ್ಕೆ ಆರು ಕಿ. ಮೀ. ದೂರದಲ್ಲಿ ಜೇವರ್ಗಿ-ಸುರಪುರ ರಸ್ತೆಯಲ್ಲಿದೆ. ನೆರೆಯ ಕೆಲ್ಲೂರಿನ ೧೧೮೨ರ ಶಾಸನದಲ್ಲಿ 'ಸರ್ವನಮಸ್ಯದ ಅಗ್ರಹಾರ ಅವರವಾಡಿ' ಎಂದೇ ಉಲ್ಲೇಖಿತಗೊಂಡಿರುವ ಈ ಊರು ಹಿಂದೆ ನರಿಯುಂಬೊಳೆ-೭೦ಕ್ಕೆ ಸೇರಿದ್ದು, ೧೪೨ ಮಹಾಜನರನ್ನು ಒಳಗೊಂಡಿದ್ದ ಅಗ್ರಹಾರವಾಗಿದ್ದು, ಇಲ್ಲಿಂದ ಈವರೆಗೆ ಎರಡು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಹೊಲವೊಂದರಲ್ಲಿರುವ "ಚಕಸ ಭೋದಿಣಸ ವಿಜಲಯ" ವೆಂಬ ಎರಡನೇಯ ಶತಮಾನಕ್ಕೆ ಸೇರಿದ, ಶಾತವಾಹನರಿಗೆ ಸಂಬಂಧಿಸಿದ ಪ್ರಾಕೃತ ಶಾಸನವೇ ಅತ್ಯಂತ ಪ್ರಾಚೀನದ್ದಾಗಿದ್ದು ಇದು ಅಂದು ಇಲ್ಲಿದ್ದ ವಿದ್ಯಾಲಯವೊಂದರ ಬಗ್ಗೆ ಹೇಳುವ ಮಹತ್ವದ ದಾಖಲೆಯಾಗಿದ್ದರೆ, (ಕರ್ನಾಟಕಕ್ಕೆ ಸಂಬಂಧಿಸಿದಂತೆ ವಿದ್ಯಾಲಯದ ಉಲ್ಲೇಖವಿರುವ ಮೊಟ್ಟಮೊದಲ ದಾಖಲೆ ಇದಾಗಿದೆ.) ಇನ್ನೊಂದು ಸುಮಾರು ೧೨ನೇ ಶತಮಾನಕ್ಕೆ ಸೇರಿದ್ದು, ವರ್ಣನೆಯಷ್ಟೆ ಲಭ್ಯವಿದ್ದು ಹೆಚ್ಚಿನ ವಿಷಯ ಲಭ್ಯವಿಲ್ಲ. ಅಗಸಿ ಬಳಿ ಶಿಲ್ಪಾವಶೇಷಗಳು ಚದುರಿ ಬಿದ್ದಿವೆ. ಉಳಿದಂತೆ ಊರಲ್ಲಿ ಬಸವಣ್ಣ, ಹನುಮಂತ, ಬೀರಲಿಂಗ, ದ್ಯಾಮವ್ವ, ದುರ್ಗಾ ಮುಂತಾದ ಗುಡಿಗಳಿದ್ದು, ಜಟಾಧರಲಿಂಗನ ದೇವಾಲಯದಲ್ಲಿ ಕಲ್ಯಾಣದ ಚಾಳುಕ್ಯರ ಕಾಲದ ಸುಮಾರು ೧೨ನೇ ಶತಮಾನದ ಲಿಂಗವಿದೆ. ಇಲ್ಲಿ ಮಸೀದಿ ಮತ್ತು ದರ್ಗಾಗಳಿದ್ದು, ಹುಡೆ ಸುಸ್ಥಿತಿಯಲ್ಲಿದೆ.

**ಅಳ್ಳೋಳಿ** (೩೪೮೦)ಯು ತಾಲೂಕು ಕೇಂದ್ರವಾದ ಚಿತ್ತಾಪುರದಿಂದ ದಕ್ಷಿಣಕ್ಕೆ ೩೦ ಕಿ. ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದ್ದು, ಕಲ್ಯಾಣದ ಚಾಳುಕ್ಯರ ಕಾಲದ ಅವಶೇಷಗಳನ್ನು ಹೊಂದಿದ್ದು, ಇಲ್ಲಿರುವ ವೀರಭದ್ರೇಶ್ವರ ಗುಡಿಯಿಂದಾಗಿ ಪ್ರಖ್ಯಾತವಾಗಿದೆ.

**ಆಂದೋಲ** (೪೦೭೬) ವು ತಾಲೂಕು ಕೇಂದ್ರವಾದ ಜೇವರ್ಗಿಯಿಂದ ಆಗ್ನೇಯಕ್ಕೆ ೧೨ ಕಿ. ಮೀ. ದೂರದಲ್ಲಿದೆ. ಇದು ೧೮೭೩ರಿಂದ ೧೯೫೭ರವರೆಗೆ ತಾಲೂಕು ಕೇಂದ್ರವಾಗಿತ್ತು. ನಂತರ ತಾಲೂಕು ಕೇಂದ್ರವು ಆಂದೋಲದಿಂದ ಜೇವರ್ಗಿಗೆ ವರ್ಗಾಯಿಸಲ್ಪಟ್ಟಿತು. ಬೃಹತ್ ಶಿಲಾಯುಗದ ಸಮಾಧಿಗಳನ್ನು ಹೊಂದಿರುವ ಪ್ರಾಗೈತಿಹಾಸಿಕ ಮಹತ್ವದ ಈ ಊರು ಪ್ರಾಚೀನ ಶಾಸನಗಳಲ್ಲಿ 'ಆನೆದಲೆ' 'ಆಂದೆಲಾ' ಎಂದೇ ಉಲ್ಲೇಖಿತಗೊಂಡಿದ್ದು ಹಿಂದೆ ಇದು ನರಿಯಂಬೋಳ-೭೦ಕ್ಕೆ ಸೇರಿತ್ತು. ಇಲ್ಲಿಂದ ಈವರೆಗೆ ನಾಲ್ಕು ಶಾಸನಗಳು ವರದಿಯಾಗಿದ್ದು, ಅಪ್ಪಲಿಂಗೇಶ್ವರ ಗುಡಿ ಮುಂದಿರುವ ೯೫೮ರ ಶಾಸನವು ರಾಷ್ಟ್ರಕೂಟ ಮುಮ್ಮಡಿ ಕೃಷ್ಣನ ಕಾಲಕ್ಕೆ ಸೇರಿದ್ದು ಅವನ ಮನೆವೆರ್ಗ್ಗಡೆಯಾಗಿದ್ದ ಕೇಸರಿಯು ನರಿಯಂಬೋಳೆಯನ್ನು ಆಳುತ್ತಿದ್ದಾಗ, ಆಂದೋಲದ ಹೆಗ್ಗಡೆಗಳು ಇಲ್ಲಿ ಗುಂಡಗೇಶ್ವರ ದೇವಾಲಯವನ್ನು ನಿರ್ಮಿಸಿ ಅದಕ್ಕೆ ಭೂದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ಸಂಗಮೇಶ್ವರ ದೇವಾಲಯದಲ್ಲಿರುವ ಸುಮಾರು ೧೧ ನೇ ಶತಮಾನಕ್ಕೆ ಸೇರಿದ ಇನ್ನೊಂದು ಶಾಸನ ನರಿಯಂಬೊಳೆ-೭೦ಕ್ಕೆ ಕಿರೀಟಪ್ರಾಯವಾಗಿದ್ದ ಪುರ ಆನೆದಲೆಯಲ್ಲಿ ದಂಡನಾಯಕ ಮಾದಿರಾಜನು ನಿರ್ಮಿಸಿದ ಚೆನ್ನಿಗ ಮಾಧನ ದೇವಾಲಯಕ್ಕೆ ಪೂಜಾವಿಧಿಗೆಂದು ಮಾಣಿಕೇಶ್ವರದ ಕೋಲಲ್ಲಿ ೫೦ ನಿವರ್ತನ ಭೂಮಿಯನ್ನು

ದಾನ ಕೊಟ್ಟ ವಿಷಯನ್ನು ತಿಳಿಸುತ್ತದೆ. ಜೊತೆಗೆ ಮಾದಿರಾಜನ ಗರುಡ ನಾಗೋಜ ಹಾಗೂ ಲೆಂಕ ಬಾಚಣನ ಬಿನ್ನಹದಿಂದ ಅಹವಮಲ್ಲನು ಈ ದತ್ತಿಯನ್ನು ಬಿಟ್ಟ ಅಂಶವನ್ನು ತಿಳಿಸುತ್ತದೆ. ಹನುಮಂತನ ಗುಡಿಯಲ್ಲಿರುವ ೧೨೬೮ರ ಶಾಸನವು ಯಾದವ ಚಕ್ರವರ್ತಿ ರಾಮಚಂದ್ರನ ಕಾಲದ್ದಾಗಿದ್ದು, ಸೋಮಲದೇವಿ ಹಾಗೂ ಇನ್ನಿತರರು ಆದಿನಾಥನಿಗೆ ಎಂಟು ಮತ್ತರು ಭೂಮಿಯನ್ನು ದಾನ ಕೊಟ್ಟ ವಿಷಯವನ್ನು ಹೇಳುತ್ತ ಸಾಂದರ್ಭಿಕವಾಗಿ ನಖರೇಶ್ವರ ದೇವಾಲಯವನ್ನೂ ಉಲ್ಲೇಖಿಸುತ್ತದೆ. ಊರ ನಡುವೆ ಗೌಡರ ಓಣಿಯಲ್ಲಿರುವ ಸಂಗಮೇಶ್ವರ ದೇವಾಲಯವೇ ಶಾಸನೋಕ್ತ ಚೆನ್ನಮಾಧವರಾಯನದೆಂದು ತೋರುತ್ತದೆ. ಇದು ಸುಮಾರು ೧೧ನೇ ಶತಮಾನದ ರಚನೆಯಾಗಿದ್ದು ಗರ್ಭಗೃಹ, ತೆರೆದ ಅಂತರಾಳ, ಅರೆತೆರೆದ ನವರಂಗ ಹಾಗೂ ಬಲಕ್ಕೆ ಮಠವನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ದ್ವಾರಬಂಧವು ಚತುರ್ ಶಾಖೆಗಳಿಂದ ಅಲಂಕೃತಗೊಂಡಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಇದೆ. ನವರಂಗದ ಮುಂಭಾಗಕ್ಕೆ ಕಕ್ಷಾಸನವನ್ನು ಒದಗಿಸಲಾಗಿದೆ. ಪೋಲೀಸ್ ಗೌಡರ ಓಣಿಯಲ್ಲಿರುವ ಮಾಸಬಾಯಿ ಲಿಂಗನ ಗುಡಿಯು ಚೌಕಾಕಾರದಲ್ಲಿದ್ದು ಗರ್ಭಗೃಹದಲ್ಲಿ ಲಿಂಗವಿದ್ದು, ಮುಂದೆ ಸಭಾಮಂಟಪವಿದೆ. ಇದರ ಬಾಗಿಲವಾಡವು ಆಕರ್ಷವಾಗಿದ್ದು, ಲಲಾಟದಲ್ಲಿ ಪದ್ಮಾಸೀನ ಯತಿ (ಜಿನ?)ಯ ಕೆತ್ತನೆಯಿದೆ.

ಪಾತ್ರದವರ ಓಣಿಯಲ್ಲಿರುವ ಈಶ್ವರ ಗುಡಿಯು ಪೂರ್ಣ ನಶಿಸಿ ಹೋಗಿ ಗರ್ಭಗೃಹವಷ್ಟೆ ಉಳಿದಿದ್ದು, ಬೃಹತ್ತಾದ ಲಿಂಗ ಹಾಗೂ ನಂದಿ ಶಿಲ್ಪಗಳಿವೆ. ಜೀರ ಓಣಿಯಲ್ಲಿರುವ ಬಸವಣ್ಣನ ಗುಡಿಯು ನಂದಿಯ ಶಿಲ್ಪವನ್ನು ಹೊಂದಿದ್ದು, ಮುಕ್ಕಾದ ಜಿನ ತೀರ್ಥಂಕರನ (ಶಾಸನೋಕ್ತ ಆದಿನಾಥ) ಶಿಲ್ಪ ಇಲ್ಲಿದ್ದು, ಹಿಂದೆ ಜೈನಬಸದಿ ಇದ್ದ ನೆಲೆ ಇದ್ದಿರಬಹುದೆಂಬ ಅನುಮಾನ ಮೂಡುತ್ತದೆ. ಊರ ಉತ್ತರಕ್ಕಿರುವ ಸಾತಲಿಂಗೇಶ್ವರ (ಶಾಂತಲಿಂಗ) ದೇವಾಲಯವು ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು ವಿಶಾಲವಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಬಾಗಿಲವಾಡವು ಚತುರ್‌ಶಾಖಾಲಂಕೃತವಾಗಿದ್ದು, ಅಂತರಾಳದಲ್ಲಿ ನಂದಿ ಇದೆ. ನವರಂಗದ ಕಂಬಗಳು ಶಿವ, ಪಾರ್ವತಿ, ವಾಲಿ, ಸುಗ್ರಿವ, ಜಟಾಧಾರಿ ಶಿವ ಮುಂತಾದ ಉಬ್ಬು ಕೆತ್ತನೆಗಳನ್ನು ಹೊಂದಿದ್ದು, ನಡುವಣ ಛತ್ತು ತಾಂಡವ ನೃತ್ಯದಲ್ಲಿ ತೊಡಗಿರುವ ನಟರಾಜನ ಸುಂದರ ಕೆತ್ತನೆಯಿಂದ ಅಲಂಕೃತಗೊಂಡಿದ್ದು, ಚಿತ್ತಾಕರ್ಷಕವಾಗಿದೆ. ದೇಗುಲದ ಪ್ರಧಾನ ದ್ವಾರಬಂಧವು ಚತುರ್‌ಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಇದೆ. ಈ ದೇವಾಲಯದ ಭಿತ್ತಿಯು ಕಿರುಸ್ತಂಭಗಳಿಂದ ಅಲಂಕೃತಗೊಂಡಿದ್ದು, ಇದು ಸುಮಾರು ೧೧ನೇ ಶತಮಾನದ ರಚನೆಯಾಗಿದೆ. ಇದರ ಬಳಿಯಲ್ಲೇ ಇರುವ ಅಷ್ಟ ಲಿಂಗೇಶ್ವರ ಗುಡಿಯ ಮುಂದಿರುವ ರಾಷ್ಟ್ರಕೂಟ ಶಾಸನ ಗುಂಡಗೇಶ್ವರ ದೇವರನ್ನು ಉಲ್ಲೇಖಿಸಿದ್ದು, ಇದೇ ಆ ದೇವಾಲಯವಾಗಿರಬೇಕೆಂದು ತೋರುತ್ತದೆ. ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನುಳ್ಳ ಈ ದೇವಾಲಯವು ವಿಶಾಲವಾಗಿದೆ. ಗರ್ಭಗೃಹ ಹಾಗೂ ನವರಂಗಗಳ ದ್ವಾರಬಂಧಗಳು ಗಜಲಕ್ಷ್ಮಿಯನ್ನು ಹೊಂದಿದ್ದು, ಅಂತರಾಳದಲ್ಲಿ ಸಪ್ತಮಾತೃಕೆಯರಿದ್ದಾರೆ. ನವರಂಗದ ನಡುವಣ ಛತ್ತು ಆಕರ್ಷಕವಾದ ಕಮಲವನ್ನು ಹೊಂದಿದ್ದು ಕಂಬಗಳ ಮೇಲೆ ಶಾಸನವಿದ್ದ ಕುರುಹು ಕಂಡುಬರುತ್ತದೆ. ಕುಲಕರ್ಣಿ ಓಣಿಯಲ್ಲಿರುವ ಈಶ್ವರ ಗುಡಿಯು ಸುಮಾರು ೧೨ನೇ ಶತಮಾನದ ರಚನೆಯಾಗಿದ್ದು ಇಂದು ಗರ್ಭಗೃಹ ಹಾಗೂ ಅಂತರಾಳಗಳಷ್ಟೆ ಉಳಿದಿವೆ. ಉಳಿದಂತೆ ಊರಲ್ಲಿ ಶಿವಯೋಗಿಶ್ವರ ಗುಡಿ ಹಾಗೂ ಗಚ್ಚಿನ ಮಠ, ಕರುಣೇಶ್ವರರ ಗದ್ದುಗೆ ಹಾಗೂ ಮಠ, ಸಿದ್ಧರಾಮೇಶ್ವರ ಗುಡಿ ಹಾಗೂ ವಿರಕ್ತ ಮಠಗಳಿವೆ. ಇವುಗಳಲ್ಲಿ ಕರುಣೇಶ್ವರ ಮಠವು ವಿಶಾಲವಾಗಿದ್ದು ಕರುಣೇಶ್ವರರು ಸುಮಾರು ೩೦೦ ವರ್ಷಗಳ ಹಿಂದೆ ಆಗಿ ಹೋದ ಪವಾಡ ಪುರುಷರಾಗಿದ್ದು ಇವರ ಸಮಾಧಿಯು ಆಕರ್ಷಕವಾಗಿದ್ದು, ಜಾತ್ರೆಯು ಕಾರ್ತಿಕ ಬಹುಳ ಪಂಚಮಿಯಂದು ಜರುಗುತ್ತದೆ. ಜೊತೆಗೆ ಬೀರಲಿಂಗ, ಗುಡ್ಡದ ಬಸವಣ್ಣ, ಕಲ್ಯಾಣದಪ್ಪ, ಗೋಲಗೇರಪ್ಪ, ಕಾಳಿಕಾ, ಭಾಗಮ್ಮ ಕೆಂಚಮ್ಮ ಮರಗಮ್ಮ ಹಾಗೂ ದ್ಯಾವಮ್ಮನ ನವೀನ ಗುಡಿಗಳಿದ್ದು ಆದಿಲ್ ಷಾಹಿ ಕಾಲದ ಎರಡು ಅಂತಸ್ತಿನ ಒಕ್ಕರಾಣಿಗುಂಬಜ್, ನಾಲ್ಕು ಮಸೀದಿ, ಬಂದೇ ನವಾಜ್, ಧಾವಲ್‌ಮಲಿಕ್ ಹಾಗೂ ಮೆಹಬೂಬು ಸುಬಾನಿಯ ದರ್ಗಾಗಳಿವೆ.

**ಆಳಂದ** (೨೬,೫೬೪) ವು ತಾಲೂಕು ಕೇಂದ್ರವಾಗಿದ್ದು ಗುಲಬರ್ಗಾದಿಂದ ವಾಯವ್ಯಕ್ಕೆ ೪೮ ಕಿ. ಮೀ., ಬೆಂಗಳೂರಿನಿಂದ ಉತ್ತರಕ್ಕೆ ೬೫೬ಕಿ. ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಕೇಂದ್ರವಾಗಿದ್ದು, ಈಗ ಇಲ್ಲಿರುವ ಲಾಡ್ಲೆ ಮಶಾಕ್ ದರ್ಗಾದಿಂದಾಗಿ ಪ್ರಸಿದ್ಧವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಅಲನ್ದಾಪುರ', 'ಅಲಂದೆ' ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಸಾವಿರ ಹಳ್ಳಿಗಳ ಆಡಳಿತ ಕೇಂದ್ರವಾಗಿದ್ದು, ಪ್ರಮುಖ ವ್ಯಾಪಾರಿ ಕೇಂದ್ರವೂ ಆಗಿತ್ತು. ಸುಮಾರು ೧೫ ನೇ

ಶತಮಾನದಲ್ಲಿ ಬಹಮನಿ ಸಾಮ್ರಾಜ್ಯಕ್ಕೆ ಭೇಟಿ ಕೊಟ್ಟಿದ್ದ ರಷ್ಯಾದ ಪ್ರವಾಸಿ ನಿಕಿತಿನ್ ಇಲ್ಲಿ ಅಪಾರ ಜನಸಂದಣಿ ಇದ್ದು ಸಂತೆಯಲ್ಲಿ ದಿನ ೨೦,೦೦೦ ಕುದುರೆಗಳ ವ್ಯಾಪಾರ ಆಗುತ್ತಿತ್ತೆಂದು ಹೇಳಿದ್ದಾನೆ. ಭವಾನಿ ಆನಂದಿದೇವಿ ಆಳಂದದವಳಾಗಿದ್ದು ಅದರಿಂದಾಗಿ ಊರಿಗೆ ಆಲಂದಪುರ ಎಂದು ಹೆಸರು ಬಂದಿದೆ ಎಂಬ ಅಭಿಪ್ರಾಯವಿದೆ.

ಇಲ್ಲಿಂದ ಈವರೆಗೆ ಕಲ್ಯಾಣದ ಚಾಳುಕ್ಯರ ಕಾಲಕ್ಕೆ ಸೇರಿದ ಒಂದು ಕನ್ನಡ ಶಾಸನ ಹಾಗೂ ಬಿಜಾಪುರದ ಆದಿಲ್‌ಷಾಹಿಗಳ ಕಾಲಕ್ಕೆ ಸೇರಿದ ಮೂರು ಪರ್ಷಿಯನ್ ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಲಾಡ್ಲೆ ಮಶಾಕ್ ದರ್ಗಾದ ಆವಣದಲ್ಲಿರುವ ೧೧೮೫ರ ಶಾಸನವು ಯುವರಾಜ ಮಲ್ಲಿಕಾರ್ಜುನನು ಅಲಂದೆ - ೧೦೦೦ ವನ್ನು ಆಳುತ್ತಿದ್ದಾಗ, ಆರನೆಯ ವಿಕ್ರಮಾದಿತ್ಯನ ರಾಣಿ ಚಂದಲದೇವಿಯ ಬೇಡಿಕೆಯಂತೆ ನಾಚಣ ದಂಡನಾಥನು ಅಲಂದಾಪುರದಲ್ಲಿ ನಿರ್ಮಿಸಿದ ಸ್ವಯಂಭು ಸೋಮೇಶ್ವರ ದೇವರ್ಗೆ ೧೦೦೦ ಹೇರು ಎತ್ತಿನ ಪೆರ್ಜುಂಕ, ಬಿಲ್ಕೊಡೆ, ವಡ್ಡರಾವುಳ ಮುಂತಾದ ಸುಂಕಗಳನ್ನು ದೇವರ ಸ್ಥಾನಾಚಾರ್ಯರಾದ ಸುರೇಶ್ವರ ಪಂಡಿತರಿಗೆ ಧಾರೆ ಎರೆದು ಕೊಟ್ಟಾಗ, ಯುವರಾಜನೂ ಸೇರಿದಂತೆ ಇತರರು ವಿವಿಧ ಸುಂಕಗಳನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಮಿಗಿಲಾಗಿ ಈ ಶಾಸನ ದೇವರ ನಂದಾದೀಪಕ್ಕೆಂದು ಅಲಂದೆಯ ಮುದ್ರಾವಣದಲ್ಲಿ ತಿಂಗಳು ತಿಂಗಳಿಗೆ ೧೦ ಪಣಗಳನ್ನು ದಾನ ಬಿಟ್ಟ ವಿಷಯವನ್ನು ಹೇಳುತ್ತಾ, ಅಲ್ಲಿದ್ದ ವಿದ್ಯಾರ್ಥಿ ಮಾಣಿಗಳಿಗೆಂದು ಬಲದೇವನ ಮಾವಿನ ತೋಟದಲ್ಲಿ ನಾಲ್ಕು ಮಾವಿನ ಮರಗಳನ್ನು ದಾನ ನೀಡಿದ ಅಂಶವನ್ನೂ ತಿಳಿಸುತ್ತದೆ. ಈ ದೇವಾಲಯದ ಬಗ್ಗೆ ಹಲವಾರು ಶಾಸನಗಳಲ್ಲಿ ಉಲ್ಲೇಖವಿರುವುದನ್ನು ಗಮನಿಸಿದಾಗ ಹಿಂದೆ ಇದೊಂದು ಮಹತ್ವದ ಧಾರ್ಮಿಕ ಕೇಂದ್ರವಾಗಿದ್ದಂತೆ ತೋರುತ್ತದೆ. ಆದರಿಂದು ಇಲ್ಲಿ ಸ್ವಯಂಭು ಸೋಮೇಶ್ವರ ದೇವಾಲಯವಿದ್ದ ಸುಳಿವೇ ದೊರೆಯುವುದಿಲ್ಲ. ಈಗ ಲಾಡ್ಲೆ ಮಶಾಕ್ ದರ್ಗಾ ಇರುವ ಪ್ರದೇಶದಲ್ಲೇ ಹಿಂದೆ ಸೋಮೇಶ್ವರ ದೇವಾಲಯವಿತ್ತೆಂಬ ಅಭಿಪ್ರಾಯ ಸ್ಥಳಿಕರಲ್ಲಿದೆ. ಅಲ್ಲೇ ರಾಘವ ಚೈತನ್ಯರ ಸಮಾಧಿಯೂ ಇದೆ ಎಂದು ಸ್ಥಳಿಕರು ಹೇಳುತ್ತಾರೆ.

ಊರ ಹೊರಗೆ ಗುಡ್ಡಗಳ ನಡುವೆ ಇರುವ ಹಸ್ತಮಲ್ಲಿಕೇಶ್ವರ ಗುಡಿಯು ಮಟಕಿ ತಾಂಡೆ ಹಳ್ಳದ ಮೇಲಿದ್ದು, ಶಂಕರಾಚಾರ್ಯರ ಗುರುಗಳಾದ ಹಸ್ತಮಲ್ಲಿಕಾಚಾರ್ಯರು ಕೆಲವು ದಿನ ಇಲ್ಲಿ ನೆಲೆಸಿದ್ದರೆಂಬ ನಂಬಿಕೆ ಇದೆ. ಇಲ್ಲಿ ಏಳು ಜ್ಯೋತಿರ್ಲಿಂಗಗಳಿವೆ. ಅಮರಜಾ ನದಿಯ ಉಗಮ ಸ್ಥಾನ ಆಳಂದದ ಬಳಿಯಿದ್ದು ಅಲ್ಲಿ ಅಮರೇಶ್ವರ ಲಿಂಗವಿದೆ ಎಂಬ ಹೇಳಿಕೆಯೂ ರೂಢಿಯಲ್ಲಿದೆ. ಊರಲ್ಲಿ ತುಳಜಾ (ಅಂಬಾ) ಭವಾನಿ ದೇವಾಲಯವಿದೆ. ಊರ ನಡುವೆ ಪಾರ್ಶ್ವನಾಥ ಬಸದಿ ಇದ್ದು ಇಲ್ಲಿ ಚಾವ್ವಿಸ್ ತೀರ್ಥಂಕರ ಶಿಲ್ಪ, ಪದ್ಮಾವತಿ ಶಿಲ್ಪ, ಅಮೃತಶಿಲೆ, ಹಿತ್ತಾಳೆ ಹಾಗೂ ಪಂಚಲೋಹದ ಜಿನ ಶಿಲ್ಪಗಳಿವೆ. ಅಲ್ಲೇ ಇರುವ ೧೬೧೩ರ ಶಾಸನವು ಇಲ್ಲಿ ರತ್ನತ್ರಯ ಬಸದಿ ಇದ್ದ ಅಂಶವನ್ನು ತಿಳಿಸುತ್ತವೆ.

ಸುಮಾರು ೧೨ನೇ ಶತಮಾನದಲ್ಲಿ ಸ್ಥಾವರ ಲಿಂಗ ಪೂಜೆಯನ್ನು ಪ್ರತಿಪಾದಿಸಿ, ಜೈನ ಧರ್ಮವನ್ನು ವಿರೋಧಿಸಿ,ಅಬ್ಬಲೂರಿ (ಹಿರೇಕೆರೂರು ತಾಲೂಕು, ಧಾರವಾಡ ಜಿಲ್ಲೆ) ನಲ್ಲಿ ಶಿರಸ್ಸು ಪವಾಡ ಮೆರೆದು ಜೈನರ ಮೇಲೆ ಧಾರ್ಮಿಕ ವಿಜಯ ಸಾಧಿಸಿದ ಶರಣ ಏಕಾಂತದ ರಾಮಯ್ಯ ಆಳಂದದ ಪೋತೇದಾರ ಮನೆತನದವನೆಂದು ಅಬ್ಬಲೂರು ಚರಿತೆಯು ಹೇಳುತ್ತಿದ್ದು ಇಲ್ಲಿ ಅವನು ಜನಿಸಿದನೆಂದು ಹೇಳುವ ಸ್ಥಳದಲ್ಲಿ ಏಕಾಂತದ ರಾಮಯ್ಯನ ಮಂದಿರವನ್ನು ೧೯೮೪ರಲ್ಲಿ ನಿರ್ಮಿಸಲಾಗಿದೆ. ಇಲ್ಲಿರುವ ಜಾನಿ ಪಟೇಲರ ಕುಟುಂಬದವರ ವಶದಲ್ಲಿ ಬಮ್ಮಲಿಂಗ ಪುರಾಣ ಬರೆದಿರುವ ತಾಮ್ರಪಟಗಳಿವೆ. ಶರಣ ಬೊಮ್ಮಲಿಂಗನನ್ನು ಕುರಿತಂತೆ ಭಾಮಿನಿಷಟ್ಪದಿಯಲ್ಲಿರುವ "ಬೊಮ್ಮಲಿಂಗದೇವರ ಕಾವ್ಯ" ಗ್ರಂಥದ ಎರಡು ಕಾಗದ ಪ್ರತಿಗಳು ಲಭಿಸಿದ್ದು, ಸುಮಾರು ೧೦೦ ವರ್ಷಗಳ ಹಿಂದೆ ಜೀವಿಸಿದ್ದ ತಳೇವಾಡದ ರೇವಣಯ್ಯ ಸ್ವಾಮಿ ವಿರಚಿತ 'ಬೊಮ್ಮಲಿಂಗ ಪುರಾಣ' ವೂ ಲಭಿಸಿದೆ. ಇವುಗಳ ಹಿನ್ನೆಲೆಯಲ್ಲಿ ಈ ತಾಮ್ರಪಟಗಳನ್ನು ವಿವೇಚಿಸಬೇಕಾಗಿದೆ.

ಇಲ್ಲಿ ಆದಿಲ್ ಷಾಹಿ ಕಾಲದ ಮುಸ್ಲಿಮ್ ವಾಸ್ತುಶಿಲ್ಪಗಳು ಗಣನೀಯ ಸಂಖ್ಯೆಯಲ್ಲಿದ್ದು ಇವುಗಳಲ್ಲಿ ಲಾಡ್ಲೆ ಮಶಾಕ್ ದರ್ಗಾ ಹಾಗೂ ಕಾಲಿ (ಫರೀದ್ ಖಾನ್) ಮಸೀದಿಗಳು ಉಲ್ಲೇಖಾರ್ಹವಾಗಿವೆ. ಲಾಡ್ಲೆ ಮಶಾಕ್ (ಹಜರತ್ ಖ್ವಾಜಾ ಶೇಖಮಖದೂಮ ಅಲ್ಲಾವುದ್ದಿನ್ ಅನಸಾರಿ) ವಂಶಜರು ಮೂಲತಃ ಮದೀನಾದವರಾಗಿದ್ದು, ದೆಹಲಿಯಲ್ಲಿ ನೆಲೆ ನಿಂತ ಮೇಲೆ, ಲಾಡ್ಲೆ ಮಶಾಕರು ದೆಹಲಿಯಲ್ಲಿ ಜನಿಸಿ ಮುಂದೆ ಔರಂಗಬಾದ್ ಮಾರ್ಗವಾಗಿ ಆಳಂದಕ್ಕೆ ಬಂದು ಇಸ್ಲಾಂ ಧರ್ಮ ಪ್ರತಿಪಾದಿಸಿದರು. ಸುಮಾರು ೬೪ ಎಕರೆಯಷ್ಟು ವಿಶಾಲವಾದ ಪ್ರದೇಶದಲ್ಲಿ ನಡುವೆ ಇರುವ ಲಾಡ್ಲೆ

ಮಶಾಕ್ ದರ್ಗಾ ಸುಂದರ ಮುಸ್ಲಿಂ ರಚನೆಯಾಗಿದ್ದು ಇದು ೧೯೬೦ ರಲ್ಲಿ ಪುನರ್ ನಿರ್ಮಿತಗೊಂಡಿದೆ. ಪ್ರತಿ ವರ್ಷ ಗ್ಯಾರವಿ ತಿಂಗಳ ೯ ರಿಂದ ೧೧ನೇ ತಾರೀಖಿನವರೆಗೆ ಇಲ್ಲಿ ಉರುಸಾಗುತ್ತಿದ್ದು ಆ ಸಂದರ್ಭದಲ್ಲಿ ಹಿಂದೂ ಮುಸ್ಲಿಂರೆನ್ನದೆ ಲಕ್ಷಾಂತರ ಜನ ಬಂದು ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ.

ಈ ದರ್ಗಾದ ಸಮೀಪದಲ್ಲೇ ಇರುವ ಕಾಲಿ ಮಸೀದಿ ಕರಿಕಲ್ಲಿನ ಸುಂದರ ರಚನೆಯಾಗಿದ್ದು,ಇದನ್ನು ೧೬೪೧-೪೨ರಲ್ಲಿ ಫರೀದ್ ಖಾನನು ಪೂರ್ಣಗೊಳಿಸಿದನೆಂದು ಅಲ್ಲೇ ಇರುವ ಪರ್ಷಿಯನ್ ಶಾಸನ ತಿಳಿಸಿದರೆ, ಸಮಾಧಿಯೊಂದರ ಮೇಲಿರುವ ಇನ್ನೊಂದು ಶಾಸನ ೧೬೫೬-೫೭ರಲ್ಲಿ ಫರೀದಖಾನನು ನಿಧನಹೊಂದಿದ ವಿಷಯವನ್ನು ತಿಳಿಸುತ್ತದೆ. ಇಲ್ಲಿ ಒಟ್ಟು ೧೯ ಮಸೀದಿಗಳಿದ್ದು ಅವುಗಳಲ್ಲಿ ೧೨ ಪ್ರಾಚೀನದ್ದಾಗಿವೆ. ಜೊತೆಗೆ ಬೇರೆ ಬೇರೆ ಸಂತರಿಗೆ ಸೇರಿದ ೧೦ ದರ್ಗಾಗಳಿವೆ. ಆಳಂದ ಕೈಮಗ್ಗದ ಸೀರೆಗಳಿಗೆ ಪ್ರಸಿದ್ಧವಾಗಿದೆ.

**ಇಂಗಳಗಿ** (೩,೯೮೫) ಯು ತಾಲೂಕು ಕೇಂದ್ರವಾದ ಚಿತ್ತಾಪುರದಿಂದ ನೈಋತ್ಯಕ್ಕೆ ೧೮ ಕಿ. ಮೀ., ವಾಡಿ ರೈಲ್ವೆ ಜಂಕ್ಷನ್‌ನಿಂದ ಪಶ್ಚಿಮಕ್ಕೆ ಆರು ಕಿ. ಮೀ. ದೂರದಲ್ಲಿ ಕಾಗಿಣಾ ನದಿಯ ಎಡ ದಂಡೆಯ ಮೇಲಿರುವ ಚಾರಿತ್ರಿಕ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಇಂಗುಣಿಗೆ', 'ಯಿಂಗುಳಿಗೆ', 'ಯಿಂಗಿಣಿಗೆ' ಎಂದೆಲ್ಲಾ ಉಲ್ಲೇಖಗೊಂಡಿರುವ ಇದು ಹಿಂದೆ ಅರಲು-೩೦೦ಕ್ಕೆ ಸೇರಿದ್ದು, ಇಲ್ಲಿಂದ ಈವರೆಗೆ (ಕಲ್ಯಾಣದ ಚಾಳುಕ್ಯರ ಮೂರು ಹಾಗೂ ಸೇವುಣರ ಎರಡು) ಐದು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಲೋಕೇಶ್ವರ ಗುಡಿಯಲ್ಲಿರುವ ಶಾಸನವು ಕಲ್ಯಾಣದ ಚಾಳುಕ್ಯ ಅರಸ ಇಮ್ಮಡಿ ಸೋಮೇಶ್ವರನ ಕಾಲದ್ದಾಗಿದ್ದು, ಹೈಹಯ ವಂಶದ ಬಾಚರಸನು ಮಹಾಮಂಡಳೇಶ್ವರನಾಗಿದ್ದಾಗ, ಅವನ ಸತಿ ಕಾಳಬ್ಬರಸಿಯು ೧೦೭೧ರಲ್ಲಿ ಹಂದರಕಿಯ ಲೋಕೇಶ್ವರ ದೇವಾಲಯದ ಬಾಳಚಂದ್ರಜೀಯರ ವ್ಯಾಪ್ತಿಗೆ ಒಳಪಟ್ಟಿದ್ದ, ಇಂಗುಣಿಗೆಯ ಲೋಕೇಶ್ವರ ದೇವಾಲಯದ ಮಠದ ಆಚಾರ್ಯರಾದ ರುದ್ರಶಕ್ತಿ ಜೀಯರ ಕೈಯಲ್ಲಿ ಈ ದೇವರ ಪೂಜಾವಿಧಿಗೆ, ಮಠದ ತಪೋಧನರಿಗೆಂದು ೩೬೦ ಮತ್ತರು ಭೂಮಿಯನ್ನು ದಾನ ಕೊಟ್ಟ ಅಂಶವನ್ನು ತಿಳಿಸುತ್ತದೆ. ಇಲ್ಲಿಯ ಜೈನಬಸದಿಯಲ್ಲಿರುವ ಶಾಸನವು ಕಲ್ಯಾಣದ ಚಾಳುಕ್ಯ ಅರಸ ಆರನೇಯ ವಿಕ್ರಮಾದಿತ್ಯನ ಕಾಲದ್ದಾಗಿದ್ದು, ಅವನ ರಾಣಿಯಾದ ಜಾಕಲದೇವಿಯು ಇಂಗುಣಿಗೆಯನ್ನು ತ್ರಿಭೋಗಾಭ್ಯಂತರ ಸಿದ್ಧಿಯಿಂದಾಳುತ್ತಿದ್ದಾಗ, ಓರ್ವ ವ್ಯಾಪಾರಿಯು ಜೀನೇಶ್ವರನ ಮಾಣಿಕ್ಯ ಮೂರ್ತಿಯನ್ನು ತಂದು ಅವಸರದಿಂದ ಅರಸನಿಗೆ ಸಲ್ಲಿಸಲು, ಅದನ್ನು ಅರಸನು ರಾಣಿ ಜಾಕಲದೇವಿಗೆ ನೀಡಿ, ನಿನ್ನ ಆಳ್ವಿಕೆಗೆ ಒಳಪಟ್ಟಿರುವ ಇಂಗುಣಿಗೆಯಲ್ಲಿ ಜೈನಬಸದಿಯನ್ನು ಕಟ್ಟಿಸಿ ಈ ಜಿನ ಬಿಂಬವನ್ನು ಪ್ರತಿಷ್ಠಾಪಿಸೆಂದು ಸೂಚಿಸಿದನು. ಅದರಂತೆ ರಾಣಿಯು ಇಂಗುಣಿಗೆಯಲ್ಲಿ ೧೧೯೫ರಲ್ಲಿ ಬಸದಿಯನ್ನು ನಿರ್ಮಿಸಿ, ಇಂದ್ರಸೇನ ಭಟ್ಟಾರಕರಿಗೆ ಅರಲೂರಿನ ಪಾಂಡೇಶ್ವರ ಗುಡಿಯ ಗಂಡರಾದಿತ್ಯನ ಪಿರಿಯ ಕೋಲಲ್ಲಿ ಸರ್ವಮಾನ್ಯವಾಗಿ ೨೧ ಮತ್ತರು ಭೂಮಿಯನ್ನು ದಾನ ಬಿಟ್ಟ ಅಂಶವನ್ನು ಹೇಳುತ್ತದೆ. ಇಲ್ಲಿಯ ದೇಗುಲದಲ್ಲಿರುವ ಕಲ್ಯಾಣದ ಚಾಳುಕ್ಯ ಅರಸ ಜಗದೇಕಮಲ್ಲನ ಕಾಲಕ್ಕೆ ಸೇರಿದ ಶಾಸನವು, ಮಹಾಮಂಡಳೇಶ್ವರ ಲೋಕಾದಿತ್ಯರಸ, ದಂಡನಾಯಕ ಬಮ್ಮನಯ್ಯರನ್ನು ದಾಖಲಿಸಿದೆಯಾದರೂ ಶಾಸನ ಅಪೂರ್ಣವಾಗಿರುವುದರಿಂದ ದಾನ ಭಾಗ ಲಭ್ಯವಿಲ್ಲ. ಇಲ್ಲಿಯ ಮೂಲೇಶ್ವರ ದೇವಾಲಯದಲ್ಲಿರುವ ಯಾದವ ಸಿಂಗಣದೇವನ ಕಾಲಕ್ಕೆ ಸೇರಿದ ೧೨೨೯ರ ಶಾಸನವು ಹೈಹಯ ಮಹಾಮಂಡಳೇಶ್ವರ ವೀರ ಬಿಜ್ಜರಸ, ಪ್ರಭು ನಾಗರಸ, ಹೆಗ್ಗಡೆ ಬಸವಯ್ಯ ಹಾಗೂ ಪಂಚಮಠಗಳು ಒಂದಾಗಿ ಸೇರಿದ್ದಾಗ ಮೂಲಸ್ಥಾನ ದೇವರ ಪಾದಾರಾಧಕಿ, ಕ್ಷೇತ್ರ ಸನ್ಯಾಸಿನಿಯಾದ ಅಚಲವ್ವೆಯ ಕಾಲನ್ನು ತೊಳೆದು, ಸಿದ್ಧರಾಮನಾಥ, ಸಿಂಗಿದೇವ, ಬಿಜ್ಜೇಶ್ವರ, ರೇವಣೇಶ್ವರ, ಕನ್ನೇಶ್ವರ, ಕೇದಾರದೇವ ಹಾಗೂ ನಾಗೇಶ್ವರ ಲಿಂಗಗಳಿಗೆ (ಸಪ್ತಲಿಂಗೇಶ್ವರ) ಹಾಗೂ ಗಣಮಠಕ್ಕೆ ಗುಡ್ಡವ್ವೆಯು. ನಾಲ್ಕು ಮನೆಯ ನಿವೇಶನ, ಹೊಲ, ತೋಟ ಹಾಗೂ ಗಾಣಗಳನ್ನು ದಾನ ಕೊಟ್ಟ ಸಂದರ್ಭದಲ್ಲಿ ಊರ ಕೆಲವು ಆಯಗಳನ್ನು ದೇವರಿಗೆ ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ಇದೇ ರೀತಿ ಲೋಕೇಶ್ವರ ದೇವಾಲಯದಲ್ಲಿರುವ ಯಾದವ ಸಿಂಗಣನ ಕಾಲಕ್ಕೆ ಸೇರಿದ ೧೨೨೯ ರ ಇನ್ನೊಂದು ಶಾಸನವು ಮಹಾಮಂಡಳೇಶ್ವರ ಬಿಬ್ಬರಸ, ಅವನ ರಾಣಿ ಸಿರಿಯಾದೇವಿ ಹಾಗೂ ವಾಸುದೇವನಾಯಕರು ಇಂಗುಣಿಗೆಯ ಲೋಕೇಶ್ವರ ದೇವರ ಆಚಾರ್ಯ ಕರ್ತ್ತರ ಜಿಯರಿಗೆ ವಿವಿಧ ಸುಂಕಗಳನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ.

ಇಂಗಳಗಿಯಲ್ಲಿಂದು ಆರು ಪ್ರಾಚೀನ ದೇವಾಲಯಗಳಿದ್ದು, ಕೆಲವು ಭಾಗಶಃ ಶಿಥಿಲಗೊಂಡಿವೆ. ಊರ ಅಗಸಿ ಬಾಗಿಲಿಗೆ ಎದುರಾಗಿ ಇರುವ ಈಶ್ವರ ದೇವಾಲಯವೇ ೧೦೭೧ ಹಾಗೂ ೧೨೨೯ರ ಶಾಸನಗಳು ಹೇಳುವ ಲೋಕೇಶ್ವರ

ದೇಗುಲವಾಗಿದೆ. ಪೂರ್ವಾಭಿಮುಖವಾಗಿರುವ ಈ ಗುಡಿಯ ಗರ್ಭಗೃಹ ಹಾಗೂ ಅಂತರಾಳಗಳಷ್ಟೆ ಉಳಿದಿದ್ದು, ನವರಂಗ ಭಾಗ ಪೂರ್ಣ ನಾಶವಾಗಿದ್ದು, ಮುಂದೆ ಸೂರ್ಯ ಶಿಲ್ಪವಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲವಾಡವು ಸರಳವಾಗಿದೆ. ಇದರ ಎಡಬದಿಯಲ್ಲಿ ಜೀರ್ಣೋದ್ಧಾರಗೊಂಡಿರುವ ವೀರಭದ್ರನ ಗುಡಿ ಇದೆ. ಇಲ್ಲಿಯ ಮೂಲೇಶ್ವರ (ಸೋಲಾಲಿಂಗೇಶ್ವರ) ದೇವಾಲಯವೇ ೧೧೫೧ರ ಶಾಸನದಲ್ಲಿ ಉಕ್ತವಾಗಿರುವ ಸಿದ್ಧರಾಮನಾಥ ಹಾಗೂ ಇತರ ಶಿವಲಿಂಗಗಳ ದೇಗುಲವಾಗಿದ್ದು, ಇದೊಂದು ದೇವಾಲಯ ಸಂಕೀರ್ಣವಾಗಿದೆ. ಇಲ್ಲಿ ವಿವಿಧ ಪ್ರಮಾಣದ ಒಟ್ಟು ಒಂಭತ್ತು ಶಿವಾಲಯಗಳಿದ್ದು, ಇವುಗಳಲ್ಲಿ ನಡುವೆ ಇರುವ ದೊಡ್ಡ ಗುಡಿಯು ಸಪ್ತಲಿಂಗೇಶ್ವರವಾಗಿದ್ದು ದಕ್ಷಿಣಾಭಿಮುಖವಾಗಿದ್ದರೆ, ಇದರ ಎಡಬದಿಯಲ್ಲಿರುವ ಶಾಸನೋಕ್ತ ಮೂಲಸ್ಥಾನ ದೇವಾಲಯವು ಉತ್ತರಾಭಿಮುಖವಾಗಿದೆ. ಇದೇ ಸಂಕೀರ್ಣದಲ್ಲಿ ಕೇವಲ ಗರ್ಭಗೃಹ, ಅಂತರಾಳಗಳಷ್ಟೆ ಇರುವ ಉಳಿದ ಏಳು ಸಣ್ಣ ಗುಡಿಗಳಲ್ಲಿ, ಪೂರ್ವಾಭಿಮುಖವಾಗಿ ನಾಲ್ಕು, ಉತ್ತರಾಭಿಮುಖವಾಗಿ ಎರಡು ಹಾಗೂ ಪಶ್ಚಿಮಾಭಿಮುಖ ಒಂದು ಗುಡಿಗಳಿದ್ದು, ಇವುಗಳಿಗೆಲ್ಲ ಕದಂಬ ನಾಗರ ಶಿಖರಗಳಿವೆ. ಈ ಸಂಕೀರ್ಣವನ್ನು ಪ್ರವೇಶಿಸಲು ದ್ವಾರಮಂಟಪವಿದೆ. ಇಲ್ಲಿಯ ಸಪ್ತಲಿಂಗೇಶ್ವರ ಗುಡಿಯು ದೊಡ್ಡದಿದ್ದು, ಪ್ರಧಾನ ಗರ್ಭಗೃಹಕ್ಕೆ ಹೊಂದಿಕೊಂಡಂತೆ ಇರುವ ನವರಂಗದ ಇಕ್ಕೆಲಗಳಲ್ಲಿ ಆರು ಗರ್ಭಗಳು ಎದುರುಬದಿರಾಗಿದ್ದು, ಇವುಗಳಲ್ಲಿ ನಾಲ್ಕಕ್ಕಷ್ಟೇ ಅಂತರಾಳಗಳಿವೆ. ಈ ಗುಡಿಗೆ ಮುಖಮಂಟಪವಿದ್ದು, ಕಕ್ಷಾಸನವಿದೆ. ಹೂಗಾರ್ ಮನೆ ಮುಂದಿರುವ ಕಾಳೇಶ್ವರ ದೇವಾಲಯವು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು ಪಾರ್ಶ್ವದ್ವಾರವಿದೆ. ಗರ್ಭಗೃಹದಲ್ಲಿ ಲಿಂಗವಿದ್ದು ಇದರ ಬಾಗಿಲವಾಡವು ಪಂಚಶಾಖೆಗಳನ್ನು ಹೊಂದಿದೆ. ಇಲ್ಲಿ ಸಪ್ತಮಾತೃಕಾ, ಗಣಪತಿ ಹಾಗೂ ವೀರಭದ್ರನ ಶಿಲ್ಪಗಳಿವೆ. ಮಾಲಿಪಾಟೀಲರ ಮನೆ ಬಳಿ ಇರುವ ಜೈನಬಸದಿಯನ್ನು ರಾಣಿ ಜಾಕಲದೇವಿಯು ೧೧೫೪ರಲ್ಲಿ ನಿರ್ಮಿಸಿದ ಅಂಶ ಅಲ್ಲೇ ಇರುವ ಶಾಸನದಿಂದ ಗೊತ್ತಾಗುತ್ತದೆ. ಪೂರ್ವಾಭಿಮುಖವಾಗಿರುವ ಈ ಬಸದಿಯು ಗರ್ಭಗೃಹ, ತೆರೆದ ಅಂತರಾಳ ಹಾಗೂ ತೆರೆದ ನವರಂಗಗಳನ್ನು ಹೊಂದಿದ್ದು, ನವರಂಗದಲ್ಲಿ ಕಕ್ಷಾಸನವಿದೆ. ಗರ್ಭಗೃಹದಲ್ಲಿ ಇಂದು ಶಿವಲಿಂಗವಿದೆಯಾದರೂ, ಮೂರು ಶಾಖೆಯ ಅಲಂಕಾರವಿರುವ ಬಾಗಿಲವಾಡವ ಲಲಾಟದ ಮೇಲಿರುವ ಪದ್ಮಾಸೀನ ತೀರ್ಥಂಕರನಿಂದಾಗಿ ಇದು ಮೂಲತಃ ಜೈನಬಸದಿಯೆಂದು ಗೊತ್ತಾಗುತ್ತದೆ. ನವರಂಗದ ನಡುವಣ ಛತ್ತು ಕೀರ್ತಿಮುಖಗಳಿಂದ ಆವೃತ್ತವಾದ ಕಮಲದಿಂದ ಅಲಂಕೃತಗೊಂಡಿದ್ದು, ವಜ್ರಪಟ್ಟಿಕೆಯ ಅಲಂಕಾರ ಗಮನಾರ್ಹವಾಗಿದೆ. ತೆರೆದ ನವರಂಗಕ್ಕೆ ನಂತರದಲ್ಲಿ ಬಾಗಿಲವಾಡವನ್ನು ಹೊಂದಿಸಲಾಗಿದೆ. ಈ ಗುಡಿಯ ಬಳಿ ಮುಕ್ಕಾದ ತೀರ್ಥಂಕರರ ಶಿಲ್ಪಗಳಿದ್ದು, ದೇವಾಲಯವಿಂದು ತಿಪ್ಪೆಗುಂಡಿಯಾಗುತ್ತಿದೆ. ಸುಮಾರು ೧೧-೧೨ನೇ ಶತಮಾನಕ್ಕೆ ಸೇರಿದ ಇನ್ನೊಂದು ಜೈನಬಸದಿ ಊರಲ್ಲಿದ್ದು, ಇದನ್ನು ಸ್ಥಳೀಕರು ಓಜಯಮಾಯಿ ಗುಡಿ ಎಂದು ರೂಢಿಯಲ್ಲಿ ಕರೆಯುತ್ತಾರೆ. ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನುಳ್ಳ ಇದರ ಗರ್ಭಗುಡಿಯಲ್ಲಿ ಮಹಾವೀರನ ಮೂರ್ತಿ ಇದ್ದು, ಬಾಗಿಲವಾಡವು ನಿರಾಡಂಬರವಾಗಿದೆ. ಸುಮಾರು ೧೨ನೇ ಶತಮಾನದ ಕಂಬಗಳನ್ನುಳ್ಳ ದೊಡ್ಡ ಗಣಪ ಹಾಗೂ ಚಿಕ್ಕಗಣಪತಿಯ ಗುಡಿಗಳಿದ್ದು, ಅಲ್ಲಿ ಗಣಪತಿಯ ಪ್ರಾಚೀನ ಶಿಲ್ಪಗಳಿವೆ. ಉಳಿದಂತೆ ಊರಲ್ಲಿ ಹನುಮಂತನ ಗುಡಿಯಿದ್ದು, ಸರಕೋಲ್ ಮುತ್ಯಾನ ದರ್ಗಾ ಹಾಗೂ ಮಸೀದಿಗಳಿವೆ.

**ಇಜೇರಿ** (೪೫೮೬) ಯು ತಾಲೂಕು ಕೇಂದ್ರವಾದ ಜೇವರ್ಗಿಯಿಂದ ನೈಋುತ್ಯಕ್ಕೆ ೨೦ ಕಿ. ಮೀ ದೂರದಲ್ಲಿದ್ದು ಪ್ರಾಗೈತಿಹಾಸಿಕ ಮಹತ್ವದ ಶಿಲಾವೃತ್ತಗಳನ್ನು ಹೊಂದಿದೆ. ಪ್ರಾಚೀನ ಶಾಸನಗಳಲ್ಲಿ 'ಇರಜೇರಿ' ಎಂದೇ ಉಲ್ಲೇಖಿತ ಗೊಂಡಿರುವ ಇದು ಹಿಂದೆ ನರಿಯಂಬೊಳೆ-೭೦ಕ್ಕೆ ಸೇರಿದ್ದು ಇಲ್ಲಿಂದ ಈವರೆಗೆ ವರದಿಯಾಗಿರುವ ಏಕೈಕ ಶಾಸನವು ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಗೆ ಸೇರಿದ್ದು, ಅಹವಮಲ್ಲದೇವನು ಶಂಕರನಾರಾಯಣ ದೇವರ ಸೇವೆಗೆ ಹಾಗೂ ಮಠಕ್ಕೆ ಸೇರಿದ ವಿದ್ಯಾರ್ಥಿಗಳ ಊಟ ವಸತಿಗಳಿಗೆಂದು ಮಾಣಿಕೇಶ್ವರದ ಕೋಲಲ್ಲಿ ೩೦೦ ಮತ್ತರು ಹೊಲ, ಎರಡು ಮತ್ತರು ತೋಟ, ೫ ನಿವೇಶನ, ಒಂದು ಬಣಂಬೆ ನಿವೇಶನ ಹಾಗೂ ಒಂದು ಗಾಣವನ್ನು ಪರಮೇಶ್ವರ ದತ್ತಿಯಾಗಿ ಸ್ಥಾನಾಚಾರ್ಯ ಮಲ್ಲಿಕಾರ್ಜುನ ಪಂಡಿತರಿಗೆ ದಾನ ಕೊಟ್ಟ ಅಂಶವನ್ನು ತಿಳಿಸುತ್ತದೆ. ಮುಸ್ಲಿಮರ ಆಳ್ವಿಕೆಯಲ್ಲಿ ರಾಜಕೀಯ ಪ್ರಾಮುಖ್ಯತೆಯನ್ನು ಪಡೆದಿದ್ದ ಈ ಊರು ವಿಶಾಲವಾದ, ಸುಭದ್ರವಾದ ಕೋಟೆಯನ್ನು ಹೊಂದಿದ್ದು, ಹುಡೆಗಳಿವೆ. ಇಲ್ಲಿಯ ಅಮೀನಸಾಬನ ದರ್ಗಾ ಸುಂದರ ಮುಸ್ಲಿಂ ವಾಸ್ತುರಚನೆಯಾಗಿದ್ದು ಗ್ಯಾರವಿ ತಿಂಗಳಲ್ಲಿ ಉರುಸು ನಡೆಯುತ್ತದೆ.

**ಉ(ಊ)ಡಗಿ** (೨೭೩೭)ಯು ತಾಲೂಕು ಕೇಂದ್ರವಾದ ಸೇಡಂನಿಂದ ನೈಋತ್ಯಕ್ಕೆ ೧೦ ಕಿ. ಮೀ, ಹಂಗನಹಳ್ಳಿ ರೈಲ್ವೆ ನಿಲ್ದಾಣದಿಂದ ಪೂರ್ವಕ್ಕೆ ಎರಡು ಕಿ. ಮೀ. ಅಂತರದಲ್ಲಿದೆ. ಇಲ್ಲಿಯ ಲೋಕೇಶ್ವರ ದೇವಾಲಯದ ಸಂಕೀರ್ಣದಲ್ಲಿ ಸುಮಾರು ೯-೧೦ನೇ ಶತಮಾನಕ್ಕೆ ಸೇರಿದ ಹಲವಾರು ಮೂರ್ತಿ ಶಿಲ್ಪಗಳಿವೆ. ಗರ್ಭಗೃಹ, ತೆರೆದ ಅರ್ಧಮಂಟಪ ಹಾಗೂ ನವರಂಗಗಳನ್ನು ಹೊಂದಿರುವ ಈ ಗುಡಿಯ ಗರ್ಭಗೃಹದಲ್ಲಿ ಬಲಹರಿ ಶಿವಲಿಂಗವಿದೆ. ಇದರ ಬಾಗಿಲ ಚೌಕಟ್ಟು ಆಕರ್ಷಕವಾದ ಪಂಚಶಾಖಾಲಂಕೃತ ಕೆತ್ತನೆಯಿಂದ ಕೂಡಿದ್ದು ಸುಂದರವಾಗಿದೆ. ಇದರ ಅಂತರಾಳದ ಛತ್ತನ್ನು ದೊಡ್ಡದಾದ ಕಮಲದಿಂದ ಅಲಂಕರಿಸಲಾಗಿದ್ದು, ಹೊಸ್ತಿಲ ಬಳಿ ಸುಂದರವಾದ ಚಂದ್ರ ಶಿಲೆ ಇದೆ. ನವರಂಗದಲ್ಲಿರುವ ಎರಡು ದೇವಕೋಷ್ಠಗಳೂ ಆಕರ್ಷಕವಾದ ಬಾಗಿಲವಾಡಗಳನ್ನು ಹೊಂದಿರುವುದು ಗಮನಾರ್ಹವಾಗಿದೆ. ನವರಂಗದ ಕಂಬಗಳು ವಿವಿಧ ಕೆತ್ತನೆಗಳಿಂದ ಅಲಂಕೃತಗೊಂಡಿದ್ದು, ಒಂದರ ಮೇಲೆ ನರಿ-ದ್ರಾಕ್ಷಿಯ(?) ಪಂಚತಂತ್ರ ಶಿಲ್ಪವಿರುವಂತೆ ತೋರುತ್ತದೆ. ನವರಂಗದ ಛತ್ತನ್ನು ಬೃಹತ್ತಾದ ಕಮಲದಿಂದ ಅಲಂಕರಿಸಲಾಗಿದ್ದು, ಇದಕ್ಕಿರುವ ಮೂರು ಪ್ರವೇಶಗಳಲ್ಲಿ ಪ್ರಧಾನ ದ್ವಾರ ಆಕರ್ಷಕವಾಗಿದ್ದು, ಇಕ್ಕೆಲಗಳಲ್ಲಿ ಶೈವ ದ್ವಾರಪಾಲಕರ ಬೃಹತ್ ಶಿಲ್ಪಗಳಿವೆ. ಈ ದೇವಾಲಯ ಪರಿಸರದಲ್ಲಿ ಭೈರವ, ಕಾರ್ತಿಕೇಯ ಹಾಗೂ ಗಣೇಶನ ಬಿಡಿ ಶಿಲ್ಪಗಳನ್ನು, ನೋಡಬಹುದಾಗಿದೆ. ಜೊತೆಗೆ ಕಾಲಾರಿ ಶಿವ, ಕಾಲಭೈರವಿ, ವೃಷಭ ಸಹಿತ ಉಮಾ-ಮಹೇಶ್ವರ, ಕಾರ್ತೀಕೇಯ, ಶೈವಯತಿ, ಕಾಮ-ರತಿ, ಭೈರವ, ಅರ್ಧನಾರೀಶ್ವರ, ಭೃಂಗಿ, ಬ್ರಹ್ಮ ಮುಂತಾದ ರಾಷ್ಟ್ರಕೂಟ ಶಿಲ್ಪಗಳನ್ನಿಲ್ಲಿ ವೀಕ್ಷಿಸಬಹುದಾಗಿದ್ದು, ಇವು ಶಿಲ್ಪಕಲಾ ದೃಷ್ಟಿಯಿಂದ ಮಹತ್ವದ್ದಾಗಿವೆ. ಇತ್ತೀಚೆಗೆ ಪ್ರೌಢಶಾಲೆಯ ಆವರಣದಲ್ಲಿ ಸುಮಾರು ೧೧-೧೨ನೇ ಶತಮಾನದ ಗುಡಿಯ ಅಧಿಷ್ಠಾನ ಭಾಗ ಪತ್ತೆಯಾಗಿದೆ. ಉಳಿದಂತೆ ಊರಲ್ಲಿಂದು ಹನುಮಂತ, ಲಕ್ಷ್ಮಿ, ದ್ಯಾವಮ್ಮ ಹಾಗೂ ಮರಗಮ್ಮನ ನವೀನ ಗುಡಿಗಳಿದ್ದು, ಹನುಮಂತನ ಗುಡಿಯ ಬಳಿ ನಂದಿ, ಗಣಪತಿ, ಹಾಗೂ ಶೈವದ್ವಾರಪಾಲಕರ ಶಿಲ್ಪಗಳಿವೆ. ಜುಮ್ಮಾ ಮಸೀದಿ ಹಾಗೂ ದರ್ಗಾ ಕೂಡ ಇವೆ.

**ಎಡೆಯಪುರ** (೮೮೧) ವು ತಾಲೂಕು ಕೇಂದ್ರವಾದ ಸುರಪುರದಿಂದ ವಾಯವ್ಯಕ್ಕೆ ೨೪ ಕಿ.ಮೀ., ಮುದನೂರಿನಿಂದ ಈಶಾನ್ಯಕ್ಕೆ ನಾಲ್ಕು ಕಿ. ಮೀ. ದೂರದಲ್ಲಿದ್ದು, ಇಲ್ಲಿಂದ ಈವರೆಗೆ ಎರಡು ಶಿಲಾಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಮಲಕಯ್ಯನಗುಡಿ ಮುಂದಿನ ಕಂಬದ ಮೇಲಿರುವ ಯಾದವ ಸಿಂಘಣನ ಕಾಲದ ೧೨೦೮ರ ಶಾಸನವು ಎಡೆಯಪುರದ ಮಲ್ಲಿಕಾರ್ಜುನ ದೇವರಿಗೆ, ಐಹೊಳೆಐನೂರ್ವರು, ಉಭಯ ನಾನಾದೇಶಿಗಳು, ಮುಮ್ಮರಿದಂಡಗಳು ಹಾಗೂ ಸೆಟ್ಟಿಗುತ್ತರು ವಿವಿಧ ಸುಂಕಗಳನ್ನು ದತ್ತಿಬಿಟ್ಟ ವಿಷಯನ್ನು ತಿಳಿಸಿದರೆ, ಅದೇ ಕಂಬದ ಮೇಲಿರುವ ಮತ್ತೊಂದು ಶಾಸನವೂ ಯಾದವ ಇಮ್ಮಡಿ ಸಿಂಘಣನ ಕಾಲದ್ದಾಗಿದ್ದು, ಲಕುಮಿದೇವರಸನು ಸಗರನಾಡನ್ನು ಆಳುತ್ತಿದ್ದಾಗ, ಮಹಾಮಂಡಳೇಶ್ವರ ಹೈಹಯ ದೇವರಸರು ರಾಜಧಾನಿ ಕೆಂಭಾವಿಯಿಂದ ಕೆಂಭಾವಿ-೨೪ ಅನ್ನು ಆಳುತ್ತಿದ್ದಾಗ ಎಡೆಯಪುರದ ಮಲ್ಲಿಕಾರ್ಜುನ ಹಾಗೂ ನಾಗವಣ ದೇವರ ಅಂಗ-ರಂಗಭೋಗಗಳಿಗೆಂದು ಮುಂಜನ ಕೋಲಲ್ಲಿ ಬಿಟ್ಟ ಭೂದತ್ತಿಯನ್ನು ಹೇಳುತ್ತ ನೆರೆಯ ಅರಕೇರಾ ತೀರ್ಥವನ್ನು ವಾರಣಾಸಿ ಪ್ರಯಾಗಗಳ ಸ್ಥಾನಕ್ಕೆ ಏರಿಸಿ ಹೊಗಳಿರುವ ಅಂಶವನ್ನು ಶಾಪಾಶಯ ಭಾಗದಲ್ಲಿ ದಾಖಲಿಸಿರುವುದು ಗಮನಾರ್ಹವಾಗಿದೆ. ಇದಕ್ಕೆ ಪ್ರಾಯಶಃ ಅರಕೇರಿಯಲ್ಲಿರುವ ಸಹಸ್ರಲಿಂಗ ದೇವಾಲಯ ಸ್ಫೂರ್ತಿಯಾಗಿರಬೇಕೆಂದು ತೋರುತ್ತದೆ. ಈ ಶಾಸನಗಳಿಂದ ಈಗ ಗ್ರಾಮದ ಪಶ್ಚಿಮದಿಕ್ಕಿನಲ್ಲಿರುವ ಮಲಕಯ್ಯನ ಗುಡಿಯೇ ಮೇಲಿನ ಶಾಸನೋಕ್ತ ಮಲ್ಲಿಕಾರ್ಜುನ ಹಾಗೂ ನಾಗಣ ದೇವರ ದೇಗುಲವಾಗಿದ್ದು, ಇದೊಂದು ದ್ವಿಕೂಟವಾಗಿದ್ದಂತೆ ತೋರುತ್ತದೆ.

**ಎತ್ತಿಪೋತ ಜಲಪಾತವು** ತಾಲೂಕು ಕೇಂದ್ರವಾದ ಚಿಂಚೋಳಿಯಿಂದ ಪೂರ್ವಕ್ಕೆ ಕೊಂಚಾವರಂ ಘಟ್ಟ ಶ್ರೇಣಿಯಲ್ಲಿರುವ ಒಂಟಿಚಿಂತ ದಿಂದ ಒಂದು ಕಿ. ಮೀ. ನಡೆದು ಹೋದರೆ ಸಿಗುತ್ತದೆ. ತೆಲುಗಿನಲ್ಲಿ ಎತಿಪೋತ ಎಂದರೆ ಮೇಲಿಂದ ಬೀಳುವುದು ಎಂದರ್ಥ. ಇಲ್ಲಿ ದಟ್ಟವಾದ ಅರಣ್ಯದ ನಡುವೆ ಜೋರಾಗಿ ಹರಿದು ಬರುವ ನೀರು ರಭಸದಿಂದ ಕೆಳಗೆ ಬೀಳುತ್ತದೆ. ಮಳೆಗಾಲದಲ್ಲಿ ತುಂಬಿ ಹರಿವ ಈ ಜಲಪಾತ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತದೆ. ಆದರೆ ಈ ಸ್ಥಳವನ್ನು ತಲುಪುವುದೇ ಕಷ್ಟದ ಕೆಲಸವಾಗಿದ್ದು, ಇದು ಪ್ರವಾಸೋದ್ಯಮ ಕೇಂದ್ರವಾಗಿ ಬೆಳೆಯಲು ಪೂರಕವಾದ ಸೌಕರ್ಯಗಳು ಆಗಬೇಕಾಗಿದೆ.

**ಏವೂರು** (೩೭೪೧) ತಾಲೂಕು ಕೇಂದ್ರವಾದ ಸುರಪುರದಿಂದ ವಾಯವ್ಯಕ್ಕೆ ೩೨ ಕಿ. ಮೀ., ಶಹಾಪುರದಿಂದ ಪಶ್ಚಿಮಕ್ಕೆ ೩೦ ಕಿ. ಮೀ ದೂರದಲ್ಲಿ ಶಹಾಪುರ-ಸಿಂಧಗಿ ರಸ್ತೆಯಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಪ್ರಾಚೀನ

ಶಾಸನಗಳಲ್ಲಿ 'ಏಹೂರು', 'ಭತ್ತಗ್ರಾಮೆ ಏವೂರು' ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಸಗರ-೫೦೦ಕ್ಕೆ ಸೇರಿದ್ದು ಇಲ್ಲಿಂದ ಈವರೆಗೆ ೨೪ ಶಾಸನಗಳು ವರದಿಯಾಗಿದ್ದು, ಇವುಗಳಲ್ಲಿ ೨೨ ಶಾಸನಗಳು ಕಲ್ಯಾಣದ ಚಾಳುಕ್ಯ ಅರಸರ ಕಾಲದ್ದಾಗಿದ್ದು, ಉಳಿದೆರಡು ಕಳಚೂರಿ ಅರಸರದಾಗಿವೆ. ಇದರಿಂದ ೧೧-೧೨ನೇ ಶತಮಾನದಲ್ಲಿ ಏವೂರು ಶೈಕ್ಷಣಿಕವಾಗಿ, ಧಾರ್ಮಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಮಹತ್ವದ ಸ್ಥಾನ ಪಡೆದಿತ್ತೆಂದು ಗೊತ್ತಾಗುತ್ತದೆ. ಈ ಶಾಸನಗಳಲ್ಲಿ ಸಿದ್ರಾಮಯ್ಯ ಮಠಪತಿ ಅವರ ಮನೆ ಮುಂದಿರುವ ನಾಲ್ಕು ಶಾಸನಗಳಲ್ಲಿ ಮೊದಲೆರಡನ್ನು ಸುಮಾರು ೧೦೪೦ರಲ್ಲಿ, ಉಳಿದೆರಡನ್ನು ೧೦೪೮ ಹಾಗೂ ೧೦೬೫ರಲ್ಲಿ ನೀಡಲಾಗಿದ್ದು, ಇವು ಕ್ರಮವಾಗಿ ಏವೂರಿನ ಸ್ವಯಂಭು ದೇವರಿಗೆ ಹಾಗೂ ಮಮ್ಮೇಶ್ವರ ದೇವರಿಗೆ ದಾನ ಬಿಟ್ಟ ವಿಷಯವನ್ನು ತಿಳಿಸುತ್ತವೆ. ಇಲ್ಲಿಯ ಸ್ವಯಂಭು ಸೋಮೇಶ್ವರ ದೇವಾಲಯಕ್ಕೆ ಸಂಬಂಧಿಸಿದಂತೆ ೧೦೭೭-೧೧೭೯ರ ಕಾಲಾವಧಿಯ ಹನ್ನೊಂದು ಶಾಸನಗಳಿದ್ದು ಇವುಗಳಲ್ಲಿ ೧೦೭೭ರ ಸಂಸ್ಕೃತ ಶಾಸನವು ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲದ್ದಾಗಿದ್ದು, ಸಂಧಿವಿಗ್ರಹಿ ರವಿದೇವ ಚಮೂಪನ ಆದೇಶದಂತೆ ಏವೂರಿನ ಹೆಗಡೆ ನಾಗವರ್ಮನು ಅಲ್ಲಿ ನಿರ್ಮಿಸಿದ ಅದ್ಭುತವಾದ ಸ್ವಯಂಭು ಸೋಮೇಶ್ವರ ದೇವಾಲಯ ಹಾಗೂ ಕೋಟಿ ಶಿವತೀರ್ಥಕ್ಕೆಂದು ಅದರ ಆಚಾರ್ಯ ಎಳಮೇಲ ಸಿಂಹಪರ್ಷೆಗೆ ಸೇರಿದ ಈಶಾನರಾಶಿ ಪಂಡಿತರ ಕೈಯಲ್ಲಿ ನರಿಯಂಬೋಳಿ-೭೦ಕ್ಕೆ ಸೇರಿದ ಕಿರಿಯ ಬೆಳಬಟ್ಟೆಯ ಸೀಮೆಯಲ್ಲಿ ೧೫೦ ಮತ್ತರು ಕರಿ ನೆಲವನ್ನು ಎಳರಾವೆಯ ತೀರ್ಥದ ಗಡಿಂಬದ ಒರಂಟನ ಗಳೆಯಲ್ಲಿ ಅಳೆದು ದೇವರ ಪೂಜಾವಿಧಿಗೆ, ಅಲ್ಲಿಯ ತಪೋಧನರಿಗೆ, ಉಪಾಧ್ಯಾಯರಿಗೆ ಹಾಗೂ ಓದುವ ವಿದ್ಯಾರ್ಥಿಗಳ ಊಟವಸತಿಗಳಿಗೆಂದು ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಇದರ ಜೊತೆಗೆ ಏವೂರಲ್ಲೂ ೫೦ ಮತ್ತರು ಭೂಮಿಯನ್ನು, ಅಣ್ಣಾಮಗೌಡ ಕೆರೆ ಕೆಳಗೆ ಒಂದೊಂದು ಮತ್ತರು ತೋಟ ಹಾಗೂ ಗದ್ದೆಗಳನ್ನು ಬ್ರಾಹ್ಮಣರ ಸತ್ರಕ್ಕೆಂದು ದಾನ ಬಿಟ್ಟ ವಿಷಯವನ್ನೂ ತಿಳಿಸುತ್ತದೆ. ಈ ದೇವರ ಮಹಿಮೆಯನ್ನು ಸಾರುತ್ತ "ಅಹಿ ಕೊಣ್ಣಡೆ, ತೇಳಿನ್ದಡೆ, ದಹನಂ ಪತ್ತಿದಡೆ, ಬಂದು ತತ್‌ಕ್ಷಣದೊಳೆ ತದ್ಗ್ರಹಮಂ ಬಲಗೊಳೆ, ತದ್ವಿಷರಹಿತತೆ ಮನುಜರ್ಗೆ ನಿಮಿಷಮಾತ್ರದಿನಕ್ಕುಂ; ಜರಿತಂಗೆ, ನೇತ್ರರೋಗಿಗೆ, ಶಿರೋಪ್ಯಥಾರ್ತ್ತಂಗೆ, ಕರ್ಣಶೂಳಿಗೆ, ನೀರೋದರಿಗೆ ರುಜಾಹರಣಂ ತಚ್ಚರಣಯುಗ ಸ್ಮರಣ ಮಾತ್ರದಿಂದೊರೆಕೊಳ್ಗುಂ" (ಹಾವು, ಚೇಳು ಕಚ್ಚಿದರೆ ಅಥವಾ ಸುಟ್ಟಗಾಯವಾದರೆ, ಅಂತಹವರು ಕೂಡಲೆ ಬಂದು ಈ ದೇಗುಲಕ್ಕೆ ಪ್ರದಕ್ಷಿಣೆ ಹಾಕಿದ ಕ್ಷಣದಲ್ಲೇ ಗುಣಮುಖರಾಗುತ್ತಾರೆ; ಅಶಕ್ತತೆ, ಕಣ್ಣುಬೇನೆ, ತಲೆನೋವು, ಕಿವಿನೋವು, ಉದರ ಬೇನೆ ಮುಂತಾದ ರೋಗಿಗಳು ದೇವರ ಪಾದಸ್ಮರಣೆ ಮಾತ್ರದಿಂದಲೇ ನಿರೋಗಿಗಳಾಗುತ್ತಾರೆ.) ಎಂದು ಹಾಡಿ ಹೊಗಳಿರುವುದೊಂದು ವಿಶೇಷವಾಗಿದೆ. ಸೋಮೇಶ್ವರ ದೇವಾಲಯದ ಆವರಣದ ಮಂಟಪದಲ್ಲಿರುವ ಈ ಶಾಸನದ ಕೊನೆ ಭಾಗದಲ್ಲಿ ದಂಡನಾಯ್ಕನ ಮಗಳಾದ ಮುದ್ದಲದೇವಿಯಕ್ಕ ಏವೂರಿನ ಬಳಿ ಹೊಸದಾಗಿ ನಿರ್ಮಿತಗೊಂಡ ಶಿವಪುರದ ಮಹಾಜನಗಳ ಕೈಯಲ್ಲಿ ಅಗ್ನಿಷ್ಠೆಯನ್ನು ನಡೆಸಲೆಂದು ಹಾಗ ವೃದ್ಧಿಯಲ್ಲಿ ಏಳು ಗದ್ಯಾಣಗಳನ್ನು ದಾನ ಕೊಟ್ಟ ವಿಷಯವನ್ನು, ಕಲ್ಕುಟಿಕರಿಗೆಂದು ೧೨ ಮತ್ತರು ಭೂಮಿಯನ್ನು ದಾನ ಬಿಟ್ಟ ಅಂಶವನ್ನೂ ತಿಳಿಸುತ್ತದೆ. ಈ ಗುಡಿಗೆ ಸೇರಿದ ಮಠವು ನೈಷ್ಠಿಕ ಬ್ರಹ್ಮಚಾರಿಗಳಿಗಷ್ಟೆ ಸೀಮಿತವಾಗಿದ್ದು, ಇತರರು ಅಲ್ಲಿ ಉಳಿಯುವಂತಿಲ್ಲವೆಂದೂ ಹಾಗೂ ಉಳಿದರೆ ನಖರರು ಹಾಗೂ ಅರಸರು ಅವರನ್ನು ಹೊರಗಟ್ಟುವರೆಂದೂ ಈ ಶಾಸನ ಎಚ್ಚರಿಸುತ್ತದೆ. ಸೋಮೇಶ್ವರ ದೇವಾಲಯದ ನವರಂಗದಲ್ಲಿ ಬಲಕ್ಕೆ ಒರಗಿ ನಿಂತಿರುವ ೧೧೦೦ ಶಾಸನವು ದೇವರಿಗೆ, ಬ್ರಾಹ್ಮಣರಿಗೆ, ತಪೋಧನರಿಗೆ, ಉಪಾಧ್ಯಾಯರಿಗೆ, ಶಿಕ್ಷಣಾರ್ಥಿಗಳಿಗೆ ಹಾಗೂ ಅನಾಥರುಗಳಿಗೆಂದು ಭೂದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಬಾವಿ ಬಸವಣ್ಣ ದೇವರ ಗುಡಿಯ ಪೂರ್ವ ಕಂಬದ ಮೇಲಿರುವ ೧೧೦೭ರ ಶಾಸನವು ಸತ್ಯ ಪ್ರಚಾರ ಭಟ್ಟಾರಕ ದೇವರು ಸ್ವಯಂಭು ಸೋಮೇಶ್ವರ ದೇವರ ನಂದಾದೀಪಕ್ಕೆಂದು ಅರವತ್ತು ವೃತ್ತಿಯ ಆರುವಣವನ್ನು ದತ್ತಿ ಬಿಟ್ಟ ವಿಷಯವನ್ನು ತಿಳಿಸಿದರೆ, ಅಲ್ಲೇ ಇರುವ ೧೧೦೮ರ ಇನ್ನೊಂದು ಶಾಸನ ಅದೇ ದೇವರ್ಗೆ ಮುದ್ದರಸರನು ಸುಂಕ ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ಬಾವಿ ಬಸವಣ್ಣ ದೇವಾಲಯದ ದಕ್ಷಿಣ ಕಂಬದ ಮೇಲಿರುವ ೧೧೨೫ರ ಶಾಸನವು ಸೋಮೇಶ್ವರ ದೇವರಿಗೆ ಹಾಗೂ ನಾಗದೇವರ ನಂದಾದೀಪಕ್ಕೆಂದು ದಾನ ಬಿಟ್ಟ ವಿಷಯವನ್ನು ದಾಖಲಿಸಿದರೆ ಅಲ್ಲಿಯ ೧೧೪೯ರ ಇನ್ನೊಂದು ಶಾಸನವು ಸೋಮೇಶ್ವರ ದೇವರ ಅಂಗಭೋಗಕ್ಕೆಂದು ಏಹೂರ ಠಾಣೆಯ ಹೆರ್ಜುಂಕದಲ್ಲಿ ಐದು ಗದ್ಯಾಣಗಳನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಸಂಗಮೇಶ್ವರ ದೇವಾಲಯದ ನವರಂಗದ ಬಲಭಾಗದ ಕಂಬದ ಮೇಲಿರುವ ೧೧೭೯ರ ಶಾಸನವು ಏವೂರ ಮಹಾಪ್ರಭು ತ್ರಿಪುರಾಂತಕ ದೇವರಸರು ಎಳಮೇಲ ಸಿಂಹಪರ್ಷೆಯ

ಜ್ಞಾನರಾಸಿ ಪಂಡಿತರ ಕೈಯಲ್ಲಿ ಸೋಮೇಶ್ವರ ದೇವರಿಗೆಂದು ಹತ್ತು ಮತ್ತರು ಭೂಮಿಯನ್ನು ಹಾಗೂ ಅಣ್ಣಮಗೆರೆಯ ನೀರುಕೊಳವನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಅಲ್ಲೇ ಇರುವ ಮತ್ತೊಂದು ಶಾಸನ ದೇವರ ಧ್ವಜಾರೋಹಣ ಹಾಗೂ ತೀರ್ಥದ ಉದ್ಯಾಪನದಂದು ಒಡ್ಡರ ಕೋಟಬೋವಂಗೆ ಆರು ಮತ್ತರು ಭೂಮಿಯನ್ನು ಹಾಗೂ ಒಂದು ನಿವೇಶನವನ್ನು ದಾನ ಬಿಟ್ಟ ವಿಷಯವನ್ನೂ ತಿಳಿಸುತ್ತದೆ. ಇದರಿಂದ ಗುಡಿಯ ಮುಂದಿರುವ ಕೋಟಿ ಶಿವತೀರ್ಥದ ನಿರ್ಮಾಣಕ್ಕಾಗಿ ದುಡಿದವರಲ್ಲಿ ಈತನೇ ಅಗ್ರಗಣ್ಯನಾಗಿದ್ದನೆಂದು ಭಾವಿಸಬಹುದಾಗಿದೆ. ಇಲ್ಲಿಯ ಮತ್ತೊಂದು ಶಾಸನ ಸ್ವಯಂಭು ದೇವರ ಕೆರೆಯ ಬಗ್ಗೆ ಉಲ್ಲೇಖಿಸುತ್ತದೆ. ಈವರೆಗೆ ಚರ್ಚಿಸಿರುವ ಎಲ್ಲಾ ೧೧ ಶಾಸನಗಳು ಸ್ವಯಂಭು ಸೋಮೇಶ್ವರ ದೇವಾಲಯಕ್ಕೆ ಸಂಬಂಧಿಸಿದ್ದು ಇದರಿಂದ ಅದು ಹಿಂದೆ ಹೊಂದಿದ್ದ ಮಹತ್ವ ಗೊತ್ತಾಗುತ್ತದೆ. ಏವೂರಿನ ಪಶ್ಚಿಮದಲ್ಲಿರುವ ಮಸೀದಿ ಕಟ್ಟೆಯಲ್ಲಿರುವ ೧೧೦೧ ಶಾಸನ ಬೇರೆ ಬೇರೆ ಊರುಗಳ ಸೆಟ್ಟಿಯರು ಮಹಾನಾಡಾಗಿ ನೆರೆದು ಗವರೇಶ್ವರ ದೇವರ್ಗೆ ಬಿಟ್ಟ ಸುಂಕಗಳನ್ನು ದಾಖಲಿಸಿದರೆ, ಅಲ್ಲೇ ಸಮೀಪದಲ್ಲಿರುವ ೧೧೧೦ರ ಮತ್ತೊಂದು ಶಾಸನವು ಏವೂರಿನ ಕಮ್ಮಟೇಶ್ವರ ದೇವರ್ಗೆ ಬಡಗಿ, ಕಮ್ಮಾರ, ಅಕ್ಕಸಾಲೆ, ಕಲ್ಕುಟಿಗ ಗೊತ್ತಳಿ ಹಾಗೂ ಕಂಚುಗಾರ ಗೊತ್ತಳಿಗಳೂ ಸೇರಿದಂತೆ ೧೨೦ ಕೊತ್ತಳಿಗಳು ಒಕ್ಕಲ ಅಡ್ಡವನ್ನು ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ಶರಣಪ್ಪ ಟಣಕೇದಾರರ ಮನೆ ಬಳಿಯಿರುವ ೧೧೦೫ರ ಶಾಸನವು ಸತ್ಯ ಪ್ರಚಾರ ಭಟ್ಟಾರಕರು ಕೇಶವ ದೇವರಿಗೆಂದು ೩೫ ಗೇಣ ದಾನ ವಿನೋದನ ಗಳೆಯಲ್ಲಿ ೧೨ ಮತ್ತರು ಹೊಲ, ಒಂದು ಮತ್ತರು ಗದ್ದೆ, ೪೫೦ ಕಮ್ಮ ತೋಟ, ಸತ್ರದ ಮನೆ, ಪೂಜಾರಿ ಮನೆ, ಗಾಣದ ಮನೆ ಹಾಗೂ ಒಂದು ಗಾಣವನ್ನು ದಾನ ಕೊಟ್ಟ ಸಂದರ್ಭದಲ್ಲಿ ಎಲೆ-ಅಡಿಕೆ ವ್ಯಾಪಾರಿಗಳು ಮಾರಾಟ ಸುಂಕವನ್ನು ದಾನ ಬಿಟ್ಟ ವಿಷಯವನ್ನೂ ತಿಳಿಸುತ್ತದೆ. ಸೋಮೇಶ್ವರ ಗುಡಿಯ ಶಾಸನ ಮಂಟಪದ ಬಳಿ ಇರುವ ೧೧೯೧ರ ಮತ್ತೊಂದು ಶಾಸನವು ಬ್ರಹ್ಮಪ್ರಕಾಶ ಭಟ್ಟಾರಕರು ಸ್ವಯಂಭು ಸೋಮೇಶ್ವರ ದೇವಾಲಯದ ಉತ್ತರಕ್ಕೆ ಇದ್ದ ಚಟ್ಟೇಶ್ವರ ದೇವರ್ಗೆ ಹಾಗೂ ಅಲ್ಲಿಯ ವಿದ್ಯಾರ್ಥಿಗಳಿಗೆಂದು ಭೂಮಿಯನ್ನು ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ಬಾವಿ ಬಸವಣ್ಣನ ಗುಡಿಯ ಪೂರ್ವದ ಕಂಬ ಮೇಲಿರುವ ೧೧೭೪ರ ಶಾಸನವು ಏವೂರ ಮಹಾಪ್ರಭು ತ್ರಿಪುರಾಂತಕ ದೇವರಸರ ಮಗ ತಳವಾರ ಚಂಡೆಯನಾಯಕನ ವಿನಂತಿಯಂತೆ ಮಲ್ಲಿಕಾರ್ಜುನ ದೇವರ ಪೂಜಾವಿಧಿಗೆಂದು ತತ್ಪುರುಷದೇವರ ಆಚಾರ್ಯರ ಕೈಯಲ್ಲಿ ಕೊಟ್ಟ ಹೊಲ ಹಾಗೂ ತೋಟಗಳ ಬಗ್ಗೆ ಹೇಳುತ್ತ ಸಾಂದರ್ಭಿಕವಾಗಿ ಗವರೇಶ್ವರ ದೇವರನ್ನೂ ಉಲ್ಲೇಖಿಸುತ್ತದೆ. ಊರ ಹೊಲಗಳಲ್ಲಿರುವ ಶಾಸನಗಳಿಂದ ಸ್ವಯಂಭು ದೇವರು, ಮಮ್ಮೇಶ್ವರ, ಶಾಂತಿನಾಥ ಬಸದಿ ಹಾಗೂ ಚಟ್ಟೇಶ್ವರ ದೇವರುಗಳಿಗೆ ಸೇರಿದ ದಾನ ಭೂಮಿಗಳು ಇವಾಗಿದ್ದವೆಂಬ ಅಂಶ ಗೊತ್ತಾಗುತ್ತಿದ್ದು, ಜೊತೆಗೆ ಏವೂರಿನಲ್ಲಿರುವ ಜೈನ ಬಸದಿಯನ್ನು ನಾಗವರ್ಮ ಸೆಟ್ಟಿಯು ಶಾಂತಿನಾಥ ತೀರ್ಥಂಕರನಿಗಾಗಿ ನಿರ್ಮಿಸಿದ್ದೆಂಬ ಅಂಶವೂ ಗೊತ್ತಾಗುತ್ತದೆ.

ಏವೂರಿನ ಉತ್ತರಕ್ಕಿರುವ ಸೋಮೇಶ್ವರ-ಸಂಗಮೇಶ್ವರ ದೇವಾಲಯ ಸಂಕೀರ್ಣವೇ ಪ್ರವಾಸಿಗರ ಕೇಂದ್ರಬಿಂದು ವಾಗಿದ್ದು, ಇಲ್ಲಿ ಒಂದೇ ಸ್ಥಳದಲ್ಲಿ ಸೋಮೇಶ್ವರ, ಸಂಗಮೇಶ್ವರ, ಬಾವಿ ಬಸವಣ್ಣ ಹಾಗೂ ಮಠಗಳಿದ್ದು ಇವುಗಳ ಪೂರ್ವಕ್ಕೆ ವಿಶಾಲವಾದ ತೀರ್ಥವಿದೆ. ಇವುಗಳಲ್ಲಿ ಪೂರ್ವಾಭಿಮುಖವಾಗಿರುವ ಸೋಮೇಶ್ವರ ದೇವಾಲಯವೇ ೧೦೭೭ರ ಶಾಸನವೂ ಸೇರಿದಂತೆ ಸುಮಾರು ೧೧ ಶಾಸನಗಳಲ್ಲಿ ಉಕ್ತವಾಗಿರುವ ಸ್ವಯಂಭು ಸೋಮೇಶ್ವರ ದೇವಾಲಯವಾಗಿದ್ದು, ಇದರ ಮುಂದೆ ಸ್ವಲ್ಪ ಬಲಕ್ಕೆ ಇರುವ ತೀರ್ಥವೇ ಶಾಸನೋಕ್ತ ಕೋಟಿ ಶಿವತೀರ್ಥವಾಗಿದ್ದು, ಈ ಗುಡಿಯ ಬಲಭಾಗಕ್ಕಿರುವ ಉಗ್ರಾಣ ಕೊಠಡಿಯೇ ಶಾಸನೋಕ್ತ ಮಠವಾಗಿದ್ದು, ಇದನ್ನು ೧೦೭೭ರಲ್ಲಿ ರವಿದೇವ ಚಮೂಪನ ಆದೇಶದಂತೆ ಆತನ ಹೆಗಡೆ ಏವೂರಿನ ನಾಗವರ್ಮನು ನಿರ್ಮಿಸಿದ್ದು, ಇದಕ್ಕೆ ಹಲವಾರು ದಾನಗಳನ್ನು ಬಿಟ್ಟ ಅಂಶವನ್ನು ಈಗಾಗಲೇ ನೋಡಿದ್ದೇವೆ. ಮೂಲತಃ ಏಕಕೂಟವಾಗಿದ್ದು, ಕ್ರಮೇಣ ದ್ವಿಕೂಟ, ತ್ರಿಕೂಟವಾಗಿ ವಿಸ್ತಾರಗೊಂಡಿರುವ ಈ ಗುಡಿಯು ಬಹುಕೋನಾಕಾರದ ತಳವಿನ್ಯಾಸದಿಂದ ಕೂಡಿದ್ದು ವಿಶಾಲವಾದ ಗರ್ಭಗೃಹ, ತೆರೆದ ಅಂತರಾಳ, ರಂಗಮಂಟಪ ಹಾಗೂ ಅರ್ಧಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಸ್ವಯಂಭು ಲಿಂಗವಿದ್ದು, ಇದರ ದ್ವಾರಬಂಧವು ಪಂಚಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿಯಿದೆ. ರಂಗಮಂಟಪದ ಚರಕಿ ಯಂತ್ರ ನಿರ್ಮಿತ ಕಂಬಗಳು ವೈವಿಧ್ಯಮಯವಾಗಿದ್ದು, ಆಕರ್ಷಕ ಚಿಕಣಿ ಕೆತ್ತನೆಗಳಿಂದ ಕೂಡಿವೆ. ತೆರೆದ ರಂಗಮಂಟಪದಂಚಿನುದ್ದಕ್ಕೂ ಕಕ್ಷಾಸನವಿದೆ. ರಂಗಮಂಟಪದ ನಡುವಣ ಛತ್ತು ಆಳವಾಗಿದ್ದು ನಾಲ್ಕು ದಳದ ಕಮಲವನ್ನು ಹೊಂದಿದ್ದು, ಅದ್ಭುತವಾಗಿದೆ. ರಂಗಮಂಟಪವು ನಡುವೆ ಚಪ್ಪಟೆಯಾಗಿದ್ದು

ಇಳಿಜಾರಾದ ಅಂಚನ್ನು ಹೊಂದಿದೆ. ರಂಗಮಂಟಪದ ದಕ್ಷಿಣ ದ್ವಾರದ ಇಕ್ಕೆಲಗಳಲ್ಲಿ ಸುಂದರವಾದ ಸಿಂಹಗಳನ್ನು ಕೆತ್ತಲಾಗಿದ್ದು ಆನೆಯ ಕೈಪಿಡಿಯುಳ್ಳ ಸೋಪಾನಗಳಿವೆ. ಹಿಂದೆ ಈ ಗುಡಿಯ ತೆರೆದ ರಂಗಮಂಟಪವನ್ನು ಪ್ರವೇಶಿಸಲು ಮೂರು ದಿಕ್ಕಿನಿಂದಲೂ ಪ್ರವೇಶವಿದ್ದು ನಂತರದಲ್ಲಿ ಪಶ್ಚಿಮದ ಪ್ರವೇಶವನ್ನು ವಿಸ್ತರಿಸಿ, ಮುಚ್ಚಿ, ಸೂರ್ಯನ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದರೆಂದು ತೋರುತ್ತದೆ. ಆದರಿಂದು ಅಲ್ಲಿ ಸೂರ್ಯಪೀಠವಿದ್ದು, ಅದರಲ್ಲಿ ಲಿಂಗವಿದ್ದು, ಮುಂದೆ ಬಸವಣ್ಣನ ಮೂರ್ತಿ ಇದೆ. ಇದು ನಂದಿ ಮಂಪಟವಾಗಿರಲಿಕ್ಕೂ ಸಾಕು. ರಂಗಮಂಟಪದ ಎಡಭಾಗಕ್ಕೆ ಸೇರಿದಂತೆ ನಂತರದಲ್ಲಿ ನಿರ್ಮಿಸಿರುವ ಇಂದಿನ ಸಂಗಮೇಶ್ವರ ಗುಡಿಯೇ ೧೧೯೯ರ ಶಾಸನೋಕ್ತ ಚಟ್ಟೇಶ್ವರ ದೇವಾಲಯವಾಗಿದ್ದು, ವಿಶಾಲವಾದ ಗರ್ಭಗೃಹ ಹಾಗೂ ತೆರೆದ ಅಂತರಾಳಗಳನ್ನು ಹೊಂದಿದ್ದು, ಸೇರ್ಪಡೆಯನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಈ ಗುಡಿಯು ದಕ್ಷಿಣಾಭಿಮುಖವಾಗಿದ್ದು, ಇದರ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ದ್ವಾರಬಂಧವು ಪಂಚ ಶಾಖೆಗಳಿಂದ ಅಲಂಕಾರಗೊಂಡಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಇದೆ. ಈ ಗುಡಿಯು ಎಳಮೇಲ ಸಿಂಹಪರ್ಷೆಗೆ ಸೇರಿದ ಆಚಾರ್ಯರ ಅಂಕಿತದಲ್ಲಿದ್ದ ಅಂಶ ಶಾಸನಗಳಿಂದ ವೇದ್ಯವಾಗುತ್ತದೆ. ಈ ದೇವಾಲಯದ ಛಾವಣಿಯು ಚಪ್ಪಟೆಯಾಗಿದ್ದು, ಗರ್ಭಗೃಹವು ಸೋಪಾನ ಮಾದರಿಯ ಶಿಖರವನ್ನು ಹೊಂದಿದೆ. ಈ ದೇವಾಲಯದ ಹೊರ ಭಿತ್ತಿಯು ನಿರಾಡಂಬರವಾಗಿದ್ದು ಕಕ್ಷಾಸನದ ಹಿಂಬದಿಯನ್ನು ಸುಂದರವಾದ ಕಿರು ಉಬ್ಬುಕೆತ್ತನೆಗಳಿಂದ, ವಿಸ್ಮಯವನ್ನುಂಟು ಮಾಡುವ ಮಿಥುನ ಶಿಲ್ಪಗಳಿಂದ ಅಲಂಕರಿಸಲಾಗಿದ್ದು, ರಂಗಮಂಟಪದ ಅಧಿಷ್ಠಾನ ಭಾಗದಲ್ಲಿ ಹಂಸಬಳ್ಳಿ, ಆನೆಗಳ ಸಾಲು, ನಡುವೆ ಕಮಲವನ್ನುಳ್ಳ ವಜ್ರಾಕಾರದ ವೃತ್ತಾಕಾರದ, ನಕ್ಷತ್ರಾಕಾರದ ಹಾಗೂ ಚೌಕಾಕಾರದ ವಿನ್ಯಾಸಗಳಿಂದ ಅಲಂಕರಿಸಲಾಗಿದೆ.

ಸ್ವಯಂಭು ಸೋಮೇಶ್ವರ ಗುಡಿಯ ಬಲಭಾಗದಲ್ಲಿ ಉತ್ತರಾಭಿಮುಖವಾಗಿರುವ ಉಗ್ರಾಣದ ಕೊಠಡಿ ಎಂದು ಕರೆಯಲ್ಪಡುವ ರಚನೆಯು ಆಯಾತಕಾರದಲ್ಲಿದ್ದು ಮೂರು ಭಾಗಗಳಾಗಿ ವಿಂಗಡಿಸಲ್ಪಟ್ಟಿದ್ದು, ಮುಂದೆ ತೆರೆದ ಮಂಟಪವಿದೆ. ಇದರ ದ್ವಾರಬಂಧಗಳು ಪಂಚಶಾಖಾ ಹಾಗೂ ತ್ರಿಶಾಖಾಲಂಕೃತವಾಗಿದ್ದು, ಗಜಲಕ್ಷ್ಮಿ ಇದೆ. ಈ ಕಟ್ಟಡವು ಸ್ವಯಂಭು ಸೋಮೇಶ್ವರ ದೇವಾಲಯಕ್ಕೆ ಸೇರಿದ್ದ ಶಾಸನೋಕ್ತ ಮಠವಾಗಿದ್ದು ಹಿಂದೆ ಇಲ್ಲಿ ಶಿಕ್ಷಣ ನೀಡಲಾಗುತ್ತಿದ್ದು ಇದನ್ನಿಂದು ಕಲ್ಯಾಣ ಮಂಟಪದಂತೆ ಬಳಸಿಕೊಳ್ಳಲಾಗುತ್ತಿದೆ. ಸ್ವಯಂಭು ಸೋಮೇಶ್ವರ ದೇವಾಲಯದ (೧೦೭೭) ನಿರ್ಮಾಣ ಸಂದರ್ಭದಲ್ಲೇ ನಿರ್ಮಾಣಗೊಂಡಿರುವ ಕೋಟಿ ಶಿವತೀರ್ಥವು ಚೌಕಾಕಾರದಲ್ಲಿದ್ದು ಏಳು ಹಂತಗಳನ್ನು ಹೊಂದಿದ್ದು ನಾಲ್ಕು ದಿಕ್ಕಿನಿಂದಲೂ ತೀರ್ಥಕ್ಕೆ ಪ್ರವೇಶವಿದ್ದು, ತೀರ್ಥದಂಚಿನುದ್ದಕ್ಕೂ ಕಕ್ಷಾಸನವಿದೆ. ಕಕ್ಷಾಸನದ ಹಿಮ್ಮುಖದಲ್ಲಿ ವಿವಿಧ ಭಂಗಿಯಲ್ಲಿ ರಾಸಲೀಲೆಯಲ್ಲಿ ನಿರತರಾಗಿರುವ ಜೋಡಿಗಳ ಮಿಥುನ ಶಿಲ್ಪಗಳು ವಿಕ್ಷಕರಲ್ಲಿ ವಿಸ್ಮಯವನ್ನುಂಟು ಮಾಡುತ್ತವೆ. ಮೇಲಾಗಿ ಇವುಗಳೊಂದಿಗೆ ರಾಮಾಯಣ ಹಾಗೂ ಮಹಾಭಾರತದ ಕಥನಗಳನ್ನೂ ಇಲ್ಲಿ ಕೆತ್ತಲಾಗಿದೆ. ಇವುಗಳ ನಡುವೆ ಪಂಚತಂತ್ರದ ಮಂಗ-ಬೆಣೆ ಕಥೆಯನ್ನು ನೆನಪಿಸುವ ಕೆತ್ತನೆಯೂ ಇದೆ.

ಈ ತೀರ್ಥದ ಪಶ್ಚಿಮದಂಚಿನಲ್ಲಿ ಪೂರ್ವಾಭಿಮುಖವಾಗಿ ನಿಂತಿರುವ ಬಾವಿ ಬಸವಣ್ಣನ ಗುಡಿ ಗಾತ್ರದಲ್ಲಿ ಕಿರಿದಾದರೂ ಕಲಾತ್ಮಕತೆಯ ದೃಷ್ಟಿಯಿಂದ ಭವ್ಯತೆಯ ಪ್ರತೀಕವೆಂದರೆ ಉತ್ಪ್ರೇಕ್ಷೆಯಾಗಲಾರದು. ಬಹುಕೋನಾಕಾರದ ತಳ ವಿನ್ಯಾಸವನ್ನು ಹೊಂದಿರುವ ಈ ಗುಡಿ ಗರ್ಭಗೃಹ, ಅಂತರಾಳ ಹಾಗೂ ಅರ್ಧಮಂಟಪಗಳನ್ನು ಹೊಂದಿದ್ದು, ೧೧೦೧ರ ಶಾಸನದಲ್ಲಿ ಉಕ್ತವಾಗಿರುವ ಗವರೇಶ್ವರ ದೇವಾಲಯವಿದೆಂದೇ ತೋರುತ್ತದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಇದರ ದ್ವಾರಬಂಧವು ಚಿತ್ತಾಕರ್ಷಕವಾದ ಸೂಕ್ಷ್ಮ ಕೆತ್ತನೆಗಳಿಂದ ಕೂಡಿದ ಪಂಚಶಾಖೆಗಳಿಂದ ಕಂಗೊಳಿಸುತ್ತಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಇದ್ದು, ಉತ್ತರಾಂಗದಲ್ಲಿ ವೈವಿಧ್ಯಮಯವಾದ ಕಿರುಶಿಖರಗಳನ್ನುಳ್ಳ, ನಾಲ್ಕು ಕಿರುಮಂಟಪಗಳಿದ್ದು, ಅವುಗಳಲ್ಲಿ ಸೂರ್ಯ, ನಟರಾಜ ಮುಂತಾದ ದೇವರುಗಳನ್ನು ಕೆತ್ತಲಾಗಿದೆ. ಅಂತರಾಳದ ಇಕ್ಕೆಲದಲ್ಲಿ ಎರಡು ದೇವಕೋಷ್ಠಗಳಿದ್ದು, ಅವೂ ಕೂಡ ಸುಂದರವಾದ ಬಾಗಿಲವಾಡಗಳನ್ನು ಹೊಂದಿದ್ದು ಒಂದರಲ್ಲಿ ಸೂರ್ಯನ ಶಿಲ್ಪವಿದೆ. ಈ ದೇವಾಲಯದ ಭಿತ್ತಿಯ ಮೇಲ್ಭಾಗವು ವಜ್ರಪಟ್ಟಿಕೆ, ಬಳ್ಳಿ ವಿನ್ಯಾಸ, ಕಿರು ಸ್ತಂಭಶಿಖರಗಳಿಂದ ಅಲಂಕೃತವಾಗಿದ್ದು ಗರ್ಭಗೃಹದ ಹೊರಭಾಗದ ಉತ್ತರ-ದಕ್ಷಿಣ ದಿಕ್ಕುಗಳಲ್ಲಿರುವ ಸುಮಾರು ನಾಲ್ಕೂವರೆ ಅಡಿ ಎತ್ತರದ ವಿಷ್ಣು ಹಾಗೂ ಬ್ರಹ್ಮನ ಸುಂದರ ಉಬ್ಬು ಶಿಲ್ಪಗಳು ಗಮನಾರ್ಹವಾಗಿವೆ. ಈ ದೇವಾಲಯದ ಕಂಬಗಳ ಮೇಲಿರುವ ನಾಲ್ಕು ಶಾಸನಗಳಲ್ಲಿ ಎರಡು ಸ್ವಯಂಭು ಸೋಮೇಶ್ವರ ದೇವರ್ಗೆ, ಒಂದು ಸ್ವಯಂಭು ಸೋಮೇಶ್ವರ ಹಾಗೂ ನಾಗದೇವರಿಗೆ ಸಂಯುಕ್ತವಾಗಿ, ಉಳಿದೊಂದು ಮಲ್ಲಿಕಾರ್ಜುನ ದೇವರಿಗೆ ದಾನ ಬಿಟ್ಟ ವಿಷಯವನ್ನು ಹೊಂದಿರುವುದರಿಂದ ಇದು ಯಾವ ದೇಗುಲವೆಂಬ ಅನುಮಾನ

ಮೂಡುತ್ತದೆ. ಆದರೂ ಸಾಂದರ್ಭಿಕ ಆಧಾರಗಳಿಂದ ಇದನ್ನು ಗವರೇಶ್ವರವೆಂದು ಭಾವಿಸಬಹುದಾದರೂ ನಾಗದೇವ ದೇವಾಲಯವಾಗಿದ್ದಿರಬಹುದೇ ಎಂದೂ ಶಂಕಿಸಲು ಸಾಧ್ಯವಿದೆ. ಈ ದೇವಾಲಯದ ಗರ್ಭಗೃಹದ ಶಿಖರವು ಸೋಪಾನ ಮಾದರಿಯಲ್ಲಿದ್ದು, ಸುಕನಾಸಿಯೂ ಇದ್ದು, ಜೀರ್ಣೋದ್ಧಾರಗೊಂಡಿರುವಂತೆ ತೋರುತ್ತದೆ. ಸೋಮೇಶ್ವರ ದೇವಾಲಯದ ಆವರಣದಲ್ಲಿ ತೀರ್ಥದ ಎಡಭಾಗದಲ್ಲಿ ಗರ್ಭಗೃಹವಷ್ಟೆ ಉಳಿದಿರುವ ದೇವಾಲಯವಿದ್ದು ಅದರಲ್ಲಿ ಶಿವಲಿಂಗವಿದ್ದು, ಸ್ಥಳೀಕರು ಇದನ್ನು ಮಲ್ಲಿಕಾರ್ಜುನ ಗುಡಿ ಎಂದು ಕರೆಯುತ್ತಾರೆ. ಇದೇ ಶಾಸನೋಕ್ತ ಮಲ್ಲಿಕಾರ್ಜುನ ದೇವಾಲಯವಿರಬಹುದೆನಿಸುತ್ತದೆ. ತೀರ್ಥದಿಂದ ಪೂರ್ವಕ್ಕಿರುವ ದ್ವಾರ ಮಂಟಪವು ಬಾವಿ ಬಸವಣ್ಣ (ಗವರೇಶ್ವರ) ದೇವಾಲಯಕ್ಕೆ ಸಂಬಂಧಿಸಿದಂತೆ ನಿರ್ಮಾಣಗೊಂಡಿದ್ದಂತೆ ತೋರುತ್ತದೆ. ಇದೂ ಸಹ ಸುಂದರ ರಚನೆಯಾಗಿದ್ದು ಸೋಮೇಶ್ವರ ದೇವಾಲಯ ಸಂಕೀರ್ಣಕ್ಕೆ ನಿರ್ಮಿಸಿದ ದ್ವಾರಮಂಟಪದಂತೆ ಭಾಸವಾಗುತ್ತದೆ. ದ್ವಾದಶಕೋನಗಳನ್ನುಳ್ಳ ಈ ದ್ವಾರಮಂಟಪವನ್ನು ದಕ್ಷಿಣೋತ್ತರವಾಗಿ ಸಮನಾಗಿ ವಿಭಜಿಸಿದ್ದು, ದಕ್ಷಿಣದಲ್ಲಿ ಭೈರವನ ಶಿಲ್ಪವನ್ನು, ಉತ್ತರದಲ್ಲಿ ಸೂರ್ಯನ ಶಿಲ್ಪವನ್ನು ನೋಡಬಹುದಾಗಿದೆ. ಇಲ್ಲಿರುವ ದ್ವಾರಬಂಧವು ಪಂಚಶಾಖೆಗಳಿಂದ ಅಲಂಕೃತಗೊಂಡಿದ್ದು, ಗಜಲಕ್ಷ್ಮಿ ಇದೆ. ಈ ಮಂಟಪದ ಪೂರ್ವ ಭಾಗದಲ್ಲಿ ಕಕ್ಷಾಸನದ ಹಿಮ್ಮುಖವು ಆನೆ, ಕುದುರೆ, ಹಂಸ, ಗಣಪ,ಮುಂತಾದ ಉಬ್ಬು ಶಿಲ್ಪ ಕೆತ್ತನೆಗಳಿಂದ ಅಲಂಕೃತಗೊಂಡಿದ್ದು, ಮಿಥುನ ಶಿಲ್ಪಗಳೂ ಇದ್ದು, ನಡುವೆ ಪಂಚತಂತ್ರದ ಮಂಗ-ಬೆಕ್ಕಿ ಕೆತ್ತನೆಯೂ ಇರುವುದು ಗಮನಾರ್ಹವಾಗಿದೆ. ಈ ದೇವಾಲಯ ಸಂಕೀರ್ಣದ ಹೊರಗೋಡೆಗೆ ಸಮುದ್ರ ಮಂಥನದ ಸುಂದರ ಶಿಲಾಪಟ್ಟಿಕೆಯನ್ನು ಇತ್ತೀಚೆಗೆ ಅಳವಡಿಸಲಾಗಿದೆ.

ಈ ಸಂಕೀರ್ಣಕ್ಕೆ ಹೊಂದಿಕೊಂಡಂತೆ ಇರುವ ಹನಮಂತನ ಗುಡಿಯನ್ನು ಪದ್ಮಾಸೀನ ಬುದ್ಧ(?), ಆನೆ, ಕುದುರೆ, ಭೈರವ, ಯತಿ, ಮುಂತಾದ ಉಬ್ಬು ಶಿಲ್ಪಗಳಿದ್ದ ಕಲ್ಲುಚಪ್ಪಡಿಗಳಿಂದ ನಿರ್ಮಿಸಲಾಗಿದೆ. ಇದರ ಅರ್ಧಮಂಟಪದ ಮರದ ಛಾವಣಿಯು ಉತ್ಕೃಷ್ಟವಾದ ಕಲಾ ಕೆತ್ತನೆಯಿಂದಾಗಿ ಗಮನಾರ್ಹವಾಗಿದೆ. ಇಲ್ಲಿರುವ ಬೌದ್ಧ ಶಿಲ್ಪದಿಂದಾಗಿ ಹಿಂದೆ ಇದೊಂದು ಬೌದ್ಧ ಕೇಂದ್ರವೂ ಆಗಿದ್ದಿರಬೇಕೆಂದು ಭಾವಿಸಬಹುದಾಗಿದೆ.

ಗುತ್ತೆದಾರ ಓಣಿಯಲ್ಲಿರುವ ಜೈನ ಬಸದಿಯು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಎತ್ತರವಾದ ವೇದಿಕೆಯ ಮೇಲಿದೆ. ಪೂರ್ಣ ಶಿಥಿಲಾವಸ್ಥೆಯಲ್ಲಿರುವ ಈ ಜೈನ ಬಸದಿಯು ಸುಮಾರು ೧೨ನೇ ಶತಮಾನದ ರಚನೆಯಾಗಿದ್ದು ಇದನ್ನು ನಾಗವರ್ಮಸೆಟ್ಟಿಯು ನಿರ್ಮಿಸಿ, ಶಾಂತಿನಾಥ ತೀರ್ಥಂಕರನನ್ನು ಪ್ರತಿಷ್ಠಾಪಿಸಿ,೫೪ ಮತ್ತರು ಭೂಮಿಯನ್ನು ದಾನಬಿಟ್ಟ ಅಂಶ ಊರ ವಾಯವ್ಯದ ಹೊಲಗಳಲ್ಲಿರುವ ಎರಡು ಶಾಸನಗಳಿಂದ ಗೊತ್ತಾಗುತ್ತದೆ. ಇದರ ಗರ್ಭಗೃಹದ ಬಾಗಿಲವಾಡವು ಪಂಚಶಾಖೆಗಳಿಂದ ಆಲಂಕೃತಗೊಂಡಿದ್ದು, ಲಲಾಟದಲ್ಲಿ ಪದ್ಮಾಸೀನ ಜಿನಬಿಂಬವಿದೆ. ನವರಂಗದ ಕಂಬಗಳು ಸುಂದರವಾಗಿದ್ದು ಛತ್ತಲ್ಲಿ ಆಕರ್ಷಕವಾದ ಕಮಲವಿದೆ. ನವರಂಗದ ಬಲಭಾಗದ ಕಂಬದ ಮೇಲೆ ಶಾಸನವಿದ್ದ ಕುರುಹು ಸಿಗುತ್ತದೆ. ಈ ಬಸದಿಯ ಭಿತ್ತಿಯು ನಿರಾಡಂಬರವಾಗಿದ್ದು, ಶಿಖರ ನಶಿಸಿಹೋಗಿದೆ. ಸೋಮೇಶ್ವರ ಗುಡಿ ಪರಿಸರದಲ್ಲಿ ಯಕ್ಷ, ಪದ್ಮಾವತಿ, ಅಂಬಿಕಾ ಅಥವಾ ಕೂಷ್ಮಾಂಡಿನಿ ಯಕ್ಷಿಯರ ಮುಕ್ಕಾದ ಶಿಲ್ಪಗಳು ಚದುರಿ ಬಿದ್ದಿವೆ. ಉಳಿದಂತೆ ಊರಲ್ಲಿ ಜಟ್ಟಪ್ಪ, ದೇವಿ,ಬೀರಯ್ಯ, ಹನುಮಂತ, ಕೆಂಚಮ್ಮ ಹಾಗೂ ಮರಗಮ್ಮನ ನವೀನ ದೇವಸ್ಥಾನಗಳಿದ್ದು, ಮಸೀದಿ ಕೂಡ ಇದೆ.

**ಐನೋಲಿ** (೪೨೦೪)ಯು ತಾಲೂಕು ಕೇಂದ್ರವಾದ ಚಿಂಚೋಳಿಯಿಂದ ಉತ್ತರಕ್ಕೆ ಐದು ಕಿ. ಮೀ. ದೂರದಲ್ಲಿ ಚಂದ್ರಂಪಳ್ಳಿ ರಸ್ತೆಯಲ್ಲಿದೆ. ಶ್ರೇಷ್ಠ ವಿದ್ವಾಂಸರಾಗಿದ್ದ ಕರಿಬಸವಶಾಸ್ತ್ರಿಗಳ ಹುಟ್ಟೂರು ಇದಾಗಿದ್ದು ಇವರ ಸುಮಾರು ೨೬೦ ಸ್ವರ ವಚನಗಳು ಈವರೆಗೆ ದೊರೆತಿದ್ದು ಇವರ ಸಮಾಧಿ ಚಿಂಚೋಳಿಯಲ್ಲಿದೆ.

**ಕಕ್ಕೇರಿ** (೧೪೨೮೪)ಯು ತಾಲೂಕು ಕೇಂದ್ರವಾದ ಸುರಪುರದಿಂದ ನೈಋತ್ಯಕ್ಕೆ ೩೦ ಕಿ. ಮೀ., ತಿಂಥಿಣಿ ಸೇತುವೆಯಿಂದ ಪಶ್ಚಿಮಕ್ಕೆ ಎಂಟು ಕಿ. ಮೀ. ದೂರದಲ್ಲಿ ಕೃಷ್ಣಾ ನದಿಯ ಎಡ ದಂಡೆಯ ಮೇಲಿರುವ ದೊಡ್ಡ ಊರಾಗಿದ್ದು, ಶರಣ ಡೋಹರ ಕಕ್ಕಯ್ಯನ ಹೆಸರಿನೊಂದಿಗೆ ಸಮ್ಮಿಳಿತಗೊಂಡಿದೆ. ಕಲ್ಯಾಣದ ಚಾಳುಕ್ಯರ ಕಾಲದ ದೇವಾಲಯಗಳಿಂದಾಗಿ ಚಾರಿತ್ರಿಕ ಮಹತ್ವವನ್ನೂ ಪಡೆದಿರುವ ಈ ಊರಿನಿಂದ ನೂತನ ಶಿಲಾಯುಗ ಸಂಸ್ಕೃತಿಗೆ ಸೇರಿದ ಎರಡು ಬೂದಿ ದಿಬ್ಬಗಳೂ ವರದಿಯಾಗಿವೆ. ಇವುಗಳಲ್ಲಿ ಊರ ಬಳಿಯಿರುವ ದಿಬ್ಬವು ಪೂರ್ಣ ನಾಶಗೊಂಡಿದ್ದು,ಊರಿಂದ ಪೂರ್ವಕ್ಕೆ

ಸುಮಾರು ಮೂರು ಕಿ. ಮೀ. ದೂರದಲ್ಲಿರುವ ಬೂದಿಗುಂಡಿ ದಿಬ್ಬವು ರಾಜ್ಯದಲ್ಲಿ ಸುಸ್ಥಿತಿಯಲ್ಲಿರುವ ಕೆಲವೇ ಬೂದಿ ದಿಬ್ಬಗಳಲ್ಲಿ ಒಂದಾಗಿದ್ದು, ನೂತನ ಶಿಲಾಯುಗದ ಪ್ರಾಚ್ಯ ಅವಶೇಷಗಳು ವರದಿಯಾಗಿವೆ. ಪ್ರಾಚೀನ ಶಾಸನಗಳಲ್ಲಿ ಕಕ್ಕೇರ ಎಂದೇ ಉಲ್ಲೇಖಿತಗೊಂಡಿರುವ ಈ ಊರು ಹಿಂದೆ ಸಗರ-೫೦೦ಕ್ಕೆ ಸೇರಿದ್ದು, ಇಲ್ಲಿಂದ ಈವರೆಗೆ ವರದಿಯಾಗಿರುವ ಏಕೈಕ ಶಾಸನವು ಕಲ್ಯಾಣದ ಚಾಳುಕ್ಯರ ಕಾಲದ್ದಾಗಿದೆ. ಗ್ರಾಮದ ಕಕ್ಕಯ್ಯನ ಗುಡಿ ಕಂಬದ ಮೇಲಿರುವ ಈ ಶಾಸನವು ಕಲ್ಯಾಣದ ಚಾಳುಕ್ಯ ಅರಸ ಮೂರನೆಯ ಸೋಮೇಶ್ವರನ ಕಾಲದ್ದಾಗಿದ್ದು ೧೧೨೭ರಲ್ಲಿ ಮಹಾಮಂಡಳೇಶ್ವರ ಹೈಹಯ ಮಲ್ಲಿದೇವಸರಸ, ಕಕ್ಕೇರದ ಬಮ್ಮೆಯನಾಯಕ ಹಾಗೂ ಮಾದಯನಾಯಕರು ರೇವೇಶ್ವರ ದೇವರ ಅಂಗಭೋಗ, ಪೂಜೆ ಪುರಸ್ಕಾರಗಳಿಗೆಂದು ಅದರ ಸ್ಥಾನಾಚಾರ್ಯರಾದ ಬ್ರಹ್ಮರಾಶಿ ಪಂಡಿತರಿಗೆ ಸರ್ವಮಾನ್ಯವಾಗಿ ಮುಂಜನ ಕೋಲಲ್ಲಿ ೨೬ ಮತ್ತರು ಭೂಮಿಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಇದರ ಜೊತೆಗೆ ಕಕ್ಕೇರದ ರೇವೇಶ್ವರ ದೇವಾಲಯದ ಆಚಾರ್ಯರಾದ ಬ್ರಹ್ಮರಾಶಿಪಂಡಿತರು, ಹಗರಟಗಿಯ ಸ್ವಯಂಭು ಉಗ್ರಭೀಮೇಶ್ವರ, ಮುದಿನೀರ ಕುಮಾರೇಶ್ವರ ಹಾಗೂ ಕಕ್ಕೇರದ ಕಕ್ಕೇಶ್ವರ ದೇವರ ಮಹಾಸ್ಥಾನಗಳ ಆಚಾರ್ಯರಾದ ಸಿದ್ಧರೇವಣದೇವರ ಶಿಷ್ಯರೆಂಬ ಅಂಶವನ್ನೂ ಹೆಮ್ಮೆಯಿಂದ ದಾಖಲಿಸಿದೆ. ಇದೇ ಸಂದರ್ಭದಲ್ಲಿ ಅಲ್ಲಿಯ ವಿವಿಧ ವರ್ತಕ ವರ್ಗದವರು ಈ ರೇವೇಶ್ವರ ದೇವರ್ಗೆ ವಿವಿಧ ಮಾರಾಟ ಸುಂಕಗಳೊಂದಿಗೆ ಒಂದು ಮತ್ತರು ತೋಟವನ್ನೂ ದಾನ ಕೊಟ್ಟ ಅಂಶವನ್ನು ಅರುಹುತ್ತದೆ. ಈ ಶಾಸನಗಳಿಂದ ಹಿಂದೆ ಕಕ್ಕೇರದಲ್ಲಿ ರೇವೇಶ್ವರ, ಕಕ್ಕೇಶ್ವರ ಹಾಗೂ ಕಲಿದೇವರ ದೇವಾಲಯಗಳಿದ್ದ ಸಂಗತಿ ಗೊತ್ತಾಗುತ್ತದೆ. ಸುರಪುರದ ದೊರೆ ಚಿಕ್ಕ ಹನಮನಾಯಕನು ಇಲ್ಲಿ ಸೋಮನಾಥ ದೇವಾಲಯವನ್ನು ನಿರ್ಮಿಸಿದ್ದಾನೆ. ಇಲ್ಲಿ ನಡೆಯುವ ವಾರ್ಷಿಕ ಜಾತ್ರೆಯಲ್ಲಿ ದನಗಳ ವ್ಯಾಪಾರ ಬಿರುಸಿನಿಂದ ಜರುಗುತ್ತದೆ.

**ಕಚಕನೂರು** (೧೦೫೨) ತಾಲೂಕು ಕೇಂದ್ರವಾದ ಸುರಪುರದಿಂದ ಪಶ್ಚಿಮಕ್ಕೆ ೨೦ ಕಿ. ಮೀ. ದೂರದಲ್ಲಿದ್ದು, ಪ್ರಾಚೀನ ಶಾಸನಗಳಲ್ಲಿ ಕಚ್ಚಿಗನೂರು ಎಂದೇ ಉಲ್ಲೇಖಿತಗೊಂಡಿದೆ. ಹಿಂದೆ ಸಗರ-೩೦೦, (೫೦೦) ಕ್ಕೇ ಸೇರಿದ್ದ ಈ ಊರಿಂದ ಈವರೆಗೆ ಮೂರು ಶಾಸನಗಳು ವರದಿಯಾಗಿದ್ದು, ಇವುಗಳಲ್ಲಿ ಚಿಕ್ಕಮಠದವರ ಮನೆಯ ಗದ್ದಿಗೆ ಕಲ್ಲಿನ ಮೇಲಿನ ಶಾಸನವು ಚಾಳುಕ್ಯ ಅರಸ ಜಗದೇಕಮಲ್ಲನ ಕಾಲದ್ದಾಗಿದ್ದು, ಕಚ್ಚಿಗನೂರ ಊರೊಡೆಯ ಕೇತರಸನು ೪೧ ಗೇಣಿನ ಬಾರ್ಚಿವಿಡಿಯ ಗಳೆಯಲ್ಲಿ ಅಳೆದು ಕೊಟ್ಟ ೧೦೦ ಮತ್ತರು ಭೂಮಿಯ ಬಗ್ಗೆ ತಿಳಿಸುತ್ತಾದರೂ ಶಾಸನವು ತ್ರುಟಿತವಾಗಿರುವುದರಿಂದ ಯಾವ ದೇವರಿಗೆಂದು ತಿಳಿಯುವುದಿಲ್ಲ. ಗ್ರಾಮದ ಉಳಿದ ಎರಡೂ ಶಾಸನಗಳು ೧೨ನೇ ಶತಮಾನದ್ದಾಗಿದ್ದು ಮುದನೂರು ತೀರ್ಥದ ರಾಮೇಶ್ವರ ದೇವರಿಗೆ ಕ್ರಮವಾಗಿ ಚಂದಾಪುರ ಹಾಗೂ ಕಚ್ಚಿಗನೂರು ಗ್ರಾಮಗಳನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತವೆ. ನೆರೆಯ ಗ್ರಾಮವಾದ ಬೈಚಬಾಳದ ಪಡದಯ್ಯನವರ ಮನೆ ಮುಂದಿರುವ ೧೦೭೪ರ ಶಾಸನವು ಚಾಳುಕ್ಯ ಚಕ್ರವರ್ತಿ ಆರನೇಯ ವಿಕ್ರಮಾದಿತ್ಯನನ್ನು ಉಲ್ಲೇಖಿಸುತ್ತ, ದಂಡನಾಯಕ ಸಿಂಗರಸನು ತನ್ನ ತಂದೆ ರೆಬ್ಬಣ್ಣಯ್ಯನ ನೆನಪಲ್ಲಿ ಕಚ್ಚಿಗನೂರ ಬಸವಣಕೆರೆಯ ಬಳಿ ರೆಬ್ಬೇಶ್ವರ ದೇವರ ಗುಡಿಯನ್ನು ನಿರ್ಮಿಸಿ ಎಳಮೇಲ ಸಿಂಹಪರ್ಷೆ ಮಂಡಲಿಯ ತೇಜೋರಾಶಿಪಂಡಿತರ್ಗೆ, ಕೆಂಭಾವಿ-೧೨ರಲ್ಲಿದ್ದ ಬೈಸಂಬಾಳ ಗ್ರಾಮವನ್ನು ದತ್ತಿ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಜೊತೆಗೆ ಆ ಗುಡಿಯ ಕಲ್ಕುಟಿಗ ಮಾರೋಜನಿಗೆ ದೇವಾಲಯದ ಸುಶ್ರೂಷೆ ಮಾಡಿಕೊಂಡು ಇರಲೆಂದು ಒಂದು ಮತ್ತರು ಭೂಮಿ ಹಾಗೂ ನಿವೇಶನವೊಂದನ್ನು ದಾನ ನೀಡಿದ ಅಂಶವನ್ನೂ ದಾಖಲಿಸಿದೆ.

**ಕರ್ಜಗಿ** (೫೩೮೫)ಯು ತಾಲೂಕು ಕೇಂದ್ರವಾದ ಅಫಜಲಪುರದಿಂದ ವಾಯವ್ಯಕ್ಕೆ ೨೧ ಕಿ. ಮೀ. ದೂರದಲ್ಲಿದೆ. ಪ್ರಾಚೀನ ಶಾಸನಗಳಲ್ಲಿ 'ಸಾಯಬ್ಬೆಯ ಕರಂಜಿಗೆ' ಎಂದೇ ಉಲ್ಲೇಖಿತಗೊಂಡಿರುವ ಈ ಊರು, ಹಿಂದೆ ಅಲಂದಾಪುರ-೧೦೦೦ಕ್ಕೆ ಸೇರಿದ ಮಹಾ ಮಣಿಯೂರು-೧೨ ಕಂಪಣಕ್ಕೆ ಸೇರಿದ್ದು, ಇಲ್ಲಿಂದ ಈವರೆಗೆ ಕಲ್ಯಾಣದ ಚಾಳುಕ್ಯರ ಕಾಲಕ್ಕೆ ಸೇರಿದ ಒಂದು ಶಾಸನ ವರದಿಯಾಗಿದೆ. ದರ್ಗಾದ ಬಳಿ ಇರುವ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ ೧೧೯೯ರ ಈ ಶಾಸನ ಪಾಂಡ್ಯ ವಂಶಕ್ಕೆ ಸೇರಿದ ಪಟ್ಟಮಹಾದೇವಿಯಾದ ಭಾಗಲದೇವಿಯ ಜೈನಧರ್ಮನಿಷ್ಠೆಯು, ರೇವಕ ನಿಮ್ಮಡಿ, ಘಟಾನ್ತಕಿ, ಅತ್ತಿಮಬ್ಬೆಯರಿಗಿಂತ ಸಾವಿರ ಪಾಲು ಮಿಗಿಲಾಗಿತ್ತೆಂದು ಹೇಳುತ್ತ, ಅರಸಿಯು ಸಾಯಬ್ಬೆಯ ಕರಂಜಿಗೆಯನ್ನು ಆಳುತ್ತಿದ್ದಾಗ ಅಲ್ಲಿ ರತ್ನತ್ರಯ ಜಿನಾಲಯವನ್ನು ನಿರ್ಮಿಸಿ ಅದಕ್ಕೆ ಕೊಳವಯ್ಯನ ಗೇಣ ಕೋಲಲ್ಲಿ ೭೦ ಮತ್ತರು ಭೂಮಿ, ತೋಟ ಹಾಗೂ ಗಾಣಗಳನ್ನು ವಿಮಲಚಂದ್ರ ಪಂಡಿತರಿಗೆ ದಾನಕೊಟ್ಟ ವಿಷಯವನ್ನು ತಿಳಿಸುತ್ತದೆ. ಇದೇ ಶಾಸನ

ಶಿವಾಲಯವೊಂದರ ಬಗೆಗೂ ಪ್ರಸ್ತಾಪಿಸುತ್ತದೆ. ಆದರೆ ಇಂದು ಇಲ್ಲಿ ಪ್ರಾಚೀನ ದೇವಾಲಯಗಳಾವುದೂ ಉಳಿದಿಲ್ಲ. ಈಶ್ವರ ದೇಗುಲ ಪಾಳು ಬಿದ್ದಿದ್ದು, ಜೀರ್ಣೋದ್ಧಾರ ಕಾರ್ಯ ಸಾಗಿದೆ. ಊರಲ್ಲಿಂದು ಖಾಜಾ ಶಹಾಬುದ್ದಿನ್ ಸಂತರ ದರ್ಗಾವಿದ್ದು, ಇದರಿಂದಾಗಿ ಕರ್ಜಗಿಯು ಪ್ರಖ್ಯಾತವಾಗಿದೆ. ಈ ದರ್ಗಾವನ್ನು ಹುಡೇದ ಮೇಲೆ ನಿರ್ಮಿಸಿದ್ದು, ಇದರ ಉರುಸು ಅಕ್ಟೋಬರ್ ತಿಂಗಳಲ್ಲಿ ಜರುಗುತ್ತದೆ. ಇಲ್ಲಿಯ ಎಲ್ಲಾಲಿಂಗನ ಗುಡಿಯ ಜಾತ್ರೆಯು ಮಾರ್ಚ್ ತಿಂಗಳ ಮೊದಲ ವಾರದಲ್ಲಿ ಜರುಗುತ್ತದೆ. ಇಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ನಿರೀಕ್ಷಣಾ ಮಂದಿರವಿದ್ದು, ಚಾರಿತ್ರಿಕ ಮಹತ್ವದ ಮಾಶಾಳವು ಇಲ್ಲಿಂದ ಕೇವಲ ಐದು ಕಿ. ಮೀ. ದೂರದಲ್ಲಿದೆ.

**ಕಟ್ಟೆಸಂಗಾವಿ** (೧೭೭೭)ಯು ತಾಲೂಕು ಕೇಂದ್ರವಾದ ಜೇವರ್ಗಿಯಿಂದ ಉತ್ತರಕ್ಕೆ ಆರು ಕಿ. ಮೀ. ದೂರದಲ್ಲಿ ಜೇವರ್ಗಿ-ಗುಲಬರ್ಗಾ ರಸ್ತೆಯಲ್ಲಿ ಭೀಮಾ ನದಿ ಸೇತುವೆಯಿಂದ ಬಲಕ್ಕೆ ಒಂದು ಕಿ. ಮೀ. ದೂರದಲ್ಲಿದೆ. ಜೇವರ್ಗಿ ಹಳ್ಳವು ಭೀಮಾ ನದಿಯೊಂದಿಗೆ ಸಂಗಮಿಸುವುದರಿಂದ ಇಲ್ಲಿ ಸಂಗಮೇಶ್ವರ ದೇವಾಲಯವಿದೆ. ಇಲ್ಲಿಂದ ಈವರೆಗೆ ಯಾವುದೇ ಶಾಸನ ವರದಿಯಾಗಿಲ್ಲ. ಆದರೂ ಊರಲ್ಲಿರುವ ಚಾರಿತ್ರಿಕ ಅವಶೇಷಗಳ ಆಧಾರದಿಂದ ಇದರ ಪ್ರಾಚೀನತೆಯನ್ನು ಕಲ್ಯಾಣದ ಚಾಳುಕ್ಯರಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ಇಲ್ಲಿಯ ಕುಂಬಾರ ಓಣಿಯಲ್ಲಿರುವ ದೇಗುಲವು ಪೂರ್ಣ ಅಂತರ್ಗತವಾಗಿದ್ದು, ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ನವರಂಗದ ಇಕ್ಕೆಲಗಳಲ್ಲಿ ಒಂದಂಕಣದ ಗರ್ಭಗೃಹಗಳಿದ್ದು, ಇಂದು ಹಾಳಾಗಿವೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಬಾಗಿಲವಾಡ ಸರಳವಾಗಿದೆ. ನವರಂಗದಲ್ಲಿ ದುರ್ಗಾ ಹಾಗೂ ವಿಷ್ಣುವಿನ ಶಿಲ್ಪಗಳಿದ್ದು, ಇವುಗಳಲ್ಲಿ ಸುಮಾರು ನಾಲ್ಕುವರೆ ಅಡಿ ಎತ್ತರವಿರುವ ವಿಷ್ಣು ಮೂರ್ತಿಯು ಮುಕ್ಕಾಗಿದ್ದರೂ ಸುಂದರವಾಗಿದ್ದು, ಇದು ೧೨ನೇ ಶತಮಾನದ ದೇವಾಲಯವೆಂದು ಊಹಿಸಬಹುದಾಗಿದೆ. ಇಲ್ಲಿಯ ರಾಮಲಿಂಗ ಗುಡಿಯು ಪ್ರಾಚೀನ ದೇವಾಲಯವಾದರೂ ಇಂದು ಬೃಹತ್ತಾದ ಶಿವಲಿಂಗವೊಂದನ್ನು ಬಿಟ್ಟು ಮತ್ತೇನೂ ಉಳಿದಿಲ್ಲ.

ಇಲ್ಲಿಯ ಸಂಗಮೇಶ್ವರ ದೇವಾಲಯವು ಇಂದು ಪೂರ್ಣ ಜೀರ್ಣೋದ್ಧಾರಗೊಂಡಿರುವ ಸುಮಾರು ೧೨ನೇ ಶತಮಾನದ ಪ್ರಾಚೀನ ದೇವಾಲಯವಾಗಿದೆ. ಗರ್ಭಗೃಹ, ನವರಂಗ ಹಾಗೂ ವಿಶಾಲವಾದ ಪ್ರಾಕಾರಗಳನ್ನು ಹೊಂದಿರುವ ಈ ಗುಡಿಯಲ್ಲಿ ಬೃಹತ್ತಾದ ಶಿವಲಿಂಗವಿದ್ದು, ನವರಂಗದಲ್ಲಿ ನಂದಿ ಇದೆ. ಈ ದೇವಾಲಯದಲ್ಲಿ ಕಲ್ಯಾಣದ ಚಾಳುಕ್ಯರ ಕಾಲದ ಕಂಬಗಳನ್ನು ಅಧಿಕ ಸಂಖ್ಯೆಯಲ್ಲಿ ನೋಡಬಹುದಾಗಿದ್ದು ಕೇಶವ, ಮಹಿಷಮರ್ದಿನಿ, ಹಾಗೂ ನಾಗಶಿಲ್ಪಗಳಿವೆ. ಈ ದೇವರ ಜಾತ್ರೆಯು ಆಗಿ ಹುಣ್ಣಿಮೆ ಹಾಗೂ ವಿಜಯದಶಮಿಗಳಂದು ಜರುಗುತ್ತದೆ. ಉಳಿದಂತೆ ಊರಲ್ಲಿ ಇತ್ತೀಚಿನ ಅನೇಕ ದೇವಾಲಯಗಳಿದ್ದು ಅವುಗಳಲ್ಲಿ ಬಸವಣ್ಣ, ಹನುಮಂತ, ಮಹಾಲಕ್ಷ್ಮಿ, ಎಲ್ಲಮ್ಮ ಹಾಗೂ ಹಟ್ಟಿಲಿಂಗಯ್ಯನ ಗುಡಿಗಳು ಪ್ರಮುಖವಾಗಿವೆ. ಊರ ಹೊರಗಿರುವ ಬಸವಣ್ಣನ ಗುಡಿ ಬಳಿ ತೀರ್ಥಂಕರ ಪೀಠವಿದೆ. ಇವುಗಳೊಂದಿಗೆ ಊರಲ್ಲಿ ರೇವಪ್ಪಯ್ಯ ಮಠ ಹಾಗೂ ಕರುಣೇಶ್ವರ ವಿರಕ್ತ ಮಠಗಳಿದ್ದು, ಇಂದು ಪಾಳು ಬಿದ್ದಿವೆ. ಮೇಲಾಗಿ ಅಷೂರಖಾನ, ಮಸೀದಿ ಹಾಗೂ ದರ್ಗಾಗಳೂ ಕೂಡ ಇಲ್ಲಿವೆ.

**ಕಡಕೋಳ** (೭೬೯) ವು ತಾಲೂಕು ಕೇಂದ್ರವಾದ ಜೇವರ್ಗಿಯಿಂದ ನೈಋತ್ಯಕ್ಕೆ ೪೬ ಕಿ. ಮೀ., ಯಡ್ರಾಮಿಯಿಂದ ವಾಯವ್ಯಕ್ಕೆ ಆರು ಕಿ. ಮೀ ದೂರದಲ್ಲಿ ಚಿಣಮಗೇರಿ ಹೊಳೆಯ ಎಡದಂಡೆಯ ಮೇಲಿರುವ ಧಾರ್ಮಿಕ ಕೇಂದ್ರವಾಗಿದೆ. ಶರಣಬಸವೇಶ್ವರರ ಸಮಕಾಲೀನರಾದ ಕಡಕೋಳದ ಮಡಿವಾಳಪ್ಪನವರ ಮಠದಿಂದಾಗಿ ಈ ಊರು ಪ್ರಸಿದ್ಧವಾಗಿದೆ. ಗುಲಬರ್ಗಾ ತಾಲೂಕಿನ ಬಿದನೂರಿನಲ್ಲಿ ಜನಿಸಿದ ಇವರು,ಶರಣಬಸವೇಶ್ವರರ ಪ್ರಭಾವಕ್ಕೆ ಒಳಗಾಗಿ ಸ್ವಲ್ಪ ಕಾಲ ಅರಳಗುಂಡಗಿಯಲ್ಲಿದ್ದವರು. ನಂತರ ಕಾರಣಾಂತರದಿಂದ ಕಡಕೋಳಕ್ಕೆ ಬಂದು ನೆಲೆಸಿ, ಅಲ್ಲೇ ಐಕ್ಯರಾದರು. ಇವರ ಸಮಾಧಿಯು ಇಲ್ಲಿದ್ದು ಮಡಿವಾಳಪ್ಪನ ಮಠವೆಂದು ರೂಢಿಯಲ್ಲಿದೆ. ಮಡಿವಾಳೇಶ್ವರ ಮಠವು ಪ್ರಾಚೀನ ಕಟ್ಟಡವಾಗಿದ್ದು ವಿಶಾಲವಾದ ಪ್ರಾಕಾರದಲ್ಲಿರುವ ಗುಡಿಯಲ್ಲಿ ವೇದಿಕೆಯ ಮೇಲೆ ಮಡಿವಾಳಪ್ಪನ ಗದ್ದುಗೆ ಜೊತೆಗೆ ಮಡಿವಾಳಪ್ಪನ ಶಿಷ್ಯನ ಗದ್ದುಗೆಯೂ ಇರುವ ಭೀಮಾಶಂಕರ ಗುಡಿ ಇದೆ. ಹನುಮಂತನ ಗುಡಿ ಮುಂದೆ ಸುಮಾರು ೧೧-೧೨ನೇ ಶತಮಾನದ ಶಿವಲಿಂಗ, ಗಣಪತಿ ಶಿಲ್ಪಗಳಿದ್ದು, ಪಾಳುಬಿದ್ದಿರುವ ಪ್ರಾಚೀನ ಈಶ್ವರ ಗುಡಿ ಇದೆ. ಯಮನೂರಪ್ಪನ ದರ್ಗಾ ಕೂಡ ಇದ್ದು, ನವಲಗುಂದ ತಾಲೂಕಿನಲ್ಲಿರುವ ಯಮನೂರಿನಲ್ಲಿ ಉರುಸು ನಡೆವ ಸಂದರ್ಭದಲ್ಲೇ ಇಲ್ಲೂ

ಉರುಸು ಜರುಗುತ್ತದೆ. ಮಡಿವಾಳಪ್ಪಜ್ಜನ ಜಾತ್ರೆಯು ಐದು ದಿನ ಜರುಗುತ್ತಿದ್ದು ಹೊಸ್ತಿಲ ಹುಣ್ಣಿಮೆಯಾದ ಒಂಭತ್ತನೆ ದಿನಕ್ಕೆ ರಥೋತ್ಸವವಿರುತ್ತದೆ. ಸ್ವರ ವಚನಕಾರರಾಗಿದ್ದ ಮಡಿವಾಳಪ್ಪನವರು 'ಕೈವಲ್ಯ ವಾಕ್ಯಾಮೃತ' ಎಂಬ ವಚನ ಕೃತಿಯನ್ನು ರಚಿಸಿದ್ದು, ಹಲವಾರು ತತ್ವಪದಗಳನ್ನೂ ರಚಿಸಿದ್ದಾರೆ.

**ಕಡಗಂಚಿ** (೬೨೩೦)ಯು ತಾಲೂಕು ಕೇಂದ್ರವಾದ ಆಳಂದದಿಂದ ನೈಋತ್ಯಕ್ಕೆ ೧೫ ಕಿ. ಮೀ. ದೂರದಲ್ಲಿ ಆಳಂದ-ಗುಲಬರ್ಗಾ ರಸ್ತೆಯಲ್ಲಿದೆ. ಪ್ರಾಚೀನ ಶಾಸನಗಳಲ್ಲಿ 'ಕಡಗಂಚಿ' ಎಂದೇ ಉಲ್ಲೇಖಿತಗೊಂಡಿರುವ ಈ ಊರಿಂದ ಈವರೆಗೆ ಸುಮಾರು ೧೨ನೇ ಶತಮಾನಕ್ಕೆ ಸೇರಿದ ತ್ರುಟಿತ ಶಾಸನವೊಂದು ವರದಿಯಾಗಿದ್ದು, ಇದು ಅಂಕುಲಗೆ ಕೋಟೆಯ ಭಾಸ್ಕರಭಟ್ಟರನ್ನು ಹೆಸರಿಸುತ್ತ ದೇವಾಲಯವೊಂದಕ್ಕೆ ಭೂದಾನ ಕೊಟ್ಟ ಅಂಶ ತಿಳಿಸುತ್ತಾದರೂ ವಿಷಯ ಸ್ಪಷ್ಟವಾಗಿಲ್ಲ. ಆದರೆ ಗುಲಬರ್ಗಾದಲ್ಲಿರುವ ೧೧೧೭ರ ಶಾಸನವು ಕಂಡಗಂಚಿಯಲ್ಲಿ ಗೋವಿಂದ ಜೀಯರು ನಿರ್ಮಿಸಿದ ಮಲ್ಲಿಕಾರ್ಜುನ ದೇವಾಲಯದ ಪೂಜಾವಿಧಿಗೆಂದು ಮಹಾಮಂಡಳೇಶ್ವರ ಹೆಮ್ಮಾಡಿಯರಸ, ಕಡಗಂಚಿಯ ಪ್ರಭು ಕೇಶಿಮ್ಮರಸ ಹಾಗೂ ಇನ್ನಿಬ್ಬರೂ ಸೇರಿ ಸಂಯುಕ್ತವಾಗಿ ಆರು ಮತ್ತರು ಭೂಮಿ ಹಾಗೂ ಆನೆಗನೂರು ಗ್ರಾಮವನ್ನು ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಊರಲ್ಲಿಂದು ಯಾವುದೇ ಪ್ರಾಚೀನ ದೇವಾಲಯವಿಲ್ಲ. ಆದರೆ ಹನುಮಂತ, ಮಲ್ಲಿಕಾರ್ಜುನ ಹಾಗೂ ಮಹಾದೇವ ದೇವಾಲಯಗಳ ಬಳಿ ಗಣಪತಿ, ಸೂರ್ಯ, ಶಿವಲಿಂಗ, ಯಕ್ಷ, ಮಹಿಷಮರ್ದಿನಿ, ಭೈರವ, ನಂದಿ, ನಾಗಶಿಲ್ಪ ಹಾಗೂ ಪದ್ಮಾಸೀನ ತೀರ್ಥಂಕರನ ಪ್ರಾಚೀನ ಶಿಲ್ಪಗಳು ಅನಾಥವಾಗಿ ಬಿದ್ದಿವೆ.

ದತ್ತಾತ್ರೇಯ ಸ್ವರೂಪಿಗಳಾದ ನರಸಿಂಹ ಸರಸ್ವತಿಗಳ ಶಿಷ್ಯರಲ್ಲಿ ಒಬ್ಬರಾದ ಕಡಗಂಚಿಯ ಸಾಯಮದೇವರು, ಗುರುಗಳೇ ಹೇಳಿದ ದತ್ತಾತ್ರೇಯ ಗುರು ಚರಿತ್ರೆಯನ್ನು ಮರಾಠಿ ಭಾಷೆಯಲ್ಲಿ ಸುಮಾರು ೧೪೨೦ರಲ್ಲಿ ರಚಿಸಿದ್ದು ಅದರ ಮೂಲ ಹಸ್ತಪ್ರತಿ ಇಲ್ಲಿದ್ದು ಇದೊಂದು ಪಾರಾಯಣ ಗ್ರಂಥವಾಗಿದೆ. ಉಳಿದಂತೆ ಊರಲ್ಲಿ ಪಂಚಲಿಂಗೇಶ್ವರ, ದತ್ತಾತ್ರೇಯ, ಮಲ್ಲಿಕಾರ್ಜುನ, ಹನುಮಂತ, ಚೌಡಮ್ಮ, ಮರಗಮ್ಮ, ಲಕ್ಕಮ್ಮ, ದೇವಮ್ಮ, ಸಿದ್ಧೇಶ್ವರ, ಚಂದಾತಾಯಿ ಮುಂತಾದ ನವೀನ ಗುಡಿಗಳಿದ್ದು ಶಾಂತಲಿಂಗೇಶ್ವರ ಮಠವಿದೆ. ಜೊತೆಗೆ ಮಸೀದಿ ಹಾಗೂ ದರ್ಗಾಗಳಿವೆ.

**ಕನ್ನೆಕೋಳೂರು** (೩೧೩೬) ತಾಲೂಕು ಕೇಂದ್ರವಾದ ಶಹಾಪುರದಿಂದ ಆಗ್ನೇಯಕ್ಕೆ ಒಂಬತ್ತು ಕಿ. ಮೀ. ದೂರದಲ್ಲಿದೆ. ಶಿವನನ್ನು ತನ್ನ ಅನನ್ಯ ಭಕ್ತಿಯಿಂದ ಮೆಚ್ಚಿಸಿ ಕಡೆಗೆ ಶಿವನಲ್ಲೇ ಐಕ್ಯವಾದ ಕೊಡಗೂಸಿನ ಜನಪದ ಕಥೆ ಈ ಭಾಗದಲ್ಲಿ ಪ್ರಚಲಿತವಿದ್ದು ಇದೇ ಆ ಕೋಳೂರೆಂಬ ನಂಬಿಕೆಯೂ ಜನಪ್ರಿಯವಾಗಿದೆ. ಈ ಊರ ಬಳಿಯಿರುವ ಬೂದಿ ದಿಬ್ಬಗಳು ನೂತನ ಶಿಲಾಯುಗ ಸಂಸ್ಕೃತಿಯ ಅವಶೇಷಗಳನ್ನು ಹೊಂದಿರುವ ಸಾಧ್ಯತೆಗಳಿವೆ. ಊರಲ್ಲಿ ಚೆನ್ನಮ್ಮ, ರಾಮಲಿಂಗೇಶ್ವರ, ಚೌಡೇಶ್ವರಿ ಹಾಗೂ ಪರಮಾನಂದನ ಗುಡಿಗಳಿದ್ದು, ಇವುಗಳಲ್ಲಿ ಪರಮಾನಂದ ಗುಡಿಯು ಸುಮಾರು ೧೧-೧೨ನೇ ಶತಮಾನಕ್ಕೆ ಸೇರಿದ ಪ್ರಾಚೀನ ದೇವಾಲಯವಾಗಿದೆ. ಬಸ್ ಸ್ಟ್ಯಾಂಡ್ ಬಳಿಯಿರುವ ಈ ಗುಡಿಯು ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಪೂರ್ವಾಭಿಮುಖವಾಗಿದೆ. ಇಂದು ಪೂರ್ಣ ಜೀರ್ಣಾವಸ್ಥೆಯಲ್ಲಿರುವ ಈ ಗುಡಿಯ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದೆ. ಪಾರ್ಶ್ವದ್ವಾರವನ್ನು ಹೊಂದಿರುವ ಈ ಗುಡಿಯ ಬಳಿ ಸುಮಾರು ೧೩ನೇ ಶತಮಾನಕ್ಕೆ ಸೇರಿದ ನಾಲ್ಕು ಹಂತದ ವೀರಗಲ್ಲೊಂದಿದೆ.

ಊರ ಹೊರಗೆ ಇರುವ ರಾಮಲಿಂಗೇಶ್ವರ ಗುಡಿಯು ಸ್ವಲ್ಪ ತಗ್ಗಿನಲ್ಲಿದ್ದು, ಕೋಳೂರು ಕೊಡಗೂಸಿಗೂ ಈ ಗುಡಿಗೂ ಸಂಬಂಧವಿದೆಯೆಂಬ ಅಭಿಪ್ರಾಯವಿದೆ. ಈ ಗುಡಿಯ ಗರ್ಭಗೃಹದ ಎಡಮೂಲೆಯಲ್ಲೊಂದು ಬಾವಿ ಇದೆ. ಕೊಡಗೂಸಿನ ಮುಗ್ಧ ಭಕ್ತಿಗೆ ಮೆಚ್ಚಿದ ಶಿವ, ಕೂಸಿನ ಕೈಯಿಂದ ಹಾಲನ್ನು ಸೇವಿಸಿದ್ದು, ಕಡೆಗೆ ಕೂಸನ್ನು ತನ್ನಲ್ಲೇ ಐಕ್ಯ ಮಾಡಿಕೊಂಡ ಮಹತ್ವದ ಸ್ಥಳ ಇದೆಂಬ ಹೇಳಿಕೆ ಈ ಭಾಗದಲ್ಲಿ ರೂಢಿಯಲ್ಲಿದೆ. ಆದರೆ ಕೋಳೂರು ಕೊಡಗೂಸಿನ ಪವಾಡವು ತಮಿಳುನಾಡಿನಲ್ಲಿರುವ ಕೋಳೂರಿಗೆ ಸಂಬಂಧಿಸಿದ್ದೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.

**ಕಮ್ಮರವಾಡಿ** (೧೩೯೮)ಯು ತಾಲೂಕು ಕೇಂದ್ರವಾದ ಚಿತ್ತಾಪುರದಿಂದ ನೈಋತ್ಯಕ್ಕೆ ೧೨ ಕಿ.ಮೀ. ದೂರದಲ್ಲಿದೆ. ಪ್ರಾಚೀನ ಶಾಸನಗಳಲ್ಲಿ 'ಕಮರಡಿ' ಎಂದೇ ದಾಖಲಾಗಿರುವ ಇದು ಹಿಂದೆ ಅರಲು-೩೦೦ಕ್ಕೆ ಸೇರಿದ್ದು, ಇಲ್ಲಿಂದ ಈವರೆಗೆ ಕಲ್ಯಾಣದ ಚಾಳುಕ್ಯ ಹಾಗೂ ದೇವಗಿರಿ ಯಾದವರ ಕಾಲಕ್ಕೆ ಸೇರಿದ ಒಂದೊಂದು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ ೧೧೦೪ರ ಶಾಸನವು, ಮಹಾಮಂಡಳೇಶ್ವರ

ಆನೆಯಮ್ಮರಸ ಹಾಗೂ 'ಕಮರಡಿ'ಯ ಪ್ರಭು ಮೂಲಿಗರು ಮೂಲಸ್ಥಾನ ದೇವರ ಪೂಜಾವಿಧಿಗೆಂದು ಹೊಲ, ತೋಟ ಹಾಗೂ ಧಾನ್ಯದ ಆಯಗಳೊಂದಿಗೆ ನಿವೇಶನವನ್ನೂ ದಾನ ಬಿಟ್ಟ ವಿಷಯವನ್ನು ತಿಳಿಸಿದರೆ, ಅದೇ ಕಲ್ಲಿನ ಮೇಲಿರುವ ಯಾದವ ಸಿಂಗಣನ ಕಾಲದ ೧೨೧೯ರ ಶಾಸನವೂ ಕೂಡ ಇದೇ ದೇವರಿಗೆ ಮಹಾಮಂಡಳೇಶ್ವರ ಬಿಜ್ಜರಸನು ದಾನಬಿಟ್ಟ ವಿಷಯವನ್ನು ತಿಳಿಸುತ್ತದೆ. ಊರ ಹೊರಗೆ ಇರುವ ಸೋಮಲಿಂಗನ ಗುಡಿಯಲ್ಲಿ ಈ ಶಾಸನಗಳಿದ್ದು, ಶಾಸನೋಕ್ತ ಸೋಮನಾಥ ದೇವಾಲಯವೇ ಇದಾಗಿದ್ದು ಇಂದು ಜೀರ್ಣಾವಸ್ಥೆಯಲ್ಲಿದೆ.

**ಕರಕಮುಕ್ಳಿ** (೧೮೫೯)ಯು ತಾಲೂಕು ಕೇಂದ್ರವಾದ ಚಿಂಚೋಳಿಯಿಂದ ವಾಯವ್ಯಕ್ಕೆ ೧೦ ಕಿ. ಮೀ. ದೂರದಲ್ಲಿ ಮುಲ್ಲಾಮಾರಿ ನದಿಯ ಬಲದಂಡೆಯ ಮೇಲಿದ್ದು ಮಲ್ಲಿಕಾರ್ಜುನ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. ಸುಮಾರು ೧೧ನೇ ಶತಮಾನಕ್ಕೆ ಸೇರಿದ ಈ ದೇವಾಲಯದ ಗರ್ಭಗೃಹ ಹಾಗೂ ಅಂತರಾಳಗಳಷ್ಟೆ ಇಂದು ಉಳಿದಿದ್ದು ಗರ್ಭಗೃಹದಲ್ಲಿ ಶಿವಲಿಂಗವಿದ್ದು ದ್ವಿಶಾಖಾಲಂಕೃತ ಬಾಗಿಲವಾಡವಿದೆ. ನವರಂಗ ಭಾಗದಲ್ಲಿ ಸುಮಾರು ಮೂರು ಅಡಿ ಎತ್ತರದ ಜಲದೇವತೆ, ಮಹಿಷಮರ್ದಿನಿ, ಗಣೇಶ, ವಿಷ್ಣು, ಕೇಶವ, ಸೂರ್ಯ ಹಾಗೂ ಜೋಡಿನಾಗಗಳ ಶಿಲ್ಪಗಳಿವೆ. ಇವುಗಳಲ್ಲಿ ದ್ವಿಪಾದವುಳ್ಳ ಜೋಡಿ ನಾಗಗಳ ಶಿಲ್ಪ ವಿಶಿಷ್ಟವಾಗಿದೆ. ಹನುಮಂತನ ಗುಡಿಯ ಮುಂದಿರುವ ಒಂಭತ್ತು ಅಡಿ ಎತ್ತರದ ಹನುಮಂತನ ಮೂರ್ತಿ ಪ್ರಾಚೀನದ್ದಾಗಿದೆ.

**ಕರಡಕಲ್ಲು** (೧೮೧೭) ತಾಲೂಕು ಕೇಂದ್ರವಾದ ಸುರಪುರದಿಂದ ವಾಯವ್ಯಕ್ಕೆ ಐದು ಕಿ. ಮೀ. ದೂರದಲ್ಲಿ ಸುರಪುರ-ಕೆಂಭಾವಿ ರಸ್ತೆಯಲ್ಲಿದೆ. ಊರಿಂದ ಎರಡು ಫರ್ಲಾಂಗು ದೂರದಲ್ಲಿರುವ ಗುಡ್ಡದಲ್ಲಿ ಸುಮಾರು ೧೨ನೇ ಶತಮಾನದಲ್ಲಿ ನಿರ್ಮಾಣಗೊಂಡಿರುವ ಸಿದ್ಧೇಶ್ವರ ದೇವಾಲಯವಿದೆ. ಈ ದೇವಾಲಯದ ಕಂಬಗಳ ಮೇಲಿರುವ ಒಂಬತ್ತು ಶಾಸನಗಳಲ್ಲಿ ೧೧೬೭ರ ಶಾಸನವು ಕಲ್ಯಾಣದ ಚಾಳುಕ್ಯ ಅರಸ ಆರನೇಯ ವಿಕ್ರಮಾದಿತ್ಯನ ದಂಡನಾಯಕನಾದ ನಾಗವರ್ಮಯ್ಯನ ಬೇಡಿಕೆಯಂತೆ ಸಿದ್ದೇಶ್ವರ ದೇವರ್ಗೆ ಐದು ಮತ್ತರನ್ನು, ತೀರ್ಥದ ಧರ್ಮೇತಕ್ಕೆಂದು ೧೦೦ ಮತ್ತರು ಭೂಮಿಯನ್ನೂ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಇಲ್ಲಿಯ ಇನ್ನೊಂದು ಕಂಬದ ಮೇಲಿರುವ ಶಾಸನ ಬ್ರಹ್ಮಪುರಿಯ ನಾಗಯ್ಯ ಷಣಂಗಿ ಹಾಗೂ ಸಿದ್ದೇಶ್ವರ ದೇವರಿಗೆ ದತ್ತಿ ಬಿಟ್ಟ ವಿಷಯ ತಿಳಿಸಿದರೆ, ಮತ್ತೊಂದು ಶಾಸನ 'ಕಂಬಿನ ಕರಡಕಲ್ಲು' ಹಗರಟಗಿ-೩೦ಂಕ್ಕೆ ಸೇರಿದ್ದು ಅಲ್ಲಿಯ ಸಿದ್ದೇಶ್ವರ ದೇವರಿಗೆ ಹಾಗೂ ಚಾವುಂಡೇಶ್ವರ ದೇವಿಗೆ ಸಿಂಬಡ (ಸುಂಬಡ)ದ ಹೆಗ್ಗಡೆ ಕೇಸಿಯಣ್ಣ ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಇಲ್ಲಿರುವ ಉಳಿದ ಶಾಸನಗಳೂ ಕೂಡ ಮಾಲಗತ್ತಿಯ ಪ್ರಭು ಮಾಚರಸ, ಅಮ್ಮರಸ, ಚಂದರಸರು ಸಿದ್ದೇಶ್ವರ ದೇವರ ನಂದಾದೀಪಕ್ಕೆಂದು 'ಎಲೆ ಸುಂಕ'ದಾನ ಬಿಟ್ಟ ವಿಷಯವನ್ನು ತಿಳಿಸುತ್ತವೆ.

**ಕಲ್ಲೂರು** (೯೨೨) ದೇವರ ಕಲ್ಲೂರು ಎಂದೇ ರೂಢಿಯಲ್ಲಿರುವ ಈ ಊರು ತಾಲೂಕು ಕೇಂದ್ರವಾದ ಜೇವರ್ಗಿಯಿಂದ ವಾಯವ್ಯಕ್ಕೆ ಸುಮಾರು ೩೦ ಕಿ. ಮೀ. ದೂರದಲ್ಲಿ, ಜೇವರ್ಗಿ-ಸಿಂಧಗಿ ರಸ್ತೆಯಲ್ಲಿ, ಮಂದೇವಾಲದಿಂದ ಉತ್ತರಕ್ಕೆ ಎಂಟು ಕಿ.ಮೀ. ದೂರದಲ್ಲಿ ಭೀಮಾ ನದಿಯ ಬಲದಂಡೆಯ ಮೇಲಿದೆ. ಇಲ್ಲಿ ಸುಮಾರು ೧೧-೧೨ನೇ ಶತಮಾನದ ಬೃಹತ್ತಾದ ತ್ರಿಕೂಟ ದೇವಾಲಯ ಹಿಂದೆ ಇದ್ದು, ಈಗ ಅಲ್ಲಿ ದೇವಾಲಯದ ಅಧಿಷ್ಠಾನ, ಮೂರು ದ್ವಾರಬಂಧಗಳು, ಶಿವಲಿಂಗ, ನಂದಿ ಹಾಗೂ ಗಣಪತಿ ಶಿಲ್ಪಗಳಷ್ಟೆ ಇದ್ದು, ಉಳಿದೆಲ್ಲವೂ ಹಾಳಾಗಿದೆ. ಹೊಳೆದಂಡೆಯಲ್ಲಿರುವ ಮಲ್ಲಿಕಾರ್ಜುನ ಗುಡಿ ಪೂರ್ಣ ಜೀರ್ಣೋದ್ಧಾರಗೊಂಡಿದ್ದು, ಕಲ್ಯಾಣದ ಚಾಳುಕ್ಯರ ಕಾಲದ ಅವಶೇಷಗಳು ಚದುರಿಕೊಂಡಿದ್ದು, ಬಸವಣ್ಣ, ಎಲ್ಲಮ್ಮ ಹಾಗೂ ಹನುಮಂತನ ಗುಡಿಯ ಬಳಿಯಲ್ಲೂ ಪ್ರಾಚೀನ ಅವಶೇಷಗಳನ್ನು ನೋಡಬಹುದಾಗಿದೆ. ಇಲ್ಲಿಯ ಅಮೋಘಸಿದ್ಧರ ಗುಡಿಯಿಂದಾಗಿ ಈ ಊರು ಈಗ ಪ್ರಸಿದ್ಧವಾಗಿದೆ. ಈ ದೇವರ ಗುಡ್ಡರಾದ ಕುರುಬ ಒಡೆಯರು ಬಾದಾಮಿ ಅಮಾವಾಸೆಯಂದು ಡೊಳ್ಳಿನ ಮೇಲೆ ನಿಂತು, ಗಣಪತಿ ಮುಖವಾಡ ತೊಟ್ಟು, ಹೇಳುವ ಮೂರು ಮಾತಿನ ಕಾರಣಿಕೋತ್ಸವದಲ್ಲಿ ಪಾಲ್ಗೊಳ್ಳಲು ದೂರದ ಊರುಗಳಿಂದ ಸಾವಿರಾರು ಜನ ಬಂದು ಸೇರುತ್ತಾರೆ.

**ಕಾಳಗಿ** (೫೬೩೬) ಯು ತಾಲೂಕು ಕೇಂದ್ರವಾದ ಚಿತ್ತಾಪುರದಿಂದ ವಾಯವ್ಯಕ್ಕೆ ೫೦ ಕಿ. ಮೀ., ಗುಲಬರ್ಗಾದಿಂದ ಪೂರ್ವಕ್ಕೆ ೬೦ ಕಿ. ಮೀ. ದೂರದಲ್ಲಿ, ಗುಲಬರ್ಗಾ-ಚಿಂಚೋಳಿ ರಸ್ತೆಯಲ್ಲಿದೆ. ಪ್ರಾಚೀನ ಶಾಸನಗಳಲ್ಲಿ 'ಕಾಳುಗೆ' ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಮನ್ನೆದಡಿ-೧೦೦೦ದ ರಾಜಧಾನಿ ಪಟ್ಟಣವಾಗಿದ್ದು, ಇಲ್ಲಿಂದ ಈವರೆಗೆ ೧೧

ಶಾಸನಗಳು ವರದಿಯಾಗಿವೆ. ಹಿಂದಿನ ಕಾಲದ ಶಾಸನಗಳಲ್ಲಿ ಇದು ಖಾಂಡವ ಮಂಡಲ ಪ್ರದೇಶದಲ್ಲಿತ್ತೆಂದು ದಾಖಲಾಗಿದೆ. ಬಾಣ ವಂಶಕ್ಕೆ ಸೇರಿದ ಮಹಾಮಂಡಳೇಶ್ವರರ ರಾಜಧಾನಿ ಪಟ್ಟಣವಾಗಿದ್ದ ಇದು ರಾಜಕೀಯ, ಶೈಕ್ಷಣಿಕ ಹಾಗೂ ಧಾರ್ಮಿಕ ಕೇಂದ್ರವಾಗಿ ಹಿಂದೆ ಹೆಚ್ಚಿನ ಮಹತ್ವ ಪಡೆದಿತ್ತು. ಇಲ್ಲಿಯ ಶಾಸನಗಳಲ್ಲಿ ಹನುಮಂತನ ಗುಡಿಯಲ್ಲಿರುವ ಕಲ್ಯಾಣದ ಚಾಳುಕ್ಯ ಅರಸ ಜಗದೇಕಮಲ್ಲನ ಕಾಲಕ್ಕೆ ಸೇರಿದ ೧೦೪೩ರ ಶಾಸನವು ಸೋಮೇಶ್ವರ ದೇವಾಲಯಕ್ಕೆ ೩೦೦ ಮತ್ತರು ಭೂಮಿಯನ್ನು ಮಹಾಮಂಡಳೇಶ್ವರ ಬಿಬ್ಬರಸನು ದಾನಕೊಟ್ಟ ವಿಷಯವನ್ನು ತಿಳಿಸಿದರೆ, ಚೌಡಮ್ಮನ ಗುಡಿ ಕಂಬದ ಮೇಲಿರುವ ೧೦೬೬ರ ಶಾಸನವು ಬಿಬ್ಬರಸನನ್ನು ಉಲ್ಲೇಖಿಸುತ್ತದೆ. ಈಶ್ವರ ಗುಡಿ ಕಂಬದ ಮೇಲಿರುವ ೧೦೯೪ರ ಶಾಸನ ಬಿಬ್ಬೇಶ್ವರ ದೇವರಿಗೆ ದಾನ ಕೊಟ್ಟ ವಿಷಯ ತಿಳಿಸಿದರೆ ೧೧೦೩ ಹಾಗೂ ೧೧೧೦ ಶಾಸನಗಳು ಆರನೇ ವಿಕ್ರಮಾದಿತ್ಯನ ಮಗ ಜಯಕರ್ಣನನ್ನು ದಾಖಲಿಸಿವೆ. ಕಾಳೇಶ್ವರ ಗುಡಿ ಆವರಣದಲ್ಲಿರುವ ೧೧೦೩, ೧೧೨೧ ಹಾಗೂ ೧೧೨೩ರ ಶಾಸನಗಳು ಇಲ್ಲಿಯ ಸ್ವಯಂಭು ಕಾಳೇಶ್ವರ ದೇವರಿಗೆ ನೀಡಿದ ಬೇರೆ ಬೇರೆ ದಾನಗಳ ಬಗ್ಗೆ ದಾಖಲಿಸುತ್ತವೆ. ಮಲ್ಲಿಕಾರ್ಜುನ ಗುಡಿಯಲ್ಲಿರುವ ೧೧೬೩ರ ಶಾಸನವು ಮಹಾಮಂಡಳೇಶ್ವರ ವೀರಗೊಂಕರಸನು ಗೊಂಕೇಶ್ವರ ದೇವಾಲಯವನ್ನು ನಿರ್ಮಿಸಿ, ಅದರ ಆಚಾರ್ಯರಾದ ಕಲ್ಯಾಣ ಶಕ್ತಿ ಪಂಡಿತರಿಗೆ ತೆಂಗುಳಿ-೭೦ಕ್ಕೆ ಸೇರಿದ ಮಲ್ಲಗಾಣವನ್ನು ದಾನ ಕೊಟ್ಟ ವಿಷಯವನ್ನು ತಿಳಿಸುತ್ತ ಈ ಗುಡಿಯನ್ನು ನಿರ್ಮಿಸಿದ ಮಲ್ಲೋಜ, ಬಮ್ಮೋಜ, ಕೊಪ್ಪದ ಮಲ್ಲೋಜ, ಅವರೋಜ ಹಾಗೂ ರಾಮೋಜರನ್ನು ಹೆಸರಿಸಿದೆ. ಇಲ್ಲಿಯ ಕರಿಲಿಂಗನ ಗುಡಿಯಲ್ಲಿರುವ ಸುಮಾರು ೧೩ನೇ ಶತಮಾನಕ್ಕೆ ಸೇರಿದ ಶಾಸನ ಜಯಲಿಂಗೇಶ್ವರ ದೇವಾಲಯದ ಬಗ್ಗೆ ಪರೋಕ್ಷವಾಗಿ ಪ್ರಸ್ತಾಪಿಸುತ್ತದೆ.

ಇಲ್ಲಿಯ ಶಾಸನಗಳಲ್ಲಿ ಉಲ್ಲೇಖವಾಗಿರುವ ಸೋಮೇಶ್ವರ, ಬಿಬ್ಬೇಶ್ವರ, ಕಾಳೇಶ್ವರ, ಜಯಲಿಂಗೇಶ್ವರ ಹಾಗೂ ಗೊಂಕೇಶ್ವರ ದೇವಾಲಯಗಳು ಇಂದು ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುತ್ತಿವೆ. ಊರ ನಡುವೆ ಇರುವ ಮಲ್ಲಿಕಾರ್ಜುನ ದೇವಾಲಯವೇ ಶಾಸನೋಕ್ತ ಗೊಂಕೇಶ್ವರ ದೇವಾಲಯವಾಗಿದ್ದು, ೧೧೬೩ರಲ್ಲಿ ಮಹಾಮಂಡಳೇಶ್ವರ ಬಾಣ ವೀರಕೊಂಕರಸನು ಇದನ್ನು ನಿರ್ಮಿಸಿದ್ದಾನೆ. ಎತ್ತರವಾದ ಜಗತಿ ಹಾಗೂ ಅಧಿಷ್ಠಾನದ ಮೇಲೆ ಬಹುಕೋನಾಕಾರದ ತಳವಿನ್ಯಾಸವನ್ನುಳ್ಳ ಗರ್ಭಗೃಹ, ಅಂತರಾಳ ಹಾಗೂ ತೆರೆದ ನವರಂಗಗಳನ್ನು ಹೊಂದಿರುವ ಈ ಗುಡಿ ಪೂರ್ವಾಭಿಮುಖವಾಗಿದೆ. ಗರ್ಭಗೃಹದಲ್ಲಿ ಬೃಹತ್ತಾದ ಶಿವಲಿಂಗವಿದ್ದು ಇದರ ದ್ವಾರಬಂಧವು ಚತುರ್‌ಶಾಖಾಲಂಕೃತವಾಗಿದ್ದು, ಇಕ್ಕೆಲಗಳಲ್ಲಿ ಶೈವ ದ್ವಾರಪಾಲಕರಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯಿದ್ದು,ಉತ್ತರಾಂಗವನ್ನು ಪಂಚ ಶಿಖರಗಳಿಂದ ಅಲಂಕರಿಸಲಾಗಿದೆ. ಅಂತರಾಳದ ದ್ವಾರಬಂಧವು ತ್ರಿಶಾಖಾಲಂಕೃತವಾಗಿದ್ದು ಜಾಲಂಧ್ರಗಳಿವೆ. ತೆರೆದ ನವರಂಗದಂಚಿನುದ್ದಕ್ಕೂ ಕಕ್ಷಾಸನವಿದ್ದು, ಅದರ ಹಿಂಬದಿಯನ್ನು ವಜ್ರ, ಕಮಲ, ಕಿರುಸ್ತಂಭ ಶಿಖರ ಹಾಗೂ ಕಿರುಶಿಲ್ಪಗಳಿಂದ ಅಲಂಕರಿಸಲಾಗಿದೆ. ನವರಂಗದ ನಡುವಣ ಕಂಬಗಳು ವಜ್ರಪಟ್ಟಿ, ಮುತ್ತಿನಹಾರ, ರೇಖಾ ಬಳ್ಳಿ ಹಾಗೂ ರೇಖಾ ಚಿತ್ರಗಳಿಂದ ಅಲಂಕೃತಗೊಂಡಿದ್ದು ಚಿತ್ತಾಕರ್ಷಕವಾಗಿವೆ. ಪೂರ್ಣ ಕಮಲಮಯವಾಗಿರುವ ಈ ನವರಂಗದ ನಡುವಣ ಛತ್ತು ನಕ್ಷತ್ರಾಕಾರದ ಕಮಲ ಹಾಗೂ ಅಷ್ಟದಿಕ್ಪಾಲಕರನ್ನು ಹೊಂದಿದ್ದು ಸುಂದರವಾಗಿದೆ. ನವರಂಗವನ್ನು ಮೂರು ದಿಕ್ಕಿನಿಂದಲೂ ಪ್ರವೇಶಿಸಬಹುದಾಗಿದ್ದು ಇದರ ಅಧಿಷ್ಠಾನದಲ್ಲಿ ವಜ್ರಪಟ್ಟಿಕೆಯ ಅಲಂಕಾರವಿದೆ. ಗರ್ಭಗೃಹದ ಹೊರಭಿತ್ತಿಯಲ್ಲಿ ಸುಂದರವಾದ ಮೂರು ದೇವಕೋಷ್ಠಗಳಿದ್ದು, ಎಲ್ಲವೂ ಬರಿದಾಗಿವೆ. ಮಕರ ಪ್ರನಾಳವನ್ನುಳ್ಳ ಈ ದೇವಾಲಯವು ಸುಂದರ ಕಲಾಕೃತಿಯಾಗಿದ್ದು ಇದನ್ನು ರಾಮೋಜ ಶಿಲ್ಪಿಯ ನೇತೃತ್ವದಲ್ಲಿ ಮಲ್ಲೋಜ, ಬಮ್ಮೋಜ, ಕೊಪ್ಪದ ಮಲ್ಲೋಜ,ಅವರೋಜ ಮುಂತಾದ ೧೨ ಜನ ಓಜರು ನಿರ್ಮಿಸಿದ್ದಾರೆಂದು ಅಲ್ಲೇ ಇರುವ ಶಾಸನ ಪರೋಕ್ಷವಾಗಿ ತಿಳಿಸುತ್ತದೆ. ಈ ದೇಗುಲದ ಎಡಕ್ಕೆ ಪೂರ್ವಾಭಿಮುಖವಾಗಿ ನಿಂತಿರುವ ಸಿದ್ಧೇಶ್ವರ ಗುಡಿಯು ಇದೇ ಮಾದರಿಯ ಇನ್ನೊಂದು ದೇವಾಲಯವಾಗಿದೆ. ಇದು ಮೇಲೆ ಚರ್ಚಿಸಿರುವ ದೇವಾಲಯದ ನಕಲಂತ್ತಿದ್ದು, ಸುಮಾರು ೧೨ನೇ ಶತಮಾನದ ರಚನೆಯೇ ಆಗಿದೆ. ಆದರೆ ಈ ಗುಡಿಯ ಅಂತರಾಳ ಹಾಗೂ ನವರಂಗದಲ್ಲಿ ದೇವ ಕೋಷ್ಠಗಳಿದ್ದು, ಗರ್ಭಗುಡಿ ಹಾಗೂ ಅಂತರಾಳದ ಹೊರಭಿತ್ತಿಗಳು ವಿವಿಧ ಭಂಗಿಯಲ್ಲಿ ನಿಂತಿರುವ ಸುಂದರಿಯರ ಉಬ್ಬು ಶಿಲ್ಪಗಳಿಂದ ಅಲಂಕರಿಸಲ್ಪಟ್ಟಿದ್ದು, ಅರೆಕಂಬಗಳು ರೇಖಾಲಂಕೃತವಾಗಿವೆ. ಗರ್ಭಗೃಹದ ಹೊರಭಿತ್ತಿಯಲ್ಲಿ ಮೂರು ದಿಕ್ಕಲ್ಲೂ ಸುಂದರವಾದ ದೇವಕೋಷ್ಠಗಳಿದ್ದು, ಒಂದರಲ್ಲಿ ಭೈರವನ ಮೂರ್ತಿ ಇದೆ.

ಊರ ದಕ್ಷಿಣಕ್ಕೆ ಸುಮಾರು ಅರ್ಧ ಕಿ. ಮೀ. ದೂರದಲ್ಲಿರುವ ಕಾಳಿಂಗ ದೇವಾಲಯ ಸಂಕೀರ್ಣದ ಮುಂದೆ ಬಲಭಾಗಕ್ಕೆ ಶಿಥಿಲಾವಸ್ಥೆಯಲ್ಲಿರುವ ಕರಿದೇವರ (ಸೂರ್ಯ ನಾರಾಯಣ ಗುಡಿ) ಇದೆ. ಸುಮಾರು ೧೩ನೇ ಶತಮಾನಕ್ಕೆ

ಸೇರಿದ ಇಲ್ಲಿಯ ಶಾಸನವೊಂದು ಜಯಲಿಂಗೇಶ್ವರ ದೇವರ ಪಾದಾರಾಧಕನಾದ ಆದಿತ್ಯ ಭಟ್ಟೋಪಾಧ್ಯಾಯನ ಬಗ್ಗೆ ಹೇಳುತ್ತಿದ್ದು, ಶಾಸನೋಕ್ತ ಜಯಲಿಂಗೇಶ್ವರ ದೇವಾಲಯ ಇದೇ ಇರಬಹುದೆಂಬ ಅನುಮಾನ ಮೂಡುತ್ತದೆ. ಮೂರು ಪ್ರತ್ಯೇಕ ಗರ್ಭಗೃಹ, ತೆರೆದ ಅಂತರಾಳ, ನಡುವೆ ನವರಂಗ ಹಾಗೂ ಅದರಿಂದ ಪೂರ್ವಕ್ಕೆ ಮುಖಮಂಟಪವನ್ನು ಹೊಂದಿದ್ದ ಈ ಭವ್ಯ ತ್ರಿಕೂಟ ದೇವಾಲಯವು ಎತ್ತರವಾದ ಜಗತಿ ಹಾಗೂ ಅಲಂಕೃತ ಅಧಿಷ್ಠಾನದ ಮೇಲೆ ಉತ್ತರಾಭಿಮುಖವಾಗಿ ನಿಂತಿದೆ. ಆದರೆ ಇಂದು ಈ ದೇವಾಲಯದ ಗರ್ಭಗೃಹ ಹಾಗೂ ಅಂತರಾಳ ಭಾಗಗಳಷ್ಟೆ ಭಾಗಶಃ ಉಳಿದಿದ್ದು ತೆರೆದ ನವರಂಗ ಹಾಗೂ ಮುಖಮಂಟಪ ಭಾಗಗಳು ಪೂರ್ಣ ನಾಶವಾಗಿವೆ. ಇಲ್ಲಿಯ ಗರ್ಭಗೃಹದ ಬಾಗಿಲವಾಡಗಳು ಸಪ್ತಶಾಖಾಲಂಕೃತವಾಗಿದ್ದು ಚಿತ್ತಾಕರ್ಷಕವಾಗಿವೆ. ಪ್ರಧಾನ ಗರ್ಭಗೃಹ ಹಾಗೂ ಪೂರ್ವದ ಗರ್ಭಗೃಹಗಳಲ್ಲಿ ಬಲಹರಿ ಹಾಗೂ ಎಡಹರಿ ಶಿವಲಿಂಗಗಳಿದ್ದು, ಇನ್ನೊಂದು ಬಹಳ ಶಿಥಿಲವಾಗಿದ್ದು, ಏನೂ ಉಳಿದಿಲ್ಲ. ಈ ದೇವಾಲಯದ ಹೊರಭಿತ್ತಿಯು ವಿಷ್ಣು, ಬ್ರಹ್ಮ, ಈಶ್ವರ, ಭೈರವ, ನಟರಾಜ, ಉಮಾ-ಮಹೇಶ್ವರ, ಮಹಿಷಮರ್ದಿನಿ, ಗಣಪತಿ, ವಿವಿಧ ಭಂಗಿಯಲ್ಲಿ ನಿಂತ ಶಿಲಾಬಾಲಿಕೆಯರ ಸುಂದರ ಶಿಲ್ಪ ಹಾಗೂ ವೈವಿಧ್ಯಮಯವಾದ ಕಿರುಶಿಖರಗಳಿಂದ ಆಲಂಕೃತಗೊಂಡಿದ್ದು ಆಕರ್ಷಕವಾಗಿದೆ. ಇಲ್ಲಿಯ ಗರ್ಭಗೃಹ ಹಾಗೂ ಅಂತರಾಳದ ಛತ್ತುಗಳು ವಿಶಿಷ್ಟವಾದ ಅಲಂಕಾರಿಕೆಯನ್ನು ಹೊಂದಿವೆ. ಈ ದೇವಾಲಯವು ಆರನೆಯ ವಿಕ್ರಮಾದಿತ್ಯನ ಕಾಲದ ಅಪೂರ್ವ ರಚನೆ ಎಂದು ಹೇಳಬಹುದಾಗಿದೆ. ಈ ಗುಡಿಯ ಬದಿಯಲ್ಲೇ ಇರುವ ಕಾಳೇಶ್ವರ ದೇವಾಲಯವು ಶಾಸನೋಕ್ತ ಸ್ವಯಂಭು ಕಾಳೇಶ್ವರ ದೇಗುಲವಾಗಿದ್ದು, ಇದರ ಮೊದಲ ಉಲ್ಲೇಖ ೧೧೦೦ರ ಶಾಸನದಲ್ಲಿ ಲಭಿಸುತ್ತದೆ. ಇದೊಂದು ದೇಗುಲ ಸಂಕೀರ್ಣವಾಗಿದ್ದು ಇಲ್ಲಿ ಪೂರ್ವಾಭಿಮುಖವಾಗಿರುವ ನೀಲಕಂಠ, ಕಾಳೇಶ್ವರ (ಸ್ವಯಂಭು ಕಾಳೇಶ್ವರ), ರೇವಣ ಸಿದ್ಧೇಶ್ವರ ಹಾಗೂ ಈಶ್ವರ ಗುಡಿ, ಉತ್ತರಾಭಿಮುಖವಾಗಿರುವ ಸೋಮೇಶ್ವರ ಹಾಗೂ ವೀರಭದ್ರ ದೇವಾಲಯಗಳಿದ್ದು ಇವುಗಳಿಗೆಲ್ಲ ಸೇರಿದಂತೆ ವಿಶಾಲವಾದ ತೆರೆದ ಸಭಾಮಂಟಪವಿದೆ. ಬದಿಯಲ್ಲೇ ಪುಷ್ಕರಣಿ ಇದ್ದು, ಅನತಿ ದೂರದಲ್ಲೇ ಹಳ್ಳವಿದೆ. ಇಲ್ಲಿಯ ಶಾಸನೋಕ್ತ ಸೋಮೇಶ್ವರ, ಬಿಬ್ಬೇಶ್ವರ ಹಾಗೂ ಕಾಳೇಶ್ವರ ದೇವಾಲಯಗಳು ಇದೇ ಪರಿಸರದಲ್ಲಿವೆ. ಈ ಗುಡಿಯ ಆವರಣದಲ್ಲಿ ಚತುರ್ಮುಖ ಗಣಪತಿ ಶಿಲ್ಪ, ಕಾರ್ತಿಕೇಯ, ಕಿರಣಸ್ತಂಭ ಹಾಗೂ ವೀರಗಲ್ಲುಗಳಿದ್ದು, ಸೋಮೇಶ್ವರ ದೇಗುಲದಲ್ಲಿ ಬಲಹರಿ ಲಿಂಗವಿದೆ. ಇದೆ ಗುಡಿಯ ಅಂತರಾಳದ ಛಾವಣಿಯಲ್ಲಿ ಕಲ್ಯಾಣದ ಚಾಳುಕ್ಯರ ಕಾಲದ ಶಾಸನ ಕಲ್ಲಿನ ಶಿರೋಭಾಗದಲ್ಲಿ ಆನೆಯ ಸುಂದರ ಶಿಲ್ಪಕೆತ್ತನೆಯಿದೆ. ಇಲ್ಲಿಯ ಸಭಾಮಂಟಪವು ವಿಶಾಲವಾಗಿದ್ದು ಅಂಚಿನುದ್ದಕ್ಕೂ ಕಕ್ಷಾಸನವನ್ನು ಹೊಂದಿದ್ದು, ಛತ್ತುಗಳು ಆಕರ್ಷಕವಾಗಿವೆ. ಈ ದೇವಾಲಯದ ಬದಿಯಲ್ಲೇ ಕಾಶಿವಿಶ್ವನಾಥ ದೇವಾಲಯ, ರಾಮಲಿಂಗ ಹಾಗೂ ನಂದಿ ಗುಡಿಗಳಿದ್ದು, ರಾಮಲಿಂಗನಗುಡಿ ಬಳಿ ಸುಂದರವಾದ ಸೂರ್ಯ ಶಿಲ್ಪವಿದೆ. ಕಾಳಗಿ ಹಳ್ಳದಿಂದ ಉತ್ತರಕ್ಕೆ ಪುಷ್ಕರಣಿಯ ಬಳಿ ಈಶ್ವರ ಗುಡಿಇದ್ದು ನರಸಿಂಹ-ಈಶ್ವರರಿರುವ ಇನ್ನೊಂದು ದೇಗುಲ ಪುಷ್ಕರಣಿಗೆ ಸೇರಿದಂತಿದ್ದು ನಕ್ಷತ್ರಾಕಾರದ ತಳವಿನ್ಯಾಸವನ್ನು ಹೊಂದಿದ್ದು ಸುಂದರವಾಗಿದೆ ಈ ದೇವಾಲಯದ ಬಲ ಬದಿಗೆ ಗರ್ಭಗೃಹ ಹಾಗೂ ಮುಖಮಂಟಪಗಳನ್ನಷ್ಟೇ ಹೊಂದಿರುವ ಸಹಸ್ರಲಿಂಗ ನೇತ್ರೇಶ್ವರ ಗುಡಿಯಿದ್ದು, ಇದರ ಗರ್ಭಗೃಹವು ಆರು ಶಾಖೆಗಳಿಂದ ಅಲಂಕೃತಗೊಂಡ ಬಾಗಿಲ ಚೌಕಟ್ಟನ್ನು ಹೊಂದಿದ್ದು ಆಕರ್ಷಕವಾಗಿದೆ. ಅಂತರಾಳದ ಛತ್ತಲ್ಲಿ ನಕ್ಷತ್ರಾಕಾರದ ಛತ್ರಿಯಿದೆ. ಇಲ್ಲೇ ಶೈವದ್ವಾರಪಾಲಕರ, ರತಿ-ಮನ್ಮಥರ ಬಿಡಿ ಶಿಲ್ಪಗಳಿವೆ. ಊರ ನಡುವೆ ಬನಶಂಕರಿ ದೇವಾಲಯದ ಮುಂದೆ ಶಿಥಿಲಾವಸ್ಥೆಯಲ್ಲಿರುವ ತ್ರಿಕೂಟ ಬಸದಿ ಇದೆ. ಮೂರು ಪ್ರತ್ಯೇಕ ಗರ್ಭಗೃಹ, ತೆರೆದ ಅಂತರಾಳ, ಒಂದೇ ನವರಂಗ ಹಾಗೂ ಮುಖಮಂಟಪಗಳನ್ನುಳ್ಳ ಇದು ಪಾರ್ಶ್ವನಾಥ ಬಸದಿಯಾಗಿದ್ದು ಪ್ರಧಾನ ಗರ್ಭಗೃಹದಲ್ಲಿ ಪಾರ್ಶ್ವನಾಥ ತೀರ್ಥಂಕರನ ಪದ್ಮಾಸೀನ ಶಿಲ್ಪವಿದೆ. ಗರ್ಭಗೃಹದ ಬಾಗಿಲವಾಡಗಳು ತ್ರಿಶಾಖಾಲಂಕೃತವಾಗಿದ್ದು, ಪ್ರಧಾನ ದ್ವಾರಬಂಧವು ಸಪ್ತಶಾಖಾಲಂಕೃತವಾಗಿದೆ. ಉಳಿದೆರಡು ಗರ್ಭಗೃಹಗಳಲ್ಲಿ ಪೀಠಗಳಷ್ಟೇ ಉಳಿದಿವೆ. ನವರಂಗದಲ್ಲಿ ನಾಲ್ಕು ದೇವಕೋಷ್ಠಗಳಿದ್ದು ನಡುವಣ ಕಂಬಗಳು ಸುಂದರವಾಗಿದ್ದು, ಛತ್ತನ್ನು ಕಮಲದಿಂದ ಅಲಂಕರಿಸಲಾಗಿದೆ. ಮುಖಮಂಟಪದಲ್ಲಿ ಕಕ್ಷಾಸನವಿದ್ದು ಮುಂದಿರುವ ಚಂದ್ರಶಿಲೆಯು ಆಕರ್ಷಕವಾಗಿದ್ದು, ಈ ದೇವಾಲಯವು ಸುಮಾರು ೧೧ನೇ ಶತಮಾನದ ರಚನೆಯೆಂದು ಊಹಿಸಬಹುದಾಗಿದೆ. ಈ ಗುಡಿಯ ಬಳಿಯಲ್ಲೇ ಬನಶಂಕರಿ ದೇಗುಲವಿದ್ದು, ಅಲ್ಲಿ ದೇವಿಯ ಆಸೀನ ಶಿಲ್ಪವಿದೆ. ಊರ ಹೊರಗೆ ಇರುವ ಹನುಮಂತನ ಗುಡಿಯಲ್ಲಿ ಸುಮಾರು ೧೦ ಅಡಿ ಎತ್ತರ, ಆರು ಅಡಿ ಅಗಲದ ಗಣಪತಿಯ ಬೃಹತ್ ಶಿಲ್ಪವಿದೆ. ಅಲ್ಲೇ ಗುಡಿಯ ಮುಂದೆ ಪೀಠಸ್ಥ ಚತುರ್ಮುಖ ಬ್ರಹ್ಮನ ಶಿಲ್ಪವಿದೆ. ೧೯೮೭ರಲ್ಲಿ ಇಲ್ಲಿಂದ ವರದಿಯಾಗಿರುವ ಎರಡು ಅಡಿ ಉದ್ದ ಮತ್ತು ಒಂದಡಿ ಅಗಲವಿರುವ ಫಲಕದ ತುಂಡೊಂದರ ಮೇಲಿರುವ ಮೂವರು ಮಹಿಳೆಯರು, ಜಿಂಕೆ, ಗಿಳಿ ಹಾಗೂ ಹೂವುಗಳ

ರೇಖಾಚಿತ್ರಗಳು ವಿದೇಶಿ ಅಂಶಗಳನ್ನು ಒಳಗೊಂಡಿದ್ದು, ಪ್ರಾಯಶಃ ರೋಮನ್ನರೊಂದಿಗಿದ್ದ ಸಂಪರ್ಕವನ್ನು ಇದು ಸೂಚಿಸುತ್ತದೆಂಬ ಅಭಿಪ್ರಾಯವಿದ್ದು, ಈಗ ಇದು ಗುಲಬರ್ಗಾ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದಲ್ಲಿದೆ. ಉಳಿದಂತೆ ಊರಲ್ಲಿ ಹಲವಾರು ನವೀನ ದೇವಾಲಯಗಳಿದ್ದು, ಮಸೀದಿ ಹಾಗೂ ದರ್ಗಾ ಕೂಡ ಇವೆ. **ಭರತನೂರು** (೬೩೮) ಕಾಳಗಿಯಿಂದ ಪೂರ್ವಕ್ಕೆ ಎರಡೂವರೆ ಕಿ. ಮೀ. ದೂರದಲ್ಲಿದ್ದು ನೆರೆಯ ಕಾಳಗಿಯ ಸುಮಾರು ೧೩ನೇ ಶತಮಾನದ ಶಾಸನವೊಂದು ಕಾಳಗಿಯ ಜಯಲಿಂಗೇಶ್ವರ ದೇವರಿಗೆ ಭರತನೂರಲ್ಲಿ ೪೦ ಮತ್ತರು ಭೂಮಿಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುವುದರೊಂದಿಗೆ ಭರತನೂರಿನ ಪ್ರಾಚೀನತೆಯನ್ನು ಅಷ್ಟು ಹಿಂದಕ್ಕೆ ಕೊಂಡೊಯ್ಯುತ್ತದೆ. ಆದರೆ ಭರತನೂರಲ್ಲಿ ಸುಮಾರು ೧೨ನೇ ಶತಮಾನಕ್ಕೆ ಸೇರಿದ ಭೈರವ-ಭೈರವಿ, ಗಣಪತಿ, ಮಹಿಷಮರ್ದಿನಿ ಹಾಗೂ ಪೀಠಸ್ಥ ಚತುರ್ಮುಖ ಬ್ರಹ್ಮ ಶಿಲ್ಪಗಳಿದ್ದು ಮತ್ತೇನೂ ಉಳಿದಿಲ್ಲ. ಇಲ್ಲಿಯ ಗುರುನಂಜೇಶ್ವರ ಶಿವಯೋಗಿ ವಿರಕ್ತ ಮಠವು ಸುಮಾರು ೧೫೦ ವರ್ಷ ಹಳೆಯದಿದ್ದು, ಗುರುನಂಜೇಶ್ವರರ ಸಮಾಧಿ ಇಲ್ಲಿದೆ. ಈ ಮಠದ ಆವರಣದಲ್ಲಿ ಐದು ಅಡಿ ಎತ್ತರದ ಸುಮಾರು ೧೩ನೇ ಶತಮಾನಕ್ಕೆ ಸೇರಿದ ವೀರಗಲ್ಲಿದ್ದು ವಿಶಿಷ್ಟವಾಗಿದೆ. ಉಳಿದಂತೆ ಊರಲ್ಲಿ ಚೌಡಮ್ಮ , ಬನಶಂಕರಿ ಹಾಗೂ ಹನುಮಂತನ ನವೀನ ಗುಡಿಗಳಿವೆ. **ರಾಜಾಪೂರ** (೧೭೬೩)ವು ಕಾಳಗಿಯಿಂದ ಪೂರ್ವಕ್ಕೆ ಐದು ಕಿ. ಮೀ. ದೂರದಲ್ಲಿದ್ದು ಸುಮಾರು ೧೨ನೇ ಶತಮಾನಕ್ಕೆ ಸೇರಿದ ಭೋಗಲಿಂಗೇಶ್ವರ ದೇವಾಲಯವಿಲ್ಲಿದೆ. ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿರುವ ಈ ಗುಡಿಯ ನವರಂಗದ ಎಡಕ್ಕೆ ಒಂದು ಗರ್ಭಗೃಹವಿದ್ದು, ಅಲ್ಲಿ ಹಿಂದೆ ಅಷ್ಟಭುಜವುಳ್ಳ ಭೈರವನ ಆಸೀನ ಶಿಲ್ಪವಿದ್ದು, ಇಂದು ಹೊರಗೆ ಇಡಲ್ಪಟ್ಟಿದೆ. ಈ ಗುಡಿಯ ಆವರಣದಲ್ಲಿ ಎರಡು ಸಪ್ತಮಾತೃಕಾ ಶಿಲ್ಪ, ಸರಸ್ವತಿ ಹಾಗೂ ಆದಿತ್ಯ ಪೀಠಗಳಿವೆ. ಈ ದೇವಾಲಯದ ಗರ್ಭಗೃಹದ ಶಿಖರವು ಔತ್ತರೇಯ ಶೈಲಿಯಲ್ಲಿದೆ. ಇಲ್ಲಿಯ ರಾಮಲಿಂಗೇಶ್ವರ ಗುಡಿಯು ಪ್ರಾಚೀನದ್ದಾಗಿದ್ದು, ಇಂದು ಶಿಥಿಲಾವಸ್ಥೆಯಲ್ಲಿದೆ. ಉಳಿದಂತೆ ಊರಲ್ಲಿ ಗುಬ್ಬಿನಾಥ ಹಾಗೂ ಹನುಮಂತನ ಗುಡಿಗಳಿದ್ದು ಮೈಲಾರಲಿಂಗನ ಗುಡಿ ಬಳಿ ಮೈಲಾರ-ಮಾಳಚಿಯರ ಸುಂದರ ಶಿಲ್ಪಗಳಿವೆ.

**ಕಿಣ್ಣಿಸಾದಕ್** (೧೪೪೮) ತಾಲೂಕು ಕೇಂದ್ರವಾದ ಗುಲಬರ್ಗಾದಿಂದ ಉತ್ತರಕ್ಕೆ ೪೫ ಕಿ. ಮೀ., ದೂರದಲ್ಲಿರುವ ಗಡಿಗ್ರಾಮವಾಗಿದ್ದು, ಊರಿಂದ ಸುಮಾರು ಎರಡು ಕಿ. ಮೀ., ದೂರದಲ್ಲಿ, ಗುಲಬರ್ಗಾ ರಸ್ತೆಯಲ್ಲಿರುವ ವಿಶಿಷ್ಟವಾದ ನಿಸರ್ಗ ಶಿಲಾವಿನ್ಯಾಸದಿಂದಾಗಿ ಆಕರ್ಷಕವಾಗಿದ್ದು, ಶಿಲಾಯುಗ ಮಾನವರ ಅವಶೇಷಗಳು ಲಭಿಸುವ ಸಾಧ್ಯತೆಗಳಿವೆ.

**ಕುಳಗೇರಿ** (೨೦೭೨)ಯು ತಾಲೂಕು ಕೇಂದ್ರವಾದ ಜೇವರ್ಗಿಯಿಂದ ನೈಋತ್ಯಕ್ಕೆ ೫೫ ಕಿ.ಮೀ., ಶಹಾಪುರದಿಂದ ೪೦ ಕಿ. ಮೀ., ಸಿಂಧಗಿಯಿಂದ ಆಗ್ನೇಯಕ್ಕೆ ೪೨ ಕಿ.ಮೀ ದೂರದಲ್ಲಿ, ಸಿಂಧಗಿ-ಶಹಾಪುರ ರಸ್ತೆಯಲ್ಲಿ ನಾಗರಹಳ್ಳಿ ತಾಂಡ ಅಡ್ಡರಸ್ತೆಯಿಂದ ನೈಋತ್ಯಕ್ಕೆ ಸುಮಾರು ನಾಲ್ಕು ಕಿ. ಮೀ. ಅಂತರದಲ್ಲಿರುವ ಚಾರಿತ್ರಿಕ ಮಹತ್ವದ ಊರಾಗಿದೆ. ಪೌರಾಣಿಕವಾಗಿ ಚಂದ್ರಹಾಸನ ರಾಜಧಾನಿ ಕುಂತಳಪುರ ಇದೆಂಬ ನಂಬಿಕೆ ಸ್ಥಳೀಕರಲ್ಲಿದೆ. ಪ್ರಾಚೀನ ಶಾಸನಗಳಲ್ಲಿ ಕುಳಿಲಂಗೆರೆ, ಕುಣಿಲಂಗೆರೆ, ಸರ್ವನಮಸ್ಯದ ಅಗ್ರಹಾರ ಕುಣಿಲಂಗೆರೆ, ಭತ್ತಗ್ರಾಮ ಕುಣಿಲಂಗೆರೆ ಎಂದೇ ಉಲ್ಲೇಖಿತಗೊಂಡಿದ್ದು, ಪ್ರಮುಖ ವಿದ್ಯಾಕೇಂದ್ರ ಹಾಗೂ ಮಹಾಘಟಿಕಾಸ್ಥಾನವಾಗಿದ್ದ ಈ ಊರು, ಹಿಂದೆ ಹಗರಟಗಿ-೩೦೦ಕ್ಕೆ ಸೇರಿದ್ದು, ಇಲ್ಲಿಂದ ಈವರೆಗೆ ೨೬ ಶಾಸನಗಳು ವರದಿಯಾಗಿವೆ. ಈ ಊರಲ್ಲಿ ಎಲ್ಲೆಂದರಲ್ಲಿ ಚದುರಿಕೊಂಡಿರುವ ಈ ಶಾಸನಗಳಲ್ಲಿ ೨೪ ಕಲ್ಯಾಣದ ಚಾಳುಕ್ಯ ಅರಸರ ಕಾಲದ್ದಾಗಿವೆ. ಇವುಗಳಲ್ಲಿ ೧೦೫೨ರ ಶಾಸನ ಬಿಬ್ಬೇಶ್ವರದ ತಪೋಧನರು ಮತ್ತು ಮಾಣಿಗಳಿಗೆಂದು ದಾನ ಕೊಟ್ಟ ವಿಷಯವನ್ನು ತಿಳಿಸಿದರೆ ಜಗದೇಕಮಲ್ಲನ ಕಾಲಕ್ಕೆ ಸೇರಿದ ಶಾಸನವೊಂದು ರೆಬ್ಬರಸರ ಸಾಮಂತ ಸಿಂಗನದಾಸಿಯು ಕುಳಿಲಂಗೆರೆಯಲ್ಲಿ ತಾನು ಮಾಡಿಸಿದ ಸರ್ವೇಶ್ವರ ದೇವರ್ಗೆ, ಅಲ್ಲಿ ಓದುವ, ಕೇಳ್ವ ತಪೋಧನರಿಗೆಂದು ದಾನ ಕೊಟ್ಟ ವಿಷಯವನ್ನು ತಿಳಿಸುತ್ತ ಬಿಬ್ಬೇಶ್ವರ ದೇವರನ್ನೂ ಹೆಸರಿಸುತ್ತದೆ. ಇಲ್ಲಿಯ ೧೦೮೮ರ ಶಾಸನವು ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಗೆ ಸೇರಿದ್ದು ರುದ್ರೇಶ್ವರದೇವರಿಗೆ ಮಹಾಜನರ ಸಮ್ಮುಖದಲ್ಲಿ ಇರೆಯೂರಗೌಂಡ ಕೆರೆಯನೂರನ್ನು ಧರ್ಮ ಬಿಟ್ಟ ವಿಷಯನ್ನು ತಿಳಿಸಿದರೆ ೧೧೨೫ರ ಮತ್ತೊಂದು ಶಾಸನ ಈ ದೇವರ್ಗೆ ವರ್ತಕರು ಹಲವಾರು ಸುಂಕಗಳನ್ನು ದಾನ ಬಿಟ್ಟಿದ್ದನ್ನು ಹೇಳುತ್ತದೆ. ಇಲ್ಲಿಯ ೧೧೦೦ರ ಎರಡು ಶಾಸನಗಳು ಬಹಳ ಹಾಳಾಗಿದ್ದು, ಯುವರಾಜ ಮಲ್ಲಿಕಾರ್ಜುನ ಹಾಗೂ ರಾಣಿ ಮಾಳಲದೇವಿಯರನ್ನು ಹೆಸರಿಸಿ, ಇದು ರಾಣಿಯ ಭತ್ತಗ್ರಾಮವಾಗಿತ್ತೆಂದೂ ಹೇಳುತ್ತದೆ. ಇಲ್ಲಿಯ ಜೋಕುಮಾರ ಬಾವಿಯ ಬಳಿ ನಿಂತಿರುವ ೧೧೦೫ರ ಶಾಸನವು ಆರನೆಯ ವಿಕ್ರಮಾದಿತ್ಯನ

ಸಹೋದರಿ ಮಾಳಲದೇವಿಯು ಚಂದ್ರಾದೇವಿಯ ಸನ್ನಿಧಾನದಲ್ಲಿ (ಸನ್ನತಿಯ ಚಂದಲಪರಮೇಶ್ವರಿ) ತ್ರಿಭುವನಮಲ್ಲನ ತುಲಾಭಾರ ಮಹೋತ್ಸವ ಸಂದರ್ಭದಲ್ಲಿ ತನ್ನ ಆಳ್ವಿಕೆಯಲ್ಲಿದ್ದ ಭತ್ತಗ್ರಾಮ ಕುಣಿಲಂಗೆರೆಯ ಹಂಪಕವಿಯ ಮಗ ಮಹಾದೇವಣ್ಣನಿಗೆ ಹೊಕ್ಕಣೆಯ ಧರ್ಮವಾಗಿ ಮಾಗಿಣಿಗೆರೆಯ ೪೮ ಗೇಣ ಕೋಲಲ್ಲಿ ಭೂಮಿಯನ್ನು ದಾನ ಕೊಟ್ಟ ಸಂದರ್ಭದಲ್ಲಿ ಬಮ್ಮದೇವರಸನು ಹೊಕ್ಕರಣೆಯ ಬಾವಿಯ ಕೇಶವದೇವರ್ಗೆ ಭೂದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಇಲ್ಲಿಯ ನಾಗೇಶ್ವರ ದೇವಾಲಯದ ಮುಂದಿರುವ ಆರನೇಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ ೧೦೮೦ರ ಶಾಸನವು ದಂಡನಾಯಕ ಮಹಾವಿಷ್ಣು ದೇವರಸರು ಕುಣಿಲಂಗೆರೆಯ ಹಿರಿಯ ಸ್ಥಾನದ ನಾಗೇಶ್ವರ, ಭೋಗೇಶ್ವರ ಹಾಗೂ ರಾಮೇಶ್ವರ ದೇವರ ಸ್ಥಾನಾಚಾರ್ಯರಾದ ನಾಗರಾಶಿಪಂಡಿತರಿಗೆ ವಿವಿಧ ಸುಂಕಗಳನ್ನು ದಾನ ಬಿಟ್ಟ ಸಂದರ್ಭದಲ್ಲಿ ದೂರದ ಧಾರವಾಡ ಜಿಲ್ಲೆಯ ತಿಳಿವಳ್ಳಿ, ಕೋಣಗಿರಿ, ಸವಣೂರು, ಮುಂತಾದ ಊರುಗಳ ಗಾತ್ರಿಕರನ್ನೊಳಗೊಂಡ ತಂಬುಲಿಗ - ಸಾಸಿರ್ವರು ದೇವರ ನೈವೇದ್ಯಕ್ಕೆಂದು ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಇಲ್ಲಿ ಇನ್ನೊಂದು ಶಾಸನ ಯಾದವ ಇಮ್ಮಡಿ ಜೈತುಗಿದೇವನ ಆಳ್ವಿಕೆಯ ಎರಡನೇ ವರ್ಷ (೧೧೯೪) ದ್ದಾಗಿದ್ದು, ವಿವಿಧ ವರ್ತಕರು ಒಂದಾಗಿ ಕುಣಿಲಂಗೆರೆಯ ನಾಗರಾಸಿ ಪಂಡಿತರ ನಾಗೇಶ್ವರ ದೇವರ್ಗೆ, ರಾವಿಸೆಟ್ಟಿಯ ರಾಮೇಶ್ವರ ದೇವರ್ಗೆ ಮತ್ತು ಭೋಗಿ ಸೆಟ್ಟಿಯ ಭೋಗೇಶ್ವರ ದೇವರುಗಳಿಗೆಂದು ವಿವಿಧ ಸುಂಕಗಳನ್ನು ದಾನ ಬಿಟ್ಟ ಸಂದರ್ಭದಲ್ಲಿ ಅರಸನ ಅಧಿಕಾರಿಗಳು ಅರವಟ್ಟಿಗೆಗೆಂದು ದಾನ ಕೊಟ್ಟ ವಿಷಯವನ್ನು ಹೇಳುತ್ತ ಭೂ ಮಾಪನಕ್ಕೆ ಬಳಸುತ್ತಿದ್ದ ಮೈಳಬ್ಬೇಶ್ವರ ಕೋಲನ್ನು ಉಲ್ಲೇಖಿಸಿದೆ. ಇಲ್ಲಿಯ ಇನ್ನೊಂದು ಶಾಸನ ಯಾದವ ಅರಸ ಮಹಾದೇವನದಾಗಿದ್ದು ೧೨೬೫ರಲ್ಲಿ ಮಹಾಮಂಡಳೇಶ್ವರ ಗಣಪತಿ ದೇವರಸರೂ ಸೇರಿದಂತೆ ಹಲವಾರು ಅಧಿಕಾರಿಗಳು ಕೂಡಿ ಕುಣಿಲಂಗೆರೆಯ ಮಹಾಘಟಿಕಾಸ್ಥಾನದ ಅಮಿತಲಿಂಗ ವಿಶಪ್ರಹಾರಿ ನಾಗೇಶ್ವರ-ಬಿಬ್ಬೇಶ್ವರ ದೇವರ ಆಚಾರ್ಯ ಎಳಮೇಲ ಸಿಂಹಪರ್ಷೆ ಮಂಡಳಿಯ ಶಿಷ್ಯರಾದ ಸೋಮೇಶ್ವರ ದೇವರಿಗೆ ೩೦೦ ಮತ್ತರು ಹೊಲ, ಒಂದು ತೋಟ, ನಾಲ್ಕು ಗಾಣ ಹಾಗೂ ಮೂರು ಕೇರಿಯ ಆಯಗಳನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಈ ದೇವಾಲಯದ ಬಲಬದಿಯಲ್ಲಿ ಬಿದ್ದಿರುವ ಅನೇಕ ಶಾಸನಗಳಿಂದ ಹೆಚ್ಚಿನ ವಿವರ ಲಭಿಸುವುದಿಲ್ಲ, ಸುಮಾರು ೧೨ನೇ ಶತಮಾನಕ್ಕೆ ಸೇರಿದ ಇಲ್ಲಿಯ ಮತ್ತೊಂದು ಶಾಸನ ಚಲ್ವೇಸ್ವರ ದೇವರ ಕೇರಿಯ ಬಗ್ಗೆ ಉಲ್ಲೇಖಿಸಿದರೆ, ಇನ್ನೊಂದು ಮೂಲಸ್ಥಾನದ ದೇವರನ್ನು ಹೆಸರಿಸುತ್ತದೆ. ಮತ್ತೊಂದು ಶಾಸನ ಭೈರವ ದೇವರಿಗೆ ಬೀರವಣವನ್ನು ದಾನ ಕೊಟ್ಟ ವಿಷಯವನ್ನು ತಿಳಿಸಿದರೆ ಉಳಿದವು ಅಸ್ಪಷ್ಟವಾಗಿವೆಯಾದರೂ, ಹಿಂದೆ ಈ ಊರು ಪ್ರಮುಖ ವ್ಯಾಪಾರಿ ಕೇಂದ್ರವೂ ಆಗಿತ್ತೆಂಬ ಅಂಶವನ್ನು ತಿಳಿಸುತ್ತವೆ. ಇಲ್ಲಿಂದ ಈವರೆಗೆ ಮೂರು ಜೈನ ಶಾಸನಗಳು ವರದಿಯಾಗಿದ್ದು ಎಲ್ಲವೂ ನಿಶಿಧಿ ಶಾಸನಗಳಾಗಿದ್ದು ಜೈನ ದೇಗುಲವಿದ್ದ ಸ್ಥಳ ಇಂದು ಬಟ್ಟ ಬಯಲಾಗಿದೆ. ಈ ಶಾಸನಗಳಲ್ಲಿ ೧೧೩೮ ಹಾಗೂ ೧೧೫೭ರ ಶಾಸನಗಳು ಕ್ರಮವಾಗಿ ನರೇಂದ್ರ ಕೀರ್ತಿ ಮುನೀಂದ್ರ ಮತ್ತು ಅವರ ಶಿಷ್ಯ ಕನಕನಂದಿ ಮುನೀಂದ್ರರ ಸಮಾಧಿ ಮರಣಗಳನ್ನು ದಾಖಲಿಸುತ್ತವೆ. ಇಲ್ಲಿಯ ಇನ್ನೊಂದು ಜಿನ ಶಾಸನವು ಕನಕಸಿರಿಯವ್ವೆಯ ಸಮಾಧಿ ಮರಣವನ್ನು ದಾಖಲಿಸುತ್ತ ಈ ನಿಶಿಧಿ ಪ್ರತಿಮೆಯನ್ನು ಮಾಧವನು ಮಾಡಿಸಿದನೆಂದು ಹೇಳುತ್ತದೆ.

ಊರ ಪ್ರವೇಶದಲ್ಲಿರುವ ನಾಗೇಶ್ವರ ದೇವಾಲಯ(ದೈತ್ಯರ ಗುಡಿ)ವೇ ಶಾಸನೋಕ್ತ ನಾಗೇಶ್ವರ ದೇವಾಲಯವಾಗಿದ್ದು, ಸುಮಾರು ೧೧ನೇ ಶತಮಾನದ ಪೂವಾರ್ಧ ಭಾಗದ ಕಲ್ಯಾಣದ ಚಾಳುಕ್ಯ ಶೈಲಿಯ ರಚನೆಯಾಗಿದೆ. ಪೂರ್ವಾಭಿಮುಖವಾಗಿರುವ ಈ ದೇಗುಲ ಮೇಲ್ನೋಟಕ್ಕೆ ತ್ರಿಕೂಟವೆಂದೆನಿಸುತ್ತದೆಯಾದರೂ ಏಕಕೂಟವಾಗಿದೆ. ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿರುವ ಈ ಗುಡಿಯ ನವರಂಗದ ಉತ್ತರ ಮತ್ತು ದಕ್ಷಿಣ ಬದಿಯಲ್ಲಿ ಒಂದೊಂದಂಕಣದ ತೆರೆದ ಮಂಟಪಗಳಿದ್ದು ಅವು ಇಂದು ಒಂದಾಗಿವೆಯಾದರೂ ಹಿಂದೆ ಬ್ರಹ್ಮ ಹಾಗೂ ವಿಷ್ಣು ಮೂರ್ತಿಗಳಿದ್ದ ಸ್ಥಳಗಳಾಗಿರಬೇಕು. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ದ್ವಾರಬಂಧವು ಪಂಚಶಾಖೆಗಳನ್ನು ಹೊಂದಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಇದೆ. ಇದರಲ್ಲಿರುವ ಒಂದೆರಡು ಮಿಥುನ ಶಿಲ್ಪ ಕೆತ್ತನೆಗಳು ಗಮನಾರ್ಹವಾಗಿದ್ದು, ಬುಡದಲ್ಲಿ ಪೂರ್ಣ ಕುಂಭವಿದೆ. ಅಂತರಾಳದ ಅಡ್ಡ ತೊಲೆಯನ್ನು ಅಲಂಕರಿಸಿರುವ ಮಕರ ತೋರಣವು ಬ್ರಹ್ಮ ಮಹೇಶ್ವರ, ವಿಷ್ಣು ಕೆತ್ತನೆಗಳನ್ನು ಹೊಂದಿದ್ದು ಸುಂದರವಾಗಿದೆ. ಅಂತರಾಳದ ಇಕ್ಕೆಲಗಳಲ್ಲಿ ಆಳೆತ್ತರದ ಸುಂದರವಾದ ಚೌರಿಧಾರಿ ಪರಿಚಾರಿಕೆಯರ ಶಿಲ್ಪಗಳಿದ್ದು, ಆಕರ್ಷಕವಾಗಿವೆ. ನವರಂಗದಲ್ಲಿರುವ ದೇವಕೊಷ್ಠಗಳಲ್ಲಿ ಉಮಾ-ಮಹೇಶ್ವರ ಮುಂತಾದ ಶಿಲ್ಪಗಳಿವೆ. ಅಲ್ಲೇ ಚತುರ್ಭುಜಧಾರಿ ಅನಂತ ಪದ್ಮನಾಭನ ಸುಂದರ ಶಿಲ್ಪವಿದೆ. ನವರಂಗದ ಪ್ರಧಾನ ದ್ವಾರವು

ಸಪ್ತಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಇದೆ. ಈ ದೇವಾಲಯದಲ್ಲಿ ರಾಷ್ಟ್ರಕೂಟರ ಪ್ರಭಾವವಿನ್ನೂ ಹಚ್ಚ ಹಸಿರಾಗಿರುವುದನ್ನು ಗುರುತಿಸಬಹುದಾಗಿದೆ. ದೇವಾಲಯದ ಹೊರಭಿತ್ತಿಯ ಮೇಲೆ ಯತಿಗಳು, ವಾಮನ, ವಿಷ್ಣು, ನಟರಾಜ, ಅರ್ಜುನ, ವರಾಹ, ವೀಣಾಧಾರಿ ಶಿವ, ಭೈರವಿ, ಮುಂತಾದ ಉಬ್ಬುಶಿಲ್ಪಗಳಿದ್ದು, ಸುಂದರವಾದ ಸಪ್ತಮಾತೃಕಾ ಪಟ್ಟಿಕೆಯೂ ಇದೆ. ಹುಡೆದ ಗುಡಿ ಎಂದು ಕರೆಯಲ್ಪಡುವ ಈಶ್ವರ ಗುಡಿಯನ್ನು ಕಾವಲು ಗೋಪುರವು ಆವರಿಸಿ ನಿಂತಿದೆ. ಪೂರ್ವಾಭಿಮುಖವಾಗಿರುವ ಈ ಗುಡಿಯು ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು ಸುಮಾರು ೧೨ನೆಯ ಶತಮಾನದ ರಚನೆಯಾಗಿದೆ.

ನಾಯಕವಾಡಿ ಓಣಿಯಲ್ಲಿ 'ದೇಗುಲ' ಎಂದೇ ರೂಢಿಯಲ್ಲಿರುವ ಪ್ರಾಚೀನ ದೇವಾಲಯವಿದ್ದು, ಇದೊಂದು ದ್ವಿಕೂಟವಾಗಿದೆ. ಪೂರ್ವ-ಪಶ್ಚಿಮಾಭಿಮುಖವಾಗಿರುವ ಈ ಗುಡಿಯು ಗರ್ಭಗೃಹ, ತೆರೆದ ಅಂತರಾಳ, ತೆರೆದ ನವರಂಗ ಹಾಗೂ ಮುಚ್ಚಿದ ಅರ್ಧಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಭಾಗಿಲವಾಡವು ಪಂಚಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಇದೆ. ಅಂತರಾಳದ ತೊಲೆಯನ್ನು ಸುಂದರವಾದ ಮಕರತೋರಣದಿಂದ ಅಲಂಕರಿಸಲಾಗಿದೆ. ತೆರೆದ ನವರಂಗದ ಅಂಚಿನುದ್ದಕ್ಕೂ ಕಕ್ಷಾಸನವಿದೆ. ನವರಂಗದ ಪೂರ್ವದಲ್ಲಿರುವ ಮಂಟಪವನ್ನು ಸುಂದರವಾದ ಕಮಲ ಬಳ್ಳಿ ವಿನ್ಯಾಸದಿಂದ ಕೂಡಿದ ಜಾಲಂಧ್ರ ಪಟ್ಟಿಕೆಗಳಿಂದ ಮುಚ್ಚಿದ್ದು, ಇದರ ದ್ವಾರಬಂಧವೂ ಚಿತ್ತಾಕರ್ಷಕವಾದ ಪಂಚಶಾಖಾಲಂಕೃತ ಪಟ್ಟಿಕೆಗಳಿಂದ ಕೂಡಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಇದೆ. ಇದರೊಳಗಿರುವ ದೇವಕೋಷ್ಠದಲ್ಲಿ ಸೂರ್ಯಪೀಠವಿದೆ. ದೇವಕೋಷ್ಠವು ಉಗ್ರನರಸಿಂಹನ ವಿಶಿಷ್ಟ ಕೆತ್ತನೆಯ ಪ್ರಭಾವಳಿಯನ್ನು ಹೊಂದಿದ್ದು, ಇಕ್ಕೆಲದಲ್ಲಿ ಉಷೆ, ಪ್ರತ್ಯುಷೆಯರಿದ್ದಾರೆ. ಇಲ್ಲಿದ್ದ ಸೂರ್ಯ ಶಿಲ್ಪವಿಂದು ಕಣ್ಮರೆಯಾಗಿದೆ. ಕಕ್ಷಾಸನದ ಹಿಮ್ಮುಖವು ನೃತ್ಯ ಭಂಗಿಯಲ್ಲಿರುವ ನರ್ತಕಿಯರ ಸುಂದರ ಶಿಲ್ಪಗಳನ್ನು ಹೊಂದಿದೆ. ಈ ದೇವಾಲಯದ ಛಾವಣಿಯು ಚಪ್ಪಟೆಯಾಗಿದ್ದು, ಇಳಿಜಾರಾದ ಅಂಚನ್ನು ಹೊಂದಿದೆ. ನವರಂಗದ ಉತ್ತರ-ದಕ್ಷಿಣ ಭಾಗಗಳಿಂದ ಗುಡಿಯನ್ನು ಪ್ರವೇಶಿಸಬಹುದಾಗಿದ್ದು, ಶಾಸನೋಕ್ತ ಚಲ್ಲೇಶ್ವರ ಗುಡಿ ಇದೇ ಇರಬಹುದೆಂದು ತೋರುತ್ತದೆ. ಊರ ಪಶ್ಚಿಮ ಭಾಗದಲ್ಲಿರುವ ಎತ್ತರವಾದ ದಿನ್ನೆ ಪ್ರದೇಶವನ್ನು 'ಜುಟ್ಟ ದೇವರ ಗುಡಿ' ಎಂದು ಸ್ಥಳೀಯವಾಗಿ ಕರೆಯುತ್ತಿದ್ದು, ಇಂದು ಆಯತಾಕಾರದ ಭವ್ಯ ಕಟ್ಟಡದ ತಳ ವಿನ್ಯಾಸವಷ್ಟೇ ಉಳಿದಿದೆ. ಪ್ರಾಯಶಃ ಇದೇ ಹಿಂದೆ ಘಟಿಕಾಸ್ಥಾನವಿದ್ದ ಸ್ಥಳವಾಗಿದ್ದಂತೆ ತೋರುತ್ತದೆ.

ಊರ ಹೊರಗೆ ಗರ್ಭಗೃಹವಷ್ಟೆ ಉಳಿದಿರುವ ಭೀಮಾಶಂಕರಗುಡಿ ಇದ್ದು ಇದರ ಅಂತರಾಳ, ನವರಂಗ ಭಾಗಗಳು ನಶಿಸಿ ಹೋಗಿವೆ. ಊರ ಹಳ್ಳದಾಚೆ ಬಾಬುರಾವ್ ಕುಲಕರ್ಣಿ ಅವರ ತೋಟದಲ್ಲಿರುವ ಹೊಂಡದ ಪಶ್ಚಿಮ ಭಾಗದಲ್ಲಿ ಪೂರ್ವಾಭಿಮುಖವಾಗಿ ನಿಂತಿರುವ ಮೂರು ದೇವಾಲಯಗಳಿದ್ದು ಉಳಿದೊಂದು ದಕ್ಷಿಣಾಭಿಮುಖವಾಗಿದೆ. ಮೊದಲ ಮೂರು ದೇಗುಲಗಳು ಗರ್ಭಗೃಹ ಹಾಗೂ ಅರ್ಧಮಂಟಪಗಳಿಂದ ಕೂಡಿದ್ದರೆ, ಉಳಿದೊಂದು, ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ಇವುಗಳಲ್ಲಿ ಶಿವಲಿಂಗ-ನಂದಿಗಳಿದ್ದು ಇವುಗಳ ಶಿಖರ ಕದಂಬನಾಗರ ಶೈಲಿಯಲ್ಲಿವೆ. ಊರಿಂದ ಸುಮಾರು ಎರಡು ಕಿ. ಮೀ. ದೂರದಲ್ಲಿ ಜೀರ್ಣೋದ್ಧಾರಗೊಂಡಿರುವ ಬೆಣ್ಣೆಬಸವೇಶ್ವರ ಗುಡಿ ಇದ್ದು, ಇಲ್ಲಿ ಪ್ರಾಚೀನ ದೇವಾಲಯದ ಅವಶೇಷಗಳು ಹರಡಿಕೊಂಡಿವೆ. ಇಲ್ಲಿಯ ಭೈರವ ಶಿಲ್ಪ ಭವ್ಯತೆಯ ಪ್ರತೀಕವಾಗಿದ್ದು, ಶಾಸನೋಕ್ತ ಭೈರವ ಇವನೆಂದೇ ತೋರುತ್ತದೆ. ಉಳಿದಂತೆ ಊರಲ್ಲಿ ಹನುಮಂತ, ಪರಮಾನಂದ, ಹುಡೆದ ಲಕ್ಷ್ಮಮ್ಮ ನಡಗೇರಪ್ಪ, ಕಾಳಿಕಾ, ದ್ಯಾಮವ್ವ ಹಾಗೂ ಮರಗಮ್ಮನ ಗುಡಿಗಳಿದ್ದು ದರ್ಗಾ ಹಾಗೂ ಮಸೀದಿಗಳಿವೆ.

**ಕೆಂಭಾವಿ** (೧೦,೧೧೫) ಯು ತಾಲೂಕು ಕೇಂದ್ರವಾದ ಸುರಪುರದಿಂದ ವಾಯವ್ಯಕ್ಕೆ ೩೦ ಕಿ.ಮೀ. ದೂರದಲ್ಲಿದ್ದು, ಪ್ರಾಚೀನ ಶಾಸನಗಳಲ್ಲಿ 'ಕೆಂಭಾವಿ' ಎಂದೆ ಉಲ್ಲೇಖಿತಗೊಂಡಿದ್ದು, ಆರಂಭದಲ್ಲಿ ಇದು ೧೨ ಹಳ್ಳಿಗಳ, ನಂತರದಲ್ಲಿ ೨೪ ಹಳ್ಳಿಗಳ ಆಡಳಿತ ಕೇಂದ್ರವಾಗಿದ್ದು, ಬಸವಪೂರ್ವಯುಗದ ಶರಣ ಭೋಗಣ್ಣನ ಹುಟ್ಟೂರಾಗಿರುವುದು, ಇದರ ಮತ್ತೊಂದು ವಿಶೇಷವಾಗಿದೆ. ಮೇಲಾಗಿ ವಿಜಯನಗರ ಸಾಮ್ರಾಟ ಕೃಷ್ಣದೇವರಾಯನು ಆದಿಲ್ ಶಾಹಿಗಳ ಮೇಲೆ ಗೆಲುವು ಪಡೆದದ್ದು ಇಲ್ಲೇ. ಇಲ್ಲಿಂದ ಈವರೆಗೆ ಕನ್ನಡದ ಎಂಟು ಹಾಗೂ ಪರ್ಷಿಯನ್ ಭಾಷೆಯ ಎರಡು ಶಾಸನಗಳು ವರದಿಯಾಗಿದ್ದು, ಇವುಗಳಲ್ಲಿ ಹರಿಜನ ಕೇರಿಯಲ್ಲಿರುವ ಎರಡು ಶಾಸನಗಳು ನೆರೆಯ ಯಾಳಗಿ ಗ್ರಾಮಕ್ಕೆ ಸಂಬಂಧಿಸಿದ್ದಾಗಿವೆ. ರೇವಣಸಿದ್ಧೇಶ್ವರ ದೇವಾಲಯದ ಆವರಣದಲ್ಲಿರುವ ಶಾಸನವು ಕಲ್ಯಾಣದ ಚಾಳುಕ್ಯ ಅರಸ ಒಂದನೆಯ ಸೋಮೇಶ್ವರನ ಕಾಲದ್ದಾಗಿದ್ದು,

ಇವನ ಮಹಾಮಂಡಳೇಶ್ವರನಾದ ದೇವರಸನ ರಾಣಿಯಾದ ಮಾಳಿಯಬ್ಬರಸಿಯು ೧೧೫೪ರಲ್ಲಿ ಮಾಳಿಬೇಶ್ವರ ದೇವಾಲಯವನ್ನು ನಿರ್ಮಿಸಿ, ದೇವರ ಪೂಜಾವಿಧಿಗೆ, ಅಲ್ಲಿಯ ಮಠದಲ್ಲಿ ಓದುವ ವಿದ್ಯಾರ್ಥಿಗಳಿಗೆ ಹಾಗೂ ತಪೋಧನರ ಜೀವಿತಕ್ಕೆಂದು ರಾಜಧಾನಿ ಕೆಂಭಾವಿಯ ಮೂಡಲ ಹೊಲದಲ್ಲಿ ೧೦೦೦ ಮತ್ತರು ಭೂಮಿಯನ್ನೂ, ಅಲ್ಲಿಯ ಬನದೇವರ ನೈವೇದ್ಯಕ್ಕೆಂದು ನಾಲ್ಕು ಮತ್ತರು ಭೂಮಿಯನ್ನು ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಅಲ್ಲದೆ ಸಗರ-೩೦೦ ರ ನಗನೂರು ಹಾಗೂ ಕೆಂಭಾವಿ-೨೪ಕ್ಕೆ ಸೇರಿದ ಕರಡಿಕಲ್ಲು ಮತ್ತು ಕೂಡಲಗೆಗಳನ್ನು ಮನ್ನೆಯ ಸಾಮ್ಯ ಸಹಿತ ದತ್ತಿ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಪೋಲೀಸ್ ಪಾಟೀಲರ ಗಿರಣಿ ಕಟ್ಟೆಗೆ ಸೇರಿ ಹೋಗಿರುವ ೧೧೫೭ರ ಶಾಸನವು ಮಹಾಮಂಡಳೇಶ್ವರ ರೇವರಸರ ಆಳ್ವಿಕೆಯಲ್ಲಿ ಚಾವುಂಡೇಶ್ವರ ಶಿವಾಲಯದ ಆರ್ಚಾರ್ಯರಾದ ಕಿಟ್ಟಿಗಾವೆಯ ಶಿವಲಿಂಗ ಭಟ್ಟಾರಕರ ಅಗ್ರಶಿಷ್ಯರಾದ ಕಾಳೇಶ್ವರ ಪಂಡಿತರಿಗೆ ಪೂಜೆ-ಪುರಸ್ಕಾರಕ್ಕೆ ಹಾಗೂ ತಪೋಧನರಿಗೆಂದು ಕಾಸಬ್ಬೆಯು ದಾನ ಕೊಟ್ಟ ಅಂಶವನ್ನು ತಿಳಿಸುತ್ತದೆ. ಪುರೋಹಿತರ ಬಾವಿಯ ಕಟ್ಟೆ ಬಳಿಯಿರುವ ೧೩೪೦ ರ ನಿಷಿದಿ ಶಾಸನವು ಕುಂದಕುಂದಾನ್ವಯದ ಚಂದ್ರದೇವನಂದಿಯ ನಿಷಿಧಿಕಾ ಸ್ತಂಭವನ್ನು ಹೊನಗುಂದದ ಮಹಾಪ್ರಭು ಹಾಗೂ ಇನ್ನಿತರರು ನಿಲ್ಲಿಸಿದರೆಂದು ಹೇಳಿದರೆ ಅಲ್ಲಿಯ ಇನ್ನೊಂದು ಶಾಸನವೂ ನಿಷಿಧಿಗೆಯಾಗಿದ್ದು ಕುಂದಕುಂದಾನ್ವಯದ ಮಲಧಾರಿ ದೇವನನ್ನು ಹೆಸರಿಸುತ್ತದೆ. ಇದರಿಂದ ಕೆಂಭಾವಿಯು ಕೇವಲ ಶೈವ ಕೇಂದ್ರವಷ್ಟೇ ಆಗಿರದೆ ಪ್ರಮುಖ ಜೈನ ಕೇಂದ್ರವೂ ಆಗಿತ್ತೆಂಬ ಅಂಶ ವೇದ್ಯವಾಗುತ್ತದೆ. ಬಸವಣ್ಣನ ಗುಡಿ ಬಳಿಯಿರುವ ಪರ್ಷಿಯನ್ ಶಾಸನವು ಮುಸ್ಲಿಂ ಅರಸರದಾಗಿದ್ದು, ೧೫೫೯ರಲ್ಲಿ ಮಸೀದಿ ಹಾಗೂ ದರ್ಗಾಗಳನ್ನು ಹಾಜಿಯು ನಿರ್ಮಿಸಿ, ಅವುಗಳ ನಿರ್ವಹಣೆಗೆಂದು ಮಳಿಗೆಗಳನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತಾ ಯೂಸುಫನ ಮಗನಾದ ಹಾಜ ಹುಸೇನ್ ಇದನ್ನು ಬರೆದನೆಂದು ಹೇಳುತ್ತದೆ. ಇಲ್ಲಿಯ ದರವಂತರ ಬಾವಿ ಬಳಿಯಿರುವ ಮತ್ತೊಂದು ಪರ್ಷಿಯನ್ ಶಾಸನ ಸಾರ್ವಜನಿಕರ ಉಪಯೋಗಕ್ಕಾಗಿ ಬಾವಿಯನ್ನು ನಿರ್ಮಿಸಿ ೩೦ ಬಿಘಾ ಭೂಮಿಯನ್ನು ಶ್ರಮಪಟ್ಟು ಸಾಗುವಳಿಗೆ ಮಾರ್ಪಡಿಸಿ, ಬಾವಿಯಲ್ಲಿ ನೀರೆತ್ತುವ ಸೇವಕರ ವೆಚ್ಚ ಭರಿಸುವ ಸಲುವಾಗಿ ಉಂಬಳಿ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಮಸೀದಿ ಹಾಗೂ ದರ್ಗಾಗಳನ್ನು ಬಿಟ್ಟು ಉಳಿದ ಪ್ರಾಚೀನ ಸ್ಮಾರಕಗಳು ಸಂಪೂರ್ಣ ಇಲ್ಲವೇ ಭಾಗಶಃ ನಾಶವಾಗಿರುವುದರಿಂದ ಶಾಸನೋಕ್ತ ದೇವಾಲಯಗಳನ್ನು ಗುರುತಿಸಲು ಬಾರದಂತಾಗಿದೆ.

ಪ್ರಾಯಶಃ ಹಿಂದೆ ರಾಜಧಾನಿ ಕೆಂಭಾವಿಯ ಹೃದಯವಾಗಿದ್ದ ಇಂದಿನ ರೇವಣ ಸಿದ್ಧೇಶ್ವರ ದೇವಾಲಯವೇ ಶಾಸನೋಕ್ತ ಮಾಳಿಬೇಶ್ವರ ದೇವಾಲಯವಾಗಿರುವಂತೆ ತೋರುತ್ತದೆ. ಹಿಂದೆ ಬೃಹತ್ತಾದ, ಕಲಾತ್ಮಕವಾದ ದೇವಾಲಯವಾಗಿದ್ದ ಇದು ಇಂದು ಬಹುಪಾಲು ನಾಶಗೊಂಡು ಬಟ್ಟಬಯಲಾಗಿದೆ. ಈ ದೇವಾಲಯವು ಚತುರ್ ಕೂಟ ದೇಗುಲವಾಗಿದ್ದು, ನಾಲ್ಕು ದಿಕ್ಕಲ್ಲೂ ಗರ್ಭಗೃಹ ಹಾಗೂ ತೆರೆದ ಅಂತರಾಳಗಳನ್ನು ಹೊಂದಿದ್ದು, ಎಲ್ಲಕ್ಕೂ ಸೇರಿದಂತೆ ಒಂದೇ ತೆರೆದ ನವರಂಗವಿದ್ದು, ಈಗ ಅಲ್ಲೂ ನಡುವೆ ಒಂದು ಶಿವಲಿಂಗವಿದೆ. ಈ ದೇವಾಲಯದ ಪಶ್ಚಿಮ ಭಾಗದ ಗರ್ಭಗೃಹ ಹಾಗೂ ಅಂತರಾಳಗಳು ಸುಸ್ಥಿತಿಯಲ್ಲಿದ್ದು ದಕ್ಷಿಣಭಾಗದ್ದು ಭಾಗಶಃ ಹಾಳಾಗಿದ್ದು ಉಳಿದೆರಡೂ ದಿಕ್ಕಿನ ವಾಸ್ತುರಚನೆಗಳು ಪೂರ್ಣ ನಾಶಗೊಂಡಿವೆ. ಸುಸ್ಥಿತಿಯಲ್ಲಿರುವ ಗರ್ಭಗೃಹ ಭಾಗದಲ್ಲಿ ಇತ್ತೀಚಿನ ಲಿಂಗವಿದ್ದು, ಬಟ್ಟಬಯಲಾಗಿರುವ ಉಳಿದ ಮೂರು ಗರ್ಭಗೃಹಗಳಲ್ಲಿ ಪ್ರಾಚೀನ ಶಿವಲಿಂಗಗಳಿವೆ. ಜೊತೆಗೆ ನವರಂಗದಲ್ಲೂ ಮುಕ್ಕಾದ ಬೃಹತ್ತಾದ ಎರಡು ಶಿವಲಿಂಗಗಳಿವೆ. ಗರ್ಭಗೃಹಗಳ ಬಾಗಿಲವಾಡಗಳು ಪಂಚಶಾಖಾಲಂಕೃತವಾಗಿದ್ದು, ಗಂಗಾ, ಯಮುನಾ, ಚೌರಿಧಾರಿಯರು ಹಾಗೂ ಶೈವದ್ವಾರಪಾಲಕರನ್ನು ಹೊಂದಿದ್ದು, ಲಲಾಟದಲ್ಲಿಯ ಗಜಲಕ್ಷ್ಮಿಯ ಕೆತ್ತನೆಗಳು ಆಕರ್ಷಕವಾಗಿವೆ. ಪಶ್ಚಿಮ ಭಾಗದ ಅಂತರಾಳದ ಅಡ್ಡತೊಲೆಯಾಗಿರುವ ಮಕರ ತೋರಣ ಪಟ್ಟಿಕೆಯು ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಹೊಂದಿದ್ದು ಚಿತ್ತಾಕರ್ಷಕವಾಗಿದೆ. ಕೆಳಗೆ ಬಿದ್ದಿರುವ ಮತ್ತೊಂದು ಮಕರ ತೋರಣ ಪಟ್ಟಿಕೆಯಲ್ಲಿ ನಟರಾಜ, ಗಜಚರ್ಮಾಂಬರಧಾರಿ ಶಿವ ಹಾಗೂ ಉಗ್ರ ನರಸಿಂಹನ ಕೆತ್ತನೆ ಇದ್ದು, ನಯನಮನೋಹರವಾಗಿದೆ. ಕಕ್ಷಾಸನವನ್ನು ಹೊಂದಿದ್ದ ಈ ದೇವಾಲಯದ ತೆರೆದ ನವರಂಗವನ್ನು ಹೊತ್ತು ನಿಂತಿದ್ದ ಕಂಬಗಳಿಂದು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದು, ನವರಂಗದ ಆವರಣದಲ್ಲಿ ನಂದಿ, ಗಣಪ ಮುಂತಾದ ಭಗ್ನ ಶಿಲ್ಪಗಳಿದ್ದು, ಪಶ್ಚಿಮ ಭಾಗದ ಅಂತರಾಳದ ಇಕ್ಕೆಲಗಳಲ್ಲಿ ನಿಂತಿರುವ ದ್ವಾರಪಾಲಕರ ಆಳುದ್ದದ ಶಿಲ್ಪಗಳು ನಮ್ಮ ಗಮನ ಸೆಳೆಯುತ್ತವೆ. ಅಲ್ಲೇ ಲಲಿತಾಸನದಲ್ಲಿ ಕುಳಿತಿರುವ ದುರ್ಗಿಯ ಚತುರ್ಭುಜ ಶಿಲ್ಪವಿದ್ದು ಅದೂ ಮುಕ್ಕಾಗಿದೆ. ಗಾತ್ರದಲ್ಲಿ ಹಿರಿದಾಗಿದ್ದ ಈ ಗುಡಿಯ ಇಂದಿನ ಸ್ಥಿತಿಯನ್ನು ನೋಡಿದರೆ, ಈ ದೇವಾಲಯದ ನಿರ್ಮಾಣ ನಡುವೆಯೇ ತಟಸ್ಥಗೊಂಡಿತೇನೋ ಎಂದೆನಿಸಿದರೂ ಅಲ್ಲಿ ಚದುರಿ ಬಿದ್ದಿರುವ ಶಿಲ್ಪಾವಶೇಷಗಳಿಂದ ಇದು ನಾಶವಾಗಿರುವಂತೆ ತೋರುತ್ತದೆ. ಬಜಾರ್‌ನಲ್ಲಿ ಇರುವ ಹನುಮಂತನ ಗುಡಿಯು ಕಲ್ಯಾಣದ ಚಾಳುಕ್ಯರ ಕಾಲದ ಎರಡು ಮಾದರಿಯ

ಕಂಬಗಳನ್ನು ಬಳಸಿಕೊಂಡು ನಿರ್ಮಿತಗೊಂಡಿರುವ ನಂತರದ ದೇವಾಲಯವಾಗಿದ್ದು, ಇದರ ಮುಂದಿರುವ ಬಸವಣ್ಣನ ಗುಡಿಯು ಸುಮಾರು ೧೧-೧೨ನೇ ಶತಮಾನದಾದ್ದರೂ ಹಾಳಾಗಿದ್ದು, ಶಿಥಿಲಾವಸ್ಥೆಯಲ್ಲಿದೆ. ಊರ ಹೊರಗೆ ಸುರಪುರ ರಸ್ತೆಯಲ್ಲಿರುವ ಭೋಗೇಶ್ವರ ದೇವಾಲಯವು ಶರಣ ಭೋಗಣ್ಣನ ಐಕ್ಯ ಸ್ಥಳವೆಂಬ ನಂಬಿಕೆ ಇದ್ದು ಇದೊಂದು ದ್ವಿಕೂಟವಾಗಿದೆ. ಕಿರುಕೆರೆಯ ನಡುವೆ ಇರುವ ಈ ದೇಗುಲ ಪೂರ್ವ-ಪಶ್ಚಿಮವಾಗಿದ್ದು ಎರಡು ಗರ್ಭಗೃಹ, ತೆರೆದ ಅಂತರಾಳಗಳನ್ನು ಒಳಗೊಂಡಿದ್ದು ಎರಡನ್ನೂ ಒಗ್ಗೂಡಿಸಿದ್ದಾರೆ. ಗರ್ಭಗೃಹಗಳ ಬಾಗಿಲವಾಡಗಳು ಪಂಚಶಾಖೆಗಳಿಂದ ಅಲಂಕೃತಗೊಂಡಿದ್ದು ಕಲ್ಯಾಣದ ಚಾಳುಕ್ಯರ ಕಾಲದ್ದಾಗಿದ್ದು ಎರಡರಲ್ಲೂ ಶಿವಲಿಂಗಗಳಿವೆ. ಜಲಾವೃತ್ತವಾಗಿರುವ ಈ ಗುಡಿಯನ್ನು ಪ್ರವೇಶಿಸಲು ಪ್ರಾಚೀನ ಸೇತುವೆ ಇದ್ದು, ಗರ್ಭಗೃಹಗಳ ಶಿಖರಗಳು ಇತ್ತೀಚಿನದಾಗಿವೆ. ಪೂರ್ಣ ಜೀರ್ಣೋದ್ಧಾರಗೊಂಡಿರುವ ಈ ಗುಡಿಯ ಪ್ರತಿಬಿಂಬವನ್ನು ನೀರಲ್ಲಿ ಮುಸ್ಸಂಜೆಯ ಇಳಿಬಿಸಿಲಲ್ಲಿ ಕಾಣಬಹುದಾಗಿದ್ದು ಅದೊಂದು ವಿಶಿಷ್ಟ ಅನುಭವವನ್ನು ನೀಡುತ್ತದೆ. 'ನಿಜಗುರು ಭೋಗ ಸಂಗ' ಎಂಬ ಅಂಕಿತದೊಂದಿಗೆ ಭೋಗಣ್ಣನು ಬರೆದಿರುವ ಸುಮಾರು ೨೨ ವಚನಗಳು ಈವರೆಗೆ ಲಭಿಸಿವೆ. 'ಶಿರಸ್ಸು ಪವಾಡ' ಮೆರೆದ ಶರಣ ಆಳಂದದ ಏಕಾಂತದ ರಾಮಯ್ಯನ ರುಂಡವನ್ನು ಕೆಂಭಾವಿಯ ಭೋಗೇಶ್ವರ ದೇವರ ಸನ್ನಿಧಾನಕ್ಕೂ ತಂದಿದ್ದ ಅಂಶವನ್ನು ಅಬ್ಬಲೂರು ಚರಿತೆ ದಾಖಲಿಸಿದೆ. 'ಭೂ ವರಾಹ ರಘುಪತಿ ವಿಠಲ' ಎಂಬ ಮುದ್ರಿಕೆಯೊಂದಿಗೆ ಹರಿ ಕೀರ್ತನಾ ಪದಗಳನ್ನು ರಚಿಸಿದ ದಾಸಾಚಾರ್ಯ (ಸುಮಾರು ೧೭೮೦)ರು ಇಲ್ಲಿಯವರೆಂಬ ಅಭಿಪ್ರಾಯವಿದೆ. ಆದಿಲ್ ಷಾಹಿ ಕಾಲದ ಹಲವಾರು ಮುಸ್ಲಿಂ ಸ್ಮಾರಕಗಳು ಇಲ್ಲಿವೆ. ಅವುಗಳಲ್ಲಿ ಖುದಾಭಕ್ಷ್, ಫಕ್ರುದ್ದೀನ್, ಝಾಫರುದ್ದೀನ್, ಮೊಯಿನುದ್ದೀನ್ ಮುಂತಾದ ಖಾಜಿಗಳ ಗುಮ್ಮಟಗಳು ಪ್ರಮುಖವಾಗಿವೆ. ಇಸ್ಲಾಂ ಧರ್ಮದ ಸಾಧ್ವಿ ಶಿರೋಮಣಿ ಜಚ್ಚಾ ಮಾಸಾಬಿಯ ದರ್ಗಾ ಹಿಂದು-ಮುಸ್ಲಿಂ ಜನರಿಗೆ ಆರಾಧನಾ ಕೇಂದ್ರವಾಗಿದೆ. ಉಳಿದಂತೆ ಊರಲ್ಲಿ ಈಶ್ವರ, ಶರಣಬಸವೇಶ್ವರ, ರಾಮಲಿಂಗೇಶ್ವರ, ಕಾಳಿಕಾ, ಮಾರಿಕಾಂಬ, ತೋಟದ ಮಾನ್ಯ ದೇವರು ಮುಂತಾದ ನವೀನ ದೇವಸ್ಥಾನಗಳಿದ್ದು, ಲೋಕೋಪಯೋಗಿ ಇಲಾಖೆಯ ವಿಶ್ರಾಂತಿ ಗೃಹವಿದೆ.

**ಕೆಲ್ಲೂರು** (೧೪೯೭) ತಾಲೂಕು ಕೇಂದ್ರವಾದ ಜೇವರ್ಗಿಯಿಂದ ದಕ್ಷಿಣಕ್ಕೆ ಏಳು ಕಿ. ಮೀ. ದೂರದಲ್ಲಿ ಜೇವರ್ಗಿ-ಸುರಪುರ ರಸ್ತೆಯಲ್ಲಿದೆ. ಊರ ಪ್ರವೇಶದಲ್ಲಿ ಹಾಗೂ ವಜ್ರಮ್ಮನ ಗುಡಿಗೆ ಹೋಗುವ ದಾರಿಯಲ್ಲಿ ಶಾತವಾಹನರ ಕಾಲದ ಮುಕ್ಕಾದ (ಪದ್ಮಾಸೀನ ಬುದ್ಧನ ರೇಖಾಚಿತ್ರ) ಶಿಲ್ಪಾವಶೇಷಗಳನ್ನು ಗಮನಿಸಿದ್ದು, ಮೊದಲ ಬಾರಿಗೆ ಇಲ್ಲಿ ದಾಖಲಿಸಲಾಗಿದೆ. ಪ್ರಾಚೀನ ಶಾಸನಗಳಲ್ಲಿ ಕೆಲವೂರು ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಸಗರನಾಡಿನ ಕಂಪಣ ನರಿಯಂಬೊಳೆ-೭೦ಕ್ಕೆ ಸೇರಿದ್ದು, ಇಲ್ಲಿಂದ ಈವರೆಗೆ ಕಲ್ಯಾಣದ ಚಾಳುಕ್ಯರ ಆಳ್ವಿಕೆಗೆ ಸಂಬಂಧಿಸಿದ ಮೂರು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಗಿರಿಮಲ್ಲಿಕಾರ್ಜುನ ಗುಡಿಯ ಬಳಿಯಿರುವ ೧೧೦೨ರ ಶಾಸನವು ಇಲ್ಲಿಯ ತಿಕೇಶ್ವರ ದೇವರ ಪೂಜೆ ಪುರಸ್ಕಾರಕ್ಕೆಂದು ಕೆಲವೂರ ಪ್ರಭು ಆಯಿತರಸರ ಮುತಗಾವುಂಡನು ಬೆಂಕೊಳ್ವನ ಕೋಲಲ್ಲಿ ೧೨ ಮತ್ತರು ಭೂಮಿ ಹಾಗೂ ಒಂದು ನಿವೇಶನಗಳನ್ನು ದಾನ ಕೊಟ್ಟ ವಿಷಯವನ್ನು ತಿಳಿಸಿದರೆ, ಊರ ಬಾವಿಯ ಬಳಿಯಿರುವ ೧೧೨೭ರ ಶಾಸನವು ಕೆಲವೂರ ರೆಯ್ಯಸೆಟ್ಟಿ ನಿರ್ಮಿಸಿದ ಭಾವಿಯ ಧರ್ಮಕ್ಕೆಂದು ಮಹಾಮಂಡಳೇಶ್ವರ ಅಲ್ಲಪುಲಿಯರಸರು ೨೧ ಗೇಣ ಕೋಲಲ್ಲಿ ೧೨ ಮತ್ತರು ಭೂಮಿಯನ್ನು ದಾನಬಿಟ್ಟ ವಿಷಯವನ್ನು ತಿಳಿಸುತ್ತದೆ. ಊರ ಹೆದ್ದಾರಿ ಬಳಿಯಿರುವ ೧೧೭೭ರ ಶಾಸನವು ಮಹಾಮಂಡಳೇಶ್ವರ ಅಲ್ಲಹುಲಿದೇವರಸರು ಸರ್ವನಮಸ್ಯದ ಅಗ್ರಹಾರ ಆವರವಾಡಿಯ (ಅವರಾದಿ) ೧೪೨ ಮಹಾಜನರ ಸಮ್ಮುಖದಲ್ಲಿ ಕೆಲವೂರ ಶ್ರೀ ಸಿದ್ಧಸಾತೇಶ್ವರ ದೇವರ ಸೇವೆಗೆಂದು ವಾಸಣ್ಣಯ್ಯನಿಗೆ ಭೂಮಿಯನ್ನು ದಾನ ಬಿಟ್ಟ ವಿಷಯನ್ನು ತಿಳಿಸುತ್ತದೆ. ಊರಲ್ಲಿಂದು ಸುಮಾರು ೧೨ನೇ ಶತಮಾನಕ್ಕೆ ಸೇರಿದ ಜಟಾಧರಲಿಂಗೇಶ್ವರ ಹಾಗೂ ಗಿರಿಯ ಮಲ್ಲಿಕಾರ್ಜುನ ದೇವಾಲಯಗಳು ಊರ ಪ್ರವೇಶದಲ್ಲೇ ಅಕ್ಕಪಕ್ಕದಲ್ಲಿವೆ. ಜಟಾಧರಲಿಂಗೇಶ್ವರ ಗುಡಿಯು ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಗರ್ಭಗೃಹದಲ್ಲಿ ಶಿವಲಿಂಗವಿದೆ. ಇದರ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದ್ದು, ಸರಳವಾಗಿದೆ. ಇದರ ಬದಿಯಲ್ಲೇ ಇರುವ ಗಿರಿಮಲ್ಲಿಕಾರ್ಜುನ ದೇವಾಲಯವು ಹಿಂದೆ ತ್ರಿಕೂಟವಾಗಿದ್ದು ಈಗ ದ್ವಿಕೂಟಗಳಷ್ಟೇ ಇವೆ. ಗರ್ಭಗೃಹಗಳಲ್ಲಿ ಶಿವಲಿಂಗಗಳಿದ್ದು ನವರಂಗದ ಮುಂಭಾಗಕ್ಕೆ ಕಕ್ಷಾಸನವಿದೆ. ನವರಂಗದ ಕಂಬಗಳು ರೇಖಾ ಚಿತ್ರಗಳನ್ನು ಹೊಂದಿದ್ದು, ಶಿಖರಗಳು ಶಿಥಿಲವಾಗಿವೆ. ೧೧೦೨ರ ಶಾಸನ ಇಲ್ಲೇ ಇರುವುದರಿಂದ ಇವುಗಳಲ್ಲೊಂದು ಶಾಸನೋಕ್ತ ತಿಕೇಶ್ವರ ಗುಡಿಯೆಂದು ಭಾವಿಸಬಹುದಾಗಿದೆ.

ಊರ ಹೊರಗೆ ಇರುವ ವಜ್ರಮ್ಮನ ಗುಡಿ ೧೧೨೬ರ ಶಾಸನ ಹೇಳುವ ರೆಯ್ಯಸೆಟ್ಟಿ ನಿರ್ಮಿಸಿದ ಬಾವಿಯಾಗಿದ್ದು ಇಲ್ಲಿರುವ ಜಲದೇವತಾ ಶಿಲ್ಪವನ್ನು ವಜ್ರಮ್ಮನೆಂದು ಸ್ಥಳೀಕರು ವಿಶೇಷವಾಗಿ ನಡೆದುಕೊಳ್ಳುತ್ತಾರೆ. ಉಳಿದಂತೆ ಊರಲ್ಲಿ ಎಲ್ಲಮ್ಮ, ದ್ಯಾಮವ್ವ, ಪಾಲಕಮ್ಮ, ಲಕ್ಕಮ್ಮ , ಹನುಮಂತ, ಹಿರೊಡೆ, ಬೀರದೇವ,ಕಾಶಿಲಿಂಗ, ಶರಣಬಸವೇಶ್ವರ ಹಾಗೂ ಚರಬಸವೇಶ್ವರರ ಗುಡಿಗಳಿದ್ದು, ಚರಬಸವೇಶ್ವರರ ಜಾತ್ರೆಯು ಯುಗಾದಿಯಾದ ಐದು ದಿನಕ್ಕೆ ನಡೆಯುತ್ತದೆ. ಇಲ್ಲಿ ಮಸೀದಿ ಹಾಗೂ ದರ್ಗಾ ಕೂಡ ಇವೆ.

**ಕೇಶ್ವಾರ (ಗಡಿ)** (೨೪೯೬) ವು ತಾಲೂಕು ಕೇಂದ್ರವಾದ ಚಿಂಚೋಳಿಯಿಂದ ನೈಋತ್ಯಕ್ಕೆ ೨೫ ಕಿ. ಮೀ., ಸೇಡಂನಿಂದ ಉತ್ತರಕ್ಕೆ ೨೫ ಕಿ. ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಊರಾಗಿದ್ದು, ಸುಲೇಪೇಟೆ ಹಾಗೂ ರಾಯಕೋಡ ನಡುವೆ ಇದೆ. ಸುಮಾರು ಎಂಟನೆಯ ಶತಮಾನದಿಂದ ೧೪ನೇ ಶತಮಾನಕ್ಕೆ ಸೇರಿದ ಐದು ಶಾಸನಗಳು ಇಲ್ಲಿಂದ ಈವರೆಗೆ ವರದಿಯಾಗಿವೆ. ಇವುಗಳಲ್ಲಿ ಪಾಳು ಸಿದ್ಧಪ್ಪನ ಗುಡಿ ಬಳಿಯಿರುವ ಸುಮಾರು ಎಂಟನೆಯ ಶತಮಾನದ ತ್ರುಟಿತ ಶಾಸನವು ಬ್ರಹ್ಮಚಾರಿಗಳಿಗೆ ದತ್ತಿಕೊಟ್ಟ ಅಂಶವನ್ನು ಹೇಳಿದರೆ, ಹನುಮಂತನ ಗುಡಿ ಮುಂದಿರುವ ಸುಮಾರು ಒಂಭತ್ತನೆಯ ಶತಮಾನದ ವೀರಗಲ್ಲು ಶಾಸನ ಬಹಳ ಸವೆದಿದ್ದು ತುರುಗೋಳನ್ನು ದಾಖಲಿಸಿರುವಂತೆ ತೋರುತ್ತದೆ. ಇಲ್ಲಿಯ ಇನ್ನೊಂದು ವೀರಗಲ್ಲೂ ಇದೆ ಸ್ಥಿತಿಯಲ್ಲಿದೆ. ಜೀರ ಭಾವಿ ಬಳಿಯಿರುವ ಸು ೧೧ನೇ ಶತಮಾನಕ್ಕೆ ಸೇರಿದ ಇನ್ನೊಂದು ಶಾಸನ ಬಮ್ಮಸೆಟ್ಟಿಯ ಮರಣವನ್ನು ದಾಖಲಿಸಿದರೆ, ಕುಂಬಾರ ದೇಗುಲದ ಶಾಸನ ಮಾಘನಂದಿಯ ಶಿಷ್ಯನಾದ ಮತಿಸೆಟ್ಟಿಯು ಕೇಶವಪುರದ ಪಾರ್ಶ್ವನಾಥನ ಚೈತ್ಯಾಲಯವನ್ನು ೧೩೮೫ರಲ್ಲಿ ಪುನರ್ ಜೀರ್ಣೋದ್ಧಾರ ಮಾಡಿದ ವಿಷಯವನ್ನು ದಾಖಲಿಸುತ್ತದೆ.

ಊರ ನಡುವೆ ಇರುವ ಮಲ್ಲಿಕಾರ್ಜುನ ದೇವಾಲಯದ ಗರ್ಭಗೃಹ ಹಾಗೂ ತೆರೆದ ಅಂತರಾಳಗಳಷ್ಟೆ ಉಳಿದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಇದರ ದ್ವಾರಬಂಧವು ಆರುಶಾಖೆಗಳಿಂದ ಅಲಂಕೃತಗೊಂಡಿದ್ದು ಇಕ್ಕೆಲದಲ್ಲಿ ಶೈವದ್ವಾರಪಾಲಕರಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಇದೆ. ಇದು ಸುಮಾರು ೧೧ನೇ ಶತಮಾನದ ರಚನೆಯಾಗಿದ್ದು,ಇದರ ತಳವಿನ್ಯಾಸವು ಬಹುಕೋನಾಕಾರದ್ದಾಗಿದ್ದು ಶಿಖರವು ಶಿಥಿಲಗೊಂಡಿದ್ದು ಭಿತ್ತಿಗಳು ನಿರಾಡಂಬರವಾಗಿವೆ. ಕುಂಬಾರ ಓಣಿಯಲ್ಲಿರುವ ದೇಗುಲವು ಸುಮಾರು ೧೦-೧೧ನೇ ಶತಮಾನದ ಚೈತ್ಯಾಲಯವಾಗಿದ್ದು ಮುಖಮಂಟಪದಲ್ಲಿ ಇರುವ ಸುಮಾರು ೧೧ನೇ ಶತಮಾನದ ಶಾಸನ ಮಸಣಯ್ಯನು ಈ ಪಾರ್ಶ್ವನಾಥ ಚೈತ್ಯಾಲಯವನ್ನು ನಿರ್ಮಿಸಿದನೆಂದು ತಿಳಿಸಿದರೆ, ೧೩೮೫ರ ಇನ್ನೊಂದು ಶಾಸನ ಇದರ ಪುನರ್ ಜೀಣೋದ್ಧಾರದ ಬಗ್ಗೆ ಹೇಳುತ್ತದೆ. ಪೂರ್ವಾಭಿಮುಖವಾಗಿರುವ ಈ ಬಸದಿಯು ಗರ್ಭಗೃಹ, ತೆರೆದ ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದ್ದು, ಇಂದು ಪಾಳು ಬಿದ್ದಿದೆ. ಊರ ನಡುವೆ ಇರುವ ಕೇಶವನಾರಾಯಣಗುಡಿಯು ಪೂರ್ಣ ಜೀರ್ಣೋದ್ಧಾರಗೊಂಡಿದ್ದು ಆಯಾತಾಕಾರದ ಗರ್ಭಗೃಹ ಹಾಗೂ ಮುಖಮಂಟಪಗಳನ್ನು ಹೊಂದಿದ್ದು ಗರ್ಭಗೃಹದಲ್ಲಿ ಕೇಶವ-ನಾರಾಯಣನ ಮೂರ್ತಿ ಇದೆ. ಇದರ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದ್ದು, ಗಜಲಕ್ಷ್ಮಿ ಇದ್ದು ಮುಖಮಂಟಪದಲ್ಲಿ ಸುಖಾಸನಗಳಿವೆ. ಊರ ಹೊರಗೆ ಇರುವ ಸಿದ್ಧೇಶ್ವರ ಗುಡಿಯು ಉತ್ತರಾಭಿಮುಖವಾಗಿದ್ದು ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು ಪಾರ್ಶ್ವದ್ವಾರವಿದೆ. ಗರ್ಭಗೃಹ ಖಾಲಿಯಿದ್ದು ನವರಂಗದಲ್ಲಿ ಬಲಹರಿ ಶಿವಲಿಂಗವಿದೆ. ನವರಂಗದ ಉತ್ತರಕ್ಕೆ ಒಂದಂಕಣದ ಮಂಟಪವಿದ್ದು ಇಲ್ಲಿಂದಲೂ ಪ್ರವೇಶವಿದೆ. ಚಪ್ಪಟೆಯಾದ ಛಾವಣಿಯನುಳ್ಳ ಈ ಗುಡಿ ಸುಮಾರು ೧೦-೧೧ನೇ ಶತಮಾನದ ರಚನೆಯಾಗಿದೆ. ಇದರ ಬಳಿಯೆ ಇರುವ ಕರಿದೇವರ ದೇಗುಲ ದ್ವಿಕೂಟವಾಗಿದ್ದು ಎದುರು ಬದುರಾಗಿ ಎರಡು ಗರ್ಭಗೃಹ ಹಾಗೂ ತೆರೆದ ಅಂತರಾಳಗಳನ್ನು ಹೊಂದಿದ್ದು ನಡುವೆ ಇರುವ ನವರಂಗ ಇವನ್ನು ಒಗ್ಗೂಡಿಸಿದೆ. ಇದನ್ನು ಪ್ರವೇಶಿಸಲು ಎರಡು ದಿಕ್ಕಿನಿಂದಲೂ ದ್ವಾರಗಳಿವೆ. ನಿರಾಡಂಬರವಾದ ಭಿತ್ತಿಯನ್ನುಳ್ಳ ಈ ಗುಡಿ ಸುಮಾರು ೧೦-೧೧ನೇ ಶತಮಾನದ ದೇಗುಲವಾಗಿದೆ. ಇಲ್ಲಿಯ ಲಿಂಗದೇವರ ಗುಡಿ ೧೧ನೇ ಶತಮಾನದ್ದಾಗಿದ್ದು ಪಾಳು ಬಿದ್ದಿದೆ. ಅದೆ ರೀತಿ ಸಂಗಮನಾಥ ಗುಡಿಯು ನಂದಿಯನ್ನು ಹೊಂದಿದ್ದು ಕದಂಬ ನಾಗರ ಶಿಖರ ಉಳಿದಿದೆ. ಅಗಸಿ ಬಾಗಿಲ ಲಕ್ಷ್ಮೀಗುಡಿ ಬಳಿ ಬೃಹತ್ತಾದ ಎರಡು ಗಣಪತಿ ಶಿಲ್ಪಗಳಿವೆ. ಉಳಿದಂತೆ ಊರಲ್ಲಿ ಶರಣಬಸವೇಶ್ವರ, ಮರಗಮ್ಮ ಮುಂತಾದ ನವೀನ ದೇವಾಲಯಗಳಿದ್ದು ಮಸೀದಿ ಹಾಗೂ ದರ್ಗಾಗಳೂ ಇವೆ.

**ಕೊಂಡಗುಳಿ** (೧೪೫೫) ಯು ತಾಲೂಕು ಕೇಂದ್ರವಾದ ಜೇವರ್ಗಿಯಿಂದ ನೈಋತ್ಯಕ್ಕೆ ೭೦ಕಿ. ಮೀ. ದೂರದಲ್ಲಿ ಶಹಾಪುರ-ಸಿಂಧಗಿ ರಸ್ತೆಯಲ್ಲಿ, ಯಂಕಂಚಿ (ಸಿಂಧಗಿ ತಾಲೂಕು) ಯಿಂದ ನಾಲ್ಕು ಕಿ. ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಊರಾಗಿದೆ. ಬಸವಪೂರ್ವ ಯುಗದ ಶಿವಶರಣ್ಕ ವೀರಶೈವ ಕವಿ ಕೇಶಿರಾಜನು ಈ ಊರಿನವನೆಂಬ ಅಭಿಪ್ರಾಯವಿದೆ. ಆದರೆ ಡೋಣಿ ಕೊಂಡಗುಳಿಯೇ (ಸಿಂಧಗಿ ತಾ) ಕೇಶಿರಾಜನ ಊರೆಂಬುದು ಶಾಸನಾಧಾರಗಳಿಂದ ಸ್ಥಿರಪಟ್ಟಿದೆ. ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ ೧೧೧೭ರ ಶಾಸನವು ಇಲ್ಲಿಯ ಪ್ರಾಚೀನ ಸೋಮೇಶ್ವರ ದೇವಾಲಯದ ನವರಂಗದಲ್ಲಿದ್ದು, ಈ ಶಾಸನದಿಂದ ಹಲವಾರು ಮಹತ್ವದ ಅಂಶಗಳು ಬೆಳಕಿಗೆ ಬಂದಿವೆ. ಈ ಶಾಸನದಲ್ಲಿ 'ಚಿಕ್ಕಕೊಂಡಗುಳಿ' ಎಂದೇ ಉಲ್ಲೇಖಿತಗೊಂಡಿರುವ ಈ ಊರು ಹಿಂದೆ ಹಗರಟಗಿ-೩೦೦ಕ್ಕೆ ಸೇರಿದ್ದು ಸಾಮಂತ ಬೈಸರಸ, ಹಂದಿಯರಸರು ಹಗರಟಗಿ-೩೦೦ ಅನ್ನು ಆಳುತ್ತಿದ್ದಾಗ, ಚಿಕ್ಕ ಕೊಂಡಗುಳಿಯ ಪ್ರಭು ಬಿಲ್ಲರಸನು ಅಲ್ಲಿ ಮಲ್ಲಿಕಾರ್ಜುನ ದೇವಾಲಯವನ್ನು ನಿರ್ಮಿಸಿ, ದೇವರ ಸೇವೆಗೆ ಹಾಗೂ ಅದರ ಮಠದ ನಿರ್ವಹಣೆಗೆಂದು ೪೦ ಮತ್ತರು ಭೂಮಿ, ಒಂದು ಕೇರಿಯ ಆದಾಯ, ತಿಪ್ಪೆಸುಂಕದಲ್ಲೊಂದು ಭಾಗ, ಮಾರಾಟ ಸುಂಕ, ಎರಡು ಮತ್ತರು ಗದ್ದೆ, ಪೂಜಾರಿಗೆ ಒಂದು ಮತ್ತರು ಭೂಮಿ ಹಾಗೂ ಕೇಶವ ದೇವರಿಗೆ ಐದು ಮತ್ತರು ಭೂಮಿಯನ್ನು ದಾನ ಬಿಟ್ಟ ವಿಷಯಗಳನ್ನು ತಿಳಿಸುತ್ತದೆ. ಮೇಲಾಗಿ ಸಾಂದರ್ಭಿಕವಾಗಿ ಸೋಮೇಶ್ವರ ದೇವಾಲಯವನ್ನು ಹೆಸರಿಸುತ್ತ ಕಣಂಭೇಶ್ವರ, ಮಾಗಿಣಿಗೆರೆ ಹಾಗೂ ಧವಳಾರ ಗ್ರಾಮಗಳನ್ನು ಉಲ್ಲೇಖಿಸಿದೆ. ಮೇಲಿನ ಶಾಸನೋಕ್ತ ಮಲ್ಲಿಕಾರ್ಜುನ ದೇವಾಲಯವೇ ಶಿಲಾಶಾಸನವಿರುವ ಸೋಮನಾಥ ದೇಗುಲವಾಗಿದ್ದು ಇಂದು ಶಿಥಿಲಾವಸ್ಥೆಯಲ್ಲಿದ್ದು ಭಾಗಶಃ ಜೀರ್ಣೋದ್ಧಾರಗೊಂಡಿದೆ. ಪೂರ್ವಾಭಿಮುಖವಾಗಿರುವ ಈ ಬೃಹತ್ ದೇವಾಲಯಕ್ಕೆ ಗರ್ಭಗೃಹ, ತೆರೆದ ಅಂತರಾಳ, ವಿಶಾಲವಾದ ಅರೆತೆರೆದ ನವರಂಗ, ಮುಖಮಂಟಪ ಹಾಗೂ ನಂದಿ ಮಂಟಪಗಳಿದ್ದು ನವರಂಗದ ಮೂಲಕ ದೇವಾಲಯವನ್ನು ಪ್ರವೇಶಿಸಲು ಮೂರು ದಿಕ್ಕುಗಳಿಂದಲೂ ದ್ವಾರಗಳಿದ್ದು, ಶಾರ್ದೂಲ ಕೈಪಿಡಿಯುಳ್ಳ ಸೋಪಾನಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಇದರ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದ್ದು ಸುಂದರವಾಗಿದೆ. ನವರಂಗದಲ್ಲಿ ನಾಲ್ಕು ದೇವಕೋಷ್ಠಗಳಿದ್ದು, ಒಂದರಲ್ಲಿ ಗಣಪತಿಯಿದೆ. ನವರಂಗದ ಮುಂಭಾಗವು ಕಕ್ಷಾಸನವನ್ನು ಹೊಂದಿದ್ದು ಛಾವಣಿ ಭಾಗ ಕುಸಿದಿದೆ. ಆದರೆ ಗುಡಿ ಬಳಿ ಬಿದ್ದಿರುವ ಅಷ್ಟಾದಿಕ್ಪಾಲಕರ ಕೆತ್ತನೆಯ ಫಲಕದಿಂದ ಹಿಂದೆ ಇದು ಛತ್ತನ್ನು ಅಲಂಕರಿಸಿತ್ತೆಂದು ಭಾವಿಸಬಹುದಾಗಿದೆ. ನಂತರದಲ್ಲಿ ನವರಂಗದ ಮುಂದಿನ ಮುಖಮಂಟಪವನ್ನು ಮುಚ್ಚಿ, ಅದನ್ನು ಗರ್ಭಗೃಹವನ್ನಾಗಿಸಿ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ಈ ದೇವಾಲಯದ ಅಧಿಷ್ಠಾನವು ವಜ್ರಪಟ್ಟಿಯಿಂದ ಅಲಂಕೃತವಾಗಿದ್ದು, ಭಿತ್ತಿಯು ನಿರಾಡಂಬರವಾಗಿದ್ದು ಶಿಖರ ನಾಶವಾಗಿದೆ. ಈ ದೇವಾಲಯದ ಬದಿಯಲ್ಲೇ ಶಿಥಿಲಾವಸ್ಥೆಯಲ್ಲಿರುವ ಕೇಶವನ ಗುಡಿಯಿದ್ದು, ಸ್ಥಳೀಕರು ಈ ಗುಡಿಯಲ್ಲಿರುವ ಗದ್ದುಗೆಯನ್ನು ಕೇಶಿರಾಜನ ಸಮಾಧಿ ಎಂದೂ, ಗುಡಿಯನ್ನು ಕೇಶವರಾಜನ ಗುಡಿ ಎಂದೂ ರೂಢಿಯಲ್ಲಿ ಕರೆಯುತ್ತಾರೆ. ಪ್ರಾಯಶಃ ಇಲ್ಲಿಯ ಶಾಸನದಲ್ಲಿ ಉಕ್ತವಾಗಿರುವ ಸೋಮೇಶ್ವರ ಹಾಗೂ ಕೇಶವ ದೇವರುಗಳಲ್ಲಿ ಇದೇ ಶಾಸನೋಕ್ತ ಸೋಮೇಶ್ವರ ದೇವಾಲಯವಾಗಿರುವಂತೆ ತೋರುತ್ತದೆ. ಗರ್ಭಗೃಹ ಅಂತರಾಳ ಹಾಗೂ ನವರಂಗಗಳನ್ನು ಹೊಂದಿರುವ ಈ ಗುಡಿಯು ಪೂರ್ವಾಭಿಮುಖವಾಗಿದ್ದು ನವರಂಗದಲ್ಲಿ ಎರಡು ದೇವಕೋಷ್ಠಗಳಿದ್ದು, ಇದಕ್ಕೆ ಉತ್ತರದಲ್ಲಿ ಪ್ರವೇಶ ದ್ವಾರವಿದೆ. ಉಳಿದಂತೆ ಊರಲ್ಲಿ ಹನಮಂತ ಹಾಗೂ ಅಡವಿ ಸಿದ್ಧಪ್ಪನ ಗುಡಿಗಳಿವೆ. **ಕಣಮೇಶ್ವರ** (೧೪೨೩)ವು ಕೊಂಡಗುಳಿಯಿಂದ ಪಶ್ಚಿಮಕ್ಕೆ ಮೂರು ಕಿ.ಮೀ ದೂರದಲ್ಲಿದ್ದು, ಈ ಊರಲ್ಲಿ ಇರುವ ಎರಡು ಶಾಸನಗಳು ಇಲ್ಲಿ ಮೊದಲ ಬಾರಿಗೆ ವರದಿಯಾಗುತ್ತಿದ್ದು ಅವುಗಳಲ್ಲೊಂದು ವಿಜಯನಗರದ ಅರಸ ಅಚ್ಚುತರಾಯನ ಕಾಲದ್ದಾಗಿದ್ದು ಬಹಳ ಹಾಳಾಗಿದೆ. ಅಲ್ಲೇ ವಿಶಿಷ್ಟ ಭಂಗಿಯಿಂದ ಕೂಡಿದ ನಾಲ್ಕು ವೀರಗಲ್ಲುಗಳಿದ್ದು, ಪ್ರಾಚೀನ ದೇವಾಲಯಗಳಾವುದೂ ಉಳಿದಿಲ್ಲ.

**ಕೊಡೇಕಲ್** (೪೨೦೩) ತಾಲೂಕು ಕೇಂದ್ರವಾದ ಸುರಪುರದಿಂದ ನೈಋತ್ಯಕ್ಕೆ ೪೨ ಕಿ. ಮೀ. ದೂರದಲ್ಲಿದೆ. ಸುಮಾರು ೧೫ನೇ ಶತಮಾನದಲ್ಲಿದ್ದ ಆರೂಢ ಸಂಪ್ರದಾಯದ ಕೊಡೇಕಲ್ ಬಸವಣ್ಣ ಇಲ್ಲೇ ನೆಲೆ ನಿಂತು ಕಾಲಜ್ಞಾನ ರಚಿಸಿ, ಹಿಂದೂ-ಮುಸ್ಲಿಂ ಭಾವೈಕ್ಯತೆಗಾಗಿ ದುಡಿದು ದೇಹ ತ್ಯಜಿಸಿದ ಪುಣ್ಯ ಸ್ಥಳವಿದಾಗಿದ್ದು, ಅದರಿಂದಾಗಿ ಇದಕ್ಕೆ ಅಮರ ಕಲ್ಯಾಣವೆಂದೂ ಕರೆಯುವ ವಾಡಿಕೆಯಿದೆ.

ಹಿಂದೆ ಸಗರ-೫೦೦ಕ್ಕೆ ಸೇರಿದ್ದ ಕೊಡೇಕಲ್ ಶಾಸನಸ್ಥ ಊರಾಗಿಲ್ಲದಿದ್ದರೂ ಇಲ್ಲಿಂದ ವರದಿಯಾಗಿರುವ ಸೂಕ್ಷ್ಮ ನವೀನ ಹಾಗೂ ಬೃಹತ್ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ಈ ಪ್ರದೇಶದ ಪ್ರಾಚೀನ ಜನವಸತಿ ಕಾಲವನ್ನು ಕ್ರಿ. ಪೂ. ೨೩೩೫ರಷ್ಟು ಹಿಂದಕ್ಕೆ ಕೊಂಡೊಯ್ಯುತ್ತಿದ್ದು, ಕರ್ನಾಟಕದಲ್ಲಿ ಕಾಲ ನಿಗಧಿಗೊಳಿಸಿದ ಕೆಲವೇ ನವಶಿಲಾಯುಗ ನೆಲೆಗಳಲ್ಲಿ ಅತ್ಯಂತ ಪ್ರಾಚೀನದ್ದಾಗಿದೆ. ಈ ನೆಲೆಯನ್ನು ಕೂಲಂಕುಷವಾಗಿ ಅಧ್ಯಯನ ಮಾಡಿರುವ ಡಾ ಪದ್ದಯ್ಯನವರು ಹಲವಾರು ಮಹತ್ವದ ಅಂಶಗಳನ್ನು ಬೆಳಕಿಗೆ ತಂದು ವಿದ್ವಾಂಸರ ಗಮನವನ್ನು ಸೆಳೆದಿದ್ದಾರೆ. ಆದರೂ ಕೊಡೇಕಲ್ ಕಾಲಜ್ಞಾನ ವಿರಚಿತ ಬಸವಣ್ಣನಿಂದಾಗಿಯೇ ಜನಸಾಮಾನ್ಯರನ್ನು ತನ್ನತ್ತ ಆಕರ್ಷಿಸುತ್ತಿದೆ. ಕೊಡೇಕಲ್ಲನ್ನು ತನ್ನ ಕಾರ್ಯರಂಗವನ್ನಾಗಿ ಮಾಡಿಕೊಂಡಿದ್ದ ಕೊಡೇಕಲ್ ಬಸವಣ್ಣನ ಜೀವನ ಚರಿತ್ರೆಯನ್ನು ಸಾರುವ ಇವನ ವಂಶದವನೇ ಆದ ಕವಿ ವೀರಸಂಗಯ್ಯ ವಿರಚಿತ 'ನಂದಿಯಾಗಮಲೀಲೆ' ಕಾವ್ಯ ದಿಂದಾಗಿ ನಾವಿಂದು ಕೊಡೇಕಲ್ ಬಸವಣ್ಣನಂತಹ ವಿಭೂತಿ ಪುರುಷನನ್ನು ಚಾರಿತ್ರಿಕವಾಗಿ ದಾಖಲಿಸಲು ಸಾಧ್ಯವಾಗಿದೆ. ಇವನು ಮೂಲತಃ ಹಂಪೆಯ ವೀರಶೈವ ಬಣಜಿಗ ಕುಟುಂಬಕ್ಕೆ ಸೇರಿದವನಾಗಿದ್ದು, ಸಂಸಾರಿಯಾಗಿ ಸಂಸ್ಕಾರ ಪಡೆದು, ಜನರಲ್ಲಿ ಧರ್ಮ ಪ್ರಜ್ಞೆ ಮೂಡಿಸಲು ಯತ್ನಿಸಿ ೧೧ ಮಾದರಿಯ ವಿಶಿಷ್ಟ ಅಮರಗನ್ನಡ ಲಿಪಿಗಳನ್ನು ಬಳಸಿ ಕಾಲಜ್ಞಾನವನ್ನು ರಚಿಸಿದ್ದಾನೆ. ಮೇಲು ನೋಟಕ್ಕೆ ಪಾರಸಿ ಲಿಪಿಯೆಂಬ ಭ್ರಮೆ ಹುಟ್ಟಿಸುವ ಈ ಸಾಂಕೇತಿಕ ಲಿಪಿಯನ್ನು ಬಳಸಲು ಕೊಡೇಕಲ್ ಬಸವಣ್ಣನ ಮೇಲಿದ್ದ ಅಂದಿನ ಸಾಮಾಜಿಕ-ಧಾರ್ಮಿಕ ಒತ್ತಡಗಳಿಗೆ ಕಾರಣವಾಗಿದ್ದಂತೆ ತೋರುತ್ತದೆ. ಹಿಂದೂ-ಮುಸ್ಲಿಂ ಭಾವೈಕ್ಯತೆಯನ್ನು ಬೋಧಿಸಿದ ಇವನ ಆರೂಢ ಸಂಪ್ರದಾಯದ ಮಠಗಳಿಗೆ ಅನುಯಾಯಿಗಳು ಈಗಲೂ ನಡೆದುಕೊಳ್ಳುತ್ತಾರೆ. ಕೊಡೇಕಲ್ ಬಸವಣ್ಣ ಮತ್ತು ಅವನ ಮಕ್ಕಳಿಂದ ರಚಿತವಾದ ಸುಮಾರು ೨೦೦೦ ಪುಟಗಳಷ್ಟು ಅಪ್ರಕಟಿತ ಅನುಭಾವ ಸಾಹಿತ್ಯ ಈ ಮಠದಲ್ಲಿದೆ.

ಊರಲ್ಲಿಂದು ಬಸವಣ್ಣನ ಎರಡು ಗುಡಿಗಳಿದ್ದು, ಪೇಟೆ ಬಸವಣ್ಣನ ಗುಡಿಯು ಕೊಡೇಕಲ್ ಬಸವಣ್ಣ ಕುಳಿತು ಕಾಲಜ್ಞಾನ ಬರೆದಂತಹ ಸ್ಥಳವಾದರೆ, ಊರ ಬಸವಣ್ಣನ ಗುಡಿಯು ಇವನು ಐಕ್ಯ ಹೊಂದಿದ ಸ್ಥಳವಾಗಿದೆ. ಈ ಎರಡೂ ಗುಡಿಗಳು ಮುಸ್ಲಿಂ ವಾಸ್ತು ಶೈಲಿಯ ರಚನೆಗಳಾಗಿದ್ದು, ಸುಂದರವಾಗಿವೆ. ಕೊಡೇಕಲ್ಲ ಬಸವಣ್ಣನ ಜಾತ್ರೆ ವರುಷದಲ್ಲಿ ಎರಡು ಬಾರಿ ದೀಪಾವಳಿ ಹಾಗೂ ಯುಗಾದಿಯಾದ ೧೫ ದಿನಕ್ಕೆ ಜರುಗುತ್ತಿದ್ದು, ಆ ಸಂದರ್ಭಗಳಲ್ಲಿ ಪಲ್ಲಕ್ಕಿ ಉತ್ಸವ ನಡೆಯುತ್ತಿದ್ದು ಸುಮಾರು ೧೫,೦೦೦ ಜನ ಪಾಲ್ಗೊಳ್ಳುತ್ತಾರೆ. ಮೈಸೂರು ಜಿಲ್ಲೆಯ ಬೊಪ್ಪಗೌಡನ ಪುರದ ಮಂಟೇಸ್ವಾಮಿಯು ಕೊಡೇಕಲ್ ಬಸವಣ್ಣನ ಶಿಷ್ಯನಾಗಿದ್ದು, ಕಪ್ಪಡಿ ರಾಚಪ್ಪಾಜಿಯು (ಕೆ.ಆರ್.ನಗರ) ಕೊಡೇಕಲ್ ಬಸವಣ್ಣನ ಮಕ್ಕಳಲ್ಲಿ ಒಬ್ಬನಾಗಿದ್ದನು.

**ಕೋರವಾರ** (೨೦೬೩) ವು ತಾಲೂಕು ಕೇಂದ್ರವಾದ ಚಿತ್ತಾಪುರದಿಂದ ಉತ್ತರಕ್ಕೆ ೩೫ ಕಿ. ಮೀ. ದೂರದಲ್ಲಿರುವ ಧಾರ್ಮಿಕ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲೂ 'ಕೋರವಾರ' ಎಂದೇ ಉಲ್ಲೇಖಿತಗೊಂಡಿರುವ ಇಲ್ಲಿಂದ ಈವರೆಗೆ ಸುಮಾರು ೧೪ನೇ ಶತಮಾನಕ್ಕೆ ಸೇರಿದ ಶಾಸನವೊಂದು ವರದಿಯಾಗಿದೆ. ಹಾಳು ಶಿವಾಲಯದಲ್ಲಿರುವ ಈ ಶಾಸನ ಸಂಗಮದೇವರಿಗೆ ನಿವೇಶನವೊಂದನ್ನು ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ಶಾಸನೋಕ್ತ ಸಂಗಮದೇವರೇ ಇಂದಿನ ಶಿವಾಲಯವಾಗಿದೆ. ಮಾಡಬೊಳದಿಂದ ೧೦ ಕಿ. ಮೀ. ದೂರದಲ್ಲಿರುವ ಈ ಊರು ಅಣಿವೀರಭದ್ರ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. ಇಲ್ಲಿ ಮೇ ತಿಂಗಳಲ್ಲಿ ವೀರಭದ್ರನ ಜಾತ್ರೆಯಾಗುತ್ತಿದ್ದು, ಆ ಸಂದರ್ಭದಲ್ಲಿ ದನಗಳ ಜಾತ್ರೆಯೂ ನಡೆಯುತ್ತದೆ.

**ಕೊಲ್ಲೂರು** (೬೧೯೨) ತಾಲೂಕು ಕೇಂದ್ರವಾದ ಚಿತ್ತಾಪುರದಿಂದ ನೈಋತ್ಯಕ್ಕೆ ೪೦ ಕಿ. ಮೀ., ನಾಲ್ವಾರ ದಿಂದ ಏಳು ಕಿ. ಮೀ ದೂರದಲ್ಲಿ ಭೀಮಾನದಿಯ ಎಡದಂಡೆಯ ಮೇಲೆ ಇರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ ಕೊರಲೂರು ಎಂದೇ ಉಲ್ಲೇಖಿತಗೊಂಡಿರುವ ಇದು ೧೧-೧೨ನೇ ಶತಮಾನದಲ್ಲಿ ರಾಜಧಾನಿ ಪಟ್ಟಣವಾಗಿ ಮಹತ್ವ ಪಡೆದಿತ್ತು. ಇಲ್ಲಿಂದ ಈವರೆಗೆ ಸುಮಾರು ೧೧ ರಿಂದ ೧೬ನೆ ಶತಮಾನಕ್ಕೆ ಸೇರಿದ ಐದು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ರಾಮೇಶ್ವರ ಗುಡಿಯ ಮುಂದಿರುವ ೧೦೩೮ರ ಶಾಸನವು ಕಲ್ಯಾಣದ ಚಾಳುಕ್ಯ ಅರಸ ಜಗದೇಕಮಲ್ಲನ ಕಾಲದ್ದಾಗಿದ್ದು, ಮಹಾಮಂಡಲೇಶ್ವರ ರೇಚರಸನು, ಮೈದುನ ಚಂದಯ್ಯ ನಾಯಕನ ಬೇಡಿಕೆಯಂತೆ ಸೋಮನಾಥಯ್ಯ ನಾಯಕರಿಗೆ ವಿವಿಧ ಭೂದಾನಗಳನ್ನು ನೀಡಿದ ಅಂಶವನ್ನು ತಿಳಿಸುತ್ತದೆ. ಈ ದಾನವು (ಸಾಲಿ)

ಬಸವೇಶ್ವರ ದೇವಾಲಯಕ್ಕೆ ಸಂಬಂಧಿಸಿದಂತೆ ತೋರುತ್ತದೆ. ಕೋಟೆ ಹಾಗೂ ಅಗಸಿಗಳನ್ನುಳ್ಳ ಈ ಊರ ನಡುವೆ ಇರುವ (ಸಾಲಿ) ಬಸವೇಶ್ವರ ದೇವಾಲಯವು ಚತುಷ್ಕೂಟವಾಗಿದ್ದು ನವರಂಗದ ನಾಲ್ಕು ದಿಕ್ಕಲ್ಲೂ ಒಂದೊಂದು ಗರ್ಭಗೃಹ ಹಾಗೂ ತೆರೆದ ಅಂತರಾಳಗಳನ್ನು ಹೊಂದಿದ್ದು, ಗಾತ್ರದಲ್ಲಿ ಹಿರಿದಾಗಿದ್ದು ಭವ್ಯವಾಗಿದೆ. ಪೂರ್ವ-ಪಶ್ಚಿಮದ ಗರ್ಭಗೃಹಗಳಲ್ಲಿ ಒಂದೊಂದು ಸಹಸ್ರಲಿಂಗವಿದ್ದು ಉಳಿದೆರಡು ಗರ್ಭಗೃಹಗಳಲ್ಲಿ ಶಿವಲಿಂಗಗಳಿವೆ. ಇಲ್ಲಿಯ ಗರ್ಭಗೃಹಗಳ ಬಾಗಿಲವಾಡಗಳು ಸೂಕ್ಷ್ಮ ಕೆತ್ತನೆಗಳಿಂದ ಕೂಡಿದ ಪಂಚಶಾಖಾಲಂಕೃತ ಪಟ್ಟಿಕೆಗಳನ್ನು ಹೊಂದಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯರಿದ್ದು ಚಿತ್ತಾಕರ್ಷಕವಾಗಿವೆ. ಅಂತರಾಳಗಳನ್ನು ಮನೋಹರವಾದ ಕೆತ್ತನೆಗಳಿಂದೊಡಗೂಡಿದ ಮಕರ ತೋರಣಗಳಿಂದ ಅಲಂಕರಿಸಲಾಗಿದೆ. ದಕ್ಷಿಣದ ಗರ್ಭಗೃಹಕ್ಕಷ್ಟೆ ಹೊಂದುವಂತೆ ನಂದಿ ಮಂಟಪವಿದ್ದು, ಸುಂದರವಾದ ನಂದಿಯ ಮೂರ್ತಿಯಿದ್ದು, ನವರಂಗದ ಬೃಹತ್ತಾದ ಕಂಬಗಳು ವೈವಿಧ್ಯಮಯವಾದ ಕೆತ್ತನೆಗಳಿಂದ ಕೂಡಿದ್ದು ಆಕರ್ಷಕವಾಗಿವೆ. ನವರಂಗದ ನಡುವಣ ಛತ್ತು ಸುಂದರವಾಗಿದ್ದು, ನವರಂಗದ ನಾಲ್ಕು ಮೂಲೆಗಳಲ್ಲೂ ಕಕ್ಷಾಸನಗಳಿದ್ದು ಗುಡಿಯನ್ನು ಪ್ರವೇಶಿಸಲು ದ್ವಾರಗಳಿವೆ. ಬಹುಕೋನಾಕಾರದ ತಳವಿನ್ಯಾಸವನ್ನುಳ್ಳ ಈ ದೇವಾಲಯದ ಭಿತ್ತಿಯು ನಿರಾಡಂಬರವಾಗಿದ್ದು ಶಿಖರಗಳು ಹಾಳಾಗಿವೆ. ಇದು ಸುಮಾರು ೧೨ನೇ ಶತಮಾನದ ರಚನೆಯಾಗಿದ್ದು ೧೧೭೪ರ ಶಾಸನ ಹೇಳುವ ಹಿರಿಯ ಸೋಮೇಶ್ವರ ದೇವಾಲಯ ಇದೆ ಆಗಿರಬೇಕೆಂದೆನಿಸುತ್ತದೆ.

ಇಲ್ಲಿಯ ೧೧೭೪ರ ಇನ್ನೊಂದು ಶಾಸನ ಕಳಚೂರಿ ಸೋವಿದೇವನ ಕಾಲದ್ದಾಗಿದ್ದು, ಚೇದಿ ವಂಶಕ್ಕೆ ಸೇರಿದ ಮಹಾಮಂಡಳೇಶ್ವರ ಅಲ್ಲಹುಲಿದೇವನು ಸಗರ-೫೦೦ಅನ್ನು ಆಳುತ್ತಿದ್ದಾಗ ತನ್ನ ತಂದೆ, ತಾಯಿ, ಅಣ್ಣ ಹಾಗೂ ಅಕ್ಕಂದಿರ ಹೆಸರಲ್ಲಿ ಕ್ರಮವಾಗಿ ಪ್ರಸನ್ನಗೊಗ್ಗೇಶ್ವರ, ಸಾವಿನಿರ್ಮಡೇಶ್ವರ, ಕನ್ನೇಶ್ವರ, ರೇವಣೇಶ್ವರ ಹಾಗೂ ಏಚೇಸ್ವರ ವೆಂಬ ಪಂಚಲಿಂಗ ದೇವರಿರುವ ಗೊಗ್ಗೇಶ್ವರ ದೇವ ಚತುರ್ಕೂಟ ಭವನವನ್ನು ಮಾಡಿಸಿ ಅವುಗಳ ಪೂಜಾವಿಧಿಗೆಂದು ಕೂರಲೂರನ್ನು ಸರ್ವನಮಸ್ಯವಾಗಿ ದಾನಬಿಟ್ಟ ವಿಷಯವನ್ನು ತಿಳಿಸುತ್ತದೆ. ಜೊತೆಗೆ ಸಾಂದರ್ಭಿಕವಾಗಿ ಹಿರಿಯ ಸೋಮೇಶ್ವರ ದೇವರನ್ನೂ ಹೆಸರಿಸುತ್ತದೆ.

ಶಾಸನಗಳಿರುವ ರಾಮೇಶ್ವರ ದೇವಾಲಯ ಸಂಕೀರ್ಣವೇ ಶಾಸನೋಕ್ತ ರಾಮೇಶ್ವರ ದೇವಾಲಯವಾಗಿದೆ. ಭೀಮಾತೀರದ ಮೇಲೆ ಪೂರ್ವಾಭಿಮುಖವಾಗಿ ನಿಂತಿರುವ ರಾಮೇಶ್ವರ ಗುಡಿ ಸಮುಚ್ಚಯದಲ್ಲಿ ಬೇರೆ ಬೇರೆ ಪ್ರಮಾಣದ ಹತ್ತು ದೇವಾಲಯಗಳಿದ್ದು, ಇವುಗಳಲ್ಲಿ ದ್ವಿಕೂಟವಾಗಿರುವ ರಾಮೇಶ್ವರ ದೇವಾಲಯವೇ ಈ ಸಮುಚ್ಚಯದ ಕೇಂದ್ರವಾಗಿದ್ದು, ಮೇಲಿನ ಶಾಸನದಲ್ಲಿ ಉಕ್ತವಾಗಿರುವ ಪ್ರಸನ್ನ ರಾಮೇಶ್ವರ ಹಾಗೂ ಅಲೇಶ್ವರ ದೇಗುಲಗಳಾಗಿರುವಂತೆ ತೋರುತ್ತದೆ. ಈ ಶಾಸನ ಪ್ರಸ್ತಾಪಿಸಿರುವ ಪಂಚಲಿಂಗಗಳು ರಾಮೇಶ್ವರ ದೇವಾಲಯ ಸಂಕೀರ್ಣದಲ್ಲೇ ಇತ್ತೆಂದು ಹೇಳಲು ಶಾಸನ ಸುಳಿವು ನೀಡುತ್ತದೆ. ಇಲ್ಲಿಯ ರಾಮೇಶ್ವರ ದೇವಾಲಯವು ಪರಸ್ಪರ ಎದುರು ಬದಿರಾಗಿ ಗರ್ಭಗೃಹ ಹಾಗೂ ಅಂತರಾಳಗಳನ್ನು ಹೊಂದಿರುವ ದ್ವಿಕೂಟವಾಗಿದ್ದು, ಇವುಗಳ ಬಾಗಿಲ ಚೌಕಟ್ಟು ಮೂರು ಶಾಖಾಲಂಕೃತ ಪಟ್ಟಿಕೆಗಳನ್ನು ಹೊಂದಿದ್ದು, ಸರಳವಾಗಿವೆ. ನವರಂಗವನ್ನು ಪ್ರವೇಶಿಸಲು ಎರಡು ದಿಕ್ಕಿನಿಂದಲೂ ಪ್ರವೇಶವಿದ್ದು ದೇವಾಲಯದ ಗೋಡೆಯು ನಿರಾಡಂಬರವಾಗಿದ್ದು, ಗರ್ಭಗೃಹಗಳಿಗೆ ಕದಂಬ ನಾಗರ ಶಿಖರಗಳಿವೆ. ಈ ಸಂಕೀರ್ಣದ ಪ್ರಾಕಾರದಲ್ಲಿರುವ ಉಳಿದ ಒಂಭತ್ತು ಸಣ್ಣ ಹಾಗೂ ದೊಡ್ಡ ಗುಡಿಗಳೂ ಕೂಡ ಸುಮಾರು ೧೨ನೇ ಶತಮಾನದ ರಚನೆಗಳಾಗಿವೆ. ಈ ದೇವಾಲಯಗಳಲ್ಲಿ ಕೆಲವು ಗರ್ಭಗೃಹವನ್ನಷ್ಟೆ ಹೊಂದಿದ್ದರೆ, ಉಳಿದವು ಗರ್ಭಗುಡಿಯೊಂದಿಗೆ ಅರ್ಧಮಂಟಪವನ್ನೂ ಹೊಂದಿವೆ. ಒಟ್ಟಾರೆ ಈ ಸಮುಚ್ಚಯವು ಮಹಾಮಂಡಳೇಶ್ವರ ಅಲ್ಲಾವುಲ್ಲಿದೇವರಸನ ವಂಶಸ್ಥರ ಹೆಸರಲ್ಲಿ ನಿರ್ಮಾಣಗೊಂಡ ದೇಗುಲ ಸಂಕೀರ್ಣವಾಗಿರುವ ಸಾಧ್ಯತೆ ಇದೆ. ಇಲ್ಲೇ ಇರುವ ೧೫೫೮ರ ಇನ್ನೊಂದು ಶಾಸನ ಚನ್ನಬಸವಂತರಾಯನ ಮಗನಾದ ಕನ್ನಪ್ಪ ನೃಪನು ರಾಮೇಶ್ವರ ದೇವಾಲಯವನ್ನು ಪುನರ್ ಜೀರ್ಣೋದ್ಧಾರ ಮಾಡಿದ ಅಂಶವನ್ನು ತಿಳಿಸುತ್ತದೆ. ಇಲ್ಲಿಯ ೧೧೮೪ರ ಇನ್ನೊಂದು ಶಾಸನ ಕಲ್ಯಾಣದ ಚಾಳುಕ್ಯ ಅರಸ ನಾಲ್ಕನೆಯ ಸೋಮೇಶ್ವರನ ಕಾಲಕ್ಕೆ ಸೇರಿದ್ದು, ಕಳಚೂರಿಗಳನ್ನು ನಿರ್ಮೂಲ ಮಾಡಿ, ಚಾಳುಕ್ಯ ರಾಜ್ಯ ಸಮುದ್ಧರಣ ಮಾಡಿದ ಬರ್ಮದೇವ ದಂಡನಾಯಕನು ಮಹಾಅಮಾತ್ಯನಾಗಿದ್ದಾಗ, ಮಹಾಮಂಡಳೇಶ್ವರ ಅಲ್ಲಹುಲಿದೇವರಸನು ಸಗರ-೫೦೦ ಅನ್ನು ರಾಜಧಾನಿ ಕೊರಲೂರಿನ ಕೋಟೆಯಿಂದ ಆಳುತಿದ್ದಾಗ, ಮಹಾಮಂಡಳೇಶ್ವರ ಕನ್ನರಸನ ಹೆಸರಲ್ಲಿ ತಾನು ಮಾಡಿಸಿದ ಕನ್ನೇಶ್ವರ ದೇವಾಲಯದ ಸೇವೆಗೆಂದು ದಾನ ಬಿಟ್ಟ ವಿಷಯವನ್ನು ತಿಳಿಸುತ್ತ ಸಾಂದರ್ಭಿಕವಾಗಿ ಹಿಪ್ಪರಿಗೆ, ಇರಿಬಳ್ಳಿ, ಕಂದಾಳ, ಗೋವಿಗೆ (ಗೋಗಿ?) ಮುಂತಾದ ಗ್ರಾಮಗಳನ್ನು

ಹೆಸರಿಸುತ್ತದೆ. ಈ ಶಾಸನವಿರುವ ಸ್ಥಳ (ಮನೆಯು) ಹಾಳು ಗುಡಿಯ ಅಧಿಷ್ಠಾನದ ಮೇಲಿದ್ದು ಬಹುಶಃ ಹಿಂದೆ ಇಲ್ಲೊಂದು ಗುಡಿ ಇದ್ದಂತೆ ತೋರುತ್ತದೆ. ಸುಮಾರು ೧೨ನೇ ಶತಮಾನಕ್ಕೆ ಸೇರಿದ ಜೈನ ಬಸದಿಯೊಂದು ಇಲ್ಲಿದೆ. ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿರುವ ಇದಿಂದು ಜೀರ್ಣಾವಸ್ಥೆಯಲ್ಲಿದ್ದು ಪಾಳು ಬಿದ್ದಿದೆ. ಗರ್ಭಗೃಹದಲ್ಲಿ ಪದ್ಮಾಸೀನ ತೀರ್ಥಂಕರನ ಹಾಳಾದ ಶಿಲ್ಪವಿದೆ. ನವರಂಗದಲ್ಲಿ ಚೌವ್ವೀಸ್ ತೀರ್ಥಂಕರ ಶಿಲ್ಪವಿದ್ದು, ನವರಂಗವನ್ನು ಪ್ರವೇಶಿಸಲು ಪೂರ್ವಕ್ಕೆ ದ್ವಾರವಿದ್ದು ಇದರ ಬಾಗಿಲ ಚೌಕಟ್ಟು ಸುಂದರವಾಗಿದೆ. ಇವುಗಳೊಂದಿಗೆ ಊರಲ್ಲಿ ಮಲ್ಲಿಕಾರ್ಜುನ, ಕಟ್ಟೆಬಸವಣ್ಣ, ಕೊಟ್ರ ಬಸವಣ್ಣ, ಶರಣಬಸವೇಶ್ವರ, ಹನುಮಂತ, ದ್ಯಾಮವ್ವ, ದುರ್ಗವ್ವ, ಹಾಗೂ ಪೋಚಮ್ಮನ ಗುಡಿಗಳಿದ್ದು, ಮಸೀದಿ ಹಾಗೂ ದರ್ಗಾಗಳೂ ಕೂಡ ಇವೆ.

**ಕೋಗನೂರು** (೨೩೫೨) ತಾಲೂಕು ಕೇಂದ್ರವಾದ ಅಫಜಲಪುರದಿಂದ ಈಶಾನ್ಯಕ್ಕೆ ೩೫ ಕಿ.ಮೀ. ದೂರದಲ್ಲಿ ಸ್ಟೇಷನ್ ಗಾಣಗಾಪುರದಿಂದ ನೈಋತ್ಯಕ್ಕೆ ಬಹಳ ಸಮೀಪದಲ್ಲಿದೆ. ಕಲ್ಯಾಣದ ಕ್ರಾಂತಿಯ ನಂತರ ಕೋಗಿಲ ಮಾರಾಯ ಹಾಗೂ ಅವನ ಹೆಂಡತಿ ಲಕ್ಷ್ಮೀಬಾಯಿ ಕಲ್ಯಾಣದಿಂದ ಇಲ್ಲಿಗೆ ಬಂದು ನೆಲೆಸಿ ಶರಣರ ವಚನಗಳನ್ನು ಸಾರುವ ಕಾಯಕದಲ್ಲಿ ತೊಡಗಿದ್ದ ಕಾರಣ ಇದಕ್ಕೆ ಕೋಗಿಲಮಾರಾಯ ಪಟ್ಟಣ ಎಂಬ ಹೆಸರು ಬಂದು ಮುಂದೆ ಅದೇ ಕೋಗನೂರು ಆಯಿತೆಂಬ ಐತಿಹ್ಯವಿದೆ. ಅಮರಜಾ ನದಿಯ ಎಡದಂಡೆ ಮೇಲೆ ಅರ್ಧ ಕಿ. ಮೀ. ಒಳಕ್ಕಾದಂತೆ ಇರುವ ಈ ಊರಿಂದ ಈವರೆಗೆ ಶಾಸನಗಳಾವುವೂ ವರದಿಯಾಗಿಲ್ಲ. ಆದರೂ ಇಲ್ಲಿರುವ ಶಂಕಲಿಂಗ ದೇಗುಲದಿಂದಾಗಿ ಪ್ರಸಿದ್ಧವಾಗಿದೆ. ಸುಮಾರು ೧೧ನೇ ಶತಮಾನಕ್ಕೆ ಸೇರಿದ ಈ ದೇಗುಲವು ಆರು ಹಂತದ ಎತ್ತರವಾದ ಅಧಿಷ್ಠಾನದ ಮೇಲೆ ಬಹುಕೋನಾಕಾರದ ತಳ ವಿನ್ಯಾಸವನ್ನುಳ್ಳ ಗರ್ಭಗೃಹವನ್ನು ಹೊಂದಿದ್ದು ಪೂರ್ವಾಭಿಮುಖವಾಗಿ ನಿಂತಿದೆ. ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖ ಮಂಟಪಗಳನ್ನುಳ್ಳ ಈ ದೇವಾಲಯದ ಭಿತ್ತಿಯು ನಿರಾಡಂಬರವಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಎಡಭಾಗದ ಭಿತ್ತಿಗೆ ಸೇರಿದಂತೆ ಪಂಚದೀಪಗಳನ್ನು ಇಡುವ ನಂದಾದೀಪ ಫಲಕವಿದೆ. ಗರ್ಭಗೃಹದ ದ್ವಾರಬಂಧವು ಪಂಚಶಾಖಾಲಂಕೃತವಾಗಿದ್ದು ವಿಶಿಷ್ಟವಾದ ಕೆತ್ತನೆಗಳನ್ನು ಹೊಂದಿದ್ದು, ಲಲಾಟದಲ್ಲಿ ಗಣಪತಿ ಇದೆ. ಈ ದ್ವಾರಬಂಧದ ಅಲಂಕರಣೆಯು ಅತ್ಯಾಕರ್ಷಕವಾಗಿದೆ. ಇದರ ಹೊಸ್ತಿಲು ಸುಂದರವಾಗಿದ್ದು, ಮುಂದಿರುವ ಕಮಲದ ಮೊಗ್ಗಿನಿಂದಾ ವೃತ್ತವಾದ ಚಂದ್ರ ಶಿಲೆಯು ಚಿತ್ತಾಕರ್ಷವಾಗಿದೆ. ಅಂತರಾಳದ ದ್ವಾರಬಂಧವು ಭವ್ಯವಾಗಿದ್ದು ತೋಲೆಯನ್ನು ಅಂದವಾದ ಮಕರತೋರಣದಿಂದ ಅಲಂಕರಿಸಲಾಗಿದೆ. ಇದರ ಇಕ್ಕೆಲದಲ್ಲಿರುವ ನಾಲ್ಕೂವರೆ ಅಡಿ ಎತ್ತರದ ಆಭರಣಾಲಂಕೃತ ಶೈವ ದ್ವಾರಪಾಲಕರ ಮೂರ್ತಿಗಳು ನಿಜಕ್ಕೂ ಅದ್ಭುತವಾಗಿವೆ. ನವರಂಗದಲ್ಲಿ ಜಾತ್ತರೇಯ ಶಿಖರದೊಂದಿಗೆ ಆಕರ್ಷಕ ಬಾಗಿಲ ಚೌಕಟ್ಟನ್ನುಳ್ಳ ಎರಡು ದೇವಕೊಷ್ಠಗಳಲ್ಲಿ ಸುಂದರವಾದ ಗಣಪತಿ ಹಾಗೂ ಭೈರವ ಮೂರ್ತಿಗಳಿದ್ದು, ನಾಗಶಿಲ್ಪಗಳೂ ಇವೆ. ನವರಂಗವನ್ನು ಹೊತ್ತು ನಿಂತಿರುವ ಚಾಳುಕ್ಯ ಕಂಬಗಳು ರೇಖಾಲಂಕೃತವಾಗಿದ್ದು ನಡುವಣ ಛತ್ತನ್ನು ಅಷ್ಟದಿಕ್ಪಾಲಕರಿಂದ ಆವೃತ್ತವಾಗಿರುವ ಪಂಚದಳದ ಕಮಲ ಫಲಕದಿಂದ ಅಲಂಕರಿಸಲಾಗಿದೆ. ಮುಂದಿನ ಮುಖಮಂಟಪವು ಕಕ್ಷಾಸನವನ್ನು ಹೊಂದಿದ್ದು ಅದರ ಹಿಂಬದಿಯನ್ನು ವಜ್ರಪಟ್ಟಿಕೆಯಿಂದ ಅಲಂಕರಿಸಲಾಗಿದೆ. ಊರ ಹೊರಗೆ ಹನುಮಂತನ ಗುಡಿ ಎದುರಿಗಿರುವ ಕಲ್ಯಾಣ ಮಠವು ಚೌಕಾಕಾರದ ನವರಂಗದಂತಿದ್ದು, ಜಗತಿಯ ಮೇಲೆ ನಂದಿಯ ಮೂರ್ತಿ ಇದೆ. ಹನುಮಂತನ ಗುಡಿ ಮುಂದೆ ಮುಕ್ಕಾದ ಸಪ್ತಮಾತೃಕಾ ಹಾಗೂ ಗಣಪತಿಯ ಶಿಲ್ಪಗಳಿದ್ದು, ಒಂದು ವೀರಗಲ್ಲು ಕೂಡ ಇದೆ. ಉಳಿದಂತೆ ಊರಲ್ಲಿ ಇತ್ತೀಚಿನದಾದ ಬಸವಣ್ಣ, ಹನುಮಂತ, ಲಕ್ಷ್ಮಿ, ದುರ್ಗಮ್ಮ ಚೌಡಮ್ಮ, ಮರಗಮ್ಮ, ಮುಂತಾದ ನವೀನ ಗುಡಿಗಳಿದ್ದು ಅಲ್ಲಾಲಿಂಗ ಮಠವೂ ಇದೆ.

**ಕೋಡ್ಲಿ** (೪೨೮೮) ಯು ತಾಲೂಕು ಕೇಂದ್ರವಾದ ಚಿಂಚೋಳಿಯಿಂದ ನೈಋತ್ಯಕ್ಕೆ ೩೧ ಕಿ.ಮಿ., ಗುಲಬರ್ಗಾದಿಂದ ಆಗ್ನೇಯಕ್ಕೆ ೫೫ ಕಿ.ಮೀ. ದೂರದಲ್ಲಿದೆ. ಈ ಊರ ಬಳಿಯಿರುವ ರಾಮಲಿಂಗೇಶ್ವರ ಗುಡ್ಡದ ಮೇಲೆ ರಾಮಲಿಂಗೇಶ್ವರ ಗುಡಿ ಇದ್ದು, ಇದರ ಜಾತ್ರೆಯು ರಾಮನವಮಿಯಂದು ಆಗುತ್ತದೆ. ಊರಿಗೆ ಕೋಟೆ ಇದ್ದು, ಊರನ್ನು ಅಗಸಿ ಮೂಲಕವೇ ಪ್ರವೇಶಿಸಬೇಕಾಗಿದ್ದು ಅಗಸಿ ಬಳಿ ಗಣಪತಿ, ವಿಷ್ಣು, ಭೈರವ, ಪೀಠಸ್ಥ ಚತುರ್ಮುಖ ಬ್ರಹ್ಮಶಿಲ್ಪ ಹಾಗೂ ವೀರಗಲ್ಲುಗಳಿವೆ. ಇಲ್ಲಿರುವ ಭೋಗಲಿಂಗೇಶ್ವರ ದೇವಾಲಯವು ಸುಮಾರು ೧೨ನೇ ಶತಮಾನದ ರಚನೆಯಾಗಿದ್ದು ಎತ್ತರವಾದ ಅಧಿಷ್ಠಾನದ ಮೇಲೆ ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಮುಂದೆ ಪುಷ್ಕರಣಿ ಇದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಇದೆ. ಅಂತರಾಳದಲ್ಲಿ

ಜಾಲಂದ್ರ ಹಾಗೂ ಮಕರ ತೋರಣಗಳಿವೆ. ತೆರೆದ ನವರಂಗದ ಅಂಚಲ್ಲಿ ಕಕ್ಷಾಸನವಿದ್ದು ಸರಳವಾಗಿದೆ. ನವರಂಗವನ್ನು ಪ್ರವೇಶಿಸಲು ಮೂರು ಕಡೆಯಿಂದಲೂ ಮಾರ್ಗವಿದ್ದು ಗುಡಿಯ ಭಿತ್ತಿಯು ನಿರಾಡಂಬರವಾಗಿದೆ. ಊರ ಹೊರಗೆ ಬನಶಂಕರಿ ಗುಡಿ ಬಳಿ ಮಲ್ಲಿಕಾರ್ಜುನ ಗುಡಿ ಇದ್ದು, ಇದು ಸುಮಾರು ೧೨ನೇ ಶತಮಾನದ ಚಾಳುಕ್ಯ ಶೈಲಿಯ ದೇವಾಲಯವಾಗಿದೆ. ಇದರ ದ್ವಾರವು ಪಾರ್ಶ್ವದಲ್ಲಿದ್ದು, ಒಳಗೆ ಅಷ್ಟಭುಜ ಮಹಿಷಮರ್ದಿನಿಯ ಶಿಲ್ಪವಿದೆ. ಗಣಪತಿ ಗುಡಿ ಬಳಿ ವೀರಗಲ್ಲೊಂದಿದ್ದು ಅಲ್ಲೇ ಮುಕ್ಕೊಡೆ ಪಾರ್ಶ್ವನಾಥ ತೀರ್ಥಂಕರ ಶಿಲ್ಪವಿದೆ. ಇಲ್ಲಿಯ ಬನಶಂಕರಿ ಗುಡಿಯಲ್ಲಿ ಸ್ಥಾನಕ ದುರ್ಗಾ ಶಿಲ್ಪವಿದ್ದು, ದೇವಾಂಗದವರು ಇದರ ಪೂಜಾರಿಗಳಾಗಿದ್ದು, ಅವರ ಮಠವಿಲ್ಲಿದೆ. ಅಲ್ಲೇ ಸಪ್ತ ಮಾತೃಕಾ ಶಿಲ್ಪವಿದ್ದು, ಮೌನಪ್ಪಯ್ಯನ ಗುಡಿಯೂ ಇದೆ. ಉಳಿದಂತೆ ಊರಲ್ಲಿ ಹನುಮಂತ, ಮರಗಮ್ಮ, ಕಾಳಮ್ಮ ಮುಂತಾದ ನವೀನ ಗುಡಿಗಳಿದ್ದು, ಮಸೀದಿ ಹಾಗೂ ದರ್ಗಾ ಕೂಡ ಇವೆ.

**ಕೋಣಸಿರಸಗಿ** (೧೨೮೦) ಯು ತಾಲೂಕು ಕೇಂದ್ರವಾದ ಜೇವರ್ಗಿಯಿಂದ ನೈಋತ್ಯಕ್ಕೆ ಸುಮಾರು ೪೬ ಕಿ. ಮೀ. ದೂರದಲ್ಲಿ, ಯಡ್ರಾಮಿ-ಅರಳಗುಂಡಗಿ ರಸ್ತೆಯಲ್ಲಿ ಯಡ್ರಾಮಿಯಿಂದ ಉತ್ತರಕ್ಕೆ ಆರು ಕಿ. ಮೀ. ದೂರದಲ್ಲಿದೆ. ಊರಾಚೆ, ರೇವಣಸಿದ್ಧೇಶ್ವರ ಗುಡಿ ಪರಿಸರದಲ್ಲಿರುವ ಎರಡು ಶಾಸನಗಳನ್ನು ಮೊದಲ ಬಾರಿಗೆ ಇಲ್ಲಿ ವರದಿ ಮಾಡಲಾಗಿದೆ. ಈ ದೇವಾಲಯದ ಬಲಭಾಗದಲ್ಲಿರುವ ಶಾಸನವು ಕಲ್ಯಾಣದ ಚಾಳುಕ್ಯ ಅರಸ ಒಂದನೇಯ ಸೋಮೇಶ್ವರನ ಕಾಲದ್ದಾಗಿದ್ದು ೧೦೫೫ರಲ್ಲಿ ಮಹಾಸಾಮಂತ ನಿಂಬರಸರು ಸಿದ್ಧೇಶ್ವರ (ನೆರೆಯ ಹಾಳು ಸಿದ್ಧಾಪುರ) ದಲ್ಲಿ ಸಿದ್ಧೇಶ್ವರ ದೇವಾಲಯವನ್ನು ನಿರ್ಮಿಸಿ ಎಳಮೇಲ ಸಿಂಹಪರ್ಷೆಗೆ ಸೇರಿದ ಸ್ಥಾನಾಚಾರ್ಯರಿಗೆ ಎಳರಾವೆಯ ತೀರ್ಥದ ಗಡಿಂಬದಲ್ಲಿ ಅಳೆದು ದಾನವಾಗಿ ಕೊಟ್ಟ ೨೦೦ ಮತ್ತರು ಹೊಲ ಹಾಗೂ ಎರಡು ಮತ್ತರು ತೋಟದ ಬಗ್ಗೆ ಹೇಳುತ್ತದೆ. ನವರಂಗದ ಬಲಭಾಗದಲ್ಲಿ ನಿಂತಿರುವ ಕಂಬವೊಂದರ ಮೇಲಿರುವ ಮತ್ತೊಂದು ಶಾಸನ ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯ ಏಳನೆಯ ವರ್ಷಕ್ಕೆ (೧೦೮೩) ಸೇರಿದ್ದು, ಲಕ್ಷ್ಮಣೇಶ್ವರ ದೇವರಿಗೆ ದಾನ ಕೊಟ್ಟ ಅಂಶವನ್ನು ತಿಳಿಸುತ್ತದೆ.

ಈ ಶಾಸನಗಳಿರುವ ರೇವಣ ಸಿದ್ಧೇಶ್ವರ - ಸಿದ್ಧರಾಯನ ಗುಡಿಯೇ ಶಾಸನೋಕ್ತ ಸಿದ್ಧೇಶ್ವರ ದೇವಾಲಯವಾಗಿದ್ದು ಇಂದು ಪೂರ್ಣ ಜೀರ್ಣಾವಸ್ಥೆಯಲ್ಲಿದೆ. ಪೂರ್ವಾಭಿಮುಖವಾಗಿರುವ ಇದು ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಸಂಪೂರ್ಣ ಹಾಳಾಗಿದೆ. ಈ ಗುಡಿಯ ನವರಂಗಕ್ಕೆ ಹೊಂದಿಕೊಂಡಂತೆ ಇನ್ನೊಂದು ಗುಡಿಯಿದ್ದ ಕುರುಹುಗಳು ಕಂಡು ಬರುವುದರಿಂದ ಇಲ್ಲಿ ಇನ್ನೊಂದು ದೇಗುಲ, ಅಂದರೆ ಶಾಸನೋಕ್ತ ಲಕ್ಷ್ಮಣೇಶ್ವರ ದೇವಾಲಯ ಇದ್ದಿರಬೇಕೆಂದು ಭಾವಿಸಬಹುದಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲವಾಡವು ತ್ರಿಶಾಖಾಲಂಕೃತಗೊಂಡಿದ್ದು, ಪೂರ್ಣಕುಂಭಗಳಿವೆ. ಅಂತರಾಳದ ದ್ವಾರಬಂಧವೂ ಆಕರ್ಷಕವಾಗಿದ್ದು ಆಳೆತ್ತರದ ದ್ವಾರಪಾಲಕರ ಉಬ್ಬು ಕೆತ್ತನೆ ಗಮನಾರ್ಹವಾಗಿದೆ. ನವರಂಗದಲ್ಲಿ ನಂದಿ ಇದ್ದು, ಬ್ರಹ್ಮ, ವಿಷ್ಣು, ಮಹೇಶ್ವರ, ಭೈರವ, ನಟರಾಜ, ಗಣಪತಿ, ಪೂರ್ಣ ಕುಂಭ ಮುಂತಾದ ಸುಂದರ ಉಬ್ಬು ಕೆತ್ತನೆಗಳನ್ನುಳ್ಳ ಕಕ್ಷಾಸನ ಫಲಕಗಳಿವೆ. ದೇವಾಲಯದ ಭಿತ್ತಿಯು ನಿರಾಡಂಬರವಾಗಿದ್ದು, ಕದಂಬ ನಾಗರ ಶಿಖರವಿದೆ. ಉಳಿದಂತೆ ಊರಲ್ಲಿ ಬಸವಣ್ಣ, ಹನುಮಂತ, ಲಕ್ಷ್ಮಿ, ಶಂಕರಿ, ದುರ್ಗಾ ಹಾಗೂ ಮರಗಮ್ಮನ ಗುಡಿಗಳಿದ್ದು, ಕಡಕೋಳದ ಮಡಿವಾಳಪ್ಪನ ಶಿಷ್ಯನಾದ ರಾಮಪ್ಪನ ಮಠವಿಲ್ಲಿದೆ. ಮಸೀದಿ ಹಾಗೂ ಶೇಕ್ ಸಾಹೇಬರ ದರ್ಗಾ ಕೂಡಾ ಇಲ್ಲಿವೆ.

**ಕೋಳಕೂರು** (೩೦೭೧) ತಾಲೂಕು ಕೇಂದ್ರವಾದ ಜೇವರ್ಗಿಯಿಂದ ಉತ್ತರಕ್ಕೆ ಎಂಟು ಕಿ. ಮೀ. ದೂರದಲ್ಲಿ ಭೀಮಾನದಿಯ ಬಲದಂಡೆ ಮೇಲಿರುವ ಚಾರಿತ್ರಿಕ ಮಹತ್ವದ ಊರಾಗಿದೆ. ಇಲ್ಲಿಂದ ಈವರೆಗೆ ಮೂರು ಶಾಸನಗಳು ವರದಿಯಾಗಿದ್ದು ಅವುಗಳಲ್ಲಿ ೧೧೮೦ರ ಶಾಸನ ಮಹಾಮಂಡಳೇಶ್ವರ ದೇವರಸರು ದಾನ ಬಿಟ್ಟ ಬಗ್ಗೆ ಹೇಳುತ್ತ ಸಾಂದರ್ಭಿಕವಾಗಿ ಮೂಲಸ್ಥಾನ, ವಿನಾಯಕ, ರೇವಣೇಶ್ವರ ಹಾಗೂ ಗ್ರಾಮೇಶ್ವರ ದೇವರುಗಳನ್ನು ಹೆಸರಿಸಿದರೆ, ಇನ್ನೊಂದು ಶಾಸನ (೧೨ನೇ ಶತಮಾನ) ಜಿನಾಲಯವೊಂದರ ಬಗ್ಗೆ ಹೇಳುತ್ತದೆ. ಊರಿಂದ ನಾಲ್ಕು ಕಿ. ಮೀ. ದೂರದಲ್ಲಿರುವ ಜೋಗಿ ಕೊಳ್ಳದಲ್ಲಿ ಶಾಸನವಿರುವ ಸುಮಾರು ನಾಲ್ಕು ಅಡಿಯ ಮಾಸ್ತಿಕಲ್ಲಿನಲ್ಲಿ, ನಿಧನ ಹೊಂದಿದ ಪತಿಯ ಶವವಿರುವ ಚಿತೆಯನ್ನು ಪ್ರವೇಶಿಸಲು ಸಿದ್ಧಳಾಗಿ ಎತ್ತರದ ವೇದಿಕೆಯ ಮೇಲೆ, ಮುಂಚಾಚಿದ ಬಲಗೈಯಲ್ಲಿ ಮಾದಲಿಕ ಹಣ್ಣನ್ನು

ಹಿಡಿದುಕೊಂಡು ನಿಂತಿರುವ ಸತಿಯ ವಿಶಿಷ್ಟ ಕೆತ್ತನೆಯಿದ್ದು ಉಳಿದಂತೆ ಎತ್ತಿದ ಬಲಗೈಯನ್ನುಳ್ಳ ಸ್ತಂಭದ ಕೆತ್ತನೆಯಿದೆ. ಮಾಸ್ತಿಕಲ್ಲಿನ ಮೇಲೆ ಸುಮಾರು ೧೩೯೧ರ ಶಾಸನವಿದ್ದು, ಸತಿ ಹೋದ ಜಾಯನಬ್ಬೆ ಅರಸಿಯ ಬಗ್ಗೆ ಉಲ್ಲೇಖಿಸುತ್ತದೆ.

ಇಲ್ಲಿಯ ದೇವಾಲಯಗಳಲ್ಲಿ ಹೊಳೆದಂಡೆಯಲ್ಲಿರುವ ಈಶ್ವರ ಗುಡಿಯು ಪ್ರಾಚೀನ ಶಿವಲಿಂಗವನ್ನು ಹೊಂದಿದ್ದರೆ, ಇಲ್ಲಿಯ ಸೊಪ್ಪೆಯ ಮಠವು ತೋಂಟದ ಸಿದ್ಧಲಿಂಗೇಶ್ವರರ ಸಮಕಾಲೀನನಾದ ವಚನಕಾರ ಸೊಪ್ಪೆಯ ಸಿದ್ಧಬಸವ ಪರಂಪರೆಯ ಮಠವಾಗಿದೆ. ಮೂಲತಃ ಶಿವಕಂಚಿಯವನಾದ ಸಿದ್ಧಬಸವನು ಇಲ್ಲಿಗೆ ಬಂದು ನೆಲಸಿ ಧರ್ಮ ಪ್ರಸಾರ ಕಾರ್ಯ ನಡೆಸಿ ಇಲ್ಲೇ ಲಿಂಗೈಕ್ಯನಾಗಿದ್ದು, ಇವನ ಸಮಾಧಿಯೇ ಸಿದ್ಧ ಬಸವೇಶ್ವರ ದೇವಾಲಯವಾಗಿದ್ದು ಇದರ ಜಾತ್ರೆಯು ಯುಗಾದಿಯಾದ ಐದನೆಯ ದಿನಕ್ಕೆ ಜರಗುತ್ತದೆ. ದೇವಾಲಯದ ಆವರಣದಲ್ಲಿ ಸುಮಾರು ೧೨ನೇ ಶತಮಾನಕ್ಕೆ ಸೇರಿದ ಮೂರ್‍ನಾಲ್ಕು ಪ್ರಾಚೀನ ಶಿವಲಿಂಗ, ಗಣಪತಿ,ನಂದಿ, ಮಹಿಷಮರ್ದಿನಿ ಹಾಗೂ ಸೂರ್ಯನ ಶಿಲ್ಪಗಳಿವೆ. ಉಳಿದಂತೆ ಊರಲ್ಲಿ ಬೀರಲಿಂಗ, ಹನುಮಂತ, ವಿಶ್ವೇಶ್ವರ ಹಾಗೂ ಈಶ್ವರ ಗುಡಿಗಳಿದ್ದು, ಷಣ್ಮುಖ ಶಿವಯೋಗಿಗಳ ಮಠವಿದೆ. ಅಷೂರ್‌ಖಾನ, ಮಸೀದಿ ಹಾಗೂ ದರ್ಗಾಗಳೂ ಕೂಡ ಇವೆ.

**ಗಂವ್ಹಾರ** (೩೨೩೩) ವು ತಾಲೂಕು ಕೇಂದ್ರವಾದ ಜೇವರ್ಗಿಯಿಂದ ದಕ್ಷಿಣಕ್ಕೆ ೨೦ ಕಿ. ಮೀ., ಜೇವರ್ಗಿ-ಶಹಾಪುರ ರಸ್ತೆಯ ಚಿಗರಹಳ್ಳಿ ಕ್ರಾಸ್‌ನಿಂದ ಪೂರ್ವಕ್ಕೆ ಸುಮಾರು ನಾಲ್ಕು ಕಿ.ಮೀ. ದೂರದಲ್ಲಿದೆ. ಪ್ರಾಚೀನ ಶಾಸನಗಳಲ್ಲಿ 'ಗವಹರ' ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಅಗ್ರಹಾರವಾಗಿದ್ದು ಮಹಾಜನಗಳ ಆಡಳಿತದಲ್ಲಿದ್ದಂತೆ ತೋರುತ್ತದೆ. ಇಲ್ಲಿಂದ ಈವರೆಗೆ ಸುಮಾರು ೧೨ನೇ ಶತಮಾನಕ್ಕೆ ಸೇರಿದ ಮಹಾಮಂಡಳೇಶ್ವರ ಅಲ್ಲಹುಲಿ ದೇವರಸನ ಉಲ್ಲೇಖವನ್ನು ಹೊಂದಿರುವ ಶಾಸನವು ವರದಿಯಾಗಿದೆ. ಇಲ್ಲಿಯ ಅಮೃತೇಶ್ವರ ಗುಡಿಯಲ್ಲಿರುವ ಇದೊಂದು ದಾನ ಶಾಸನವಾಗಿದ್ದು ವಿಷಯ ಅಸ್ಪಷ್ಟವಾಗಿದೆ. ಶಾಸನದಲ್ಲಿ ಬಾಲಶಿಕ್ಷೆ ಉಲ್ಲೇಖವಿರುವುದರಿಂದ ವಿದ್ಯಾದಾನಕ್ಕಾಗಿ ನೀಡಿದ ದತ್ತಿ ಇದೆಂಬ ಅಂಶ ಗೊತ್ತಾಗುತ್ತದೆ.

ಊರಲ್ಲಿರುವ ದೇವಾಲಯಗಳಲ್ಲಿ ಕಪಾಲೇಶ್ವರ ಗುಡಿಯು ಪುರಾತನದ್ದಾಗಿದೆ. ಎತ್ತರವಾದ ಅಧಿಷ್ಠಾನದ ಮೇಲೆ ನಿಂತಿರುವ ಈ ದೇಗುಲವಿಂದು ಬಹಳ ಶಿಥಿಲಗೊಂಡಿದ್ದು, ಗರ್ಭಗೃಹ ಹಾಗೂ ಅಂತರಾಳಗಳಷ್ಟೆ ಉಳಿದಿದ್ದು, ನವರಂಗ ಭಾಗ ನಾಶವಾಗಿದೆ. ಈ ಗುಡಿಯ ಕಂಬಗಳು ಸುಮಾರು ಹತ್ತನೆಯ ಶತಮಾನಕ್ಕೆ ಸೇರಿದ್ದಾಗಿವೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲ ಚೌಕಟ್ಟು ಆಕರ್ಷಕವಾಗಿದ್ದು ಬುಡದಲ್ಲಿ ಶೈವದ್ವಾರಪಾಲಕರಿದ್ದಾರೆ. ಇಲ್ಲಿಯ ಅಮೃತೇಶ್ವರ ಗುಡಿ ಸಾಕಷ್ಟು ಜೀರ್ಣೋದ್ಧಾರಗೊಂಡಿರುವ ಹಳೆಯ ದೇಗುಲವಾಗಿದೆ. ಇದರ ಗರ್ಭಗೃಹದಲ್ಲಿ ಸ್ವಯಂಭು ಲಿಂಗವಿದ್ದು, ಗರ್ಭಗೃಹದ ಬಾಗಿಲ ಬಲಗಡೆಗೆ ಐದು ಮುಖಗಳುಳ್ಳ ಅಪರೂಪದ ಪಂಚಲಿಂಗವಿದ್ದು ಗಮನಾರ್ಹವಾಗಿದೆ. ಈ ದೇವಾಲಯದ ಆವರಣದ ಉತ್ತರ ಗೋಡೆಯ ಬಳಿ ಗಣೇಶ, ಸೂರ್ಯ, ಭೈರವ ಹಾಗೂ ಸಪ್ತಮಾತೃಕೆಯರ ಭಗ್ನ ಶಿಲ್ಪಗಳಿವೆ. ದೀಪಾವಳಿ ಸಂದರ್ಭದಲ್ಲಿ ಅಮೃತೇಶ್ವರ ದೇವರ ಜಾತ್ರೆಯಾಗುತ್ತದೆ. ಗ್ರಾಮದ ಮುಖ್ಯರಸ್ತೆಗೆ ಸೇರಿದಂತೆ ಇರುವ ದೊಡ್ಡ ಮಂಟಪವನ್ನು ಸ್ಥಳೀಕರು ಸರಸ್ವತಿ ಮಂದಿರವೆಂದು ಕರೆಯುತ್ತಾರೆ. ಇಲ್ಲಿ ಗಣೇಶ, ಧರಣೇಂದ್ರ ಯಕ್ಷ ಹಾಗೂ ಪದ್ಮಾವತಿ ಯಕ್ಷಿಯರ ಸುಂದರ ಬಿಡಿ ಶಿಲ್ಪಗಳಿವೆ. ಊರ ದಕ್ಷಿಣದಲ್ಲಿ ನಾಥಪಂಥಕ್ಕೆ ಸೇರಿದ ಮಠವಿದೆ. ಊರ ಉತ್ತರಕ್ಕೆ ಮಾಲಿಗೌಡರ ಹೊಲದಲ್ಲಿ ಹಿಂದು-ಮುಸ್ಲಿಂ ಶೈಲಿಯ ಕಲ್ಯಾಣೇಶ್ವರರ ಗುಡಿ ಇದೆ. ಉಳಿದಂತೆ ಹನುಮಂತ, ಬಸವಣ್ಣ ಮುಂತಾದ ನವೀನ ಗುಡಿಗಳಿದ್ದು, ಮಸೀದಿ ಹಾಗೂ ದರ್ಗಾ ಕೂಡ ಇವೆ.

**ಗುರಮಠಕಲ್** (೧೩೬೭೪) ತಾಲೂಕು ಕೇಂದ್ರವಾದ ಯಾದಗಿರಿಯಿಂದ ಈಶಾನ್ಯಕ್ಕೆ ೪೦ ಕಿ. ಮೀ., ದೂರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದ್ದು, ಊರ ಹೊರಗೆ ಚಂಡ್ರಕಿ ರಸ್ತೆಯಲ್ಲಿರುವ ವಿರಕ್ತಮಠ (ಶಾಂತವೀರ ಮಠ/ ಖಾಸಾಮಠ) ದಿಂದಾಗಿ ಪ್ರಸಿದ್ಧವಾಗಿದೆ. ಇದು ಸುಮಾರು ೧೫೦ ವರ್ಷಗಳಷ್ಟು ಪ್ರಾಚೀನವಾದ ಕಟ್ಟಡವಾಗಿದ್ದು, ಇಲ್ಲಿ ಚಿತ್ರದುರ್ಗದ ಮುರುಘರಾಜೇಂದ್ರ ಸ್ವಾಮಿಗಳ ಗದ್ದುಗೆಯೂ ಸೇರಿದಂತೆ ಆರು ಗದ್ದುಗೆಗಳಿದ್ದು, ಮಠವು ಆಕರ್ಷಕವಾಗಿದೆ. ಉಳಿದಂತೆ ಊರಲ್ಲಿ ಹನುಮಂತ, ವೆಂಕಟರಮಣ, ಅಂಬಾಭವಾನಿ ನಗರೇಶ್ವರ, ಈಶ್ವರ, ವೀರಭದ್ರ, ಎಲ್ಲಮ್ಮ, ಗಣಪತಿ ಮುಂತಾದ ನವೀನ ಗುಡಿಗಳಿದ್ದು, ಈಶ್ವರ ಗುಡಿ (ಪೇಟೆ) ಆವರಣದಲ್ಲಿ ಇರುವ ಆದಿತ್ಯನ ಶಿಲ್ಪ ವಿಶಿಷ್ಟವಾಗಿದೆ. ಹನುಮಂತನ ಗುಡಿಯು ಸು. ೧೨ನೇ ಶತಮಾನದ ಕಲ್ಯಾಣದ ಚಾಳುಕ್ಯರ ಕಾಲದ ಕಂಬಗಳನ್ನು ಬಳಸಿ ಪುನಃ ನಿರ್ಮಿಸಿದ ದೇವಾಲಯವಾಗಿದೆ.

ಇಲ್ಲಿಯ ಕೆಲವು ಪುಷ್ಕರಣಿಗಳು ಬೃಹತ್ತಾಗಿದ್ದು (ಈಶ್ವರ, ಎಲ್ಲಮ್ಮ, ಹನುಮಂತ) ಆಕರ್ಷಕವಾಗಿವೆ. ಇವುಗಳೊಂದಿಗೆ ನಬಿ ಸಾಬ್ ಮತ್ತು ಮುತಾವಲಿ ಹುಸೇನ್ ದರ್ಗಾಗಳಿದ್ದು, ಮಸೀದಿಯೂ ಇದೆ.

**ಗುರುಮಠಕಲ್ ಜಲಪಾತ** ವು ಯಾದಗಿರಿ ತಾಲೂಕಿಗೆ ಸೇರಿದ ಗುರುಮಠಕಲ್ ಪಟ್ಟಣದಿಂದ ನಜಾರಾಪುರಕ್ಕೆ ಹೋಗುವ ಹಾದಿಯಲ್ಲಿ ನಾಲ್ಕು ಕಿ. ಮೀ. ದೂರದಲ್ಲಿರುವ ನಿಸರ್ಗದತ್ತ ತಾಣವಾಗಿದೆ. ಸುಮಾರು ೨೫-೩೦ ಅಡಿ ಎತ್ತರದಿಂದ ಧುಮುಕುವ ಈ ಜಲಪಾತವನ್ನು ವೀಕ್ಷಿಸಲು ಮಳೆಗಾಲ ಸೂಕ್ತವಾಗಿದೆ. ಆದರೆ ಇದನ್ನು ತಲುಪುವುದೇ ಕಷ್ಟಕರವಾಗಿದ್ದು, ಪ್ರವಾಸಾಭಿವೃದ್ಧಿಗೆ ಸದಾವಕಾಶವಿದೆ.

**ಗುರಸಣಗಿ (ಗುಲಸರಮ್)** (೨೫೨೨)ಯು ತಾಲೂಕು ಕೇಂದ್ರವಾದ ಶಹಾಪುರದಿಂದ ಪೂರ್ವಕ್ಕೆ ೨೪ ಕಿ.ಮೀ., ಯಾದಗಿರಿಯಿಂದ ಪಶ್ಚಿಮಕ್ಕೆ ಐದು ಕಿ. ಮೀ ದೂರದಲ್ಲಿ ಶಹಾಪುರ-ಯಾದಗಿರಿ ರಸ್ತೆಯಲ್ಲಿರುವ ಪ್ರಾಗೈತಿಹಾಸಿಕ ಹಿನ್ನೆಲೆಯುಳ್ಳ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಗುರುಸಣಂಬೆ' ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಸಗರ-೫೦೦ಕ್ಕೆ ಸೇರಿತ್ತು. ಊರ ಬಳಿಯಿರುವ ಶಾಸನೋಕ್ತ ಗುರಸಣಂಬೆ ಬೆಟ್ಟದ ಮೇಲೆ ನೂತನ ಶಿಲಾಯುಗ ಸಂಸ್ಕೃತಿಗೆ ಸೇರಿದ ಶಿಲಾಯುಧಗಳೇ ಮುಂತಾದ ಅವಶೇಷಗಳು ಪತ್ತೆಯಾಗಿವೆ. ಅದೇ ರೀತಿ ಇಲ್ಲಿ ಶಾತವಾಹನರ ಕಾಲಕ್ಕೆ ಸೇರಿದ ಇಟ್ಟಿಗೆಗಳನ್ನು ದೊಡ್ಡ ಪ್ರಮಾಣದಲ್ಲಿ ನೋಡಬಹುದಾಗಿದ್ದು, ಇವು ಶಾತವಾಹನರ ಕಾಲದ ಎರಡು ಸ್ತೂಪಗಳ ಅವಶೇಷಗಳಿರಬೇಕೆಂಬ ಅಭಿಪ್ರಾಯವಿದೆ. ಗುಡ್ಡದ ಮೇಲಿರುವ ಸಿದ್ಧಲಿಂಗೇಶ್ವರ ಗುಡಿಯ ಬಳಿ ಇರುವ ಗವಿಯಲ್ಲಿ ಭೋದಿವೃಕ್ಷ ಫಲಕ ಹಾಗೂ ಧರ್ಮಚಕ್ರ ಸ್ತಂಭದ ತುಂಡುಗಳಿವೆ. ಸುಮಾರು ೧-೨ನೇ ಶತಮಾನಕ್ಕೆ ಸೇರಿದ ಇಲ್ಲಿಯ ಶಾತವಾಹನ ಅವಶೇಷಗಳ ಸಂಶೋಧನೆಯಿಂದ ಹಿಂದೆ ಇದು ಪ್ರಮುಖ ಬೌದ್ಧ ಕೇಂದ್ರವಾಗಿತ್ತೆಂಬ ಅಂಶ ಸ್ಪಷ್ಟವಾಗುತ್ತದೆ. ಗುಡ್ಡದ ಮೇಲೆ ಕೆಳಗಿನ ಸ್ತರದಲ್ಲಿ 'ಚಂದಾ ಹುಸೇನಿ ದರ್ಗಾ' ಇದೆ. ಮೂಲತಃ ಇದೊಂದು ಶಿವಾಲಯವಾಗಿದ್ದು ನಂತರದಲ್ಲಿ ದರ್ಗಾವಾಗಿರುವಂತೆ ತೋರುತ್ತದೆ. ಈ ಗುಡ್ಡದ ತುದಿಯಲ್ಲಿ ಸಿದ್ಧಲಿಂಗೇಶ್ವರ ಗುಡಿ ಇದೆ. ಗುಡಿಯ ಬಳಿಯಿರುವ ಬಾವಿಗೆ ಸೇರಿದಂತೆ ಇರುವ ಬಂಡೆಯ ಮೇಲೆ ಕಳಚೂರಿ ಸಂಕಮನ ಕಾಲಕ್ಕೆ ಸೇರಿದ ಎರಡು ಹಾಗೂ ಕಳಚೂರಿ ಸಿಂಗಣದೇವನ ಕಾಲಕ್ಕೆ ಸೇರಿದ ಒಂದು ಶಾಸನವಿದೆ. ಇವುಗಳಲ್ಲಿ ೧೧೭೭ರ ಶಾಸನವು ಗುರುಸಣಂಬೆಯ ಸ್ವಯಂಭು ಸಿದ್ಧೇಶ್ವರನಾಥ ದೇವರಿಗೆ ಹಾಗೂ ಅಲ್ಲಿಯ ವಿದ್ಯಾರ್ಥಿಗಳಿಗೆಂದು ಮಹಾಸಾಮಂತ ಬಮ್ಮಿದೇವರಸನ ಬೇಡಿಕೆಯಂತೆ ಹಿಂದೆ ಕಲ್ಯಾಣದ ಚಾಳುಕ್ಯ ಅರಸ ಒಂದನೆ ಜಯಸಿಂಹ ಹಾಗೂ ರಾಣಿ ಸುಗ್ಗಲಾದೇವಿಯರು ನೀಡಿದ್ದ ದಾನವನ್ನು ಗುಡಿಯ ಆಚಾರ್ಯರಾದ ಕೇಶವಪಂಡಿತರಿಗೆ ಪುನರ್ಭರಣ ಮಾಡಿದ ಅಂಶವನ್ನು ತಿಳಿಸಿದರೆ ೧೧೭೮ರ ಶಾಸನ ಗುಡಿಯ ಆಚಾರ್ಯ ಶಂಕರ ಶಿವಪಂಡಿತರಿಗೆ ಗುರುಸಣಂಬೆಯ ಪ್ರಭು, ಮೂಲಿಗರಾದಿಯಾಗಿ ಇನ್ನಿತರ ಅಧಿಕಾರಿಗಳು ದೇವರ ಪೂಜಾವಿಧಿಗೆಂದು ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಅಲ್ಲೇ ಇರುವ ೧೧೮೨ರ ಇನ್ನೊಂದು ಶಾಸನವು ಅದೇ ದೇವರಿಗೆ ಮಹಾಪ್ರಧಾನ ಪದ್ಮದೇವರಸ, ಅವನ ರಾಣಿ ಮಲ್ಲಹಣಿದೇವಿ ಹಾಗೂ ಇತರರು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಇದರಿಂದ ಶಾಸನೋಕ್ತ ಸ್ವಯಂಭು ಸಿದ್ಧೇಶ್ವರವೇ ಇಂದಿನ ಸಿದ್ಧಲಿಂಗೇಶ್ವರ ದೇಗುಲವೆಂದು ಗೊತ್ತಾಗುತ್ತದೆ. ಈ ದೇವಾಲಯವು ಮೂಲದಲ್ಲಿ ಗರ್ಭಗೃಹ, ತೆರೆದ ಅಂತರಾಳ, ನವರಂಗ ಹಾಗೂ ನಂದಿ ಮಂಟಪಗಳನ್ನು ಹೊಂದಿದ್ದು ಈಗ ಇದರ ಸುತ್ತ ಕಂಬಗಳನ್ನು ಬಳಸಿ ಹಜಾರವನ್ನು ನಿರ್ಮಿಸಿದ್ದಾರೆ. ಗರ್ಭಗೃಹದಲ್ಲಿ ಬಲಹರಿ ಶಿವಲಿಂಗವಿದ್ದು, ನವರಂಗದಿಂದ ಎಡಭಾಗದಲ್ಲಿರುವ ಬಾವಿಗೆ ಹೋಗಲು ದ್ವಾರವಿದೆ. ಸಿಡಿಲಭಾವಿ ಎಂದೇ ಪ್ರಸಿದ್ಧವಾಗಿರುವ ಇದರ ನೀರು ಬಹಳ ರುಚಿಯಾಗಿದ್ದು, ಸುರಪುರದ ಅರಸರು ಇದನ್ನು ಮೆಚ್ಚಿ ತರಿಸಿಕೊಳ್ಳುತ್ತಿದ್ದರಂತೆ. ಈ ಗುಡಿಯ ಬಳಿಯ ಗವಿಯಲ್ಲೇ ಶಾತವಾಹನರ ಕಾಲದ ಬೌದ್ಧ ಅವಶೇಷಗಳು ಪತ್ತೆಯಾಗಿರುವುದು ಗಮನಾರ್ಹವಾಗಿದೆ. ಗುಡ್ಡದ ಬುಡದಲ್ಲಿರುವ ಊರಲ್ಲಿ ಜಲಾಲ್ ದೋಂಗಿ ದರ್ಗಾ ಇದ್ದು, ಇದರ ಉರುಸು ಸೆಪ್ಟೆಂಬರ್ ತಿಂಗಳಲ್ಲಿ ಜರುಗುತ್ತದೆ. ಈ ದರ್ಗಾದ ಬಳಿ ಇರುವ ಮಸೀದಿಯನ್ನು ಕಲ್ಯಾಣದ ಚಾಳುಕ್ಯರ ಕಾಲದ ಕಂಬಗಳನ್ನು ಬಳಸಿ ನಿರ್ಮಿಸಲಾಗಿದ್ದು ಅವುಗಳಲ್ಲಿ ಒಂದೆರಡರ ಮೇಲೆ ಶಾಸನಗಳೂ ಇವೆ. ಇಲ್ಲಿಯ ನಗರಖಾನವನ್ನೂ ಕೂಡ ಚಾಳುಕ್ಯ ಕಂಬಗಳನ್ನೇ ಬಳಸಿ ನಿರ್ಮಿಸಲಾಗಿದೆ. ಉಳಿದಂತೆ ಊರಲ್ಲಿ ಹನುಮಂತ ಬಸವಣ್ಣ, ಮರಗಮ್ಮ ಮುಂತಾದ ನವೀನ ದೇವಾಲಯಗಳಿವೆ. ಹಿಂದೆ ಈ ಊರನ್ನು ಘುಶೃಣೇಶ್ವರ ಎಂದು ಕರೆಯುತ್ತಿದ್ದರೆಂದು ಐತಿಹ್ಯವಿದೆಯಾದರೂ ಊರ

ಹೆಸರು ಮೂಲತಃ ಗುರಸಣಂಬೆಯಾಗಿದ್ದು ಮುಂದೆ ಗುರಸಣಗಿಯಾಗಿ,ಆದಿಲ್ ಶಾಹಿ ಆಳ್ವಿಕೆಯಲ್ಲಿ ಗುಲಸರಮ್ ಆಗಿ ರೂಪಾಂತರಗೊಂಡಿದೆ. ಇಲ್ಲಿಯ ಸಿದ್ಧಲಿಂಗೇಶ್ವರ ದೇವರ ಜಾತ್ರೆಯು ಭಾದ್ರಪದ ಪ್ರತಿಪದದಂದು ಜರುಗುತ್ತದೆ.

**ಗುಲಬರ್ಗಾ (ಕಲ್ಬುರ್ಗಿ)** (೩,೧೦,೯೨೦) ವು ಬೆಂಗಳೂರಿನಿಂದ ಉತ್ತರಕ್ಕೆ ರಸ್ತೆ ಮಾರ್ಗವಾಗಿ ೭೦೩ ಕಿ.ಮೀ., ರೈಲು ಮಾರ್ಗವಾಗಿ ೭೪೩ ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಜಿಲ್ಲಾ ಹಾಗೂ ವಿಭಾಗೀಯ ಕೇಂದ್ರವಾಗಿದ್ದು, ರಾಜ್ಯಹೆದ್ದಾರಿ ಸಂಖ್ಯೆ ಹತ್ತು ಹಾಗೂ ಹದಿನೆಂಟು ಇದರ ಮೂಲಕ ಹಾದುಹೋಗುತ್ತವೆ. ಪ್ರಾಚೀನ ಶಾಸನಗಳಲ್ಲಿ ಕಲಂಬರಿಗೆ, ಕಲುಂಬರಿಗೆ, ಕಲುಬರಗೆ ಎಂದೆಲ್ಲಾ ಉಲ್ಲೇಖಿತಗೊಂಡಿರುವ ಈ ಊರು ಹಿಂದೆ ಆಲಂದೆ-೧೦೦೦ಕ್ಕೆ ಸೇರಿದ ಗೊಂಕ-೧೨೦ ಕಂಪಣಕ್ಕೆ ಒಳಪಟ್ಟಿದ್ದ ಒಂದು ಸಣ್ಣ ಪಟ್ಟಣವಾಗಿದ್ದು, ೧೩೪೭ ರಿಂದ ೧೪೨೪ರವರೆಗೆ ಬಹಮನಿ ಸಾಮ್ರಾಜ್ಯದ ರಾಜಧಾನಿಯಾಗಿದ್ದು, ಮುಂದೆ ೧೫೩೭ರ ವೇಳೆಗೆ ಕಲುಬರಿಗಿ ನಾಡಾಗಿ ರೂಪಿತಗೊಂಡ ಅಂಶ ಶಾಸನಗಳಿಂದ ವೇದ್ಯವಾಗುತ್ತದೆ. ಇದರಿಂದ ಗುಲಬರ್ಗಾದ ಪ್ರಾಚೀನ ರೂಪ ಕಲುಂಬರಿಗೆಯಾಗಿದ್ದು ಇದರ ನಿಷ್ಪತ್ತಿಯನ್ನು ಜನಾಂಗಿಯ ನೆಲೆಯಲ್ಲಿ ಗುರುತಿಸಬೇಕೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟರೆ, ಅದರ ಮೂಲವನ್ನು ನಿಸರ್ಗದ ನೆಲೆಯಲ್ಲಿ ಗುರುತಿಸಬೇಕೆಂದು ಮತ್ತೆ ಕೆಲವರು ಅಭಿಪ್ರಾಯಪಡುತ್ತಾರೆ. 'ಗುಲಬರ್ಗಾ' ನಾಮಪದವು ಮುಸ್ಲಿಂ ಆಡಳಿತದಲ್ಲಿ ಕಲ್ಬುರ್ಗಿಗೆ ಪರ್ಯಾಯವಾಗಿ ಬಳಕೆಗೆ ಬಂದಿದ್ದು ಗುಲಚಂದನಿಗಾಗಲಿ, ಗುಲಾಬಿ ಹೂವಿಗಾಗಲಿ ಇದರ (ಗುಲಬರ್ಗಾ) ನಿಷ್ಪತ್ತಿಯನ್ನು ಗುರುತಿಸುವದು ಆಧಾರರಹಿತವೆನಿಸುತ್ತದೆ. ಹೈದರಾಬಾದಿನ ನಿಜಾಮರ ಸರ್ಕಾರ ೧೮೬೩ರಲ್ಲಿ ಜಿಲ್ಲಾ ರಚನೆ (ಜಿಲ್ಲಾ ಬಂದಿ)ಯಲ್ಲಿ ತೊಡಗಿದಾಗ ಶೋರಾಪುರ (ಸುರಪುರ)ವು ಒಂಭತ್ತು ತಾಲೂಕುಗಳನ್ನೊಳಗೊಂಡ ಜಿಲ್ಲಾ ಕೇಂದ್ರವಾಗಿ ರೂಪಿತಗೊಂಡಿದ್ದು, ಅದರಲ್ಲಿ ಗುಲಬರ್ಗಾ ಕೂಡ ಒಂದು ತಾಲೂಕಾಗಿತ್ತು. ಆದರೆ ಮುಂದೆ ೧೮೭೩ರಲ್ಲಿ ಏಳು ತಾಲೂಕುಗಳನ್ನೊಳಗೊಂಡ ಪ್ರತ್ಯೇಕ ಜಿಲ್ಲೆಯಾಗಿ ಗುಲಬರ್ಗಾ ರೂಪಿತಗೊಂಡಿತು. ೧೯೫೬ರಲ್ಲಿ ಇದು ವಿಭಾಗೀಯ ಕೇಂದ್ರವೂ ಆಯಿತು.

ಆರಂಭದಲ್ಲಿ ಒಂದು ಸಣ್ಣ ಪಟ್ಟಣವಾಗಿದ್ದು, ಇಂದು ಜಿಲ್ಲಾ ಹಾಗೂ ವಿಭಾಗೀಯ ಕೇಂದ್ರವಾಗಿ ಬೆಳೆದಿರುವ ಗುಲಬರ್ಗಾ ಪಟ್ಟಣದಿಂದ ಈವರೆಗೆ ಬಾದಾಮಿ ಚಾಳುಕ್ಯರ ಕಾಲಕ್ಕೆ ಸೇರಿದ ಒಂದು ಕೂಟ ತಾಮ್ರಶಾಸನ, ಬಹಮನಿ ಆದಿಲ್ ಷಾಹಿ ಹಾಗೂ ಮೊಗಲರ ಕಾಲಕ್ಕೆ ಸೇರಿದ ಪರ್ಷಿಯನ್ ಹಾಗೂ ಅರಬಿಕ್ ಭಾಷೆಯಲ್ಲಿರುವ ಸುಮಾರು ೨೮ ಕ್ಕೂ ಹೆಚ್ಚು ಶಾಸನಗಳು ವರದಿಯಾಗಿವೆ. ಗುಲಬರ್ಗಾದಿಂದ ವರದಿಯಾಗಿರುವ ಬಾದಾಮಿ ಚಾಳುಕ್ಯ ಅರಸ ವಿನಯಾದಿತ್ಯನ ಕಾಲದ್ದೆಂದು ಹೇಳುವ ತಾಮ್ರ ಶಾಸನವು ಕೂಟ ಶಾಸನವಾಗಿರುವುದರಿಂದ ಅಗಣ್ಯವೆನಿಸುತ್ತದೆ. ಗುಲಬರ್ಗಾ ಪಟ್ಟಣಕ್ಕೆ ಸಂಬಂಧಿಸಿದಂತೆ ಮುಸ್ಲಿಂ ಆಳ್ವಿಕೆಯ ಪೂರ್ವ ಕಾಲಕ್ಕೆ ಸೇರಿದ ಶಾಸನಗಳಾವುವೂ ಈವರೆಗೆ ಗುಲಬರ್ಗಾದಲ್ಲಿ ಲಭಿಸಿಲ್ಲ. ಆದರೆ ಗುಲಬರ್ಗಾಕ್ಕೆ ಸುಮಾರು ಮೂರು ಕಿಮೀ ದೂರದಲ್ಲಿರುವ ನಾಗನಹಳ್ಳಿಯ ನಾಗಲಿಂಗೇಶ್ವರ ದೇವಾಲಯದ ಮುಂದಿರುವ ಸುಮಾರು ೧೪ನೇ ಶತಮಾನಕ್ಕೆ ಸೇರಿದ ತ್ರುಟಿತ ಶಾಸನದಲ್ಲಿ ಕಲಂಬರಿಗೆಯ ಸ್ವಯಂಭು ಸೋಮೇಶ್ವರ ದೇವಾಲಯದ ಉಲ್ಲೇಖವಿರುವುದು ಗಮನಾರ್ಹ ಅಂಶವಾಗಿದೆ. ಈ ಶಾಸನದಲ್ಲಿ ಉಕ್ತವಾಗಿರುವ ಸ್ವಯಂಭು ಸೋಮೇಶ್ವರ ದೇವಾಲಯವೇ ಪ್ರಾಯಶಃ ಗುಲಬರ್ಗಾ ನಗರದ ಕೋಟೆಯ ಒಳಗೆ ಆಗ್ನೇಯ ದಿಕ್ಕಿನಲ್ಲಿ ಕೋಟೆಗೆ ಹೊಂದಿಕೊಂಡಂತೆ ಇರುವ ದೇವಾಲಯವಾಗಿದ್ದು, ಇಂದು ಪಾಳು ಬಿದ್ದಿದೆ. ಭಾಗಶಃ ಕೋಟೆಯೊಳಗೆ ಸೇರಿಹೋಗಿರುವ ಈ ದೇಗುಲದ ಕಲಾತ್ಮಕವಾದ ೨೮ ಕಂಬಗಳು, ಚಿತ್ತಾಕರ್ಷಕ ಕೆತ್ತನೆಯ ಛಾವಣಿಯನ್ನೂ (ಭಾಗಶಃ ಹಾಳಾಗಿದೆ) ಹೊಂದಿರುವ ವಿಶಾಲವಾದ ಸಭಾಮಂಟಪವಷ್ಟೇ ಇಂದು ಉಳಿದಿದ್ದು, ಸಾಂಧರ್ಭಿಕ ಆಧಾರಗಳಿಂದ ಇದು ತ್ರಿಕೂಟವಾಗಿದ್ದಿರಬಹುದೆಂದು ಊಹಿಸಬಹುದಾಗಿದ್ದು, ಇದನ್ನು ತಲುಪುವುದೇ ದುಸ್ತರವಾಗಿದೆ.

೧೪೨೪ರವರೆಗೆ ಬಹಮನಿ ಸಾಮ್ರಾಜ್ಯದ ರಾಜಧಾನಿಯಾಗಿ ಮೆರೆದ ಈ ಪಟ್ಟಣದಲ್ಲಿ ಬಹಮನಿ ಅರಸರ ಕಾಲದ ಕೋಟೆ, ಅರಮನೆ, ಮಸೀದಿ, ಗುಮ್ಮಟ, ದರ್ಗಾ, ಬಜಾರ್ ಹಾಗೂ ಇನ್ನಿತರ ಕಟ್ಟಡಗಳಿವೆ. ಅಹ್ಮದ್ ಬಹಮನ್ ಷಾನ ಆಳ್ವಿಕೆಯಲ್ಲಿ ರಾಜಧಾನಿಯು ಬೀದರ್‌ಗೆ ೧೪೨೪ರಲ್ಲಿ ವರ್ಗಾಯಿಸಲ್ಪಟ್ಟಿತು. ೧೪೮೫ರ ನಂತರ ಬಹಮನಿ ಸಾಮ್ರಾಜ್ಯ ಪತನಗೊಳ್ಳಲಾರಂಭಿಸಿತು. ೧೫೦೪ರಲ್ಲಿ ಬಿಜಾಪುರದ ಆದಿಲ್ ಷಾಹಿಗಳಿಗೆ ಶಾಶ್ವತವಾಗಿ ಕೈವಶವಾದ ಇದು ಮೀರ್‌ಜುಮ್ಲಾನ ಆಕ್ರಮಣದಿಂದಾಗಿ ೧೬೫೭ರಲ್ಲಿ ಮೊಗಲರ ಕೈಸೇರಿತು. ಮುಂದೆ ನಿಜಾಮರ ಆಳ್ವಿಕೆಗೆ ಒಳಪಟ್ಟಿದ್ದು ೧೯೫೬ರಲ್ಲಿ ರಾಜ್ಯ ಪುನರಚನೆ ಸಂದರ್ಭದಲ್ಲಿ ಕರ್ನಾಟಕ ರಾಜ್ಯಕ್ಕೆ ಸೇರಿತು.

ಗುಲಬರ್ಗಾದ ಕೋಟೆಯನ್ನು ವಾರಂಗಲ್‌ನ ಅರಸ ರಾಜಾ ಗುಲಚಂದನು ನಿರ್ಮಿಸಿದ್ದು, ಅದನ್ನು ನಂತರ ಅಲ್ಲಾವುದ್ದೀನ್ ಬಹಮನ್ ಷಾನು ಬಲಿಷ್ಠಗೊಳಿಸಿದನೆಂಬ ಅಭಿಪ್ರಾಯವಿದೆಯಾದರೂ ರಾಜಾ ಗುಲಚಂದನೇ ಈ ಕೋಟೆಯನ್ನು ಕಟ್ಟಿಸಿದನೆಂದು ಹೇಳಲು ಚಾರಿತ್ರಿಕ ಪುರಾವೆಗಳ ಕೊರತೆ ಇದೆ. ಸುಮಾರು ೨೦ ಎಕರೆಯಷ್ಟು ವಿಶಾಲವಾದ ಪ್ರದೇಶವನ್ನು ಹೊಂದಿರುವ ಮೂರು ಕಿ.ಮೀ ಸುತ್ತಳತೆಯ ಈ ಕೋಟೆಯು ಎರಡು ಸುತ್ತಿನದಾಗಿದ್ದು, ಹೊರಕೋಟೆಯು ಎತ್ತರದಲ್ಲಿ ಕಿರಿದಿದ್ದು, ಒಳಕೋಟೆ ಎತ್ತರವಾಗಿದ್ದು ಸುತ್ತ ೩೦ ಅಡಿಯ ಕಂದಕವಿದೆ. ನಿರ್ದಿಷ್ಟ ಅಂತರದಲ್ಲಿ ಬೃಹತ್ ತೆನೆಗಳನ್ನು ಹೊಂದಿರುವ ಈ ಕೋಟೆಯು ೧೫ ಬುರುಜುಗಳನ್ನು ಹೊಂದಿದ್ದು, ಇಲ್ಲಿ ಸುಮಾರು ೨೬ ಫಿರಂಗಿಗಳಿವೆ. ಇವುಗಳಲ್ಲಿ ಒಂದು ಸುಮಾರು ೨೫ ಅಡಿಯಷ್ಟು ಉದ್ದವಿದೆ. ಇದರ ಹೆಬ್ಬಾಗಿಲ ಬಳಿ ಕಾಮನಬಾವಿ ಇದ್ದು ಕೋಟೆಯ ಒಳಗೆ ನಡುವೆ ಎತ್ತರದ ವಾಡೆಯಿದ್ದು, ಮೇಲೆ ಮೂರ್‍ನಾಲ್ಕು ತೋಪುಗಳಿವೆ. ಗುಲಬರ್ಗಾದ ಕೋಟೆಯ ರಚನೆಯಲ್ಲಿ ಪಶ್ಚಿಮ ಏಷ್ಯಾ ಮತ್ತು ಐರೋಪ್ಯ ಕ್ಷಾತ್ರ ವಾಸ್ತುವಿನ ಪ್ರಭಾವ ಗಾಢವಾಗಿದೆಯೆಂಬ ಅಭಿಪ್ರಾಯವಿದೆ. ಇದು ಅಲ್ಲಾವುದ್ದೀನ್ ಬಹಮನ್ ಷಾ (೧೩೪೭-೫೮)ನ ಕಾಲದ ಸುಭದ್ರ ರಚನೆಯಾಗಿದೆ.

ಕೋಟೆಯೊಳಗಿದ್ದ ಆ ಕಾಲದ ಅರಮನೆ ಇತ್ಯಾದಿ ಕಟ್ಟಡಗಳೆಲ್ಲ ಈಗ ನೆಲಸಮವಾಗಿವೆಯಾದರೂ ಇನ್ನೂ ಉತ್ತಮ ಸ್ಥಿತಿಯಲ್ಲಿರುವ ಜುಮ್ಮಾ ಮಸೀದಿ ಗಮನಾರ್ಹವಾಗಿದೆ. ಒಂದನೇಯ ಮಹಮ್ಮದ್‌ನ ಕಾಲದಲ್ಲಿ ಇರಾನಿನ ಕ್ವಾಜ್ವಿನ್ ಪ್ರಾಂತ್ಯದ ನಿವಾಸಿ 'ರಫಿ' ಎಂಬ ಶಿಲ್ಪಿಯಿಂದ ರಚಿತವಾಗಿ ೧೩೬೭ರಲ್ಲಿ ಪೂರ್ಣಗೊಂಡ ಈ ಮಸೀದಿಯು ಪೂರ್ವ-ಪಶ್ಚಿಮವಾಗಿ ೨೧೬ ಅಡಿ ಉದ್ದವಿದ್ದು, ಉತ್ತರ-ದಕ್ಷಿಣವಾಗಿ ೧೭೬ ಅಡಿ ಅಗಲವಾಗಿದ್ದು, ವಿಶಿಷ್ಟವಾಗಿದೆ. ಇದರಲ್ಲಿ ಮಸೀದಿಗಳ ಸಾಂಪ್ರದಾಯಿಕ ವಿನ್ಯಾಸದಂತೆ ಇರಬೇಕಾದ ತೆರೆದ ಅಂಗಳವಾಗಲೀ ನೀರಿನ ತೊಟ್ಟಿಯಾಗಲೀ ಇಲ್ಲ. ೧೪೦ ಸ್ತಂಭಗಳ ಮೇಲೆ ನಿಂತಿರುವ ಈ ಮಸೀದಿಯಲ್ಲಿ ೨೫೦ ಕಮಾನುಗಳಿದ್ದು, ಇದಕ್ಕಿರುವ ಐದು ದೊಡ್ಡ ಗುಮ್ಮಟಗಳಲ್ಲಿ ನಡುವಣ ಗುಮ್ಮಟದ ವ್ಯಾಸ ೬೩ ಅಡಿ ಇದ್ದು, ಇದರ ಒಳ ಮೈ, ಹೂ-ಬಳ್ಳಿಗಳಿಂದ ಅಲಂಕೃತಗೊಂಡಿದೆ. ಮೇಲಾಗಿ ೬೩ ಸಣ್ಣ ಗುಮ್ಮಟಗಳೂ ಕೂಡ ಇವೆ. ಇದರ ರಚನೆಯಲ್ಲಿ ಪಾರಸೀ ವಾಸ್ತು ಸಂಪ್ರದಾಯದ ಪ್ರಭಾವ ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಆದರೆ ಇದರ ಜೊತೆಗೆ ಭಾರತೀಯ - ಇಸ್ಲಾಮೀ ವಾಸ್ತುಶೈಲಿಯ ಕೆಲವು ಅಂಶಗಳಿವೆ ಎಂಬ ಅಭಿಪ್ರಾಯವಿದ್ದು, ಮಸೀದಿಯ ವಿನ್ಯಾಸವನ್ನು ಆಧರಿಸಿ, ಇದು ಸ್ಪೇನಿನ ಕಾರ್ಡೋವಾ ನಗರದ ಪ್ರಸಿದ್ಧ ಮಸೀದಿಯನ್ನು ಹೋಲುತ್ತದೆಂದು ಹೇಳುವುದು ವಾಡಿಕೆ. ಆದರೆ ಡಾ. ಯಾಜ್ದಾನಿಯವರು ಇದನ್ನು ಒಪ್ಪದೆ, ಇರಾನಿನ ತಂಪಾದ ಬೆಟ್ಟ ಪ್ರದೇಶದಿಂದ (ಕ್ವಾಜ್ವಿನ್) ಬಂದಿರುವ ಇದರ ಶಿಲ್ಪಿ (ರಫಿ) ಗುಲಬರ್ಗಾದ ಉಷ್ಣತೆಯನ್ನು ಪರಿಗಣಿಸದೆ ಬೈಜಾಂಟೀನ್ ಶೈಲಿಯ ಸಮಕಾಲೀನ ತುರ್ಕಿ ಮಸೀದಿಗಳ ವಿನ್ಯಾಸವನ್ನು ಇಲ್ಲಿ ಅನುಸರಿಸಿದ್ದಾನೆಂದು ಅಭಿಪ್ರಾಯಪಡುತ್ತಾರೆ. ಗುಲಬರ್ಗಾ ಕೋಟೆಯ ದಕ್ಷಿಣದ್ವಾರದ ಬಳಿ ಇರುವ ಅಲ್ಲಾವುದ್ದೀನ್, ಒಂದನೆಯ ಹಾಗೂ ಎರಡನೆಯ ಮಹಮ್ಮದ್ ಬಹಮನ್ ಷಾರ ಸಮಾಧಿಗಳಲ್ಲಿ ತೊಘಲಕ್ ಶೈಲಿಯ ಅನುಕರಣೆಯನ್ನು ಕಾಣಬಹುದಾಗಿದೆ. ಒಂದನೆಯ ಮಹಮ್ಮದ್ ಷಾನ ಕಾಲದಲ್ಲೇ ಶಹಾ ಬಜಾರಿನ ಮಸೀದಿ ಕೂಡ ನಿರ್ಮಾಣಗೊಂಡಿತು. ಈ ಮಸೀದಿಯ ಮುಂಭಾಗದ ಇಕ್ಕೆಲಗಳಲ್ಲಿ ಎತ್ತರವಾದ ಒಂದೊಂದು ಮಿನಾರುಗಳಿದ್ದು, ಕಮಾನಿನ ದ್ವಾರವಿದೆ. ಒಳಗೆ ತೆರೆದ ಅಂಗಳವಿದ್ದು, ಹಿಂದೆ ಪ್ರಾರ್ಥನಾ ಹಜಾರವಿದೆ. ಆಳಂದ ರಸ್ತೆಯಲ್ಲಿ ಎಡಕ್ಕಾದಂತೆ ಅಲ್ಲಾವುದ್ದೀನ್ ಹಸನ್ ಗಂಗು (೧೩೪೭-೫೮) ಹಾಗೂ ಒಂದನೆಯ ಮಹಮದ್ ಬಹಮನ್ ಷಾ (೧೩೫೮-೭೫)ರ ಸಮಾಧಿಗಳಿರುವ ಗುಮ್ಮಟಗಳು ಉತ್ತರ ಭಾರತದಲ್ಲಿರುವ ಪಠಾಣರ ಸಮಾಧಿಗಳ ಅನುಕರಣೆಗಳಂತೆ ತೋರುತ್ತಿದ್ದು ಆಕರ್ಷಕವಾಗಿವೆ. ಅದೇ ರೀತಿ ನಗರದ ಬೇರೆ ಭಾಗಗಳಲ್ಲಿರುವ ಚಾಂದ್ ಬೀಬಿ ಮತ್ತು ಸಿದ್ಧಿ ಅಂಬರಿ ಗುಮ್ಮಟಗಳು; ಇಸ್ಮಾಯಿಲ್ ಮೋಕ್ಷಿ ಮಸೀದಿ ಮತ್ತು ಲಂಗರ್ ಮಸೀದಿಗಳೂ ಕೂಡ ಆಕರ್ಷಕ ರಚನೆಗಳಾಗಿವೆ.

ಗುಲಬರ್ಗಾದ ಇನ್ನೊಂದು ಆಕರ್ಷಣೆಯೆಂದರೆ ಖ್ವಾಜಾ ಬಂದೇ ನವಾಜ್ ದರ್ಗಾ. ಸೂಫಿ ಸಂತರಾದ ಖ್ವಾಜಾ ಬಂದೇ ನವಾಜ(೧೩೨೧-೧೪೨೨)ರು ದೆಹಲಿಯ ಖ್ವಾಜಾ ನಾಸಿರುದ್ದೀನ್ (ದೆಹಲಿಯ ಜ್ಯೋತಿ)ರ ಶಿಷ್ಯರಾಗಿದ್ದು ಇಸ್ಲಾಂ ಧರ್ಮ ಪ್ರಚಾರಕ್ಕೆಂದು ಗುಲಬರ್ಗಾಕ್ಕೆ ಬಂದರು. ಮೂಲತಃ ಪರ್ಷಿಯನ್ ಪಂಡಿತರಾಗಿದ್ದ ಇವರು ನಂತರ ಉರ್ದು ಕಲಿತರು. ಎರಡೂ ಭಾಷೆಯಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದ ಇವರು ಗುಲಬರ್ಗಾದಲ್ಲಿ ೧೪೦೭-೧೪೨೨ರ ಅವಧಿಯಲ್ಲಿ ಜೀವಿಸಿದ್ದರು. ಇವರ ನೆನಪಾಗಿ ವಾರ್ಷಿಕ ಉರುಸು ಝುಕೈದ ತಿಂಗಳ ೧೫ ರಂದು ಜರುಗುತ್ತದೆ. ವಿಶಾಲವಾದ

ಪ್ರಾಕಾರದೊಳಗೆ ಅಸಂಖ್ಯಾತ ಚಿಕ್ಕ ದೊಡ್ಡ ಸಮಾಧಿಗಳ ನಡುವೆ ಇರುವ ಖ್ವಾಜಾ ಬಂದೇ ನವಾಜರ ದರ್ಗಾದ ನಿರ್ಮಾಣ ಕಾರ್ಯ, ಸಂತರು ನಿಧನ ಹೊಂದಿದ ಎರಡು ವರ್ಷಗಳ ನಂತರ ಆರಂಭಗೊಂಡು ಏಳು ವರ್ಷಗಳ ತರುವಾಯ ಅಹ್ಮದ್ ಷಾ ವಲಿಯ (೧೪೨೨-೩೬) ಅಧಿಕಾರಾವಧಿಯಲ್ಲಿ ಪೂರ್ಣಗೊಂಡಿತು. ಗಾತ್ರದಲ್ಲಿ ಹಿರಿದಾದರೂ ಸರಳವಾಗಿರುವ ಈ ದರ್ಗಾದ ಗೋಡೆಗಳ ಮೇಲೆ ಕುರಾನಿನ ವಾಕ್ಯಗಳನ್ನು ಬಂಗಾರ ಲೇಪಿತ ಬರಹಗಳಿಂದ ಅಲಂಕರಿಸಲಾಗಿದೆ. ಇದರ ಗೋಡೆ ಹಾಗೂ ಗುಮ್ಮಟಗಳ ಮೇಲಿನ ವರ್ಣ ಚಿತ್ರಗಳು ಟರ್ಕಿಸ್ಥಾನ್ ಹಾಗೂ ಇರಾನಿಯನ್ ಶೈಲಿಯಲ್ಲಿದ್ದು ದರ್ಗಾದಲ್ಲಿ ಸಂತರ ಅಸ್ಥಿಯನ್ನು ಸಂರಕ್ಷಿಸಲಾಗಿದೆ. ಇದರ ಬದಿಯಲ್ಲೇ ಸಂತರ ಮಗನ ದರ್ಗಾ ಕೂಡ ಇದೆ. ಇದರ ಸಮೀಪದಲ್ಲೇ ಇರುವ ಗ್ರಂಥಾಲಯದಲ್ಲಿ ಉರ್ದು, ಪರ್ಷಿಯನ್ ಮತ್ತು ಅರೇಬಿಕ್ ಭಾಷೆಯಲ್ಲಿ ಇತಿಹಾಸ, ತತ್ವಜ್ಞಾನ, ಧರ್ಮ ಮಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಸುಮಾರು ೧೦,೦೦೦ ಗ್ರಂಥಗಳಿವೆ. ಇದರ ಬಳಿಯಲ್ಲೇ ಮೊಗಲ ಚಕ್ರವರ್ತಿ ಔರಂಗಜೇಬನು ಮಸೀದಿ, ಸರಾಯ್ ಹಾಗೂ ಕಾಲೇಜುಗಳನ್ನು ೧೬೮೭ರಲ್ಲಿ ಸ್ಥಾಪಿಸಿದ್ದು, ಅವುಗಳನ್ನಿಲ್ಲಿ ನೋಡಬಹುದಾಗಿದೆ.

ಖ್ವಾಜಾ ಬಂದೇ ನವಾಜ್ ದರ್ಗಾಕ್ಕೆ ಹೋಗುವ ದಾರಿಯಲ್ಲಿರುವ ಸಾತ್ ಗುಂಬಜ್ (ಹಫ್ತ್ ಗುಂಬಜ್) ಕೂಡ ಬಹಮನಿ ಅರಸರ ಹಾಗೂ ಅವರ ದಂಡನಾಯಕರ ಸಮಾಧಿಗಳಾಗಿದ್ದು, ಇವುಗಳಲ್ಲಿ ಮುಜಾಹಿದ್ ಹಾಗೂ ತಾಜುದ್ದೀನ್ ಫಿರೋಜರ ಸಮಾಧಿಗಳು ಭವ್ಯವಾಗಿದ್ದು ವಿಶಿಷ್ಟವಾಗಿವೆ. ಈ ಮಾದರಿಯ ಗುಮ್ಮಟಗಳನ್ನು ಗುಲಬರ್ಗಾ ಪಟ್ಟಣದ ವಿವಿಧ ಭಾಗಗಳಲ್ಲಿ ನೋಡಬಹುದಾಗಿದೆ. ಗುಲಬರ್ಗಾದ ತಲಾಬು (ಕೆರೆ) ಇವರ ಕಾಲದ್ದಾಗಿದೆ. ಸೂಪರ್ ಮಾರ್ಕೆಟ್ ಬಳಿ ಇರುವ ಇನ್ನೊಂದು ಮಸೀದಿಯೂ ಕೂಡ ಗಮನಾರ್ಹವಾಗಿದೆ. ಇಲ್ಲಿರುವ ಖಲಂದರ್ ಖಾನನ ಮಸೀದಿ ಸುಮಾರು ೧೫ನೇ ಶತಮಾನದ ಸುಂದರ ಕಟ್ಟಡವಾಗಿದ್ದು, ಗಾತ್ರದಲ್ಲಿ ಚಿಕ್ಕದಾದರೂ, ಸೌಂದರ್ಯದಲ್ಲಿ ಕೈರೋದ ಜಾಮಿ ಅಜರ್ ಮಸೀದಿಯನ್ನು ನೆನಪಿಸುತ್ತದೆಂಬ ಅಭಿಪ್ರಾಯವಿದೆ. ಆಳಂದ ರಸ್ತೆಯಲ್ಲಿರುವ ಚೋರ್ ಗುಂಬಜ್ ಆಕರ್ಷಕ ಗುಮ್ಮಟವಾಗಿದ್ದು, ಇದೊಂದು ಗುಪ್ತದ್ವಾರವೆಂದು ಸ್ಥಳಿಯವಾಗಿ ಹೇಳಲಾಗುತ್ತದೆ. ಬಿಜಾಪುರದ ಗೋಳಗುಮ್ಮಟವು ಮಾರ್ದನಿಸುವಂತೆ ಇದೂ ಕೂಡ ಪ್ರತಿಧ್ವನಿಸುತ್ತಿದ್ದು, ಕನಿಷ್ಠ ಏಳು ಮಾರ್ದನಿಗಳನ್ನು ಇಲ್ಲಿ ಆಲಿಸಬಹುದಾಗಿದ್ದು, ಸರಳ ಸುಂದರ ರಚನೆಯಾಗಿರುವ ಇದನ್ನು ಗುಲಬರ್ಗಾದ ಗೋಳಗುಮ್ಮಟವೆಂದು ಕರೆಯಬಹುದಾದರೂ, ಅದರ ಭವ್ಯತೆ ಇಲ್ಲಿ ಕಂಡು ಬರುವುದಿಲ್ಲ. ಶೇಖರೋಜಾದಲ್ಲಿ ಬಹಮನಿ ಹಾಗೂ ಆದಿಲ್ ಷಾಹಿ ಅರಸರ ಕಾಲದ ಮಸೀದಿ, ಮದರಸಾ ಹಾಗೂ ದರ್ಗಾಗಳಿದ್ದು, ದೊಡ್ಡ ಮಿನಾರೆಟ್ ಕೂಡ ಇದೆ. ಇಲ್ಲಿರುವ ದರ್ಗಾಗಳಲ್ಲಿ ಶೇಖ್ ಷಿರಾಜುದ್ದೀನ್ ಜುನೈದಿ ಖಾದ್ರಿ ಹಾಗೂ ಮೊಗದುಮ್ ಹವೇಷ್ ಖುಂದು ಮೀರ್ ಜುನೈದಿ ಖಾದ್ರಿ ರವರ ದರ್ಗಾಗಳು ಪ್ರಾಚೀನದ್ದಾಗಿದ್ದು ಆಕರ್ಷಕವಾಗಿವೆ. ಆಳಂದ ರಸ್ತೆಯಲ್ಲಿ ಇರುವ ಸೈಯದ್ ರುಖನುದ್ದೀನ್ ತೊಲಾ ಹಾಗೂ ಅವನ ಶಿಷ್ಯ ರಾಣೋಜಿ ಪೀರ್‌ರ ದರ್ಗಾಗಳು ಹಿಂದು-ಮುಸ್ಲಿಂ ಭಾವೈಕ್ಯತೆಗೆ ಸಂಕೇತಗಳಾಗಿದ್ದು ಇದರ ಉರುಸು ಶಾಬಾನ್ ತಿಂಗಳಲ್ಲಿ ಜರುಗುತ್ತದೆ. ಇದೇ ರೀತಿ ಸ್ಟೇಷನ್ ರಸ್ತೆಯಲ್ಲಿ ಇರುವ ಸಿದ್ಧಿ ಬಾಷಾ ದರ್ಗಾ ಇನ್ನೊಂದು ಪ್ರಮುಖ ದರ್ಗಾವಾಗಿದ್ದು ಇದರ ಉರುಸು ರಬ್ಬವುಲ್ ಅವಲ್ ತಿಂಗಳಲ್ಲಿ ನಡೆಯುತ್ತದೆ. ಗುಲಬರ್ಗಾದಲ್ಲಿ ದೊಡ್ಡದಾದ ಮತ್ತು ಚಿಕ್ಕದಾದ ೧೦೦ ಕ್ಕೂ ಹೆಚ್ಚು ಮಸೀದಿ ಹಾಗೂ ೭೦ಕ್ಕೂ ಹೆಚ್ಚು ದರ್ಗಾಗಳಿದ್ದು, ಇವುಗಳಲ್ಲಿ ಪ್ರಮುಖವಾದವುಗಳನ್ನು ಈಗಾಗಲೇ ಚರ್ಚಿಸಲಾಗಿದ್ದು, ಗುಲಬರ್ಗಾ ಪಟ್ಟಣವನ್ನು ಗುಮ್ಮಟಗಳ ಉದ್ಯಾನವೆಂದು ಕರೆಯಬಹುದೆಂದು ತೋರುತ್ತದೆ. ನಿಜಾಮರ ಕಾಲದಲ್ಲಿ ನಿರ್ಮಾಣಗೊಂಡಿರುವ ಐವಾನ್.ಎ.ಷಾಹಿ ಬಂಗಲೆಯು ನಿಜಾಮರ ವಿಶ್ರಾಂತಿಧಾಮವಾಗಿದ್ದು, ಇಂದು ವಿಭಾಗಾಧಿಕಾರಿಗಳ ಕಛೇರಿಯಾಗಿ ಬಳಸಲ್ಪಡುತ್ತಿದೆ.

ಮೂಲತಃ ಜೇವರ್ಗಿ ತಾಲೂಕಿನ ಅರಳಗುಂಡಗಿಯವರಾದ ಶರಣ ಬಸವೇಶ್ವರರು (೧೭೪೬-೧೮೨೨) ವೀರಶೈವ ಧರ್ಮದ ಪ್ರಚಾರ ಮಾಡುತ್ತ ಗುಲಬರ್ಗಾಕ್ಕೆ ಬಂದು ನೆಲೆ ನಿಂತು ಅದನ್ನೆ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ತ್ರಿವಿಧ ದಾಸೋಹ ಮೆರೆದು ಮಡಿದರು. ಶರಣ ಬಸವೇಶ್ವರರ ಸಮಾಧಿಗೆ ನಂತರದಲ್ಲಿ ಗೋಪುರ ರಚಿಸಿದ್ದು ಅದೇ ಇಂದಿನ ಶರಣ ಬಸವೇಶ್ವರ ದೇವಾಲಯವಾಗಿದೆ. ಶರಣ ಬಸವೇಶ್ವರರಿಗೆ ಕಲ್ಬುರ್ಗಿಯಲ್ಲಿ ನೆಚ್ಚಿನ ಶಿಷ್ಯರಾಗಿ ನಿಂತವರು ಅಲ್ಲಿಯ ಆದಿ ದೊಡ್ಡಪ್ಪ ಶರಣರು. ಇವರಿಬ್ಬರ ಸಂಯುಕ್ತ ಯತ್ನ ಶರಣ ಬಸವೇಶ್ವರ ಮಹಾದಾಸೋಹ ಪೀಠಕ್ಕೆ ನಾಂದಿ ಹಾಡಿತು. ಶರಣ ಬಸವೇಶ್ವರರ ನಂತರ ಆದಿ ದೊಡ್ಡಪ್ಪ ಶರಣರು (೧೮೨೨-೫೬) ೨೪ ವರ್ಷ ಪೀಠಾಧಿಪತಿಗಳಾಗಿದ್ದರು.

ಆ ಸಂದರ್ಭದಲ್ಲೇ ಸೊಲ್ಲಾಪುರದ ಸಿದ್ಧರಾಮೇಶ್ವರರ ಸಮಾಧಿಯ ಮೇಲಿರುವ ಗೋಪುರದ ಮಾದರಿಯಲ್ಲೇ ಶರಣಬಸವೇಶ್ವರರ ಸಮಾಧಿಯ ಮೇಲೂ ಗೋಪುರವನ್ನು ನಿರ್ಮಿಸಲು ಇವರು ಮುಂದಾದರೂ, ಅದು ಪೂರ್ಣಗೊಂಡಿದ್ದು, ಎರಡನೆಯ ಶರಣ ಬಸವಪ್ಪ ಅಪ್ಪ ಅವರ ಕಾಲದಲ್ಲಿ (೧೮೪೬-೧೮೭೧). ಶರಣಬಸವೇಶ್ವರ ದೇವಾಲಯವು ಏಳನೆಯ ದೊಡ್ಡ ಬಸಪ್ಪ ಅಪ್ಪ ಅವರ ಕಾಲದಲ್ಲಿ ಸುಮಾರು ೧೯೧೨-೧೯೫೮ ಅವಧಿಯಲ್ಲಿ ಇಂದಿನ ರೂಪ ಪಡೆದುಕೊಂಡಿತಾದರೂ ಅದರ ಶಿಖರದ ಕೆಳಗಿನ ಎರಡು ಹಂತಗಳು ಹಾಗೂ ಉಪ್ಪರಿಗೆಯ ಮೋಟು ಗೋಡೆಗಳ ಮೇಲಿನ ಗಾರೆಯ ಕಿರು ಶಿಲ್ಪಗಳು ಸೇರ್ಪಡೆಯಾದದ್ದು ೧೯೭೭ರಲ್ಲಿ. ಶರಣ ಬಸವೇಶ್ವರರ ಸಮಾಧಿಯನ್ನು ಆವರಿಸಿ ಕಟ್ಟಲ್ಪಟ್ಟಿರುವ ಶರಣ ಬಸವೇಶ್ವರ ದೇವಾಲಯವು ೨೦ನೆಯ ಶತಮಾನದ ಉತ್ಕೃಷ್ಟ ವಾಸ್ತು ರಚನೆಯಾಗಿದೆ. ಶರಣ ಬಸವೇಶ್ವರರ ಸಮಾಧಿ ಇರುವ ಗರ್ಭಗೃಹದಲ್ಲಿ ಗದ್ದುಗೆಯ ಮೇಲೆ ಗುರು ಶಿಷ್ಯರ ಅವಿನಾಭಾವ ಸಂಬಂಧ ಹಾಗೂ ಸಾಮರಸ್ಯಗಳನ್ನು ಸೂಚಿಸಲು ಶರಣ ಬಸವೇಶ್ವರ ಹಾಗೂ ಅವರ ಗುರುಗಳ ಬೆಳ್ಳಿಮುಖಗಳನ್ನುಳ್ಳ ಜೋಡಿ ಮೂರ್ತಿಯನ್ನು ಪ್ರಾತಿನಿಧಿಕವಾಗಿ ಪ್ರತಿಷ್ಠಾಪಿಸಲಾಗಿದ್ದು, ಇಂದು ಇದೇ ಭಕ್ತರ ಆರಾಧನಾ ಬಿಂದುವಾಗಿದೆ. ಇದನ್ನು ಬಳಸಿ ವಿಶಾಲವಾದ ಸಭಾಮಂಟಪವಿದ್ದು, ಪ್ರದಕ್ಷಿಣಾ ಪಥವೂ ಇದೆ. ಆರೆ ಕಂಬ, ಬಿಡಿಕಂಬ, ಜೋಡಿ ಕಂಬ ಹಾಗೂ ೬೬ ಕಮಾನುಗಳನ್ನು ಬಳಸಿ ನಿರ್ಮಿಸಿರುವ ಈ ಗುಡಿಯ ಸಭಾಮಂಟಪವು ಆಕರ್ಷಕವಾಗಿದ್ದು ಇದರ ಕಂಬಗಳನ್ನು, ನವಿಲು, ಗರುಡ, ನಾಗ, ಗಿಳಿ, ಆನೆ, ಸಿಂಹ ಹಾಗೂ ವಿಶಿಷ್ಟವಾದ ಹೂಬಳ್ಳಿಗಳಿಂದ ಆಲಂಕರಿಸಲಾಗಿದ್ದು, ಇದರ ಛಾವಣಿಯೂ ವಿಶಿಷ್ಟವಾಗಿದೆ. ಮೂರು ದಿಕ್ಕಿನಿಂದಲೂ ಸಭಾ ಮಂಟಪವನ್ನು ಪ್ರವೇಶಿಸಬಹುದಾಗಿದ್ದು, ಗರ್ಭಗೃಹದ ಪ್ರನಾಳವು ಹಾಲುಣಿಸುತ್ತಿರುವ ಆಕಳಿನ ಮುಖವಾಗಿರುವುದು ಗಮನಾರ್ಹವಾಗಿದೆ. ಇದರ ಶಿಖರವು ವಿವಿಧ ದೇವತೆಗಳ ಗಾರೆಯ ಕಿರು ಶಿಲ್ಪಗಳನ್ನು ಒಳಗೊಂಡಿದ್ದು, ಉಪ್ಪರಿಗೆಯ ಮೋಟು ಗೋಡೆಯ ಮೇಲೆ ಶರಣ ಬಸವೇಶ್ವರರ ಪವಾಡಗಳನ್ನು ಬಿಂಬಿಸುವ ಗಾರೆಯ ಉಬ್ಬು ಶಿಲ್ಪಗಳಿವೆ. ಇವುಗಳಲ್ಲಿ ಶಿಖರದ ನಾಲ್ಕೂ ಮೂಲೆಗಳಲ್ಲಿರುವ ಅಂಬಾರಿ ಹೊತ್ತಿರುವ ಸಲಗಗಳ ಗಾರೆ ಶಿಲ್ಪಗಳಂತೂ ಉತ್ಕೃಷ್ಟವಾಗಿವೆ. ಈ ಗುಡಿಯ ಮುಂಭಾಗದಲ್ಲೇ ಶರಣ ಬಸವೇಶ್ವರರ ನಂತರದಲ್ಲಿ ಮಹಾದಾಸೋಹ ಪೀಠದ ಉತ್ತರಾಧಿಕಾರಿಗಳಾಗಿದ್ದ ಆದಿ ದೊಡ್ಡಪ್ಪ ಶರಣ ಹಾಗೂ ಇನ್ನಿತರರ ಆರು ಗದ್ದುಗೆಗಳಿವೆ. ಶರಣ ಬಸವೇಶ್ವರ ದೇವಾಲಯದ ಎಡಕ್ಕಾದಂತೆ ಪೂರ್ವಾಭಿಮುಖವಾಗಿ ನಿಂತಿರುವ ಶರಣ ಬಸವೇಶ್ವರ ಮಹಾಸಂಸ್ಥಾನದ ಕಟ್ಟಡವು ಈ ಗುಡಿಗಿಂತ ಪ್ರಾಚೀನದ್ದಾಗಿದ್ದು, ಶರಣ ಬಸವೇಶ್ವರರು ಕಲ್ಬುರ್ಗಿಗೆ ಬಂದು ದಾಸೋಹ ನಡೆಸಿದ್ದು ಇಲ್ಲೇ. ಇಲ್ಲಿ ಸುಂದರವಾದ ಪೂಜಾ ಮಂದಿರವಿದ್ದು ಸದಾಕಾಲ ಜ್ಯೋತಿ ಬೆಳಗುತ್ತಿರುತ್ತದೆ. ಸಾಮಾಜಿಕ, ಧಾರ್ಮಿಕ ಐಕ್ಯತೆಯನ್ನು ಜನರಲ್ಲಿ ಬೆಳೆಸುವ ದಿಸೆಯಲ್ಲಿ ಶರಣಬಸವೇಶ್ವರ ಪೀಠವು ಮಕರ ಸಂಕ್ರಾಂತಿ ಹಾಗೂ ವಿಜಯದಶಮಿಗಳನ್ನು ವಿಶಿಷ್ಟವಾಗಿ ಆಚರಿಸುತ್ತಿದೆ. ಶ್ರಾವಣ ಮಾಸದಲ್ಲಿ ನಡುವಣ ಸೋಮವಾರ ಶರಣ ಬಸವೇಶ್ವರರ ಪಲ್ಲಕ್ಕಿ ಉತ್ಸವ ಜರುಗುತ್ತಿದ್ದು, ಅಂದು ಸಾವಿರಾರು ಜನ ಬಂದು ಪಾಲ್ಗೊಳ್ಳುತ್ತಾರೆ. ಶರಣಬಸವೇಶ್ವರ ಮಹಾದಾಸೋಹ ಜಾತ್ರೆಯು ಚೈತ್ರ ಬಹುಳ ಪಂಚಮಿಯಂದು ಆರಂಭಗೊಂಡು ಹದಿನೈದು ದಿನಗಳವರೆಗೆ ನಡೆಯುತ್ತದೆ. ಆ ಸಂದರ್ಭದಲ್ಲಿ ದನಗಳ ಜಾತ್ರೆಯೂ ನಡೆಯುತ್ತದೆ. ಮಹಾತ್ಮ ಗಾಂಧೀಜಿಯವರು ಸುಮಾರು ೧೯೨೭ರಲ್ಲಿ ಗುಲಬರ್ಗಾಕ್ಕೆ ಬಂದಿದ್ದಾಗ ಬಸವೇಶ್ವರ ದೇವಾಲಯಕ್ಕೂ ಭೇಟಿ ನೀಡಿದ್ದರು. ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಶರಣ ಬಸವೇಶ್ವರ ದಾಸೋಹ ಪೀಠವು ಮಹತ್ವದ ಪಾತ್ರ ವಹಿಸಿತ್ತು. ಶರಣಬಸವೇಶ್ವರ ಮಹಾದಾಸೋಹ ಪೀಠವು ಇಂದು ಶ್ರೀ ಶರಣಬಸವೇಶ್ವರ ವಿದ್ಯಾ ಸಂಸ್ಥೆಯ ಮೂಲಕ ಜ್ಞಾನದಾಸೋಹ ಕಾರ್ಯದಲ್ಲೂ ತನ್ನನ್ನು ತೊಡಗಿಸಿಕೊಂಡಿದೆ.

ಗುಲಬರ್ಗಾ ಪಟ್ಟಣದಲ್ಲಿ ಶ್ವೇತಾಂಬರ ಜೈನ ಮಂದಿರ (ಕಿರಾಣಿ ಬಜಾರ್) ಮಹಾವೀರ ಬಸದಿ (ಶಹಾಪುರ ಬಜಾರ್) ಹಾಗೂ ಆದಿ ತೀರ್ಥಂಕರ ಬಸದಿ (ಗಾಜೀಪುರ)ಗಳಿವೆ. ಇವುಗಳಲ್ಲಿ ಚಕ್ರಘಟ್ಟದ ಬಳಿಯಿರುವ ದಿಗಂಬರ ಸಂಪ್ರದಾಯದ ಆದಿ ತೀರ್ಥಂಕರ ಜೈನ ಬಸದಿಯು ಪೂರ್ಣ ಜೀರ್ಣೋದ್ಧಾರಗೊಂಡಿದ್ದು, ಇಲ್ಲಿ ಶಾಂತಿನಾಥ, ಅಜಿತನಾಥ, ಪಾರ್ಶ್ವನಾಥ, ಮಹಾವೀರ ಹಾಗೂಆದಿ ತೀರ್ಥಂಕರರ ಅಮೃತ ಶಿಲೆಯ ಕಿರು ಶಿಲ್ಪಗಳಿದ್ದು, ಪ್ರಾಚೀನದ್ದಾದ ಮಹಾವೀರ, ಸುಪಾರ್ಶ್ವನಾಥ, ಪಾರ್ಶ್ವನಾಥ, ಚೌವ್ವೀಸ್ ತೀರ್ಥಂಕರ, ಯಕ್ಷ, ಯಕ್ಷಿ ಹಾಗೂ ಗಜಲಕ್ಷ್ಮಿಯ ಶಿಲ್ಪಗಳಿವೆ. ೨೪ ತೀರ್ಥಂಕರರ ಲಾಂಛನಗಳು, ಸ್ವಪ್ನಾವಳಿ ಹಾಗೂ ಅಷ್ಟ ಮಂಗಳ ದ್ರವ್ಯಗಳನ್ನುಳ್ಳ ಬೆಳ್ಳಿಯ ಪಂಚಮೇರಿಯು ಇಲ್ಲಿದ್ದು ಆಕರ್ಷಕವಾಗಿದೆ. ಈ ಬಸದಿಯ ಹಿಂಬದಿಯಲ್ಲಿ ಸ್ಥಾನಕ ಭಂಗಿಯಲ್ಲಿರುವ ಪಾರ್ಶ್ವನಾಥ, ಮಹಾವೀರ, ಆದಿನಾಥ, ವಿಷ್ಣು ಹಾಗೂ

ಸರಸ್ವತಿಯ ಮುಕ್ಕಾದ ಶಿಲ್ಪಗಳಿದ್ದು ಇವು ಗುಲಬರ್ಗಾದ ಕೋಟೆಯಲ್ಲಿ ಸಿಕ್ಕಿವೆಯೆಂದು ಹೇಳಲಾಗುತ್ತದೆ. ಶ್ವೇತಾಂಬರ ಜೈನ ಮಂದಿರಗಳಲ್ಲಿ ಶಂಖೇಶ್ವರ, ಪಾರ್ಶ್ವನಾಥ, ಶಾಂತಿನಾಥ, ಮಹಾವೀರ ಹಾಗೂ ಮುನಿದ್ವಂತ ತೀರ್ಥಂಕರರ ಶಿಲ್ಪಗಳಿದ್ದರೆ, ಶಹಾಬಜಾರಿನ ದಿಗಂಬರ ಸಂಪ್ರದಾಯದ ಮಹಾವೀರ ಮಂದಿರವು ಇತ್ತೀಚಿನದಾಗಿದೆ.

ಸ್ಟೇಷನ್ ರಸ್ತೆಯಲ್ಲಿರುವ ವಿಠಲ ಮಂದಿರವು ೧೭೧೭ ರಲ್ಲಿ ನಿರ್ಮಾಣಗೊಂಡಿದ್ದು ಇದರ ಜೀರ್ಣೋದ್ಧಾರ ಕಾರ್ಯ ೧೮೪೮ರಲ್ಲಿ ಪೂರ್ಣಗೊಂಡ ಅಂಶವನ್ನು ವಿಠಲ ಮಂದಿರದ ಗರ್ಭಗೃಹದ ತೊಲೆಯ ಮೇಲಿರುವ ಮರಾಠಿ ಶಾಸನ ಖಚಿತಪಡಿಸುತ್ತದೆ. ಈ ದೇವಾಲಯದಲ್ಲಿ ಸುಮಾರು ಎರಡೂವರೆ ಅಡಿ ಎತ್ತರದ ವಿಠಲ-ರುಕ್ಮಾಯಿಯರ ಶಿಲ್ಪಗಳಿವೆ. ಗೌಳಿಗರೇ ಹೆಚ್ಚಾಗಿರುವ ಈ ಓಣಿಯಲ್ಲಿ ಗೋಕುಲಾಷ್ಟಮಿಯನ್ನು ವಿಶೇಷವಾಗಿ ಆಚರಿಸಲಾಗುತ್ತದೆ. ಆಳಂದ ರಸ್ತೆಯಲ್ಲಿರುವ ರಾಮತೀರ್ಥವು ಗುಡ್ಡದ ಮೇಲಿದ್ದು, ಅಲ್ಲಿ ರಾಮಲಿಂಗೇಶ್ವರ ಗುಡಿಯಿದ್ದು, ನೀರಿನ ಬುಗ್ಗೆ ಇದೆ.

ಊರ ಹೊರಗೆ ನಾಗನಹಳ್ಳಿ ರಸ್ತೆಯಲ್ಲಿರುವ ಕೋರಂಟಿ ಹನುಮಾನ್ ದೇವಾಲಯವು ೧೯೭೪ರಲ್ಲಿ ಜೀರ್ಣೋದ್ಧಾರಗೊಂಡಿದೆ. ಈ ದೇವಾಲಯದ ಗರ್ಭಗುಡಿಯನ್ನು ಅಲಂಕರಿಸಿರುವ ಹಿತ್ತಾಳೆಯ ಬಾಗಿಲ ಚೌಕಟ್ಟು ಆಕರ್ಷಕವಾಗಿದ್ದು, ಲಲಾಟದಲ್ಲಿ ಅನಂತಪದ್ಮನಾಭನನ್ನು ಕೆತ್ತಲಾಗಿದೆ.

ಗುಲಬರ್ಗಾ ನಗರದಲ್ಲಿ ವಿವಿಧ ಕ್ರೈಸ್ತ ಪಂಥಗಳಿಗೆ ಸೇರಿದ ಸುಮಾರು ಒಂಭತ್ತು ಇಗರ್ಜಿ(ಚರ್ಚು) ಗಳಿದ್ದು, ಇವುಗಳಲ್ಲಿ ಮೆಥಾಡಿಸ್ಟ್, ಹಿಂದೂಸ್ಥಾನಿ, ಕ್ಯಾಥೋಲೀಕ್, ಬ್ಯಾಪ್ಟಿಸ್ಟ್ ಹಾಗೂ ಮದ್ರಾಸ್ ಮೂಲದ ಪೆಂಟಿಕೋಸ್ಟಲ್ ಮಿಷನ್ ಇಗರ್ಜಿಗಳು ಪ್ರಮುಖವಾದುದಾಗಿವೆ. ಉಳಿದಂತೆ ನಗರದಲ್ಲಿ ಲಾಲ್ ಹನುಮಂತ, ಮೈಲಾರ, ರೇವಣ್ಣಸಿದ್ಧೇಶ್ವರ, ಕೃಷ್ಣ, ರಾಘವೇಂದ್ರಸ್ವಾಮಿ (ಬ್ರಹ್ಮಪುರ, ಜಗತ್, ಜೇವರ್ಗಿ ಹಾಗೂ ಬಸವೇಶ್ವರನಗರ) ರಾಮ, ಭವಾನಿ, ಸಿಂಧಗಿ ಅಂಬಾಭವಾನಿ ಹಾಗೂ ಸಾಯಿ ಮಂದಿರಗಳೇ ಮುಂತಾದ ಹಲವಾರು ನವೀನ ದೇವಾಲಯಗಳಿದ್ದು, ಸಿಖ್ಖರ ಗುರುದ್ವಾರ ನಾನಕ್ ಮಠ ಹಾಗೂ ಎರಡು ನವಭೌದ್ಧ ವಿಹಾರಗಳಿವೆ. ನಗರದಲ್ಲಿ ಗದ್ದಕಿಮಠ, ಪರಸಿಮಠ, ಚೌದಾಪುರ ಮಠ, ಏಕದಂಡಿಗಿ ಮಠ ಹಾಗೂ ಚಿಕ್ಕಮಠಗಳಿದ್ದು, ಆದರ್ಶನಗರದಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಸಮಾಜವಿದೆ.

ಇಲ್ಲಿರುವ ರಾಜ್ಯ ಪುರಾತತ್ವ ಇಲಾಖೆಯ ವಸ್ತು ಸಂಗ್ರಹಾಲಯ (ಸೇಡಂ ರಸ್ತೆ) ದಲ್ಲಿ ಸನ್ನತಿಯನ್ನೂ ಒಳಗೊಂಡಂತೆ ಜಿಲ್ಲೆಯ ವಿವಿಧ ಭಾಗಕ್ಕೆ ಸೇರಿದ ಪ್ರಾಚ್ಯಾವಶೇಷಗಳನ್ನು ಸಂಗ್ರಹಿಸಿಡಲಾಗಿದೆ. ಅದೇ ರೀತಿ ಗುಲಬರ್ಗಾ ವಿಶ್ವವಿದ್ಯಾನಿಲಯದ ಆವರಣದಲ್ಲಿ ಕನ್ನಡ ಹಾಗೂ ಇತಿಹಾಸ ವಿಭಾಗಗಳಲ್ಲಿರುವ ಸಂಗ್ರಹಗಳು ವೀಕ್ಷಣೀಯವಾಗಿವೆ. ೧೯೮೧ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯ ಇಲ್ಲಿ ಆರಂಭಗೊಂಡಿದೆ. ದಕ್ಷಿಣ ಭಾರತದ ಮೊಟ್ಟ ಮೊದಲ ಜಿಲ್ಲಾ ವಿಜ್ಞಾನ ಕೇಂದ್ರವು ಜಿಲ್ಲಾಧಿಕಾರಿಗಳ ಕಛೇರಿಯ ಸಮೀಪದಲ್ಲಿದೆ. ಜಿಲ್ಲೆಯ ಸಾಂಸ್ಕೃತಿಕ ಬದುಕನ್ನು ಬಿಂಬಿಸುವ ವೀಕ್ಷಣಾ ಮಂದಿರ ಹಾಗೂ ವಿಜ್ಞಾನ ಮಂದಿರಗಳು ಇಲ್ಲಿವೆ. ಮಹಾನಗರಪಾಲಿಕೆಯ ಆವರಣದಲ್ಲಿರುವ ಬಸವೇಶ್ವರರ ಪ್ರತಿಮೆಯು ಸುಂದರವಾಗಿದೆ. ಇದರ ಸಮೀಪದಲ್ಲೇ ಕೆರೆಯ ಬದಿಯಲ್ಲಿರುವ ಡಾ. ಬಿ. ಆರ್. ಅಂಬೇಡ್ಕರ್‌ರವರ ಪ್ರತಿಮೆಯ ಬಳಿ ಸರಳ ವಿವಾಹಗಳು ನಡೆಯುತ್ತವೆ. ಹಲವಾರು ವೈಶಿಷ್ಟ್ಯಗಳ ಕೇಂದ್ರವಾಗಿರುವ ಗುಲಬರ್ಗಾ ನಗರವು ಮಹಾನಗರ ಪಾಲಿಕೆಯ ಆಡಳಿತಕ್ಕೆ ಒಳಪಟ್ಟಿದೆ. **ಹೀರಾಪುರವು** ಇಂದು ಗುಲಬರ್ಗಾ ನಗರಕ್ಕೆ ಸೇರಿ ಹೋಗಿರುವ ನೆರೆಯ ಗ್ರಾಮೀಣ ಪ್ರದೇಶವಾಗಿದ್ದು, ಇಲ್ಲಿರುವ ಬಾವಿ, ದರ್ಗಾ ಹಾಗೂ ಮಸೀದಿಗಳಿಂದಾಗಿ ಪ್ರಸಿದ್ಧವಾಗಿದೆ. ಇಲ್ಲಿಂದ ಈವರೆಗೆ ಸಂಸ್ಕೃತ ಭಾಷೆಯಲ್ಲಿರುವ ಮೂರು ಹಾಗೂ ಪರ್ಷಿಯನ್ ಭಾಷೆಯಲ್ಲಿರುವ ಒಂಭತ್ತು ಹೀಗೆ ಒಟ್ಟು ೧೨ ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಶಂಕರಲಿಂಗ ಬಾವಿಗೆ ಸೇರಿರುವ ೧೬೫೬ರ ಶಿಲಾಶಾಸನವು ವೈಶ್ಯಕುಲದ ಬಿಕ್ಕೋಜಿ ಸೋಮಾಜಿ ಮೋಖೆಡನು ಸೋಮೇಶ್ವರ ಹಾಗೂ ಬಸವೇಶ್ವರ ದೇವಾಲಯಗಳನ್ನು ನಿರ್ಮಿಸಿ, ಸಾರ್ವಜನಿಕರ ಉಪಯೋಗಕ್ಕೆಂದು ಬಾವಿಯನ್ನು ಕಟ್ಟಿಸಿದ ಅಂಶವನ್ನು ತಿಳಿಸಿದರೆ, ಇಲ್ಲಿಯ ಇನ್ನೊಂದು ಬಾವಿಯ ಮೇಲಿರುವ ೧೬೮೭ರ ಶಾಸನವು ರಂಗೋಜಿಯು ಬಾವಿ ಹಾಗೂ ಛತ್ರಗಳನ್ನು ನಿರ್ಮಿಸಿದ ವಿಷಯವನ್ನು ತಿಳಿಸುತ್ತದೆ. ಇಲ್ಲಿಯ ಗೌತಪ್ಪ ಬಾವಿಗೆ ಸೇರಿರುವ ಇನ್ನೊಂದು ಶಾಸನವು ೧೭೨೮-೩೩ರ ಅವಧಿಯಲ್ಲಿ ಗೌತಮನು ಈ ಬಾವಿಯನ್ನು ನಿರ್ಮಿಸಿ, ಸತ್ರ ಹಾಗೂ ಕೈ ತೋಟಗಳನ್ನು ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ಈ ಮೇಲಿನ ಶಾಸನೋಕ್ತ ಭಾವಿ-ಗುಡಿಗಳಿಂದು ಶಿಥಿಲಾವಸ್ಥೆಯಲ್ಲಿವೆ. ಇಲ್ಲಿಯ ಪರ್ಷಿಯನ್ ಶಾಸನಗಳು ೧೫೮೫-೧೮೦೦ರ ಅವಧಿಗೆ ಸೇರಿದ್ದು, ಬಾವಿ, ಸಮಾಧಿ, ಮಸೀದಿ ಮುಂತಾದವುಗಳ ರಚನೆಗೆ ಸಂಬಂಧಿಸಿದಂತಹ

ದಾಖಲೆಗಳಾಗಿವೆ. ಚಾಂದ್ ಬೀಬಿ ಸುಲ್ತಾನಳು ೧೫೮೫ರಲ್ಲಿ ನಿರ್ಮಿಸಿದ ಸುಂದರವಾದ ಹೀರಾಬೀಬಿ ಮಸೀದಿ ಹಾಗೂ ಸೈಯದ್ ಅಬೀಬ್ ಷಾ ವಲಿ ದರ್ಗಾಗಳು ಇಲ್ಲಿದ್ದು ಇದರ ಉರುಸು ರಂಜಾನ್ ತಿಂಗಳಲ್ಲಿ ನಡೆಯುತ್ತದೆ. ರಾಣಿ ಚಾಂದ್‌ಬೀಬಿ ಸುಲ್ತಾನಳ ದಾದಿಯಾದ ಪರಡೋನಾ ಖಿಮುರ್ಝಾಳ ಸಮಾಧಿಯೂ ಇಲ್ಲಿದೆ. ಇಲ್ಲಿಯ ಮುಸ್ಲಿಂ ಸ್ಮಾರಕಗಳಲ್ಲಿ ಹಿರಾಬೀಬಿ ಮಸೀದಿ (ಮಕಬಾರ್ ಕಿ ಮಸೀದಿ)ಯು ಸುಂದರ ಕಟ್ಟಡವಾಗಿದ್ದು, ಆಕರ್ಷಕವಾಗಿದೆ.

**ಗೊಬ್ಬೂರು (ಬಿ)** (೫೪೮೪) ತಾಲೂಕು ಕೇಂದ್ರವಾದ ಅಫಜಲಪುರದಿಂದ ಈಶಾನ್ಯಕ್ಕೆ ೩೪ ಕಿ. ಮೀ, ಗುಲಬರ್ಗಾದಿಂದ ನೈಋತ್ಯಕ್ಕೆ ೨೧ ಕಿ. ಮೀ. ದೂರದಲ್ಲಿ ಗುಲಬರ್ಗಾ - ಅಫಜಲಪುರ ರಸ್ತೆಯಲ್ಲಿರುವ ಚಾರಿತ್ರಿಕ ಮಹತ್ವದ ಊರಾಗಿದೆ. ಪ್ರಾಚೀನ ಶಾಸನಗಳಲ್ಲಿ ಗೊಬ್ಬೂರು, ಸಂತೆಯ ಗೊಬ್ಬೂರು ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಅಲಂದೆ ೧೦೦ಂಕ್ಕೆ ಸೇರಿದ ಗೊಂಕನಾಡೊಳಗಿದ್ದು ಇಲ್ಲಿಂದ ಈವರೆಗೆ ಆರು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಮೂರು ಕಲ್ಯಾಣದ ಚಾಳುಕ್ಯರ ಕಾಲದ್ದಾಗಿದ್ದು ಉಳಿದವು ಕಳಚೂರಿ ಅರಸರ ಕಾಲದ್ದಾಗಿವೆ. ಇವು ದಾನ ಶಾಸನಗಳಾಗಿದ್ದು ಇಲ್ಲಿಯ ಪಂಚಲಿಂಗದ ಕಲಿದೇವರಿಗೆ, ರೇವಣೇಶ್ವರ ದೇವರಿಗೆ ಹಾಗೂ ತ್ರಿಕೂಟ ಕಲಿದೇವರುಗಳಿಗೆ ದಾನ ಬಿಟ್ಟ ವಿಷಯವನ್ನು ತಿಳಿಸುತ್ತವೆ. ಈ ಶಾಸನಗಳಿಂದ ಹಿಂದೆ ಈ ಊರು ಭೋಗಾವತಿ ಪಟ್ಟಣಕ್ಕೆ ಸರಿಸಾಟಿಯಾಗಿದ್ದು ಸಂತೆ ಸೇರುವ ವಾಣಿಜ್ಯ ಕೇಂದ್ರವಾಗಿತ್ತೆಂಬ ಅಂಶ ಅರಿವಾಗುತ್ತದೆ. ಇವುಗಳಲ್ಲಿ ೧೦೮೬ ಮತ್ತು ೧೧೦೫ರ ಶಾಸನಗಳು ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ್ದು ಪಂಚಲಿಂಗದ ಕಲಿದೇವರಿಗೆ ಬಿಟ್ಟ ಭೂದಾನಗಳ ಬಗ್ಗೆ ತಿಳಿಸಿದರೆ ೧೧೪೦ರ ಇನ್ನೊಂದು ಶಾಸನ ಇದೇ ದೇವರಿಗೆ ಭೂದಾನ ಕೊಟ್ಟ ಅಂಶವನ್ನು ತಿಳಿಸುತ್ತದೆ. ಈ ಮೂರೂ ಶಾಸನಗಳು ಕಲ್ಲಾಲಿಂಗ (ಕಲ್ಮೇಶ್ವರ) ಗುಡಿಯಲ್ಲಿದ್ದು, ಇದರಿಂದ ಶಾಸನೋಕ್ತ ಪಂಚಲಿಂಗ ಇದೇ ಎಂದು ಊಹಿಸಬಹುದಾಗಿದೆ. ಈ ದೇವಾಲಯವು ತ್ರಿಕೂಟವಾಗಿದ್ದು ದಕ್ಷಿಣಾಭಿಮುಖವಾಗಿದೆ. ಮೂರು ದಿಕ್ಕಲ್ಲೂ ತಲಾ ಒಂದೊಂದು ಗರ್ಭಗೃಹ ಹಾಗೂ ಅಂತರಾಳಗಳಿದ್ದು, ಇವನ್ನು ನಡುವೆ ಇರುವ ಒಂದೇ ನವರಂಗವು ಒಗ್ಗೂಡಿಸಿದ್ದು, ಇದಕ್ಕೆ ತೆರೆದ ಮುಖಮಂಟಪವಿದೆ. ಗರ್ಭಗೃಹಗಳಲ್ಲಿ ಎರಡರಲ್ಲಿ ಶಿವಲಿಂಗಗಳಿದ್ದು, ಪೂರ್ವದ ಗರ್ಭಗೃಹದಲ್ಲಿ ಬಲಹರಿ ಲಿಂಗವಿದೆ. ಇವುಗಳ ಬಾಗಿಲವಾಡಗಳು ಪಂಚಶಾಖಾಲಂಕೃತಗೊಂಡಿದ್ದು ಲಲಾಟದಲ್ಲಿ ಗಜಲಕ್ಷ್ಮಿಯರಿದ್ದಾರೆ. ನವರಂಗದ ಛಾವಣಿಯು ಅಷ್ಟದಿಕ್ಪಾಲಕರಿಂದ ಆವೃತ್ತವಾದ ಕಮಲದಿಂದ ಅಲಂಕೃತಗೊಂಡಿದೆ. ಮುಖಮಂಟಪದ ಕಕ್ಷಾಸನವನ್ನು ಕಮಲದಿಂದ ಅಲಂಕರಿಸಿಲಾಗಿದ್ದು, ಗುಡಿಯ ಮುಂಭಾಗದಲ್ಲಿ ಎಡಕ್ಕಾದಂತೆ ಸುಂದರವಾದ ಪುಷ್ಕರಣಿ ಇದೆ. ಈ ದೇವಾಲಯದ ಭಿತ್ತಿಯು ನಿರಾಡಂಬರವಾಗಿದ್ದು, ನಡುವೆ ಅಲ್ಲಲ್ಲಿ ಅಲ್ಪ ಸ್ವಲ್ಪ ಅಲಂಕಾರವನ್ನು ಹೊಂದಿದ್ದು ಪಂಚತಂತ್ರದ ಮಂಗ-ಬೆಣೆ ಕೆತ್ತನೆ ಇದೆ. ಇಲ್ಲಿಯ ಶಿವಲಿಂಗೇಶ್ವರ ಗುಡಿಯಲ್ಲಿರುವ ೧೧೭೦ರ ಶಾಸನವು ತ್ರಿಕೂಟದ ಕಲಿದೇವರಿಗೆ ಗೊಬ್ಬೂರಿನ ಸಮಸ್ತರು ೧೦ ಮತ್ತರು ಭೂಮಿಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಶಾಸನವಿರುವ ಈ ದೇವಾಲಯವು ತ್ರಿಕೂಟವಾಗಿದ್ದು, ಉತ್ತರದ ಗರ್ಭಗೃಹ ಭಾಗ ನಾಶಗೊಂಡಿದ್ದು, ಉಳಿದಿರುವ ಭಾಗವೂ ಶಿಥಿಲಾವಸ್ಥೆಯಲ್ಲಿದೆ. ಇಲ್ಲಿಯ ಮಲ್ಲಿಕಾರ್ಜುನ ಗುಡಿಯು ಪ್ರಾಚೀನದಾಗಿದ್ದು, ಇಂದು ಗರ್ಭಗೃಹ ಹಾಗೂಅಂತರಾಳಗಳಷ್ಟೆ ಮೂಲರೂಪದಲ್ಲಿದ್ದು, ಉಳಿದ ಭಾಗಗಳು ನವೀನದ್ದಾಗಿವೆ. ಇಲ್ಲಿಯ ಬಬಕ್ಕವ್ವನ ಗುಡಿಯಲ್ಲಿ ನಂದಿರೂಢ ಉಮಾ-ಮಹೇಶ್ವರ, ಯತಿ, ಭೈರವ, ಸಪ್ತಮಾತೃಕಾ ಮುಂತಾದ ಪ್ರಾಚೀನ ಶಿಲ್ಪಗಳಿದ್ದು, ಅಶ್ವಾರೂಢ ಬಬಕ್ವನ ಶಿಲ್ಪವೂ ಇದೆ. ಉಳಿದಂತೆ ಊರಲ್ಲಿ ಕಾಶಿನಾಥ, ಹನುಮಂತ, ಮೌನೇಶ್ವರ, ಮಡ್ಡಿಸಿದ್ಧ, ಮಲ್ಲಯ್ಯ, ಪ್ರಭುದೇವ, ಉಣಚಿರಾಯ, ಬಂಡಿಪೋಚ್ಯ, ಸಂಗಯ್ಯಮುತ್ಯಾ, ಶರಣ ಬಾಚರಸ, ಚೌಡಮ್ಮ ದ್ಯಾವಮ್ಮ ಹಾಗೂ ಮರಗಮ್ಮನ ನವೀನ ಗುಡಿಗಳಿದ್ದು ಜುಮ್ಮಾ ಮಸೀದಿ ಹಾಗೂ ಥಾವಲ್ ಮಲ್ಲಿಕ್ ದರ್ಗಾಗಳಿವೆ. **ಗೊಬ್ಬೂರವಾಡಿ** (೮೩೭) ಯು ಸಮೀಪದ ಗ್ರಾಮವಾಗಿದ್ದು (ಗುಲಬರ್ಗಾ ತಾ) ಇಲ್ಲಿ ಕಲ್ಯಾಣದ ಚಾಳುಕ್ಯರ ಕಾಲದ ಪ್ರಾಚೀನ ದೇಗುಲಗಳಿವೆ.

**ಗೋಗಿ** (೧೧೩೫೬) ಯು ತಾಲೂಕು ಕೇಂದ್ರವಾದ ಶಹಾಪುರ ದಿಂದ ಉತ್ತರಕ್ಕೆ ೧೨ ಕಿ. ಮೀ. ದೂರದಲ್ಲಿ ಶಹಾಪುರ - ಸಿಂಧಗಿ ರಸ್ತೆಯಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಗೋಗಿ ಪೇಟಾ ಹಾಗೂ ಗೋಗಿ ಕೋನಾ ಎಂದೇ ಚಾಲ್ತಿಯಲ್ಲಿರುವ ಇವೆರಡು ಒಂದಕ್ಕೊಂದು ಹತ್ತಿಕೊಂಡಂತೆ ಇರುವ ಗ್ರಾಮಗಳಾಗಿದ್ದು, ಚಂದಾಹುಸೇನಿ ದರ್ಗಾದಿಂದಾಗಿ ಇಂದು ಪ್ರಸಿದ್ಧವಾಗಿವೆ. ನೂತನ ಶಿಲಾಯುಗ ಸಂಸ್ಕೃತಿಗೆ ಸೇರಿದ ಅವಶೇಷಗಳು ಇಲ್ಲಿಂದ ವರದಿಯಾಗಿರುವುದರಿಂದ ಗೋಗಿಯ ಪ್ರಾಚೀನತೆಯನ್ನು ಅಷ್ಟು ಹಿಂದಕ್ಕೆ ಕೊಂಡೊಯ್ಯಬಹುದಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಗೋವಿಗೆ' (ಕೊಲ್ಲೂರು : ೧೧೮೯) ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಸಗರ-೫೦ಂಕ್ಕೆ ಸೇರಿದ್ದು, ಇಲ್ಲಿಂದ

ಈವರೆಗೆ ಕಲ್ಯಾಣದ ಚಾಳುಕ್ಯರ ಕಾಲಕ್ಕೆ ಸೇರಿದ ಎರಡು ಹಾಗೂ ನಾಲ್ಕು ಪರ್ಷಿಯನ್ ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಪ್ರಾಥಮಿಕ ಶಾಲೆಯ ಆವರಣದಲ್ಲಿರುವ ೧೧೧೯ರ ಶಾಸನವು ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ, ಮಹಾಮಂಡಳೇಶ್ವರ ರೇವರಸನ ಅಧಿಕಾರಾವಧಿಯಲ್ಲಿ, ದಂಡನಾಯಕ ದುಗ್ಗರಸ ಹಾಗೂ ಹೆಗ್ಗಡೆ ನಾಗರಸರು ದೇವರಿಗೆ ದಾನ ಬಿಟ್ಟ ದತ್ತಿ ಶಾಸನವಾದರೆ, ಜೈನಬಸದಿಯ ತೀರ್ಥಂಕರ ಪೀಠದ ಮೇಲಿರುವ ಸುಮಾರು ೧೨ ನೇ ಶತಮಾನಕ್ಕೆ ಸೇರಿದ ಇನ್ನೊಂದು ಶಾಸನ ಚಂದ್ರನಾಥ ತೀರ್ಥಂಕರ-ಶಿಲ್ಪವನ್ನು ರಾಮಿಸೆಟ್ಟಿ ಮಾಡಿಸಿದ ಅಂಶವನ್ನು ತಿಳಿಸುತ್ತದೆ.

ಇಲ್ಲಿಯ ಪರ್ಷಿಯನ್ ಶಾಸನಗಳಲ್ಲಿ ಅರಬ ಮಸೀದಿ ಬಳಿ ಇರುವ ಶಾಸನವು ಮಹ್ಮದ್ ಬಿನ್ ತೋಘಲಕ್‌ನ ಆಳ್ವಿಕೆಗೆ ಸೇರಿದ ಅತ್ಯಂತ ಪ್ರಾಚೀನ ಮುಸ್ಲಿಂ ಶಾಸನವಾಗಿದ್ದು, ಇದು ತೋಘಲಕ್ ಸುಲ್ತಾನನು ಉಸ್ತಾನಾಬಾದ್‌ನಲ್ಲಿ ಬಲಿಷ್ಠವಾದ ಕೋಟೆಯನ್ನು ನಿರ್ಮಿಸಿದ ಅಂಶವನ್ನು ವೈಭವಿಕರಿಸಿ ಹೇಳಿದೆ. ಆದರೆ ಇಂದು ಗೋಗಿ ಪ್ರದೇಶದಲ್ಲಿ ಯಾವುದೇ ಕೋಟೆ ಕೊತ್ತಲಗಳಿಲ್ಲ. ಆ ಕಾರಣ ಮೇಲಿನ ಶಾಸನ ಹೇಳುವ ಉಸ್ತಾನಬಾದ್ ಇಂದಿನ ಶಹಾಪುರ (ಹಿಂದಿನ ಸಗರ) ಆಗಿರಬೇಕೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಆದರೆ ಮೇಲಿನ ಶಾಸನೋಕ್ತ ಉಸ್ತಾನಾಬಾದ್ ಇಂದಿನ ಗೋಗಿಯೇ ಎಂದು ಅನುಮಾನಿಸಲು ಸಾಕಷ್ಟು ಸುಳಿವುಗಳಿವೆ. ಸಂತ ಚಂದಾಹುಸೇನಿಯ ಮೊಮ್ಮಗ ಷಹಾ ಹಬೀಬುಲ್ಲಾನ ಚಿಲ್ಲಾ ಇದೆಂದು ಹೇಳುವ ಶಾಸನ ಚಂದಾ ಹುಸೇನಿ ದರ್ಗಾದ ಪ್ರಾಕಾರದಲ್ಲಿರುವ ಚಿಲ್ಲಾದ ಮೇಲಿದ್ದರೆ, ಖಾಸಾಬಾಗ್ ಬಳಿ ಇರುವ ಇನ್ನೊಂದು ಶಾಸನದಿಂದ ಮೀರ್ ತಾಜುದ್ದೀನನು ೧೫೫೧ರಲ್ಲಿ ಸುಂದರವಾದ ಅರಮನೆಯನ್ನು ನಿರ್ಮಿಸಿದ ಅಂಶ ಗೊತ್ತಾಗುತ್ತದೆ. ಚಂದಾ ಹುಸೇನಿ ದರ್ಗಾದ ದ್ವಾರದ ಮೇಲಿರುವ ಇನ್ನೊಂದು ಶಾಸನ ಮುತಾವಲಿ ಶೇಕ್ ಮಿಯಾನನು ೧೬೦೪ರಲ್ಲಿ ಭವ್ಯವಾದ ಈ ದ್ವಾರವನ್ನು ನಿರ್ಮಿಸಿದ ಅಂಶವನ್ನು ತಿಳಿಸುತ್ತದೆ.

ಗೋಗಿಯು ಕಲ್ಯಾಣದ ಚಾಳುಕ್ಯರ ಕಾಲದಿಂದೀಚೆಗೆ ಮಹತ್ವ ಪಡೆದಿದ್ದರೂ, ಬಹಮನಿ ಸುಲ್ತಾನರ ಕಾಲದಲ್ಲಿ ಹೆಚ್ಚು ಪ್ರಾಮುಖ್ಯತೆ ಗಳಿಸಿದ್ದು, ಮುಸ್ಲಿಂ ಸಂತ ಚಂದಾ ಹುಸೇನಿಯು ಇಲ್ಲಿ ನೆಲೆ ನಿಂತ ನಂತರ ಪ್ರಮುಖ ಧಾರ್ಮಿಕ ಕೇಂದ್ರವಾಗಿ ಬೆಳೆದು ಆದಿಲ್ ಷಾಹಿ ಅರಸರ ಗಮನ ಸೆಳೆಯುವಲ್ಲಿ ಯಶಸ್ವಿಯಾಯಿತು. ಜೊತೆಗೆ ಆದಿಲ್ ಷಾಹಿ ಆಳ್ವಿಕೆಯಲ್ಲಿ ಇದು ಗೋಗಿ ಮಹಲ್ ಎಂದೇ ಪ್ರಸಿದ್ಧವಾಗಿತ್ತು. ಇಲ್ಲಿಯ ಚಂದಾ ಹುಸೇನಿ ದರ್ಗಾದ ಪ್ರಾಕಾರದಲ್ಲಿ ಆದಿಲ್ ಷಾಹಿ ಕಾಲಕ್ಕೆ ಸೇರಿದ ಸುಂದರ ಕಾಲಿ ಮಸೀದಿ ಇದೆ. ಇದನ್ನು ೧೬೪೫ರಲ್ಲಿ ಬಿಜಾಪುರದ ಸುಲ್ತಾನನ ಸೋದರಿ ಫಾತಿಮಾ ಸುಲ್ತಾನ ನಿರ್ಮಿಸಿದ್ದಾಳೆ. ಆದಿಲ್‌ಷಾಹಿ ಸುಲ್ತಾನರ ಮೇಲೆ ಪ್ರಭಾವ ಬೀರಿದ್ದ ಸಂತ ಚಂದಾ ಹುಸೇನಿಯ ದರ್ಗಾಕ್ಕೆ ಆದಿಲ್ ಷಾಹಿ ಅರಸರು ಭಕ್ತಿಯಿಂದ ನಡೆದು ಕೊಳ್ಳುತ್ತಿದ್ದರು. ಇಲ್ಲಿ ಯೂಸೂಫ್, ಇಸ್ಮಾಯಿಲ್ ಹಾಗೂ ಇಬ್ರಾಹಿಂ ಆದಿಲ್ ಷಾ ರ ಗೋರಿಗಳಿರುವ ಪ್ರತ್ಯೇಕ ಕಟ್ಟಡವಿದೆ. ಅಲಿ ಆದಿಲ್ ಷಾ ನ ಮಗಳಾದ ಫಾತಿಮಾ ಸುಲ್ತಾನಳು ಅಹ್ಮದ್‌ನಗರದ ಸುಲ್ತಾನನಿಗೆ ವಿವಾಹವಾಗಿದ್ದು, ಗರ್ಭಿಣಿಯಾಗಿದ್ದಾಗ ನಿಧನ ಹೊಂದಿದಳು. ಇವಳ ಗೋರಿ ಇಲ್ಲಿದ್ದು ಅದಕ್ಕೆ ಪ್ರತ್ಯೇಕ ಗುಂಬಜ್ ಇದೆ. ಮದೀನಾದವನಾದ ಜಹಸರ್ ಹುಸೇನನ ಮಗನಾಗಿದ್ದ ಚಂದಾ ಹುಸೇನ (೧೩೭೪-೧೪೩೮)ನ ಸುಂದರವಾದ ದರ್ಗಾ ಇಲ್ಲಿದೆ. ಅವನೊಂದಿಗೆ ಅವನ ಮಡದಿ ಮಕ್‌ದುಂ ಜಹಾಬೇಗಂ ಹಾಗೂ ಮಗಿನೂರ್ ಆಲಂ ಹುಸೇನರ ಗೋರಿಗಳೂ ಇದ್ದು, ಇವನ ವಂಶಜರ ಸಮಾಧಿಗಳು ಅಧಿಕ ಸಂಖ್ಯೆಯಲ್ಲಿವೆ. ಸಂತ ಚಂದಾ ಹುಸೇನಿಯ ಉರುಸು ಪ್ರತಿ ವರ್ಷ ಶಾಬಾನ ತಿಂಗಳ ೧೦-೧೧ನೇ ತಾರೀಖಿನಂದು ಜರುಗುತ್ತಿದ್ದು, ಸಾವಿರಾರು ಜನ ಸಡಗರದಿಂದ ಪಾಲ್ಗೊಳ್ಳುತ್ತಾರೆ. ಆದಿಲ್‌ಷಾಹಿಗಳ ಕಾಲಕ್ಕೆ ಸೇರಿದ ಬಾರಾದರಿ ಮಸೀದಿ ಹಾಗೂ ಅರಬಾ ಮಸೀದಿಗಳಿದ್ದು, ಮಜೂನ್ ಖಾದ್ರಿ ಮುತ್ಯಾನ ದರ್ಗಾ ಹಾಗೂ ಮುಸ್ಲಿಂ ಸಂತ-ಕವಿ ಮಹ್ಮದ್ ಭೈರಿಯ ದರ್ಗಾ ಕೂಡ ಇದೆ.

ಹಿಂದೆ ಇಲ್ಲಿ ಸಂಗಮನಾಥ ದೇವಾಲಯವಿದ್ದು, ಇಂದಿನ ಅದೇ ಇಂದಿನ ಬುಡ್ಡಿಕಾ ಘರ್ ಎಂದು ಸ್ಥಳೀಕರು ಅಭಿಪ್ರಾಯಪಡುತ್ತಿದ್ದು ಅಲ್ಲಿ ಸುಮಾರು ೧೧-೧೨ನೇ ಶತಮಾನಕ್ಕೆ ಸೇರಿದ ಚಾಳುಕ್ಯ ಕಂಬಗಳಿವೆ. ಇಲ್ಲಿಯ ಜೈನಮಂದಿರದಲ್ಲಿ ಹಲವಾರು ತೀರ್ಥಂಕರ ಶಿಲ್ಪಗಳಿದ್ದು, ಅವುಗಳಲ್ಲಿ ಚಂದ್ರನಾಥ ತೀರ್ಥಂಕರ ಪೀಠದ ಮೇಲಿರುವ ಸುಮಾರು ೧೨ನೇ ಶತಮಾನದ ಶಾಸನ ರಾಮಸೆಟ್ಟಿ ಈ ಶಿಲ್ಪವನ್ನು ಮಾಡಿಸಿದ ಅಂಶವನ್ನು ತಿಳಿಸುತ್ತದೆ. ಇದರೊಂದಿಗೆ ಇಲ್ಲಿ ಚೌವ್ವಿಸ್ ತೀರ್ಥಂಕರ ಹಾಗೂ ಪಾರ್ಶ್ವನಾಥನ ಶಿಲ್ಪಗಳಿದ್ದು, ಪದ್ಮಾವತಿ ಯಕ್ಷಿಯ ಕಂಚಿನ ಶಿಲ್ಪವೂ ಇದೆ. ಗೋಗಿಯಿಂದ ದಕ್ಷಿಣಕ್ಕೆ

ಸುಮಾರು ಮೂರು ಕಿ.ಮೀ. ದೂರದಲ್ಲಿರುವ ಗುಡ್ಡಗಳ (ಮಲ್ಲಯ್ಯ) ಸಾಲಲ್ಲಿ ಬಂಡೆಯೊಂದರ ಮೇಲೆ ಸುಮಾರು ಮೂರು ಅಡಿ ಎತ್ತರದ ಪಾರ್ಶ್ವನಾಥ ತೀರ್ಥಂಕರನ ಉಬ್ಬು ಶಿಲ್ಪವಿದ್ದು, ಬಳಿಯಲ್ಲೇ ಎರಡು ಬಂಡೆಗಳ ಮೇಲೆ ಪಾದುಕೆ, ಕಮಂಡಲ ಹಾಗೂ ಪಿಂಗಾಣಿಯ ಕೆತ್ತನೆಗಳಿವೆ. ಬಹುಶಃ ಹಿಂದೆ ಇದು ಜೈನರು ಸಲ್ಲೇಖನ ವ್ರತ ಆಚರಿಸಿ ನಿರ್ವಾಣ ಹೊಂದಿದ ಚಾರಣಗಿರಿಯಾಗಿದ್ದಿರಬೇಕೆಂದು ತೋರುತ್ತದೆ. ಉಳಿದಂತೆ ಊರಲ್ಲಿ ಬಸವಣ್ಣ, ಬನಶಂಕರಿ, ಹನುಮಂತ, ಮರಗಮ್ಮ ಮುಂತಾದ ನವೀನ ಗುಡಿಗಳಿದ್ದು, ಕ್ರೈಸ್ತ ಇಗರ್ಜಿ ಕೂಡ ಇದೆ.

**ಘತ್ತರಗಿ** (೧೩.೨೫) ಯು ತಾಲೂಕು ಕೇಂದ್ರವಾದ ಅಫಜಲಪುರದಿಂದ ಆಗ್ನೇಯಕ್ಕೆ ೧೪ ಕಿ. ಮೀ. ದೂರದಲ್ಲಿರುವ ಭಾಗಮ್ಮ (ಭಾಗ್ಯವಂತಿ) ದೇವಿಯ ಪುಣ್ಯ ಕ್ಷೇತ್ರವಾಗಿದ್ದು, ಭೀಮಾ ನದಿಯ ಎಡದಂಡೆಯ ಮೇಲಿದ್ದು ಇಲ್ಲಿ ನದಿಯು ಉತ್ತರಾಭಿಮುಖವಾಗಿ ಹರಿಯುತ್ತದೆ. ಇಲ್ಲಿಂದ ಈವರೆಗೆ ಯಾವುದೇ ಶಾಸನಗಳು ವರದಿಯಾಗಿಲ್ಲ.ಆದರೂ ಊರಲ್ಲಿ ಹನುಮಂತನ ಗುಡಿ ಬಳಿಯಿರುವ ನಂದಿ, ಸಪ್ತಮಾತೃಕಾ, ಗಣಪ, ಮಹಿಷಮರ್ದಿನಿ, ಭೈರವ, ಸೂರ್ಯ ಹಾಗೂ ತಿರ್ಥಂಕರರ ಶಿಲ್ಪಾವಶೇಷಗಳಿಂದ ಇದರ ಪ್ರಾಚೀನತೆಯನ್ನು ಸುಮಾರು ೧೧ನೇ ಶತಮಾನದಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ವಿಶಾಲವಾದ ಪ್ರಾಕಾರದಲ್ಲಿ ನಡುವೆ ಉತ್ತರಾಭಿಮುಖವಾಗಿರುವ ಭಾಗ್ಯವಂತಿ ದೇವಿಯ ಗುಡಿಯಿದ್ದು ಇದು ಗರ್ಭಗೃಹ, ಪ್ರದಕ್ಷಿಣಾಪಥ ಹಾಗೂ ನವರಂಗಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಕಾಜು ಮರದ ಕಂಬವಿದ್ದು ಇದನ್ನೇ ಭಾಗ್ಯವಂತಿ ದೇವಿಯ ಪ್ರತೀಕವೆಂದು ಭಕ್ತರು ಆರಾಧಿಸುತ್ತಾರೆ. ಪೌರಾಣಿಕವಾಗಿ ವಿಜಯನಗರ ಸಾಮ್ರಾಜ್ಯದ ಕುಲದೇವತೆಯಾಗಿದ್ದ ಆನೆಗುಂದಿಯ ಭುವನೇಶ್ವರಿ ಇಲ್ಲಿಗೆ ಘಟಸರ್ಪದ ರೂಪದಲ್ಲಿ ತುಂಗಭದ್ರಾ ನದಿ ಮೂಲಕ ಬಂದು ಭೀಮಾ ತೀರದಲ್ಲಿ ಗಡ್ಡಿಲಕ್ಷ್ಮಿಯಾಗಿ ಕಾಜು ಮರದಲ್ಲಿ ನೆಲೆ ನಿಂತಿದ್ದು, ಇಂದಿಗೂ ಹೊಳೆದಂಡೆಗೆ ಹೋಗಿ ಗಡ್ಡಿ ಲಕ್ಷ್ಮಿಗೆ ಪೂಜೆ ಮಾಡಿ ಬರುವ ಸಂಪ್ರದಾಯವಿದೆ. ಅಂಬಿಗರು ಇದರ ಪೂಜಾರಿಗಳಾಗಿದ್ದು, ಮಳೆಗಾಲ ಬಿಟ್ಟು ದೀಪಾವಳಿ ಪಾಡ್ಯದಿಂದ ಕಾರಹುಣ್ಣಿಮೆವರೆಗೆ ಪ್ರತಿ ಶುಕ್ರವಾರ ಇಲ್ಲಿ ಜಾತ್ರೆಯಾಗುತ್ತದೆ. ಆ ಸಮಯದಲ್ಲಿ ದೇವಿಗೆ ಹರಕೆ ಹೊತ್ತವರು, 'ಸಿಡಿಬಂಡಿ'ಯ ಸೇವೆ ಸಲ್ಲಿಸುತ್ತಾರೆ.

**ಚಂದ್ರಂಪಳ್ಳಿ** (೮೦.೨) ಯು ತಾಲೂಕು ಕೇಂದ್ರವಾದ ಚಿಂಚೋಳಿಯಿಂದ ವಾಯವ್ಯಕ್ಕೆ ೧೦ ಕಿ. ಮೀ. ದೂರದಲ್ಲಿ ಗೊಟ್ಟಂಗೊಟ್ಟ ಪರ್ವತ ಶ್ರೇಣಿಯ ತಪ್ಪಲಲ್ಲಿರುವ ಸುಂದರ ಪ್ರವಾಸಿ ಧಾಮವಾಗಿದೆ. ಸರಳಾ ನದಿಗೆ ಅಣೆಕಟ್ಟನ್ನು ಇಲ್ಲಿ ಕಟ್ಟಿದ್ದು ನೀರಾವರಿ ಉದ್ದೇಶದಿಂದ ಇದು ನಿರ್ಮಾಣಗೊಂಡಿದ್ದರೂ ಗುಡ್ಡಗಾಡಿನ ನಡುವೆ ಇರುವುದರಿಂದ ಪ್ರವಾಸಿಗರಿಗೆ ವಿಶಿಷ್ಟ ಅನುಭವವನ್ನು ನೀಡುತ್ತದೆ. ಸುತ್ತಮುತ್ತಲಿನ ಜನರಿಗೆ ವಾರಾಂತ್ಯದ ವಿಹಾರಕ್ಕೆ ಪ್ರಶಸ್ತವಾದ ಸ್ಥಳವಿದಾಗಿದ್ದು ಇಲ್ಲಿ ನೀರಾವರಿ ಇಲಾಖೆಯ ವಸತಿ ಗೃಹವಿದೆ. ಗುಡ್ಡದ ಮೇಲೆ ರೈತ ತರಬೇತಿ ಕೇಂದ್ರದ ಭವ್ಯ ಕಟ್ಟಡವಿದೆ. **ಗೊಟ್ಟಂಗೊಟ್ಟ** (ಬೇಚಿರಾಕ್) ವು ಚಂದ್ರಂಪಳ್ಳಿಯಿಂದ ಏಳು ಕಿ.ಮೀ. ದೂರದಲ್ಲಿ ಗುಡ್ಡಗಳ ನಡುವೆ ಇದೆ. ಚಂದ್ರಂಪಳ್ಳಿ ಜಲಾಶಯದ ಹಿನ್ನೀರಿನಗುಂಟ ಗುಡ್ಡಹತ್ತಿ ಇಳಿದು ಎಚ್ಚರಿಕೆಯಿಂದ ಚಾರಣ ಮಾಡುತ್ತ ಈ ದಾರಿಯನ್ನು ಸವೆಸುತ್ತ ಗೊಟ್ಟಂಗೊಟ್ಟ ತಲುಪುವುದೇ ಒಂದು ಸಾಹಸ ಯಾತ್ರೆಯಾಗುತ್ತದೆ. ಇದು ಹಿಂದೆ ವಿರಾಟನಗರವಾಗಿದ್ದು ಪಾಂಡವರೊಂದಿಗೆ ಸಂಬಂಧ ಹೊಂದಿತ್ತೆಂಬ ಐತಿಹ್ಯ ರೂಢಿಯಲ್ಲಿದ್ದು ಇಲ್ಲಿ ಬಕ್ಕಪ್ರಭು, ಹನುಮಂತ ಹಾಗೂ ದುರ್ಗಾದೇವಿಯ ದೇವಾಲಯಗಳಿವೆ. ಗುಡ್ಡದ ಮೇಲು ತುದಿಯಲ್ಲಿ ಬಕ್ಕಪ್ರಭುವಿನ ದೇವಾಲಯವಿದ್ದು ಶಿವರಾತ್ರಿಯಲ್ಲಂತೂ ಇಲ್ಲಿ ಸಾಕಷ್ಟು ಜನ ಸೇರಿ ಭಜನೆ ಹಾಗೂ ಇನ್ನಿತರ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿರುತ್ತಾರೆ. ಸುಮಾರು ಎರಡೂವರೆ ಶತಮಾನಗಳ ಹಿಂದೆ ಬದುಕಿದ್ದ ಆಂಧ್ರದ ಮೇಡಕ್ ಜಿಲ್ಲೆಯ ಸದಾಶಿವ ಪೇಟೆ ತಾಲೂಕಿನ ಆತ್ಮಕೂರಿನವರಾದ ಬಕ್ಕಪ್ರಭುಗಳು ತಪಸ್ಸು ಮಾಡಿದ ಸ್ಥಳ ಇದಾಗಿದ್ದು, ಇವರ ಸಮಾಧಿಯು ಬೀದರ್ ತಾಲೂಕಿನ ಕರಕಿನಹಳ್ಳಿಯಲ್ಲಿದೆ. ಪ್ರತಿ ವರ್ಷ ಹುಣ್ಣಿಮೆಯಂದು ಅಲ್ಲಿ ಜಾತ್ರೆಯಾಗುತ್ತದೆ.

**ಚಿಟ್ಟನಹಳ್ಳಿ** (೩.೩.೬)ಯು ತಾಲೂಕು ಕೇಂದ್ರವಾದ ಶಹಾಪುರದಿಂದ ಈಶಾನ್ಯಕ್ಕೆ, ಯಾದಗಿರಿಯಿಂದ ಪಶ್ಚಿಮಕ್ಕೆ ೨೪ ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಇಲ್ಲಿಂದ ಈವರೆಗೆ ಶಾಸನಗಳಾವುದೂ ವರದಿಯಾಗಿಲ್ಲ. ಊರ ಹೊರಗೆ ಇರುವ ಮಸೀದಿ ಬಳಿ ಪರ್ಷಿಯನ್ ಶಾಸನವೊಂದಿದ್ದು ವರದಿಯಾದಂತೆ ತೋರುವುದಿಲ್ಲ. ಆದರೂ ಇಲ್ಲಿರುವ ಬಸವಣ್ಣನ ದೇವಾಲಯದಿಂದಾಗಿ ಪ್ರಖ್ಯಾತವಾಗಿದೆ. ಎತ್ತರವಾದ ಜಗಲಿಯ ಮೇಲೆ ನಿಂತಿರುವ ಈ ದೇವಾಲಯವು

ತ್ರಿಕೂಟವಾಗಿದ್ದು, ಇದರ ಪ್ರಧಾನ ಗರ್ಭಗೃಹವು ದಕ್ಷಿಣಾಭಿಮುಖವಾಗಿರುವುದು ವಿಶಿಷ್ಟವಾಗಿದೆ. ನಡುವಣ ತೆರೆದ ನವರಂಗದ ಸುತ್ತ ಮೂರು ದಿಕ್ಕಲ್ಲೂ ಒಂದೊಂದು ಗರ್ಭಗೃಹ ಹಾಗೂ ತೆರೆದ ಅಂತರಾಳಗಳಿದ್ದು, ದಕ್ಷಿಣದಲ್ಲಿ ಪ್ರವೇಶವಿದೆ. ಪ್ರಧಾನ ಗರ್ಭಗೃಹದಲ್ಲಿ ನಂದಿ ಶಿಲ್ಪವಿದ್ದು, ಪೂರ್ವ ಹಾಗೂ ಪಶ್ಚಿಮ ದಿಕ್ಕಿನ ಗರ್ಭಗೃಹಗಳಲ್ಲಿ ಶಿವಲಿಂಗಗಳಿವೆ. ಇವುಗಳನ್ನು ಕ್ರಮವಾಗಿ ಭೀಮಾಲಿಂಗ ಹಾಗೂ ರಾಮಲಿಂಗ ಎಂದು ರೂಢಿಯಲ್ಲಿ ಕರೆಯುತ್ತಾರೆ. ಇಲ್ಲಿಯ ಗರ್ಭಗೃಹಗಳ ಬಾಗಿಲ ಚೌಕಟ್ಟುಗಳು ಐದು ಶಾಖೆಯ ಅಲಂಕಾರಿಕ ಪಟ್ಟಿಕೆಗಳನ್ನು ಹೊಂದಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಇದೆ. ಬಾಗಿಲ ಚೌಕಟ್ಟಿನ ಮೇಲುಭಾಗದ ಉತ್ತರಾಂಗವನ್ನು ಸುಂದರವಾದ ಐದು ಕಿರು ಶಿಖರಗಳಿಂದ ಅಲಂಕರಿಸಲಾಗಿದೆ. ನವರಂಗದಲ್ಲಿ ನಡುವೆ ಪ್ರಾಚೀನ ಕಾಲದ ಶಿವಲಿಂಗವಿದ್ದು ಬಹುಶಃ ಹಿಂದೆ ಇದು ಪ್ರಧಾನ ಗರ್ಭಗೃಹದಲ್ಲಿದ್ದಿರಬೇಕು. ನವರಂಗದಲ್ಲಿ ಮೂರು ಮಾದರಿಯ ಚಾಳುಕ್ಯ ಕಂಬಗಳನ್ನು ಬಳಸಲಾಗಿದ್ದು, ಕಕ್ಷಾಸನವಿದೆ. ಈ ದೇವಾಲಯದ ಗೋಡೆಯು ನಿರಾಡಂಬರವಾಗಿದ್ದು ಸರಳವಾಗಿದೆ. ಈ ಗುಡಿಯ ಆವರಣದಲ್ಲೇ ವಿಷ್ಣು ಹಾಗೂ ಆದಿತ್ಯ ಪೀಠಗಳಿವೆ. ಈ ಗುಡಿಯ ಪ್ರಾಕಾರದಲ್ಲೇ ದೇವಾಲಯದಿಂದ ದಕ್ಷಿಣಕ್ಕಾದಂತೆ ಎರಡು ಪ್ರಾಚೀನ ಕಟ್ಟಡಗಳಿದ್ದು, ಇವುಗಳಲ್ಲೊಂದು ಈ ಗುಡಿಗೆ ಸೇರಿದ ಮಠವಾಗಿದ್ದು ಹಿಂದೆ ಶಿಕ್ಷಣ ನೀಡುವ ಕೇಂದ್ರವಾಗಿತ್ತು, ವಾಸ್ತು ರಚನಾ ದೃಷ್ಟಿಯಿಂದ ಈ ದೇವಾಲಯವು ಸುಮಾರು ೧೧ನೆಯ ಶತಮಾನಕ್ಕೆ ಸೇರಿದ್ದೆಂದು ಊಹಿಸಬಹುದಾಗಿದೆ. ಉಳಿದಂತೆ ಊರಲ್ಲಿ ಬಸವಣ್ಣ, ಬೀರಪ್ಪ, ಸಿಂಗಯ್ಯ ಮುತ್ಯ, ಅಮಲಮುತ್ಯಾ, ಹನುಮಂತ, ಕಾಳಮ್ಮ ಮರಗಮ್ಮ ಮುಂತಾದ ನವೀನ ಗುಡಿಗಳಿದ್ದು ಮಾಳಿ ಸಿದ್ದಯ್ಯನ ಮಠವಿದೆ. ಇವುಗಳೊಂದಿಗೆ ಮಸೀದಿ ಹಾಗೂ ದರ್ಗಾ ಕೂಡ ಇವೆ.

**ಚನ್ನೂರು** (೯೩೫) ತಾಲೂಕು ಕೇಂದ್ರವಾದ ಸುರಪುರದಿಂದ ನೈಋತ್ಯಕ್ಕೆ ೩೨ ಕಿ.ಮೀ. ದೂರದಲ್ಲಿದ್ದು ಊರ ಉತ್ತರಕ್ಕೆ ಹಳ್ಳದಾಚೆಗೆ ಇರುವ ೧೨ನೇ ಶತಮಾನದ ದೇವಾಲಯಗಳಿಂದಾಗಿ ಚಾರಿತ್ರಿಕ ಮಹತ್ವವನ್ನು ಪಡೆದಿದೆ. ಇಲ್ಲಿ ಒಟ್ಟು ಮೂರು ದೇವಾಲಯಗಳಿದ್ದು, ಎಲ್ಲವೂ ಪೂರ್ವಾಭಿಮುಖವಾಗಿವೆ. ಇವುಗಳಲ್ಲಿ ಮಹೇಶ್ವರ ಮತ್ತು ಮಾರ್ತಾಂಡ ದೇವಾಲಯಗಳು ಗಾತ್ರದಲ್ಲಿ ಕಿರಿದಾಗಿದ್ದು, ಕೇವಲ ಗರ್ಭಗೃಹ ಹಾಗೂ ಅರ್ಧಮಂಟಪಗಳನ್ನು ಮಾತ್ರ ಹೊಂದಿದ್ದರೆ, ಈಶ್ವರ ದೇವಾಲಯವು ಗಾತ್ರದಲ್ಲಿ ಸ್ವಲ್ಪ ದೊಡ್ಡದಿದ್ದು ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿರುವ ಸರಳ ರಚನೆಯಾಗಿದೆ. ಈ ದೇವಾಲಯದ ಬಳಿ ಇರುವ ಶಾಸನ ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ್ದು, ೧೧೨೩ರಲ್ಲಿ ಮಲ್ಲಿದೇವರಸನು ತನ್ನ ಆಳ್ವಿಕೆಗೆ ಒಳಪಟ್ಟ ಚಣ್ಣವುರ (ಚನ್ನೂರು) ಲಕ್ಕಣೇಶ್ವರ ದೇವರಿಗೆ ಭೂಮಿ ದಾನ ಕೊಟ್ಟ ವಿಚಾರ ತಿಳಿಸುತ್ತದೆ. ಈ ಗುಡಿಯ ಬದಿಯಲ್ಲಿರುವ ಗಂಗಾಧರೇಶ್ವರ ಗುಡಿಯು ಗರ್ಭಗೃಹ, ತೆರೆದ ಅಂತರಾಳ ಹಾಗೂ ವಿಶಾಲವಾದ ನವರಂಗಗಳನ್ನು ಹೊಂದಿದ್ದು, ನವರಂಗದ ಉತ್ತರ ಮೂಲೆಯನ್ನು ಎರಡಂಕಣದಷ್ಟು ವಿಸ್ತರಿಸಿ ಅಲ್ಲೊಂದು ಶಿವಲಿಂಗವಿಟ್ಟಿದ್ದಾರೆ. ಪ್ರಧಾನ ಗರ್ಭಗೃಹದಲ್ಲಿ ಇತ್ತೀಚಿನದಾದ ಪಾಣಿಪೀಠದ ಮೇಲೆ ಎರಡು ಲಿಂಗಗಳಿದ್ದು, ಅವುಗಳಲ್ಲಿ ಕರಿಕಲ್ಲಿನ ಚತುರ್ಮುಖಲಿಂಗವು ಪ್ರಾಚೀನದ್ದಾಗಿದ್ದು ವಿಶಿಷ್ಟವಾಗಿದೆ. ಈ ಗುಡಿಯ ಮುಂದಿರುವ ಮತ್ತೊಂದು ಶಾಸನವೂ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ್ದು, ಮಲ್ಲರಸ ಹಾಗೂ ದಾಸಿಯರಸರು ಚಣ್ಣವುರ(ಚನ್ನೂರು) ಲಕ್ಕಣೇಶ್ವರ ದೇವರಿಗೆ ಭೂದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಇಲ್ಲಿಯ ಶಾಸನಗಳಿಂದ ಶಾಸನೋಕ್ತ ಲಕ್ಕಣೇಶ್ವರ ದೇವಾಲಯವೇ ಇಂದಿನ ಗಂಗಾಧರೇಶ್ವರ ಗುಡಿಯೆಂದು ಭಾವಿಸಬಹುದಾಗಿದೆ. ಈ ದೇವಾಲಯದಲ್ಲಿ ಸೂರ್ಯನ ಮುಕ್ಕಾದ ಶಿಲ್ಪ ಹಾಗೂ ಮಹಿಷ ಮರ್ದಿನಿಯ ಸುಂದರ ಶಿಲ್ಪಗಳಿವೆ. ಸಿಂಹ ಪೀಠದ ಮೇಲೆ ಸ್ಥಾನಕ ಭಂಗಿಯಲ್ಲಿರುವ ಸುಮಾರು ನಾಲ್ಕೂವರೆ ಅಡಿ ಎತ್ತರದ ಮಹಿಷ ಮರ್ದಿನಿಯ ಈ ವಿಗ್ರಹ ನೋಡಲು ಕಲಾತ್ಮಕವಾಗಿದೆ. ಊರಲ್ಲಿ ಇತ್ತೀಚಿನದಾದ ಹನುಮಂತ, ಗ್ರಾಮದೇವತೆ, ಜಟ್ಟಪ್ಪ, ಬಸವಣ್ಣ ಹಾಗೂ ಮರಗಮ್ಮನ ಗುಡಿಗಳಿದ್ದು ಮಸೀದಿ ಮತ್ತು ಮೆಹಬೂಬು ಸುಬಾನಿಯ ದರ್ಗಾಗಳಿದ್ದು ಗ್ಯಾರವಿ ತಿಂಗಳಲ್ಲಿ ಉರುಸು ಜರುಗುತ್ತದೆ. **ಕಲ್ಲದೇವನಹಳ್ಳಿ** (೧೭೬೯) ಇದರ ನೆರೆಯ ಗ್ರಾಮವಾಗಿದ್ದು, ಪ್ರಾಗೈತಿಹಾಸಿಕ ಅವಶೇಷಗಳನ್ನು ಹೊಂದಿದೆ. ಇಲ್ಲಿರುವ ಕಲ್ಯಾಣದ ಚಾಳುಕ್ಯರ ಕಾಲದ ಕಲ್ಲೇಶ್ವರ ಗುಡಿ ಪೂರ್ಣ ಜೀರ್ಣೋದ್ಧಾರಗೊಂಡಿದ್ದು ಶಿವಲಿಂಗ, ಗಣಪ, ಬ್ರಹ್ಮ ಪಾರ್ವತಿ ಹಾಗೂ ಮಹಿಷಮರ್ದಿನಿಯ ಪ್ರಾಚೀನ ಶಿಲ್ಪಗಳು ಇಲ್ಲಿವೆ.

**ಚಿಂಚನಸೂರು** (೪೯೮೨) ತಾಲೂಕು ಕೇಂದ್ರವಾದ ಆಳಂದದಿಂದ ಪೂರ್ವಕ್ಕೆ ೩೧ ಕಿ.ಮೀ., ಗುಲಬರ್ಗಾದಿಂದ ವಾಯವ್ಯಕ್ಕೆ ೨೫ ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಇಲ್ಲಿಂದ ಈವರೆಗೆ ಎರಡು ಶಾಸನಗಳು

ವರದಿಯಾಗಿದ್ದು ಇವುಗಳಲ್ಲಿ ಕುಲಕರ್ಣಿ ಭಾವಿ ಬಳಿಯಿರುವ ಸುಮಾರು ೧೨ನೇ ಶತಮಾನಕ್ಕೆ ಸೇರಿದ್ದ ಶಾಸನವು ಚಿಂಚಮ ದಾಪನಾಯ್ಕನ ಬಗ್ಗೆ ಹೇಳುತ್ತ ಪ್ರಭು ಸಾಯಿದೇವ ಹಾಗೂ ಕಲ್ಲುಂಬರಿಗೆ ನಗರಗಳ ಬಗ್ಗೆ ದಾಖಲಿಸಿದರೆ ಮಾಹೇಶ್ವರ ಗುಡಿಯ ಅಂತರಾಳದ ಇಕ್ಕೆಲಗಳಲ್ಲಿರುವ ಎರಡು ಕಂಬಗಳ ಮೇಲಿರುವ ೧೩೮೦ರ ಶಾಸನವು ಬ್ರಹ್ಮೇಶ್ವರ ದೇವರಿಗೆ ಮಾಯಣ್ಣನು ದತ್ತಿ ಬಿಟ್ಟ ವಿಷಯವನ್ನು ಹಾಗೂ ಅವನ ಮಗ ಗಂಗಾಧರನ ಕಾವ್ಯ ಪ್ರತಿಭೆಯನ್ನು ಪ್ರಶಂಸಿಸುತ್ತದೆ.

ಊರ ನಡುವೆ ಇರುವ ಮಾಹೇಶ್ವರ ಗುಡಿಯೇ ಶಾಸನೋಕ್ತ ಬ್ರಹ್ಮೇಶ್ವರ ದೇವಾಲಯವಾಗಿದ್ದು, ಇಂದು ಅದರ ನವರಂಗ ಭಾಗ ಪೂರ್ಣ ನಶಿಸಿ ಹೋಗಿದ್ದರೂ ಉಳಿದಿರುವ ಗರ್ಭಗೃಹ ಹಾಗೂ ಅಂತರಾಳಗಳ ಮೇಲಿರುವ ಸುಂದರ ಉಬ್ಬು ಕೆತ್ತನೆಗಳಿಂದಾಗಿ ಗಮನಾರ್ಹವಾಗಿದೆ. ಎತ್ತರವಾದ ಜಗಲಿಯ ಮೇಲೆ ಪೂರ್ವಾಭಿಮುಖವಾಗಿ ನಿಂತಿರುವ ಈ ದೇವಾಲಯದ ಗರ್ಭಗೃಹದಲ್ಲಿ ಬೃಹತ್ತಾದ ಶಿವಲಿಂಗವಿದ್ದು ಇದರ ಬಾಗಿಲವಾಡವು ಚತುರ್‌ಶಾಖಾಲಂಕೃತವಾಗಿದ್ದು ಕೆಳಗೆ ಶೈವ ದ್ವಾರಪಾಲಕರು ಹಾಗೂ ಚೌರಿಧಾರಿಗಳಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಇದೆ. ಇದರ ಹೊಸ್ತಿಲು ಸುಂದರವಾಗಿದ್ದು, ಅಂತರಾಳದಲ್ಲಿ ಆಕರ್ಷಕವಾದ ಚಂದ್ರಶಿಲೆ ಇದೆ. ಇದರ ತೆರೆದ ನವರಂಗವು ಹಾಳಾಗಿದೆ. ಈ ದೇವಾಲಯದ ಆಕರ್ಷಣೆಯೆಂದರೆ ಅದರ ಭಿತ್ತಿಯನ್ನು ಅಲಂಕರಿಸಿರುವ ಉಬ್ಬು ಶಿಲ್ಪಗಳು. ಗರ್ಭಗೃಹದ ಹೊರ ಭಿತ್ತಿಯಲ್ಲಿ ಮೂರು ದಿಕ್ಕಲ್ಲೂ ಮೂರು ದೇವಕೋಷ್ಠಗಳಿದ್ದು ಅವುಗಳಲ್ಲಿ ಭದ್ರಕಾಳಿ ಹಾಗೂ ಭೈರವನ ಉಗ್ರ ಶಿಲ್ಪವಿದ್ದು, ಇನ್ನೊಂದರಲ್ಲಿ ಗಣಪತಿಯೊಂದಿಗೆ ಸಿದ್ಧಿ ಬುದ್ಧಿಯರೂ ಇರುವುದು ಗಮನಾರ್ಹವಾಗಿದೆ. ಭಿತ್ತಿಯನ್ನು ಹಂಸವಾಳಿ, ಕಿರುಮಂಟಪ, ಕಿರುಸ್ತಂಭ ಹಾಗೂ ಹೂಬಳ್ಳಿಗಳಿಂದ ಅಲಂಕರಿಸಲಾಗಿದ್ದು, ಭಿತ್ತಿಯ ತುಂಬ ಭೈರವ, ಭೈರವಿ, ಗಣಪತಿ, ವಿವಿಧ ವಾದ್ಯ ನುಡಿಸುತ್ತಿರುವ ಸುಂದರಿಯರು, ರತಿ-ಮನ್ಮಥ ಮುಂತಾದ ಉಬ್ಬು ಕೆತ್ತನೆಗಳಿದ್ದು, ಇವುಗಳಲ್ಲಿ ಕಮಲ ಫಲಕವನ್ನು ಎಡಗೈಲಿ ಮೇಲೆತ್ತಿ ಹಿಡಿದು ಬಲಗೈಯಲ್ಲಿರುವ ಲೇಖನಿಯಿಂದ ಕಾವ್ಯ ಬರೆಯಲು ವೈಯ್ಯಾರದಿಂದ ನಿಂತಿರುವ ಸುಂದರಿಯ ಶಿಲ್ಪವಂತೂ ಬಹಳ ಮನೋಜ್ಞವಾಗಿ ಮೂಡಿ ಬಂದಿದ್ದು, ಬೀದರಿನ ಜಲಸಂಗಿಯ ಶಿಲ್ಪವನ್ನು ನೆನಪಿಸುತ್ತದೆ. ಈ ಶಿಲ್ಪಗಳು ದೇವಾಲಯದ ಭವ್ಯತೆಯನ್ನು ಹೆಚ್ಚಿಸಿದ್ದು ನೋಟಕರ ಮನಸ್ಸನ್ನು ಸೂರೆಗೊಳ್ಳುತ್ತವೆ. ಇಲ್ಲಿಯ ಸೋಮೇಶ್ವರ ಗುಡಿಯಲ್ಲಿ ವಿಷ್ಣು, ಗಣಪತಿ, ಹಾಗೂ ದ್ವಾರಪಾಲಕರ ಶಿಲ್ಪಗಳಿದ್ದು ಗುಡಿಯ ಹೊರಗೆ ಸುಮಾರು ೧೨ನೇ ಶತಮಾನಕ್ಕೆ ಸೇರಿದ ಎರಡು ಹಂತದ ಉಬ್ಬು ಕೆತ್ತನೆಯುಳ್ಳ ಹುಲಿ ಬೇಟೆಯ ಅಪೂರ್ವ ವೀರಗಲ್ಲಿದೆ. ಉಳಿದಂತೆ ಊರಲ್ಲಿ ಬಾಣೇಶ್ವರ, ಗೌಳೇಶ್ವರ, ಬೀರಲಿಂಗ, ವಡ್ಡಿನ ಬಸವಣ್ಣ, ವೀರಭದ್ರ, ಸಿದ್ಧಾನಂದ, ಚೌಡಮ್ಮ ಹಾಗೂ ಮಹಾಪೂರ ತಾಯಿಯ ಇತ್ತೀಚಿನ ಗುಡಿಗಳಿದ್ದು, ಮಹಾಪೂರ ತಾಯಿಯ ಜಾತ್ರೆಯು ಅಕ್ಷಯತದಿಗಿ ಹಾಗೂ ಬಾದಾಮಿ ಅಮವಾಸ್ಯೆಗಳಂದು ವಿಜೃಂಭಣೆಯಿಂದ ಜರುಗುತ್ತದೆ. ಇಲ್ಲಿ ಮಸೀದಿ ಮತ್ತು ದರ್ಗಾ ಕೂಡ ಇವೆ. ಮೇಲಾಗಿ ಸಾವಳಗಿ ಶಿವಲಿಂಗೇಶ್ವರ ಗುಡಿಯೂ ಇದೆ.

**ಚಿಂಚೋಳಿ** (೧೦,೫೮೪)ಯು ತಾಲೂಕು ಕೇಂದ್ರವಾಗಿದ್ದು, ಗುಲಬರ್ಗಾದಿಂದ ಈಶಾನ್ಯಕ್ಕೆ ೭೦ ಕಿ.ಮೀ., ಬೆಂಗಳೂರಿನಿಂದ ಉತ್ತರಕ್ಕೆ ಸುಮಾರು ೫೭೧ ಕಿ.ಮೀ. ದೂರದಲ್ಲಿ ಭೀಮಾನದಿಯ ಉಪನದಿ ಕಾಗಿಣೆಯ ಉಪನದಿಯಾದ ಮುಲ್ಲಾಮಾರಿ ನದಿಯ ಎಡದಂಡೆಯ ಮೇಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಇಲ್ಲಿಂದ ಈವರೆಗೆ ಸುಮಾರು ೧೭-೧೯ನೇ ಶತಮಾನಕ್ಕೆ ಸೇರಿದ ನಾಲ್ಕು ಪರ್ಷಿಯನ್ ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಎರಡು ಶಾಸನಗಳು ಚಿಂಚೋಳಿಯ ಕೋಟೆಯನ್ನು ಬೂಹುಲಲ್ ಖಾನನ ಮಗ ಅಬ್ದುಲ್ ಅಮೀರ್ ಖಾನನು ೧೬೫೬ರಲ್ಲಿ ನಿರ್ಮಿಸಿದ ವಿಷಯವನ್ನು, ಅದೇ ಕೋಟೆಯನ್ನು ಜೀರ್ಣೋದ್ಧಾರ ಮಾಡಿದ ಮಹ್ಮದ್ ಖಾನನನ್ನು ಉಲ್ಲೇಖಿಸಿದರೆ, ದರ್ಗಾದ ಪ್ರವೇಶದಲ್ಲಿರುವ ಶಾಸನಗಳಲ್ಲಿ ಒಂದು ೧೭೭೪ರಲ್ಲಿ ಸಿದ್ದಿ ಬಷೀರ್ ದರ್ಗಾದ ಬಾಗಿಲನ್ನು ನಿರ್ಮಿಸಿದ ಅಂಶ ತಿಳಿಸಿದರೆ, ಇನ್ನೊಂದು ೧೮೫೨ ರಲ್ಲಿ ದಲೀಲ್ ಖಾನನು ದರ್ಗಾದ ಕಮಾನುಳ್ಳ ಬಾಗಿಲವಾಡವನ್ನು ನಿರ್ಮಿಸಿದ ವಿಷಯವನ್ನು ತಿಳಿಸುತ್ತದೆ. ೧೭೨೮ರ ವೇಳೆಗೆ ಇದು ೭೭ ಹಳ್ಳಿಗಳ ಸಂಸ್ಥಾನವಾಗಿ ಪೇಶ್ವೆಗಳ ಕಾಲದಲ್ಲಿ ಅಸ್ತಿತ್ವಕ್ಕೆ ಬಂದು, ಸುಭದ್ರ ಕೋಟೆ, ಅರಮನೆ ಹಾಗೂ ವೆಂಕಟೇಶ್ವರ ಮಂದಿರ ಇವರ ಕಾಲದ ರಚನೆಗಳಾಗಿವೆ. ಊರ ಹೊರಗೆ ಪಾಪನಾಶಿನಿ ಬುಗ್ಗೆ ಇದೆ. ಈ ಬುಗ್ಗೆಯಲ್ಲಿ ಪಂಚಲಿಂಗಗಳಿದ್ದು ವರ್ಷದುದ್ದಕ್ಕೂ ಸದಾ ನೀರು ಹರಿಯುತ್ತಿರುತ್ತದೆ. ಇಲ್ಲಿಯ ಐದು ಲಿಂಗಗಳು ಐದು ಹಂತದಲ್ಲಿ ನೀರಿನ ಮಟ್ಟವನ್ನು ಸೂಚಿಸುತ್ತವೆ. ಮುಲ್ಲಾಮಾರಿಯ ದಂಡೆಯ ಮೇಲಿರುವ ಈ ಬುಗ್ಗೆಯ ನೀರು ಹೊಳೆಯನ್ನು ಸೇರುತ್ತವೆ.

ಊರಲ್ಲಿ ಲಕ್ಷ್ಮೀಬಾಯಿ ವಾಡೆಯ (ರಾಣಿ ಮಹಲ್) ಬದಿಯಲ್ಲೇ ವೆಂಕಟೇಶ್ವರ ದೇವಾಲಯವಿದೆ. ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿರುವ ಇದರ ಕಂಬಗಳು ಬೃಹತ್ತಾಗಿದ್ದು ಕಲ್ಯಾಣದ ಚಾಳುಕ್ಯರ ಶೈಲಿಯದಾಗಿದೆ. ಗರ್ಭಗೃಹದಲ್ಲಿ ಸುಂದರವಾದ ವೆಂಕಟೇಶ್ವರ ಮೂರ್ತಿ ಇದ್ದು ಮುಂದೆ ಬೃಹತ್ತಾದ ದೀಪಮಾಲೆ ಕಂಬವಿದೆ. ಊರಲ್ಲಿ ಮಲ್ಲಿಕಾರ್ಜುನ, ಭೋಗಲಿಂಗೇಶ್ವರ, ಪರ್ವತ ಗಂಗಾಧರ, ರೇವಣಸಿದ್ಧ, ಬಸವಣ್ಣ, ಹನುಮಂತ ಹಾಗೂ ವೆಂಕಟರಮಣ ಗುಡಿಗಳಿದ್ದು, ಮಹಾಂತೇಶ್ವರ ಮಠ ಹಾಗೂ ಹಾಲಕೋಡ ಚನ್ನಬಸವೇಶ್ವರ ಮಠಗಳಿದ್ದು, ಚನ್ನಬಸವೇಶ್ವರ ಜಾತ್ರೆಯು ಶಿವರಾತ್ರಿ ಸುತ್ತಮುತ್ತ ಜರುಗುತ್ತದೆ. ಊರಲ್ಲಿ ನಾಲ್ಕು ಮಸೀದಿ ಹಾಗೂ ಹಾಜ್ ಖುದಾನ್ಮಾ ಹುಸೇನಿ ದರ್ಗಾ ಕೂಡ ಇವೆ. ಇಲ್ಲಿರುವ ಇಗರ್ಜಿ ಪೋರ್ಚುಗೀಸರ ಕಾಲದ್ದೆಂದು ಹೇಳಲಾಗುತ್ತಿದ್ದು, ಇತ್ತೀಚೆಗೆ ನವೀಕರಿಸಲಾಗಿದೆ.

**ಚಿಂಚೋಳಿ (ಬಿ)** (೭೨೯)ಯು ತಾಲೂಕು ಕೇಂದ್ರವಾದ ಆಳಂದದಿಂದ ವಾಯವ್ಯಕ್ಕೆ ೧೬ ಕಿ.ಮೀ. ದೂರದಲ್ಲಿ ಬೋರಕಿಹಳ್ಳದ ಬಲದಂಡೆಯ ಮೇಲಿರುವ ಚಾರಿತ್ರಿಕ ಮಹತ್ವದ ಊರಾಗಿದೆ. ಇಲ್ಲಿಂದ ಈವರೆಗೆ ಯಾವುದೇ ಶಾಸನಗಳು ವರದಿಯಾಗಿರದಿದ್ದರೂ ಇಲ್ಲಿಯ ಮಲ್ಲಿಕಾರ್ಜುನ ದೇವಾಲಯವು ಸುಮಾರು ೧೨ನೇ ಶತಮಾನಕ್ಕೆ ಸೇರಿದ ತ್ರಿಕೂಟ ದೇವಾಲಯವಾಗಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವು ಮೂರು ಗರ್ಭಗೃಹ ಹಾಗೂ ತೆರೆದ ಅಂತರಾಳಗಳನ್ನು ಹೊಂದಿದ್ದು, ಇವುಗಳನ್ನು ನಡುವೆ ಇರುವ ಒಂದೇ ನವರಂಗ ಒಂದಾಗಿಸಿದೆ. ಪ್ರಧಾನ ಗರ್ಭಗೃಹದಲ್ಲಿ ಉಮಾ - ಮಹೇಶ್ವರರ ಪ್ರಾಚೀನ ಶಿಲ್ಪದೊಂದಿಗೆ ಇತ್ತೀಚಿನ ಶಿವಲಿಂಗವಿದ್ದು ಉಳಿದೆರಡು ಗರ್ಭಗೃಹಗಳಿಂದು ಬರಿದಾಗಿವೆ. ಎಲ್ಲಾ ಮೂರು ಗರ್ಭಗೃಹಗಳ ಬಾಗಿಲವಾಡಗಳು ತ್ರಿಶಾಖಾಲಂಕೃತವಾಗಿದ್ದು, ಅಂತರಾಳವನ್ನು ಕಲಾತ್ಮಕವಾದ ಜಾಲಂದ್ರದಿಂದ ಅಲಂಕರಿಸಲಾಗಿದೆ. ನವರಂಗದಲ್ಲಿ ಆರು ದೇವಕೋಷ್ಠಗಳಿದ್ದು, ಎಲ್ಲವೂ ಇಂದು ಬರಿದಾಗಿವೆ. ನವರಂಗದ ನಡುವಣ ಛತ್ತನ್ನು ಸುಂದರವಾದ ಕಮಲದಿಂದ ಅಲಂಕರಿಸಲಾಗಿದ್ದು, ಎಲ್ಲಾ ತೊಲೆಗಳ ಮೇಲೂ ಸುಂದರವಾದ ಕಿರು ಕಮಲಗಳನ್ನು ಕೆತ್ತಲಾಗಿದೆ. ನವರಂಗದ ಮುಂಭಾಗವು ಕಕ್ಷಾಸನವನ್ನು ಹೊಂದಿದ್ದು ಮುಕ್ತವಾಗಿದೆ. ಈ ದೇವಾಲಯದ ನವರಂಗ ಭಾಗದ ಕಲ್ಲೊಂದಕ್ಕೆ ಅಡಿಗೆ ಎಣ್ಣೆ ಹಾಗೂ ಜಾಜಾಗಳನ್ನು ಕೂಡಿಸಿ ಹಚ್ಚಿ, ತಿಕ್ಕಿ ಪಾರ್ಶ್ವವಾಯುವಿಗೆ ಔಷಧಿಯನ್ನು ತಯಾರಿಸಿ ಕೊಡುತ್ತಿದ್ದು ಅದಕ್ಕಾಗಿ ದೂರದ ಊರಿಂದ ರೋಗಿಗಳು ಇಲ್ಲಿಗೆ ಬರುತ್ತಾರೆ. ಹನುಮಂತನ ಗುಡಿಯ ನವರಂಗದಲ್ಲಿ, ಬಿಲ್ಲಾಳು, ಸ್ಥಾನಕ ಭೈರವ, ಉಮಾ ಮಹೇಶ್ವರ, ದುರ್ಗಾ ಹಾಗೂ ಸಪ್ತಮಾತೃಕಾ ಶಿಲ್ಪಗಳಿವೆ. ಗರ್ಭಗೃಹದಲ್ಲಿ ಹನುಮಂತ ಹಾಗೂ ರಾಶಿ ಚಕ್ರ ಕಲ್ಲುಗಳಿದ್ದು, ರಾಶಿಚಕ್ರ ಪೀಠದ ಮುಮ್ಮುಖದಲ್ಲಿ ಅರುಣ ಹಾಗೂ ಸಪ್ತಾಶ್ವಗಳನ್ನು ಕೆತ್ತಿರುವುದು ಗಮನಾರ್ಹವಾಗಿದೆ.

**ಚಿಣಮಗೇರಿ** (೨೦೨೮)ಯು ತಾಲೂಕು ಕೇಂದ್ರವಾದ ಅಫಜಲ್‌ಪುರದಿಂದ ಪಶ್ಚಿಮಕ್ಕೆ ೨೬ ಕಿ.ಮೀ, ಚೌಡಾಪುರ ಕ್ರಾಸ್‌ನಿಂದ ಸುಮಾರು ಎರಡೂವರೆ ಕಿ.ಮೀ. ದೂರದಲ್ಲಿ, ಚಿನಲ್ಲಿ ರಸ್ತೆಯ ಬದಿಯಲ್ಲಿರುವ ಊರಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಚಿಣಬಗೇರ' (ಬಂದರವಾಡ, ೧೧೭೪) ಎಂದೇ ಉಲ್ಲೇಖಿತಗೊಂಡಿರುವ ಈ ಊರು ಹಿಂದೆ ಅಲಂದೆ ೧೦೦೦ಕ್ಕೆ ಸೇರಿದ ಅತನೂರು-೮೦ ಕಂಪಣಕ್ಕೆ ಸೇರಿತ್ತು. ಇಲ್ಲಿಂದ ಈವರೆಗೆ ಶಾಸನಗಳಾವುವೂ ವರದಿಯಾಗಿಲ್ಲ. ಊರ ಪ್ರವೇಶದಲ್ಲಿರುವ ವೀರಭದ್ರನ ಗುಡಿ ಆವರಣದಲ್ಲಿ ಇರುವ ದೇಗುಲವು ತ್ರಿಕೂಟವಾಗಿದ್ದು, ಪೂರ್ವಾಭಿಮುಖವಾಗಿದೆ. ಸುಮಾರು ೧೧-೧೨ನೇ ಶತಮಾನಕ್ಕೆ ಸೇರಿದ ಈ ದೇವಾಲಯದ ಮೂರು ಗರ್ಭಗೃಹಗಳಲ್ಲೊಂದರಲ್ಲಿ ಶಿವಲಿಂಗವಿದೆ. ಇವುಗಳ ದ್ವಾರಬಂಧವು ತ್ರಿಶಾಖಾಲಂಕೃತವಾಗಿದ್ದು, ನವರಂಗದಲ್ಲಿ ಕಿರಿದಾದ ಎಂಟು ದೇವಕೋಷ್ಠಗಳಿದ್ದು ಒಂದರಲ್ಲಿ ಬಲಹರಿ ಲಿಂಗವಿದ್ದು ಅಂತರಾಳವನ್ನು ಸುಂದರವಾದ ಮಕರ ತೋರಣದಿಂದ ಅಲಂಕರಿಸಲಾಗಿದೆ. ನವರಂಗದ ಛತ್ತು ಚಿತ್ತಾಕರ್ಷಕವಾದ ನಕ್ಷತ್ರಾಕಾರದ ಕಮಲದಿಂದ ಅಲಂಕರಿಸಲ್ಪಟ್ಟಿದೆ. ನವರಂಗದಿಂದ ಪೂರ್ವಕ್ಕೆ ಅರ್ಧ ಮಂಟಪವಿದ್ದು ಕಕ್ಷಾಸನವಿದೆ. ನಾಲ್ಕು ಅಂತಸ್ತಿನ ಅಧಿಷ್ಠಾನವನ್ನು ಹೊಂದಿರುವ ಈ ಗುಡಿಯ ಭಿತ್ತಿಯು ನಿರಾಡಂಬರವಾಗಿದ್ದು, ಶಿಖರಗಳು ನಶಿಸಿಹೋಗಿವೆ. ಇನ್ನೂ ಸುಸ್ಥಿತಿಯಲ್ಲಿರುವ ಇದೊಂದು ತ್ರೈಪುರುಷ ದೇವಾಲಯವಾಗಿದ್ದು ಹಿಂದೆ ಶಿಕ್ಷಣ ನೀಡುವ ಕೇಂದ್ರವಾಗಿತ್ತು. ಈ ದೇವಾಲಯದ ಬಲಬದಿಯಲ್ಲಿ ಬಾವಿಯಿದ್ದು, ಇದರ ಒಳಗೋಡೆಯ ಮೇಲೆ ವಿಶಿಷ್ಟವಾದ ಒಂದೆರಡು ಮಿಥುನ ಶಿಲ್ಪಗಳಿವೆ. ಇದರ ಬಳಿಯಲ್ಲೇ ಇರುವ ಕಟ್ಟೆಯ ಬಳಿ ಒಂದೆರಡು ಮಾಸ್ತಿಕಲ್ಲುಗಳಿದ್ದು, ಮುಕ್ಕಾಗಿರುವ ಕೇಶವ, ಆದಿತ್ಯ ಹಾಗೂ ಮಹಿಷಮರ್ದಿನಿ ಶಿಲ್ಪಗಳಿವೆ. ಇಲ್ಲಿಯ ವೀರಭದ್ರ ದೇವಾಲಯವು ಪೂರ್ಣ ಜೀರ್ಣೋದ್ಧಾರಗೊಂಡಿದ್ದು ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖ ಮಂಟಪಗಳನ್ನು ಹೊಂದಿದ್ದು, ಒಳಗೆ

ವೀರಭದ್ರನ ಸುಂದರ ಶಿಲ್ಪವಿದೆ. ಇದರ ಗರ್ಭಗೃಹದ ಮೇಲಿರುವ ಶಿಖರವು ಇಟ್ಟಿಗೆ, ಗಾರೆಗಳಿಂದ ನಿರ್ಮಾಣಗೊಂಡಿದ್ದು, ಚಿತ್ತಾಕರ್ಷಕವಾದ ಉಬ್ಬು ಕೆತ್ತನೆಗಳನ್ನು ಹೊಂದಿದ್ದು, ಸುಂದರವಾಗಿದೆ. ಈ ಗುಡಿಯ ಆವರಣದಲ್ಲಿ ಅಂಬಾ ಭವಾನಿ ಹಾಗೂ ಮೈಲಾರನ ಕಿರು ಗುಡಿಗಳಿವೆ. ಈ ದೇವಾಲಯದ ಹೊರಗೆ ಇರುವ ಓಕಳಮ್ಮನ ಬಾವಿಯ ಬಳಿ ಶಿವಲಿಂಗ, ಚಾಮುಂಡಿ, ಸೂರ್ಯ ಹಾಗೂ ಒಂದು ವೀರಗಲ್ಲು ಕೂಡ ಇವೆ. ಇಲ್ಲಿ ಮಹಾಂತೇಶ್ವರ ಗುಡ್ಡರ ಮಠವೂ ಇದೆ. ಊರಲ್ಲಿ ನಿಜಾಮರ ಕಾಲದ ಕಾಳಮ್ಮನ ಗುಡಿ ಇದ್ದು ಸುಂದರವಾಗಿದೆ. ಉಗ್ರಮೂರ್ತಿ ದೇಗುಲ, ಗೂಳಪ್ಪ, ಬಸವಣ್ಣ, ಜಟ್ಟಿಂಗರಾಯ, ಹನುಮಂತ, ಲಕ್ಷ್ಮಿ ಎಲ್ಲಮ್ಮ ಹಾಗೂ ಮರಗಮ್ಮನ ಗುಡಿಗಳಿದ್ದು, ಮಹಾಂತೇಶ್ವರ ಹಾಗೂ ಸುರುಗಿ ಶಾಂತೇಶ್ವರ ಮಠಗಳಿವೆ. ಉಳಿದಂತೆ ಊರಲ್ಲಿ ಮಸೀದಿ ಹಾಗೂ ಧಾವಲಮಲ್ಲಿಕ ದರ್ಗಾಗಳಿದ್ದು, ಗ್ಯಾರವಿ ತಿಂಗಳಲ್ಲಿ ಉರುಸು ನಡೆಯುತ್ತದೆ. ವೀರಭದ್ರನ ಕೊಂಡವು ಚಟ್ಟಿ ಅಮಾವಾಸ್ಯೆಯಾದ ಆರು ದಿನಕ್ಕೆ, ರಥೋತ್ಸವವು ಧವನದ ಹುಣ್ಣಿಮೆಯಾದ ಐದು ದಿನಕ್ಕೆ ಜರುಗುತ್ತಿದ್ದು ಆ ಸಂದರ್ಭದಲ್ಲಿ ಸಾವಿರಾರು ಜನ ಸೇರುತ್ತಾರೆ.

**ಚಿತ್ತಾಪುರ** (೧೯೭೬೭)ವು ಜಿಲ್ಲಾ ಕೇಂದ್ರವಾದ ಗುಲಬರ್ಗಾದಿಂದ ಆಗ್ನೇಯಕ್ಕೆ ೫೨ ಕಿ.ಮೀ., ಸೇಡಂನಿಂದ ಪಶ್ಚಿಮಕ್ಕೆ ೨೫ ಕಿ.ಮೀ., ಬೆಂಗಳೂರಿನಿಂದ ಉತ್ತರಕ್ಕೆ ೬೨೯ ಕಿ.ಮೀ. ದೂರದಲ್ಲಿರುವ ತಾಲೂಕು ಕೇಂದ್ರವಾಗಿದ್ದು, ರೈಲು ಸಂಪರ್ಕವನ್ನೂ ಹೊಂದಿದೆ. ಹಿಂದೆ ಇದು ೫೦ ಹಳ್ಳಿಗಳನ್ನು ಹೊಂದಿದ್ದ ಪೈಗಾ ಜಾಗೀರು ಕೇಂದ್ರವಾಗಿತ್ತು. ಇಲ್ಲಿಂದ ಈವರೆಗೆ ಸುಮಾರು ೧೨ನೇ ಶತಮಾನಕ್ಕೆ ಸೇರಿದ ಏಕೈಕ ಶಾಸನ ವರದಿಯಾಗಿದೆ. ಚಿತ್ತಾಪುರ ರೈಲು ನಿಲ್ದಾಣದ ಮುಂದೆ ಇರುವ ಈ ಶಾಸನ, ರವಿದೇವರಸ ಹಾಗೂ ಇತರ ಮೂವರು ಅಧಿಕಾರಿಗಳು ಪಾಳು ಬಿದ್ದಿದ್ದ ಘಟಾಂತಕಿ ಬಸದಿಯನ್ನು ದುರಸ್ತಿ ಮಾಡಿ, ಆದಿ ತೀರ್ಥಂಕರ ಮೂರ್ತಿಯನ್ನು ಪ್ರತಿಷ್ಠಾಪಿಸಿದ ಅಂಶವನ್ನು ತಿಳಿಸುತ್ತದೆ. ಇಲ್ಲಿಯ ಬ್ರಾಹ್ಮಣರ ಗಲ್ಲಿಯ ಹಿಂಭಾಗದಲ್ಲಿ ಕಲ್ಯಾಣದ ಚಾಳುಕ್ಯರ ಕಾಲದ ಮಹಾವೀರ ಜೈನಮಂದಿರವಿದೆ. ಗರ್ಭಗೃಹ, ನವರಂಗ ಹಾಗೂ ವಿಶಾಲವಾದ ಸಭಾಮಂಟಪಗಳನ್ನು ಹೊಂದಿರುವ ಇದು ಜೀರ್ಣೋದ್ಧಾರಗೊಂಡಿದ್ದು, ಇಲ್ಲಿ ಮಹಾವೀರ, ಪಾರ್ಶ್ವನಾಥ, ನೇಮಿನಾಥ, ಬಾಹುಬಲಿ ಮತ್ತು ಪದ್ಮಾವತಿ ಯಕ್ಷಿಯರ ಪ್ರಾಚೀನ ಶಿಲ್ಪಗಳಿವೆ. ಇಲ್ಲಿಯ ಕಂಗಳೇಶ್ವರ ಗುಡಿಯು ಪ್ರಾಚೀನದ್ದಾಗಿದ್ದು ಗರ್ಭಗೃಹದಲ್ಲಿ ಪ್ರಾಚೀನ ಲಿಂಗವಿದ್ದು, ಮುಂದೆ ಕಕ್ಷಾಸನವನ್ನುಳ್ಳ ನವರಂಗವಿದೆ. ಗಣಪತಿ ಗುಡಿಯಲ್ಲಿ, ಶಿವಲಿಂಗ, ನಂದಿ, ಲಕ್ಷ್ಮೀನರಸಿಂಹ ಹಾಗೂ ಗಣಪತಿಯ ಶಿಲ್ಪಗಳಿವೆ. ಊರ ಪೇಟೆಯಲ್ಲಿರುವ ಹನುಮಂತನ ಗುಡಿಯ ಕಂಬಗಳು ೧೨ನೇ ಶತಮಾನದ್ದಾಗಿವೆ. ಉಳಿದಂತೆ ಊರಲ್ಲಿ ಹನುಮಂತ, ವೆಂಕಟೇಶ್ವರ, ಪಾಂಡುರಂಗ, ವಿಠಲ, ಬಸವಣ್ಣ, ಶರಣಬಸವೇಶ್ವರ, ರಾಮಮಂದಿರ, ಚೌಡಮ್ಮ, ಅಂಬಾಭವಾನಿ ಅಕ್ಕಮಹಾದೇವಿ, ಮರಗಮ್ಮ ಮುಂತಾದ ನವೀನ ಗುಡಿಗಳಿದ್ದು ಗಚ್ಚಿನ ಮಠ, ಸಾಲಿಮಠ ಹಾಗೂ ರಾಯರ ಮಠಗಳಿವೆ. ಇಲ್ಲಿರುವ ಎರಡು ಇಗರ್ಜಿಗಳಲ್ಲಿ ಒಂದು ಗೋವೆಯ ಪೋರ್ಚುಗೀಸರಿಂದ ನಿರ್ಮಾಣಗೊಂಡಿದ್ದು ೧೯೦೫ರಲ್ಲಿ ನವೀಕರಿಸಲ್ಪಟ್ಟಿದೆಯೆಂದು ಇಂಪೀರಿಯರ್ ಗ್ಯಾಸೆಟಿಯರ್ ದಾಖಲಿಸಿದೆ. ಇಲ್ಲಿ ಬಹಮನಿ ಅರಸರ ಕಾಲಕ್ಕೆ ಸೇರಿದ ಕೋಟೆಯಿದ್ದು, ಊರಲ್ಲಿರುವ ಚಿತಾಶಾವಲಿ ದರ್ಗಾದಿಂದಾಗಿ ಪ್ರಸಿದ್ಧವಾಗಿದೆ. ಇದರ ಉರುಸು ಏಪ್ರಿಲ್ ತಿಂಗಳಲ್ಲಿ ಜರುಗುತ್ತದೆ. ಜೊತೆಗೆ ಜುಮ್ಮಾ ಮಸೀದಿ ಹಾಗೂ ಮೆಹಬೂಬು ಸುಬಾನಿಯ ದರ್ಗಾಗಳಿವೆ. ಶಹಾಬಾದಿ ಕಲ್ಲು ಪರಸಿ ಹಾಗೂ ನೇಕಾರಿಕೆ ಇಲ್ಲಿಯ ಪ್ರಮುಖ ಉದ್ಯಮಗಳಾಗಿವೆ. ಮೂಡಬೋಳ ರಸ್ತೆಯಲ್ಲಿರುವ ಮಲ್ಲಿಕಾರ್ಜುನ ದೇವಾಲಯವು ಕಲ್ಯಾಣದ ಚಾಳುಕ್ಯರ ಕಾಲದ್ದಾಗಿದೆ. ಚಾರಿತ್ರಿಕ ಮಹತ್ವದ ನಾಗಾವಿ ಹಾಗೂ ದಿಗ್ಗಾಂವಿಗಳು ಇಲ್ಲಿಂದ ಸಮೀಪದಲ್ಲಿವೆ.

**ಚಿನ್ಮಳ್ಳಿ** (೮೪೪)ಯು ತಾಲೂಕು ಕೇಂದ್ರವಾದ ಅಫಜಲ್‌ಪುರದಿಂದ ಆಗ್ನೇಯಕ್ಕೆ ೪೨ ಕಿ.ಮೀ., ಗುಲಬರ್ಗಾದಿಂದ ನೈಋತ್ಯಕ್ಕೆ ೫೩ ಕಿ.ಮೀ. ದೂರದಲ್ಲಿ ಭೀಮಾನದಿಯ ಎಡದಂಡೆಯ ಮೇಲಿರುವ ಮಹತ್ವದ ಧಾರ್ಮಿಕ ಕೇಂದ್ರವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಚಿಲ್ಲಮಳೆ', 'ಚಿಲ್ಲಮೆಳೆ' ಎಂದೇ ಉಲ್ಲೇಖಗೊಂಡಿರುವ ಈ ಊರು ಹಿಂದೆ ಅಭಿನವ ಕೈಲಾಸವಾಗಿದ್ದು, ಶ್ರೀಶೈಲ ಮಲ್ಲಿಕಾರ್ಜುನನ ನಿವಾಸ ಸ್ಥಾನವೆಂಬ ಹೆಗ್ಗಳಿಕೆಗೂ ಪಾತ್ರವಾಗಿತ್ತು. ಹಿಂದೆ ಅತ್ತಿನೂರು-ಅಂಕ್ಕೆ ಸೇರಿದ್ದ ಈ ಊರಿಂದ ಈವರೆಗೆ ನಾಲ್ಕು ಶಾಸನಗಳು ವರದಿಯಾಗಿವೆ. ಸ್ವಯಂಭು ಮಲ್ಲಿಕಾರ್ಜುಸ ದೇವಾಲಯದ ಸಭಾಮಂಟಪದಲ್ಲಿರುವ ಈ ಶಾಸನಗಳಲ್ಲಿ ೧೧೭೫ರ ಶಾಸನವು ಕಳಚೂರಿ ಅರಸ ರಾಯಮುರಾರಿ ಸೋವಿದೇವನ ಕಾಲಕ್ಕೆ ಸೇರಿದ್ದು, ಪಶ್ಚಿಮಾಭಿಮುಖವಾಗಿ ಹರಿವ ಭೀಮಾರಥಿದೇವಿಯ ತಪ್ಪಲಲ್ಲಿ ನೆಲೆಸಿದ ಈ ಸ್ವಯಂಭು ಶ್ರೀ ಮಲ್ಲಿಕಾರ್ಜುನ ದೇವರಿಗೆಂದು ಸಮೀಪದ ಬೀರಜವಾಡ ಗ್ರಾಮವನ್ನು ಹಲವಾರು ಗೌಡರು ದಾನ ಬಿಟ್ಟ ವಿಷಯವನ್ನು

ತಿಳಿಸಿದರೆ, ಇದೇ ಸಂದರ್ಭದಲ್ಲಿ ಐಹೊಳೆ ಐನೂರ್ವರೂ ಸೇರಿದಂತೆ ವಿವಿಧ ವರ್ತಕರು ಹಾಗೂ ಕಲಂಬರಿಗೆಯ (ಕಲ್ಬುರ್ಗಿ) ಚೆಲ್ಲಿಸೆಟ್ಟಿ ಈ ದೇವರ್ಗೆ ವಿವಿಧ ಸುಂಕಗಳನ್ನು ದಾನ ಕೊಟ್ಟ ಅಂಶವನ್ನು ತಿಳಿಸುತ್ತದೆ. ಇಲ್ಲಿಯ ಇನ್ನೊಂದು ಶಾಸನ ಯಾದವ ಅರಸ ರಾಮಚಂದ್ರನ ಮಹಾಮಂಡಳೇಶ್ವರ ಮಾಯಿದೇವರಾಣೆಯು ದೇವರಿಗೆ ೧೨೯೨ರಲ್ಲಿ ೯೬೦ ಪಟ್ಟೆ, ಐದು ಹರಿವಾಣ, ಎಂಟು ಆಕಳು ಹಾಗೂ ಲಿಂಗಾಪುರ ಗ್ರಾಮಗಳನ್ನೂ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಸುಮಾರು ಅರ್ಧ ಚದರ ಕಿ.ಮೀ. ವಿಸ್ತೀರ್ಣವುಳ್ಳ ಈ ಗ್ರಾಮವನ್ನು ಬಳಸಿ ಸುಮಾರು ೧೮-೨೦ ಅಡಿ ಎತ್ತರದ ಕೋಟೆಯಲ್ಲಿ ನಿರ್ದಿಷ್ಟ ಅಂತರದಲ್ಲಿ ೨೫ ಅಡಿ ಎತ್ತರದ ೧೪ ಹುಡೆ ಮತ್ತು ನಾಲ್ಕು ದಿಡ್ಡಿ (ಅಗಸಿ) ಬಾಗಿಲುಗಳಿದ್ದು, ಇಂದಿಗೂ ಈ ಕೋಟೆ ಸುಸ್ಥಿತಿಯಲ್ಲಿದೆ. ಊರಲ್ಲಿ ಹೊಳೆಯ ದಂಡೆಯ ಮೇಲೆ ಉತ್ತರಾಭಿಮುಖವಾಗಿ ನಿಂತಿರುವ ಸ್ವಯಂಭು ಮಲ್ಲಿಕಾರ್ಜುನ ದೇವಾಲಯವು ವಿಶಾಲವಾದ ಪ್ರಾಕಾರದೊಳಗಿದ್ದು, ಗರ್ಭಗೃಹ, ಅಂತರಾಳ, ನವರಂಗ ಹಾಗೂ ಅಷ್ಟ ಕೋನಾಕಾರದ ಸಭಾಮಂಟಪಗಳನ್ನು ಹೊಂದಿದೆ. ಎತ್ತರವಾದ ಅಧಿಷ್ಠಾನವನ್ನುಳ್ಳ ಇದರ ಗರ್ಭಗೃಹದಲ್ಲಿ ಬಲಹರಿ ಪೀಠದ ಮೇಲೆ ಶಿವಲಿಂಗವಿದ್ದು, ಅಂತರಾಳದ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದ್ದು ನವರಂಗದ ನಡವಣ ಛತ್ತು ಕಮಲಾಲಂಕೃತವಾಗಿದ್ದು ಸುಂದರವಾಗಿದೆ. ನವರಂಗದ ಬಾಗಿಲವಾಡವು ಮಕರ ತೋರಣದಿಂದ ಅಲಂಕರಿಸಲ್ಪಟ್ಟಿದೆ. ಇದರ ಮುಂದಿನ ತೆರೆದ ಸಭಾಮಂಟಪವು ಕಕ್ಷಾಸನವನ್ನು ಹೊಂದಿದ್ದು, ಕಂಬಗಳು ವೈವಿಧ್ಯಮಯವಾಗಿವೆ. ಈ ಗುಡಿಯ ಆವರಣದಲ್ಲಿ ಪ್ರಾಕಾರಕ್ಕೆ ಹೊಂದಿಕೊಂಡಂತೆ, ಕಿರಿದಾದ ಈಶ್ವರ ಗುಡಿ ಹಾಗೂ 'ಕಳ್ಳನ ಗುಡಿ'ಗಳಿದ್ದು ಒಂದರಲ್ಲಿ ಶಿವಲಿಂಗವಿದ್ದರೆ ಇನ್ನೊಂದರಲ್ಲಿ ವಿಷ್ಣು ಮತ್ತು ನಾಗೇಂದ್ರರ ಶಿಲ್ಪಗಳಿವೆ. ಈ ದೇವಾಲಯದ ಭಿತ್ತಿಯು ನಿರಾಡಂಬರವಾಗಿದ್ದು, ವಜ್ರಪಟ್ಟಿಕೆಯೊಂದನ್ನಷ್ಟೆ ಅಲಂಕಾರಿಕವಾಗಿ ಬಳಸಿದ್ದು, ಗರ್ಭಗೃಹದ ಶಿಖರವನ್ನು ಜೀರ್ಣೋದ್ಧಾರ ಮಾಡಿದ್ದಾರೆ. ದೇವಾಲಯದಿಂದ ಹೊಳೆಗೆ ಹೋಗಲು ಇರುವ ದ್ವಾರವು ಸುಂದರವಾದ ಮಂಟಪವನ್ನು ಹೊಂದಿದ್ದು, ಆಕರ್ಷಕವಾಗಿದೆ. ಉಳಿದಂತೆ ಊರಲ್ಲಿ ಬಸವಣ್ಣ, ಹನುಮಂತ, ಲಕ್ಷ್ಮಿ ಹಾಗೂ ದ್ಯಾಮವ್ವನ ಗುಡಿಗಳಿದ್ದು ಮಸೀದಿ ಹಾಗೂ ದರ್ಗಾಗಳೂ ಇವೆ.

**ಚೇಂಗಟಾ** (೩೬೨೨)ವು ತಾಲೂಕು ಕೇಂದ್ರವಾದ ಚಿಂಚೋಳಿಯಿಂದ ವಾಯವ್ಯಕ್ಕೆ ಸುಲೇಪೇಟೆ ಮಾರ್ಗವಾಗಿ ೫೨ ಕಿ.ಮೀ., ಚಿಮ್ಮನಚೋಡ ಮಾರ್ಗವಾಗಿ ೪೦ ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಊರಾಗಿದೆ. ಇಲ್ಲಿಂದ ಯಾವುದೇ ಶಾಸನ ಈವರೆಗೆ ವರದಿಯಾಗಿಲ್ಲ. ಆದರೂ ಇಲ್ಲಿರುವ ಸೋಮೇಶ್ವರ ದೇವಾಲಯದಿಂದಾಗಿ ಪ್ರಸಿದ್ಧಿಯಲ್ಲಿದೆ. ಎತ್ತರವಾದ ಅಧಿಷ್ಠಾನದ ಮೇಲೆ ಪೂರ್ವಾಭಿಮುಖವಾಗಿ ನಿಂತಿರುವ ಈ ಗುಡಿಯ ಗರ್ಭಗೃಹ ಹಾಗೂ ಅಂತರಾಳ ಭಾಗಗಳಷ್ಟೆ ಇಂದು ಉಳಿದಿದ್ದು, ಜೀರ್ಣಾವಸ್ಥೆಯಲ್ಲಿದ್ದ ನವರಂಗ ಭಾಗವೂ ಜೀರ್ಣೋದ್ಧಾರಗೊಂಡಿದೆ. ಬಹುಕೋನಾಕಾರದ ತಳವಿನ್ಯಾಸವನ್ನುಳ್ಳ ಈ ದೇವಾಲಯದ ಗರ್ಭಗುಡಿಯಲ್ಲಿ ಶಿವಲಿಂಗವಿದ್ದು, ಇದರ ಬಾಗಿಲವಾಡವು ಚತುರ್ ಶಾಖಾಲಂಕೃತವಾಗಿದ್ದು, ಉತ್ತರಾಂಗದ ಪಂಚ ಕಿರುಮಂಟಪಗಳಲ್ಲಿ ಬ್ರಹ್ಮ ವಿಷ್ಣು ಮಹೇಶ್ವರ ಹಾಗೂ ಆದಿತ್ಯ ಶಿಲ್ಪಗಳಿವೆ. ಅಂತರಾಳದ ಬಾಗಿಲವಾಡವು ಆಕರ್ಷಕವಾಗಿದ್ದು, ಇಕ್ಕೆಲಗಳಲ್ಲಿ ಸುಮಾರು ಮೂರೂವರೆ ಅಡಿ ಎತ್ತರದ ದ್ವಾರಪಾಲಕರಿದ್ದು, ತೊಲೆಯನ್ನು ಸುಂದರವಾದ ಮಕರ ತೋರಣ ಅಲಂಕರಿಸಿದೆ. ಗರ್ಭಗೃಹದ ಹೊರಭಿತ್ತಿಯಲ್ಲಿ ಮೂರು ದೇವಕೋಷ್ಠಗಳಿದ್ದು, ಭೈರವ, ತ್ರಿಪುರಾಂತಕ ಶಿವ ಹಾಗೂ ಭೈರವಿಯರ ಶಿಲ್ಪಗಳಿವೆ. ಈ ಮೂರ್ತಿ ಶಿಲ್ಪಗಳ ಕೆತ್ತನೆ ಉತ್ಕೃಷ್ಟವಾಗಿದ್ದು ಇದು ಸುಮಾರು ೧೧ನೇ ಶತಮಾನದ ರಚನೆಯಾಗಿದೆ. ಈ ದೇವರ ಜಾತ್ರೆಯು ಯುಗಾದಿ ಪಂಚಮಿಯಂದು ಜರುಗುತ್ತದೆ. ಉಳಿದಂತೆ ಊರಲ್ಲಿ ಬಸವಣ್ಣ, ಮಂಗಳೇಶ್ವರ, ಗುಡ್ಡದ ಮಲ್ಲಿಕಾರ್ಜುನ, ಸಿದ್ದಪ್ಪ, ಹನುಮಂತ, ದೇವಮ್ಮ ಮರಗಮ್ಮ ಮುಂತಾದ ಗುಡಿಗಳಿದ್ದು, ಮಸೀದಿ ಹಾಗೂ ಮಸ್ತಾನ್ ಖಾದ್ರಿ ದರ್ಗಾ ಇದ್ದು ಇದರ ಉರುಸು ಗ್ಯಾರವಿ ತಿಂಗಳಲ್ಲಿ (ಏಪ್ರಿಲ್ ೧೧) ಜರುಗುತ್ತದೆ.

**ಛಾಯಾಭಗವತಿಯು** ತಾಲೂಕು ಕೇಂದ್ರವಾದ ಸುರಪುರದಿಂದ ನೈಋತ್ಯಕ್ಕೆ ೬೫ ಕಿ.ಮೀ., ನಾರಾಯಣಪುರದಿಂದ ಪೂರ್ವಕ್ಕೆ ನಾಲ್ಕು ಕಿ.ಮೀ. ದೂರದಲ್ಲಿ, ಕೃಷ್ಣಾ ನದಿಯ ಎಡದಂಡೆಯ ಮೇಲಿದೆ. ನಾರಾಯಣಪುರದಿಂದ ಛಾಯಾಭಗವತಿಗೆ ಹೋಗುವಾಗ ಕಾಣುವ ಕೃಷ್ಣೆಯ ಅಬ್ಬರದ ಹರಿತ, ಬೀಸುವ ತಂಗಾಳಿ, ಮನ ಸೆಳೆಯುವ ಘೀಮನಕೊಲ್ಲಿ, ದೂರದಲ್ಲಿ ಕಾಣುವ ಜಲದುರ್ಗ, ಸುತ್ತಲಿನ ಪ್ರಕೃತಿ ರಮ್ಯವಾಗಿದೆ. ಸುಮಾರು ೨೦೦ ಅಡಿ ಆಳವಾದ ಕಣಿವೆಯ ದಂಡೆಯ ಮೇಲೆ ಪೂರ್ವಾಭಿಮುಖವಾಗಿರುವ ನಿಸರ್ಗ ಗವಿಯನ್ನೇ ಛಾಯಾಭಗವತಿಯ ಮಂದಿರವನ್ನಾಗಿಸಿದ್ದು ಇಲ್ಲಿ ಗರ್ಭಗೃಹ ಹಾಗೂ

ಅರ್ಧ ಮಂಟಪಗಳಿವೆ. ಗರ್ಭಗೃಹದಲ್ಲಿ ಜಗಲಿಯ ಮೇಲೆ ದೇವಿಯ ಪಾದಗಳನ್ನು ಪ್ರಾತಿನಿಧಿಕವಾಗಿ ಕೆತ್ತಲಾಗಿದ್ದು, ಶಿವಲಿಂಗವೂ ಇದೆ. ಈ ದೇವಿಗೆ ಸಂಬಂಧಿಸಿದಂತೆ ಪೌರಾಣಿಕ ಕಥೆಯಿದೆ. (ಅಧ್ಯಾಯ ಎರಡು ನೋಡಿ). ಇಲ್ಲಿಯ ಪರಿಸರ ಸಿದ್ಧರಿಗೆ ಅನುಷ್ಠಾನಕ್ಕೆ ಪ್ರಶಸ್ತವಾಗಿದ್ದು, ಹಿಂದೆ ಇಲ್ಲಿ ಸಿದ್ಧರಾರೋ ನೆಲೆಸಿದ್ದಂತೆ ತೋರುತ್ತದೆ. ಇಲ್ಲಿ ಉತ್ತರವಾಹಿನಿ, ಬ್ರಹ್ಮಹೃದಯ, ಬ್ರಹ್ಮವೇಣಿ, ವಿಷ್ಣುವೇಣಿ, ಗೋಮುಖ, ವಶಿಷ್ಟ, ಜಮದಗ್ನಿ, ಕಪಿಲ ಮುಂತಾದ ೧೦೦ಕ್ಕೂ ಹೆಚ್ಚು ತೀರ್ಥಗಳಿದ್ದು ವೈಶಾಖ ಶುದ್ಧ ತದಗಿಯಂದು ಇಲ್ಲಿ ಜರುಗುವ ಉತ್ಸವದಲ್ಲಿ ಸಾವಿರಾರು ಭಕ್ತರು ದೂರದ ಊರುಗಳಿಂದ ಆಗಮಿಸಿ ಸಡಗರದಿಂದ ಪಾಲ್ಗೊಳ್ಳುತ್ತಾರೆ. ಛಾಯಾಭಗವತಿ ದೇವಾಲಯದಿಂದ ಸುಮಾರು ಅರ್ಧ ಮೈಲಿ ದೂರದಲ್ಲಿರುವ ವೀಕ್ಷಣಾ ವೇದಿಕೆಯಿಂದ ಅಂಕು ಡೊಂಕಾಗಿ ವೈಯ್ಯಾರದಿಂದ ಭೋರ್ಗರೆಯುತ್ತ ಧುಮುಕುವ ಕೃಷ್ಣೆಯ ಛಾಯಾ ಜಲಪಾತ ವೀಕ್ಷಕರಿಗೆ ವಿಶಿಷ್ಟ ಅನುಭವವನ್ನು ನೀಡುತ್ತದೆ. ಇಲ್ಲಿಂದ ಮೇಲೆ ಸುಮಾರು ಒಂಭತ್ತು ಕಿ.ಮೀ. ದೂರದಲ್ಲಿರುವ ನಾರಾಯಣಪುರ ಜಲಾಶಯವು ತುಂಬಿ ಹರಿವಾಗ ಕೃಷ್ಣೆಯು ಗಜ ಗಾಂಭೀರ್ಯದೊಂದಿಗೆ ಮೈತುಂಬಿ ವಿಶಾಲವಾದ ಒಂದೇ ಜಲಪಾತವನ್ನು ಸೃಷ್ಟಿಸುತ್ತಾಳೆ. ಇದೇ ಛಾಯಾ ಜಲಪಾತವಾಗಿದ್ದು, ಉತ್ತಮ ಪ್ರವಾಸಿ ತಾಣವಾಗಿದೆ. ಛಾಯಾಭಗವತಿಯಿಂದ ಸುಮಾರು ನಾಲ್ಕು ಕಿ.ಮೀ. ಮುಂದೆ ಕೃಷ್ಣೆ ಕವಲೊಡೆದಿದ್ದು, ನಡುವಿನ ಗಡ್ಡೆಯಲ್ಲಿ ಚಾರಿತ್ರಿಕ ಮಹತ್ವದ ಬೃಹತ್ತಾದ ಜಲದುರ್ಗ ಕೋಟೆ ಇದೆ. ಆದರೆ ಇದನ್ನು ತಲುಪಲು ನದಿಯ ಆಚೆ ದಂಡೆ ಅಂದರೆ ಲಿಂಗಸುಗೂರಿನಿಂದ ಬರಬೇಕಾಗಿದ್ದು, ಜಲದುರ್ಗದ ಬಳಿ ಕೃಷ್ಣೆಯ ಪ್ರಸಿದ್ಧ ಧನುಷ್ಕೋಟಿ ಜಪಲಾತವಿದೆ.

**ಜಮಖಂಡಿ** (೭೯೦)ಯು ತಾಲೂಕು ಕೇಂದ್ರವಾದ ಜೇವರ್ಗಿಯಿಂದ ನೈಋತ್ಯಕ್ಕೆ ೩೫ ಕಿ.ಮೀ. ದೂರದಲ್ಲಿರುವ ಅಯ್ಯಣ್ಣ ಮುತ್ಯಾನ ಗುಡಿಯಿರುವ ಜಾಗ್ರತ ಸ್ಥಳವಾಗಿದೆ. ಸ್ಥಳೀಕರಾದ ಪಟ್ಟೆದಾರ್ ಮಾಲಿಗೌಡರ ಸಮಾಧಿಯೇ ಅಯ್ಯಣ್ಣ ಮುತ್ಯಾನ ಗುಡಿಯಾಗಿದ್ದು, ಇವರು ಜೀವಿಸಿದ್ದಾಗ ಹಲವಾರು ಪವಾಡಗಳನ್ನು ಮೆರೆದು ಜನರ ಗೌರವಕ್ಕೆ ಪಾತ್ರರಾಗಿದ್ದವರು. ಈಗ ದೇವಾಲಯದಲ್ಲಿ ಮೈಲಾರನ ಮೂರ್ತಿಯಿದ್ದು, ಮೂರು ದಿನ ಜರುಗುವ ಇದರ ಜಾತ್ರೆಯು ಚಟ್ಟಿ ಅಮಾವಾಸ್ಯೆಯ ನಂತರ ಸಪ್ತಮಿಯಂದು ನಡೆಯುತ್ತಿದ್ದು, ಸಾವಿರಾರು ಜನ ಭಕ್ತರು ದೂರದ ಊರುಗಳಿಂದ ಬಂದು ಸೇರುತ್ತಾರೆ. ಆ ಸಂದರ್ಭದಲ್ಲಿ ಒಗ್ಗರ ಕುಣಿತ, ಕುದುರೆ ಕೆನೆತ, ಚಾವಟಿ ಸೇವೆ, ದೀವಟಗಿ ಸೇವೆ ಹಾಗೂ ಸರಪಳಿ ಸೇವೆಯನ್ನೂ ಇಲ್ಲಿ ಭಕ್ತರು ಸಲ್ಲಿಸುತ್ತಾರೆ. ರೋಗ ಪರಿಹಾರಕ್ಕೆಂದು ಈ ದೇವರಿಗೆ ಜನ ವಿಶೇಷವಾಗಿ ನಡೆದುಕೊಳ್ಳುತ್ತಾರೆ. ಈ ಗುಡಿಯ ಬಳಿಯಲ್ಲೇ ಕೊಡೇಕಲ್ ಬಸವಣ್ಣನ ಸಮಕಾಲೀನನೆಂದು ಹೇಳುವ ಶಿವಪ್ಪಯ್ಯನ ಮಠವಿದ್ದು ಇದು ಮುಸ್ಲಿಂ ಶೈಲಿಯಲ್ಲಿದೆ. ಉಳಿದಂತೆ ಊರಲ್ಲಿ ಮಲ್ಲಯ್ಯ, ಹನುಮಂತ, ಕೆಂಚಮ್ಮ, ಮರಗಮ್ಮ ಹಾಗೂ ದೇವಿ ಗುಡಿಗಳಿದ್ದು ಮಸೀದಿ ಹಾಗೂ ದರ್ಗಾಗಳೂ ಇವೆ.

**ಜಿಡಗಾ** (೧೯೭೨)ವು ತಾಲೂಕು ಕೇಂದ್ರವಾದ ಆಳಂದದಿಂದ ಪಶ್ಚಿಮಕ್ಕೆ ೧೨ ಕಿ.ಮೀ. ದೂರದಲ್ಲಿರುವ ಧಾರ್ಮಿಕ ಕೇಂದ್ರವಾಗಿದೆ. ಇಲ್ಲಿರುವ ಯಲ್ಲಪ್ಪ ಮಹಾರಾಜರ ಅವಧೂತ ಮಠ ಮತ್ತು ಷಡಕ್ಷರ ಸಿದ್ಧರಾಮ ಶಿವಯೋಗಿಗಳ ವಿರಕ್ತಾಶ್ರಮಗಳಿಂದಾಗಿ ಇದು ಪ್ರಸಿದ್ಧವಾಗಿದೆ. ಭಾದ್ರಪದ ಹುಣ್ಣಿಮೆಯಂದು ಇಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ.

**ಜೇವಣಗಿ**(೨೭೯)ಯು ತಾಲೂಕು ಕೇಂದ್ರವಾದ ಗುಲಬರ್ಗಾದಿಂದ ಈಶಾನ್ಯಕ್ಕೆ ೩೦ ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಜೀವನಿಗೆ' ಎಂದೇ ಉಲ್ಲೇಖಗೊಂಡಿರುವ ಈ ಊರಿಂದ ಈವರೆಗೆ ಮೂರು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಮಾರುತಿ ಗುಡಿಯ ಕಂಬವೊಂದರ ಮೇಲಿರುವ ೧೧೨೭ರ ಶಾಸನವು ನಖರೇಶ್ವರ ದೇವರಿಗೆಂದು, ಆಚಾರ್ಯ ಲಾಕುಳೇಶ್ವರ ಪಂಡಿತರಿಗೆ ಅಲ್ಲಿಯ ನಖರಗಳು ಅನೇಕ ದಾನಗಳನ್ನು ಕೊಟ್ಟ ಅಂಶವನ್ನು ಹೇಳಿದರೆ, ಜಂಬನಾಥ ಗುಡಿ ಪ್ರಾಕಾರದಲ್ಲಿರುವ ಇಮ್ಮಡಿ ಜಗದೇಕಮಲ್ಲನ ಕಾಲಕ್ಕೆ ಸೇರಿದ ಇನ್ನೊಂದು ಶಾಸನವು ಅಲಂದೆಯ ಶಾಂತಿನಾಥ ದೇವರಿಗೆ ಪ್ರತಿಬದ್ಧವಾದ ಜೀವನಿಗೆಯ ಪಾರ್ಶ್ವನಾಥ ದೇವರಿಗೆಂದು, ಜೀವನಿಗೆಯ ಬಿಬ್ಬೇಶ್ವರ ದೇವರ ಆಚಾರ್ಯ ಕ್ರಿಯಾಸಕ್ತಿ ಪಂಡಿತರು, ಪ್ರಭು ಹಾಗೂ ನಖರರು ಭೂಮಿ ಹಾಗೂ ತೋಟಗಳನ್ನು ದಾನಬಿಟ್ಟ ಅಂಶವನ್ನು ತಿಳಿಸುತ್ತದೆ. ಇದರಿಂದ ಹಿಂದೆ ಇಲ್ಲಿ ನಖರೇಶ್ವರ, ಬಿಬ್ಬೇಶ್ವರ ಹಾಗೂ ಪಾರ್ಶ್ವನಾಥ ದೇಗುಲಗಳಿದ್ದ ಅಂಶ ಸ್ಪಷ್ಟವಾಗುತ್ತದೆ. ಆದರಿಂದು ಇವು ಜೀರ್ಣಾವಸ್ಥೆಯಲ್ಲಿವೆ.

**ಜೇವರ್ಗಿ** (೧೦೮೭೭)ಯು ತಾಲ್ಲೂಕು ಕೇಂದ್ರವಾಗಿದ್ದು, ಗುಲಬರ್ಗಾದಿಂದ ದಕ್ಷಿಣಕ್ಕೆ ಸುಮಾರು ೪೦ ಕಿ.ಮೀ. ದೂರದಲ್ಲಿದ್ದು ರಾಜ್ಯ ಹೆದ್ದಾರಿ ಸಂಖ್ಯೆ ೧೦ ಹಾಗೂ ೧೯ ಈ ಊರ ಮೂಲಕ ಹಾದು ಹೋಗುತ್ತವೆ. ಇಲ್ಲಿಂದ ಈವರೆಗೆ ಶಾತವಾಹನರ ಕಾಲಕ್ಕೆ ಸೇರಿದ ಎರಡು ಪ್ರಾಕೃತ ಶಾಸನಗಳು ವರದಿಯಾಗಿವೆ. "ವಣಿಕಸ ವೀರಸ ವಾಣಿ ಇನೀಯನ ಅನಿಯ" ಹಾಗೂ "ನಾಸಮಸ ಸಂಘನಿಯ" ಎಂಬ ಪಠ್ಯಗಳನ್ನುಳ್ಳ ಈ ಶಾಸನಗಳ ಶೋಧದಿಂದ ಜೇವರ್ಗಿಯ ಪ್ರಾಚೀನತೆಯನ್ನು ಶಾತವಾಹನರಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ಊರಲ್ಲಿ ಸುಮಾರು ೧೧-೧೨ನೇ ಶತಮಾನಕ್ಕೆ ಸೇರಿದ ಜೈನ ಬಸದಿ ಇದೆ. ಬಡಿಗೇರ ಓಣಿಯಲ್ಲಿರುವ ಶಾಂತಿನಾಥ, ತೀರ್ಥಕರ ಬಸದಿಯು ಪೂರ್ಣ ಜೀರ್ಣೋದ್ಧಾರ ಗೊಂಡಿದ್ದು, ಇಲ್ಲಿ ಬಾಹುಬಲಿ, ಪಾರ್ಶ್ವನಾಥ, ಹಾಗೂ ಪದ್ಮಾವತಿ ಯಕ್ಷಿಯರ ಶಿಲ್ಪಗಳಿವೆ. ಇಲ್ಲಿಯ ಈಶ್ವರ ಗುಡಿಯು ಕಲ್ಯಾಣದ ಚಾಳುಕ್ಯರ ಕಾಲದ್ದಾಗಿದ್ದು, ಗರ್ಭಗುಡಿಯಲ್ಲಿ ಶಿವಲಿಂಗ ಹಾಗೂ ನಂದಿಗಳಿವೆ. ಊರ ಪಶ್ಚಿಮಕ್ಕೆ ಇರುವ ಅಖಂಡೇಶ್ವರ (ಷಣ್ಮುಖಿ ಶಿವಯೋಗೀಶ್ವರ) ಮಠವು ಸುಮಾರು ೧೮ನೇ ಶತಮಾನದ್ದಾಗಿದ್ದು, ಇದರ ಮೂಲ ಗುರುಗಳು ಅಖಂಡೇಶ್ವರರಾಗಿದ್ದು (೧೭೩೧-೧೭೫೯) ಷಣ್ಮುಖಿ ಶಿವಯೋಗಿ (೧೭೫೯-೧೮೧೧) ಗಳ ಕಾಲದಲ್ಲಿ ಮಠವು ಹೆಚ್ಚು ಪ್ರವರ್ಧಮಾನಕ್ಕೆ ಬಂದಿತು. ಇವರು ೭೧೮ ವಚನಗಳನ್ನು ರಚಿಸಿದ್ದಾರೆ. ಐದು ದಿವಸ ನಡೆಯುವ ಅಖಂಡೇಶ್ವರರ ಜಾತ್ರೆಯು, ವೈಶಾಖ ಬಹುಳ ಪಂಚಮಿಯಂದು ಜರುಗುತ್ತದೆ. ಉಳಿದಂತೆ ಊರಲ್ಲಿ ನರಸಿಂಹ, ಲಕ್ಷ್ಮಿವೆಂಕಟೇಶ್ವರ, ವಿಶ್ವಾರಾಧ್ಯ, ವೀರಭದ್ರ, ಹನುಮ, ಲಕ್ಷ್ಮಿ, ಪಾಲ್ಕಮ್ಮ, ಪೋಚಮ್ಮ, ಎಲ್ಲಮ್ಮ ಮುಂತಾದ ನವೀನ ಗುಡಿಗಳಿದ್ದು, ಜುಮ್ಮಾಮಸೀದಿ, ಮೆಹಬೂಬು ಸುಬಾನಿ ದರ್ಗಾ ಹಾಗೂ ಕ್ರೈಸ್ತ ಇಗರ್ಜಿಗಳಿವೆ.

**ಟಾಕಳಿ** (೫೭೬)ಯು ತಾಲೂಕು ಕೇಂದ್ರವಾದ ಅಫಜಲ್‌ಪುರದಿಂದ ಆಗ್ನೇಯಕ್ಕೆ ೪೪ ಕಿ.ಮೀ., ಗುಲಬರ್ಗಾದಿಂದ ನೈಋತ್ಯಕ್ಕೆ ೫೮ ಕಿ.ಮೀ. ದೂರದಲ್ಲಿ ಭೀಮಾ ನದಿಯ ಎಡ ದಂಡೆಯ ಮೇಲಿರುವ ಪ್ರಾಚೀನ ಊರಾಗಿದೆ. ಊರಿಂದ ಪೂರ್ವಕ್ಕೆ ಸುಮಾರು ಒಂದು ಕಿ.ಮೀ. ದೂರದಲ್ಲಿ ಹೊಳೆ ದಂಡೆಯ ಮೇಲೆ ಸುಮಾರು ೧೧-೧೨ನೇ ಶತಮಾನಕ್ಕೆ ಸೇರಿದ ಎರಡು ದೇವಾಲಯಗಳಿವೆ. ಇವುಗಳಲ್ಲೊಂದು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಅಂತರಾಳ ಹಾಗೂ ತೆರೆದ ನವರಂಗಗಳನ್ನು ಹೊಂದಿದೆ. ಇನ್ನೊಂದು ಉತ್ತರಾಭಿಮುಖವಾಗಿದ್ದು ತ್ರಿಕೂಟವಾಗಿದೆ. ಈ ಎರಡೂ ದೇವಾಲಯಗಳು ಶಿವಲಿಂಗಗಳನ್ನು ಹೊಂದಿದ್ದು, ಇವುಗಳ ಬಾಗಿಲವಾಡಗಳು ತ್ರಿಶಾಖಾಲಂಕೃತಗೊಂಡಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯರಿದ್ದಾರೆ. ಈ ದೇವಾಲಯ ಪರಿಸರದಲ್ಲಿ ಆಕರ್ಷಕವಾದ ಆಸೀನ ಭೈರವಿ ಹಾಗೂ ಭೈರವ ಶಿಲ್ಪಗಳಿವೆ. ಇವುಗಳ ಭಿತ್ತಿಯು ನಿರಾಡಂಬರವಾಗಿದ್ದು, ಮುಂಭಾಗದಲ್ಲಷ್ಟೆ, ವಜ್ರಾಲಂಕಾರವನ್ನು ನೋಡಬಹುದಾಗಿದೆ. ಉಳಿದಂತೆ ಊರಲ್ಲಿ ಹನುಮಂತ, ನಾಗೇಶ, ಲಕ್ಷ್ಮಿ, ಜಟ್ಟಪ್ಪ, ಹಿರೊಡೆ ಹಾಗೂ ಮರಗಮ್ಮನ ದೇವಾಲಯಗಳಿದ್ದು ಒಂದು ಮಸೀದಿ ಹಾಗೂ ಮೂರು ದರ್ಗಾಗಳಿವೆ.

**ತಡಕಲ್ಲು** (೬೯೯೬) ತಾಲೂಕು ಕೇಂದ್ರವಾದ ಆಳಂದದಿಂದ ಈಶಾನ್ಯಕ್ಕೆ ೧೫ ಕಿ.ಮೀ. ದೂರದಲ್ಲಿದೆ. ಪ್ರಾಚೀನ ಶಾಸನಗಳಲ್ಲಿ 'ಪಿರಿಯ ತಡಕಲ್' ಎಂದೇ ಉಲ್ಲೇಖಗೊಂಡಿರುವ ಈ ಊರಿಂದ ಈವರೆಗೆ ನಾಲ್ಕು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಬಡಿಗೇರ ಓಣಿಯಲ್ಲಿರುವ ಸುಮಾರು ೧೨ನೇ ಶತಮಾನದ ಲಿಪಿಯಲ್ಲಿರುವ ಶಾಸನವು ಅಮೋಘವರ್ಷ ನೃಪತುಂಗ ಹಾಗೂ ರಾಜಧಾನಿ ಮಾನ್ಯಖೇಡಪುರದ ಉಲ್ಲೇಖವನ್ನೂ ಹೊಂದಿದ್ದು ಇಲ್ಲಿಯ ಬಳ್ಳೇಶ್ವರ ದೇವರ್ಗೆ, ಪೂಜಾರಿಗೆ, ಹಾಗೂ ಗುಡಿಯ ಗೀತ ನೃತ್ಯ ಸೇವೆಗೆಂದು ದಾನಕೊಟ್ಟ ವಿಷಯವನ್ನು ತಿಳಿಸಿದರೆ, ಜೈನ ಮಂದಿರದ ತೀರ್ಥಂಕರ ಪೀಠದ ಮೇಲಿರುವ ಸುಮಾರು ೧೮ನೇ ಶತಮಾನದ ಶಾಸನ ಬಾದಾಮಿ ಮಲ್ಲಿಸೆಟ್ಟಿ ಇದನ್ನು ಮಾಡಿಸಿದನೆಂದು ಹೇಳುತ್ತದೆ. ಇಲ್ಲಿಯ ಇನ್ನೆರಡು ಶಾಸನಗಳು ತೀರ್ಥಂಕರ ಬಿಂಬಗಳ ಪ್ರತಿಷ್ಠಾಪನೆಗೆ ಸಂಬಂಧಿಸಿದ್ದಾಗಿದೆ. ಜೈನಮಂದಿರದಲ್ಲಿ ಹಿತ್ತಾಳೆ, ಕಂಚು ಹಾಗೂ ಅಮೃತಶಿಲೆಯ ಹಲವಾರು ಜೈನ ಬಿಂಬಗಳಿದ್ದು ಸುಂದರವಾಗಿವೆ. ಈ ದೇವಾಲಯವು ಪೂರ್ಣ ಜೀರ್ಣೋದ್ಧಾರಗೊಂಡಿದೆ. ಆದರೆ ಪ್ರಾಚೀನ ದೇಗುಲಗಳಾವುವೂ ಉಳಿದಿರದೆ ಇತ್ತೀಚಿನದಾದ ಬಸವಣ್ಣ, ವೀರಭದ್ರ, ಹನುಮಂತ ಮುಂತಾದ ದೇವಾಲಯಗಳಿದ್ದು ಮಸೀದಿ ಹಾಗೂ ದರ್ಗಾ ಕೂಡ ಇವೆ.

**ತಡಿಬಿಡಿ** (೩೨೮೯)ಯು ತಾಲೂಕು ಕೇಂದ್ರವಾದ ಶಹಾಪುರದಿಂದ ಪಶ್ಚಿಮಕ್ಕೆ ೩೦ ಕಿ.ಮೀ. ದೂರದಲ್ಲಿ ಯಾದಗಿರಿ-ಸುರಪುರ ರಸ್ತೆಯಲ್ಲಿರುವ ಮಹತ್ವದ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ತಳಬೀಡು' ಎಂದೇ ಉಲ್ಲೇಖಿತಗೊಂಡಿರುವ

ಇಲ್ಲಿಂದ ಈವರೆಗೆ ಏಕೈಕ ಶಾಸನ ವರದಿಯಾಗಿದೆ. ಊರ ಹೊರಗೆ ಹನುಮಂತನ ಗುಡಿಯ ಕಂಬದ ಮೇಲಿರುವ ಈ ಶಾಸನವು ದೇವಗಿರಿಯ ಯಾದವ ಅರಸ ಸಿಂಘಣನ ಕಾಲದ್ದಾಗಿದ್ದು, ೧೨೦೮ರಲ್ಲಿ ತಳಬೀಡಿನ ಬ್ರಹ್ಮೇಶ್ವರ(?) ದೇವರಿಗೆಂದು ಊರ ಮಹಾಪ್ರಭುಗಳಾದ ಬೀರಗೌಡ ಹಾಗೂ ನನ್ನಗೌಡರು ದೇವರ ಆಚಾರ್ಯರಾದ ಚಿಕ್ಕಯ್ಯನವರಿಗೆ ಹಿರಿಯ ಕೋಲಲ್ಲಿ ಒಂದೂವರೆ ಮತ್ತರು ಭೂಮಿಯನ್ನು ದಾನ ಕೊಟ್ಟ ಸಂದರ್ಭದಲ್ಲಿ ದೇವರ ನಂದಾದೀಪದ ಸೇವೆಗೆಂದು ಗಾಣದವರು ಸೊಂಟಿಗೆ ಎಣ್ಣೆಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಜೊತೆಗೆ ಸಾಂದರ್ಭಿಕವಾಗಿ ನೆರೆಯ 'ಗುಂಡಿಗೆಹಳ್ಳಿ' ಗ್ರಾಮವನ್ನೂ ಹೆಸರಿಸುತ್ತದೆ. ಈ ಶಾಸನವಿರುವ ಹನುಮಂತನ ಗುಡಿಯು ಇತ್ತೀಚಿನದಾಗಿದ್ದು, ಇದನ್ನು ಸುಮಾರು ೧೩ನೇ ಶತಮಾನದ ಕಂಬಗಳನ್ನು ಬಳಸಿ ನಿರ್ಮಿಸಿದ್ದಾರೆ. ಮಲ್ಲಯ್ಯನ ಗುಡ್ಡದ ತಳದಲ್ಲೇ ಈ ಬೀಡು(ಊರು) ಇರುವುದರಿಂದ ಇದಕ್ಕೆ ತಳಬೀಡು ಎಂಬ ಹೆಸರು ಬಂದಿದ್ದು ಮುಂದೆ ಅದೇ ತಡಿಬಿಡಿಯಾಗಿದೆ. ಈ ಗುಡ್ಡದ ಮೇಲೆ ಜೀರ್ಣೋದ್ಧಾರಗೊಂಡಿರುವ ಪ್ರಾಚೀನ ಸಂಗಮೇಶ್ವರ ದೇವಾಲಯವಿದೆ. ಇದೊಂದು ತ್ರಿಕೂಟವಾಗಿದ್ದು, ಶಾಸನೋಕ್ತ ಬ್ರಹ್ಮೇಶ್ವರ ದೇವಾಲಯ ಇದೇ ಇರಬೇಕೆಂದು ತೋರುತ್ತದೆ. ಮೂರು ಪ್ರತ್ಯೇಕ ಗರ್ಭಗೃಹ ಹಾಗೂ ತೆರೆದ ಅಂತರಾಳಗಳ ನಡುವೆ ಎಲ್ಲಕ್ಕೂ ಸೇರಿದಂತೆ ಒಂದೇ ನವರಂಗವನ್ನು ಹೊಂದಿರುವ ಈ ದೇವಾಲಯಕ್ಕೆ ಇತ್ತೀಚೆಗೆ ಹಜಾರವೊಂದನ್ನು ಸೇರಿಸಲಾಗಿದೆ. ಉತ್ತರಾಭಿಮುಖವಾಗಿರುವ ಪ್ರಧಾನ ಗರ್ಭಗೃಹದಲ್ಲಿ ಸಿದ್ಧಲಿಂಗೇಶ್ವರ ಲಿಂಗವಿದ್ದರೆ, ಪೂರ್ವ-ಪಶ್ಚಿಮ ಗರ್ಭಗೃಹಗಳಲ್ಲಿ ನಂದಿ ಹಾಗೂ ಸಂಗಮೇಶ್ವರ ಲಿಂಗಗಳಿವೆ. ಇಲ್ಲಿಯ ಗರ್ಭಗೃಹಗಳ ಬಾಗಿಲ ಚೌಕಟ್ಟುಗಳು ಮೂರು - ನಾಲ್ಕು ಶಾಖೆಯ ಅಲಂಕಾರ ಪಟ್ಟಿಕೆಗಳನ್ನು ಹೊಂದಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯರಿದ್ದಾರೆ. ಈ ಗುಡಿಯ ಬಳಿಯಲ್ಲೇ 'ಸಿಡಿಲ ಭಾವಿ' ಇದೆ. ಉಳಿದಂತೆ ಊರಲ್ಲಿ ಭರಮಪ್ಪ, ಬಂಡೇಲಿಂಗೇಶ್ವರ, ದ್ಯಾಮವ್ವ, ಮರಗಮ್ಮ ಮುಂತಾದ ನವೀನ ಗುಡಿಗಳಿದ್ದು ಮಸೀದಿ ಹಾಗೂ ಮೆಹಬೂಬು ಸುಬಾನಿಯ ದರ್ಗಾಗಳಿವೆ.

**ತಿಂಥಿಣಿ** (೨೩.೨೦)ಯು ತಾಲೂಕು ಕೇಂದ್ರವಾದ ಸುರಪುರದಿಂದ ನೈಋತ್ಯಕ್ಕೆ ೧೯ ಕಿ.ಮೀ. ದೂರದಲ್ಲಿ ಸುರಪುರ-ಲಿಂಗಸುಗೂರು ಮಾರ್ಗದಿಂದ ಐದು ಕಿ.ಮೀ. ಒಳಗಾದಂತೆ ಕೃಷ್ಣಾ ನದಿಯ ಎಡ ದಂಡೆಯ ಮೇಲಿರುವ ಹಿಂದೂ-ಮುಸ್ಲಿಂ ಭಾವೈಕ್ಯತೆಯನ್ನು ಸಾರುವ ಧಾರ್ಮಿಕ ಕೇಂದ್ರವಾಗಿದೆ. ಸುಮಾರು ೧೭ನೇ ಶತಮಾನದಲ್ಲಿ ಜೀವಿಸಿದ್ದ ಸಂತ ಮೌನಪ್ಪಯ್ಯನ ಗದ್ದುಗೆ ಇಲ್ಲಿದ್ದು ಹಿಂದೂಗಳು ಇದನ್ನು ಮೌನೇಶ್ವರರದೆಂದೂ, ಮುಸ್ಲೀಮರು ಮೌನುದ್ದೀನರದೆಂದೂ ಭಕ್ತಿಯಿಂದ ಆರಾಧಿಸುತ್ತಾರೆ. ಸುರಪುರ ತಾಲೂಕಿನ ದೇವರಗೋನಾಳದಲ್ಲಿ ವಿಶ್ವಕರ್ಮ ಕುಟುಂಬದಲ್ಲಿ ಜನಿಸಿದ ಮೌನೇಶ್ವರರು ಹಿಂದೂ-ಮುಸ್ಲಿಂ ಸಮನ್ವಯದ ಸಂಕೇತವಾಗಿ ಬಾಳಿ ಉತ್ತರ ಕರ್ನಾಟಕದಲ್ಲಿ ಸಂಚಾರ ಕೈಗೊಂಡು, ಸೂಫಿ ಸಿದ್ಧಾಂತವನ್ನು ಪ್ರಚಾರ ಮಾಡಿ ಹಿಂದೂ-ಮುಸ್ಲಿಂ ಸಮಾಜದ ಸಮಾನ ಗೌರವಕ್ಕೆ ಪಾತ್ರವಾದ ದಿವ್ಯ ಚೇತನ. ಈ ಸಂತ ಐಕ್ಯವಾದ ಸ್ಥಳದಲ್ಲಿ ಇಂದು ಇರುವ ಕಮಾನು, ಮಿನರೇಟ್ ಹಾಗೂ ಗುಮ್ಮಟಗಳನ್ನುಳ್ಳ ಮೌನಪ್ಪಯ್ಯ ಗುಡಿಯನ್ನು ಸುರಪುರದ ನಾಯಕನ ಆಸ್ಥಾನದಲ್ಲಿ ೧೭೫೨-೧೮೦೨ರವರೆಗೆ ಮಂತ್ರಿಗಳಾಗಿದ್ದ ನಿಷ್ಠಿ ಕಡೆಲಪ್ಪ, ನಿಷ್ಠಿ ವೀರಪ್ಪಯ್ಯ ಹಾಗೂ ಪ್ರಮುಖನಾದ ಶೆಟ್ಟಿ ಸೊರಬಣ್ಣ ನಿರ್ಮಿಸಿದರೆಂದು ತಿಳಿದು ಬರುತ್ತದೆ. ವಿಶಾಲವಾದ ಪ್ರಾಕಾರದಲ್ಲಿರುವ ಮೌನಪ್ಪನ ಗುಡಿಯು ನೆಲಮಾಳಿಗೆಯಲ್ಲಿದ್ದು, ಮೇಲೆ ಮುಸ್ಲೀಮರ ಮಜಾರ ಇದೆ. ನೆಲಮಾಳಿಗೆಯಲ್ಲಿ ಹೂಜಿ, ಚಪ್ಪಗೊಡಲಿ, ಪರಾಸು ಬಟ್ಟಲು ಹಾಗೂ ಪರುಸ ಮಣಿಗಳನ್ನಿಟ್ಟು ಪೂಜೆ ಮಾಡುತ್ತಾರೆ. ಇಲ್ಲಿ ಸೊರಬಣ್ಣನ ಗದ್ದುಗೆ, ಶಿಷ್ಯ ಗಂಗಪ್ಪಯ್ಯ ಮಂದಿರ, ಕೈಲಾಸ ಕಟ್ಟೆ, ಶಾಸನ ಕಟ್ಟೆಗಳಿದ್ದು, ಸಮೀಪದ ಚಿಕ್ಕ ಬೆಟ್ಟದ ಮೇಲೆ ಮೌನಪ್ಪಯ್ಯನ ಕಮ್ಮಟ ಶಾಲೆ ಇತ್ತೆಂದು ಸ್ಥಳೀಕರು ಹೇಳುತ್ತಾರೆ. 'ಏಕಲಾಖ್ ಅಸ್ಸಿ ಹಜಾರ ಪಾಂಚೋಪೀರ ಪೈಗಂಬರ ಮೌನುದ್ದೀನ್' ಎಂಬ ಘೋಷಣೆಯು ಈ ಸಂತನನ್ನು ಜನಪ್ರಿಯಗೊಳಿಸಿದ್ದು ಈವರೆಗೆ ಈತ ರಚಿಸಿರುವ ಸುಮಾರು ೮೦೦ಕ್ಕಿಂತ ಹೆಚ್ಚು ವಚನಗಳು ಲಭಿಸಿವೆ.

ತಿಂಥಿಣಿಯು ಮೌನೇಶ್ವರರಿಗಿಂತ ಮೊದಲಿನಿಂದಲೂ ಪ್ರಮುಖ ಸ್ಥಳವಾಗಿದ್ದು, ಅಗ್ರಹಾರವಾಗಿತ್ತೆಂದು ಅಲ್ಲೇ ಲಭಿಸಿರುವ ತಾಮ್ರ ಶಾಸನವು ಸ್ಪಷ್ಟಪಡಿಸುತ್ತದೆ. ಈ ತಾಮ್ರ ಶಾಸನವು ಕಲ್ಯಾಣದ ಚಾಳುಕ್ಯ ಅರಸ ಒಂದನೇಯ ಜಗದೇಕಮಲ್ಲನ ಕಾಲದ್ದಾಗಿದ್ದು, ೧೦೧೭ರಲ್ಲಿ ಕೃಷ್ಣಾ ನದಿಯ ಉತ್ತರ ತೀರದಲ್ಲಿದ್ದ ಎಡತೊರೆ ವಿಷಯಕ್ಕೆ ಒಳಪಟ್ಟಿದ್ದ ಸಗರ-೩೦೦ಕ್ಕೆ ಸೇರಿದ ಅಗ್ರಹಾರ 'ತಿನ್ತಣಿ ಸಿರವರ'ದಲ್ಲಿ ದುಗ್ಗಣಾರ್ಯಭಟನು ನಿರ್ಮಿಸಿದ ತ್ರೈಪುರುಷ ಶಾಲೆಯಲ್ಲಿ ಯಜುರ್ವೇದ ವ್ಯಾಸಂಗಾರ್ಥಿಗಳಾದ ೧೦೦ ಬ್ರಾಹ್ಮಣ ವಟುಗಳ ಊಟ ವಸತಿಗೆಂದು ೩೦೦ ಮತ್ತರು ಎರೆ ಭೂಮಿಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಶಾಸನೋಕ್ತ ತ್ರೈಪುರುಷಾಲಯವಿಂದು ಕಂಡು ಬರದಿದ್ದರೂ ಈಶ್ವರಪ್ಪ ಬೇವಿನಾಳ

ಅವರ ಹೊಲದಲ್ಲಿ ಹಂಸ, ಗರುಡ, ನಂದಿ ಲಾಂಛನವುಳ್ಳ ತ್ರೈಪುರುಷ ಪೀಠವೊಂದು ಅನಾಥವಾಗಿ ಬಿದ್ದಿದ್ದು ಇದೇ ಆ ಗುಡಿಯ ದೇವಪೀಠವೆಂದು ಊಹಿಸಬಹುದಾಗಿದೆ. ಇಲ್ಲಿಯ ಶಾಸನ ಕಟ್ಟೆಯಲ್ಲಿರುವ ಶಾಸನವು ಯಾದವ ಸಿಂಗಣದೇವನ ಕಾಲದ್ದಾಗಿದ್ದು, ಇದನ್ನು ಡಾ. ಎಸ್.ಕೆ. ಕೊಪ್ಪ ಗಮನಿಸಿದ್ದಾರೆ. ಉಳಿದೊಂದು ಶಾಸನ ತ್ರೈಪುರುಷ ಪೀಠದ ಮೇಲಿದ್ದು ೧೪-೧೫ನೇ ಶತಮಾನದ್ದಾಗಿದ್ದು, ಹನುಮಂತ ದೇವರಿಗೆ ಬಿಟ್ಟ ದತ್ತಿಯನ್ನು ತಿಳಿಸುತ್ತದೆ. ತಿಂಥಿಣಿಯಲ್ಲಿ ಮೌನೇಶ್ವರ ಗುಡಿಗಿಂತಲೂ ಪ್ರಾಚೀನವಾದ ಶಿವಾಲಯ, ಬಸವಣ್ಣ ಹಾಗೂ ವೀರಭದ್ರನ ಗುಡಿಗಳಿವೆ. ಕಲ್ಯಾಣದ ಚಾಳುಕ್ಯರ ಕಾಲಕ್ಕೆ ಸೇರಿದ ಶಿವಾಲಯವು ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಸುಂದರವಾಗಿದೆ. ಊರ ನಡುವೆ ಇರುವ ವೀರಭದ್ರನ ಗುಡಿ ಒಂದೇ ಸಾಲಲ್ಲಿ ಎರಡು ಗರ್ಭಗೃಹಗಳನ್ನುಳ್ಳ ದ್ವಿಕೂಟವಾಗಿದ್ದು, ಕ್ರಮವಾಗಿ ವೀರಭದ್ರ ಹಾಗೂ ಶಿವಲಿಂಗಗಳನ್ನು ಹೊಂದಿವೆ. ಗರ್ಭಗೃಹ ಹಾಗೂ ನವರಂಗಗಳ ಬಾಗಿಲವಾಡಗಳು ಅಲ್ಪಾಲಂಕಾರದಿಂದ ಕೂಡಿದ್ದು ಅಂತರಾಳದ ಬಾಗಿಲವಾಡದ ಇಕ್ಕೆಲಗಳಲ್ಲಿ ದೇವಕೋಷ್ಠಗಳಿವೆ.

ತಿಂಥಿಣಿ ಮೌನೇಶ್ವರ ಜಾತ್ರೆಯು ಐದು ದಿವಸಗಳವರೆಗೆ ನಡೆಯುತ್ತಿದ್ದು, ಭಾರತ ಹುಣ್ಣಿಮೆಯಂದು (ಫೆಬ್ರವರಿ) ಅಂತ್ಯಗೊಳ್ಳುತ್ತದೆ. ಇಲ್ಲಿಗೆ ಆಗಮಿಸುವ ಯಾತ್ರಾರ್ಥಿಗಳಿಗೆ ವಸತಿ ವ್ಯವಸ್ಥೆಯಿದ್ದು, ಜಾತ್ರೆಯಲ್ಲಿ ಸುಮಾರು ೨-೩ ಲಕ್ಷ ಜನ ಪಾಲ್ಗೊಳ್ಳುತ್ತಾರೆ. ಈ ಜಾತ್ರೆಗೆ ಹೆಚ್ಚಿನ ಸಂಖ್ಯೆಯಲ್ಲಿ ವಿಶ್ವ ಕರ್ಮರು ಮುಂಬೈ, ಕೊಲ್ಹಾಪುರ ಮುಂತಾದ ದೂರದ ಪ್ರದೇಶಗಳಿಂದ ಬರುತ್ತಾರೆ. ದೇವಸ್ಥಾನದ ಆಡಳಿತವನ್ನು ಟ್ರಸ್ಟ್ ಕಮಿಟಿಯು ನಡೆಸುತ್ತಿದ್ದು ಯಾದಗಿರಿ ಕಂದಾಯ ಉಪವಿಭಾಗಾಧಿಕಾರಿ ಇದರ ಅಧ್ಯಕ್ಷರಾಗಿರುತ್ತಾರೆ.

**ತುಮಕೂರು** (೧೯೮೧) ತಾಲೂಕು ಕೇಂದ್ರವಾದ ಶಹಾಪುರದಿಂದ ಆಗ್ನೇಯಕ್ಕೆ ೩೬ ಕಿ.ಮೀ. ದೂರದಲ್ಲಿ ಕೃಷ್ಣಾ ನದಿಯ ಎಡದಂಡೆಯ ಮೇಲಿದೆ. ಇಲ್ಲಿಂದ ಈವರೆಗೆ ಸುಮಾರು ೧೨ನೇ ಶತಮಾನಕ್ಕೆ ಸೇರಿದ ಎರಡು ಶಾಸನಗಳು ವರದಿಯಾಗಿವೆ. ಇವುಗಳಲ್ಲೊಂದು ಜಕ್ಕೇಶ್ವರ ದೇವರಿಗೆ ೬೦ ಮತ್ತರು ಭೂಮಿ ಹಾಗೂ ಎಣ್ಣೆಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸಿದರೆ, ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ ಇನ್ನೊಂದು ಶಾಸನವು ಕೇದಾರೇಶ್ವರ ದೇವರಿಗೆ ಮಹಾಮಂಡಳೇಶ್ವರನು ದಾನ ಬಿಟ್ಟ ವಿಷಯವನ್ನು ಹೇಳುತ್ತ, ಸಾಂದರ್ಭಿಕವಾಗಿ ಮಲ್ಲಿಕಾರ್ಜುನ ದೇವರ ಬಗ್ಗೆ ಪ್ರಸ್ತಾಪಿಸುತ್ತದೆ. ಈ ಎರಡೂ ಶಾಸನಗಳು ಉಲ್ಲೇಖಿಸಿರುವ ಜಕ್ಕೇಶ್ವರ, ಕೇದಾರೇಶ್ವರ ಹಾಗೂ ಮಲ್ಲಿಕಾರ್ಜುನ ದೇವಾಲಯಗಳು ಪ್ರತ್ಯೇಕ ದೇಗುಲಗಳೋ ಅಥವಾ ಇವೆಲ್ಲವೂ ಒಂದೇ ತ್ರಿಕೂಟ ದೇವಾಲಯಕ್ಕೆ ಸೇರಿದ ದೇವರುಗಳೋ ಎಂಬುದರ ಬಗ್ಗೆ ಅನುಮಾನವಿದೆ. ಊರ ನಡುವೆ ಇರುವ ರಾಮಲಿಂಗೇಶ್ವರ ದೇವಾಲಯವು ಸುಮಾರು ೧೨ನೇ ಶತಮಾನದ ತ್ರಿಕೂಟ ದೇವಾಲಯವಾಗಿದೆ. ಮೂರು ಪ್ರತ್ಯೇಕ ಗರ್ಭಗೃಹ ಹಾಗೂ ತೆರೆದ ಅಂತರಾಳಗಳನ್ನು ನಡುವೆ ಇರುವ ಒಂದೇ ನವರಂಗವು ಒಂದಾಗಿಸಿದೆ. ಗರ್ಭಗೃಹಗಳ ಬಾಗಿಲ ಚೌಕಟ್ಟುಗಳು ೩-೪ ಶಾಖೆಯ ಅಲಂಕಾರ ಪಟ್ಟಿಕೆಗಳನ್ನು ಹೊಂದಿದ್ದು ಲಲಾಟದಲ್ಲಿ ಗಜಲಕ್ಷ್ಮಿಯರಿದ್ದು ಸರಳವಾಗಿದೆ. ನವರಂಗದಲ್ಲಿ ಗಣಪತಿ, ವಿಷ್ಣು, ಭೈರವ ಹಾಗೂ ಯತಿಯ ಶಿಲ್ಪಗಳಿವೆ. ನವರಂಗದ ಮುಂಭಾಗವು ತೆರೆದಿದ್ದು ಕಕ್ಷಾಸನಗಳಿವೆ. ಹಿಂದೆ ಇದೊಂದು ತ್ರೈಪುರುಷ ದೇವಾಲಯವಾಗಿದ್ದು, ಶಿಕ್ಷಣ ನೀಡುವ ಕೇಂದ್ರವಾಗಿದ್ದಂತೆ ತೋರುತ್ತದೆ. ಉಳಿದಂತೆ ಹನುಮಂತ, ದ್ಯಾಮವ್ವ, ಮರಗಮ್ಮ ಮುಂತಾದ ನವೀನ ಗುಡಿಗಳಿದ್ದು ಮಸೀದಿ ಹಾಗೂ ಗೋಕುಲ ಸಾಬ್ ದರ್ಗಾ ಕೂಡ ಇವೆ.

**ತೆಂಗಳಿ** (೩೭೩೧)ಯು ತಾಲೂಕು ಕೇಂದ್ರವಾದ ಚಿತ್ತಾಪುರದಿಂದ ಈಶಾನ್ಯಕ್ಕೆ ಸುಮಾರು ೧೫ ಕಿ.ಮೀ. ದೂರದಲ್ಲಿ ಬೆಣ್ಣೆ ತೊರೆಯ ಎಡದಂಡೆಯ ಮೇಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಸರ್ವ ನಮಸ್ಯದಗ್ರಹಾರ ತೆಂಗುಳಿ' ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಎಪ್ಪತ್ತು ಹಳ್ಳಿಗಳ ಆಡಳಿತ ಕೇಂದ್ರವಾಗಿದ್ದು, ಇಲ್ಲಿಂದ ಈವರೆಗೆ ಏಳು ಶಾಸನಗಳು ವರದಿಯಾಗಿದ್ದು, ಇವುಗಳಲ್ಲಿ 'ಖಾಂಡವ ಮಂಡಲ' ಎಂದೇ ಈ ಪ್ರದೇಶವನ್ನು ಕರೆದಿರುವುದು ಗಮನಾರ್ಹವಾಗಿದೆ. ಇವುಗಳಲ್ಲಿ ಮಲ್ಲಿಕಾರ್ಜುನ ದೇವಾಲಯದಲ್ಲಿರುವ ೧೧೮೪ರ ಶಾಸನವು ರಾಣಿ ಮೈಲಾಲದೇವಿಯು ಮನ್ನೆ-೩೦ರಲ್ಲಿದ್ದ ಸೊನ್ನಾಲ ಹಾಗೂ ಪಟ್ಟವಾಡೆ ಗ್ರಾಮಗಳನ್ನು ಬ್ರಾಹ್ಮಣರಿಗೆ ದಾನ ಕೊಟ್ಟ ಅಂಶವನ್ನು ತಿಳಿಸಿದರೆ, ೧೧೮೭ರ ಶಾಸನವು ಐದು 'ಶೂನ್ಯ' ಗ್ರಾಮಗಳನ್ನು ಬ್ರಾಹ್ಮಣರಿಗೆ ಮತ್ತೆ ದಾನ ಬಿಟ್ಟ ಅಂಶವನ್ನು ದಾಖಲಿಸಿದೆ. ಬಹುಶಃ ಇವು ನಿರ್ಜನ್ಯ ಗ್ರಾಮಗಳಾಗಿದ್ದು, ಪುನರ್ ವಸತಿ ರೂಪಿಸುವ ಸಲುವಾಗಿ ಬ್ರಾಹ್ಮಣರನ್ನು ಮಾಧ್ಯಮವನ್ನಾಗಿಸಿ

ಕೊಂಡಿರುವಂತೆ ತೋರುತ್ತದೆ. ಅದೇ ಗುಡಿಯಲ್ಲಿರುವ ೧೧೦೬ರ ಶಾಸನವು ಆದಿತ್ಯಾ ಭಟ್ಟೋಪಾಧ್ಯಾಯ ಹಾಗೂ ಅವನ ಮದುಮಗಳಾದ ಶ್ರೀದೇವಿಯಕ್ಕ ಇಬ್ಬರೂ ಸೇರಿ ತೆಂಗುಳಿಯಲ್ಲಿ ಜಗನ್ನಾಥ ಹಾಗೂ ಕೇಶವ ದೇವರುಗಳನ್ನು ಪ್ರತಿಷ್ಠಾಪಿಸಿ, ದೇವರ ಸೇವೆಗೆಂದು ಬೀರ ವೆಡಂಗನ ಕೋಲಲ್ಲಿ ಎರಡೂವರೆ ಮತ್ತರು ಭೂಮಿಯನ್ನು ದಾನ ಕೊಟ್ಟ ಸಂದರ್ಭದಲ್ಲಿ ಅವರ ಇಬ್ಬರೂ ಮಕ್ಕಳು ಹಾಗೂ ಸೊಸೆಯಂದಿರೂ ಈ ದೇವರುಗಳಿಗೆ ಭೂದಾನ ಬಿಟ್ಟ ಅಂಶ ಗೊತ್ತಾಗುತ್ತದೆ. ಇಲ್ಲಿಯ ಈಶ್ವರ ದೇವಾಲಯದಲ್ಲಿರುವ ೧೧೬೨ರ ಶಾಸನವು ಮಹಾಮಂಡಳೇಶ್ವರ ಬಾಣವಂಶದ ವೀರ ಗೊಂಕರಸನ ದಂಡನಾಯಕನಾದ ತೆಂಗುಳಿಯ ಪ್ರಭು ಚಂದಿಮರಸನು ಚಂದೇಶ್ವರ, ಭೋಗೇಶ್ವರ, ಸಂಕೇಶ್ವರ, ಕೇಶವ ಹಾಗೂ ಜಲಶಯನ ದೇವರುಗಳ ಪೂಜಾ ವಿಧಿಗೆಂದು, ಅಲ್ಲಿದ್ದ ಶಾಲೆಯ ಉಪಾಧ್ಯಾಯರುಗಳಿಗೆಂದು ಭೂಮಿ ಹಾಗೂ ತೋಟಗಳನ್ನು ದಾನ ಬಿಟ್ಟ ಅಂಶವನ್ನು ತಿಳಿಸುತ್ತವೆ. ಪಾಂಡುರಂಗನ ಗುಡಿಯಲ್ಲಿ ಇರುವ ಇದೇ ವರ್ಷದಲ್ಲಿ ನೀಡಲ್ಪಟ್ಟಿರುವ ಇನ್ನೊಂದು ಶಾಸನದಿಂದ ನೂರ್ಮಡಿ ತೈಲನ ಆಳ್ವಿಕೆಯಲ್ಲಿ ತೆಂಗುಳಿಯ ಪ್ರಭು ನಾಚರಸನು ಭೋಗೇಶ್ವರ ಹಾಗೂ ನಾಚೇಶ್ವರ ದೇವರುಗಳ ಪೂಜಾವಿಧಿಗೆಂದು ೬ ಮತ್ತರು ತೋಟ, ಎರಡು ನಿವೇಶನ ಹಾಗೂ ಎರಡು ಗಾಣಗಳನ್ನು ದಾನ ಬಿಟ್ಟ ವಿಷಯ ಗೊತ್ತಾಗುತ್ತದೆ. ಪಾಂಡುರಂಗ ದೇವಾಲಯದಲ್ಲಿರುವ ಜಿನಬಿಂಬದ ಹಿಂಬದಿಯಲ್ಲಿ ಬರೆದಿರುವ ಸುಮಾರು ೧೨ನೇ ಶತಮಾನಕ್ಕೆ ಸೇರಿದ ಜೈನ ಶಾಸನದಿಂದ ಯಾಪನೀಯ ಸಂಘದ ವಂದಿಯೂರು ಗಣಕ್ಕೆ ಸೇರಿದ ನಾಗವೀರ ಸಿದ್ಧಾಂತ ದೇವರ ಶಿಷ್ಯ ಬಮ್ಮದೇವನು ಈ ಪ್ರತಿಮೆಯನ್ನು ಮಾಡಿಸಿದ ಅಂಶ ವೇದ್ಯವಾಗುತ್ತದೆ. ಇಲ್ಲಿಯ ಈಶ್ವರ ದೇವಾಲಯದಲ್ಲಿರುವ ಸುಮಾರು ೧೨ನೇ ಶತಮಾನಕ್ಕೆ ಸೇರಿದ ಇನ್ನೊಂದು ದಾನ ಶಾಸನ ಭಾಗಶಃ ಹಾಳಾಗಿದ್ದರೂ, ಸಾಂದರ್ಭಿಕವಾಗಿ ಗವರೇಶ್ವರ ಹಾಗೂ ಆಮ್ರನಾಥ ದೇವರುಗಳ ಬಗ್ಗೆ ಹೇಳುತ್ತದೆ. ಜೊತೆಗೆ ನೆರೆಯ ಜಂಬುಗೆ, ಕೋರವಾರ ಹಾಗೂ 'ದಂಡಹತ್ತಿ' ಗ್ರಾಮಗಳನ್ನೂ ದಾಖಲಿಸಿದೆ. ಮೇಲಿನ ಶಾಸನಗಳಿಂದ ಹಿಂದೆ ಇಲ್ಲಿ ಜಗನ್ನಾಥ, ಕೇಶವ, ಚಂದೇಶ್ವರ, ಭೋಗೇಶ್ವರ, ಸಂಕೇಶ್ವರ, ಜಲಶಯನ, ಗವರೇಶ್ವರ, ಆಮ್ರನಾಥ ಹಾಗೂ ಜೈನ ದೇವಾಲಯಗಳಿದ್ದ ಅಂಶ ಸ್ಪಷ್ಟವಾಗುತ್ತದೆ. ಇದಕ್ಕೆ ಪೂರಕವಾಗಿ ಊರಲ್ಲಿಂದು ಪಂಚಲಿಂಗೇಶ್ವರ, ಮಲ್ಲಿಕಾರ್ಜುನ, ಪಾಂಡುರಂಗ, ಕರಿಮಸೀದಿ ಎಂದೇಳುವ ನಾಲ್ಕು ಪ್ರಾಚೀನ ದೇಗುಲಗಳಿವೆ. ಪಂಚಲಿಂಗೇಶ್ವರವು ಪೂರ್ವಾಭಿಮುಖವಾಗಿ ಮೂರು ಗರ್ಭಗೃಹ ಹಾಗೂ ಅಂತರಾಳಗಳನ್ನು ಒಂದೇ ಸಾಲಿನಲ್ಲಿ ಹೊಂದಿದ್ದು, ಇವುಗಳಿಗೆಲ್ಲ ಒಂದೇ ನವರಂಗವಿದ್ದು, ಉತ್ತರ-ದಕ್ಷಿಣಗಳಲ್ಲೂ ಗರ್ಭಗೃಹಗಳಿವೆ. ೧೧೬೨ರ ಶಾಸನ ಹೇಳುವ ಪಂಚಲಿಂಗೇಶ್ವರ ಇದೇ ಆಗಿದ್ದು, ಆಕರ್ಷಕವಾಗಿದೆ. ಮಲ್ಲಿಕಾರ್ಜುನ ಹಾಗೂ ಪಾಂಡುರಂಗ ದೇವಾಲಯಗಳು ಏಕಕೂಟಗಳಿದ್ದು, ಗರ್ಭಗೃಹ ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿವೆ. ಮೂಲತಃ ಇವು ಕ್ರಮವಾಗಿ ವೈಷ್ಣವ ಹಾಗೂ ಜೈನ ದೇವಾಲಯಗಳಾಗಿದ್ದು ನಂತರದಲ್ಲಿ ಮಾರ್ಪಟ್ಟಿವೆ. ಕರಿಮಸೀದಿಯ ನವರಂಗ, ಮುಖಮಂಟಪಗಳಷ್ಟೇ ಉಳಿದಿದ್ದು ಆಕರ್ಷಕವಾಗಿದೆ. ಉಳಿದಂತೆ ಊರಲ್ಲಿ ಕಾಳಿಕಾ, ನಾರಾಯಣ, ವೀರಭದ್ರ, ಬೀರಲಿಂಗ, ಹನುಮಂತ, ಲಕ್ಷ್ಮೀ, ದ್ಯಾವಮ್ಮ ಅಂಬಿಗರ ಚೌಡಯ್ಯ, ಬಸವಣ್ಣ, ಪಾಲ್ಕಮ್ಮ ಮರಗಮ್ಮಮುಂತಾದ ನವೀನ ಗುಡಿಗಳಿದ್ದು, ಜುಮ್ಮಾಮಸೀದಿ ಹಾಗೂ ಶಾ ಹುಸೇನಿ ದರ್ಗಾ ಕೂಡ ಇವೆ. ಔರಂಗಜೇಬನು ಇಲ್ಲಿ ಮಸೀದಿಯನ್ನು ಕಟ್ಟಿಸಿದ್ದನೆಂದು ತಿಳಿದು ಬರುತ್ತದೆ.

**ದಂಡಗುಂಡ** (೧೩೨೧)ವು ತಾಲೂಕು ಕೇಂದ್ರವಾದ ಚಿತ್ತಾಪುರದಿಂದ ಆಗ್ನೇಯಕ್ಕೆ ೨೪ ಕಿ.ಮೀ. ದೂರದಲ್ಲಿರುವ ಧಾರ್ಮಿಕ ಮಹತ್ವದ ಸ್ಥಳವಾಗಿದೆ. ಇಲ್ಲಿಯ ಬಸವೇಶ್ವರ ಗುಡಿಯು ಪ್ರಸಿದ್ಧವಾಗಿದ್ದು ವರ್ಷಕ್ಕೊಮ್ಮೆ ಜಾತ್ರೆಯಾಗುತ್ತದೆ.

**ದಂಡೋತಿ** (೫೨೯೯)ಯು ತಾಲೂಕು ಕೇಂದ್ರವಾದ ಚಿತ್ತಾಪುರದಿಂದ ವಾಯವ್ಯಕ್ಕೆ ೧೨ ಕಿ. ಮಿ., ದೂರದಲ್ಲಿದೆ. ನೆರೆಯ ತೆಂಗಳಿಯ ೧೨ನೇ ಶತಮಾನದ ಶಾಸನದಲ್ಲಿ 'ದಂಡಹತ್ತಿ' ಎಂದೇ ಉಲ್ಲೇಖಿತಗೊಂಡಿರುವ ಈ ಊರಲ್ಲಿರುವ ಪ್ರಾಚೀನ ಜೈನ ಬಸದಿಯಿಂದಾಗಿ ಇದು ಮಹತ್ವ ಪಡೆದಿದೆ. ಪೂರ್ವಾಭಿಮುಖವಾಗಿರುವ ಈ ಬಸದಿಯು ತ್ರಿಕೂಟವಾಗಿದ್ದು, ಪ್ರಧಾನ ಗರ್ಭಗೃಹಕಷ್ಟೇ ಅಂತರಾಳವಿದೆ. ಗರ್ಭಗೃಹದಲ್ಲಿ ಸ್ಥಾನಕ ಭಂಗಿಯಲ್ಲಿರುವ ಆಳೆತ್ತರದ ಪಾರ್ಶ್ವನಾಥನ ಭವ್ಯ ಶಿಲ್ಪವಿದ್ದು, ನವರಂಗದಲ್ಲಿ ತ್ರಿದಳ ಕಮಲದ ಛತ್ತಿದ್ದು ಭಾಗಶಃ ಹಾಳಾಗಿದೆ. ಉಳಿದಂತೆ ಊರಲ್ಲಿ ಶರಣಬಸವೇಶ್ವರ, ಬಲಭೀಮೇಶ್ವರ, ಹಳ್ಳಬಸವೇಶ್ವರ, ಹನುಮಂತ, ದೇವಡಿ, ದುರ್ಗಮ್ಮ, ಮರಗಮ್ಮ ಮುಂತಾದ ನವೀನ ಗುಡಿಗಳಿದ್ದು, ಹೈದರ್ ಜಾಡ್‌ಕಂಡ್ ಸಾಬ್ ದರ್ಗಾ ಕೂಡ ಇದೆ.

**ದಿಗ್ಗಾಂವಿ** (೩೬೯೪)ಯು ತಾಲೂಕು ಕೇಂದ್ರವಾದ ಚಿತ್ತಾಪುರದಿಂದ ಆಗ್ನೇಯಕ್ಕೆ ೧೦ ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ದೀರ್ಗ್ಘವಿಗೆ', 'ಅಗ್ರಹಾರ ದೀರ್ಗ್ಘವಿಗೆ', 'ದೀಗ್ಘವಿಗೆ' ಎಂದೆಲ್ಲಾ ಉಲ್ಲೇಖಿತಗೊಂಡಿರುವ ಇದು ಹಿಂದೆ ೩೦೦ ಮಹಾಜನರನ್ನು ಒಳಗೊಂಡಿದ್ದ ಅಗ್ರಹಾರವಾಗಿದ್ದು, ಇಲ್ಲಿಂದ ಈವರೆಗೆ ನಾಲ್ಕು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಅಗಸಿ ಬಳಿ ಇರುವ ಶಾಸನವು ಕಲ್ಯಾಣದ ಚಾಳುಕ್ಯ ಅರಸ ಒಂದನೇಯ ಸೋಮೇಶ್ವರನ ಕಾಲದ್ದಾಗಿದ್ದು, ಮಹಾಮಂಡಳೇಶ್ವರ ಬಮ್ಮಯ್ಯರಸ ಹಾಗೂ ಇತರರು ಸ್ವಯಂಭು ಸೋಮೇಶ್ವರ ದೇವರ ಪೂಜಾ ವಿಧಿಗೆಂದು ೧೦೫೩ರಲ್ಲಿ ೩೦೦ ಮತ್ತರು ಹೊಲ, ಆರು ಮತ್ತರು ತೋಟ, ಆರು ಮನೆ ನಿವೇಶನ ಹಾಗೂ ಎರಡು ಗಾಣಗಳನ್ನು ದಾನ ಕೊಟ್ಟ ಅಂಶವನ್ನು ತಿಳಿಸುತ್ತದೆ. ಜೊತೆಗೆ ನೆರೆಯ ಇಟ್ಟಿಗೆ ಗ್ರಾಮವನ್ನೂ ಕೂಡ ದೇವರಿಗೆ ಸರ್ವ ನಮಸ್ಯವಾಗಿ ಬಿಟ್ಟರೆಂದು ತಿಳಿಸುತ್ತದೆ. ಸೋಮೇಶ್ವರ ದೇವಾಲಯದಲ್ಲಿರುವ ಶಾಸನದಿಂದ ದಂಡನಾಯಕ ರನ್ನಪ್ಪಯ್ಯನು ತ್ರಿಭುವನಮಲ್ಲನಿಂದ ಅಗ್ರಹಾರ ದೀರ್ಗ್ಘವಿಗೆಯನ್ನು ಈಶ್ವರ ದತ್ತಿಯಾಗಿ ಪಡೆದು ಅದನ್ನು ಅಗ್ರಹಾರದ ೩೦೦ ಮಹಾಜನರಿಗೆ ಸರ್ವನಮಸ್ಯವಾಗಿ ದಾನ ಕೊಟ್ಟ ವಿಷಯ ಗೊತ್ತಾಗುತ್ತದೆ. ಆ ಸಂದರ್ಭದಲ್ಲಿ ಮಹಾಮಂಡಳೇಶ್ವರರಾದ ಚಂದಿಬ್ಬರಸ ಹಾಗೂ ಲೋಕರಸರು ಇದೇ ದೇವರಿಗೆ ಭೂಮಿಯನ್ನು ದಾನ ಬಿಟ್ಟ ಅಂಶವನ್ನೂ ಈ ಶಾಸನ ದಾಖಲಿಸಿದೆ. ಇಲ್ಲಿಯ ಶಂಭುಲಿಂಗ ದೇವಾಲಯದಲ್ಲಿರುವ ಶಾಸನವು ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ರಾಣಿ ಮಲೆಯಮತಿ ದೇವಿಯು ಅಗ್ರಹಾರ ದಿಗ್ಘವಿಗೆಯ ಮೇಲಾಳಿಕೆಯನ್ನು ನಡೆಸುತ್ತಿದ್ದಾಗ, ಅವಳ ಸೂಚನೆಯಂತೆ ಮಹಾಮಂಡಳೇಶ್ವರ ಲೋಕರಸನು ಸ್ವಯಂಭು ಸೋಮೇಶ್ವರ ದೇವಾಲಯಕ್ಕೆ ಸೇರಿದ ಗಂಗೀತಿರ್ಥದ ಬಳಿಯಲ್ಲಿ ದಾವಣ ಭಟ್ಟರು ನಿರ್ಮಿಸಿದ ಚಿಕ್ಕ ಸಂಜೆಮಠದ ಜನಾರ್ಧನ ದೇವರ ಜವಾಬ್ದಾರಿಯನ್ನು ಮಹಾಜನರಿಗೆ ಒಪ್ಪಿಸಿ, ಅದರ ಪೂಜಾ ವಿಧಿಗೆಂದು ೪೦ ಮತ್ತರು ಹೊಲ, ಹೂತೋಟ ಹಾಗೂ ನಿವೇಶನಗಳನ್ನು ದಾನ ಬಿಟ್ಟ ಸಂದರ್ಭದಲ್ಲಿ, ನೆರೆಯ ಅಗ್ರಹಾರ ನಾಗವಾಪಿಯ ೪೦೦ ಮಹಾಜನರೂ ಕೂಡ ಈ ದೇವರ ಸೇವೆಗೆಂದು ಗದ್ದೆಯನ್ನು ದಾನ ಬಿಟ್ಟ ಅಂಶ ಗೊತ್ತಾಗುತ್ತದೆ. ಮೇಲಾಗಿ ಸಾಂದರ್ಭಿಕವಾಗಿ ತ್ರಿಭುವನ ನಾರಾಯಣ ದೇವರ ಬಗೆಗೂ ಉಲ್ಲೇಖಿಸುತ್ತದೆ. ಇಲ್ಲಿಯ ಶಂಭುಲಿಂಗ ದೇವಾಲಯದ ಆವರಣದಲ್ಲಿರುವ ರಾಮಲಿಂಗ ಗುಡಿಯ ಗೋಡೆಯ ಮೇಲೆ ಇರುವ ೧೪ನೇ ಶ.ದ ಶಾಸನವು ಶ್ರೀ ಮಂಗರಸ ಎಂಬ ಉಲ್ಲೇಖವನ್ನು ಹೊಂದಿದ್ದು, ಬಹುಶಃ ಈ ದೇವಾಲಯದ ಜೀರ್ಣೋದ್ಧಾರವನ್ನು ದಾಖಲಿಸಿರುವಂತೆ ತೋರುತ್ತದೆ. ಮೇಲಿನ ಶಾಸನಗಳಿಂದ ಹಿಂದೆ ದಿಗ್ಗಾಂವಿಯಲ್ಲಿ, ಸ್ವಯಂಭು ಸೋಮೇಶ್ವರ, ತ್ರಿಭುವನ ನಾರಾಯಣ, ಜನಾರ್ಧನ ದೇವಾಲಯಗಳು ಹಾಗೂ ಚಿಕ್ಕ ಸಂಜೆ ಮಠವಿದ್ದ ಅಂಶ ತಿಳಿಯುತ್ತದೆ. ಇಂದಿನ ಶಂಭುಲಿಂಗ ಗುಡಿಯೇ ಶಾಸನೋಕ್ತ ಸ್ವಯಂಭು ಸೋಮೇಶ್ವರ ದೇವಾಲಯವಾಗಿದೆ. ಇದರೊಂದಿಗೆ ಇಲ್ಲಿ ಪ್ರಾಚೀನವಾದ ರಾಮಲಿಂಗ ಹಾಗೂ ಸೋಮೇಶ್ವರ ದೇವಾಲಯಗಳೂ ಕೂಡ ಇಂದು ಜೀರ್ಣಾವಸ್ಥೆಯಲ್ಲಿ ನಿಂತಿವೆ. ಇವುಗಳಲ್ಲಿ ಊರ ಪೂರ್ವಕ್ಕೆ ಇರುವ ಶಂಭುಲಿಂಗದೇವರ ದೇವಾಲಯ ಸಂಕೀರ್ಣವು ಬೃಹತ್ತಾಗಿದ್ದು, ಇಲ್ಲಿ ಒಟ್ಟು ಹತ್ತು ದೇವಾಲಯಗಳಿವೆ. ಇವುಗಳಲ್ಲಿ ಪ್ರಧಾನವಾಗಿರುವ ಸ್ವಯಂಭು ಸೋಮೇಶ್ವರ ದೇವಾಲಯವೂ ಸೇರಿದಂತೆ ಮೂರು ಗುಡಿಗಳು ಪೂರ್ವಾಭಿಮುಖವಾಗಿದ್ದು ಉಳಿದ ಆರು ತಲಾ ಎರಡೆರಡರಂತೆ ಪಶ್ಚಿಮ, ಉತ್ತರ ಹಾಗೂ ದಕ್ಷಿಣಾಭಿಮುಖವಾಗಿದ್ದು, ಇತ್ತೀಚೆಗೆ ಕಾಳಿಕಾ ಗುಡಿಯನ್ನು ಇದೇ ಆವರಣದಲ್ಲಿ ನಿರ್ಮಿಸಲಾಗಿದೆ. ಇವುಗಳಲ್ಲಿ ಏಳು ಗುಡಿಗಳು ಕೇವಲ ಗರ್ಭಗೃಹ ಹಾಗೂ ಅರ್ಧಮಂಟಪಗಳನ್ನಷ್ಟೇ ಹೊಂದಿದ್ದು, ಕೆಲವು ಅರ್ಧಮಂಟಪಗಳಿಗೆ ದೇವಗೂಡುಗಳಿವೆ. ಇವೆಲ್ಲವೂ ಶಿವಾಲಯಗಳಾಗಿದ್ದು, ಒಂದು ಮಾತ್ರ ಸೂರ್ಯ ದೇವಾಲಯವಾಗಿದ್ದಂತೆ ತೋರುತ್ತದೆ. ಇವುಗಳಲ್ಲಿ ಕೆಲವದರಲ್ಲಿ ಬಲಹರಿ ಶಿವಲಿಂಗಗಳಿದ್ದು, ಇಲ್ಲಿರುವ ಸೂರ್ಯ, ಹರಿಹರ, ಉಗ್ರನರಸಿಂಹ ಶಿಲ್ಪಗಳು ಸುಂದರವಾಗಿದ್ದು, ಮುಖಮಂಟಪದ ಛಾವಣಿಗಳು ಚಿತ್ತಾಕರ್ಷಕವಾಗಿವೆ. ಈ ಗುಡಿಗಳಿಗೆ ಕದಂಬ ನಾಗರ ಶಿಖರಗಳಿವೆ. ಈ ಸಂಕೀರ್ಣದ ಕೇಂದ್ರ ಬಿಂದುವಾದ ಸ್ವಯಂಭು ಸೋಮೇಶ್ವರ ಗುಡಿಯು ದೊಡ್ಡದಾಗಿದ್ದು, ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ಎತ್ತರವಾದ ಜಗಲಿಯ ಮೇಲೆ ನಿಂತಿರುವ ಈ ದೇವಾಲಯವನ್ನು ನವರಂಗದಿಂದ ಪ್ರವೇಶಿಸಲು ಮೂರು ದಿಕ್ಕಲ್ಲೂ ದ್ವಾರಗಳಿದ್ದು, ಇವುಗಳ ಬಾಗಿಲವಾಡಗಳು ಸುಂದರವಾಗಿವೆ. ನವರಂಗದ ನಡುವಣ ಛತ್ತನ್ನು ಬೃಹತ್ತಾದ ಅರಳಿದ ಕಮಲದಿಂದ ಅಲಂಕರಿಸಲಾಗಿದ್ದು, ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದಕ್ಕೂ ಕದಂಬ ನಾಗರ ಶಿಖರವಿದೆ. ಇದೇ ಸಂಕೀರ್ಣದಲ್ಲಿ ಉತ್ತರಾಭಿಮುಖವಾಗಿ ನಿಂತಿರುವ ತ್ರಿಕೂಟವೇ ಶಾಸನೋಕ್ತ ತ್ರಿಭುವನ ನಾರಾಯಣ ದೇಗುಲವಾಗಿದ್ದು,

ಮೂರು ಗರ್ಭಗೃಹ ಹಾಗೂಅಂತರಾಳಗಳನ್ನು ನಡುವೆ ಇರುವ ನವರಂಗದಿಂದ ಒಗ್ಗೂಡಿಸಲಾಗಿದೆ. ಪ್ರಧಾನ ಗರ್ಭಗೃಹದಲ್ಲಿ ಕಾರ್ತಿಕೇಯನ ಶಿಲ್ಪವಿದ್ದು, ಉಳಿದೆರಡರಲ್ಲಿ ಶಿವಲಿಂಗಗಳಿವೆ. ಇವುಗಳ ಬಾಗಿಲವಾಡಗಳು, ನಾಲ್ಕು ಅಲಂಕಾರ ಶಾಖೆಗಳನ್ನು ಹೊಂದಿದ್ದು, ನವರಂಗದ ಛತ್ತನ್ನು ನಕ್ಷತ್ರಾವೃತ್ತ ಕಮಲದಿಂದ ಅಲಂಕರಿಸಲಾಗಿದ್ದು, ನಡುವೆ ನಟರಾಜನ ಕಿರು ಕೆತ್ತನೆಯೂ ಇದೆ. ಒಟ್ಟಾರೆ ಈ ಸಂಕೀರ್ಣವು ಆಕರ್ಷಕವಾಗಿದ್ದು, ಬಳಿಯಲ್ಲೇ ಅರವತ್ತು ಲಿಂಗದ ಬಾವಿ ಇದೆ. ಈ ದೇವರ ಜಾತ್ರೆಯು ಧವನದ ಹುಣ್ಣಿಮೆಯಾದ ಹತ್ತನೆಯ ದಿನದಂದು ಜರುಗುತ್ತಿದ್ದು, ಅಂದು ರಥೋತ್ಸವವಿರುತ್ತದೆ.

ಊರೊಳಗೆ ಪೋಲೀಸ್ ಪಾಟೀಲರ ಮನೆಯ ಬಳಿ ಸುಮಾರು ೧೨ನೇ ಶತಮಾನಕ್ಕೆ ಸೇರಿದ ಶಾಂತಲಿಂಗೇಶ್ವರ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಇದು ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲವಾಡವು ಪಂಚಶಾಖಾಲಂಕೃತವಾಗಿದೆ. ಇದರ ಬಳಿ ಇರುವ ಪುಷ್ಕರಣಿ ಬಳಿ ಸುಂದರವಾದ ಗಣಪತಿ ಶಿಲ್ಪವಿದೆ. ಇಲ್ಲಿಯ ಕಾಮಲಿಂಗೇಶ್ವರ ಗುಡಿಯೂ ಪ್ರಾಚೀನದ್ದಾಗಿದ್ದು, ಇಂದು ಗರ್ಭಗೃಹ ಅಂತರಾಳಗಳಷ್ಟೇ ಉಳಿದಿದ್ದು, ಸಪ್ತಮಾತೃಕಾ ಶಿಲ್ಪವಿದೆ. ಬಳಿಯಲ್ಲೇ ಭಾವಿಯೂ ಇದೆ. ಇಲ್ಲಿಯ ಅನಂತಶಯನ ಗುಡಿ ಇನ್ನೊಂದು ಪ್ರಾಚೀನ ದೇಗುಲವಾಗಿದ್ದು, ಗರ್ಭಗೃಹ ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ಪೂರ್ವಾಭಿಮುಖವಾಗಿರುವ ಈ ಗುಡಿಯ ಗರ್ಭಗೃಹದಲ್ಲಿ ಅನಂತ ಪದ್ಮನಾಭನ ಸುಂದರ ಶಿಲ್ಪವಿದ್ದು, ಇದರ ಬಾಗಿಲವಾಡವು ನಾಲ್ಕು ಅಲಂಕಾರಿಕ ಶಾಖೆಗಳನ್ನು ಒಳಗೊಂಡಿದೆ. ನವರಂಗವನ್ನು ಪ್ರವೇಶಿಸಲು ಮೂರು ಬಾಗಿಲುಗಳಿದ್ದು ಎಲ್ಲವೂ ಅಲಂಕಾರಿಕ ಬಾಗಿಲವಾಡಗಳನ್ನು ಹೊಂದಿವೆ. ಬಹುಕೋನಾಕಾರದ ತಳವಿನ್ಯಾಸದ ಅಧಿಷ್ಠಾನದ ಮೇಲೆ ನಿಂತಿರುವ ಈ ಗುಡಿಯು ಜೀರ್ಣೋದ್ಧಾರಗೊಂಡಿದ್ದರೂ ಮೂಲ ರೂಪ ಉಳಿದುಕೊಂಡಿದೆ. ಇದರ ಬಳಿಯಲ್ಲೇ ಇಟಗಿ ಬಾವಿ ಗುಡಿ ಇದೆ. ಊರ ಹೊರಗೆ ನಿಂಗಪ್ಪ ಪೂಜಾರಿಯವರ ಹೊಲದಲ್ಲಿರುವ ದೇಗುಲವು ಗರ್ಭಗೃಹ, ತೆರೆದ ಅಂತರಾಳ ಹಾಗೂ ತೆರೆದ ನವರಂಗಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಬಲಹರಿ ಶಿವಲಿಂಗವಿದ್ದು, ಸುಂದರವಾದ ಕದಂಬ ನಾಗರ ಶಿಖರವಿದೆ. ಬಜಾರಿನಲ್ಲಿ ನಿಜಗುಣ ಮಠಪತಿ ಅವರ ಮನೆ ಆವರಣದಲ್ಲಿರುವ ಕೋರಿ ಸಿದ್ದೇಶ್ವರ ಗುಡಿ ಪುರಾತನದ್ದಾಗಿದ್ದು ಇಲ್ಲಿ ಕೇಶವನ ಶಿಲ್ಪವಿದೆ. ಊರ ನಡುವೆ ಇರುವ ಮಲ್ಲಿಕಾರ್ಜುನ ಗುಡಿ ಆವರಣದಲ್ಲಿ ಸೂರ್ಯ, ಭೈರವ ಹಾಗೂ ವೀರಗಲ್ಲುಗಳಿದ್ದು, ಗರ್ಭಗೃಹದಲ್ಲಿ ಪ್ರಾಚೀನ ಲಿಂಗವಿದೆ. ಊರ ಹೊರಗೆ ಲೋಕಲಿಂಗೇಶ್ವರ ಗುಡಿ ಇದೆ. ಉಳಿದಂತೆ ಊರಲ್ಲಿ ವೀರಭದ್ರ, ಹನುಮಂತ, ದ್ಯಾಮಮ್ಮ, ಪೋಚಮ್ಮ, ಮರಗಮ್ಮ ಮುಂತಾದ ನವೀನ ಗುಡಿಗಳಿವೆ. ಜೊತೆಗೆ ಜುಮ್ಮಾ ಮಸೀದಿ, ಮೆಹಬೂಬು ಸುಬಾನಿ ಹಾಗೂ ತಿರುಕಸಾಹೇಬ್ ದರ್ಗಾಗಳೂ ಇವೆ.

**ದೇಗಲಮಡಿ** (೩೧೪೬)ಯು ತಾಲೂಕು ಕೇಂದ್ರವಾದ ಚಿಂಚೋಳಿಯಿಂದ ವಾಯವ್ಯಕ್ಕೆ ಐದು ಕಿ.ಮೀ. ದೂರದಲ್ಲಿದೆ. ಇಲ್ಲಿಂದ ಈವರೆಗೆ ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ ೧೧೦೦ರ ಶಾಸನವು ವರದಿಯಾಗಿದೆ. ಅರಸನ ಮಹಾದಂಡನಾಯಕನಾದ ಬಮ್ಮನಾಯಕನು ಇಲ್ಲಿ ದೇವಾಲಯ ನಿರ್ಮಿಸಿ ದೇವರ್ಗೆ ಮತ್ತು ತಪೋಧನರಿಗೆಂದು ಭೂದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಇಂದು ಇಲ್ಲಿ ಊರ ನಡುವೆ ತ್ರಿಕೂಟ ದೇವಾಲಯವಿದ್ದು, ಅದನ್ನು ಸ್ಥಳೀಕರು ಸಂಗಮೇಶ್ವರ ದೇಗುಲವೆಂದು ರೂಢಿಯಲ್ಲಿ ಕರೆಯುತ್ತಾರೆ. ಮೂರು ಪ್ರತ್ಯೇಕ ಗರ್ಭಗೃಹ ಹಾಗೂ ಅಂತರಾಳಗಳನ್ನು ಒಂದೇ ನವರಂಗದಿಂದ ಒಂದಾಗಿಸಿರುವ ಈ ಗುಡಿಯ ಬಲಭಾಗದ ಗರ್ಭಗೃಹ, ಅಂತರಾಳಗಳು ಶಿಥಿಲವಾಗಿರುವುದರಿಂದ ಆ ಭಾಗವನ್ನು ಮುಚ್ಚಲಾಗಿದೆ. ಗರ್ಭಗೃಹಗಳಲ್ಲಿ ಶಿವಲಿಂಗಗಳಿದ್ದು ಬಾಗಿಲವಾಡಗಳು ಪಂಚ ಶಾಖಾಲಂಕೃತವಾಗಿದ್ದು, ಲಲಾಟಗಳಲ್ಲಿ ಗಜಲಕ್ಷ್ಮಿಯರಿದ್ದಾರೆ. ನವರಂಗದಲ್ಲಿ ನಾಲ್ಕು ದೇವಕೋಷ್ಠಗಳಿದ್ದು ಅವುಗಳಲ್ಲಿ ಸಪ್ತ ಮಾತೃಕಾ, ಮಹಿಷಮರ್ದಿನಿ ಹಾಗೂ ಬ್ರಹ್ಮನ ಶಿಲ್ಪಗಳಿವೆ. ನವರಂಗದ ಕಂಬಗಳು ಅಂದವಿದ್ದು ನಡುವಣ ಛತ್ತು ಕಮಲಮಯವಾಗಿದೆ. ಬಹುಕೋನಾಕಾರದ ತಳವಿನ್ಯಾಸವನ್ನುಳ್ಳ ಗರ್ಭಗೃಹದ ಭಿತ್ತಿ ನಿರಾಡಂಬರವಾಗಿದ್ದು ಅಧಿಷ್ಠಾನವು ಅಲಂಕಾರಿಕ ಕೆತ್ತನೆಯನ್ನು ಹೊಂದಿದೆ. ಇದರ ಮುಂಭಾಗದಲ್ಲೇ ಜೈನ ಬಸದಿ ಇದೆ. ಗರ್ಭಗೃಹ, ನವರಂಗ ಹಾಗೂ ಮುಖ ಮಂಟಪಗಳನ್ನುಳ್ಳ ಈ ಗುಡಿಯು ಜೀರ್ಣೋದ್ಧಾರಗೊಂಡಿದ್ದು, ಹಿಂದೆ ನೇಮಿನಾಥ ತೀರ್ಥಂಕರನ ಬಸದಿಯಾಗಿದ್ದಿರಬೇಕೆಂದು ತೋರುತ್ತದೆ. ಇಂದು ಇಲ್ಲಿ ಪಾರ್ಶ್ವನಾಥ, ಪದ್ಮಾವತಿಯರ ಶಿಲ್ಪಗಳಿದ್ದು ಕಂಚು ಮತ್ತು ಹಿತ್ತಾಳೆಯ ಜಿನ ಬಿಂಬಗಳೂ ಇವೆ. ಉಳಿದಂತೆ ಊರಲ್ಲಿ ಮಲ್ಲಿಕಾರ್ಜುನ, ವೀರಭದ್ರ, ಬಸವಣ್ಣ, ಬೀರಗೊಂಡ, ಮಲ್ಲಯ್ಯ, ಹನುಮಂತ, ಗ್ರಾಮದೇವತೆ ಹಾಗೂ ಮರಗಮ್ಮ ಮುಂತಾದ ನವೀನ ಗುಡಿಗಳಿದ್ದು, ಮಸೀದಿ ಹಾಗೂ

ದರ್ಗಾ ಕೂಡ ಇವೆ. ಇಂದು ಈ ಊರು ವಿಳೆಯದೆಲೆಯಿಂದಾಗಿ ಪ್ರಸಿದ್ಧವಾಗಿದೆ. ಇಲ್ಲಿಂದ ವೀಳೆಯದೆಲೆಯು ಮಹಾರಾಷ್ಟ್ರ, ಆಂಧ್ರ ಪ್ರದೇಶ ಹಾಗೂ ಉತ್ತರ ಭಾರತಗಳಿಗೂ ರಫ್ತಾಗುತ್ತದೆ.

**ದೇವಪುರ** (೩೧೪೨)ವು ತಾಲೂಕು ಕೇಂದ್ರವಾದ ಸುರಪುರದಿಂದ ದಕ್ಷಿಣಕ್ಕೆ ೧೨ ಕಿ.ಮೀ. ದೂರದಲ್ಲಿ ಲಿಂಗಸುಗೂರು-ಸುರಪುರ ರಸ್ತೆಯಲ್ಲಿದ್ದು, ಡಾ. ಪದ್ದಯ್ಯನವರು ಇಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ವಸತಿ ನೆಲೆಯನ್ನು ಗುರುತಿಸಿದ್ದಾರೆ. ೧೨ನೇ ಶತಮಾನದ ಶಿಲಾ ಶಾಸನಗಳಲ್ಲಿ 'ದೇವಾಪುರ' ಎಂದೇ ಉಲ್ಲೇಖಿತಗೊಂಡಿರುವ ಈ ಊರಿನಿಂದ ಈವರೆಗೆ ಮೂರು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಮಸೀದಿಯ ಗೋಡೆಗೆ ಸೇರಿರುವ ತ್ರುಟಿತ ಶಾಸನವು ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲದ್ದಾಗಿದ್ದು, ೧೧೧೪ರಲ್ಲಿ ನಗರೇಶ್ವರ ದೇವರ್ಗೆ ದತ್ತಿ ಬಿಟ್ಟ ಪ್ರಸ್ತಾಪವಿದೆಯಾದರೂ ಊರನ್ನು ಉಲ್ಲೇಖಿಸಿಲ್ಲ. ಆದರೂ ಸಾಂದರ್ಭಿಕ ಹಿನ್ನೆಲೆಯಲ್ಲಿ ದೇವಪುರ ಬಸ್ ನಿಲ್ದಾಣದ ಬಳಿಯಿರುವ ರಾಮಲಿಂಗೇಶ್ವರ ಗುಡಿಯೇ ಶಾಸನೋಕ್ತ ನಗರೇಶ್ವರ ದೇವಾಲಯವಿದ್ದಿರಬಹುದೆಂದು ತರ್ಕಿಸಬಹುದಾಗಿದೆ. ಪೂರ್ವಾಭಿಮುಖವಾಗಿರುವ ಈ ಗುಡಿಯು ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಜೀರ್ಣೋದ್ಧಾರಗೊಂಡಿರುವುದರಿಂದ ಸುಸ್ಥಿತಿಯಲ್ಲಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಇದರ ಬಾಗಿಲವಾಡವು ಪಂಚಶಾಖಾಲಂಕೃತವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಕೆತ್ತನೆಯನ್ನು ಹೊಂದಿದ್ದು ಆಕರ್ಷಕವಾಗಿದೆ. ನವರಂಗದಲ್ಲಿ ಎರಡು ದೇವಕೋಷ್ಠಗಳಿವೆ. ಛತ್ತನ್ನು ಆಕರ್ಷಕವಾದ ನಾಲ್ಕು ದಳದ ಕಮಲದಿಂದ ಅಲಂಕರಿಸಲಾಗಿದೆ. ನವರಂಗದ ಮುಂಭಾಗವು ಮುಕ್ತವಾಗಿದ್ದು, ವಜ್ರಾಕಾರದ ವಿನ್ಯಾಸಗಳಿಂದ ಅಲಂಕರಿಸಲ್ಪಟ್ಟಿರುವ ಕಕ್ಷಾಸನವನ್ನು ಹೊಂದಿದೆ. ಈ ಗುಡಿಯ ಹಿಂಭಾಗದಲ್ಲೇ ಕಲ್ಯಾಣದ ಚಾಳುಕ್ಯರ ಕಾಲದ ಕಂಬಗಳನ್ನುಳ್ಳ ಪರಮಾನಂದರ ಗುಡಿ ಇದೆ. ಊರ ಒಳಗಡೆ ಬಸವಣ್ಣ, ಮಲ್ಲಿಕಾರ್ಜುನ, ವೆಂಕಟೇಶ್ವರ, ಲಕ್ಷ್ಮಿ, ವೀರಭದ್ರ, ಮೈಲಾರ, ದೇವಮ್ಮ, ಕೆಂಚಮ್ಮ ಹಾಗೂ ಮರಗಮ್ಮನ ಗುಡಿಗಳಿದ್ದು, ಇವುಗಳಲ್ಲಿ ಬಸವಣ್ಣ, ವೀರಭದ್ರ ಹಾಗೂ ಮಲ್ಲಿಕಾರ್ಜುನ ಗುಡಿಗಳು ಕಲ್ಯಾಣದ ಚಾಳುಕ್ಯರ ಕಾಲದ ಕಂಬ, ಬಾಗಿಲವಾಡಗಳನ್ನು ಹೊಂದಿದ್ದು ಇದರಿಂದ ೧೧-೧೨ನೇ ಶತಮಾನದಲ್ಲಿ ಇಲ್ಲಿ ಕನಿಷ್ಠ ಇನ್ನೂ ನಾಲ್ಕೈದು ಸುಂದರ ದೇಗುಲಗಳಿದ್ದು ಇದೊಂದು ಪ್ರಮುಖ ಸಾಂಸ್ಕೃತಿಕ ಕೇಂದ್ರವಾಗಿದ್ದಂತೆ ತೋರುತ್ತದೆ.

ಊರಿಂದ ವಾಯವ್ಯಕ್ಕೆ ಇರುವ ಕಲ್ಲಪ್ಪಯ್ಯನ ಗುಡಿಯು ಪೂರ್ಣ ಶಿಥಿಲಾವಸ್ಥೆಯಲ್ಲಿದೆ. ಈ ಗುಡಿಯ ಬಳಿಯಿರುವ ಶಾಸನವು ಕಲ್ಯಾಣದ ಚಾಳುಕ್ಯ ಅರಸ ನಾಲ್ಕನೇಯ ಸೋಮೇಶ್ವರನ ಕಾಲಕ್ಕೆ ಸೇರಿದ್ದು ಮಾಂಡಳಿಕ ಮಾರಬ್ಬರಸನು ೧೧೮೪ರಲ್ಲಿ 'ದೇವಾಪುರ'ಕ್ಕೆ ಭೇಟಿ ನೀಡಿದ್ದಾಗ ಇದಕ್ಕೆ ಭೂಮಿಯನ್ನು ದತ್ತಿ ಬಿಟ್ಟ ವಿಷಯವನ್ನು ಹೇಳುತ್ತದೆ. ಈ ಶಾಸನದಿಂದ ದೇವಪುರವು ಹಿಂದೆ ಸಗರ-೫೦೦ಕ್ಕೆ ಸೇರಿತ್ತೆಂಬ ಅಂಶ ಗೊತ್ತಾಗುತ್ತದೆ.

ಇವೆಲ್ಲಕ್ಕಿಂತ ಮಿಗಿಲಾಗಿ 'ದೇವಾಪುರ'ವು ಕನ್ನಡ ಜೈಮಿನಿ ಭಾರತದ ಕರ್ತೃ ಲಕ್ಷ್ಮೀಶನ ಜನ್ಮ ಸ್ಥಳವೆಂದು ಹೇಳಲಾಗುತ್ತದೆಯಾದರೂ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನಲ್ಲಿರುವ ದೇವನೂರೇ ಕವಿ ಲಕ್ಷ್ಮೀಶನ ಜನ್ಮಸ್ಥಳವೆಂಬ ಅಭಿಪ್ರಾಯವಿದೆ.

**ದೇವರ ಗಾಣಗಾಪುರ** (೫೩೪೮)ವು ತಾಲೂಕು ಕೇಂದ್ರವಾದ ಅಫಜಲ್‌ಪುರದಿಂದ ಪಶ್ಚಿಮಕ್ಕೆ ೨೫ ಕಿ.ಮೀ., ಗುಲಬರ್ಗಾದಿಂದ ನೈಋತ್ಯಕ್ಕೆ ೪೦ ಕಿ.ಮೀ. ದೂರದಲ್ಲಿ, ಗುಲಬರ್ಗಾ-ಅಫಜಲಪುರ ರಸ್ತೆಯಲ್ಲಿ, ಗಾಣಗಾಪುರ ರೈಲು ನಿಲ್ದಾಣದಿಂದ ನೈಋತ್ಯಕ್ಕೆ ಸುಮಾರು ೨೦ ಕಿ.ಮೀ. ದೂರದಲ್ಲಿ ಭೀಮಾ ನದಿಯ ಎಡ ದಂಡೆಯ ಮೇಲಿರುವ ಪ್ರಸಿದ್ಧ ಯಾತ್ರಾ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ ಗಾಣಗಾಪುರ (ಬಂದರವಾಡ ೧೧೭೪) ಎಂದೇ ಉಲ್ಲೇಖಿತಗೊಂಡಿರುವ ಈ ಊರು ಹಿಂದೆ ಅತನೂರು-೮೦ಕ್ಕೆ ಸೇರಿದ್ದು, ಇಲ್ಲಿಂದ ಈವರೆಗೆ ಯಾವುದೇ ಶಾಸನ ವರದಿಯಾಗಿಲ್ಲ. ಭೀಮಾ-ಅಮರಜಾ ನದಿಗಳು ಗಾಣಗಾಪುರದಿಂದ ನೈಋತ್ಯಕ್ಕೆ ಸುಮಾರು ಮೂರು ಕಿ.ಮೀ. ದೂರದಲ್ಲಿ ಸಂಗಮಿಸುತ್ತವೆ. ಸಂಗಮ ಸ್ಥಳದಲ್ಲಿ ಸಂಗಮೇಶ್ವರ ಹಾಗೂ ನರಸಿಂಹ ದೇವಾಲಯಗಳಿದ್ದು, ಪವಿತ್ರವಾದ ಭಸ್ಮದ ಗುಡ್ಡವೂ ಇದೆ. ಸಂಗಮ- ಗಾಣಗಾಪುರ ಹಾದಿಯಲ್ಲಿ ಷಟ್‌ಕುಲ, ನರಸಿಂಹ, ಚಕ್ರ, ಮನ್ಮಥ, ಭಾಗೀರಥಿ, ಪಾಪವಿನಾಶಿನಿ, ಕೋಟಿ ಹಾಗೂ ರುದ್ರಪಾದಗಳೆಂಬ ಎಂಟು ತೀರ್ಥಗಳನ್ನು ನೋಡಬಹುದಾಗಿದೆ. ಊರಲ್ಲಿ ನರಸಿಂಹ ಸರಸ್ವತಿ ದತ್ತ ಮಹಾರಾಜರ ದತ್ತಾತ್ರೇಯ ದೇವಸ್ಥಾನವಿದೆ. ಮೂಲತಃ ಮಹಾರಾಷ್ಟ್ರದ ಕಾರಂಜಾದವರಾದ ನರಸಿಂಹ ಸರಸ್ವತಿ ಮಹಾರಾಜರು, ಇಲ್ಲಿ ೨೩ ವರ್ಷ ನೆಲಸಿದ್ದು ಶ್ರೀಶೈಲಕ್ಕೆಂದು ಹೊರಡುವಾಗ, ಭಕ್ತರಿಗೆಂದು ಇಲ್ಲಿ ನಿರ್ಗುಣ ಪಾದುಕೆ ಬಿಟ್ಟಿದ್ದಾರೆ. ಈ

ಪಾದುಕೆಗಳೇ ಇಲ್ಲಿಗೆ ಆಗಮಿಸುವ ಭಕ್ತರ ಆರಾಧನಾ ದೈವವಾಗಿದ್ದು ಇಲ್ಲಿ ಫೆಬ್ರವರಿ ತಿಂಗಳಲ್ಲಿ ಐದು ದಿನಗಳ ದೊಡ್ಡ ಜಾತ್ರೆ ನಡೆಯುತ್ತಿದ್ದು, ಲಕ್ಷಾಂತರ ಜನ ಅದರಲ್ಲಿ ಪಾಲ್ಗೊಳ್ಳುತ್ತಾರೆ. ಇಲ್ಲಿಯ ದತ್ತಾತ್ರೇಯ ದೇವಾಲಯವು ಯಾತ್ರಿಕರ ಆಕರ್ಷಣಾ ಕೇಂದ್ರವಾಗಿದ್ದು, ಸುಂದರವಾದ ರಚನೆಯಾಗಿದೆ. ದೇವಾಲಯದ ಭಿತ್ತಿಯ ಮೇಲೆ ಪೌರಾಣಿಕ ಕಥನಗಳ ಕೆತ್ತನೆಯನ್ನು ಕಾಣಬಹುದಾಗಿದ್ದು, ಬರುವ ಯಾತ್ರಿಕರಿಗೆಂದು ಇಲ್ಲಿರುವ ಹಲವಾರು ಮಠ, ಧರ್ಮ ಶಾಲೆಗಳಲ್ಲಿ ವಸತಿ ಸೌಕರ್ಯವಿದೆ. ವರ್ಷದುದ್ದಕ್ಕೂ ಅದರಲ್ಲೂ ವಿಶೇಷವಾಗಿ ಗುರುವಾರ ಮತ್ತು ಅಮಾವಾಸ್ಯೆ ದಿನಗಳಂದು ಯಾತ್ರಿಕರನ್ನು ಆಕರ್ಷಿಸುವ ಈ ಪುಣ್ಯ ಕ್ಷೇತ್ರಕ್ಕೆ ಮಹಾರಾಷ್ಟ್ರದಿಂದ ವಿಶೇಷವಾಗಿ ಭಕ್ತರು ಬಂದು ಹೋಗುವುದು ಗಮನಾರ್ಹವಾಗಿದೆ. ಈ ದೇವಸ್ಥಾನದ ಆಡಳಿತ ಮಂಡಳಿಯು ಸರ್ಕಾರದ ನಿಯಂತ್ರಣದಲ್ಲಿದೆ. ಮಠವು ಸಂಸ್ಕೃತ ವೇದ ಪಾಠಶಾಲೆಯನ್ನು ನಡೆಸುತ್ತಿದೆ.

**ದೇವರ ಗೋನಾಳ** (೨೯೪೮)ವು ತಾಲೂಕು ಕೇಂದ್ರವಾದ ಸುರಪುರದಿಂದ ವಾಯವ್ಯಕ್ಕೆ ೧೦ ಕಿ.ಮೀ. ದೂರದಲ್ಲಿದ್ದು ಪವಾಡ ಪುರುಷ ತಿಂಥಿಣಿ ಮೌನೇಶ್ವರರ ಹುಟ್ಟೂರಾಗಿರುವುದರಿಂದ ಮಹತ್ವ ಪಡೆದಿದೆ. ಗ್ರಾಮ ಪಂಚಾಯತಿ ಕಛೇರಿ ಮುಂದಿರುವ ಎರಡು ಶಿಲಾಶಾಸನಗಳಿಂದ ಈ ಊರಿನ ಪ್ರಾಚೀನತೆಯನ್ನು ಸುಮಾರು ೧೧-೧೨ನೇ ಶತಮಾನದಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ಇವುಗಳಲ್ಲಿ ಸುಮಾರು ೧೧೦೬ರ ತ್ರುಟಿತ ಶಾಸನವು ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ್ದು, ಮಹಾಮಂಡಳೇಶ್ವರ ದೇವರಸ, ಭೋಗರಸ ದಂಡನಾಯಕರು ಹಾಗೂ ಚಕ್ರವರ್ತಿಯ ರಾಣಿ ಧಾರಲ ದೇವಿಯ ಬಗ್ಗೆ ಪ್ರಸ್ತಾಪಿಸುತ್ತಿದ್ದು, ಮುಂದಿನ ಭಾಗ ಹಾಳಾಗಿರುವುದರಿಂದ ಹೆಚ್ಚಿನ ವಿವರ ಲಭಿಸುವುದಿಲ್ಲ. ಆದರೂ ಸಾಂದರ್ಭಿಕ ಆಧಾರಗಳಿಂದ ಗೋನಾಳದಲ್ಲಿರುವ ಪ್ರಾಚೀನ ಆದಿಲಿಂಗೇಶ್ವರ ದೇವಾಲಯಕ್ಕೆ ಸಂಬಂಧಿಸಿದ ಶಾಸನವಿದೆಂದು ಊಹಿಸಬಹುದಾಗಿದ್ದು, ಇದರಿಂದ ಆ ಗುಡಿಯ ನಿರ್ಮಾಣ ಕಾಲವನ್ನು ಸುಮಾರು ೧೧೦೬ಕ್ಕೆ ನಿಗದಿಪಡಿಸಬಹುದಾಗಿದೆ.

ಇಲ್ಲಿಯ ಆದಿಲಿಂಗೇಶ್ವರ ದೇಗುಲವು ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ಅಂತರಾಳ ಹಾಗೂ ತೆರೆದ ನವರಂಗಗಳನ್ನು ಹೊಂದಿದ್ದು ಪೂರ್ಣ ಶಿಥಿಲಾವಸ್ಥೆಯಲ್ಲಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲವಾಡವು ಆಕರ್ಷಕವಾಗಿದೆ. ಇಲ್ಲಿಯ ಮೌನಪ್ಪಯ್ಯನ ಮಂದಿರವೂ ಸೇರಿದಂತೆ ಮೂರು ಮಂದಿರಗಳನ್ನು ಗೋನಾಳದಲ್ಲಿ ಸುಮಾರು ೧೮ನೇ ಶತಮಾನದಲ್ಲಿದ್ದ ಸುರಪುರದ ನಾಯಕರ ಮಂತ್ರಿಗಳಾದ ನಿಷ್ಠೆಯ ಕಡೆಲಪ್ಪ ಹಾಗೂ ವೀರಪ್ಪ ಕಟ್ಟಿಸಿದ್ದಾರೆ. ಇಲ್ಲಿನ ಮೌನಪ್ಪಯ್ಯನ ಗುಡಿಯು, ಮುಸ್ಲಿಂ ವಾಸ್ತು ಶೈಲಿಯ ಗುಮ್ಮಟವನ್ನು ಹೊಂದಿರುವ ಸರಳ ದೇವಾಲಯವಾಗಿದ್ದು, ಪ್ರತಿ ವರ್ಷ ಮೌನಪ್ಪಯ್ಯನ ಜಾತ್ರೆಗೆಂದು ತಿಂಥಿಣಿಗೆ ಬರುವ ಭಕ್ತರು ಇಲ್ಲಿಗೂ ಭೇಟಿ ಕೊಡುತ್ತಾರೆ.

**ದೇವರ ಹಯ್ಯಾಳ** (೨೬೧೪)ವು ತಾಲೂಕು ಕೇಂದ್ರವಾದ ಶಹಾಪುರದಿಂದ ಆಗ್ನೇಯಕ್ಕೆ ೧೬ ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ (ಸಂಗಮ ೧೧೪೩) 'ಹಯ್ಯಾಳ' ಎಂದೇ ಉಲ್ಲೇಖಗೊಂಡಿರುವ ಇದು ಹಿಂದೆ ಸಗರ-೫೦೦ಕ್ಕೆ ಸೇರಿದ್ದು, ಇಲ್ಲಿಂದ ಈವರೆಗೆ ಶಾಸನಗಳಾವುದೂ ವರದಿಯಾಗಿಲ್ಲ. ಆದರೂ ಇಲ್ಲಿರುವ ಸುಮಾರು ೧೧-೧೨ನೇ ಶತಮಾನಕ್ಕೆ ಸೇರಿದ ರಾಮಲಿಂಗೇಶ್ವರ, ಈಶ್ವರ, ಲಿಂಗೇಶ್ವರ ಹಾಗೂ ಹಯ್ಯಾಳಲಿಂಗೇಶ್ವರ ದೇವಾಲಯಗಳಿಂದಾಗಿ ಮಹತ್ವ ಪಡೆದಿದೆ. ಇಲ್ಲಿಯ ರಾಮಲಿಂಗೇಶ್ವರ, ಈಶ್ವರ ಹಾಗೂ ಲಿಂಗೇಶ್ವರ ದೇವಾಲಯಗಳು ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಕಲ್ಯಾಣದ ಚಾಳುಕ್ಯರ ಕಾಲದ ಸುಂದರ ರಚನೆಗಳಾಗಿವೆ. ಈ ಮೂರೂ ದೇಗುಲಗಳು ಶೈವಾಲಯಗಳಾಗಿದ್ದು, ಒಂದರಲ್ಲಿ ಬಲಹರಿ ಶಿವಲಿಂಗವಿದ್ದು, ಉಳಿದೆರಡರಲ್ಲಿ ಎಡಹರಿ ಶಿವಲಿಂಗಗಳಿವೆ. ಈ ದೇವಾಲಯಗಳ ಬಾಗಿಲ ಚೌಕಟ್ಟುಗಳು ಮೂರು, ನಾಲ್ಕು ಹಾಗೂ ಐದು ಅಲಂಕಾರಿಕ ಶಾಖಾ ಪಟ್ಟಿಕೆಗಳನ್ನು ಹೊಂದಿದ್ದು ಪೂರ್ಣ ಕುಂಭಗಳಿವೆ. ರಾಮಲಿಂಗೇಶ್ವರ ದೇವಾಲಯದ ನವರಂಗದಲ್ಲಿರುವ ಎರಡು ದೇವ ಕೋಷ್ಠಗಳಲ್ಲಿ ರುದ್ರಾಕ್ಷಿ ಮಾಲೆ ಹಿಡಿದು ಕುಳಿತಿರುವ ಯತಿ ಹಾಗೂ ಭೈರವನ ಶಿಲ್ಪಗಳಿವೆ. ರಾಮಲಿಂಗೇಶ್ವರ ದೇವಾಲಯವನ್ನು ಪ್ರವೇಶಿಸಲು ಮೂರು ದಿಕ್ಕಲ್ಲೂ ದ್ವಾರಗಳಿದ್ದು, ಇಲ್ಲಿ ಸೂರ್ಯಪೀಠ ಹಾಗೂ ವೀರಗಲ್ಲುಗಳಿವೆ. ಈ ದೇವಾಲಯಗಳ ಶಿಖರಗಳು ಜೀರ್ಣಾವಸ್ಥೆಯಲ್ಲಿದ್ದು, ನಶಿಸಿ ಹೋಗಿವೆ. ಊರ ಹೊರಗೆ ಇರುವ ಹಯ್ಯಾಳ ಲಿಂಗೇಶ್ವರ ಗುಡಿಯು ವಿಶಾಲವಾದ ಪ್ರಾಕಾರದ ನಡುವೆ, ೧೨ನೇ ಶತಮಾನದ ಚಾಳುಕ್ಯ ಕಂಬಗಳನ್ನು ಬಳಸಿ ಪುನಃ ನಿರ್ಮಿಸಿರುವ

ನವೀನ ದೇವಾಲಯವಾಗಿದ್ದು ಈ ದೇವರ ಜಾತ್ರೆಯು ಸಂಕ್ರಾಂತಿ ಹಾಗೂ ನೂಲ ಹುಣ್ಣಿಮೆಗಳಂದು ನಡೆಯುತ್ತಿದ್ದು, ಆ ಸಂದರ್ಭಗಳಲ್ಲಿ ಕಾರಣಿಕೋತ್ಸವ ಇರುತ್ತದೆ. ನೂಲ ಹುಣ್ಣಿಮೆಯಲ್ಲಿ ನಡೆಯುವ ಜಾತ್ರೆ ಸಮಯದಲ್ಲಿ ಒಂಭತ್ತು ದಿನಗಳವರೆಗೆ ದನದ ಜಾತ್ರೆಯಾಗುತ್ತದೆ. ಉಳಿದಂತೆ ಊರಲ್ಲಿ ಹನುಮಂತ, ದ್ಯಾಮವ್ವ ಹಾಗೂ ಮರಗಮ್ಮನ ಗುಡಿಗಳಿದ್ದು ಮಸೀದಿ ಹಾಗೂ ದರ್ಗಾ ಕೂಡ ಇವೆ.

**ದೇಸಾಯಿ ಕಲ್ಲೂರು** (೧೬೧೮) ತಾಲೂಕು ಕೇಂದ್ರವಾದ ಅಫಜಲ್‌ಪುರದಿಂದ ದಕ್ಷಿಣಕ್ಕೆ ಸುಮಾರು ೧೦ ಕಿ.ಮೀ. ದೂರದಲ್ಲಿ ಭೀಮಾ ನದಿಯ ಎಡ ದಂಡೆಯ ಮೇಲಿರುವ ಊರಾಗಿದ್ದು ಇಲ್ಲಿಯ ಸಿದ್ಧರಾಮೇಶ್ವರ ದೇವಾಲಯದ ಮುಂದಿರುವ ಅಪೂರ್ವ ರಥದಿಂದಾಗಿ ಪ್ರಸಿದ್ಧವಾಗಿದೆ. ಈ ರಥವು ಸಂಪೂರ್ಣ ಕಬ್ಬಿಣದ್ದಾಗಿದ್ದು ಸುಮಾರು ೨೫ ಟನ್ ಭಾರವಿದೆಯೆಂಬ ಅಭಿಪ್ರಾಯವಿದೆ. ಬಹಳ ಹಿಂದೆ ಸಿದ್ಧರಾಮೇಶ್ವರ ದೇವರ ಜಾತ್ರೆಯ ಸಂದರ್ಭದಲ್ಲಿ ಇದನ್ನು ಎಳೆಯುತ್ತಿದ್ದರಂತೆ. ಸುಮಾರು ೧೮ ಅಡಿ ಎತ್ತರವಿರುವ ಈ ರಥವು ಕಲಾತ್ಮಕವಾಗಿದ್ದು ಹಂಪೆಯ ಕಲ್ಲು ರಥದಂತೆ ಇಂದಿಗೂ ಸ್ಮಾರಕವಾಗಿ ನಿಂತಿದೆ. ಉಳಿದಂತೆ ಊರಲ್ಲಿ ಕಲ್ಯಾಣದ ಚಾಳುಕ್ಯರ ಕಾಲದ ಶಿಲ್ಪಾವಶೇಷಗಳು ಅಲ್ಲಲ್ಲಿ ಹರಡಿಕೊಂಡಿದ್ದು ಹುಡೆ ವಾಡೆಗಳಿವೆ. ಇಲ್ಲಿಯ ಸಿದ್ಧರಾಮೇಶ್ವರ ಜಾತ್ರೆಯು ಧವನದ ಹುಣ್ಣಿಮೆಯಂದು ಜರುಗುತ್ತಿದ್ದು, ಸಾವಿರಾರು ಜನ ಅದರಲ್ಲಿ ಪಾಲ್ಗೊಳ್ಳುತ್ತಾರೆ.

**ದೋರನಹಳ್ಳಿ** (೮೩೮೮)ಯು ತಾಲ್ಲೂಕು ಕೇಂದ್ರವಾದ ಶಹಾಪುರದಿಂದ ಈಶಾನ್ಯಕ್ಕೆ ೧೦ ಕಿ.ಮೀ. ದೂರದಲ್ಲಿ ಶಹಾಪುರ-ಯಾದಗಿರಿ ರಸ್ತೆಯಲ್ಲಿರುವ ಚಾರಿತ್ರಿಕ ಮಹತ್ವದ ಊರಾಗಿದೆ. ಇಲ್ಲಿಂದ ಈವರೆಗೆ ಕನ್ನಡದ ಮೂರು ಹಾಗೂ ಎರಡು ಪರ್ಷಿಯನ್ ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಮೈಲಾರ ಲಿಂಗನ ಗುಡಿ ಮುಂದಿರುವ ನಾಲ್ಕಾರು ಅಕ್ಷರಗಳಿರುವ ಗಡಿ ಕಲ್ಲು ಸುಮಾರು ೯-೧೦ನೇ ಶತಮಾನಕ್ಕೆ ಸೇರಿದ ರಾಷ್ಟ್ರಕೂಟ ಶಾಸನವಾಗಿದೆ. ಕಲ್ಲಿನಾಥೇಶ್ವರ ಗುಡಿಯ ಮುಂದಿನ ಕಂಬದ ಮೇಲಿರುವ ಶಾಸನವು ಕಲ್ಯಾಣದ ಚಾಳುಕ್ಯ ಅರಸ ಜಗದೇಕಮಲ್ಲನ ಕಾಲದ್ದಾಗಿದ್ದು, ೧೧೧೭ರಲ್ಲಿ, ನೀಲಶಿವ ಭಟ್ಟಾರಕರಿಗೆ, ಸಗರ ನಾಡಿಗೆ ಸೇರಿದ ದೋರಹಳ್ಳಿಯ ೧೦೦೦ ಮತ್ತರು ಭೂಮಿಯ ಮನ್ನೆಯವನ್ನು ಚಟ್ಟರಸನು ದಾನ ಕೊಟ್ಟ ವಿಷಯವನ್ನು ದಾಖಲಿಸುತ್ತ, ಆ ಸಂದರ್ಭದಲ್ಲಿ ಕಾಸಿಗ ದುಗ್ಗೋಜನ ಮಗ ವೋಜನಿಗೆ ೧೦ ಮತ್ತರು ಭೂಮಿ ಹಾಗೂ ಒಂದು ಮನೆ ನಿವೇಶನವನ್ನು ದಾನ ಬಿಟ್ಟ ವಿಷಯವನ್ನೂ ತಿಳಿಸುತ್ತದೆ. ಅಲ್ಲೇ ಇರುವ ೧೧೫೭ರ ಇನ್ನೊಂದು ಶಾಸನ ಅದೇ ಭಟ್ಟಾರಕರಿಗೆ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಇಲ್ಲಿಯ ಮಸೀದಿ ಬಳಿಯಿರುವ ಎರಡು ಪರ್ಷಿಯನ್ ಶಾಸನಗಳ ಪಾಠ ಒಂದೇ ಆಗಿದ್ದು, ಅಲಿ ಆದಿಲ್ ಷಾನು ೧೫೭೭ರಲ್ಲಿ ಖಾನ್-ಇ-ಅಜಾಮನಾದ ಬಿವಾಲ್ ದಿಲ್ವಾರ್ ಖಾನನು ದೋರನಹಳ್ಳಿಯಲ್ಲಿ ನಿರ್ಮಿಸಿದ ಮಸೀದಿಯ ಉಸ್ತುವಾರಿಗೆಂದು ಎರಡು ಛಾವರ್ ಭೂಮಿಯನ್ನು ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ.

ಊರಲ್ಲಿಂದು ಎರಡು ಪ್ರಾಚೀನ ದೇಗುಲಗಳಿವೆ. ಇವುಗಳಲ್ಲಿ ಊರ ನಡುವೆ ಹೂಗಾರ್ ಓಣಿಯಲ್ಲಿರುವ ಪರಮಾನಂದ ಗುಡಿಯು ತ್ರಿಕೂಟ ದೇವಾಲಯವಾಗಿದ್ದು, ಮೂರು ಪ್ರತ್ಯೇಕ ಗರ್ಭಗೃಹ ಹಾಗೂ ಅಂತರಾಳಗಳನ್ನು ನಡುವಣ ಒಂದೇ ನವರಂಗವು ಒಗ್ಗೂಡಿಸಿದ್ದು, ಮುಖ ಮಂಟಪವೂ ಇದೆ. ಇವುಗಳಲ್ಲಿ ಪ್ರಧಾನ ಗರ್ಭಗೃಹದಲ್ಲಷ್ಟೇ ಶಿವಲಿಂಗವಿದೆ. ಇವುಗಳ ಬಾಗಿಲವಾಡಗಳು ಪಂಚಶಾಖಾಲಂಕೃತವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಇದೆ. ಅಂತರಾಳದ ಬಾಗಿಲವಾಡಗಳು ಚತುರ್ಶಾಖಾಲಂಕೃತವಾಗಿದ್ದು, ಜಾಲಂಧ್ರಗಳಿವೆ. ನವರಂಗದ ನಡುವಣ ಕಂಬಗಳು ಆಕರ್ಷಕವಾಗಿದ್ದು, ಛತ್ತಲ್ಲಿ ಸುಂದರವಾದ ಕಮಲವಿದೆ. ನವರಂಗದ ಮುಂಭಾಗ ಹಾಗೂ ಮುಖ ಮಂಟಪಗಳು ಕಕ್ಷಾಸನವನ್ನು ಹೊಂದಿರುವ ತೆರೆದ ಮಂಟಪಗಳಾಗಿವೆ. ಈ ದೇವಾಲಯವು ಸುಮಾರು ೧೧ನೇ ಶತಮಾನದ ರಚನೆಯಾಗಿದೆ. ಊರ ಹೊರಗೆ ಇರುವ ಕಲ್ಲಿನಾಥೇಶ್ವರ ದೇವಾಲಯವು ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿರುವ ಸುಮಾರು ೧೧ನೇ ಶತಮಾನದ ರಚನೆಯಾಗಿದೆ. ವಿಶಾಲವಾದ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲವಾಡವು ಪಂಚಶಾಖಾಲಂಕೃತವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಇದೆ. ಬಾಗಿಲವಾಡವನ್ನು ಸುಂದರವಾದ ಮಾವಿನ ತೋರಣದಿಂದ ಅಲಂಕರಿಸಲಾಗಿದೆ. ನವರಂಗದ ಕಂಬಗಳು ಆಕರ್ಷಕವಾಗಿದ್ದು, ಛತ್ತಲ್ಲಿ ತ್ರಿದಳ ಕಮಲವಿದೆ. ಎತ್ತರವಾದ ಅಧಿಷ್ಠಾನದ ಮೇಲಿರುವ ಈ ದೇಗುಲದ ಭಿತ್ತಿಯು ನಿರಾಡಂಬರವಾಗಿದೆ. ಆದಿಲ್ ಷಾಹಿ ಕಾಲಕ್ಕೆ (೧೫೭೧) ಸೇರಿದ ಇಲ್ಲಿಯ

ಮಸೀದಿಯು ಒಂದು ಸರಳ ಸುಂದರ ರಚನೆಯಾಗಿದ್ದು, ಬಳಿಯಲ್ಲಿ ಭಾವಿಯೂ ಇದೆ. ಉಳಿದಂತೆ ಊರಲ್ಲಿ ಮೈಲಾರಲಿಂಗ, ಮಹಾಂತೇಶ್ವರ, ಹನುಮಂತ, ಮುಂತಾದ ದೇವಾಲಯಗಳಿದ್ದು, ಮಹಾಂತೇಶ್ವರ ಶಿವಾಚಾರ್ಯ ಸ್ವಾಮಿಗಳು ಜೀವಂತ ಸಮಾಧಿಯಾದ ಸ್ಥಳವಿದಾಗಿದ್ದು, (ಮಹಾಂತೇಶ್ವರ ಗುಡಿ) ಸಿದ್ಧಾರೂಢ ಮಠವೂ ಇದೆ.

**ಧುತ್ತರಗಾಂವ್** (೪೦೮೮) ತಾಲೂಕು ಕೇಂದ್ರವಾದ ಆಳಂದದಿಂದ ಆಗ್ನೇಯಕ್ಕೆ ೨೦ ಕಿ.ಮೀ., ಗುಲಬರ್ಗಾದಿಂದ ವಾಯವ್ಯಕ್ಕೆ ೩೮ ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಕೇಂದ್ರವಾಗಿದೆ. ಪ್ರಾಚೀನ ಶಾಸನಗಳಲ್ಲಿ ಧುತ್ತರಗಾವ್ ಎಂದೇ ಉಲ್ಲೇಖಿತಗೊಂಡಿರುವ ಇದೊಂದು ಅಗ್ರಹಾರವಾಗಿದ್ದು, ಇಲ್ಲಿಂದ ಈವರೆಗೆ ಒಂದೇ ಶಾಸನ ವರದಿಯಾಗಿದೆ. ಊರಲ್ಲಿರುವ ಭೋಗಲಿಂಗೇಶ್ವರ ಗುಡಿ ಮುಂದೆ ಇರುವ ಈ ಶಾಸನ ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲದ್ದಾಗಿದ್ದು ೧೧೦೯ರಲ್ಲಿ ಆತನ ಹಿರಿಯ ರಾಣಿಯಾದ ಅಚಲದೇವಿಯು ಸರ್ವನಮಸ್ಯದಗ್ರಹಾರ ದುತ್ತಿರಗಾವೆಯಲ್ಲಿ ನಿರ್ಮಿಸಿದ ಕೇಶವ ದೇವರ್ಗೆ ಪೂಜಾವಿಧಿಗೆಂದು ಊರ ಪ್ರಭುಗಳು ೫೦ ಮತ್ತರು ಭೂಮಿಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಈ ಶಾಸನ ಇರುವ ಭೋಗಲಿಂಗೇಶ್ವರ ಗುಡಿಯು ಸರಳವಾಗಿದೆ. ಆದರೆ ಊರ ಹೊರಗೆ ಕಡಗಂಚಿ ರಸ್ತೆಯಲ್ಲಿರುವ ಸಿದ್ಧಾಯಪ್ಪನ ದೇಗುಲವು ಜೀರ್ಣಾವಸ್ಥೆಯಲ್ಲಿರುವ ಪ್ರಾಚೀನ ದೇವಾಲಯವಾಗಿದೆ. ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿರುವ ಈ ದೇಗುಲವು ಪೂರ್ವಾಭಿಮುಖವಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಇದರ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಇದೆ. ನವರಂಗದ ಕಂಬಗಳು ರೇಖಾ ವಿನ್ಯಾಸಗಳಿಂದ ಅಲಂಕೃತಗೊಂಡಿದ್ದು ಇದರ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದ್ದು ಆಕರ್ಷಕವಾಗಿದೆ. ಇಲ್ಲಿಯ ವೀರೇಶ್ವರ ಗುಡಿ ನವೀನದ್ದಾದರೂ ಇದರ ಶಿಖರವು ಸುಂದರವಾದ ಗಾರೆ ಶಿಲ್ಪಗಳಿಂದ ಅಲಂಕೃತಗೊಂಡಿದೆ. ಇದರ ಜೊತೆಗೆ ಊರಲ್ಲಿ ಬೀರದೇವ, ಅಮರೇಶ್ವರ, ಮಾಣಿಕೇಶ್ವರ, ಗಜಾನನ, ಹನುಮಂತ, ಚೌಡೇಶ್ವರಿ, ಲಕ್ಷ್ಮಿದೇವಿ ಹಾಗೂ ಮರಗಮ್ಮನ ನವೀನ ಗುಡಿಗಳಿದ್ದು ಶಾಂತೇಶ್ವರ ಮಠವೂ ಇದೆ.

**ಧುಮ್ಮದ್ರಿ**(೯೭೦)ಯು ತಾಲೂಕು ಕೇಂದ್ರವಾದ ಜೇವರ್ಗಿಯಿಂದ ನೈಋತ್ಯಕ್ಕೆ ೫೭ ಕಿ.ಮೀ. ದೂರದಲ್ಲಿ ಯಡ್ರಾಮಿ-ಮಳ್ಳಿ ರಸ್ತೆಯಲ್ಲಿ, ಯಡ್ರಾಮಿಯಿಂದ ಸುಮಾರು ಏಳು ಕಿ.ಮೀ. ದೂರದಲ್ಲಿದೆ. ಇತ್ತೀಚಿನದಾದ ಹಳ್ಳಿರಾಯ (ಹನುಮಂತ)ನ ಗುಡಿಯಿಂದಾಗಿ ಪ್ರಸಿದ್ಧಿಯಲ್ಲಿರುವ ಈ ಊರಲ್ಲಿ ಪೂರ್ಣ ಜೀರ್ಣೋದ್ಧಾರಗೊಂಡಿರುವ ಪ್ರಾಚೀನ ಮಂಟಪವಿದ್ದು ಇದು ಸುಮಾರು ೧೨-೧೩ನೇ ಶತಮಾನದ ೧೨ ಕಂಬಗಳನ್ನು ಹೊಂದಿದೆ. ಅವುಗಳಲ್ಲಿ ಒಂದು ಕಂಬದ ಎರಡು ಮುಖಗಳ ಮೇಲೆ ಯಾದವ ಚಕ್ರವರ್ತಿ ಮಹಾದೇವನ ಆಳ್ವಿಕೆಗೆ ಸೇರಿದ ೧೨೬೫ರ ಎರಡು ಶಾಸನಗಳಿದ್ದು, ಅವು ಮೊದಲ ಬಾರಿಗೆ ಇಲ್ಲಿ ವರದಿಯಾಗುತ್ತಿವೆ. ಈ ಶಾಸನದ ಮೇಲ್ಭಾಗದಲ್ಲಿ ತೀರ್ಥಂಕರರ ರೇಖಾ ಚಿತ್ರವಿದೆ. ಜೈನ ದೇವಾಲಯವೊಂದಕ್ಕೆ ದಾನ ಬಿಟ್ಟ ವಿಷಯವನ್ನು ದಾಖಲಿಸುವ ಈ ಶಾಸನದಲ್ಲಿ ನೆರೆಯ ಮಳ್ಳಿ ಹಾಗೂ ಅಕ್ಕಂಡೇಶ್ವರ ಗ್ರಾಮಗಳ ಉಲ್ಲೇಖವಿದೆ. ಉಳಿದಂತೆ ಊರಲ್ಲಿ ದ್ಯಾಮವ್ವ, ಮರಗಮ್ಮ ದೇವಿ, ಕೆಂಚಮ್ಮ ಹಾಗೂ ಹನುಮಂತನ ಗುಡಿಗಳಿದ್ದು, ಮಸೀದಿಯೂ ಇದೆ.

**ನರಬೋಳಿ** (೩೧೭೬)ಯು ತಾಲೂಕು ಕೇಂದ್ರವಾದ ಜೇವರ್ಗಿಯಿಂದ ಪೂರ್ವಕ್ಕೆ ೧೪ ಕಿ.ಮೀ. ದೂರದಲ್ಲಿ ಭೀಮಾ ನದಿಯ ಬಲದಂಡೆಯ ಮೇಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ನರಿಯಂಬೊಳೆ-೭೦' 'ನರಿಯಂಬೊಳ-೭೦', 'ನರಿಯುಂಬೊಳೆ-೭೦' ಎಂದೇ ಉಲ್ಲೇಖಿತಗೊಂಡಿರುವ ಈ ಊರು ಹಿಂದೆ ಎಪ್ಪತ್ತು ಹಳ್ಳಿಗಳ ಆಡಳಿತ ಘಟಕವಾಗಿತ್ತು. ಆದರೂ ಈವರೆಗೆ ಇಲ್ಲಿಂದ ಒಂದೇ ಒಂದು ಶಾಸನವೂ ವರದಿಯಾಗಿಲ್ಲ. ಊರಲ್ಲಿಂದು ಸುಮಾರು ೧೧-೧೨ನೇ ಶತಮಾನಕ್ಕೆ ಸೇರಿದ ಆರು ದೇವಾಲಯಗಳಿದ್ದು, ಇವುಗಳಲ್ಲಿ ಕೆಲವನ್ನು ಈಶ್ವರ ಗುಡಿಯೆಂತಲೂ, ಉಳಿದವನ್ನು ದೇಗುಲವೆಂತಲೂ ಸ್ಥಳೀಕರು ರೂಢಿಯಲ್ಲಿ ಕರೆಯುತ್ತಾರೆ. ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನುಳ್ಳ ಈ ದೇಗುಲಗಳಲ್ಲಿ ಶಿವಲಿಂಗವಿರುತ್ತದೆ. ಊರ ನಡುವೆ ಇರುವ ಪಂಚಲಿಂಗೇಶ್ವರ ಗುಡಿಯ ಗರ್ಭಗೃಹದಲ್ಲಿರುವ ಶಿವಲಿಂಗವು ಚತುರ್ ಮುಖಗಳನ್ನು ಹೊಂದಿದ್ದು ವಿಶಿಷ್ಟವಾಗಿದೆ. ಇವುಗಳಲ್ಲೊಂದು ಕದಂಬನಾಗರ ಶೈಲಿಯ ಶಿಖರವನ್ನು ಹೊಂದಿದೆ. ಪಡಸೆಟ್ಟಿಯವರ ಮನೆ ಹಿತ್ತಲಲ್ಲಿರುವ ತ್ರಿಕೂಟ ದೇವಾಲಯವು ಪಾಳು ಬಿದ್ದಿದೆ. ಇದರ ಬಳಿಯ ಗಣಪತಿ ದೇವಾಲಯದಲ್ಲಿ ಸುಂದರವಾದ ಗಣಪತಿ ಶಿಲ್ಪವಿದ್ದು ಸುಮಾರು ೧೫ನೇ ಶತಮಾನದ ಎರಡು ವೀರಗಲ್ಲುಗಳಿವೆ.

ಊರಲ್ಲಿ ನಿಜಾಮರ ಕಾಲಕ್ಕೆ ಸೇರಿದ ಹನುಮಂತದೇವರ ಎರಡು ದೇವಾಲಯಗಳಿದ್ದು, ಇವುಗಳಲ್ಲಿ ಊರ ಬಯಲಲ್ಲಿರುವ ಹನುಮಂತನ ಗುಡಿಯು ಸುಮಾರು ೧೩ನೇ ಶತಮಾನದ ಕಂಬಗಳನ್ನು ಹೊಂದಿದ್ದು, ಅದರ ಮುಂದೆ ದೀಪಮಾಲೆ ಕಂಬವಿದೆ. ಉಳಿದಂತೆ ಊರಲ್ಲಿ ವೀರಭದ್ರ, ಬಸವಣ್ಣ ಮತ್ತು ಮರಗಮ್ಮನ ಗುಡಿಗಳಿವೆ. ಹೊಳೆ ದಂಡೆಯಲ್ಲಿರುವ ಜುಮ್ಮಾ ಮಸೀದಿಯು ಸುಂದರ ಮುಸ್ಲಿಂ ವಾಸ್ತು ರಚನೆಯಾಗಿದ್ದು, ಅಲ್ಲೇ ಇರುವ ಪರ್ಷಿಯನ್ ಶಾಸನ ತುಂಡಾಗಿದೆ. ಇಲ್ಲಿಂದ ಆಚೆ ದಡದಲ್ಲಿರುವ ಚಾಮನೂರಿಗೆ ಹೋಗಲು ದೋಣಿ ಸೌಕರ್ಯವಿದೆ.

**ನರೋಣಾ** (೫೮೩೭)ವು ತಾಲೂಕು ಕೇಂದ್ರವಾದ ಆಳಂದದಿಂದ ಆಗ್ನೇಯಕ್ಕೆ ಕಡಗಂಚಿ ಮಾರ್ಗವಾಗಿ ೨೫ ಕಿ.ಮೀ., ಗುಲಬರ್ಗಾದಿಂದ ವಾಯವ್ಯಕ್ಕೆ ಚಿಂಚನಸೂರು ಮಾರ್ಗವಾಗಿ ೩೪ ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ರಾವಣನನ್ನು ಸಂಹರಿಸಿದ ರಾಮ ಅಯೋಧ್ಯೆಗೆ ಹಿಂತಿರುಗುವಾಗ ಮಾರ್ಗ ಮಧ್ಯದಲ್ಲಿ ನರೋಣಾಕ್ಕೆ ಬಂದು ಕಾರ್ತಿಕ ಲಿಂಗವನ್ನು ಪೂಜಿಸಿ, ರಾವಣ ಹತ್ಯಾ ಪಾಪವನ್ನು ಕಳೆದುಕೊಂಡುದುದರಿಂದ 'ನ ರಾವಣ' ಆಯಿತೆಂಬ ಐತಿಹ್ಯವಿದ್ದು ಅಗಸ್ತ್ಯ ಮಹರ್ಷಿಗಳು ತಂಗಿದ್ದ ಸ್ಥಳವಿದೆಂಬ ನಂಬಿಕೆಯಿದೆ. ಆದರೆ ಚಾರಿತ್ರಿಕವಾಗಿ ನರೋಣಾದ ಪ್ರಾಚೀನತೆಯನ್ನು ಸುಮಾರು ೧೧-೧೨ನೇ ಶತಮಾನದಷ್ಟು ಹಿಂದಕ್ಕೆ ಶಾಸನಾಧಾರಗಳಿಂದ ಗುರುತಿಸಬಹುದಾಗಿದೆ. ಹಿಂದಿನ ಶಾಸನಗಳಲ್ಲಿ 'ನರವಣಿ' ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ೧೨ ಹಳ್ಳಿಗಳ ಆಡಳಿತ ಕೇಂದ್ರವಾಗಿದ್ದು ಆಲಂದೆ-೧೦೦೦ಕ್ಕೆ ಸೇರಿದ ಗೊಂಕ - ೧೨೦ಕ್ಕೆ ಒಳಪಟ್ಟ ಕಂಪಣವಾಗಿತ್ತೆಂಬ ಅಂಶ ನೆರೆಯ ಬೋಧನದಲ್ಲಿರುವ ೧೧೪೨ರ ಶಿಲಾಶಾಸನದಿಂದ ಗೊತ್ತಾಗುತ್ತದೆ. ಆದರೆ ಇಲ್ಲಿಂದ ಈವರೆಗೆ ಶಾಸನಗಳಾವುದೂ ವರದಿಯಾಗಿಲ್ಲ. ಆದರೂ ಇಲ್ಲಿಯ ಕಾರ್ತಿಕೇಯ, ಕ್ಷೇಮಲಿಂಗೇಶ್ವರ, ಅಂತರ್ಗತ ವಿಷ್ಣು ದೇಗುಲಗಳಿಂದಾಗಿ ಇದು ಇಂದು 'ಕ್ಷೇತ್ರಪಾಲ' ಎಂದೇ ಹೆಸರು ಗಳಿಸಿ ಮಹತ್ವದ ಪುಣ್ಯ ಕ್ಷೇತ್ರವಾಗಿ ಬೆಳೆದಿದೆ.

ನರೋಣಾ ಹಾಗೂ ಚಿಂಚನಸೂರುಗಳ ನಡುವೆ ಸುಮಾರು ಮೂರು ಕಿ.ಮೀ. ಅಂತರದಲ್ಲಿರುವ ಈ ಸ್ಥಳಕ್ಕೆ (ಕ್ಷೇತ್ರಪಾಲ) ಭೇಟಿ ಕೊಟ್ಟರೆ ದೇಶದ ಎಲ್ಲಾ ಪುಣ್ಯ ಕ್ಷೇತ್ರಕ್ಕೆ ಭೇಟಿ ಕೊಟ್ಟಷ್ಟು ಫಲ ಲಭಿಸುತ್ತದೆಂಬ ಸ್ಥಳೀಯ ನಂಬಿಕೆ ಇದೆ. ಇಲ್ಲಿ ಗುಪ್ತ, ನಾರಸಿಂಹ, ಲಕ್ಷ್ಮಿ, ಸರ್ವ, ಭವನಾಶ, ರುದ್ರ ಮುಂತಾದ ಎಂಟು ತೀರ್ಥಗಳಿವೆ. ಇವುಗಳಲ್ಲಿ ಗುಪ್ತತೀರ್ಥ, ಕ್ಷೇತ್ರದಿಂದ ಒಂದೆರಡು ಫರ್ಲಾಂಗ್ ದೂರದಲ್ಲಿ ಹುಟ್ಟಿ ಕೊಳ್ಳವಾಗಿ ವರ್ಷದುದ್ದಕ್ಕೂ ಹರಿದರೆ, ಭವನಾಶತೀರ್ಥವು ಗುಹೆಯೊಳಗೆ ಇದ್ದು ಅಲ್ಲಿ ಕಾಳಿಕಾ ಹಾಗೂ ಭೈರವನ ಉಗ್ರ ಶಿಲ್ಪಗಳಿವೆ. ಉಳಿದ ತೀರ್ಥಗಳು ವಿಶಾಲವಾದ ಪುಷ್ಕರಿಣಿಗಳಾಗಿವೆ. ಕ್ಷೇಮ ಲಿಂಗೇಶ್ವರ ಗುಡಿಯು ಪುರಾತನದ್ದಾಗಿದ್ದು ಸರಳವಾಗಿದೆ. ಕಾರ್ತಿಕೇಯ ಸ್ವಾಮಿ ಗುಡಿಯು ಜಲದಿಂದಾವೃತವಾಗಿದ್ದು, ಮೂರು ವರ್ಷಕ್ಕೊಮ್ಮೆ ಇದರ ಜಾತ್ರೆಯಾಗುತ್ತದೆ. ಇಲ್ಲಿ ಅಕ್ಕಮಹಾದೇವಿಯ ಇತ್ತೀಚಿನದಾದ ಗುಡಿಯಿದೆ. ಇಲ್ಲಿಯ ನಾರಾಯಣದೇವರ ಮಠವೂ ಉಲ್ಲೇಖನೀಯವಾಗಿದೆ. ಎಂಭತ್ತೈದು ಎಕರೆಯಷ್ಟು ವಿಶಾಲವಾದ ಪ್ರದೇಶವನ್ನುಳ್ಳ ಈ ಕ್ಷೇತ್ರವು ಸುತ್ತ ಇರುವ ಹಸಿರು, ನಡುವೆ ಹರಿವ ಜರಿ, ಭಕ್ತಿ ಮೂಡಿಸುವ ದೇಗುಲ ಸಮುಚ್ಚಯ ಹಾಗೂ ವಿವಿಧ ಶಿಲಾ ಮೂರ್ತಿಗಳಿಂದ ಕೂಡಿದ್ದು ರಮಣೀಯವಾಗಿದೆ.

**ನಾಗಾವಿ**(ಕೆ) (೨೪೯)ಯು ತಾಲೂಕು ಕೇಂದ್ರವಾದ ಚಿತ್ತಾಪುರದಿಂದ ಆಗ್ನೇಯಕ್ಕೆ ಸುಮಾರು ಮೂರು ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಅಗ್ರಹಾರನಾಗವಾವಿ', 'ಮಹಾ ಅಗ್ರಹಾರ ನಾಗವಾವಿ' 'ಸರ್ವನಮಸ್ಯದ ಅಗ್ರಹಾರ ನಾಗವಾವಿ' ಎಂದೆಲ್ಲಾ ಉಲ್ಲೇಖಿತಗೊಂಡಿರುವ ಇದು ಹಿಂದೆ ಅರಲು-೩೦೦ರ ರಾಜಧಾನಿಯಾಗಿತ್ತು. ಇಲ್ಲಿಂದ ಈವರೆಗೆ ಕಲ್ಯಾಣದ ಚಾಳುಕ್ಯರ ಕಾಲಕ್ಕೆ ಸೇರಿದ ಐದು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ೭೦ ಕಂಬದ ಗುಡಿ ಆವರಣದಲ್ಲಿರುವ ಕಲ್ಯಾಣದ ಚಾಳುಕ್ಯ ಅರಸ ಒಂದನೆಯ ಸೋಮೇಶ್ವರನ ಕಾಲಕ್ಕೆ ಸೇರಿದ ಸ್ತಂಭ ಶಾಸನವೇ ಪ್ರಾಚೀನದ್ದಾಗಿದೆ. ದಂಡನಾಯಕ ಮಧುವಪ್ಪರಸನು ತನ್ನ ತಂದೆ ಕಾಳಿದಾಸ ದಂಡನಾಯಕನು ಚಾಳುಕ್ಯ ಚಕ್ರವರ್ತಿಯಿಂದ ಪರಮೇಶ್ವರ ದತ್ತಿಯಾಗಿ ಪಡೆದಿದ್ದ ಮಹಾ ಅಗ್ರಹಾರ ನಾಗವಾವಿಯಲ್ಲಿ ೧೦೫೮ರಲ್ಲಿ ತ್ರೈಪುರುಷ ಶಾಲೆ, ಮಧುಸೂಧನಾಲಯ, ರಾಮೇಶ್ವರಾಲಯ ಹಾಗೂ ರಾಮತೀರ್ಥಗಳನ್ನು ನಿರ್ಮಿಸಿ, ಘಟಿಕಾಸ್ಥಾನವೆನಿಸಿದ ಈ ಶಾಲೆಯಲ್ಲಿದ್ದ ೨೦೦ ವೇದಾಧ್ಯಾಯಿಗಳಿಗೆ, ಶಾಸ್ತ್ರ ಓದುವ ೫೦ ವಿದ್ಯಾರ್ಥಿಗಳಿಗೆ, ಆರು ಮಂದಿ ಶಿಕ್ಷಕರಿಗೆ ಹಾಗೂ ಓರ್ವ ಸರಸ್ವತಿ ಭಂಡಾರಿ (ಗ್ರಂಥಪಾಲಕ) ಹೀಗೆ ಒಟ್ಟು ೨೫೭ ಜನರ ಊಟ, ವಸತಿ ಹಾಗೂ ದೇವಾಲಯದ ಪೂಜಾ

ವಿಧಿಗಳಿಗೆಂದು ೧೦೦೦ ಮತ್ತರು ಭೂಮಿಯನ್ನು ಹೈಹಯ ಮಹಾಮಂಡಳೇಶ್ವರ ಅಯ್ಯರಸನಿಂದ ದಾನವಾಗಿ ಪಡೆದುಕೊಟ್ಟ ಅಂಶವನ್ನು ಈ ಶಾಸನ ತಿಳಿಸುತ್ತದೆ. ಕರ್ನಾಟಕದ ಪ್ರಾಚೀನ ಗ್ರಂಥಾಲಯದ ಮೊದಲ ಉಲ್ಲೇಖ ಇದೆಂಬುದು ಗಮನಾರ್ಹವಾಗಿದೆ. ಈ ಶಾಸನದಿಂದ ಹಿಂದೆ ಇದೊಂದು ವೇದ-ಶಾಸ್ತ್ರಾಧ್ಯಯನಕ್ಕೆ ಹೆಸರಾದ ಘಟಿಕಾ ಸ್ಥಾನವೆನಿಸಿದ್ದು, ೪೦೦ ಮಹಾಜನರನ್ನು ಹೊಂದಿದ್ದ ಮಹಾ ಅಗ್ರಹಾರವಾಗಿದ್ದ ಅಂಶ ಗೊತ್ತಾಗುತ್ತದೆ. ಇಲ್ಲಿಯ ೧೦೬೭ರ ಇನ್ನೊಂದು ಶಾಸನ ವಾಸ್ತುಶಿಲ್ಪ ದೃಷ್ಟಿಯಿಂದ, ಶಿಕ್ಷಣಕ್ಕೆ ಸಂಬಂಧಿಸಿದ ಪದವಿ ಪ್ರದಾನದ ದೃಷ್ಟಿಯಿಂದ ಮಹತ್ವದ ಅಂಶಗಳನ್ನು ಒಳಗೊಂಡಿದ್ದು, ಇಲ್ಲಿಯ ಏಕದಂಡಿ, ಸ್ನಾತಕ ಮುಂತಾದ ಪದಗಳು ನಮ್ಮ ಗಮನ ಸೆಳೆಯುತ್ತವೆ. ಈ ಶಾಸನ ಮಧುಸೂದನ ದೇವರಿಗೆ ಹಾಗೂ ದೇವಾಲಯದ ವಿವಿಧ ಊಳಿಗದವರಿಗೆಂದು ೧೦೪೫ ಮತ್ತರು ಭೂಮಿಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಮೇಲಾಗಿ ಈ ಶಾಸನ ಮಹಾ ಅಮಾತ್ಯ ನಾರಾಯಣಯ್ಯನಾಯಕನು ಮೇಲೆ ಹೇಳಿರುವ ದೇವಾಲಯ, ಶಾಲೆ ಹಾಗೂ ತೀರ್ಥಗಳನ್ನು ನಿರ್ಮಿಸಿದ್ದನೆಂದು ಹೇಳುತ್ತದೆ. ಸಾಂದರ್ಭಿಕವಾಗಿ ಕಲ್ಲುಕುಟಿಗ ನಾಗೋಜನನ್ನೂ ಹೆಸರಿಸುತ್ತದೆ. ಬಹುಶಃ ಇವನೇ ಈ ದೇವಾಲಯಗಳ ರೂವಾರಿಯಾಗಿದ್ದಂತೆ ತೋರುತ್ತದೆ. ಇಲ್ಲಿಯ ಲಕ್ಷ್ಮೇಶ್ವರ ದೇವಾಲಯದಲ್ಲಿರುವ ೧೦೬೨ರ ಶಾಸನ ಮಹಾಪ್ರಧಾನ ಕಾಳಿಮ್ಮರಸನು ರಾಮೇಶ್ವರ ದೇವಾಲಯದ ಮುಂದಿನ ಲಕ್ಷ್ಮೇಶ್ವರ ದೇವರ ಸೇವೆಗೆಂದು ವಿವಿಧ ಆಯಗಳನ್ನು ದತ್ತಿ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಇಲ್ಲಿಯ ಸಿದ್ಧೇಶ್ವರ ದೇವಾಲಯದಲ್ಲಿರುವ ೧೦೬೪ರ ಶಾಸನ ಸಿದ್ಧೇಶ್ವರ ದೇವಾಲಯವನ್ನು ಚಾವುಂಡಯ್ಯನು ನಿರ್ಮಿಸಿದ ಅಂಶವನ್ನು ತಿಳಿಸುತ್ತಾ, ಆ ದೇವರ ಪೂಜಾ ವಿಧಿಗೆಂದು ೨೦೦ ಮತ್ತರು ಭೂಮಿಯನ್ನು, ೩೦ ಕಮ್ಮ ಗದ್ದೆ ಹಾಗೂ ಇನ್ನಿತರ ದಾನಗಳನ್ನು ಕೊಟ್ಟ ಅಂಶವನ್ನು ಅರಹುತ್ತದೆ. ಇದೇ ದೇವಾಲಯಕ್ಕೆ ಸಂಬಂಧಿಸಿದಂತೆ ಜಗದೇಕಮಲ್ಲನ ಕಾಲಕ್ಕೆ ಸೇರಿದ ೧೦೫೪(?)ರ ಇನ್ನೊಂದು ಶಾಸನದಿಂದ ಸಿದ್ಧೇಶ್ವರ ದೇವಾಲಯಕ್ಕೆ ಸೇರಿದ ಮಠದ ನಿರ್ಮಾಣಕ್ಕೆಂದು ಹನ್ನವಣಿಗರು ಹೇರಿಗೆ ೨೫ ಎಲೆಯನ್ನು ದಾನವಾಗಿ ಕೊಟ್ಟ ವಿಷಯ ಗೊತ್ತಾಗುತ್ತದೆ.

ಪಾಳು ಬಿದ್ದಿರುವ ನಾಗಾವಿಯಲ್ಲಿ ಸುಮಾರು ೧೧ನೇ ಶತಮಾನಕ್ಕೆ ಸೇರಿದ ೬೦ ಕಂಬದ ಗುಡಿ, ರಾಮೇಶ್ವರ, ಲಕ್ಷ್ಮೇಶ್ವರ, ನಂದಿಬಾವಿಗುಡಿ, ವಿಠೋಬ, ಬಂಗಾರದ ಗುಡಿ (ಜೈನ), ನಂದೀಶ್ವರ, ನಾಗಾಯಿ ಎಲ್ಲಮ್ಮ ಹಾಗೂ ಕಡಲೆ ಬಸವಣ್ಣನ ದೇಗುಲ, ಮುಸ್ಲೀಮರ ಆಳ್ವಿಕೆಯಲ್ಲಿ ಪರಿವರ್ತನೆಗೊಂಡಿರುವ ಕರಿಮಸೀದಿ, ಜುಮ್ಮಾ ಮಸೀದಿ ಹಾಗೂ ಈರಪ್ಪಯ್ಯನ ಗುಡಿ, ಚಾಳುಕ್ಯ ಕಂಬಗಳನ್ನು ಬಳಸಿ ನಿರ್ಮಿಸಿರುವ ಹನುಮಂತನ ದೇವಾಲಯಗಳಿದ್ದು, ಇವುಗಳಲ್ಲಿ ಹೆಚ್ಚಿನ ದೇವಾಲಯಗಳಿಂದು ಜೀರ್ಣಾವಸ್ಥೆಯಲ್ಲಿವೆ. ವಿಶಾಲವಾದ ಪ್ರಾಕಾರದ ನಡುವೆ ಇರುವ ನಾಗಾವೇಲಾಂಬ (ಎಲ್ಲಮ್ಮ) ಗುಡಿಯು ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ತೆರೆದ ಅಂತರಾಳ, ನವರಂಗ ಹಾಗೂ ಅರ್ಧ ಮಂಟಪಗಳನ್ನು ಹೊಂದಿದ್ದು, ಜೀರ್ಣೋದ್ಧಾರದ ಸಂದರ್ಭದಲ್ಲಿ ನವರಂಗದ ಮುಂಭಾಗದಲ್ಲಿ ಹಜಾರವನ್ನು ಸೇರಿಸಲಾಗಿದೆ. ಗರ್ಭಗೃಹದಲ್ಲಿ ದೇವಿಯ ಶಿಲ್ಪವಿದ್ದು, ದೇವಾಲಯವನ್ನು ಬಳಸಿದಂತೆ ಹೊಂಡವಿದೆ. ಈ ದೇವಾಲಯದ ಆಡಳಿತವು ಮುಜರಾಯಿ ಇಲಾಖೆಗೆ ಒಳಪಟ್ಟಿದ್ದು, ಇದರ ಜಾತ್ರೆಯು ಸೀಗಿ ಹುಣ್ಣಿಮೆಯಂದು ಜರುಗುತ್ತಿದ್ದು, ದಸರಾ ಸಂದರ್ಭದಲ್ಲಿ ಒಂಭತ್ತು ದಿನವೂ ವಿಶೇಷ ಉತ್ಸವವಿರುತ್ತದೆ. ಇಲ್ಲಿಯ ದೇವಾಲಯಗಳಲ್ಲಿ ಪುರಾತತ್ವ ಇಲಾಖೆಯಿಂದ ಪೂರ್ಣ ಸಂರಕ್ಷಣೆಗೆ ಒಳಪಟ್ಟಿರುವ ೬೦ ಕಂಬದ ದೇವಾಲಯ ಚಾರಿತ್ರಿಕ ದೃಷ್ಟಿಯಿಂದ ಮಹತ್ವದ್ದಾಗಿದೆ. ಈ ಗುಡಿಯ ಮುಂದಿರುವ ೧೦೫೮ರ ಶಿಲಾ ಶಾಸನದಲ್ಲಿ ಮಧುವಪ್ಪರಸ ನಿರ್ಮಿಸಿದನೆಂದು ದಾಖಲಾಗಿರುವ ತ್ರೈಪುರುಷ ಶಾಲೆ ಇದೇ ಆಗಿದೆ. ಪೂರ್ವಾಭಿಮುಖವಾಗಿರುವ ಇದು ಗರ್ಭಗೃಹ, ತೆರೆದ ಅಂತರಾಳ ಹಾಗೂ ವಿಶಾಲವಾದ ಸಭಾ ಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಬ್ರಹ್ಮ ವಿಷ್ಣು ಹಾಗೂ ಮಹೇಶ್ವರರ ಅಖಂಡ ತ್ರೈಪುರುಷ ಪೀಠವಿದ್ದು, ಮೂರ್ತಿಗಳು ಕಾಣೆಯಾಗಿವೆ. ಗರ್ಭಗೃಹದ ಬಾಗಿಲ ಚೌಕಟ್ಟು ಆಕರ್ಷಕವಾದ ಅಲಂಕಾರದಿಂದ ಕೂಡಿದ ಐದು ಪಟ್ಟಿಕೆಗಳನ್ನು ಹೊಂದಿದ್ದು, ತೆರೆದ ಅಂತರಾಳದಲ್ಲಿ ನಂದಿಯಿದೆ. ವಿಶಾಲವಾದ ಈ ಸಭಾ ಮಂಟಪವನ್ನು ೪ ಮಾದರಿಯ ೬೬ ಕಂಬಗಳು ಹೊತ್ತು ನಿಂತಿದ್ದು, ನಡುವೆ ಇರುವ ಒಂದಂಕಣದ ಆಯಾಕಾರದ ತೊಟ್ಟಿಯು ಗಮನಾರ್ಹವಾಗಿದೆ. ಎತ್ತರವಾದ ಅಧಿಷ್ಠಾನದ ಮೇಲಿರುವ ಈ ದೇವಾಲಯವು ಹಿಂದೆ ವೇದಾಧ್ಯಯನದಲ್ಲಿ ತೊಡಗಿದ್ದ ವಿದ್ಯಾರ್ಥಿಗಳಿಂದ ಕೂಡಿದ ಶಾಲೆಯಾಗಿದ್ದು ಘಟಿಕಾಸ್ಥಾನ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದ್ದ ಅಂಶ ಇಲ್ಲಿಯ ಶಾಸನಗಳಿಂದ ಗೊತ್ತಾಗುತ್ತದೆ. ಇದಕ್ಕೆ ಹೊಂದಿಕೊಂಡಂತೆ ಸುಂದರವಾದ ಪುಷ್ಕರಣಿಯಿದೆ.

ಇಲ್ಲಿಯ ರಾಮೇಶ್ವರ ಹಾಗೂ ಲಕ್ಷ್ಮಣೇಶ್ವರ ದೇವಾಲಯಗಳು ಎದುರು ಬದುರಾಗಿ ನಿರ್ಮಾಣಗೊಂಡಿರುವ ಎರಡು ಪ್ರತ್ಯೇಕ ದೇಗುಲಗಳಾಗಿವೆ. ಇವುಗಳಲ್ಲಿ ಪೂರ್ವಾಭಿಮುಖವಾಗಿರುವ ರಾಮೇಶ್ವರ ಗುಡಿಯು ೧೦೫೮ರಲ್ಲಿ ನಿರ್ಮಾಣಗೊಂಡಿದ್ದು, ಇದರ ಬಲ ಹಿಂಬದಿಯಲ್ಲಿರುವ ತೀರ್ಥವೇ ಶಾಸನೋಕ್ತ ರಾಮೇಶ್ವರ ತೀರ್ಥವಾಗಿದೆ. ಗರ್ಭಗೃಹ, ಅಂತರಾಳ ಹಾಗೂ ತೆರೆದ ನವರಂಗಗಳನ್ನು ಹೊಂದಿರುವ ಈ ಗುಡಿಯ ಗರ್ಭಗೃಹ ಹಾಗೂ ಅಂತರಾಳದ ಬಾಗಿಲ ಚೌಕಟ್ಟುಗಳು ಮೂರು ಶಾಖೆಯ ಅಲಂಕಾರ ಪಟ್ಟಿಕೆಗಳನ್ನು ಹೊಂದಿದ್ದು, ಗರ್ಭಗೃಹದಲ್ಲಿ ರಾಮೇಶ್ವರ ಲಿಂಗವಿದೆ. ಈ ಗುಡಿಯ ಮುಂಭಾಗದಲ್ಲೇ ಪಶ್ಚಿಮಾಭಿಮುಖವಾಗಿರುವ ಲಕ್ಷ್ಮಣೇಶ್ವರ ದೇವಾಲಯವೇ ೧೧೫೩ರ ಶಾಸನದಲ್ಲಿ ಉಕ್ತವಾಗಿರುವ ಗುಡಿಯಾಗಿದ್ದು, ಇದೂ ಕೂಡ ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆಯಾದರೂ ಇಂದು ಪೂರ್ಣ ಜೀರ್ಣಾವಸ್ಥೆಯಲ್ಲಿದೆ. ಈ ಗುಡಿಯಿಂದ ಅನತಿ ದೂರದಲ್ಲಿರುವ ನಂದಿ ಲಿಂಗ ಗುಡಿ ಹಾಗೂ ವಿಠೋಬನ ಗುಡಿಗಳೂ ಕೂಡ ಏಕಕೂಟಗಳಾಗಿದ್ದು, ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು ಭಾಗಶಃ ಶಿಥಿಲಗೊಂಡಿವೆ. ಇದೇ ಪರಿಸರದಲ್ಲಿರುವ ಗುಂಡೇರಾಯ (ಬಂಗಾರದ) ಗುಡಿಯು ಜೈನ ಬಸದಿಯಾಗಿದ್ದು, ಇಂದು ಗರ್ಭಗೃಹ ಹಾಗೂ ಅಂತರಾಳಗಳಷ್ಟೇ ಉಳಿದಿದ್ದು, ನವರಂಗ ಭಾಗ ನಶಿಸಿಹೋಗಿದೆ. ಗರ್ಭಗೃಹದಲ್ಲಿ ತೀರ್ಥಂಕರರ ಪೀಠವಿದ್ದು, ಇದರ ಬಾಗಿಲ ಚೌಕಟ್ಟು ಆಕರ್ಷಕವಾದ ಅಲಂಕಾರದಿಂದ ಕೂಡಿದ ಆರು ಪಟ್ಟಿಕೆಗಳನ್ನು ಹೊಂದಿದ್ದು, ಅಪ್ರಕಟಿತ ಶಾಸನವೊಂದಿದೆ. ಅಂತರಾಳದಲ್ಲಿರುವ ಚಂದ್ರಶಿಲೆಯು ಸುಂದರ ಕೆತ್ತನೆಯಿಂದಾಗಿ ಆಕರ್ಷಕವಾಗಿದೆ. ಅಂತರಾಳದ ಬಾಗಿಲವಾಡವು ಮೂರು ಶಾಖೆಯ ಅಲಂಕಾರ ಪಟ್ಟಿಕೆಗಳನ್ನು ಹೊಂದಿದ್ದು ಜಾಲಂಧ್ರವನ್ನೂ ಹೊಂದಿದೆ. ಸುಮಾರು ೧೧ನೆಯ ಶತಮಾನದಲ್ಲಿ ನಿರ್ಮಾಣಗೊಂಡಿರಬಹುದಾದ ಈ ಬಸದಿ ಇಂದು ಶಿಥಿಲಾವಸ್ಥೆಯಲ್ಲಿದ್ದು, ಬೆತ್ತಲೆ ಬಸವ್ವನ ಗುಡಿ ಇನ್ನೊಂದು ಬಸದಿಯಾಗಿದ್ದು, ಇಂದು ಅದೂ ಜೀರ್ಣಾವಸ್ಥೆಯಲ್ಲಿದೆ.

ಹಾಳೂರ(ನಾಗಾವಿ)ನಡುವೆ ಇರುವ ದೇಗುಲವೇ ೧೦೫೮ರ ಶಾಸನದಲ್ಲಿ ಉಕ್ತವಾಗಿರುವ ಮಧುಸೂದನಾಲಯವೆಂದು ತೋರುತ್ತದೆ. ಗರ್ಭಗೃಹ, ತೆರೆದ ಅಂತರಾಳ, ನವರಂಗ ಹಾಗೂ ಸಭಾ ಮಂಟಪಗಳನ್ನು ಹೊಂದಿರುವ ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ಇಂದು ಪೂರ್ಣ ಶಿಥಿಲಾವಸ್ಥೆಯಲ್ಲಿದೆ. ಹಿಂದೆ ಇದೊಂದು ಶೈವಾಲಯವಾಗಿದ್ದು, ಈಗ ಗರ್ಭಗುಡಿ ಬರಿದಾಗಿದೆ. ಇದರ ಬಾಗಿಲ ಚೌಕಟ್ಟು ಆಕರ್ಷಕವಾದ ನಾಲ್ಕು ಅಲಂಕಾರಿಕ ಪಟ್ಟಿಕೆಗಳನ್ನು ಹೊಂದಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಇದೆ. ನವರಂಗದ ನಡುವಣ ಛತ್ತಲ್ಲಿ ಕಮಲವಿದ್ದು, ತೆರೆದ ಸಭಾ ಮಂಟಪವನ್ನು ಪ್ರವೇಶಿಸಲು ಉತ್ತರ ದಕ್ಷಿಣ ದಿಕ್ಕುಗಳಿಂದ ಪ್ರವೇಶವಿದೆ. ಅರವತ್ತು ಕಂಬದ ಗುಡಿಯಿಂದ ಎಡಕ್ಕೆ ಗದ್ದೆಗಳ ನಡುವೆ ನಂದೀಶ್ವರ ಹಾಗೂ ಕಡಲೆ ಬಸವಣ್ಣನ ಗುಡಿಗಳಿದ್ದು, ಇವುಗಳಲ್ಲಿ ಚಿಕ್ಕದಾದ ನಂದೀಶ್ವರ ಗುಡಿಯು ಗರ್ಭಗೃಹ, ನವರಂಗ ಹಾಗೂ ಅರ್ಧ ಮಂಟಪಗಳನ್ನು ಹೊಂದಿದ್ದು, ಉತ್ತರಾಭಿಮುಖವಾಗಿದೆ. ಈ ಗುಡಿಯ ಬಳಿಯಲ್ಲೇ ಇರುವ ಕಡಲೆ ಬಸವಣ್ಣನ ಗುಡಿಯು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ತೆರೆದ ಅಂತರಾಳ, ತೆರೆದ ನವರಂಗ ಹಾಗೂ ನಂದಿ ಮಂಟಪಗಳನ್ನು ಹೊಂದಿದೆ. ಈ ಗುಡಿಯಲ್ಲಿರುವ ೧೧೯೮ರ ಶಾಸನದಿಂದ ಇದೇ ಶಾಸನೋಕ್ತ ಸಿದ್ಧೇಶ್ವರ ದೇವಾಲಯವೆಂದು ಗೊತ್ತಾಗುತ್ತದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲ ಚೌಕಟ್ಟು ಮೂರು ಶಾಖೆಯ ಅಲಂಕಾರಿಕ ಪಟ್ಟಿಕೆಗಳನ್ನು ಹೊಂದಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಕೆತ್ತನೆ ಇದೆ. ಅಂತರಾಳದಲ್ಲಿ ಉಮಾ-ಮಹೇಶ್ವರರ ಸುಂದರ ಶಿಲ್ಪವಿದ್ದು, ತೆರೆದ ನವರಂಗವನ್ನು ಪ್ರವೇಶಿಸಲು ಉತ್ತರ ದಕ್ಷಿಣದಲ್ಲಿ ದ್ವಾರಗಳಿದ್ದು ಇದಕ್ಕೆ ಹೊಂದಿಕೊಂಡಂತೆ ನಂದಿ ಮಂಟಪವಿದೆ. ಇಲ್ಲಿಯ ಅನೇಕ ದೇವಾಲಯಗಳು ಮುಸ್ಲಿಮರ ಕಾಲದಲ್ಲಿ ಸಾಕಷ್ಟು ರೂಪಾಂತರಗೊಂಡಿದ್ದು, ಕಾಲಿ ಮಸೀದಿ, ಈರಪ್ಪಯ್ಯನಗುಡಿ ಹಾಗೂ ಜುಮ್ಮಾಮಸೀದಿಗಳು ಅಂತಹ ಉದಾಹರಣೆಗಳಾಗಿದ್ದು, ಕಲ್ಯಾಣದ ಚಾಳುಕ್ಯರ ಕಾಲದ ಕಂಬಗಳನ್ನಿಲ್ಲಿ ನೋಡಬಹುದಾಗಿದೆ. ಇಲ್ಲಿರುವ ಹನುಮಂತನ ಗುಡಿಯು ದಕ್ಷಿಣಾಭಿಮುಖವಾಗಿದ್ದು, ಗರ್ಭಗೃಹ, ಪ್ರದಕ್ಷಿಣಾ ಪಥ, ನವರಂಗ, ಹಾಗೂ ಮುಖ ಮಂಟಪಗಳನ್ನು ಹೊಂದಿದ್ದು ಸುಮಾರು ೧೭ನೇ ಶತಮಾನದಲ್ಲಿ ನಿರ್ಮಾಣಗೊಂಡಿರುವಂತೆ ತೋರುತ್ತದೆ. ಈ ಗುಡಿಯಲ್ಲಿರುವ ಹನುಮಂತನ ಮೂರ್ತಿಯೂ ಆಕರ್ಷಕವಾಗಿದ್ದು, ದೇವಾಲಯವೂ ಸುಸ್ಥಿತಿಯಲ್ಲಿರುವುದು ಗಮನಾರ್ಹವಾಗಿದೆ. ಹಿಂದೆ ರಾಜಧಾನಿಯಾಗಿ, ಘಟಕಾಸ್ಥಾನವಾಗಿ, ಅಗ್ರಹಾರವಾಗಿ ಮೆರೆದ ಈ ಊರು ಇಂದು ಪೂರ್ಣ ಪಾಳು ಬಿದ್ದಿದೆ.

**ನಾರಾಯಣಪುರ ಡ್ಯಾಂ** (ಬಸವ ಸಾಗರ) ಸುರಪುರ ತಾಲೂಕಿನ ನಾರಾಯಣಪುರದಿಂದ ಐದು ಕಿ.ಮೀ., ಲಿಂಗಸುಗೂರಿನಿಂದ ೨೨ ಕಿ.ಮೀ., ಮುದ್ದೇಬಿಹಾಳದಿಂದ ೩೦ ಕಿ.ಮೀ. ದೂರದಲ್ಲಿರುವ ಈ ರಮ್ಯ ತಾಣವು ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಸಿದ್ದಾಪೂರ ಗ್ರಾಮ ನಿವೇಶನದಲ್ಲಿದ್ದು ಪ್ರವಾಸಿಗರ ಆನಂದ ಧಾಮವಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ಕೃಷ್ಣಾ ನದಿಗೆ ಇಲ್ಲಿ ನಿರ್ಮಿಸಿರುವ ಅಣೆಕಟ್ಟಿನಿಂದಾಗಿ ಗುಲಬರ್ಗಾ ಹಾಗೂ ಬಿಜಾಪುರ ಜಿಲ್ಲೆಯ ಹಲವಾರು ಪ್ರದೇಶಗಳಿಗೆ ನೀರಾವರಿ ಹಾಗೂ ವಿದ್ಯುಚ್ಛಕ್ತಿ ಸೌಲಭ್ಯ ದೊರಕಲಿದೆ. ಸುಮಾರು ಅರ್ಧ ಕಿ.ಮೀ. ಉದ್ದವಿರುವ ಈ ಅಣೆಕಟ್ಟಿನ ಮೇಲೆ ಹಾದು ಹೋಗುವಾಗ, ಸುಡು ಬಿಸಿಲಲ್ಲೂ ಸಾಗರದ ಮೇಲಿಂದ ತೇಲಿ ಬರುವ ತಿಳಿಗಾಳಿ ಪ್ರವಾಸಿಗರಿಗೆ ಅವರ್ಣನೀಯ ಆನಂದವನ್ನು ನೀಡುತ್ತದೆ. ಅಣೆಕಟ್ಟಿನ ಬಳಿಯಲ್ಲೇ ಸುಂದರವಾದ ಗುಲಾಬಿ ಉದ್ಯಾನ ರೂಪುಗೊಳ್ಳುತ್ತಿದ್ದು, ಪ್ರವಾಸಕ್ಕೆ ಜುಲೈ-ಆಗಸ್ಟ್ ತಿಂಗಳು ಸೂಕ್ತ ಕಾಲವಾಗಿದ್ದು, ವಿಹಾರಕ್ಕೆ ಯೋಗ್ಯವಾಗಿದೆ. ಪ್ರವಾಸಿಗರಿಗೆಂದೇ ಸರ್ಕಾರಿ ವಸತಿ ಗೃಹವಿದೆ. ಪ್ರವಾಸೋದ್ಯಮದ ಅಭಿವೃದ್ಧಿಗೆ ಸದವಕಾಶವಿದೆ.

**ನಾಲವಾರ** (೯೫೬೫)ವು ತಾಲೂಕು ಕೇಂದ್ರವಾದ ಚಿತ್ತಾಪುರದಿಂದ ನೈಋತ್ಯಕ್ಕೆ ೩೨ ಕಿ.ಮೀ., ಯಾದಗಿರಿಯಿಂದ ವಾಯವ್ಯಕ್ಕೆ ೨೮ ಕಿ.ಮೀ. ದೂರದಲ್ಲಿದ್ದು, ಮೂರು ಕಿ.ಮೀ. ಅಂತರದಲ್ಲಿ ನಾಲವಾರ ರೈಲ್ವೆ ನಿಲ್ದಾಣವಿದೆ. ಇಲ್ಲಿಯ ಮೂಲಸ್ಥಾನ ದೇವರ ಗುಡಿಯ ನವರಂಗದಲ್ಲಿರುವ ಶಾಸನವು ಕಲ್ಯಾಣದ ಚಾಳುಕ್ಯ ಅರಸ ಆರನೇಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ್ದು, ೧೧೨೬ರಲ್ಲಿ ಗಾಣದ ಮಲ್ಲಸೆಟ್ಟಿಯು ನಾಲ್ವಾರದಲ್ಲಿ ಮೂಲಸ್ಥಾನ ದೇವರ ದೇಗುಲವನ್ನು ಮಾಡಿಸಿ ಸತ್ರಕ್ಕೆ ನಿವೇಶನ ಹಾಗೂ ಅನ್ನದಾನಕ್ಕೆಂದು ಎರಡು ಮತ್ತರು ಭೂಮಿಯನ್ನು ದಾನವಾಗಿ ಬಿಟ್ಟ ಸಂದರ್ಭದಲ್ಲಿ ಊರ ಪ್ರಜೆಗಳು, ನಖರರು, ತೆಲ್ಲಿಗರು, ಮಣಿಕಾರರು, ಬಿನಗರು, ಅಂಕಕಾರರು, ಒಕ್ಕಲೊಂದಕ್ಕೆ ಲೊಕ್ಕಿಯ ಹಾಗವನ್ನು ದೇವರಿಗೆಂದು ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಮೇಲಾಗಿ ಈ ಶಾಸನದಿಂದ ಹಿಂದೆ ನಾಲ್ವಾರಕ್ಕೆ ಮುಗಿಲೆತ್ತರದ ಕೋಟೆ ಇದ್ದ ಅಂಶ ಗೊತ್ತಾಗುತ್ತದೆ. ಈ ಶಾಸನವಿರುವ ಗುಡಿಯೇ ಶಾಸನೋಕ್ತ ಮೂಲಸ್ಥಾನ ದೇವರ ಗುಡಿಯಾಗಿದ್ದು, ಇಂದು ಭಾಗಶಃ ಜೀರ್ಣೋದ್ಧಾರಗೊಂಡಿದೆ. ಇಲ್ಲಿರುವ ಶ್ರೀ ಕೋರಿ ಸಿದ್ಧೇಶ್ವರ ಮಠದಿಂದಾಗಿ ಇಂದು ಇದು ಪ್ರಸಿದ್ಧವಾಗಿದೆ.

**ನಿಪ್ಪಾಣಿ** (೯೮೯)ಯು ತಾಲೂಕು ಕೇಂದ್ರವಾದ ಚಿತ್ತಾಪುರದಿಂದ ವಾಯವ್ಯಕ್ಕೆ ಸುಮಾರು ೪೦ ಕಿ.ಮೀ., ಗುಲಬರ್ಗಾದಿಂದ ಈಶಾನ್ಯಕ್ಕೆ ೨೨ ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಸುಪಾಣಿ' ಎಂದೇ ದಾಖಲಾಗಿರುವ ಈ ಊರಿಂದ ಜಗದೇಕಮಲ್ಲನ ಕಾಲಕ್ಕೆ ಸೇರಿದ ಏಕೈಕ ಶಾಸನ ವರದಿಯಾಗಿದೆ. ಜಗದೇಕಮಲ್ಲನ ರಾಣಿ ಸೋಮಲದೇವಿಯು ಸುಪಾಣಿಯನ್ನು ಆಳುತ್ತಿದ್ದಾಗ, ೧೦೩೭ರಲ್ಲಿ ಸರಸ್ವತಿಯನ್ನು ಪ್ರತಿಷ್ಠಾಪಿಸಿ, ದೇವಿಯ ಆರಾಧನೆಗೆ ಹಾಗೂ ಅಲ್ಲಿಯ ವಿದ್ಯಾರ್ಥಿಗಳ ಊಟ-ವಸತಿಗಳಿಗೆಂದು ೩೨ ಮತ್ತರು ಹೊಲ ಹಾಗೂ ಎರಡು ಮತ್ತರು ತೋಟಗಳನ್ನು ದಾನ ಕೊಟ್ಟ ಅಂಶಗಳನ್ನು ಈ ಶಾಸನ ತಿಳಿಸುತ್ತದೆ. ಮೇಲಾಗಿ ರಾಣಿ ಸೋಮಲದೇವಿಯ ಮನೆವರ್ಗಡೆ ದುರ್ಗಸಿಂಹನು ಕವಿಜನಾಶ್ರಯನಿಷ್ಠೆಯೆಂದು ಸುಪಾಣಿಯಲ್ಲಿ ಸರಸ್ವತಿ ಮಂಟಪವನ್ನು ಮಾಡಿಸಿದನೆಂತಲೂ ಇದು ದಾಖಲಿಸಿದೆ. ಇಲ್ಲಿಯ ಶಾಸನದಲ್ಲಿ ಬರುವ ದುರ್ಗಸಿಂಹನೇ ಪಂಚತಂತ್ರ ರಚಿಸಿದ ದುರ್ಗಸಿಂಹನೆಂಬ ಅಭಿಪ್ರಾಯವಿದ್ದು, ಈ ಶಾಸನದಲ್ಲಿ ಪಂಚತಂತ್ರದ ಒಂದು ಶ್ಲೋಕದ ಉಲ್ಲೇಖವಿದೆ. ಊರಲ್ಲಿಂದು ಮಲಖಾನ್ (ಮಲ್ಲಿಕಾರ್ಜುನ) ಗುಡಿ ಎಂದು ಹೇಳುವ ಆಯಾತಕಾರದ ಪ್ರಾಚೀನ ಮಂಟಪವಿದೆ. ಹದಿನಾರು ಕಂಬಗಳು ಹೊತ್ತಿನಿಂತಿರುವ ಈ ಮಂಟಪದ ಹಿಂಗೋಡೆಗೆ ಸಂಬಂಧಿಸಿದಂತೆ ಪೀಠವಿದೆ. ಉತ್ತರಾಭಿಮುಖವಾಗಿರುವ ಇದೇ ಶಾಸನೋಕ್ತ ಸರಸ್ವತಿ ಮಂಟಪವಾಗಿರುವಂತೆ ತೋರುತ್ತದೆ. ಉಳಿದಂತೆ ಊರಲ್ಲಿ ರೇವಣ ಸಿದ್ಧೇಶ್ವರ, ಹನುಮಂತ, ಸಿದ್ಧಲಿಂಗ, ಬೀರದೇವರು, ಅಂಬಾಭವಾನಿ, ಲಕ್ಷ್ಮಿ, ದ್ಯಾವಮ್ಮ, ವಿಠಲ, ಮರಗಮ್ಮ, ಮುಂತಾದ ನವೀನ ಗುಡಿಗಳಿದ್ದು, ನಂದೇ ಸಾಬ್ ದರ್ಗಾ ಕೂಡ ಇದೆ.

**ನಿಂಬರ್ಗಿ** (೫೯೬೦)ಯು ತಾಲೂಕು ಕೇಂದ್ರವಾದ ಆಳಂದದಿಂದ ದಕ್ಷಿಣಕ್ಕೆ ೨೦ ಕಿ.ಮಿ., ಸ್ಟೇಷನ್ ಗಾಣಗಾಪುರದಿಂದ ವಾಯವ್ಯಕ್ಕೆ ಸುಮಾರು ಎಂಟು ಕಿ.ಮೀ. ದೂರದಲ್ಲಿ ಆಳಂದ-ದೇವರ ಗಾಣಗಾಪುರ ರಸ್ತೆಯಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ ನಿಂಬರಗಿ ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಅಲಂದೆ-೧೦೦೦ಕ್ಕೆ ಸಂಬಂಧಿಸಿದ ಗೊಂಕ-೧೨೦ ಕಂಪಣಕ್ಕೆ ಸೇರಿತ್ತು. ಇಲ್ಲಿಂದ ಈವರೆಗೆ ನಾಲ್ಕು ಶಾಸನಗಳು ವರದಿಯಾಗಿವೆ. ಅವುಗಳಲ್ಲಿ ಮೂರು ಶಾಸನಗಳು ನೆರೆಯ ಗ್ರಾಮವಾದ 'ಅಗ್ರಹಾರ ಮಾಢಿಘಳ' (ಮಾಡಿಯಾಳ)ದ ಸ್ವಯಂಭು ಕೋಟಿ ಶಂಕರ

ದೇವಾಲಯ ಹಾಗೂ ಮಠಗಳ ನಿರ್ಮಾಣ ಹಾಗೂ ಅವುಗಳ ನಿರ್ವಹಣೆಗೆಂದು ಬಿಟ್ಟ ದತ್ತಿಗಳಾಗಿವೆ. ಊರ ನಡುವೆ ಇರುವ ಈಶ್ವರ ದೇಗುಲದ ನವರಂಗದಲ್ಲಿ ಇರುವ ಕಲ್ಯಾಣದ ಚಾಳುಕ್ಯ ಅರಸ ಮುಮ್ಮಡಿ ಸೋಮೇಶ್ವರನ ಕಾಲಕ್ಕೆ ಸೇರಿದ ೧೧೩೮ರ ಶಾಸನವು ನಿಂಬರಗಿ ಗ್ರಾಮವನ್ನು ಊರೊಡೆಯ ಕಲಿದೇವನ ಪೂರ್ವಜನಾದ ನಾರಾಯಣಚಾರ್ಯನು ಬಾದಾಮಿ ಚಾಳುಕ್ಯ ಅರಸ ವಿಕ್ರಮಾದಿತ್ಯನಿಂದ ದತ್ತಿಯಾಗಿ ಪಡೆದಿದ್ದು, ಕಲಿದೇವನ ತಂದೆಯಾದ ಚೀಮಾಳನಿಗೆ ಆರನೆಯ ವಿಕ್ರಮಾದಿತ್ಯನು ನಿಂಬರಗಾದಲ್ಲಿ ಪ್ರಭುವೆಂದು ಮಾನ್ಯ ಮಾಡಿದ್ದನ್ನು ಹೇಳುತ್ತ ೧೧೩೮ರಲ್ಲಿ ಕಲಿದೇವನು ನಿಬರಗಿಯಲ್ಲಿ ಅಭಿನವ ಕಲಿದೇವೇಶ್ವರ, ಚನ್ನಕೇಶವ ಹಾಗೂ ಉದಯಾದಿತ್ಯಾ ದೇವರುಗಳಿಗೆಂದು ಸುಂದರವಾದ ತ್ರಿಕೂಟ ದೇವಾಲಯವನ್ನು ನಿರ್ಮಿಸಿ, ಆ ದೇವರ ಪೂಜಾ ವಿಧಿಗೆ, ಸತ್ರಕ್ಕೆ ಹಾಗೂ ಪುರಾಣ ವಾಚನಕ್ಕೆಂದು ವಿವಿಧ ದಾನಗಳನ್ನು ಕೊಟ್ಟ ವಿಷಯವನ್ನು ಹೇಳುತ್ತದೆ. ಶಾಸನವಿರುವ ಈ ದೇಗುಲವೇ ಶಾಸನೋಕ್ತ ತ್ರಿಕೂಟವಾಗಿದ್ದು ಆಕರ್ಷಕವಾಗಿದೆ. ಉತ್ತರಾಭಿಮುಖವಾಗಿರುವ ಈ ದೇಗುಲವು ಪ್ರತ್ಯೇಕವಾದ ಮೂರು ಗರ್ಭಗೃಹ ಹಾಗೂ ಅಂತರಾಳಗಳನ್ನು ಹೊಂದಿದ್ದು ಎಲ್ಲಕ್ಕೂ ಸೇರಿದಂತೆ ಒಂದೇ ನವರಂಗವಿದ್ದು ಇದರ ಮುಂಭಾಗವು ಕಕ್ಷಾಸನವನ್ನು ಹೊಂದಿದೆ. ದಕ್ಷಿಣ ಹಾಗೂ ಪಶ್ಚಿಮ ದಿಕ್ಕುಗಳಲ್ಲಿರುವ ಗರ್ಭಗೃಹಗಳಲ್ಲಿ ಶಿವಲಿಂಗಗಳಿದ್ದರೆ ಪೂರ್ವದಿಕ್ಕಿನ ಗರ್ಭಗೃಹದಲ್ಲಿ ಆದಿತ್ಯ ಪೀಠವಿದೆ. ಇವುಗಳ ಬಾಗಿಲವಾಡಗಳನ್ನು ತ್ರಿಶಾಖಾ, ಚತುರ್‌ಶಾಖಾ ಹಾಗೂ ಪಂಚಶಾಖೆಗಳ ಅಲಂಕಾರಿಕ ಪಟ್ಟಿಕೆಗಳಿಂದ ಅಲಂಕರಿಸಲಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿಗಳಿವೆ. ಅಂತರಾಳದ ಬಾಗಿಲವಾಡಗಳಿಗೆ ಜಾಲಂಧ್ರಗಳಿದ್ದು,ಇಕ್ಕೆಲದಲ್ಲಿ ಚೌರಿಧಾರಿ ಪರಿಚಾರಿಕೆಯರಿದ್ದು ತೊಲೆಯನ್ನು ಆಕರ್ಷಕವಾದ ಮಕರ ತೋರಣಗಳಿಂದ ಅಲಂಕರಿಸಲಾಗಿದೆ. ನವರಂಗದ ನಡುವಣ ನುಣುಪಾದ ಕಂಬಗಳು ಮಿರಮಿರನೆ ಹೊಳೆಯುತ್ತಿದ್ದು, ಛತ್ತನ್ನು ಅಷ್ಟದಿಕ್ಪಾಲಕರಿಂದ ಆವೃತ್ತವಾದ ಕಮಲದಿಂದ ಅಲಂಕರಿಸಲಾಗಿದ್ದು ಚಿತ್ತಾಕರ್ಷಕವಾಗಿವೆ. ದೇವಾಲಯವನ್ನು ಪ್ರವೇಶಿಸಲು ಆನೆಯ ಕೈಪಿಡಿ ಇರುವ ಸೋಪಾನಗಳಿವೆ. ನವರಂಗದಲ್ಲಿ ಆರು ದೇವಕೋಷ್ಠಗಳಿದ್ದು ಹಿಂದೆ ಇವುಗಳಲ್ಲಿದ್ದ ಶಿಲ್ಪಗಳಿಂದು ಕಣ್ಮರೆಯಾಗಿವೆ. ದಕ್ಷಿಣ ಹಾಗೂ ಪಶ್ಚಿಮದ ಗರ್ಭಗೃಹ ಹಾಗೂ ಅಂತರಾಳಗಳ ಭಿತ್ತಿಯ ಅರೆ ಕಂಬಗಳ ನಡುವೆ, ನಟರಾಜ, ಭೈರವ, ಸ್ಥಾನಕ ಭಂಗಿಯಲ್ಲಿರುವ ದ್ವಿಬಾಹು ಗಣಪ, ಭೈರವಿ, ಮದೋನ್ಮತ್ತ ದಂಪತಿಗಳ ಮಿಥುನ ಶಿಲ್ಪ ಹಾಗೂ ವಿವಿಧ ಭಂಗಿಯಲ್ಲಿ ನಿಂತಿರುವ ಸುಂದರಿಯರ ನಾಲ್ಕೂವರೆ ಅಡಿ ಎತ್ತರದ ಉಬ್ಬು ಕೆತ್ತನೆಗಳು ನಯನ ಮನೋಹರವಾಗಿವೆ. ಎತ್ತರವಾದ ಜಗಲಿಯ ಮೇಲೆ ಇರುವ ಈ ಗುಡಿಯ ಅಧಿಷ್ಠಾನವು ವಜ್ರಾಲಂಕಾರ ಪಟ್ಟಿಕೆಯನ್ನು ಹೊಂದಿದ್ದು ಕಕ್ಷಾಸನದ ಹಿಂಬದಿಯಲ್ಲಿ ಸಾಲಾಗಿ ಹೊರಟಿರುವ ಆನೆಗಳ ಸುಂದರವಾದ ಉಬ್ಬು ಕೆತ್ತನೆ ಇದೆ. ಈ ದೇಗುಲದ ಎದುರಿಗಿರುವ ಹನುಮಂತನ ಗುಡಿಯ ಮುಂದೆ ಭೈರವ ಹಾಗೂ ಭೈರವಿಯರ ಸುಂದರವಾದ ಶಿಲ್ಪಗಳಿವೆ. ಇಲ್ಲಿಯ ಈಶ್ವರ ದೇಗುಲ ಇನ್ನೊಂದು ಸುಂದರ ಕಲಾಕೃತಿಯಾಗಿದ್ದು ಭವ್ಯವಾಗಿದೆ. ವಿಶಾಲವಾದ ಪ್ರಾಕಾರದಿಂದ ಆವೃತ್ತವಾಗಿರುವ ಈ ದೇಗುಲವು ಗರ್ಭಗೃಹ, ಅಂತರಾಳ ಹಾಗೂ ತೆರೆದ ನವರಂಗಗಳನ್ನು ಹೊಂದಿದ್ದು ನವರಂಗವನ್ನು ಪ್ರವೇಶಿಸಲು ದಕ್ಷಿಣದಿಂದ ಮಾರ್ಗವಿದ್ದು ದ್ವಾರಮಂಟಪವಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಇದರ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದ್ದು, ಲಲಾಟದಲ್ಲಿ ಗಣಪತಿಯ ಬಿಂಬವಿದೆ. ಗರ್ಭಗೃಹದ ಹೊಸ್ತಿಲು ಆಕರ್ಷಕವಾಗಿದ್ದು, ಮುಂದಿರುವ ಚಂದ್ರಶಿಲೆಯೂ ಸುಂದರವಾಗಿದೆ. ಅಂತರಾಳದ ಇಕ್ಕೆಲದಲ್ಲಿ ಸುಂದರವಾದ ಜಾಲಂಧ್ರಗಳಿವೆ. ನವರಂಗದಲ್ಲಿ ನಾಲ್ಕು ದೇವಕೋಷ್ಠಗಳಿವೆ. ನವರಂಗದ ಕಂಬಗಳು ನುಣುಪಾಗಿದ್ದು, ಹೊಳೆಯುತ್ತಿದ್ದರೆ, ನಡುವಣ ಛತ್ತು ಅಷ್ಟದಿಕ್ಪಾಲಕರಿಂದ ಆವೃತ್ತವಾದ ಕಮಲದಿಂದ ಅಲಂಕೃತಗೊಂಡಿದೆ. ನವರಂಗ ಹಾಗೂ ದ್ವಾರಮಂಟಪಗಳ ಅಂಚಲ್ಲಿ ಕಕ್ಷಾಸನಗಳಿವೆ. ಈ ದೇವಾಲಯವು ಅಧಿಷ್ಠಾನ ಭಾಗದಿಂದ ಮೇಲೆ ಜೀರ್ಣೋದ್ಧಾರಗೊಂಡಿದ್ದರೂ ಮೂಲ ವಿನ್ಯಾಸ ಉಳಿದಿದೆ. ಇದು ಸುಮಾರು ೧೨ನೇ ಶತಮಾನಕ್ಕೆ ಸೇರಿದ ರಚನೆಯಾಗಿದ್ದು ಸುಂದರವಾಗಿದೆ.

ಊರ ನಡುವೆ ಇರುವ ಕುಂಬಾರ ಮನೆ ದೇಗುಲವು ಪ್ರಾಚಿನದ್ದಾಗಿದ್ದು ಇಂದು ಚೌಕಾಕಾರದ ನವರಂಗ ಭಾಗವಷ್ಟೆ ಉಳಿದಿದ್ದು ಮೂರ್ತಿ ಶಿಲ್ಪಗಳಾವುವೂ ಇಲ್ಲಿಲ್ಲ. ಇದರ ಬಳಿಯಲ್ಲೇ ಧರ್ಮರಾಜ ಮಠವೆಂದು ಹೇಳುವ ಪ್ರಾಚೀನ ದೇಗುಲದ ಅವಶೇಷವಿದೆ. ಇವು ಸುಮಾರು ೧೨ನೇ ಶತಮಾನದ ರಚನೆಗಳಾಗಿವೆ. ಇಲ್ಲಿಯ ಮಲ್ಲಿಕಾರ್ಜುನ ದೇವಾಲಯವು ಆಕರ್ಷಕವಾದ ಇನ್ನೊಂದು ಪ್ರಾಚೀನ ದೇವಾಲಯವಾಗಿದ್ದು ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು ಉತ್ತರದಿಂದ ಪ್ರವೇಶವಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಇದರ ಬಾಗಿಲವಾಡವು ಪಂಚಶಾಖಾಲಂಕೃತವಾಗಿದ್ದು ಸುಂದರವಾಗಿದೆ. ಅಂತರಾಳದಲ್ಲಿ ಆಕರ್ಷಕವಾದ ಚಂದ್ರಶಿಲೆ ಇದ್ದು ಮಕರ ತೋರಣದಿಂದ ಇದರ ತೊಲೆಯನ್ನು

ಅಲಂಕರಿಸಲಾಗಿದೆ. ಇಲ್ಲಿಯ ಕಲ್ಲೇಶ್ವರ ಹಾಗೂ ಸೋಮೇಶ್ವರ ದೇವಾಲಯಗಳು ಗಾತ್ರದಲ್ಲಿ ಕಿರಿದಾದರೂ ಪ್ರಾಚೀನ ಕಾಲದ್ದಾಗಿದ್ದು ಶಿಥಿಲಾವಸ್ಥೆಯಲ್ಲಿವೆ.

ಊರ ಹೊರಗೆ ಇರುವ ಶರಣ ಬಸವೇಶ್ವರ ದೇವಾಲಯವು ವಿಶಾಲವಾದ ಬಯಲಲ್ಲಿದ್ದು ಇದನ್ನು ಗುಲಬರ್ಗಾದ ಶರಣ ಬಸವೇಶ್ವರ ದೇವಾಲಯದ ಮಾದರಿಯಲ್ಲಿ ನಿರ್ಮಿಸಿದ್ದಾರೆ. ಮೂರು ದಿನ ನಡೆಯುವ ಇದರ ವಾರ್ಷಿಕ ಜಾತ್ರೆಯಲ್ಲಿ ಹೊಸ್ತಿಲ ಹುಣ್ಣಿಮೆಯಂದು ತೇರನ್ನು ಎಳೆಯುತ್ತಾರೆ.

ಉಳಿದಂತೆ ಊರಲ್ಲಿ ಮಲ್ಲಯ್ಯ, ನಿರಹಂಕಾರ, ಜಟ್ಟಿಂಗರಾಯ, ಹನುಮಂತ, ಮಾಲಿಂಗರಾಯ, ಬಸವಣ್ಣ (ನಾಲ್ಕು ಗುಡಿಗಳು), ಗಂಗಮ್ಮ, ಮರಗಮ್ಮ ಮುಂತಾದ ಇತ್ತೀಚಿನ ದೇವಾಲಯಗಳಿದ್ದು ವಿರಕ್ತ ಮಠ, ಗದ್ದುಗೆ ಮಠ ಹಾಗೂ ಕುಂಬಾರ ಮಠಗಳಿದ್ದು ಗವೀಶ್ವರ ಮಠ ಪಾಳು ಬಿದ್ದಿದೆ. ಇಲ್ಲಿದ್ದ ಪ್ರಾಚೀನ ಜೈನ ಬಸದಿಯಿಂದು ತಿಪ್ಪೆಗುಂಡಿಯಾಗಿದೆ. ಇವುಗಳ ಜೊತೆಗೆ ಒಂದು ಜುಮ್ಮಾ ಮಸೀದಿ, ಹಜರತ್ ಬಾಬಾ ಫಕ್ರುದ್ದೀನ್ ಹಾಗೂ ಷಾ ಹುಸೇನ್ ಬಾದ್‌ಶಹಾರ ದರ್ಗಾ ಕೂಡ ಇಲ್ಲಿವೆ.

**ನಿಡಗುಂದಿ**(೫೦೫೦)ಯು ತಾಲೂಕು ಕೇಂದ್ರವಾದ ಚಿಂಚೋಳಿಯಿಂದ ದಕ್ಷಿಣಕ್ಕೆ ೨೬ ಕಿ.ಮೀ., ಸೇಡಂನಿಂದ ಉತ್ತರಕ್ಕೆ ೧೬ ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಇಲ್ಲಿಂದ ಈವರೆಗೆ ಎರಡು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ನವಕೋಟಿ ನಾರಾಯಣ ಗುಡಿಯ ಕಂಬದ ಮೇಲಿನ ಶಾಸನವು ರಾಷ್ಟ್ರಕೂಟ ಅರಸ ಅಕಾಲವರ್ಷನ ಆಳ್ವಿಕೆಗೆ ಸೇರಿದ್ದು ಇದರಲ್ಲಿ ರಾಜನ ಬಿರುದು ಹಾಗೂ ವರ್ಷ (೯೩೯) ಅಷ್ಟೇ ಇದ್ದು, ಶಾಸನ ಅಪೂರ್ಣವಾಗಿದ್ದರೆ, ಕಾಳಮ್ಮನ ಗುಡಿ ಕಂಬದ ಮೇಲಿರುವ ವಿಷ್ಣುವರ್ಧನ ವೀರಪೆರ್ಮಾಡಿದೇವನ ಕಾಲದ ಶಾಸನ ದತ್ತಿ ಶಾಸನವಾಗಿದ್ದು, ವಿವರ ಅಸ್ಪಷ್ಟವಾಗಿದೆ. ಇತ್ತೀಚಿನದಾದ ವೀರಭದ್ರ ಗುಡಿಯು ಗರ್ಭಗೃಹ ಹಾಗೂ ನವರಂಗಗಳನ್ನು ಹೊಂದಿದ್ದು, ಒಳಗೆ ವೀರಭದ್ರನ ಮೂರ್ತಿ ಇದೆ. ನವರಂಗದ ಮೇಲ್ಭಾಗದಲ್ಲಿ ಆಕರ್ಷಕವಾದ ಗಾರೆ ಶಿಲ್ಪಗಳಿದ್ದು, ಮಿಥುನ ಶಿಲ್ಪಗಳೂ ಇವೆ. ಈ ಗುಡಿಯ ಆವರಣದಲ್ಲೇ ಸ್ವಲ್ಪ ಎಡಕ್ಕೆ ಎದುರು ಬದುರಾಗಿ ಎರಡು ದೇವಾಲಯಗಳಿದ್ದು, ಎರಡರ ನವರಂಗಗಳನ್ನು ಒಗ್ಗೂಡಿಸಲಾಗಿದೆ. ನವನಾರಾಯಣ ದೇವರ ಗುಡಿ ಎಂದು ಕರೆಯಲ್ಪಡುವ ಈ ಗುಡಿಯ ಗರ್ಭಗೃಹಗಳಲ್ಲಿ ಒಂದರಲ್ಲಿ ನಾರಾಯಣನಿದ್ದು, ಇದರ ಬಾಗಿಲವಾಡವು ಚತುರ್ ಶಾಖಾಲಂಕೃತವಾಗಿದ್ದು, ಜೋಡಿ ಹಂಸವಾಳಿ ಪಟ್ಟಿಕೆಯೂ ಇದೆ. ಅಂತರಾಳವನ್ನು ಮಕರ ತೋರಣದಿಂದ ಅಲಂಕರಿಸಲಾಗಿದೆ. ನವರಂಗದಲ್ಲಿ ಎರಡು ದೇವಕೋಷ್ಠಗಳಿದ್ದು, ಒಂದರಲ್ಲಿ ಶಿವಲಿಂಗ, ಇನ್ನೊಂದರಲ್ಲಿ ಭೈರವ ಶಿಲ್ಪವಿದೆ. ನವರಂಗದಲ್ಲಿ ನಡುವೆ ಸೂರ್ಯನ ಶಿಲ್ಪವಿದ್ದು ಇದರಿಂದ ಇದೇ ಸೂರ್ಯ ದೇವಾಲಯವಾಗಿದ್ದಿರಬಹುದೆಂದು ಊಹಿಸಬಹುದಾಗಿದೆ. ಇಲ್ಲಿಯೇ ಕಂಬವೊಂದರ ಮೇಲೆ ೯೩೯ರ ಶಾಸನವಿದೆ. ಈ ಗುಡಿಗೆ ಎದುರಾಗಿ ಈಶ್ವರ ದೇವಾಲಯವಿದ್ದು ಇದಕ್ಕೆ ದ್ರಾವಿಡ ಶೈಲಿಯ ಶಿಖರವಿದ್ದು, ನವರಂಗದ ಕಂಬಗಳು ಸುಂದರವಾಗಿವೆ. ಈ ದೇವಾಲಯಗಳು ಸುಮಾರು ೧೦-೧೧ನೇ ಶತಮಾನದ ರಚನೆಗಳಾಗಿವೆ. ಗುಡಿಯ ಆವರಣದಲ್ಲಿ ಗಜಲಕ್ಷ್ಮಿ, ಆದಿತ್ಯ, ಶೈವ ದ್ವಾರಪಾಲಕರು, ಪದ್ಮಾಸೀನ ಹಾಗೂ ಸ್ಥಾನಕ ತೀರ್ಥಂಕರರ ಶಿಲ್ಪಗಳಿವೆ. ಇಲ್ಲಿಯ ಕಾಳಿಕಾ ದೇವಿ ದೇವಾಲಯ ಇನ್ನೊಂದು ಪ್ರಾಚೀನ ದೇಗುಲವಾಗಿದೆ. ಒಂದೇ ಸಾಲಿನಲ್ಲಿ ಎರಡು ಗರ್ಭಗೃಹಗಳಿದ್ದು, ಎರಡಕ್ಕೂ ಸೇರಿದಂತೆ ವಿಶಾಲವಾದ ನವರಂಗವಿದ್ದು, ಎರಡು ದ್ವಾರಗಳಿವೆ. ಈ ಗರ್ಭಗೃಹಗಳಲ್ಲಿ ಶಿವಲಿಂಗವಿದ್ದು, ಬಾಗಿಲವಾಡಗಳು ಕ್ರಮವಾಗಿ ಮೂರು ಮತ್ತು ನಾಲ್ಕು ಅಲಂಕಾರಿಕ ಶಾಖೆಗಳನ್ನು ಹೊಂದಿದ್ದು ಆಕರ್ಷಕವಾಗಿವೆ. ಇಲ್ಲಿ ದುರ್ಗಾ, ಸಪ್ತಮಾತೃಕಾ, ಮುಕ್ಕಾದ ಚೌವ್ವೀಸ್ ತೀರ್ಥಂಕರ, ಹಾಗೂ ಸೂರ್ಯನ ಶಿಲ್ಪಗಳಿವೆ. ನವರಂಗದ ಕಂಬದ ಮೇಲೆ ರಾಮಾಯಣ ಸಂಬಂಧಿ ಕಥನಗಳನ್ನು ಹಾಗೂ ವಿವಿಧ ದೇವತೆಗಳನ್ನು ಕೆತ್ತಲಾಗಿದ್ದು, ಪಂಚತಂತ್ರದಲ್ಲಿ ಬರುವ ನರಿ-ಸಿಂಹ, ಮಂಗ-ಬೆಣ್ಣೆ, ಕಥೆಯ ಶಿಲ್ಪ ಕೆತ್ತನೆಗಳು ಇಲ್ಲಿರುವುದು ಗಮನಾರ್ಹವಾಗಿದ್ದು, ಮೊದಲ ಬಾರಿಗೆ ಇಲ್ಲಿ ವರದಿಯಾಗುತ್ತಿದೆ. ಈ ಗುಡಿಗೆ ಸಂಯುಕ್ತವಾಗಿ ಇರುವ ಶಾಲಾ ಮಾದರಿಯ ಜೋಡಿ ಶಿಖರವು ದ್ರಾವಿಡ ಶೈಲಿಯಲ್ಲಿದ್ದು, ಗುಡಿ ಜೀರ್ಣೋದ್ಧಾರಗೊಂಡಿದೆ. ಇಲ್ಲಿರುವ ಜೈನ ಬಸದಿಯು ಸುಮಾರು ೧೨ನೇ ಶತಮಾನಕ್ಕೆ ಸೇರಿದ್ದು, ಇಂದು ಪಾಳು ಬಿದ್ದಿದೆ. ಊರ ಹೊರಗೆ ಕಪಾಳರ ಹೊಲದಲ್ಲಿ ಇರುವ ಈಶ್ವರ ಗುಡಿಯ ಗರ್ಭಗೃಹ ಭಾಗವಷ್ಟೇ ಉಳಿದಿದ್ದು, ಉಳಿದ ಭಾಗ ನಶಿಸಿ ಹೋಗಿದೆ. ಕದಂಬ ನಾಗರ ಶಿಖರವನ್ನುಳ್ಳ ಈ ಗರ್ಭಗುಡಿಯಲ್ಲಿ ಶಿವಲಿಂಗವಿದ್ದು, ಇದರ

ಬಾಗಿಲವಾಡವು ತ್ರಿಶಾಖಾಲಂಕೃತವಾಗಿದ್ದು, ಹಂಸಾವಳಿಯ ಕೆತ್ತನೆಯಿದೆ. ಇದು ಸುಮಾರು ೧೧ನೇ ಶತಮಾನದ ರಚನೆಯಾಗಿದೆ. ಉಳಿದಂತೆ ಊರಲ್ಲಿ ಹನುಮಂತ, ವಿಠಲ, ವೆಂಕಟೇಶ್ವರ, ಬಸವಣ್ಣ, ವೆಂಕಟರಮಣ, ದ್ಯಾಮವ್ವ, ಮರಗಮ್ಮಮುಂತಾದ ನವೀನ ದೇವಾಲಯಗಳಿವೆ. ಹನುಮಂತನ ಗುಡಿ ಮುಂದೆ ಗಣಪತಿ ಹಾಗೂ ನಂದಿ ಶಿಲ್ಪಗಳಿದ್ದು, ಸಪ್ತಾಶ್ವ, ಅರುಣ ಹಾಗೂ ಇಕ್ಕೆಲದಲ್ಲಿ ಗಾಲಿಯನ್ನುಳ್ಳ ಆದಿತ್ಯ ಪೀಠವು ಬಹಳ ವಿಶಿಷ್ಟವಾಗಿದೆ. ಇಲ್ಲಿ ಮಸೀದಿ ಹಾಗೂ ದರ್ಗಾ ಕೂಡ ಇವೆ.

**ನೆಲೋಗಿ (ನೆಲವಗಿ)** (೪೩೨೬)ಯು ತಾಲೂಕು ಕೇಂದ್ರವಾದ ಜೇವರ್ಗಿಯಿಂದ ವಾಯವ್ಯಕ್ಕೆ ೨೩ ಕಿ.ಮೀ., ದೂರದಲ್ಲಿ ಜೇವರ್ಗಿ-ಸಿಂಧಗಿ ರಸ್ತೆಯಲ್ಲಿ ಭೀಮಾನದಿಯ ಬಲದಂಡೆಯ ಮೇಲಿರುವ ಚಾರಿತ್ರಿಕ ಮಹತ್ವದ ಊರಾಗಿದೆ. ಬಸವಣ್ಣನವರ ಸಮಕಾಲೀನ ಶರಣರಲ್ಲಿ ಪ್ರಮುಖರಾದ ಪವಾಡ ಪುರುಷ ಕೋಲು ಶಾಂತಯ್ಯ ಅಥವಾ ನೆಲವಗಿ ಶಾಂತಯ್ಯ ಇಲ್ಲಿಯವರಾಗಿದ್ದು, ಅವರ ಗದ್ದುಗೆಯೂ ಇಲ್ಲಿದೆ. ಇಲ್ಲಿಂದ ಈವರೆಗೆ ಯಾವುದೇ ಶಾಸನಗಳು ವರದಿಯಾಗಿಲ್ಲ. ಆದರೆ ಸುಮಾರು ೧೧-೧೨ನೇ ಶತಮಾನಕ್ಕೆ ಸೇರಿದ ಕಲ್ಯಾಣದ ಚಾಳುಕ್ಯರ ಕಾಲಕ್ಕೆ ಸೇರಿದ ದೇವಾಲಯಗಳಿದ್ದು, ಅವುಗಳಲ್ಲಿ ಹೂಗಾರ ಓಣಿಯಲ್ಲಿರುವ ಈಶ್ವರ ದೇಗುಲವು ಹಿಂದೆ ಜೈನ ಬಸದಿಯಾಗಿದ್ದು, ನಂತರದಲ್ಲಿ ಶೈವ ದೇಗುಲವಾಗಿ ಮಾರ್ಪಟ್ಟಿದೆ. ದಕ್ಷಿಣಾಭಿಮುಖವಾಗಿರುವ ಈ ದೇವಾಲಯವು ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಪಾರ್ಶ್ವ ದ್ವಾರವಿದೆ. ಹಿಂದೆ ಗರ್ಭಗೃಹದಲ್ಲಿ ಪಾರ್ಶ್ವನಾಥ ತೀರ್ಥಂಕರನ ಪ್ರತಿಮೆಯಿದ್ದ ಸ್ಥಳದಲ್ಲಿಂದು ಶಿವಲಿಂಗವಿದೆ. ಇದರ ದ್ವಾರಬಂಧವು ತ್ರಿಶಾಖಾಲಂಕೃತವಾಗಿದ್ದು, ಲಲಾಟದಲ್ಲಿ ಜಿನ ಬಿಂಬವಿದೆ. ಅಂತರಾಳದ ಎರಡು ದೇವಕೋಷ್ಠಗಳಲ್ಲೊಂದರಲ್ಲಿ ಮುಕ್ಕೊಡೆ ಭಾಗವಿದೆ. ನವರಂಗವನ್ನು ಹೊತ್ತು ನಿಂತಿರುವ ನಾಲ್ಕು ಕಂಬಗಳು ಚರಕಿಯಂತ್ರ ನಿರ್ಮಿತ ಚಾಳುಕ್ಯ ಕಂಬಗಳಾಗಿದ್ದು, ಆಕರ್ಷಕವಾದ ಕಮಲ ಹಾಗೂ ಮುತ್ತಿನ ಹಾರಗಳ ಕೆತ್ತನೆಗಳಿಂದ ಅಲಂಕರಿಸಲಾಗಿದ್ದು ಒಂದು ಕಂಬದ ನಾಲ್ಕು ಮುಖಗಳ ಮೇಲೆ ಪದ್ಮಾಸೀನ ತೀರ್ಥಂಕರನ ಉಬ್ಬು ಕೆತ್ತನೆಗಳಿದ್ದು, ಒಂದೆರಡು ಕಂಬಗಳ ಮೇಲಿದ್ದ ಶಾಸನಗಳು ಹಾಳಾಗಿವೆ. ನವರಂಗದ ಛತ್ತನ್ನು ಬಳ್ಳಿಗಳಿಂದ ಆವೃತವಾದ ಸುಂದರ ಕಮಲದಿಂದ ಅಲಂಕರಿಸಲಾಗಿದೆ. ನವರಂಗದ ಬಾಗಿಲವಾಡವು ಪಂಚಶಾಖಾಲಂಕೃತವಾಗಿದ್ದು, ಇದರಲ್ಲಿ ಎರಡನೆಯ ಪಟ್ಟಿಕೆಯಲ್ಲಿ ಪದ್ಮಾಸೀನ ತೀರ್ಥಂಕರರ ಕಿರು ಕೆತ್ತನೆಗಳಿದ್ದು, ಅದೇ ರೀತಿ ಚೌರಿಧಾರಿ ವೈಷ್ಣವ ದ್ವಾರಪಾಲಕರು, ಬದಿಯಲ್ಲಿ ಜಿನ ತೀರ್ಥಂಕರರ ಕಿರು ಕೆತ್ತನೆಗಳಿರುವುದು ಗಮನಾರ್ಹವಾಗಿದೆ. ಅದೇ ರೀತಿ ಲಲಾಟದಲ್ಲೂ ಜಿನ ತೀರ್ಥಂಕರ ಕೆತ್ತನೆ ಇದ್ದು, ಪೂರ್ಣ ಕುಂಭಗಳಿವೆ. ಸಾಂದರ್ಭಿಕ ಆಧಾರಗಳಿಂದ ಇದು ಪಾರ್ಶ್ವನಾಥ ಬಸದಿಯಾಗಿತ್ತೆಂದು ಗೊತ್ತಾಗುತ್ತದೆ. ಗುಜಗೊಂಡರ ಓಣಿಯಲ್ಲಿರುವ ಕಲ್ಲಾನಿಂಗದೇಗುಲವು ಕೂಡ ಸುಮಾರು ೧೧-೧೨ನೇ ಶತಮಾನದ್ದಾಗಿದ್ದು, ಗರ್ಭಗೃಹವಷ್ಟೇ ಇದ್ದು ಉಳಿದ ಭಾಗಗಳು ನಶಿಸಿಹೋಗಿವೆ. ಗರ್ಭಗೃಹದಲ್ಲಿ ಬೃಹತ್ತಾದ ಮೂರು ಶಿವಲಿಂಗಗಳಿದ್ದು, ಇದರ ಬಾಗಿಲವಾಡವು ತ್ರಿಶಾಖಾಲಂಕಾರದಿಂದ ಕೂಡಿದೆ. ಈ ಗುಡಿಯ ಆವರಣದಲ್ಲಿ ಎರಡು ವೀರಗಲ್ಲುಗಳು ಹಾಗೂ ಮುಕ್ಕಾದ ಸಪ್ತಮಾತೃಕಾ ಪಟ್ಟಿಕೆಗಳಿವೆ. ಭೀಮಾ ನದಿಯ ದಂಡೆಯ ಮೇಲಿರುವ ನೀಲಕಂಠೇಶ್ವರ ದೇಗುಲವು ಅಂತರ್ಗತ ದೇವಾಲಯವಾಗಿದ್ದು ಸುಮಾರು ೧೧-೧೨ನೇ ಶತಮಾನದ ರಚನೆಯಾಗಿದ್ದು, ಗರ್ಭಗೃಹದಲ್ಲಿ ಶಿವಲಿಂಗವಿದೆ. ಇದು ಅನುಷ್ಠಾನಕ್ಕೆ ಕುಳಿತುಕೊಳ್ಳುವ ಸ್ಥಳವಾಗಿದ್ದು ಶರಣ ಶಾಂತಯ್ಯ ಇಲ್ಲಿ ಅನುಷ್ಠಾನಕ್ಕೆ ಕುಳಿತುಕೊಳ್ಳುತ್ತಿದ್ದನೆಂಬ ಐತಿಹ್ಯ ಇದೆ.

ಊರ ಪ್ರವೇಶದಲ್ಲೇ ಬಜಾರಿನಲ್ಲಿರುವ ಹನುಮಂತ ದೇವರ ಗುಡಿಯು ಕಲ್ಯಾಣದ ಚಾಳುಕ್ಯರ ಕಾಲದ ಕಂಬಗಳನ್ನು ಬಳಸಿ ನಂತರದಲ್ಲಿ ಕಟ್ಟಿದ ದೇವಾಲಯವಾಗಿದ್ದು, ಗರ್ಭಗೃಹ, ಪ್ರದಕ್ಷಿಣಾಪಥ ಹಾಗೂ ಸಭಾ ಮಂಟಪಗಳನ್ನು ಹೊಂದಿದ್ದು, ಬಹಳ ಹಾಳಾಗಿರುವ ಎರಡು ಶಾಸನ, ಎರಡು ವೀರಗಲ್ಲು ಹಾಗೂ ಒಂದು ವೀರ ಮಾಸ್ತಿ ಕಲ್ಲುಗಳನ್ನು ಈ ಗುಡಿಯ ಪ್ರಾಕಾರದಲ್ಲಿ ಕಾಣಬಹುದಾಗಿದ್ದು, ಇದಕ್ಕೆ ಸುಂದರವಾದ ದ್ವಾರ ಗೋಪುರವಿದೆ. ಊರ ಹೊರಗೆ ಅಣ್ಣ ಬಸಪ್ಪನ ಗುಡಿಯಿದ್ದು, ೧೨ನೇ ಶತಮಾನದ ಚಾಳುಕ್ಯ ಕಂಬಗಳನ್ನು ಬಳಸಿ ಇದನ್ನು ನಿರ್ಮಿಸಲಾಗಿದೆ.

ನೆಲವಿಗಿಯ ಶಿವಶರಣ ಕೋಲ ಶಾಂತಯ್ಯನ ಉಲ್ಲೇಖವಿರುವ ೧೧೬೨ರ ಭೂಯ್ಯಾರ(ಬಿಜಾಪುರ ಜಿಲ್ಲೆ) ಹಾಗೂ ೧೧೮೭ರ ಶಿರವಾಳದ ಶಾಸನಗಳನ್ನು ವಿದ್ವಾಂಸರು ಈಗಾಗಲೇ ಗುರುತಿಸಿದ್ದು, ನೆಲುವಿಗೆ ಸಾತಿದೇವ (ಶಾಂತಯ್ಯ) ಹಾಗೂ ಅವನ ಮೊಮ್ಮಗನವರೆಗಿನ ವಂಶಜರನ್ನು ದಾಖಲಿಸಿರುವ ಅರಕಲಗೂಡು ತಾಲೂಕಿನ ಬಸವಾಪಟ್ಟಣದ ೧೨೬೧ರ ಶಾಸನವು ಅಷ್ಟೇ ಮಹತ್ವದ್ದಾಗಿದೆ. ಉಳಿದಂತೆ ಊರಲ್ಲಿ ಬಸವೇಶ್ವರ, ಬೀರಲಿಂಗ, ಜಟ್ಟಿಂಗರಾಯ, ಮಲ್ಲಯ್ಯ,

ಲಕ್ಷ್ಮಿ, ದೇವಮ್ಮ, ಚೌಡಮ್ಮ, ಲಕ್ಕಮ್ಮ ಮುಂತಾದ ನವೀನ ದೇವಸ್ಥಾನಗಳಿದ್ದು, ವೇದಾನಂದ ಸ್ವಾಮಿಗಳ ಸಮಾಧಿ ಹಾಗೂ ಕಡ್ಲೆಪ್ಪನ (ಶಿವಾನಂದೇಶ್ವರ) ಮಠಗಳಿವೆ. ಎರಡು ಮಸೀದಿಗಳಿದ್ದು, ಲಾಡ್ಲೆ ಮಶಾಕ್ ಹಾಗೂ ಮೆಹಬೂಬು ಸುಬಾನಿಯ ದರ್ಗಾಗಳೂ ಇವೆ.

**ಪಡಸಾವಳಗಿ** (೩,೨೭೬)ಯು ತಾಲೂಕು ಕೇಂದ್ರವಾದ ಆಳಂದದಿಂದ ಪಶ್ಚಿಮಕ್ಕೆ ೧೨ ಕಿ.ಮೀ. ದೂರದಲ್ಲಿದ್ದು ಪ್ರಾಚೀನ ಶಾಸನಗಳಲ್ಲಿ 'ಪಟ್ಟ ಸಾವಳಿಗೆ' ಎಂದೇ ಉಲ್ಲೇಖಗೊಂಡಿರುವ ಈ ಊರಿಂದ ಈವರೆಗೆ ವರದಿಯಾಗಿರುವ ಏಕೈಕ ಶಾಸನವು ಕಲ್ಲೇಶ್ವರ ಗುಡಿ ಮುಂದಿದ್ದು ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲದ್ದಾಗಿದೆ. ಈ ಶಾಸನವು ೧೧೧೧ರಲ್ಲಿ ವಿವಿಧ ಅಧಿಕಾರಿಗಳು ಪಟ್ಟ ಸಾವಳಿಗೆಯ ಕಲಿದೇವೇಶ್ವರ, ಸಿಂಗೇಶ್ವರ ಹಾಗೂ ಸೋಮೇಶ್ವರ ದೇವರುಗಳಿಗೆ ದಾನ ಬಿಟ್ಟ ವಿಷಯವನ್ನು ದಾಖಲಿಸಿದೆ. ಊರಲ್ಲಿ ಕುಂಬಾರ ಓಣಿಯಲ್ಲಿರುವ ಕಲ್ಲೇಶ್ವರ ಗುಡಿಯು ಶಾಸನೋಕ್ತ ತ್ರಿಕೂಟ ದೇವಾಲಯವಾಗಿದ್ದು, ಮೂರು ಪ್ರತ್ಯೇಕ ಗರ್ಭಗೃಹ ಹಾಗೂ ತೆರೆದ ಅಂತರಾಳಗಳನ್ನು ಹೊಂದಿದ್ದು, ಮೂರಕ್ಕೂ ಸೇರಿದಂತೆ ಒಂದೇ ನವರಂಗವಿದೆ. ಪ್ರಧಾನ ಗರ್ಭಗೃಹ ಹಾಗೂ ದಕ್ಷಿಣದ ಗರ್ಭಗೃಹಗಳಲ್ಲಿ ಶಿವಲಿಂಗಗಳಿದ್ದು ಉಳಿದೊಂದು ಖಾಲಿ ಇದೆ. ಇವುಗಳ ಬಾಗಿಲವಾಡಗಳೆಲ್ಲ ತ್ರಿಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿಗಳಿವೆ. ಪ್ರಧಾನ ಗರ್ಭಗೃಹದ ಹೊಸ್ತಿಲು ಆಕರ್ಷಕವಾಗಿದ್ದು ಮುಂದೆ ಸುಂದರವಾದ ಚಂದ್ರಶಿಲೆ ಇದೆ. ನವರಂಗದಲ್ಲಿ ಎರಡು ದೇವಕೋಷ್ಠಗಳಿದ್ದು ಅವುಗಳಲ್ಲಿ ಕೇಶವ ಹಾಗೂ ನಾಗಶಿಲ್ಪಗಳಿವೆ. ನವರಂಗದ ಮುಂಭಾಗದಲ್ಲಿ ಕಕ್ಷಾಸನವಿದೆ. ಈ ಗುಡಿಯ ಭಿತ್ತಿಯು ನಿರಾಡಂಬರವಾಗಿದ್ದು ಬಳಿಯಲ್ಲೇ ವೀರಗಲ್ಲೊಂದಿದೆ.

ಈ ಗುಡಿಯ ಬಲಭಾಗದಲ್ಲಿ ಸರಸ್ವತಿ ಗುಡಿ ಇದ್ದು ಗರ್ಭಗೃಹದಲ್ಲಿ ಪದ್ಮಾಸೀನ ಸರಸ್ವತಿಯ ಸುಂದರ ಶಿಲ್ಪವಿದೆ. ಇದರ ಬಾಗಿಲವಾಡವು ಚತುರ್‌ಶಾಖಾಲಂಕೃತವಾಗಿದ್ದು, ಲಲಾಟದಲ್ಲಿ ಗಣಪತಿ ಕೆತ್ತನೆ ಇದೆ. ಅರ್ಧ ಮಂಟಪದ ಗೋಡೆಯ ಮೇಲೆ ನಾಟ್ಯ ಗಣಪನ ಸುಂದರ ಉಬ್ಬು ಶಿಲ್ಪವಿದೆ. ಇದು ಹಿಂದೆ ಶಾಲೆಯಾಗಿದ್ದಂತೆ ತೋರುತ್ತದೆ. ಊರಲ್ಲಿ ಭಾಗಶಃ ಶಿಥಿಲವಾಗಿರುವ ಸೋಮೇಶ್ವರ ಹಾಗೂ ಶಂಭುಲಿಂಗದೇವರ ಪ್ರಾಚೀನ ದೇವಾಲಯಗಳಿವೆ. ಚನ್ನಕೇಶವ ದೇವಾಲಯವು ಅಂತರ್ಗತ ಗುಡಿಯಾಗಿದ್ದು ನೆಲಮಾಳಿಗೆಯಲ್ಲಿ ಸುಮಾರು ೧೨ನೇ ಶತಮಾನಕ್ಕೆ ಸೇರಿದ ಸೂಕ್ಷ್ಮ ಕೆತ್ತನೆಯಿಂದ ಕೂಡಿದ ಚನ್ನಕೇಶವನ ಆಳೆತ್ತರದ ಭವ್ಯ ಶಿಲ್ಪವಿದೆ. ಊರ ಹೊರಗೆ ಇರುವ ರೇವಣಸಿದ್ಧೇಶ್ವರ ದೇವಾಲಯವು ಬಹು ಕೋನಾಕಾರದ ತಳ ವಿನ್ಯಾಸದಿಂದ ಕೂಡಿದ್ದು, ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು ಜೀರ್ಣೋದ್ಧಾರಗೊಂಡಿದೆ. ಇದರ ಬಳಿ ವೃತ್ತಾಕಾರದ ರಾಶಿ ಚಕ್ರ ಶಿಲ್ಪವಿದೆ. ಊರ ಹೊರಗೆ ಧರ್ಮರಾಜನ ಗುಡಿಯಿದ್ದು, ಅಲ್ಲಿಯೂ ಪ್ರಾಚೀನ ಶಿಲ್ಪಾವಶೇಷಗಳಿವೆ. ಉಳಿದಂತೆ ಊರಲ್ಲಿ ಬೀರಲಿಂಗ, ಹನುಮಂತ, ವಿಠಲ, ಜಟ್ಟಿಂಗ, ವೆಂಕೋಬಾ, ಶಂಕೋಬಾ, ವೀರಭದ್ರ, ಬಸವಣ್ಣ, ದತ್ತಾತ್ರೇಯ, ಅಂಭಾಭವಾನಿ, ಎಲ್ಲಮ್ಮ, ಮರಗಮ್ಮ ಮುಂತಾದ ನವೀನ ಗುಡಿಗಳಿದ್ದು ಮಸೀದಿ ಹಾಗೂ ದರ್ಗಾಗಳಿವೆ.

**ಪಾಸ್ತಾಪುರ** (೧೪೯೮)ವು ತಾಲೂಕು ಕೇಂದ್ರವಾದ ಚಿಂಚೋಳಿಯಿಂದ ನೈಋತ್ಯಕ್ಕೆ ೩೩ ಕಿ.ಮೀ. ದೂರದಲ್ಲಿದೆ. ಸಮೀಪದ ಗುಡ್ಡದ ಮೇಲಿರುವ ಶಾಸನವು ತೋನಿಪಲ್ಲಿಯನ್ನು ಅಗ್ರಹಾರವನ್ನಾಗಿಸಿ ಬ್ರಾಹ್ಮಣರಿಗೆ ದಾನಕೊಟ್ಟ ವಿಷಯವನ್ನು ತಿಳಿಸುತ್ತದೆ. ಆದರೆ ಇದರ ಲಿಪಿಯು ನಂತರದ ಕಾಲದ್ದಾಗಿದೆ. ಊರ ನಡುವೆ ಇರುವ ರಾಮಲಿಂಗೇಶ್ವರ ದೇವಾಲಯವು ಸುಮಾರು ೧೨ನೇ ಶತಮಾನದ ರಚನೆಯಾಗಿದ್ದು ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು ಪಾರ್ಶ್ವ ದ್ವಾರವಿದೆ. ಗರ್ಭಗೃಹದಲ್ಲಿ ಬಲಹರಿ ಶಿವಲಿಂಗವಿದ್ದು ಇದರ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಣಪತಿ ಇದೆ. ನವರಂಗದಲ್ಲಿ ನಾಲ್ಕು ದೇವಕೋಷ್ಠಗಳಿದ್ದು ಗಣಪತಿ, ನಾಗ ಹಾಗೂ ಭೈರವ ಶಿಲ್ಪಗಳಿವೆ. ನವರಂಗದ ಕಂಬಗಳು ಚಾಳುಕ್ಯ ಶೈಲಿಯಲ್ಲಿದ್ದು ನಡುವಣ ಛತ್ತನ್ನು ಆಕರ್ಷಕವಾದ ಕಮಲದಿಂದ ಅಲಂಕರಿಸಲಾಗಿದೆ. ನವರಂಗದ ಪ್ರವೇಶ ಭಾಗವು ಕಕ್ಷಾಸನವನ್ನು ಹೊಂದಿದೆ. ಉಳಿದಂತೆ ಊರಲ್ಲಿ ವೀರಭದ್ರ, ಹನುಮಂತ ಮುಂತಾದ ನವೀನ ಗುಡಿಗಳಿದ್ದು ಮಸೀದಿ ಹಾಗೂ ದರ್ಗಾ ಕೂಡ ಇವೆ.

**ಪೇಠಶಿರೂರು** (೨೦೧೯) ತಾಲೂಕು ಕೇಂದ್ರವಾದ ಚಿತ್ತಾಪುರದಿಂದ ವಾಯವ್ಯಕ್ಕೆ ೧೯ ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಶ್ರೀಪುರ' ಎಂದೇ ಉಲ್ಲೇಖಗೊಂಡಿರುವ ಈ ಊರಿಂದ

ಈವರೆಗೆ ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ ಏಕೈಕ ಶಾಸನ ವರದಿಯಾಗಿದೆ. ಶ್ರೀಪುರದ ರೆಬ್ಬಣ್ಣಯ್ಯ ದಂಡನಾಯಕನು ೧೧೧೭ರಲ್ಲಿ ರೆಬ್ಬೇಶ್ವರ ದೇವಾಲಯವನ್ನು ನಿರ್ಮಿಸಿ ಆ ದೇವರ ಸೇವೆಗೆಂದು ಹಾಗೂ ಮಠದಲ್ಲಿ ಓದುವ ಮಾಣಿಗಳಿಗೆಂದು ಭಂಕೂರ ನಾರೇಶ್ವರ ಮಠದ ಆಚಾರ್ಯ ಸದ್ಯೋಜ್ಯಾತ ಪಂಡಿತರಿಗೆ ೪೫ ಮತ್ತರು ಹೊಲ, ಎರಡು ಮತ್ತರು ಗದ್ದೆ, ಹೂತೋಟ, ಮೂರು ಗಾಣ, ಎಲೆ ಅಡಿಕೆ ಹಾಗೂ ಭತ್ತಗಳ ಆಯವನ್ನು ದಾನ ಬಿಟ್ಟ ವಿಷಯವನ್ನು ಮಲ್ಲಿಕಾರ್ಜುನ ಗುಡಿಯಲ್ಲಿರುವ ಈ ಶಾಸನ ತಿಳಿಸುತ್ತದೆ. ಜೊತೆಗೆ ಸಾಂದರ್ಭಿಕವಾಗಿ ನೆರೆಯ ಬಮೂಕುರ (ಭಂಕೂರ) ಮತ್ತು ಪಾಳನೂರುಗಳನ್ನು ಇದು ಉಲ್ಲೇಖಿಸುತ್ತದೆ. ಮೇಲಿನ ಶಾಸನೋಕ್ತ ರೆಬ್ಬೇಶ್ವರ ದೇವಾಲಯವೇ ಇಂದಿನ ಮಲ್ಲಿಕಾರ್ಜುನ ದೇವಾಲಯವಾಗಿದೆ. ಪೂರ್ವಾಭಿಮುಖವಾಗಿರುವ ಈ ಗುಡಿಯು ಗರ್ಭಗೃಹ, ಅಂತರಾಳ ಹಾಗೂ ಮೂರು ದಿಕ್ಕಲ್ಲೂ ಅರ್ಧಮಂಟಪಗಳನ್ನುಳ್ಳ ತೆರೆದ ನವರಂಗವನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಇದರ ಬಾಗಿಲವಾಡವು ನಾಲ್ಕು ಅಲಂಕಾರ ಶಾಖೆಗಳನ್ನು ಹೊಂದಿದ್ದು ಲಲಾಟದಲ್ಲಿ ಗಣಪತಿ ಇದೆ. ಉತ್ತರಾಂಗವನ್ನು ಪಂಚ ಶಿಖರಗಳಿಂದ ಅಲಂಕರಿಸಲಾಗಿದೆ. ಅಂತರಾಳದಲ್ಲಿ ಸುಂದರವಾದ ಚಂದ್ರ ಶಿಲೆಯಿದ್ದು ದೇವಕೋಷ್ಠವೊಂದರಲ್ಲಿ ಸಪ್ತಮಾತೃಕಾ ಶಿಲ್ಪವಿದೆ. ನವರಂಗದ ತೊಲೆಗಳು ಕಮಲಮಯವಾಗಿದ್ದು, ನಡುವಣ ಛತ್ತನ್ನು ಸರಳವಾದ ಕಮದಿಂದ ಅಲಂಕರಿಸಲಾಗಿದೆ. ನವರಂಗದ ಅಂಚಲ್ಲಿ ಇರುವ ಸುಖಾಸನವನ್ನು ಕಿರುಸ್ತಂಭಗಳು ಹೊತ್ತಿರುವಂತೆ ಕೆತ್ತಲಾಗಿದ್ದು ಕಕ್ಷಾಸನದ ಹಿಮ್ಮುಖವನ್ನು ಸುಂದರವಾದ ಚಿಕಣಿ ಶಿಲ್ಪಗಳಿಂದ ಅಲಂಕರಿಸಲಾಗಿದೆ. ಗುಡಿಯ ಅಧಿಷ್ಠಾನವನ್ನು ಆನೆ, ವಿಮಾನ, ದಂಪತಿ, ಚೌರಿಧಾರಿ, ಸೂರ್ಯ, ಹನುಮ ಮುಂತಾದ ಕಿರು ಶಿಲ್ಪಗಳಿಂದ ಅಲಂಕರಿಸಲಾಗಿದ್ದು, ಇವುಗಳಲ್ಲಿ ಹೆರಿಗೆ ದೃಶ್ಯ ಹಾಗೂ ಸಲ್ಲಿಂಗ ಕಾಮಿ ಶಿಲ್ಪ ಕೆತ್ತನೆಗಳು ಗಮನಾರ್ಹವಾಗಿವೆ. ಗರ್ಭಗೃಹದ ಭಿತ್ತಿಯನ್ನು ಸುಮಾರು ನಾಲ್ಕು ಅಡಿ ಎತ್ತರದ ಭೈರವ, ಸೂರ್ಯ ಮುಂತಾದ ನಾಲ್ಕು ಉಬ್ಬು ಶಿಲ್ಪಗಳಿಂದ ಅಲಂಕರಿಸಲಾಗಿದೆ. ಈ ದೇವಾಲಯದ ಎಡಬದಿಯಲ್ಲಿ ಪುಷ್ಕರಣಿ ಇದೆ. ಊರ ಹೊರಗೆ ಹರಿಜನ ಕೇರಿಯಲ್ಲಿರುವ ಬಸದಿಯನ್ನು ಸ್ಥಳಿಕರು ಬೌದ್ಧವಿಹಾರವೆಂದು ತಪ್ಪಾಗಿ ಗ್ರಹಿಸಿದ್ದಾರೆ. ಈ ಬಸದಿಯು ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು ಗರ್ಭಗೃಹದಲ್ಲಿ ಸಿಂಹಪೀಠದ ಮೇಲೆ ಕುಳಿತಿರುವ ಸುಮಾರು ನಾಲ್ಕೂವರೆ ಅಡಿ ಎತ್ತರದ ಪದ್ಮಾಸೀನ ಮಹಾವೀರ ತೀರ್ಥಂಕರನ ಅಖಂಡ ಮೂರ್ತಿ ಇದೆ. ಅಂತರಾಳದಲ್ಲಿ ಅಂಬಿಕಾ ಯಕ್ಷಿಯ ಬಿಡಿ ಶಿಲ್ಪವಿದೆ. ನವರಂಗದ ಬಾಗಿಲವಾಡವು ಚತುರ್ ಶಾಖಾಲಂಕೃತವಾಗಿದ್ದು, ಲಲಾಟದಲ್ಲಿ ತೀರ್ಥಂಕರ ಕೆತ್ತನೆ ಇದೆ. ಊರ ಹೊರಗೆ ಇರುವ ರಾಮಲಿಂಗೇಶ್ವರ ಹಾಗೂ ಭೀಮಾಲಿಂಗೇಶ್ವರ ದೇವಾಲಯಗಳು ಪ್ರಾಚೀನದ್ದಾಗಿವೆ. ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿರುವ ಇವೆರಡೂ ಶಿವಾಲಯಗಳಾಗಿದ್ದು, ರಾಮಲಿಂಗಗುಡಿ ಗಾತ್ರದಲ್ಲಿ ಕಿರಿದಿದ್ದರೆ, ಭೀಮಾಲಿಂಗ ದೊಡ್ಡ ಗುಡಿಯಾಗಿದೆ. ರಾಮಲಿಂಗ ಗುಡಿಯ ಗರ್ಭಗೃಹದ ಹಿಂದಿನ ಗೋಡೆಯಲ್ಲಿ ದೀಪಾಲಂಕಾರಕ್ಕೆಂದೇ ಏಳು ಅಡ್ಡ ಪಟ್ಟಿಕೆಗಳಿರುವುದು ಗಮನಾರ್ಹವಾಗಿದೆ. ಈ ಗುಡಿ ಆವರಣದಲ್ಲಿ ಗಣಪತಿ, ಭೈರವ, ಕೇಶವ, ನಾಗಶಿಲ್ಪ, ಶಿವಲಿಂಗ ಹಾಗೂ ನಂದಿಯ ಶಿಲ್ಪಗಳಿವೆ. ಊರ ನಡುವೆ ಇರುವ ರೇವಪ್ಪಯ್ಯ ಮುತ್ಯಾನ ಗುಡಿಯ ಹಿಂಭಾಗಕ್ಕೆ ಹೊನ್ನಲಿಂಗೇಶ್ವರ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಇದೊಂದು ತ್ರಿಕೂಟವಾಗಿದ್ದು ಮೂರು ಗರ್ಭಗೃಹ ಹಾಗೂ ತೆರೆದ ಅಂತರಾಳಗಳನ್ನು ನಡುವೆ ಇರುವ ಒಂದೇ ನವರಂಗವು ಒಗ್ಗೂಡಿಸಿದೆ. ಪ್ರಧಾನ ಗರ್ಭಗೃಹದಲ್ಲಿ ಅದಿತ್ಯ ಪೀಠವಿದ್ದು ಆದಿತ್ಯನ ರುಂಡವಷ್ಟೇ ಇಂದು ಉಳಿದಿದೆ. ಉಳಿದ ಎರಡು ಗರ್ಭಗೃಹಗಳು ಬರಿದಾಗಿದ್ದು, ನವರಂಗದ ನಡುವಣ ಛತ್ತು ತ್ರಿದಳ ಕಮಲವನ್ನು ಹೊಂದಿದೆ. ಊರಲ್ಲಿ ಜೈನ ಬಸದಿ ಎಂದು ಕರೆಯುವ ಸ್ಥಳದಲ್ಲಿ ಪಾರ್ಶ್ವನಾಥ, ಮಹಾವೀರ, ಚೌವ್ವೀಸ್ ತೀರ್ಥಂಕರ, ಪದ್ಮಾವತಿ ಯಕ್ಷಿ ಮುಂತಾದ ಕಿರು ಜೈನ ಶಿಲ್ಪಗಳಿವೆ. ಹನುಮಂತನ ಗುಡಿ ಹಿಂಭಾಗದಲ್ಲಿರುವ ಈಶ್ವರನ ಗುಡಿಯೂ ಪ್ರಾಚೀನದ್ದಾಗಿದ್ದು ಇಲ್ಲಿ ಬಲಹರಿ ಶಿವಲಿಂಗ, ಗಣಪ ಹಾಗೂ ಪೀಠಸ್ಥ ಚತುರ್ಮುಖ ಬ್ರಹ್ಮನ ಶಿಲ್ಪಗಳಿವೆ. ಉಳಿದಂತೆ ಊರಲ್ಲಿ ಬಜಾರ್ ಬಸವಣ್ಣ, ಬೀರದೇವರು, ಶರಣಬಸವೇಶ್ವರ, ರೇವಣಸಿದ್ಧೇಶ್ವರ, ರೇವಪ್ಪಮುತ್ಯಾ, ಹನುಮಂತ, ದ್ಯಾವಮ್ಮ, ಮರಗಮ್ಮ ಮುಂತಾದ ನವೀನ ಗುಡಿಗಳಿದ್ದು, ಸಿದ್ಧಲಿಂಗೇಶ್ವರ ಮಠವಿದೆ. ಜೊತೆಗೆ ಜುಮ್ಮಾಮಸೀದಿ ನದೀನಮುಲ್ಲಾ ಹುಸೇನಿ ಮತ್ತು ಮಲ್ಲಿಕಸಾಬ್ ದರ್ಗಾ ಕೂಡ ಇಲ್ಲಿವೆ. **ಕಾಟಂದೇವರಹಳ್ಳಿ** (೯೫೫)ಯು ಇಲ್ಲಿಂದ ಐದು ಕಿ. ಮೀ. ದೂರದಲ್ಲಿರುವ ನೆರೆಯ ಗ್ರಾಮವಾಗಿದ್ದು ಅಲ್ಲಿ ಗುಡ್ಡದ ಮೇಲೆ ಪ್ರಾಚೀನದ್ದಾದ ಶಿಖರೇಶ್ವರ ದೇಗುಲವಿದೆ. ಊರಲ್ಲಿ ಕಾಟಮ್ಮದೇವಿ ಹಾಗೂ ಎಲ್ಲಮ್ಮ ಗುಡಿಗಳಿದ್ದು ಅದರಿಂದಾಗಿ ಈ ಊರು ಪ್ರಸಿದ್ಧವಾಗಿದೆ.

**ಫಿರೋಜಾಬಾದ್** (೩೬೨೫) ತಾಲೂಕು ಕೇಂದ್ರವಾದ ಗುಲಬರ್ಗಾದಿಂದ ದಕ್ಷಿಣಕ್ಕೆ ೩೪ ಕಿ.ಮೀ. ಶಹಾಬಾದ್‌ನಿಂದ ನೈಋತ್ಯಕ್ಕೆ ೨೦ ಕಿ. ಮೀ., ದೂರದಲ್ಲಿ ಭೀಮಾ ನದಿಯ ಬಲದಂಡೆಯ ಮೇಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದ್ದು ರಾಜ್ಯ ಹೆದ್ದಾರಿ ಸಂಖ್ಯೆ ೧೯ಕ್ಕೆ ಹೊಂದಿಕೊಂಡಂತಿದೆ. ಇಲ್ಲಿಂದ ಈವರೆಗೆ ಕಲ್ಯಾಣದ ಚಾಳುಕ್ಯರ ಕಾಲಕ್ಕೆ ಸೇರಿದ ಸುಮಾರು ೧೨ನೇ ಶತಮಾನದ ಒಂದು ತ್ರುಟಿತ ಶಾಸನ, ಬಹಮನಿ ಹಾಗೂ ಆದಿಲ್ ಷಾಹಿ ಅರಸರ ಆಳ್ವಿಕೆಗೆ ಸೇರಿದ ೧೩ ಶಾಸನಗಳು ವರದಿಯಾಗಿವೆ. ಬಹಮನಿ ಸುಲ್ತಾನ ಫಿರೋಜ್ ಷಾ ಬಹಮನಿ (೧೩೯೭-೧೪೨೨)ಯು ಗುಲಬರ್ಗಾದಿಂದ ರಾಜಧಾನಿಯ ವರ್ಗಾವಣೆಗೆಂದು ಆಸ್ಥಾನಿಕರ ಸಲಹೆಯಂತೆ ಈ ನಗರವನ್ನು ನಿರ್ಮಿಸಿ ಕೋಟೆಯನ್ನು ಕಟ್ಟಿಸಿದನಾದರೂ (ಅಕ್ಬರ್ ನಿರ್ಮಿಸಿದ್ದ 'ಫತೇಪುರ ಸಿಕ್ರಿ' ಪಟ್ಟಣದ ಮಾದರಿಯಲ್ಲಿ) ರಾಜಧಾನಿ ಸ್ಥಳಾಂತರಗೊಳ್ಳಲಿಲ್ಲ. ಬಹಮನಿ ಕಾಲದ ಜಾಮಿ ಮಸೀದಿ ಹಾಗೂ ಖಲೀಫತ್ತುರ್ ರಹಮಾನ್‌ರ ದರ್ಗಾಗಳೂ ಕೂಡ ಇಲ್ಲಿದ್ದು, ಇಂಡೋ-ಇಸ್ಲಾಮಿಕ್ ಶೈಲಿಯ ಆರಂಭದ ಹಂತವನ್ನಿಲ್ಲಿ ನೋಡಬಹುದಾಗಿದೆ. ಇಲ್ಲಿಯ ಕೆಲವು ಕಟ್ಟಡಗಳ ಛಾವಣಿಯಂಚನ್ನು ಅಲಂಕರಿಸಿರುವ ಸುಂದರ ಚಿತ್ತಾರದ ಕಲಾತ್ಮಕ ರಚನೆ ಆಕರ್ಷಕವಾಗಿವೆ. ಆದರೆ ನಾನಾ ಕಾರಣಗಳಿಂದ ಈ ನಗರ ಬಹಮನಿಗಳ ರಾಜಧಾನಿಯಾಗದೇ ಬೀದರ್‌ಗೆ ರಾಜಧಾನಿ ಸ್ಥಳಾಂತರಿಸಲ್ಪಟ್ಟಿತು. ತತ್ಪರಿಣಾಮವಾಗಿ ಇದು ರಾಜಕೀಯ ಪ್ರಾಮುಖ್ಯತೆಯನ್ನು ಕಳೆದುಕೊಂಡಿತು.

**ಬಣಬಿ** (೫೭೬೪)ಯು ತಾಲೂಕು ಕೇಂದ್ರವಾದ ಚಿತ್ತಾಪುರದಿಂದ ವಾಯವ್ಯಕ್ಕೆ ೩೨ ಕಿ.ಮೀ., ಗುಲಬರ್ಗಾದಿಂದ ಈಶಾನ್ಯಕ್ಕೆ ೩೧ ಕಿ.ಮೀ. ದೂರದಲ್ಲಿ ಬೆಣ್ಣೆ ತೊರೆಯ ಎಡದಂಡೆಯ ಮೇಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಭಣಮಗೆ' ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಸೂಗೂರು-೭೦ಕ್ಕೆ ಸೇರಿದ್ದು, ಇಲ್ಲಿಂದ ಈವರೆಗೆ ಒಂದು ಶಾಸನ ವರದಿಯಾಗಿದೆ. ಇಲ್ಲಿಯ ಈಶ್ವರ ಗುಡಿ ಬಳಿ ಇರುವ ಈ ಶಾಸನವು ಕಳಚೂರಿ ಅರಸ ರಾಯಮುರಾರಿ ಸೋವಿದೇವನ ಆಳ್ವಿಕೆಗೆ ಸೇರಿದ್ದು, ಮಹಾಮಂಡಳೇಶ್ವರ ವೀರಗೊಂಕರಸ, ಮನೆವೆರ್ಗಡೆ ಸಿದ್ಧಯ್ಯ ದಂಡನಾಯ್ಕ, ಬಾಹತ್ತರ ನಿಯೋಗಾಧಿಪತಿ ಮಾಧವಯ್ಯ ಮುಂತಾದವರು ಭಣಬಿಗೆಯ ಮಲ್ಲಿಕಾರ್ಜುನ ದೇವರಿಗೆ ೧೨ ಮತ್ತರು ಹಾಗೂ ಅದರ ಕಲ್ಲು ಕುಟಿಗರಿಗೆಂದು ೧೨ ಮತ್ತರು ಭೂಮಿಯನ್ನು ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ಮೇಲಿನ ಶಾಸನೋಕ್ತ ಮಲ್ಲಿಕಾರ್ಜುನ ಇಂದಿನ ಈಶ್ವರ ದೇವಾಲಯವಾಗಿದ್ದು, ಶಿಥಿಲಾವಸ್ಥೆಯಲ್ಲಿದ್ದರೂ ಸುಂದರವಾಗಿದೆ.

**ಬಂದರವಾಡ** (೨೫೧೪)ವು ತಾಲೂಕು ಕೇಂದ್ರವಾದ ಅಫಜಲ್‌ಪುರದಿಂದ ಪೂರ್ವಕ್ಕೆ ೩೦ ಕಿ.ಮೀ., ಗುಲಬರ್ಗಾದಿಂದ ನೈಋತ್ಯಕ್ಕೆ ೪೦ ಕಿ.ಮೀ. ದೂರದಲ್ಲಿ ಚಿನ್ಮಳ್ಳಿ ರಸ್ತೆಯಲ್ಲಿ ಭೀಮಾ ನದಿಯ ಎಡದಂಡೆಯ ಮೇಲಿರುವ ಚಾರಿತ್ರಿಕ ಮಹತ್ವದ ಊರಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಮಹಾಗ್ರಹಾರ ಬೊನ್ದರವಾಡ', 'ಸರ್ವನಮಸ್ಯದ ಅಗ್ರಹಾರ ಬೊಂದರವಾಡ' ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಅತ್ತಿನೂರು - ೮೦ಕ್ಕೆ ಸೇರಿತ್ತು. ಇಲ್ಲಿಂದ ಈವರೆಗೆ ಮೂರು ಶಾಸನಗಳು ವರದಿಯಾಗಿದ್ದು, ಅವುಗಳಲ್ಲಿ ಊರ ಶಾಲೆಯ ಬಳಿಯಿರುವ ಸೋಮೇಶ್ವರ ದೇವಾಲಯದ ಬಾಗಿಲಲ್ಲಿರುವ ೧೧೧೩ರ ಶಾಸನವು ಕಲ್ಯಾಣದ ಚಾಳುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ಯುವರಾಜ ಮಲ್ಲಿಕಾರ್ಜುನನ ಒಪ್ಪಿಗೆಯಂತೆ, ಕಮ್ಮೆ ಕುಲದ ನೀಲಕಂಠ ದಂಡನಾಯ್ಕನು ಅಗ್ರಹಾರ ಬೊಂದರವಾಡದಲ್ಲಿ ತನ್ನ ತಂದೆತಾಯಿಗಳ ಸ್ಮರಣೆಗಾಗಿ ಸೋಮೇಶ್ವರ ದೇವಾಲಯವನ್ನು ನಿರ್ಮಿಸಿ ನಿಧನ ಹೊಂದಿದ್ದು, ಆ ದೇವಾಲಯಕ್ಕೆ ಯುವರಾಜನು ದಂಡಾನಾಯ್ಕನಾದ ಲಕ್ಷ್ಮರಸನ ಬೇಡಿಕೆಯಂತೆ ೫೦ ಮತ್ತರು ಭೂಮಿಯನ್ನು, ಅಲ್ಲಿಯ ಮಹಾಜನರು ೧೨ ಮತ್ತರು ಭೂಮಿಯನ್ನು ಹಾಗೂ ಇತರ ಅಧಿಕಾರಿಗಳು ವಿವಿಧ ಸುಂಕಗಳನ್ನು ದಾನ ಕೊಟ್ಟ ವಿಷಯವನ್ನು ಹೇಳುತ್ತ, ಸಾಂದರ್ಭಿಕವಾಗಿ ನೆರೆಯ ಊರುಗಳಾದ ಬಿದ್ದನೂರು, ಗೊಬ್ಬೂರು ಹಾಗೂ ಗೋದುಲೆವಾಡಗಳನ್ನು ದಾಖಲಿಸಿದೆ. ಅದೇ ಕಲ್ಲಿನ ಮೇಲಿರುವ ೧೧೧೮ರ ಇನ್ನೊಂದು ಶಾಸನ ಮಹಾಜನಗಳು ದೇವರ್ಗೆ ೧೫ ಮತ್ತರು ಭೂಮಿಯನ್ನು ದಾನ ಕೊಟ್ಟಿದ್ದನ್ನು ದಾಖಲಿಸಿದರೆ, ಕಳಚೂರಿ ಸೋವಿದೇವನ ಕಾಲಕ್ಕೆ ಸೇರಿದ ೧೧೭೪ರ ಇನ್ನೊಂದು ಶಾಸನವು ಅದೇ ದೇವಾಲಯಕ್ಕೆ ಅತ್ತಿನೂರು-೮೦ರ ಹೆಗ್ಗಡೆ ಗೋವಿಂದದೇವರಸನು ೬೦ ಮತ್ತರು ಭೂಮಿಯನ್ನು ದಾನ ಕೊಟ್ಟ ಅಂಶವನ್ನು ತಿಳಿಸುತ್ತ ಸಾಂದರ್ಭಿಕವಾಗಿ ಅಲ್ಲಿಯ ಬಸದಿಯ ಬಗ್ಗೆ ಉಲ್ಲೇಖಿಸುತ್ತದೆ. ಈ ಶಾಸನ ಕಲ್ಲಿರುವ ದೇವಾಲಯವೇ ಶಾಸನೋಕ್ತ ಸೋಮೇಶ್ವರ ದೇವಾಲಯವಾಗಿದೆ.

ಊರಲ್ಲಿಂದು ಚಾರಿತ್ರಿಕ ಮಹತ್ವದ ನಾಲ್ಕು ಪ್ರಾಚೀನ ದೇವಾಲಯಗಳು ಶಿಥಿಲಾವಸ್ಥೆಯಲ್ಲಿ ಉಳಿದಿದ್ದು ಉಳಿದೆರಡು ಪಾಳು ಬಿದ್ದಿವೆ. ಇವುಗಳಲ್ಲಿ ಸೋಮೇಶ್ವರ ದೇವಾಲಯವು ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಭಾಗಶಃ ಹಾಳಾಗಿವೆ. ಪೂರ್ವಾಭಿಮುಖವಾಗಿರುವ ಈ ದೇವಾಲಯದ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ದ್ವಾರಬಂಧವು ಸಪ್ತಶಾಖಾಲಂಕೃತವಾಗಿದ್ದು, ನಿರಾಡಂಬರವಾಗಿದೆ. ನವರಂಗದಲ್ಲಿ ಸಪ್ತಮಾತೃಕಾ ಶಿಲ್ಪ ಹಾಗೂ ಸೂರ್ಯಪೀಠಗಳಿವೆ. ಗೌಡರ ವಾಡೆಗೆ ಸೇರಿದಂತೆ ಇರುವ ಇನ್ನೊಂದನ್ನು 'ದೇಗುಲ' ಎಂದು ಕರೆಯುತ್ತಿದ್ದು, ಇದು ಗರ್ಭಗೃಹ, ತೆರೆದ ಅಂತರಾಳ, ನವರಂಗ ಹಾಗೂ ಪಾರ್ಶ್ವದ್ವಾರ ಮಂಟಪಗಳನ್ನು ಹೊಂದಿದೆ. ದ್ವಾರಬಂಧವು ಆಕರ್ಷಕವಾಗಿದ್ದು ಕಕ್ಷಾಸನವಿದೆ. ನವರಂಗದ ಛತ್ತು ಕಮಲಗಳಿಂದ ಅಲಂಕರಿಸಲ್ಪಟ್ಟಿದೆ. ಈ ದೇಗುಲದ ಕಂಬಗಳು ವೈವಿಧ್ಯಮಯವಾಗಿದ್ದು ಸುಂದರವಾಗಿವೆ. ಇಲ್ಲಿಯ ಭೋಗಲಿಂಗೇಶ್ವರ ದೇವಾಲಯವು ಪೂರ್ಣ ಜೀರ್ಣೋದ್ಧಾರಗೊಂಡಿದ್ದರೂ, ಮೂಲ ವಿನ್ಯಾಸವನ್ನು ಉಳಿಸಿಕೊಂಡಿರುವ ಪ್ರಾಚೀನ ದೇವಾಲಯವಾಗಿದ್ದು, ಕಲ್ಯಾಣದ ಚಾಳುಕ್ಯರ ಕಾಲದ ಶಿವಲಿಂಗ, ನಂದಿ, ಗಣಪತಿ, ಭೈರವ, ಮಹಿಷ ಮರ್ದಿನಿ, ಸರ್ಪ ಆವೃತ್ತ ಭೈರವ ಪಾದಗಟ್ಟೆ ಮುಂತಾದ ಅವಶೇಷಗಳನ್ನು ಇಲ್ಲಿ ಕಾಣಬಹುದಾಗಿದೆ. ಕುರುಬರ ಓಣಿಯಲ್ಲಿ ಹಿಂದೆ ಭವ್ಯವಾಗಿದ್ದು ಈಗ ಪಾಳು ಬಿದ್ದಿರುವ ದೇಗುಲದ ಭಿತ್ತಿ ಭಾಗ ಸ್ವಲ್ಪ ಮಾತ್ರ ಉಳಿದಿದ್ದರೂ ಆಕರ್ಷಕವಾದ ಶಿಲಾಬಾಲಿಕೆಯರು, ವಿಷ್ಣು ಮುಂತಾದ ಸುಂದರ ಕೆತ್ತನೆಗಳಿಂದ ಅಲಂಕೃತಗೊಂಡಿರುವ ಈ ಭಿತ್ತಿಯು ನಿಜಕ್ಕೂ ಅದ್ಭುತವಾಗಿದೆ. ಅಲ್ಲೇ ಬಿದ್ದಿರುವ ಉಗ್ರ ನರಸಿಂಹನ ಕೆತ್ತನೆಯುಳ್ಳ ಭಿತ್ತಿ ಫಲಕವೂ ಉಗ್ರವಾಗಿದೆ. ಊರ ಹೊರಗೆ ಸುರಗಿ ಶಾಂತೇಶ್ವರರ ಮಠವಿದ್ದು, ಕಲ್ಯಾಣದ ಚಾಳುಕ್ಯರ ಕಾಲದ ಮುಕ್ಕಾದ ಶಾಸನವೂ ಸೇರಿದಂತೆ ಶಿಲ್ಪಾವಶೇಷಗಳನ್ನು ಇಲ್ಲಿ ನೋಡಬಹುದಾಗಿದೆ. ಉಳಿದಂತೆ ಊರಲ್ಲಿ ಮಲ್ಲಿಕಾರ್ಜುನ, ಲಕ್ಷ್ಮಿ, ಹನುಮಂತ, ಈಶ್ವರ ಹಾಗೂ ಮರಗಮ್ಮನ ಗುಡಿಗಳಿದ್ದು, ಶಾಂತೇಶ್ವರರ ಜಾತ್ರೆಯು ಗೌರಿ ಹುಣ್ಣಿಮೆಯಾದ ಐದು ದಿನಕ್ಕೆ ನಡೆಯುತ್ತದೆ.

**ಬಿಜ್ಜನಹಳ್ಳಿ** (೫೨೮)ಯು ತಾಲೂಕು ಕೇಂದ್ರವಾದ ಸೇಡಂನಿಂದ ವಾಯವ್ಯಕ್ಕೆ ೧೨ ಕಿ.ಮೀ., ಮಳಖೇಡದಿಂದ ಈಶಾನ್ಯಕ್ಕೆ ನಾಲ್ಕು ಕಿ.ಮೀ. ದೂರದಲ್ಲಿ ಕಾಗಿಣಾ ನದಿಯ ಎಡ ದಂಡೆಯ ಮೇಲಿದ್ದು, ಇಲ್ಲಿರುವ ಹರಳಯ್ಯ-ಕಲ್ಯಾಣಮ್ಮರ ಚಮ್ಮಾವುಗೆಗಳಿಂದಾಗಿ ಪ್ರಸಿದ್ಧವಾಗಿದೆ. ಶಿವಶರಣಪ್ಪ ಸೊಲಬಣ್ಣವರ್ ಅವರ ಮನೆಯಲ್ಲಿರುವ ಚಮ್ಮಾವುಗೆಯೇ ಬಸವಣ್ಣನವರಿಗೆ ಹರಳಯ್ಯ ದಂಪತಿಗಳು ನೀಡಿದ ಚಮ್ಮಾವುಗೆ ಎಂಬ ನಂಬಿಕೆ ಪ್ರಚಲಿತವಿದ್ದು, ಇಂದು ಆ ಮನೆಯನ್ನೇ ಗುಡಿಯನ್ನಾಗಿ ಮಾಡಿದ್ದಾರೆ. ಈ ಚಮ್ಮಾವುಗೆಗಳನ್ನು ಗಾಜಿನ ಪೆಟ್ಟಿಗೆಯಲ್ಲಿಟ್ಟು ಭಕ್ತರು ಪೂಜಿಸುತ್ತಾರೆ. ಉಳಿದಂತೆ ಊರಲ್ಲಿ ಗವಿ ಸಿದ್ಧೇಶ್ವರ, ಬಸವಣ್ಣ, ಮಲ್ಲಿಕಾರ್ಜುನ, ಹನುಮಂತ ಹಾಗೂ ಮರಗಮ್ಮನ ನವೀನ ಗುಡಿಗಳಿವೆ. ಇಲ್ಲಿ ಬಸವ ಜಯಂತಿಯಂದು ತೊಟ್ಟಿಲ ಕಾರ್ಯಕ್ರಮವಿದ್ದು, ಪ್ರತಿ ವರ್ಷ ಮಹಾನವಮಿಯಂದು ಹರಳಯ್ಯನ ಪುಣ್ಯ ತಿಥಿಯನ್ನು ಆಚರಿಸುತ್ತಾರೆ.

**ಬಿಳವಾರ** (೨೦೧೮)ವು ತಾಲೂಕು ಕೇಂದ್ರವಾದ ಜೇವರ್ಗಿಯಿಂದ ನೈರುತ್ಯಕ್ಕೆ ೩೦ ಕಿ.ಮೀ. ದೂರದಲ್ಲಿ ಜೇವರ್ಗಿ-ಬಳಬಟ್ಟಿ ರಸ್ತೆಯಲ್ಲಿರುವ ಚಾರಿತ್ರಿಕ ಮಹತ್ವದ ಊರಾಗಿದೆ. ಇಲ್ಲಿಂದ ಈವರೆಗೆ ಯಾವುದೇ ಶಾಸನ ವರದಿಯಾಗಿಲ್ಲ. ಆದರೂ ಇಲ್ಲಿರುವ ಸುಮಾರು ೧೧ನೇ ಶತಮಾನದ ಈಶ್ವರ ದೇಗುಲದಿಂದಾಗಿ ಪ್ರಸಿದ್ಧವಾಗಿದೆ. ಎತ್ತರವಾದ ಅಧಿಷ್ಠಾನದ ಮೇಲೆ ಪೂರ್ವಾಭಿಮುಖವಾಗಿ ನಿಂತಿದ್ದ ಭವ್ಯವಾದ ಈ ಗುಡಿಯು ಇಂದು ಪಾಳು ಬಿದ್ದಿದೆ. ಇದೊಂದು ತ್ರಿಕೂಟವಾಗಿದ್ದು, ಮೂರು ಗರ್ಭಗೃಹಗಳನ್ನು ಹೊಂದಿದ್ದು, ಉತ್ತರದ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಪಶ್ಚಿಮದ ಹಾಗೂ ಉತ್ತರದ ಗರ್ಭಗೃಹಗಳಿಗೆ ಭಿತ್ತಿಗಳಿದ್ದು, ದಕ್ಷಿಣದ ಗರ್ಭಗೃಹ ಭಾಗ ಪೂರ್ಣ ಜೀರ್ಣವಾಗಿದೆ. ಪ್ರಧಾನ ಗರ್ಭಗೃಹದ ಛಾವಣಿ ಕುಸಿದಿದ್ದು, ಹೊಸ್ತಿಲ ಬಳಿ ಸುಂದರವಾದ ಚಂದ್ರ ಶಿಲೆ ಇದೆ. ಇದರ ಭಿತ್ತಿಯ ಮೇಲಿನ ದೇವಕೋಷ್ಠಗಳಲ್ಲಿ ಬ್ರಹ್ಮ ಹಾಗೂ ವಿಷ್ಣುವಿನ ಕೆತ್ತನೆಗಳಿವೆ. ಇಲ್ಲಿಯ ಗರ್ಭಗೃಹಗಳ ಬಾಗಿಲವಾಡಗಳು ಮೂರು ಹಾಗೂ ಐದು ಶಾಖೆಗಳನ್ನು ಹೊಂದಿದ್ದು ಸುಂದರವಾಗಿವೆ. ನವರಂಗದ ನಡುವಣ ನಾಲ್ಕು ಕಂಬಗಳಷ್ಟೇ ಉಳಿದಿದ್ದು, ಕಕ್ಷಾಸನದ ಹಿಂಬದಿಯಲ್ಲಿ ವಿವಿಧ ಕೆತ್ತನೆಗಳಿವೆ. ದೇವಾಲಯವನ್ನು ಪ್ರವೇಶಿಸಲು ಇರುವ ಸೋಪಾನದ ಇಕ್ಕೆಲಗಳಲ್ಲಿ ಅಧಿಷ್ಠಾನದ ಮೇಲೆ ಮಿಥುನ ಶಿಲ್ಪ, ಹಂಸ, ಆನೆ, ನವಿಲು, ಕಮಲ ಮುಂತಾದ ಕೆತ್ತನೆಗಳಿವೆ. ಉಳಿದಂತೆ ಊರಲ್ಲಿ ಹನುಮಂತ, ಬೀರಲಿಂಗ, ಜಟ್ಟಿಂಗರಾಯ, ಅಯ್ಯಣ್ಣಮುತ್ಯಾ, ಎಲ್ಲಮ್ಮ ಮರಗಮ್ಮ ಮುಂತಾದ ನವೀನ ಗುಡಿಗಳಿದ್ದು ಮಡಿವಾಳಪ್ಪನ ಗವಿ ಹಾಗೂ ಮಠಗಳಿವೆ. ಮಸೀದಿ ಹಾಗೂ ದರ್ಗಾಗಳೂ ಕೂಡ ಇವೆ.

**ಬೂದಿಹಾಳ (೧೬೮೦)** ವು ತಾಲೂಕು ಕೇಂದ್ರವಾದ ಸುರಪುರದಿಂದ ನೈಋತ್ಯಕ್ಕೆ ೪೫ ಕಿ.ಮೀ. ದೂರದಲ್ಲಿದ್ದು ನವ ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ ಬೂದಿ ದಿಬ್ಬಗಳ ಶೋಧದಿಂದಾಗಿ ಮಹತ್ವ ಪಡೆದಿದೆ. ಇಲ್ಲಿರುವ ಬೂದಿಗುಡ್ಡಗಳಿಂದಾಗಿ ಈ ಊರಿಗೆ 'ಬೂದಿಹಾಳ' ಎಂದು ಹೆಸರು ಬಂದಿದ್ದು ಸುಮಾರು ೧೭೫ ವರ್ಷಗಳ ಹಿಂದೆ ಮೆಡೋಸ್‌ಟೇಲರ್ ಇದನ್ನು ಪತ್ತೆ ಹಚ್ಚಿದ್ದರೂ, ಕಳೆದ ಎರಡೂವರೆ ದಶಕಗಳಿಂದ ನಿರಂತರವಾಗಿ ಇಲ್ಲಿಗೆ ಭೇಟಿ ನೀಡಿ ಉತ್ಖತನ ನಡೆಸಿ, ಅವುಗಳ ವೈಜ್ಞಾನಿಕ ಅಧ್ಯಯನ ಕೈಗೊಂಡು, ತನ್ಮೂಲಕ ವಿಶ್ವದ ಪುರಾತತ್ವ ನಕಾಶೆಯಲ್ಲಿ ಬೂದಿಹಾಳಕ್ಕೆ ವಿಶಿಷ್ಟವಾದ ಸ್ಥಾನ ನೀಡಿದ ಗೌರವ ಪುಣೆಯ ಡೆಕ್ಕನ್ ಕಾಲೇಜಿನ ಪ್ರಾಧ್ಯಾಪಕ ಡಾ. ಪದ್ದಯ್ಯನವರಿಗೆ ಸಲ್ಲುತ್ತದೆ. ನವ ಶಿಲಾಯುಗ ಸಂಸ್ಕೃತಿಯ ಶಿಲಾಯುಧ ಕಾರ್ಖಾನೆಯಾಗಿ, ಕಸಾಯಿಖಾನೆಯಾಗಿ ಪ್ರಾಮುಖ್ಯತೆ ಪಡೆದಿದ್ದ, ನವ ಶಿಲಾಯುಗ ಸಂಸ್ಕೃತಿಯ ನೆಲೆಗಳು ಬೂದಿಹಾಳದ ಬಳಿ ಹಾಯ್ದಿರುವ ಕೃಷ್ಣಾ ಎಡದಂಡೆ ಕಾಲುವೆಯಿಂದ ಸ್ವಲ್ಪ ದೂರದಲ್ಲಿದ್ದು ಅಲ್ಲಿರುವ ಎರಡು ಬೂದಿ ದಿಬ್ಬಗಳ ವೈಜ್ಞಾನಿಕ ಅಗೆತದಲ್ಲಿ ಲಭಿಸಿರುವ ವಿವಿಧ ವಿನ್ಯಾಸದ ಮಡಿಕೆಗಳ, ಪ್ರಾಣಿಗಳ ಎಲುಬುಗಳ, ವಿವಿಧ ಶಿಲಾಯುಧಗಳ ಅವಶೇಷಗಳಿಂದ ಇದೊಂದು ಪ್ರಾಚೀನ ಶಿಲಾಯುಗ ಸಂಸ್ಕೃತಿಯ ವಸತಿ ನಿವೇಶನವಾಗಿದ್ದು, ಸುಮಾರು ೩ ಲಕ್ಷ ವರ್ಷಗಳಷ್ಟು ಪ್ರಾಚೀನವಾದುದೆಂಬ ಅಭಿಪ್ರಾಯ ವ್ಯಕ್ತಪಡಿಸಿರುವ ಡಾ. ಪದ್ದಯ್ಯನವರು, ಮುಂದಿನ ಉತ್ಖನನಗಳು ಮತ್ತಷ್ಟು ಮಹತ್ವದ ಅಂಶಗಳನ್ನು ಬೆಳಕಿಗೆ ತರಬಹುದೆಂಬ ನಿರೀಕ್ಷೆಯಲ್ಲಿದ್ದಾರೆ. ಬೂದಿಹಾಳದ ಸುತ್ತಮುತ್ತ ಇರುವ ಕೊಡೇಕಲ್, ಹಗರಟಗಿ, ರಾಜನಕೋಳೂರು, ಹುಣಸಗಿ, ಮುಂತಾದ ಸ್ಥಳಗಳು ನವ ಶಿಲಾಯುಗ, ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಗಳಾಗಿರುವ ಹಿನ್ನೆಲೆಯಲ್ಲಿ ಬೂದಿಹಾಳದ ಪ್ರಾಗೈತಿಹಾಸಿಕ ಮಹತ್ವವನ್ನು ಮನಗಾಣಬೇಕಾಗಿದೆ.

**ಬೆಣ್ಣೂರು (ಬಿ) (೯೭೭)** ತಾಲೂಕು ಕೇಂದ್ರವಾದ ಚಿತ್ತಾಪುರದಿಂದ ನೈಋತ್ಯಕ್ಕೆ ೨೪ ಕಿ. ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದ್ದು, ಪೇಠ ಶಿರೂರಿನಿಂದ ಸುಮಾರು ನಾಲ್ಕು ಕಿ. ಮೀ ಅಂತರದಲ್ಲಿದೆ. ಇಲ್ಲಿಯ ಈಶ್ವರ ಗುಡಿಯಲ್ಲಿರುವ ಯಾದವ ರಾಮಚಂದ್ರನ ಕಾಲಕ್ಕೆ ಸೇರಿದ ೧೨೮೮ರ ಶಾಸನವು ಇಲ್ಲಿಯ ಮಲ್ಲಿನಾಥ ದೇವರಿಗೆಂದು ಗೊಂಕ ೧೨೦(೬೦) ರ ಕಂಪಣ ಸರವಡಿಗೆಯ ಬಳಿಯ ಬೆಂಡನೂರನ್ನು ಸರ್ವಮಾನ್ಯವಾಗಿ ದಾನಬಿಟ್ಟ ವಿಷಯವನ್ನು ತಿಳಿಸುತ್ತದೆ. ಈ ಶಾಸನವಿರುವ ದೇಗುಲವು ಊರ ಅಗಸಿಯ ಪ್ರವೇಶದಲ್ಲೇ ಎತ್ತರವಾದ ಸ್ಥಳದಲ್ಲಿದೆ. ಇಲ್ಲಿ ಅಕ್ಕಪಕ್ಕದಲ್ಲೇ ಪೂರ್ವಾಭಿಮುಖವಾಗಿ ಎರಡು ಪ್ರತ್ಯೇಕ ದ್ವಿಕೂಟ ದೇವಾಲಯಗಳಿವೆ. ಇವು ಒಂದು ಮತ್ತೊಂದರ ನಕಲಂತಿದ್ದು ಎರಡು ಪ್ರತ್ಯೇಕ ಗರ್ಭಗೃಹ ಹಾಗೂ ತೆರೆದ ಅಂತರಾಳಗಳನ್ನು ಹೊಂದಿದ್ದು, ದೇವಗೂಡುಗಳು ತೆರೆದ ನವರಂಗದ ಪಶ್ಚಿಮ ಹಾಗೂ ಉತ್ತರ ದಿಕ್ಕುಗಳಲ್ಲಿದ್ದು ಪೂರ್ವದಿಂದ ಪ್ರವೇಶವನ್ನು ಹೊಂದಿವೆ. ಇವುಗಳ ಬಾಗಿಲವಾಡಗಳು ತ್ರಿಶಾಖಾಲಂಕೃತವಾಗಿದ್ದು ಒಂದೆರಡು ಗರ್ಭಗೃಹಗಳಲ್ಲಿ ಶಿವಲಿಂಗಗಳಿವೆ. ನವರಂಗಗಳಲ್ಲಿ ತಲಾ ನಾಲ್ಕು ದೇವಗೂಡುಗಳಿದ್ದು, ಒಂದರಲ್ಲಿ ಮಾತ್ರ ಸಪ್ತ ಮಾತೃಕಾ ಶಿಲ್ಪವಿದೆ. ತೆರೆದ ನವರಂಗದ ಮುಂಭಾಗದಲ್ಲಿ ಕಕ್ಷಾಸನಗಳಿದ್ದು ಭಿತ್ತಿಗಳು ನಿರಾಡಂಬರವಾಗಿವೆ. ಊರ ಹೊರಗೆ ಇರುವ ಮಲ್ಲಿಕಾರ್ಜುನ ಗುಡಿ ಆವರಣದಲ್ಲಿ ಜೀರ್ಣೋದ್ಧಾರಗೊಂಡಿರುವ ಮಲ್ಲಿಕಾರ್ಜುನ ಗುಡಿ ಇದೆ. ಇದೊಂದು ತ್ರಿಕೂಟವಾಗಿದ್ದು, ಮೂರು ಗರ್ಭಗೃಹ ಹಾಗೂ ಅಂತರಾಳಗಳನ್ನು ನಡುವೆ ಇರುವ ಒಂದೇ ನವರಂಗವು ಒಗ್ಗೂಡಿಸಿದೆ. ಗರ್ಭಗೃಹಗಳಲ್ಲಿ ಶಿವಲಿಂಗಗಳಿದ್ದು ಇವುಗಳ ಬಾಗಿಲವಾಡಗಳು ತ್ರಿಶಾಖಾಲಂಕೃತ ಗೊಂಡಿವೆ. ನವರಂಗದಲ್ಲಿ ಆರು ದೇವಕೋಷ್ಠಗಳಿದ್ದು ನಡುವಣ ಛತ್ತು ಕಮಲವನ್ನು ಹೊಂದಿದೆ. ಇದರ ಎಡಭಾಗದಲ್ಲಿ ಪಾರ್ಶ್ವದ್ವಾರವಿರುವ ಏಕಕೂಟ ದೇವಾಲಯವಿದೆ. ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನುಳ್ಳ ಇದರ ಗರ್ಭಗೃಹದಲ್ಲಿ ಶಿವಾಲಯವಿದೆ. ನವರಂಗದ ಕಂಬಗಳ ಮೇಲೆ ಆಕರ್ಷಕ ಕಿರು ಕೆತ್ತನೆಗಳಿವೆ. ಈ ಎರಡೂ ದೇಗುಲಗಳು ಸುಮಾರು ೧೨-೧೩ನೇ ಶತಮಾನದ ರಚನೆಗಳಾಗಿದ್ದು ಮಲ್ಲಿಕಾರ್ಜುನ ದೇವರ ಜಾತ್ರೆಯು ಧವನದ ಹುಣ್ಣಿಮೆಯಂದು ಜರುಗುತ್ತದೆ. ಉಳಿದಂತೆ ಊರಲ್ಲಿ ಎರಡು ಹುಡೆಗಳಿದ್ದು, ಬಸವಣ್ಣ, ಬೀರಲಿಂಗ, ಹನುಮಂತ, ಎಲ್ಲವ್ವ,ಪೋಚವ್ವ, ದ್ಯಾಮವ್ವ, ಮರಗಮ್ಮ ಮುಂತಾದ ಗುಡಿಗಳ ಜೊತೆಗೆ ಮಸೀದಿ ಹಾಗೂ ಮೌಲಾಲಿ ದರ್ಗಾ ಕೂಡ ಇವೆ.

**ಬೋಧನ (೨೨೧೩)**ವು ತಾಲೂಕು ಕೇಂದ್ರವಾದ ಆಳಂದದಿಂದ ಪೂರ್ವಕ್ಕೆ ಕಡಗಂಚಿ ಮಾರ್ಗವಾಗಿ ೩೫ ಕಿ.ಮೀ., ಗುಲಬರ್ಗಾದಿಂದ ವಾಯವ್ಯಕ್ಕೆ ಚಿಂಚನಸೂರ ಮಾರ್ಗವಾಗಿ ೩೩ ಕಿ.ಮೀ. ದೂರದಲ್ಲಿ ಬೆಣ್ಣೆತೊರೆ ನದಿಯ ಬಲ ದಂಡೆಯ ಮೇಲಿರುವ ಚಾರಿತ್ರಿಕ ಮಹತ್ವದ ಊರು. ಪ್ರಾಚೀನ ಶಾಸನಗಳಲ್ಲಿ 'ಪಿರಿಯ ಬೋಧನ' ಎಂದೇ

ಉಲ್ಲೇಖಿತಗೊಂಡಿರುವ ಇದು ಹಿಂದೆ ಕಲ್ಯಾಣದ ಚಾಳುಕ್ಯ ದೊರೆ ಆರನೆಯ ವಿಕ್ರಮಾದಿತ್ಯನ ರಾಣಿ ಮಲೆಯಮತಿ ದೇವಿಯ ಕಾಲದಲ್ಲಿ 'ಸರಸ್ವತಿಪುರ'ವಾಗಿತ್ತು. ಹಿಂದೆ ಆಲಂದೆ - ೧೦೦೦ಕ್ಕೆ ಸೇರಿದ ಗೊಂಕ - ೧೨ರ ಕಂಪಣ ನರವಣಿ-೧೨ರೊಳಗಿದ್ದ ಈ ಗ್ರಾಮದಿಂದ ಈವರೆಗೆ ಒಂದು ಶಿಲಾಶಾಸನ ವರದಿಯಾಗಿದೆ. ಊರ ನಡುವೆ ಇರುವ ಮಲ್ಲಿಕಾರ್ಜುನ ದೇವಾಲಯದ ಮುಂದೆ ಇರುವ ಈ ಶಾಸನ ಕಲ್ಯಾಣದ ಚಾಳುಕ್ಯ ಅರಸ ಇಮ್ಮಡಿ ಜಗದೇಕಮಲ್ಲನ ಕಾಲದ್ದಾಗಿದ್ದು ೧೧೪೨ರಲ್ಲಿ ಬೋಧನದ ಪ್ರಭು ನಾರಣದೇವ ದಂಡನಾಯ್ಕನು ಇಲ್ಲಿ ಮಲ್ಲಿಕಾರ್ಜುನ, ಕೇಶವ ಹಾಗೂ ಮೂಲಸ್ಥಾನ ದೇವರುಗಳಿಗೆಂದು ತ್ರಿಕೂಟ ದೇವಾಲಯವನ್ನು ನಿರ್ಮಿಸಿ, ಮಹೇಶ್ವರ, ಮುರಾರಿ, ಕುಮಾರ, ಭೈರವ, ಚಂಡಿ, ಭಾನು, ಫಣಿ, ಗಣನಾಥ ಹಾಗೂ ಸಪ್ತಮಾತೃಕೆಯರನ್ನು ಈ ಗುಡಿಯಲ್ಲಿ ಪ್ರತಿಷ್ಠಾಪಿಸಿದಾಗ ಪೂಜಾವಿಧಿಗೆಂದು ಮಹಾ ಪ್ರಧಾನ ಬಮ್ಮಣಯ್ಯ ದಂಡನಾಯಕನು ಭೂದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಈ ಶಾಸನವನ್ನು ರಚಿಸಿದವನು ಸಹಜ ಕವಿ ಸಾರ್ವಭೌಮನಾದ ಮಾಧವನೆಂದು ಶಾಸನದ ಕೊನೆಯಲ್ಲಿ ಹೇಳಲಾಗಿದೆ. ಇದರಿಂದ ಇಂದು ಶಾಸನವಿರುವ ಮಲ್ಲಿಕಾರ್ಜುನ ದೇವಾಲಯವೇ ಶಾಸನೋಕ್ತ ತ್ರಿಕೂಟ ದೇವಾಲಯವೆಂದು ವೇದ್ಯವಾಗುತ್ತದೆ. ಈ ದೇವಾಲಯವು ಪ್ರತ್ಯೇಕವಾದ ಮೂರು ಗರ್ಭಗೃಹ, ಅಂತರಾಳಗಳನ್ನು ಹೊಂದಿದ್ದು, ಇವುಗಳನ್ನು ಒಂದೇ ನವರಂಗ ಒಗ್ಗೂಡಿಸಿದೆ. ಪ್ರಧಾನ ಗರ್ಭಗೃಹದಲ್ಲಿ ಶಿವಲಿಂಗ (ಮೂಲಸ್ಥಾನ ದೇವ)ವಿದ್ದು, ಇದರ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದ್ದು ಸುಂದರವಾಗಿದೆ. ಉತ್ತರಾಂಗದಲ್ಲಿ ಪಂಚಶಿಖರಗಳಿದ್ದು ಆಕರ್ಷಕವಾಗಿವೆ. ನವರಂಗದಲ್ಲಿ ಎಂಟು ದೇವಕೋಷ್ಠಗಳಿದ್ದು, ಕೆಲವದರಲ್ಲಿ ಸುಮಾರು ಎರಡೂವರೆ ಅಡಿ ಎತ್ತರದ ಬ್ರಹ್ಮ ಭೈರವ ಹಾಗೂ ಗಣಪತಿಯ ಶಿಲ್ಪಗಳಿವೆ. ನವರಂಗದ ಕಂಬಗಳು ಆಕರ್ಷಕವಾಗಿದ್ದು, ಇದರ ಬಾಗಿಲವಾಡವು ಚತುರ್‌ಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಇದೆ. ಈ ಗುಡಿಯ ಮುಂದೆ ಸುಮಾರು ೧೩ನೇ ಶತಮಾನದ ವೀರಗಲ್ಲೊಂದಿದೆ. ಉಳಿದಂತೆ ಊರಲ್ಲಿ ಬಸವಣ್ಣ, ಮಹಾದೇವ, ಮಹಾಂತೇಶ, ಬೀರಪ್ಪ, ಹನುಮಂತ, ಅಂಬಾಭವಾನಿ, ಲಕ್ಷ್ಮಿ, ಕಾಟಮ್ಮ ಹಾಗೂ ಅಕ್ಕಮಹಾದೇವಿಯ ನವೀನ ಗುಡಿಗಳಿದ್ದು ಒಂದು ಮಸೀದಿ ಹಾಗೂ ಮೂರು ದರ್ಗಾಗಳಿವೆ

**ಭಂಕೂರು** (೬೬೩) ತಾಲೂಕು ಕೇಂದ್ರವಾದ ಚಿತ್ತಾಪುರದಿಂದ ವಾಯವ್ಯಕ್ಕೆ ೧೮ ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದ್ದು, ಇದು ಮರ್ತೂರು ರೈಲು ನಿಲ್ದಾಣದಿಂದ ಪೂರ್ವಕ್ಕೆ ಐದು ಕಿ.ಮೀ. ದೂರದಲ್ಲಿದೆ. ಪ್ರಾಚೀನ ಶಾಸನಗಳಲ್ಲಿ 'ಬಮೂಕೂರು' ಎಂದೇ ಉಲ್ಲೇಖಿತಗೊಂಡಿರುವ ಇಲ್ಲಿಂದ ಈವರೆಗೆ ಮೂರು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಈಶ್ವರ ಗುಡಿಯಲ್ಲಿರುವ ಶಾಸನವು ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲದ್ದಾಗಿದ್ದು, ಪಟ್ಟಮಹಾದೇವಿ, ಯುವರಾಜ ಮಲ್ಲಿಕಾರ್ಜುನ ಹಾಗೂ ಮಹಾಮಂಡಳೇಶ್ವರ ನಾಗರಸನನ್ನು ಉಲ್ಲೇಖಿಸುತ್ತದೆ. ಜೊತೆಗೆ ಇಲ್ಲಿಯ ಮಾಣಿಕೇಶ್ವರ ದೇವಾಲಯಕ್ಕೆ ಭೂದಾನ ಮಾಡಿದ ಅಂಶವನ್ನೂ ದಾಖಲಿಸಿದೆ. ವೀರಗಲ್ಲು ಶಾಸನವು ೧೧೦೮ರ ದಾಖಲೆಯಾಗಿದ್ದು, ವಿವರಣಾ ಭಾಗ ಹಾಳಾಗಿರುವುದರಿಂದ ಹೆಚ್ಚಿನ ಮಾಹಿತಿ ಲಭ್ಯವಿಲ್ಲ. ಇಲ್ಲಿಯ ಜೈನ ಬಸದಿಯಲ್ಲಿರುರ ಮೂರ್ತಿ ಪೀಠದ ಮೇಲಿನ ಶಾಸನವು ಸುಮಾರು ೧೩ನೇ ಶತಮಾನದ್ದಾಗಿದ್ದು, 'ಶ್ರೀ ಕನಕಕೀರ್ತಿ' ಎಂಬ ಉಲ್ಲೇಖ ಸ್ಪಷ್ಟವಿದ್ದು, ಉಳಿದ ಭಾಗ ಹಾಳಾಗಿದೆ. ಊರಲ್ಲಿಂದು ಪ್ರಾಚೀನವೆನ್ನಬಹುದಾದ ಈಶ್ವರ, ಮಲ್ಲಿಕಾರ್ಜುನ, ರಾಮಲಿಂಗೇಶ್ವರ ಹಾಗೂಬಸದಿಗಳಿದ್ದು, ಇವುಗಳಲ್ಲಿ ರಾಮಲಿಂಗೇಶ್ವರ ಹಾಗೂ ಜೈನ ಬಸದಿಗಳು ಸುಸ್ಥಿತಿಯಲ್ಲಿವೆ. ರಾಮಲಿಂಗೇಶ್ವರ ಗುಡಿಯು ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಗರ್ಭಗೃಹದಲ್ಲಿ ಶಿವಲಿಂಗವನ್ನು ಹೊಂದಿದೆ. ಜೈನ ಬಸದಿಯು ತ್ರಿಕೂಟವಾಗಿದ್ದು, ಇಲ್ಲಿ ಶಾಂತಿನಾಥ, ಬಾಹುಬಲಿ, ಮಹಾವೀರ ಪಾರ್ಶ್ವನಾಥ, ಯಕ್ಷ ಮುಂತಾದ ಶಿಲ್ಪಗಳಿದ್ದು, ಗರ್ಭಗೃಹದ ಬಾಗಿಲವಾಡಗಳು ತ್ರಿಶಾಖಾಲಂಕೃತವಾಗಿದ್ದು ಲಲಾಟದಲ್ಲಿ ತೀರ್ಥಂಕರರ ಕಿರು ಕೆತ್ತನೆಗಳಿವೆ. ಇದೇ ಆವರಣದಲ್ಲಿ ಆದಿತೀರ್ಥಂಕರ, ಚೌವ್ವೀಸ್ ತೀರ್ಥಂಕರ ಹಾಗೂ ನಿಷಿಧಿ ಶಿಲ್ಪಗಳಿವೆ. ಅಲ್ಲೇ ಭೈರವನ ಶಿಲ್ಪವಿದ್ದು, ವೀರಗಲ್ಲೂ ಕೂಡ ಇದೆ. ಉಳಿದಂತೆ ಊರಲ್ಲಿ ಕೆರೆಯಮ್ಮ, ಹನುಮಂತ, ಭೂಯಾರ್ರ (ಅಂತರ್ಗತ) ಬಸವೇಶ್ವರ, ಯಂಕಲಮಾಯಿ, ಅಕ್ಕಮಹಾದೇವಿ, ಮರಗಮ್ಮ ಮುಂತಾದ ಗುಡಿಗಳಿದ್ದು, ಮಲ್ಲಯ್ಯ ಹಾಗೂ ದೊಡ್ಡ ಗಣಪತಿ ಗುಡಿ ಬಳಿ ಜೈನ ಅವಶೇಷಗಳಿವೆ. ಕೆರೆಯಮ್ಮನ ಜಾತ್ರೆಯು ಕಾರ ಹುಣ್ಣಿಮೆಯ ಮಾರನೆಯ ದಿನವಿದ್ದು, ಅಂದು ಬಂಡಿ ಓಡಿಸುವ ಸ್ಪರ್ಧೆ ಇರುತ್ತದೆ. ಊರಲ್ಲಿ ಮಸೀದಿ ಮತ್ತು ದರ್ಗಾ ಕೂಡ ಇವೆ.

**ಭೀಮರಾಯನ ಗುಡಿ** (೭೦೪೯)ಯು ತಾಲೂಕು ಕೇಂದ್ರವಾದ ಶಹಾಪುರದಿಂದ ಪಶ್ಚಿಮಕ್ಕೆ ೫ ಕಿ.ಮೀ. ದೂರದಲ್ಲಿ ಕಲ್ಬುರ್ಗಿ-ಬಿಜಾಪುರ ಕೂಡು ರಸ್ತೆಯಲ್ಲಿರುವ ಆಧುನಿಕ ವಸತಿ ನೆಲೆಯಾಗಿದೆ. ಇದನ್ನು ಯು.ಕೆ.ಪಿ. ಕಾಲೋನಿ ಎಂತಲೂ ಕರೆಯುತ್ತಾರೆ. ಕೃಷ್ಣಾ ಮೇಲ್ದಂಡೆ ಯೋಜನಾ ಕೇಂದ್ರದ ಕಛೇರಿ, ವಸತಿ ಗೃಹ, ನಿರೀಕ್ಷಣಾ ಮಂದಿರ ಮುಂತಾದ ಕಟ್ಟಡಗಳನ್ನುಳ್ಳ ಇದು 'ಅಮಲಾಪುರ' ಕಂದಾಯ ಗ್ರಾಮದ ಸರಹದ್ದಿನಲ್ಲಿದ್ದು, ಇಲ್ಲಿಯ ಬಲಭೀಮರಾಯನ ದೇವಾಲಯದಿಂದಾಗಿ ಇಂದು ಪ್ರಸಿದ್ಧಿಯಲ್ಲಿದೆ. ಬಲಭೀಮರಾಯ(ಆಂಜನೇಯ)ನನ್ನು ಸ್ಥಳೀಕರು ಆಮ್ಲಪ್ಪ ಮುತ್ಯ, ಅಂಬ್ಲಯ್ಯ ಎಂದೂ ಕರೆಯುತ್ತಿದ್ದು, ಈ ದೇವರ ಜಾತ್ರೆಯು ಪ್ರತಿ ವರ್ಷ ಸಂಕ್ರಾಂತಿಯಲ್ಲಿ ಎರಡು ದಿನ ನಡೆಯುತ್ತದೆ. ಮಕರ ಸಂಕ್ರಮಣದಂದು ಇಲ್ಲಿಂದ ಬಲಭೀಮೇಶ್ವರನ ಉತ್ಸವ ಮೂರ್ತಿಯನ್ನು ೧೮ ಕಿ.ಮೀ. ದೂರದಲ್ಲಿರುವ ಹುರುಸುಗುಂಡಗಿಗೆ ಕೊಂಡೊಯ್ದು ಭೀಮಾ ತೀರದಲ್ಲಿ ಪೂಜೆ ಮಾಡಿದ ನಂತರ ದೇವರನ್ನು ಶಹಾಪುರಕ್ಕೆ ಮೆರವಣಿಗೆಯಲ್ಲಿ ಕರೆತಂದು ರಾತ್ರಿಯೆಲ್ಲಾ ಶಹಾಪುರದಲ್ಲಿ ಪಲ್ಲಕ್ಕಿಯಲ್ಲಿ ಮೆರೆಸಿ ಮರುದಿನ ದೇವರ ಪಲ್ಲಕ್ಕಿ ಗುಡಿಯನ್ನು ತಲುಪಿದ ನಂತರ ಜಾತ್ರೆಯಾಗುತ್ತದೆ. ಇದನ್ನು ವೀಕ್ಷಿಸಲು ದೂರದ ಊರುಗಳಿಂದ ಸಾವಿರಾರು ಜನ ಭಕ್ತರು ಬಂದು ನೆರೆಯುತ್ತಾರೆ. ಇಲ್ಲಿರುವ ಭೀಮೇಶ್ವರ ದೇವಾಲಯವನ್ನು ಸುರಪುರದ ರಾಜ ವೆಂಕಟಪ್ಪನಾಯಕನು ನಿರ್ಮಿಸಿ, ಮೂರ್ತಿ ಪ್ರತಿಷ್ಠೆ ಮಾಡಿಸಿರುವನೆಂಬ ಅಭಿಪ್ರಾಯವಿದೆ. ಈ ದೇವಾಲಯವು ಸುಮಾರು ೧೦-೧೧ನೇ ಶತಮಾನಕ್ಕೆ ಸೇರಿದ ಪ್ರಾಚೀನ ಶಿಲ್ಪಾವಶೇಷಗಳಿಂದ ಪುನರ್ ನಿರ್ಮಾಣಗೊಂಡಿರುವುದನ್ನು ಅಲ್ಲಿಯ ಕಂಬ, ಬಾಗಿಲವಾಡಗಳೇ ಮುಂತಾದ ಅಂಶಗಳು ಸ್ಥಿರಪಡಿಸುತ್ತವೆ. ಬಹುಶಃ ಮೊಘಲರ ದಾಳಿಗೆ ಸಿಕ್ಕಿ ಶಹಾಪುರ-ಗೋಗಿ ಕೋಟೆಗಳು ನಲುಗಿದಾಗ ಅಮಲಾಪುರವು ಧ್ವಂಸವಾಗಿರಬೇಕು. ಇಲ್ಲಿಯ ಪ್ರಾಚೀನ ಈಶ್ವರ ಗುಡಿ ಪಾಳು ಬಿದ್ದು ಅದರ ಅವಶೇಷಗಳೇ ಇಂದಿನ ಬಲಭೀಮೇಶ್ವರದ ಭಾಗಗಳೆಂದು ಅಭಿಪ್ರಾಯವಿದೆ. ಆದರೆ ಈ ಗುಡಿಯ ಪ್ರವೇಶದ್ವಾರದಲ್ಲಿರುವ ೧೦೫೧ರ ಶಾಸನವು ಸೋಮಯ್ಯ ನಾಯಕನು ಶ್ರೀವೊಲಲ್ಲಿ ನಿರ್ಮಿಸಿದ ಸೋಮೇಶ್ವರ ದೇವರ್ಗೆ ಅರಸ ಒಂದನೇ ಸೋಮೇಶ್ವರ ಹಾಗೂ ಮಹಾಮಂಡಳೇಶ್ವರ ದೇವರಸರು ಸಗರ - ಖಂ೦ರಲ್ಲಿದ್ದ ಎಡವೊಳಲಲ್ಲಿ ೩೨ ಗೇಣ ಕೋಲಲ್ಲಿ ಭೂಮಿಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಇಲ್ಲಿಯ ಶಾಸನೋಕ್ತ ಶ್ರೀವೊಳಲು, ಇಂದಿನ ಶಿರವಾಳವಾಗಿದೆ.

ವಿಶಾಲವಾದ ಪ್ರಾಕಾರದ ನಡುವೆ ದಕ್ಷಿಣಾಮುಖವಾಗಿರುವ ಬಲಭೀಮರಾಯನ ಗುಡಿಯು ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಗರ್ಭಗೃಹದಲ್ಲಿ ಸ್ವಯಂಭು ಬಲಭೀಮನಿದ್ದು ಮೂಲೆಯಲ್ಲಿ ಶಿವಲಿಂಗವಿದೆ. ಇದರ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯಿದೆ. ನವರಂಗದ ಕಂಬಗಳು ವಿಶಿಷ್ಟವಾಗಿದ್ದು, ಅದರಲ್ಲೂ ಪದ್ಮಪೀಠದ ಮೇಲೆ ಕುಳಿತಿರುವ ಸಿಂಹ ಹೊತ್ತಿರುವ ಸ್ತಂಭಗಳು ಗಮನಾರ್ಹವಾಗಿವೆ. ಇಲ್ಲಿಯ ಕಂಬಗಳು ವೈವಿಧ್ಯಮಯ ಅಲಂಕಾರಗಳನ್ನು ಹೊಂದಿದ್ದು, ಆಕರ್ಷಕವಾಗಿವೆ. ನವರಂಗದ ಮುಂಭಾಗವು ಬಹಳ ಸುಂದರವಾಗಿದೆ. ಉಳಿದಂತೆ ಊರಲ್ಲಿ ಶರಣ ಬಸವೇಶ್ವರ ಹಾಗೂ ದೇವಮ್ಮನ ಗುಡಿಗಳಿವೆ.

**ಭೂತಪೂರ** (೯೬೨)ವು ತಾಲೂಕು ಕೇಂದ್ರವಾದ ಚಿಂಚೋಳಿಯಿಂದ ನೈಋತ್ಯಕ್ಕೆ ೩೫ ಕಿ.ಮೀ., ಸೇಡಂನಿಂದ ಉತ್ತರಕ್ಕೆ ೧೬ ಕಿ.ಮೀ. ದೂರದಲ್ಲಿರುವ ಸ್ಥಳವಾಗಿದೆ. ಇಲ್ಲಿಂದ ಶಾಸನಗಳಾವುದೂ ವರದಿಯಾಗಿಲ್ಲ. ಆದರೂ ಇಲ್ಲಿರುವ ಈಶ್ವರ ಗುಡಿಯಿಂದಾಗಿ ಪ್ರಸಿದ್ಧವಾಗಿದೆ. ಸುಮಾರು ೧೨-೧೩ನೇ ಶತಮಾನಕ್ಕೆ ಸೇರಿದ ಈ ದೇಗುಲವು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ದ್ವಾರಬಂಧವು ನಿರಾಡಂಬರವಾದ ತ್ರಿಶಾಖ ಪಟ್ಟಿಕೆಯನ್ನು ಹೊಂದಿದ್ದು ಅಂತರಾಳದಲ್ಲಿ ನಂದಿ ಇದೆ. ನವರಂಗದ ಕಂಬಗಳು ಆಕರ್ಷಕವಾಗಿದ್ದು ಛಾವಣಿ ಚಪ್ಪಟೆಯಾಗಿದೆ. ಮೂಲ ವಿನ್ಯಾಸವನ್ನು ಉಳಿಸಿಕೊಂಡು ಜೀರ್ಣೋದ್ಧಾರಗೊಂಡಿರುವ ಈ ಗುಡಿಯ ಮುಂದೆ ದೇವಿ ಶಿಲ್ಪವಿದೆ. ಊರ ಹೊರಗೆ ಇರುವ ಮಲ್ಲಿಕಾರ್ಜುನ ಗುಡಿಯ ಗರ್ಭಗೃಹದಲ್ಲಿ ಸಪ್ತಾಶ್ವ, ಸಾರಥಿ ಅರುಣರಿರುವ ಆದಿತ್ಯ ಪೀಠವಿದ್ದು, ತೊಲೆಯಲ್ಲಿ ಸಪ್ತಮಾತೃಕಾ ಶಿಲ್ಪವಿದೆ. ಬಳಿಯಲ್ಲೇ ವೀರಗಲ್ಲೂ ಇದೆ. ಶಾಲೆಯ ಹಿಂಭಾಗದಲ್ಲಿ ಸುಮಾರು ೧೭-೧೮ನೇ ಶತಮಾನದ ಮಾಸ್ತಿಕಲ್ಲೊಂದಿದ್ದು, ಹನುಮಂತನ ಗುಡಿ ಬಯಲಲ್ಲಿ ಸುಮಾರು ೧೦-೧೧ನೇ ಶತಮಾನಕ್ಕೆ ಸೇರಿದ ಮುಕ್ಕಾದ ದ್ವಿಬಾಹು ಗಣಪತಿ ಶಿಲ್ಪವಿದೆ.

**ಭೂಸನೂರು** (೪೬೯೩) ತಾಲೂಕು ಕೇಂದ್ರವಾದ ಆಳಂದದಿಂದ ನೈಋತ್ಯಕ್ಕೆ ೧೨ ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಕೇಂದ್ರವಾಗಿದ್ದು, ಇಂದು ಇಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಯಿಂದಾಗಿ ಪ್ರಸಿದ್ಧವಾಗಿದೆ.

ಕಾಕತೀಯ ಪ್ರತಾಪರುದ್ರನ ಕಾಲಕ್ಕೆ ಸೇರಿದ ತಾಮ್ರ ಶಾಸನವು ಇಲ್ಲಿ ಲಭಿಸಿದ್ದು, ಇದರ ಭಾಷೆ ಸಂಸ್ಕೃತವಾಗಿದೆ. ಹಿಂದೆ ಇದಕ್ಕೆ ಭೂಷಣಾಪುರ ಎಂಬ ಹೆಸರಿತ್ತೆಂಬ ಹೇಳಿಕೆಯಿದ್ದು. ಇಲ್ಲಿ ಪ್ರಾಚೀನವಾದ ಅಮರೇಶ್ವರ ಲಿಂಗವಿದೆ. ಭೂಸನೂರು ಕೊರಹಳ್ಳಿ ನಡುವೆ ಇರುವ ಅಮರಜಾ ಆಣೆಕಟ್ಟು ನಿರ್ಮಾಣ ಹಂತದಲ್ಲಿದ್ದು, ಆಸುಪಾಸಿನ ಜನರಿಗೆ ವಾರಾಂತ್ಯದ ವಿಹಾರಕ್ಕೆ ಪ್ರಶಸ್ತವಾಗಿದೆ.

**ಮಣ್ಣೂರು** (೧೦,೧೮೨) ತಾಲೂಕು ಕೇಂದ್ರವಾದ ಅಫಜಲ್‌ಪುರದಿಂದ ವಾಯವ್ಯಕ್ಕೆ ೩೧ ಕಿ.ಮೀ. ದೂರದಲ್ಲಿ ಭೀಮಾನದಿಯ ಎಡ ದಂಡೆಯ ಮೇಲಿರುವ ಚಾರಿತ್ರಿಕ ಮಹತ್ವದ ಧಾರ್ಮಿಕ ಕೇಂದ್ರವಾಗಿದೆ. ಪ್ರಾಚೀನ ಶಾಸನಗಳಲ್ಲಿ ಮಣಿಯೂರು-೧೨ ಎಂದೇ ಉಲ್ಲೇಖಿತಗೊಂಡಿರುವ ಈ ಊರು ಹಿಂದೆ ಆಲಂದೆ-೧೦೦೦ಕ್ಕೆ ಸೇರಿದ್ದ ಆಣಂದೂರು ೩೦ರ ಕಂಪಣವಾಗಿದ್ದು, ೧೨ ಹಳ್ಳಿಗಳ ಆಡಳಿತ ಕೇಂದ್ರವಾಗಿ ಪ್ರಾಮುಖ್ಯತೆ ಪಡೆದಿತ್ತು. ಇಲ್ಲಿಂದ ಈವರೆಗೆ ಎರಡು ಶಾಸನಗಳು ವರದಿಯಾಗಿದ್ದು, ಇನ್ನೊಂದು ಮೊದಲ ಬಾರಿಗೆ ಇಲ್ಲಿ ವರದಿಯಾಗುತ್ತಿದೆ. ಇವುಗಳಲ್ಲಿ ಬಜಾರಿನ ನಡುವಣ ಕಟ್ಟೆಯ ಮೇಲಿರುವ ೧೧೨೫ರ ಶಾಸನವು ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ್ದು, ಕಾಳಿದಾಸ ದಂಡನಾಯಕನು ಆಲಂದೆ-೧೦೦೦ದ ಹೆಗ್ಗಡೆಯಾಗಿದ್ದಾಗ, ಮಣಿಯೂರು-೧೨ರ ಕಂಪಣವರ್ಗೆಡೆ ಆದಿತ್ಯನಾಯಕನ ಮನ್ನೆಯ ಚಿಕ್ಕಗೋದಣರಸನು ಶಿವಾಲಯವನ್ನು ಹಾಳು ಮಾಡಲು, ಧರ್ಮಾರ್ಥವಾಗಿ ಗಂಗರಾಸಿ ಜೀಯನು ಆ ಅಧಿಕಾರಿಯೊಂದಿಗೆ ಹೋರಾಡುತ್ತಾ ಅವನನ್ನು ಕೊಂದು, ತಾನೂ ಸಾಯಲು ಮಹಾಮಂಡಳೇಶ್ವರ ಅಲ್ಲಹುಲಿಯರಸ ಹಾಗೂ ಮಣಿಯೂರ ೩೨ ಮಹಾಜನರು ನೆರೆದು ಗಂಗಜೀಯರ ಮಗ ಸಿಂಗರಾಸಿಗೆ ೩೨ ಮತ್ತರು ಭೂಮಿಯನ್ನು ದಾನವಾಗಿ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಈ ಶಾಸನಕಲ್ಲಿನ ಮೇಲಿರುವ ಶಿಲ್ಪವೂ ವಿಶಿಷ್ಟವಾಗಿದ್ದು, ಗಮನಾರ್ಹವಾಗಿದೆ. ಎಲ್ಲಮ್ಮನ ಗುಡಿಯ ನವರಂಗದ ಗೋಡೆಯ ಮೇಲಿರುವ ನಾಗರಿ ಶಾಸನವು ಅರಸನೊಬ್ಬನ ಬಿರುದಾವಳಿಗಳನ್ನು ಹೊಂದಿದ್ದು, ಅರ್ಧಕ್ಕೆ ನಿಂತು ಅಪೂರ್ಣವಾಗಿದೆ. ಇಲ್ಲಿಯ ಗವಿಸಿದ್ಧೇಶ್ವರ ದೇವಾಲಯದ ಅರ್ಧ ಮಂಟಪದಲ್ಲಿರುವ ಶಾಸನವು ಸುಮಾರು ೧೨ನೇ ಶತಮಾನಕ್ಕೆ ಸೇರಿದ್ದು ಬಹುಪಾಲು ನಶಿಸಿಹೋಗಿರುವುದರಿಂದ ಹೆಚ್ಚಿನ ವಿಷಯ ಲಭಿಸುವುದಿಲ್ಲ. ಬಹುಶಃ ಇದು ಈ ಗುಡಿಯ ನಿರ್ಮಾಣಕ್ಕೆ ಸಂಬಂಧಿಸಿದ ದತ್ತಿ ಶಾಸನವಾಗಿರುವಂತೆ ತೋರುತ್ತದೆ. ಊರಲ್ಲಿಂದು ಗವಿ ಸಿದ್ಧೇಶ್ವರ, ಕಲ್ಲಾಲಿಂಗೇಶ್ವರ ಹಾಗೂ ಎಲ್ಲಮ್ಮನ ದೇವಾಲಯಗಳು ಪ್ರಾಚೀನದ್ದಾಗಿದ್ದು ಮಹತ್ವ ಪಡೆದಿವೆ. ಊರ ನಡುವೆ ಇರುವ ಗವಿ ಸಿದ್ಧೇಶ್ವರ ದೇಗುಲವು ಸ್ವಲ್ಪ ತಗ್ಗಿನಲ್ಲಿದ್ದು, ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ಗುಡಿ ಪ್ರವೇಶಿಸಲು ಪಾರ್ಶ್ವದ್ವಾರವಿದ್ದು, ಅರ್ಧಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದ್ದು, ಶೈವದ್ವಾರಪಾಲಕರಿದ್ದಾರೆ. ನವರಂಗದಲ್ಲಿ ಗಣಪತಿ, ನಾಗ ಹಾಗೂ ಸಪ್ತಮಾತೃಕೆಯರ ಶಿಲ್ಪಗಳಿವೆ. ಊರ ನಡುವೆ ಇರುವ ಎಲ್ಲಮ್ಮನ ಗುಡಿಯು ಮೂಲದಲ್ಲಿ ಚನ್ನಕೇಶವ ದೇವಾಲಯವಾಗಿದ್ದು, ನಂತರದಲ್ಲಿ ಎಲ್ಲಮ್ಮನ ಗುಡಿಯಾಗಿ ಮಾರ್ಪಟ್ಟಿರುವಂತೆ ತೋರುತ್ತದೆ. ಎತ್ತರವಾದ ವೇದಿಕೆಯ ಮೇಲೆ ಬಹುಕೋನಾಕಾರದ ತಳವಿನ್ಯಾಸವುಳ್ಳ ಇದು ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಎಲ್ಲಮ್ಮನ ಜಗುಲಿ ಇದ್ದು ಪಂಚಶಾಖಾಲಂಕೃತವಾದ ಬಾಗಿಲವಾಡವಿದೆ. ಅಂತರಾಳದ ಶಿರೋಭಾಗವನ್ನು ಸುಂದರವಾದ ಮಕರತೋರಣದಿಂದ ಅಲಂಕರಿಸಲಾಗಿದ್ದು ಇಕ್ಕೆಲದಲ್ಲಿ ಆಳೆತ್ತರದ ದ್ವಾರಪಾಲಕಿಯರ ಶಿಲ್ಪಗಳಿದ್ದು, ನವರಂಗದ ನಡುವಣ ಛತ್ತನ್ನು ತಾಂಡವನೃತ್ಯ ಶಿವನನ್ನು ಒಳಗೊಂಡ ಅಷ್ಟದಿಕ್ಪಾಲಕರ ಫಲಕದಿಂದ ಅಲಂಕರಿಸಲಾಗಿದೆ. ಗರ್ಭಗೃಹದ ಹೊರಭಿತ್ತಿಯಲ್ಲಿ ಮೂರು ದೇವಕೋಷ್ಠಗಳಿದ್ದು ದುರ್ಗಿ, ಉಗ್ರನರಸಿಂಹ ಹಾಗೂ ವರಾಹ ಮೂರ್ತಿಗಳ ಸ್ವಲ್ಪ ಮುಕ್ಕಾದ ಸುಂದರವಾದ ಉಬ್ಬು ಶಿಲ್ಪಗಳಿವೆ. ಗರ್ಭಗೃಹ ಹಾಗೂ ಅಂತರಾಳದ ಭಿತ್ತಿಗಳನ್ನು ಸುಮಾರು ನಾಲ್ಕೂವರೆ ಅಡಿ ಎತ್ತರವಾದ ವೇಣುಗೋಪಾಲ, ಚಾಮುಂಡಿ, ಪದ್ಮಾಸೀನ ವಿಷ್ಣು, ಭೈರವಿ ಮುಂತಾದ ದೇವಾನುದೇವತೆಗಳ, ಶುಕ, ದರ್ಪಣ ಸುಂದರಿಯರ, ವಿವಿಧ ವಾದ್ಯ ನುಡಿಸುತ್ತಿರುವ ವಾದ್ಯಗಾರ್ತಿಯರ ಹಾಗೂ ನರ್ತಿಸುತ್ತಿರುವ ನರ್ತಕಿಯರ, ಸುಂದರ ಉಬ್ಬು ಶಿಲ್ಪಗಳಿಂದ ಅಲಂಕರಿಸಲಾಗಿದ್ದು, ಕಲಾತ್ಮಕವಾಗಿವೆ. ಇವೆಲ್ಲವೂ ಹಿಂದೆ ಇದು ವೈಷ್ಣವ ದೇವಾಲಯವಾಗಿತ್ತೆಂಬ ಅಂಶವನ್ನು ಖಚಿತಪಡಿಸುತ್ತವೆ. ಈ ದೇವಾಲಯದ ಬದಿಯಲ್ಲೆ, ಈ ಗುಡಿಗೆ ಸೇರಿದ ಭಾಗಗಳು ಚದುರಿಗೊಂಡು ಬಿದ್ದಿವೆ. ಈ ದೇವಿಯ ಐದು ದಿನದ ಜಾತ್ರೆಯು ಆಗಿ ಹುಣ್ಣಿಮೆಯಂದು ಜರುಗುತ್ತಿದ್ದು, ಜಾತ್ರೆಯಲ್ಲಿ ಹತ್ತಾರು ಸಾವಿರ ಜನ ಪಾಲ್ಗೊಳ್ಳುತ್ತಾರೆ. ಹೊಳೆ ದಂಡೆ ಬಳಿಯಿರುವ ಕಲ್ಲಾ ಲಿಂಗೇಶ್ವರ ಎಂದು ಕರೆಯಲ್ಪಡುವ

ಗುಡಿಯ ನವರಂಗವಷ್ಟೆ ಈಗ ಉಳಿದಿದ್ದು, ಗರ್ಭಗೃಹ, ಅಂತರಾಳ ಭಾಗಗಳು ನಾಶವಾಗಿವೆ. ಇದರ ಕಂಬಗಳು ಬೃಹತ್ತಾಗಿದ್ದು, ಸುಮಾರು ೧೦-೧೧ನೇ ಶತಮಾನದ ಕೃತಿಗಳಾಗಿದ್ದು, ಸುಂದರವಾಗಿವೆ. ಇದರ ಮುಂಬದಿಯಲ್ಲಿ ವೀರಗಲ್ಲಿದೆ.

ಹೊಳೆಯ ದಂಡೆಯ ಮೇಲಿರುವ ಚನ್ನಕೇಶವ ದೇವಾಲಯವು ನವೀನದ್ದಾಗಿದ್ದು, ಇದರ ಗರ್ಭಗೃಹದಲ್ಲಿ ಚನ್ನಕೇಶವನ ಸುಮಾರು ಎಂಟು ಅಡಿ ಎತ್ತರದ ಪ್ರಾಚೀನ ಶಿಲ್ಪವಿದ್ದು, ನಯನ ಮನೋಹರವಾಗಿದೆ. ಇದರ ಜಾತ್ರೆ ಹೊಸ್ತಿಲ ಹುಣ್ಣಿಮೆಯಲ್ಲಿ ಆಗುತ್ತದೆ.

ಮಧ್ವಾಚಾರ್ಯರ ಮೂರನೆಯ ಶಿಷ್ಯರಾದ ಮಾಧವ ತೀರ್ಥ (೧೩೩೩-೧೩೫೦)ರು ನಾಲ್ಕು ವೇದಗಳಿಗೂ ಮಧ್ವಭಾಷ್ಯಕ್ಕೆ ಅನುಸಾರವಾಗಿ ಟೀಕೆಗಳನ್ನು ರಚಿಸಿದ್ದು, ಧರ್ಮಶಾಸ್ತ್ರಕ್ಕೆ ಸಂಬಂಧಿಸಿದಂತೆ 'ಮಾಧವ ತೀರ್ಥಸ್ಮೃತಿ' ಎಂಬ ಕೃತಿಯೊಂದನ್ನೂ ಬರೆದಿರುವರೆಂಬ ಅಭಿಪ್ರಾಯವಿದ್ದು ಇವರು ವೃಂದಾವನಸ್ಥರಾದ ಸ್ಥಳ ಇದಾಗಿದ್ದು, ಹೊಳೆಯ ದಂಡೆಯ ಮೇಲೆ ಇವರ ವೃಂದಾವನ ಹಾಗೂ ಮಠಗಳಿವೆ. ಮಹಾತಪಸ್ವಿಗಳೂ, ಗ್ರಂಥಕಾರರೂ ಆಗಿದ್ದ ರಘೋತ್ತಮ ತೀರ್ಥ (೧೫೫೭-೯೫)ರ ಶಿಷ್ಯರಾದ ವೇದೇಶ ತೀರ್ಥರು ದ್ವೈತ ಸಿದ್ಧಾಂತಕ್ಕೆ ಸಂಬಂಧಿಸಿದಂತೆ 'ಛಾಂದೋಗ್ಯ ಭಾಷ್ಯ ಟೀಕಾ' ಮುಂತಾದ ಎಂಟಕ್ಕೂ ಹೆಚ್ಚು ಕೃತಿಗಳನ್ನು ರಚಿಸಿರುವರೆಂಬ ಅಭಿಪ್ರಾಯವಿದ್ದು, ಇವರ ವೃಂದಾವನವೂ ಮಾಧವ ತೀರ್ಥರ ವೃಂದಾವನದ ಬದಿಯಲ್ಲೇ ಇದೆ. ಅಲ್ಲೇ ಗೋವಿಂದ ಒಡೆಯರ್ ಎಂಬ ಬಿಡಿ ಸನ್ಯಾಸಿಯ ವೃಂದಾವನವೂ ಇದೆ. ರಘೋತ್ತಮ ಯತಿಗಳ ಗುರುಗಳಾದ ರಘುನಾಥ ತೀರ್ಥರು ಹಾಗೂ ಭಾಗವತ ಹಾಗೂ ನ್ಯಾಯಸುಧೆಗಳಿಗೆ ಅಪೂರ್ವ ಟಿಪ್ಪಣಿಗಳನ್ನು ಒದಗಿಸಿರುವ ಯದುಪತ್ಯಾಚಾರ್ಯರು (೧೫೭೦-೧೭೪೧) ಮೂಲತಃ ಈ ಊರಿನವರೇ ಆಗಿದ್ದು ಈ ಎಲ್ಲಾ ಕಾರಣಗಳಿಂದಾಗಿ ಇದು ವೈಷ್ಣವರ ಪುಣ್ಯ ಕ್ಷೇತ್ರವಾಗಿದೆ. ಇಲ್ಲಿ ಪದ್ಮಾವತಿ ಯಕ್ಷಿಯ ಗುಡಿ ಎಂದೇ ಕರೆಯಲ್ಪಡುವ ಪಾರ್ಶ್ವನಾಥ ತೀರ್ಥಂಕರನ ಜೈನ ಮಂದಿರವಿದ್ದು, ಮಹಾವೀರ, ಪಾರ್ಶ್ವನಾಥ, ಪದ್ಮಾವತಿ ಹಾಗೂ ಜ್ವಾಲಾಮಾಲಿನಿಯರ ಶಿಲ್ಪಗಳಿದ್ದು, ಕಂಚಿನ ಮೂರ್ತಿಗಳೂ ಇವೆ. ಉಳಿದಂತೆ ಊರಲ್ಲಿ ಸಿದ್ಧಯ್ಯ ಮುತ್ಯಾ, ಮಲ್ಲಿಕಾರ್ಜುನ, ಲಕ್ಷ್ಮಿ, ಖಂಡೇರಾಯ, ಹಾದಿ ಬಸವಣ್ಣ, ಬೀರದೇವ, ಹನುಮಂತ ಹಾಗೂ ಮರಗಮ್ಮನ ಗುಡಿಗಳಿದ್ದು, ಮಲ್ಲಿಕಾರ್ಜುನ ದೇವಾಲಯದ ಬಳಿ ಗಣಪತಿ, ಮಹಿಷ ಮರ್ದಿನಿ ಮುಂತಾದ ಶಿಲ್ಪಗಳಿದ್ದು ಒಂದೆರಡು ವೀರಗಲ್ಲುಗಳಿವೆ. ಊರಲ್ಲಿ ಉತ್ತರಾದಿ, ಪಂಚಾಕ್ಷರಿ ಹಾಗೂ ಕಳ್ಳಿ ಮಠಗಳಿದ್ದು, ಉತ್ತರಾದಿಮಠದಲ್ಲಿ ಸಂಸ್ಕೃತ ವೇದ ಶಾಲೆ ಇದೆ. ಇಲ್ಲಿ ಮಸೀದಿ ಹಾಗೂ ದರ್ಗಾ ಕೂಡ ಇವೆ.

**ಮರತೂರು** (೩೮೫೦) ತಾಲೂಕು ಕೇಂದ್ರವಾದ ಚಿತ್ತಾಪುರದಿಂದ ವಾಯವ್ಯಕ್ಕೆ ಸುಮಾರು ೨೫ ಕಿ.ಮೀ., ಗುಲಬರ್ಗಾದಿಂದ ಆಗ್ನೇಯಕ್ಕೆ ೧೬ ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದ್ದು, ಮರತೂರು ರೈಲ್ವೆ ನಿಲ್ದಾಣದಿಂದ ಮೂರು ಕಿ.ಮೀ. ಅಂತರದಲ್ಲಿದೆ. ಪ್ರಾಚೀನ ಶಾಸನಗಳಲ್ಲಿ "ಮರಿತೂರು" ಎಂದೇ ಉಲ್ಲೇಖಗೊಂಡಿರುವ ಇದು ಹಿಂದೆ ಗೊಂಕ-೧೨೦ಕ್ಕೆ ಸೇರಿದ್ದು, ಇಲ್ಲಿಂದ ಈವರೆಗೆ ವರದಿಯಾಗಿರುವ ಎರಡು ಶಾಸನಗಳಲ್ಲಿ ಒಂದು ಆರನೆಯ ವಿಕ್ರಮಾದಿತ್ಯನ (೧೦೭೬-೧೧೨೬) ಗುರು, ಆಸ್ಥಾನ ಪಂಡಿತ ವಿಜ್ಞಾನೇಶ್ವರರನ್ನು ದಾಖಲಿಸುವುದರೊಂದಿಗೆ ಪ್ರಾಮುಖ್ಯತೆ ಗಳಿಸಿದ್ದರೆ, ಇನ್ನೊಂದು ನಾಯಕನೊಬ್ಬ ಭೂದಾನ ಮಾಡಿದ ಅಂಶವನ್ನು ದಾಖಲಿಸಿದ್ದು ಅಸ್ಪಷ್ಟವಾಗಿದೆ. 'ಮಿತಾಕ್ಷರ' ವೆಂಬ ಧರ್ಮಶಾಸ್ತ್ರ ಗ್ರಂಥದ ಕರ್ತೃವಾದ ವಿಜ್ಞಾನೇಶ್ವರರು ಈ ಊರಿನವರೇ ಎಂಬ ಅಭಿಪ್ರಾಯವಿದೆ. ವಿಜ್ಞಾನೇಶ್ವರರ ಮಗ ಹೆಗ್ಗಡೆ ಬೀಚಿರಾಜ ಮತ್ತು ಅವನ ಸತಿ ಚಾಮಲದೇವಿಯರು ಮರಿತೂರಲ್ಲಿ ಮಹಾದೇವ, ಕೇಶವದೇವ ಹಾಗೂ ಬಿಬ್ಬೇಶ್ವರ ದೇವರುಗಳನ್ನುಳ್ಳ ತ್ರಿಕೂಟ ದೇವಾಲಯವನ್ನು ೧೧೨೩ರಲ್ಲಿ ನಿರ್ಮಿಸಿದ ಸಂದರ್ಭದಲ್ಲಿ, ಮಹಾಮಂಡಳೇಶ್ವರರಾದ ಬಿಬ್ಬರಸ, ಗೊಂಕರಸ ಹಾಗೂ ಇತರ ಪ್ರಮುಖರು, ಬಿಬ್ಬೇಶ್ವರ ದೇವರ ಪೂಜಾವಿಧಿ ಇತ್ಯಾದಿ ಕಾರ್ಯಗಳಿಗೆಂದು ಭೂಮಿಯನ್ನು ದಾನ ಬಿಟ್ಟ ಸಂದರ್ಭದಲ್ಲಿ, ಮಾರಿಸೆಟ್ಟಿಯು ತಾನು ಮಾಡಿಸಿದ ಸೂರ್ಯ ದೇವರಿಗೆಂದು ಅರ್ಧ ಮತ್ತರು ಭೂಮಿಯನ್ನು ದಾನ ಬಿಟ್ಟ ಅಂಶವನ್ನೂ ಈ ಶಾಸನ ತಿಳಿಸುತ್ತದೆ.

ಊರಲ್ಲಿಂದು ಪ್ರಾಚೀನ ಕಾಲದ ಕಾಶಿವಿಶ್ವನಾಥ, ಕಾಳಿಂಗೇಶ್ವರ, ಗುಬ್ಬಿನಾಥ, ಪಂಚಲಿಂಗ ಹಾಗೂ ಈಶ್ವರಲಿಂಗ (ಕುಂಬಾರಸಾಲಿ), ದೇವಾಲಯಗಳಿದ್ದು ಇತ್ತೀಚಿನ ಹಲವಾರು ಗುಡಿಗಳಿವೆ. ಕಾಶಿವಿಶ್ವನಾಥನ ಗುಡಿಯು ದ್ವಿಕೂಟವಾಗಿದ್ದು ಪೂರ್ವಾಭಿಮುಖವಾಗಿ ಒಂದು ಹಾಗೂ ಉತ್ತರಾಭಿಮುಖವಾಗಿ ಮತ್ತೊಂದು ಗರ್ಭಗೃಹ ಹಾಗೂ ಅಂತರಾಳಗಳನ್ನು

ಹೊಂದಿದ್ದು ಇವನ್ನು ಒಂದೇ ನವರಂಗದಿಂದ ಒಗ್ಗೂಡಿಸಲಾಗಿದೆ. ಉತ್ತರಾಭಿಮುಖವಾಗಿರುವ ಪ್ರಧಾನ ಗರ್ಭಗೃಹದಲ್ಲಿ ಶಿವಲಿಂಗವಿದ್ದರೆ ಇನ್ನೊಂದು ಗರ್ಭಗೃಹದಲ್ಲಿ ವೀರಭದ್ರನಿದ್ದಾನೆ. ಇದರ ಬಾಗಿಲವಾಡಗಳು ಪಂಚ ಶಾಖಾಲಂಕೃತವಾಗಿದ್ದು, ಲಲಾಟದಲ್ಲಿ ಗಣಪತಿ ಇದೆ. ಉತ್ತರಾಂಗದಲ್ಲಿ ಪಂಚ ಕಿರುಶಿಖರಗಳಿವೆ. ನವರಂಗದಲ್ಲಿರುವ ಎರಡು ದೇವಗೂಡುಗಳಲ್ಲಿ ಗಣಪತಿ ಶಿಲ್ಪಗಳಿವೆ. ಕದಂಬನಾಗರ ಶಿಖರವನ್ನುಳ್ಳ ಈ ಗುಡಿಯ ಆವರಣದಲ್ಲಿ ಕಾಳಿ ಹಾಗೂ ಸಪ್ತಮಾತೃಕಾ (ಎರಡು) ಶಿಲ್ಪಗಳಿದ್ದು, ಗುಡಿಯ ಮುಂಭಾಗದಲ್ಲಿ ಉದ್ದನೆಯ ಮಂಟಪವಿದೆ. ಇದರ ಎದುರು ಬದಿಯಲ್ಲೂ ಮಂಟಪವಿದೆ. ಈ ಗುಡಿಯ ಎಡ ಬದಿಯಲ್ಲಿರುವ ಕಾಳಿಂಗೇಶ್ವರ ಗುಡಿಯು ಏಕಕೂಟವಾಗಿದ್ದು ಗರ್ಭಗೃಹ, ತೆರೆದ ಅಂತರಾಳ, ನವರಂಗ ಹಾಗೂ ವಿಶಾಲವಾದ ಮುಖಮಂಟಪಗಳನ್ನು ಹೊಂದಿದೆ. ವಿಜ್ಞಾನೇಶ್ವರರ ಉಲ್ಲೇಖವನ್ನುಳ್ಳ ೧೧೧೬ರ ಶಿಲಾಶಾಸನವಿಲ್ಲಿದೆ. ಗರ್ಭಗೃಹದಲ್ಲಿ ಬಲಹರಿ ಶಿವಲಿಂಗವಿದ್ದು ಇದರ ಬಾಗಿಲವಾಡವು ಐದು ಅಲಂಕಾರಿಕ ಶಾಖೆಗಳನ್ನು ಹೊಂದಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಇದೆ. ನವರಂಗದ ನಡುವಣ ಛತ್ತು ಆಕರ್ಷಕವಾದ ಕಮಲವನ್ನು ಹೊಂದಿದೆ. ಈ ದೇವಾಲಯದ ಮುಖಮಂಟಪದಲ್ಲಿ, ಗಣಪತಿ, ಕೇಶವ, ನಾಗ ಮುಂತಾದ ಶಿಲ್ಪಗಳಿವೆ. ಹಾಳುಮಠ (ಗುಬ್ಬಿನಾಥ) ಎಂದು ಕರೆಯಲ್ಪಡುವ ದೇವಾಲಯವೂ ಕೂಡ ಪ್ರಾಚೀನದ್ದಾಗಿದ್ದು, ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು ಪೂರ್ವಾಭಿಮುಖವಾಗಿದೆ. ಗರ್ಭಗೃಹದಲ್ಲಿ ನಾಲ್ಕು ದೇವಕೋಷ್ಠಗಳಿದ್ದು, ನಡುವಣ ಛತ್ತು ಕಮಲವನ್ನು ಹೊಂದಿದೆ. ಇಲ್ಲಿಯ ಪಂಚಲಿಂಗೇಶ್ವರ ಗುಡಿಯು ತಗ್ಗಿನಲ್ಲಿದ್ದು, ಮೂಲದಲ್ಲಿ ಏಕ ಕೂಟವಾಗಿದ್ದು, ನಂತರದಲ್ಲಿ ಪಂಚಕೂಟವನ್ನಾಗಿಸುವ ಯತ್ನಮಾಡಲಾಗಿದೆ. ಇಲ್ಲಿ ಪ್ರಧಾನ ಗರ್ಭಗೃಹ, ಅಂತರಾಳ ಹಾಗೂ ನವರಂಗಗಳಿದ್ದು ನವರಂಗದ ಇಕ್ಕೆಲಗಳಲ್ಲಿ ನಾಲ್ಕು ಗರ್ಭಗೃಹಗಳಿದ್ದು ಅಲ್ಲಿ ಶಿವಲಿಂಗಗಳಿವೆ. ಕುಂಬಾರ ಸಾಲಿ (ಈಶ್ವರ ಲಿಂಗ) ಗುಡಿ ಎಂದು ಕರೆಯಲ್ಪಡುವ ಇನ್ನೊಂದು ತ್ರಿಕೂಟವಾಗಿದೆ. ಮೂರು ಗರ್ಭಗೃಹ ಹಾಗೂ ತೆರೆದ ಅಂತರಾಳಗಳನ್ನು ನಡುವಣ ಒಂದೇ ನವರಂಗದಿಂದ ಒಗ್ಗೂಡಿಸಲಾಗಿದ್ದು ಎಲ್ಲಾ ಗರ್ಭಗೃಹಗಳಲ್ಲೂ ಬಲಹರಿ ಶಿವಲಿಂಗಗಳಿದ್ದು ಇವುಗಳ ಬಾಗಿಲವಾಡಗಳು ತ್ರಿಶಾಖಾಲಂಕೃತವಾಗಿವೆ. ನವರಂಗದಲ್ಲಿ ಗಣಪತಿ ಹಾಗೂ ಸಪ್ತ ಮಾತೃಕಾ ಶಿಲ್ಪಗಳಿದ್ದು ನಡುವಣ ಛತ್ತಲ್ಲಿ ಅರಳಿದ ಕಮಲವಿದೆ. ಇದರ ಪ್ರಧಾನದ್ವಾರವು ಚತುರ್ ಶಾಖಾಲಂಕೃತವಾಗಿದ್ದು ದೇವಾಲಯದ ಭಿತ್ತಿಯು ನಿರಾಡಂಬರವಾಗಿದ್ದು ಅಲ್ಪ ಅಲಂಕಾರದಿಂದ ಕೂಡಿದೆ. ಶಾಸನೋಕ್ತ ತ್ರಿಕೂಟ ಇದೆ ಆಗಿದ್ದು ೧೧೧೬ರಲ್ಲಿ ಇದನ್ನು ನಿರ್ಮಿಸಲಾಗಿದೆ. ಊರ ಹೊರ ವಲಯದಲ್ಲಿ ಬಮ್ಮಲಿಂಗೇಶ್ವರ, ಹಯ್ಯಾಳ ಸಿದ್ಧೇಶ್ವರ, ಉಣಚಿರಾಯ, ಮೌನೇಶ್ವರ, ಮಹಾಲಕ್ಷ್ಮಿ, ವಿಠಲ, ಬಸವೇಶ್ವರ, ಸಿದ್ಧೇಶ್ವರ, ಎಲ್ಲಾಲಿಂಗ, ಬಸವಣ್ಣ ಬೀರಲಿಂಗ, ಮಹಾಪೂರತಾಯಿ, ಎಲ್ಲಮ್ಮ ಪಾಲ್ಕಮ್ಮ ಪೋಚಮ್ಮ ಮರಗಮ್ಮ ಮುಂತಾದ ನವೀನ ಗುಡಿಗಳಿದ್ದು, ಬಸವೇಶ್ವರ ಹಾಗೂ ಲಿಂಗೇಶ್ವರ ಮಠಗಳಿವೆ. ಜೊತೆಗೆ ಮಸೀದಿ ಹಾಗೂ ಮೆಹಬೂಬು ಸುಬಾನಿಯ ದರ್ಗಾಗಳಿವೆ. ಇಲ್ಲಿಯ ಗೋಳಗುಮ್ಮಟ ಮಾದರಿಯ ಸಮಾಧಿಯು ಗಮನಾರ್ಹವಾಗಿದೆ.

**ಮಂದೇವಾಲ** (೪೧೦೧)ವು ತಾಲೂಕು ಕೇಂದ್ರವಾದ ಜೇವರ್ಗಿಯಿಂದ ಪಶ್ಚಿಮಕ್ಕೆ ೨೪ ಕಿ.ಮೀ. ದೂರದಲ್ಲಿ ಜೇವರ್ಗಿ-ಸಿಂಧಗಿ ರಸ್ತೆಯಲ್ಲಿದ್ದು ಬೃಹತ್ ಶಿಲಾಯುಗದ ಸಮಾಧಿಗಳನ್ನುಳ್ಳ ಮಹತ್ವದ ಊರಾಗಿದೆ. ಶಂಕರಲಿಂಗ ದೇವಾಲಯವು ಇಲ್ಲಿಯ ಪ್ರಾಚೀನ ದೇವಾಲಯವಾಗಿದ್ದು ಸುಮಾರು ೧೧-೧೨ನೇ ಶತಮಾನಕ್ಕೆ ಸೇರಿದ ರಚನೆಯಾಗಿದೆ. ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನುಳ್ಳ ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ಇಂದು ಪೂರ್ಣ ಜೀರ್ಣೋದ್ಧಾರಗೊಂಡಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲವಾಡವು ಸುಂದರವಾಗಿದ್ದು, ಶೈವದ್ವಾರಪಾಲಕರನ್ನು ಹೊಂದಿದೆ. ನವರಂಗದಲ್ಲಿ ಗಣಪತಿಯ ಶಿಲ್ಪವಿದ್ದು, ಈ ಗುಡಿಯ ಪರಿಸರದಲ್ಲಿ ಚಾಮುಂಡಿ ಹಾಗೂ ಗಣಪತಿಯ ಶಿಲ್ಪಗಳಿದ್ದು, ಒಂದೆರಡು ವೀರಗಲ್ಲುಗಳಿವೆ. ಗರ್ಭಗುಡಿಯನ್ನು ಗುಮ್ಮಟಾಕಾರದ ಶಿಖರದಿಂದ ಅಲಂಕರಿಸಲಾಗಿದೆ. ಈ ದೇವಾಲಯದ ನವರಂಗ ದ್ವಾರವನ್ನು ಅಲಂಕರಿಸಿದ್ದ ಸಿಂಹಗಳ ಬಿಡಿ ಶಿಲ್ಪಗಳು ಸುಂದರವಾಗಿವೆ. ಉಳಿದಂತೆ ಊರಲ್ಲಿ ಹನುಮಂತ, ಶರಣ ಬಸವೇಶ್ವರ, ಎಲ್ಲಪ್ಪ, ಸಿದ್ದಪ್ಪ, ಹುಡೆದ ಲಕ್ಷ್ಮಿ ಹಾಗೂ ದ್ಯಾಮವ್ವನ ಗುಡಿಗಳಿದ್ದು, ಶಂಕರಲಿಂಗೇಶ್ವರ ದೇವರ ಜಾತ್ರೆಯು ಯುಗಾದಿ ಹಬ್ಬದಂದು ಜರುಗುತ್ತದೆ. ಮಸೀದಿ ಹಾಗೂ ದರ್ಗಾ ಕೂಡ ಇಲ್ಲಿವೆ.

**ಮದ್ರಿಕಿ** (೨೬೮೦)ಯು ತಾಲೂಕು ಕೇಂದ್ರವಾದ ಶಹಾಪುರದಿಂದ ವಾಯವ್ಯಕ್ಕೆ ೧೫ ಕಿ.ಮೀ. ದೂರದಲ್ಲಿದ್ದು, ಪ್ರಾಚೀನ ಶಾಸನಗಳಲ್ಲಿ 'ಅಗ್ರಹಾರ ಮಲ್ದರ್ಕೆ', 'ಮರ್ದಿರ್ಕೆ', 'ಮರ್ದಿರುಕೆ ನಗರ' ಎಂದೆಲ್ಲಾ ಉಲ್ಲೇಖಗೊಂಡಿರುವ ಈ ಊರಿಂದ ಈವರೆಗೆ ಐದು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಕಲ್ಯಾಣದ ಚಾಳುಕ್ಯ ಅರಸ ಜಗದೇಕಮಲ್ಲನ

ವಿಶ್ವಕರ್ಮ ಸಮಾಜದ ಪುರುಷರಿಗೆ ಮಾತ್ರ ಅವಕಾಶವಿದೆ. ದೇವಿ ಮುಖವಾಡ ಧರಿಸುವವರು ಸಿದ್ಧವಿರುವ ಸೀರೆ, ಬೆಳ್ಳಿ ಕಡಗಗಳನ್ನು ಧರಿಸಬೇಕಾಗುತ್ತದೆ. ದೇವಿಯೊಂದಿಗೆ ಬಡಿಗೆಯಾಟವಾಡಲು ಹರಿಜನ ಸಮಾಜದ ಎರಡು ಪಂಗಡಗಳವರನ್ನು ಆಹ್ವಾನಿಸಲಾಗುತ್ತದೆ. ಎರಡು ಪಂಗಡಗಳ ಜನರು ದೇವಿಯೊಂದಿಗೆ ಬಡಿಗೆಯಾಟವಾಡಲು ಗುಂಪು ಗುಂಪಾಗಿ ನುಗ್ಗಿ ಬರುತ್ತಾರೆ. ಇವರಲ್ಲಿ ಯಾವ ಗುಂಪಿನವರು ಮೊದಲು ಗಂಧದ ಬಟ್ಟಲು ಹಿಡಿದಿರುವವರನ್ನು ಮುಟ್ಟುತ್ತಾರೋ ಆ ಗುಂಪು ಅಕ್ಕ ಚೌಡಮ್ಮನೊಂದಿಗೂ, ಇನ್ನೊಂದು ಗುಂಪು ತಂಗಿ ಚೌಡಮ್ಮನೊಂದಿಗೂ ಬಡಿಗೆಯಾಟದಲ್ಲಿ ತೊಡಗುತ್ತವೆ. ಬಹಳ ವಿಶಿಷ್ಟವಾದ ರೀತಿಯಲ್ಲಿ ನಡೆಯುವ ಈ ಬಡಿಗೆಯಾಟವನ್ನು ನೋಡಲು ಸಾವಿರಾರು ಜನ ನೆರೆದಿರುತ್ತಾರೆ. ಈ ಬಡಿಗೆಯಾಟ ಸೂರ್ಯ ಮುಳುಗುವವರೆಗೆ ನಡೆಯುತ್ತದೆ. ಆ ನಂತರ ದೇವಿಯರು ಗುಡಿಯನ್ನು ಸೇರುತ್ತಾರೆ. ರಾತ್ರಿ ಡೊಳ್ಳು, ಭಜನೆ, ಕೊಳಲು ಹಾಗೂ ದೇವರ ಹೇಳಿಕೆಗಳು ನಡೆಯುತ್ತವೆ. ಮಾರನೆಯ ಮುಂಜಾನೆ ವೇಳೆ ದೇವಿಯರನ್ನು ಮಡಿ ಮಾಡಿ, ಊಟ ಮಾಡಿಸುತ್ತಾರೆ. ಬೆಳಕು ಹರಿಯುತ್ತದೆ. ದೇವಿ ಗುಡಿ ಸೇರುತ್ತಾಳೆ. ಜನ ಜಾತ್ರೆ ಮುಗಿಸಿಕೊಂಡು ಮನೆಗೆ ತೆರಳುತ್ತಾರೆ. ಶಿವರಾತ್ರಿ ಹಬ್ಬದೊಂದಿಗೆ ಜಾಗರಣೆಗೆ ಹೊಂದಿಕೊಳ್ಳುವಂತೆ ಎರಡು ವರ್ಷಕ್ಕೊಮ್ಮೆ ಜರುಗುವ ಈ ಜಾತ್ರೆ ವಿಶಿಷ್ಟವೇ ಸರಿ. ಉಳಿದಂತೆ ಊರಲ್ಲಿ ಹನುಮಂತ, ಚೌಡಮ್ಮ ಮರಗಮ್ಮನ ಗುಡಿಗಳಿದ್ದು ಗಾಂಧಿಜಿಗೆಂದೇ ನಿರ್ಮಿಸಿರುವ ಗಾಂಧಿ ಗುಡಿ ಇರುವುದು ವಿಶಿಷ್ಟವಾಗಿದೆ.

**ಮಾಗಣಗೇರಿ** (೧೮೮೭)ಯು ತಾಲೂಕು ಕೇಂದ್ರವಾದ ಜೇವರ್ಗಿಯಿಂದ ನೈಋತ್ಯಕ್ಕೆ ಸುಮಾರು ೪೫ ಕಿ.ಮೀ., ಸಿಂಧಗಿಯಿಂದ ಆಗ್ನೇಯಕ್ಕೆ ೩೨ ಕಿ.ಮೀ. ದೂರದಲ್ಲಿದೆ. ಪ್ರಾಚೀನ ಶಾಸನಗಳಲ್ಲಿ 'ಮಾಗಿಣಿಗೆರೆ' ಎಂದೇ ಉಲ್ಲೇಖಿತಗೊಂಡಿರುವ ಈ ಊರಿಂದ ಈವರೆಗೆ ಶಾಸನಗಳಾವುದೂ ವರದಿಯಾಗಿಲ್ಲ. ಇತ್ತೀಚೆಗೆ ಇಲ್ಲಿಯ ಬಲಭೀಮರಾಯನ ಗುಡಿಯ ಸಭಾ ಮಂಟಪದಲ್ಲಿ ಸೇರಿರುವ ಸುಮಾರು ೧೧ನೇ ಶತಮಾನಕ್ಕೆ ಸೇರಿದ ರಾಷ್ಟ್ರಕೂಟರಿಗೆ ಸಂಬಂಧಿಸಿದ ಏಳು ಸಾಲಿನ ಶಾಸನವೊಂದನ್ನು ಪತ್ತೆ ಹಚ್ಚಲಾಗಿದೆ. ಗುಡಿಯ ಸಭಾಮಂಟಪದ ಕಂಬಗಳು ಕಲ್ಯಾಣದ ಚಾಳುಕ್ಯರ ಕಾಲದ ಕಂಬಗಳಾಗಿದ್ದು, ಗಣಪತಿಯ ಮೂರು ಶಿಲ್ಪಗಳಿವೆ. ಊರ ಪ್ರವೇಶದಲ್ಲಿರುವ ಮಲ್ಲಯ್ಯ ಹಾಗೂ ಕೆಂಚರಾಯನ ಗುಡಿ ಬಳಿ ವಿವಿಧ ಪ್ರಮಾಣದ ಬಂಡೆಕಲ್ಲುಗಳ ಮೇಲೆ ಶಿವಲಿಂಗ, ತ್ರಿಶೂಲ, ಕುದುರೆಯ ಮೇಲೆ ಕುಳಿತಿರುವ ಮೈಲಾರ, ಮಾಳಬ್ಬೆ, ನಾಯಿ, ಕುದುರೆ ಹಾಗೂ ಆನೆಗಳನ್ನು ಕೆತ್ತಿಸಿ ಭಕ್ತರು ಸೇವಾ ರೂಪದಲ್ಲಿ ಇಟ್ಟಿದ್ದಾರೆ. ಊರ ಹೊರಗೆ ಪಂಚಲಿಂಗೇಶ್ವರ ಗುಡಿ ಇದ್ದು, ಗರ್ಭಗೃಹವಷ್ಟೇ ಉಳಿದಿದ್ದು, ಅದರಲ್ಲಿ ತೀರ್ಥಂಕರ ಪೀಠದ ಮೇಲೆ ಶಿವಲಿಂಗಗಳಿವೆ. ಇದರ ಬಾಗಿಲವಾಡವು ಚತುರ್ಶಾಖಾಲಂಕೃತವಾಗಿದ್ದು, ಶೈವ ದ್ವಾರಪಾಲಕರಿದ್ದಾರೆ. ಉಳಿದಂತೆ ಊರಲ್ಲಿ ರುದ್ರಸ್ವಾಮಿ ಮಠ, ತೋಟಪ್ಪಯ್ಯ, ಚನ್ನವೃಷಭೇಂದ್ರ, ಪಡದಪ್ಪ, ದೇವಮಾಯಿ ಹಾಗೂ ಚೌಡಮ್ಮನ ಗುಡಿಗಳಿದ್ದು, ಮಸೀದಿ ಹಾಗೂ ದರ್ಗಾಗಳೂ ಕೂಡ ಇವೆ.

**ಮಾಡಿಯಾಳ** (೫೨೯೫)ವು ತಾಲೂಕು ಕೇಂದ್ರವಾದ ಆಳಂದದಿಂದ ನೈಋತ್ಯಕ್ಕೆ ೨೪ ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಮಾಡಿಫಳ, ಅಗ್ರಹಾರ ಮಾಡಿಫಳ' ಎಂದೇ ಉಲ್ಲೇಖಿತಗೊಂಡಿರುವ ಈ ಊರು ಹಿಂದೆ ಆಲಂದೆ - ೧೦೦೦ಕ್ಕೆ ಸೇರಿದ ಗೊಂಕ - ೧೨೦ರಲ್ಲಿತ್ತು. ಇಲ್ಲಿಂದ ಈವರೆಗೆ ಎಂಟು ಶಾಸನಗಳು ವರದಿಯಾಗಿದ್ದು, ಇತ್ತೀಚೆಗೆ ಇನ್ನೆರಡು ಶಾಸನಗಳನ್ನು ಪತ್ತೆ ಹಚ್ಚಲಾಗಿದ್ದು, ಮೊದಲ ಬಾರಿಗೆ ಅವುಗಳನ್ನು ಇಲ್ಲಿ ವರದಿ ಮಾಡಲಾಗಿದೆ. ನೆರೆಯ ನಿಂಬರ್ಗಿ ಗ್ರಾಮದ ಈಶ್ವರ ಗುಡಿಯಲ್ಲಿರುವ ೧೦೪೭ ಹಾಗೂ ೧೦೫೫ರ ತ್ರುಟಿತ ಶಾಸನಗಳು ಮಹಾಮಂಡಳೇಶ್ವರ ದೇವನಾಗರಸನು ಮಾಡಿಫಳದಲ್ಲಿ ತಾನೇ ನಿರ್ಮಿಸಿದ ಸ್ವಯಂಭುಕೋಟಿ ಶಂಕರ ದೇವಾಲಯಕ್ಕೆ ನಿಂಬರಿಗೆ ಗ್ರಾಮವನ್ನು ದಾನಬಿಟ್ಟ ವಿಷಯವನ್ನು ತಿಳಿಸಿದರೆ, ೧೦೯೮ರ ಶಾಸನವು ದೇವನಾಗರಸನ ಮಗ ಅಹವಮಲ್ಲನ ಬೇಡಿಕೆಯಂತೆ ಈ ಗುಡಿಯ ಮಠದ ಸರ್ವೇಶ್ವರ ಆಚಾರ್ಯರಿಗೆ ೨೦೦ ಮತ್ತರು ಭೂಮಿಯನ್ನು ದಾನಕೊಟ್ಟ ವಿಷಯವನ್ನು ತಿಳಿಸುತ್ತದೆ. ಮಾಡಿಯಾಳದ ಶಂಕರಲಿಂಗ ಗುಡಿಯ ಮುಖಮಂಟಪದ ಕಂಬದ ಮೇಲಿರುವ ೧೧೮೪ರ ಶಾಸನವೂ ಸೇರಿದಂತೆ ಇಲ್ಲಿಂದ ವರದಿಯಾಗಿರುವ ಎಲ್ಲಾ ಶಾಸನಗಳು ಸ್ವಯಂಭು ಕೋಟಿ ಶಂಕರ ದೇವರ್ಗೆ ಬಿಟ್ಟ ದತ್ತಿ ಶಾಸನಗಳಾಗಿವೆ. ಇದರ ಜೊತೆಗೆ ಇವು ಸಾಂದರ್ಭಿಕವಾಗಿ ದೇವಿಗೆರೆಯ ಕುಸಿದ ಏರಿಯ ದುರಸ್ತಿಗೆ ಸಂಬಂಧಿಸಿದಂತೆ, ವೇಳುಗ್ರಾಮದ ಭೂಷಣೇಶ್ವರ ಗುಡಿ ಬಗೆಗೆ, ಮಾಡಿಯಾಳದ ಭೋಗೇಶ್ವರ ದೇವರ್ಗೆ ಸಂಬಂಧಿಸಿದಂತೆ, ಶಂಕರ ದೇವಾಲಯದ ಬಾವಿಯ ಬಗೆಗೆ, ಗಾಣಾಯಿಲೆ, ತಿಪ್ಪೆ ಸುಂಕಗಳಿಗೆ, ಮಠದ ನಿವೇಶನಕ್ಕೆ ಸಂಬಂಧಿಸಿದಂತೆ

ಹಾಗೂ ಮಡಕೆ - ಹರವೆಗಳ ಸುಂಕಗಳ ಬಗ್ಗೆ ಮಾಹಿತಿಯನ್ನು ಒದಗಿಸುತ್ತವೆ. ಊರ ಹೊರಗೆ ಸುಮಾರು ಒಂದೂವರೆ ಕಿ.ಮೀ. ದೂರದಲ್ಲಿರುವ ಲಮಾಣಿ ತಾಂಡದ ಬಳಿ ಮಲ್ಲಯ್ಯನ ಗುಡಿ ಇದೆ. ಇದು ವಿಶಾಲವಾದ ಗುಡಿಯಾಗಿದ್ದು ಈ ದೇವಾಲಯದ ಪ್ರಾಕಾರದ ಪ್ರವೇಶ ದ್ವಾರದ ಕಲ್ಲು ಸುಮಾರು ೧೨ನೇ ಶತಮಾನಕ್ಕೆ ಸೇರಿದ ೧೨ ಸಾಲಿನ ತುಂಡು ಶಾಸನವಾಗಿದ್ದು ಹೆಗ್ಗಡೆ ಮಲ್ಲರಸ, ಮಾಶಿಯಾಳ, ಶುಭಚರಿತಂ ಹಾಗೂ ಸರ್ವೇಶ್ವರ ಆಚಾರ್ಯರ ಬಗ್ಗೆ ಪ್ರಸ್ತಾಪಿಸಿದ್ದು, ಇದು ಇಲ್ಲಿ ಮೊದಲ ಬಾರಿಗೆ ವರದಿಯಾಗುತ್ತಿದೆ. ಈ ದೇವರ ಜಾತ್ರೆಯು ಚಟ್ಟಿ ಅಮಾವಾಸ್ಯೆಯಾದ ಏಳು ದಿನಕ್ಕೆ ಜರುಗುತ್ತದೆ.

ಊರ ಪ್ರವೇಶದಲ್ಲಿರುವ ಶಂಕರಲಿಂಗ ದೇವಾಲಯವೇ ಶಾಸನೋಕ್ತ ಸ್ವಯಂಭು ಕೋಟಿ ಶಂಕರ ದೇವಾಲಯವಾಗಿದ್ದು, ಆಕರ್ಷಕವಾಗಿವೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವು ಗರ್ಭಗೃಹ, ತೆರೆದ ಅಂತರಾಳ, ನವರಂಗ ಹಾಗೂ ಮುಖ ಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ದ್ವಾರಬಂಧವು ಪಂಚ ಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಇದೆ. ಈ ಬಾಗಿಲವಾಡದ ಎಡ ಭಾಗದಲ್ಲಿ ಒಂದೆರಡು ಮಿಥುನ ಶಿಲ್ಪಗಳಿರುವುದು ವಿಶಿಷ್ಟವಾಗಿದೆ. ಅಂತರಾಳದಲ್ಲಿ ಸುಂದರವಾದ ಚಂದ್ರ ಶಿಲೆಯಿದೆ. ನವರಂಗದ ನಡುವಣ ಕಂಬಗಳಲ್ಲಿ ಒಂದರ ಪೀಠ ಭಾಗದಲ್ಲಿ ಸೂರ್ಯ, ಗಣಪತಿ, ಸರಸ್ವತಿ ಹಾಗೂ ಅನಂತ ಪದ್ಮನಾಭನ ಉಬ್ಬು ಕೆತ್ತನೆಗಳಿದ್ದು ಸುಂದರವಾಗಿವೆ. ನವರಂಗವನ್ನು ಪ್ರವೇಶಿಸಲು ಮೂರು ಕಡೆಯಿಂದಲೂ ಪ್ರವೇಶವಿದ್ದು ದಕ್ಷಿಣ ದ್ವಾರಕ್ಕೆ ಮಂಟಪವಿದ್ದು ಇದರ ಹಾಗೂ ಉತ್ತರ ದ್ವಾರದ ಬಾಗಿಲವಾಡಗಳು ಪಂಚ ಶಾಖಾಲಂಕೃತವಾಗಿದ್ದರೆ, ಪ್ರಧಾನ ದ್ವಾರದ ಬಾಗಿಲವಾಡವು ಚತುರ್ ಶಾಖಾಲಂಕೃತವಾಗಿದ್ದು ಆಕರ್ಷಕವಾಗಿವೆ. ಈ ದೇವಾಲಯದ ಭಿತ್ತಿಯು ನಿರಾಡಂಬರವಾಗಿದ್ದು ದಕ್ಷಿಣ ದ್ವಾರದ ಬಳಿ ಪ್ರಾಚೀನ ಬಾವಿಯಿದೆ. ಈ ಗುಡಿಯಲ್ಲಿ ಸುಮಾರು ೧೩ನೇ ಶತಮಾನಕ್ಕೆ ಸೇರಿದ ಒಂದು ವೀರಗಲ್ಲು ಕೂಡ ಇದೆ.

ಈ ದೇವಾಲಯದ ಮುಂದೆ ಸುಮಾರು ೪೦ ಅಡಿ ಅಂತರದಲ್ಲಿ ಎದುರು ಮುಖನಾಗಿ ಬಸವಣ್ಣನ ಗುಡಿ ಇದ್ದು, ಶಾಸನೋಕ್ತ ಭೋಗೇಶ್ವರ ಗುಡಿ ಇದೇ ಇರಬೇಕೆಂದು ತೋರುತ್ತದೆ. ಈ ನಂದಿ ಮಂಟಪಕ್ಕೆ ಪೂರ್ವ ಪಶ್ಚಿಮಗಳಿಂದ ದ್ವಾರಗಳಿದ್ದು ತ್ರಿಶಾಖಾಲಂಕೃತ ಬಾಗಿಲವಾಡಗಳಿಂದ ಅಲಂಕರಿಸಲ್ಪಟ್ಟಿದ್ದು ಲಲಾಟದಲ್ಲಿ ಸರಸ್ವತಿ ಹಾಗೂ ಗಣಪತಿಯ ಕೆತ್ತನೆ ಇವೆ. ಈ ನಂದಿ ಮಂಟಪದ ಪೂರ್ವ-ಪಶ್ಚಿಮ ದ್ವಾರಕ್ಕೆ ಹೊಂದಿಕೊಂಡಂತೆ ಅರ್ಧ ಮಂಟಪಗಳಿದ್ದು ಇವುಗಳ ಕಂಬಗಳು ಸರಳವಾಗಿದ್ದರೂ ಆಕರ್ಷಕವಾಗಿವೆ. ಇಲ್ಲಿಯ ಶಂಕರಲಿಂಗ ಗುಡಿಯ ಬಲಭಾಗಕ್ಕಿರುವ ಕಲ್ಯಾಣ ಮಂಟಪ (ಕಲ್ಯಾಣ ಮಠ)ವು ಚೌಕಾಕಾರದ ವಿನ್ಯಾಸದಿಂದ ಕೂಡಿದ್ದು ಇದನ್ನು ಪ್ರವೇಶಿಸಲು ಉತ್ತರ ದಕ್ಷಿಣ ಹಾಗೂ ಪೂರ್ವ ದಿಕ್ಕುಗಳಿಂದ ಪ್ರವೇಶವಿದೆಯಾದರೂ ಇಂದು ಉತ್ತರ ದ್ವಾರವಷ್ಟೆ ಉಳಿದಿದೆ. ಈ ದ್ವಾರದ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಸರಸ್ವತಿಯನ್ನು ಕೆತ್ತಲಾಗಿದ್ದು ಉತ್ತರಾಂಗದಲ್ಲಿ ಗಣಪತಿಯ ಶಿಲ್ಪವಿದೆ. ಈ ಬಾಗಿಲವಾಡದ ಬಲಭಾಗದಲ್ಲಿ ಮೇಲುಗಡೆ ಇರುವ ಮಂಗ ಹಾಗೂ ಮೊಸಳೆಗಳ ಕೆತ್ತನೆ ಪಂಚತಂತ್ರದ ಕಥೆಯನ್ನು ನೆನಪಿಗೆ ತರುತ್ತಿದ್ದು ಮೊದಲ ಬಾರಿಗೆ ಇಲ್ಲಿ ವರದಿಯಾಗುತ್ತಿದ್ದು ಎಡಭಾಗದಲ್ಲಿ ಮಿಥುನ ಶಿಲ್ಪವಿದೆ. ಉತ್ತರಾಂಗದ ಮೇಲಿರುವ ಸುಮಾರು ೧೨ನೇ ಶತಮಾನಕ್ಕೆ ಸೇರಿದ ಕಿರು ಶಾಸನವು ಆಚಾರ್ಯ ಧ್ರುವೇಶ್ವರರನ್ನು ಹಾಗೂ ಶಂಕರದೇವಾಲಯದ ಮಠವನ್ನು ಕುರಿತು ಹೇಳುತ್ತಿದ್ದು ಮೊದಲ ಬಾರಿಗೆ ಇಲ್ಲಿ ದಾಖಲಾಗುತ್ತಿದೆ. ಈ ಶಾಸನದಿಂದ ಇದೇ ಶಂಕರ ಗುಡಿಯ ಮಠವೆಂದು ಗೊತ್ತಾಗುತ್ತದೆ.

ಊರಿಂದ ಪಶ್ಚಿಮಕ್ಕೆ ಸುಮಾರು ಎರಡು ಕಿ.ಮೀ. ದೂರದಲ್ಲಿರುವ 'ರಾಮತೀರ್ಥ' ಹೊಂಡವಿದ್ದು, ಅದರ ಬಳಿಯಲ್ಲೇ ಉತ್ತರಾಭಿಮುಖವಾಗಿರುವ ಸುಮಾರು ೧೨ನೇ ಶತಮಾನಕ್ಕೆ ಸೇರಿದ ರಾಮಲಿಂಗ ದೇವಾಲಯವಿದೆ. ಗರ್ಭಗೃಹದಲ್ಲಿ ಬಲಹರಿ ಲಿಂಗವಿದ್ದು, ಅಂತರಾಳದ ಬಾಗಿಲವಾಡ ಸರಳವಾಗಿದ್ದು, ನವರಂಗದ ಎಡಭಾಗ ಶಿಥಿಲವಾಗಿದೆ. ಈ ದೇವಾಲಯಕ್ಕೆ ಹೋಗುವ ಹಾದಿಯಲ್ಲಿ ಎಲ್ಲಮ್ಮನ ಗುಡಿ ಇದ್ದು, ಇದರ ಬಳಿಯಲ್ಲೇ ಶೆಟಕೆವ್ವನ ಗುಡಿ ಇದ್ದು ಬಾಣಂತಿಯರು ಐದನೆಯ ದಿನ ಇಲ್ಲಿಗೆ ಬಂದು ತೊಟ್ಟಿಲನ್ನು ಕಟ್ಟಿ ಬ್ರಹ್ಮಲಿಂಗ ಹಾಗೂ ಶೆಟಗವ್ವೆಯರನ್ನು ಪೂಜಿಸುತ್ತಾರೆ.

ಇಲ್ಲಿಯ ಅಲ್ಲಮ ಪ್ರಭು ಗುಡಿ-ದರ್ಗಾವು ಶಿವಲಿಂಗ ಹಾಗೂ ಮಜಾರಗಳನ್ನು ಹೊಂದಿದ್ದು ಹಿಂದೂ ಮುಸ್ಲೀಮ ಭಾವೈಕ್ಯತೆಯ ಸಂಕೇತವಾಗಿದೆ. ಹೋಳಿ ಹುಣ್ಣಿಮೆಯ ದಿನ ಇದರ ಪೂಜಾರಿಯು ಮುಸ್ಲೀಮ ಫಕೀರನಂತೆ ವೇಷ

ಧರಿಸಿ ಕಾಲು ನಡಿಗೆಯಲ್ಲಿ ಅಷ್ಟೂರು (ಬೀದರ್ ಜಿಲ್ಲೆ) ಗ್ರಾಮಕ್ಕೆ ಹೋಗಿ ಅಲ್ಲಿ ಜರುಗುವ ಅಹಮ್ಮದ ಶಾವಲಿ ದರ್ಗಾದ ಉರುಸನ್ನು ಪ್ರಾರಂಭಿಸುತ್ತಾನೆ. ಅಲ್ಲಿಂದ ಹಿಂದಕ್ಕೆ ಬಂದ ನಂತರ ಉಗಾದಿ ಅಮಾವಾಸ್ಯೆಗೆ ಇಲ್ಲಿ ಜಾತ್ರೆ ನಡೆಯುತ್ತದೆ. ಉಳಿದಂತೆ ಊರಲ್ಲಿ ಮಲ್ಲಿಕಾರ್ಜುನ, ಬೀರಲಿಂಗ, ಜಟ್ಟಿಂಗರಾಯ, ವೀರಭದ್ರ, ಮಾಲಿಂಗರಾಯ, ಅಮೋಘಸಿದ್ಧ, ಪರಮಲಿಂಗ, ವಿಠೋಬ, ಸಂಗಮೇಶ್ವರ, ಹನುಮಂತ, ಚೌಡಮ್ಮ, ಲಕ್ಷ್ಮಿ, ಅಂಬಾಭವಾನಿ ಹಾಗೂ ಮರಗಮ್ಮನ ನವೀನ ಗುಡಿಗಳಿದ್ದು ಎರಡು ಮಸೀದಿ ಹಾಗೂ ಒಂದು ದರ್ಗಾ ಕೂಡ ಇವೆ. ಹನುಮಂತನ ಗುಡಿಯ ಬಳಿ ಗಣಪತಿ, ಕೇಶವ, ಶಿವಲಿಂಗ, ನಂದಿ, ಹಾಗೂ ನಾಲ್ಕು ಮುಖದ ಭರಮಪ್ಪ (ಪೀಠಸ್ಥ ಚತುರ್ಮುಖ ಬ್ರಹ್ಮನ ಶಿಲ್ಪಗಳಿವೆ. **ಬೆಣ್ಣೆ ಶಿರೂರು** (೧೮೪೮) ಮಾಡಿಯಾಳದಿಂದ ಸುಮಾರು ಐದು ಕಿ.ಮೀ. ದೂರದಲ್ಲಿದೆ. ಇಲ್ಲಿಯ ಕುಂಬಾರ ಓಣಿಯಲ್ಲಿರುವ ಕುಂಬಾರ ದೇಗುಲವು ಸುಮಾರು ೧೨ನೇ ಶತಮಾನದ್ದಾಗಿದ್ದು ಚೌಕಾಕಾರದಲ್ಲಿದೆ. ಈ ಗುಡಿಯಲ್ಲಿ ಪರಮೇಶ್ವರ ಹಾಗೂ ಕಾಳಿಕಾಂಬಾ ದೇವಿಯ ಸುಂದರವಾದ ಶಿಲ್ಪಗಳಿವೆ. ಇಲ್ಲಿಯ ಇನ್ನೊಂದು ಪ್ರಾಚೀನ ದೇವಾಲಯವೆಂದರೆ ಬೆಣ್ಣೆ ಲಿಂಗೇಶ್ವರ ಗುಡಿ. ಇದಕ್ಕೆ ಗರ್ಭಗೃಹ ಹಾಗೂ ನವರಂಗಗಳಿದ್ದು, ಇಲ್ಲಿ ಶಿವಲಿಂಗ, ನಂದಿ ಹಾಗೂ ಗಣಪತಿಯ ಶಿಲ್ಪಗಳಿವೆ. ಊರಲ್ಲಿ ಹನುಮಂತ, ಕಲ್ಲಾಲಿಂಗೇಶ್ವರ, ಲಕ್ಷ್ಮಿ, ಮರಗಮ್ಮ ಮುಂತಾದ ನವೀನ ದೇವಾಲಯಗಳಿದ್ದು, ಮಸೀದಿ, ದರ್ಗಾ ಹಾಗೂ ಹುಡೆಗಳಿವೆ.

**ಮಾದನ ಹಿಪ್ಪರಗಿ** (೬೯೨೩)ಯು ತಾಲೂಕು ಕೇಂದ್ರವಾದ ಆಳಂದದಿಂದ ನೈಋತ್ಯಕ್ಕೆ ೩೦ ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಧಾರ್ಮಿಕ ಕೇಂದ್ರವಾಗಿದ್ದು ಕರ್ನಾಟಕ - ಮಹಾರಾಷ್ಟ್ರಗಳ ಗಡಿ ಗ್ರಾಮವಾಗಿದೆ. ಊರಲ್ಲಿ ಕಲ್ಯಾಣದ ಚಾಳುಕ್ಯರ ಕಾಲದ ಅವಶೇಷಗಳು ಚದುರಿಕೊಂಡಿರುವುದರಿಂದ ಇದರ ಪ್ರಾಚೀನತೆಯನ್ನು ಸುಮಾರು ೧೧-೧೨ನೇ ಶತಮಾನಕ್ಕೆ ಗುರುತಿಸಬಹುದಾಗಿದೆ. ಇಲ್ಲಿಯ ಹಿರೇಮಠದ ಬಳಿ ಇದೆಯೆಂದು ಹೇಳುವ ಶಾಸನವಿನ್ನೂ ವರದಿಯಾಗಬೇಕಾಗಿದೆ. ಸುಮಾರು ನಾಲ್ಕು ನೂರು ವರ್ಷಗಳ ಹಿಂದೆ ಇದ್ದು, ವೀರಶೈವ ತತ್ವಗಳನ್ನು ಬೋಧಿಸಿ, ಧಾರ್ಮಿಕ ಜಾಗೃತಿಯನ್ನು ಮೂಡಿಸಿ ಮಡಿದ ಶಿವಲಿಂಗೇಶ್ವರರ ಗದ್ದುಗೆ ಇರುವ ಶಿವಲಿಂಗೇಶ್ವರ ವಿರಕ್ತ ಮಠದಿಂದಾಗಿ ಈ ಊರು ಇಂದು ಪ್ರಖ್ಯಾತವಾಗಿದೆ. ಐದು ದಿನ ನಡೆಯುವ ಶಾಂತಲಿಂಗೇಶ್ವರ ಜಾತ್ರೆಯು ವೈಶಾಖ ಶುದ್ಧ (ಆಗಿ) ಹುಣ್ಣಿಮೆಯಂದು ಜರುಗುವ ರಥೋತ್ಸವದೊಂದಿಗೆ ಅಂತ್ಯಗೊಳ್ಳುತ್ತಿದ್ದು ಸಾವಿರಾರು ಜನ ಇದರಲ್ಲಿ ಪಾಲ್ಗೊಳ್ಳುತ್ತಾರೆ. ಈ ಮಠದ ಬಳಿಯಿರುವ ಮಹಾದೇವ ಲಿಂಗವು ಕಲ್ಯಾಣದ ಚಾಳುಕ್ಯರ ಕಾಲದ್ದಾಗಿದೆ. ಇಲ್ಲಿಯ ಸಂಗಮೇಶ್ವರ ದೇವಾಲಯದಲ್ಲಿ ಶಿವಲಿಂಗವಿದ್ದು, ಖಂಡೋಬನ ಪ್ರಸಿದ್ಧ ಖಂಡೇಶ್ವರ ಕಂಬವಿದೆ. ಖಂಡೋಬನ ಜಾತ್ರೆಯು ವಿಜಯದಶಮಿಯಂದು ಜರುಗುತ್ತದೆ. ಆ ಸಂದರ್ಭದಲ್ಲಿ ಈ ಕಂಬವನ್ನು ಊರಲ್ಲಿ ಸಂಭ್ರಮದಿಂದ ಮೆರೆಸುತ್ತಾರೆ. ಚೌಡೇಶ್ವರಿ ದೇವಿಯ ಜಾತ್ರೆ ಇಲ್ಲಿಯ ಇನ್ನೊಂದು ಆಕರ್ಷಣೆಯಾಗಿದ್ದು ಬಾದಾಮಿ ಅಮಾವಾಸೆಯಾದ ಒಂಭತ್ತು ದಿನಕ್ಕೆ ಎರಡು ದಿನಗಳ ಕಾಲ ಜರುಗುತ್ತದೆ. ಉಳಿದಂತೆ ಊರಲ್ಲಿ ಹನುಮಂತ, ಬೀರಲಿಂಗ, ವಿಠೋಬ, ಬಸವಣ್ಣ, ಮಲ್ಲಿಕಾರ್ಜುನ, ನೂಲಿಯ ಚಂದಯ್ಯ, ವೀರಭದ್ರ, ಅಂಬಾಬಾಯಿ ಹಾಗೂ ಮರಗಮ್ಮನ ನವೀನ ದೇವಾಲಯಗಳಿವೆ. ವಿರಕ್ತ ಶಿವಲಿಂಗೇಶ್ವರ, ಕಾಶಿಯಪ್ಪ ಹಾಗೂ ಸಾಧು ಶಿವಪ್ಪಯ್ಯನ ಮಠಗಳಿದ್ದು ಶಿವಲಿಂಗೇಶ್ವರರ ಹಾಗೂ ಶಾಂತಲಿಂಗೇಶ್ವರರ ಗದ್ದುಗೆಗಳು ಇಲ್ಲಿವೆ. ಇವುಗಳ ಜೊತೆಗೆ ಪಂಚಗುಬ್ಬಿ ಧಾವಲ್ ಮಲ್ಲಿಕ್ ದರ್ಗಾ ಹಾಗೂ ಬಾಬಾ ಮಕಾನ್‌ದಾರ್ ಮಸೀದಿ ಕೂಡ ಇವೆ. ಕೈಮಗ್ಗ ಕೈಗಾರಿಕೆಗೆ ಈ ಊರು ಪ್ರಸಿದ್ಧವಾಗಿದೆ.

**ಮಾಶಾಳ** (೭೫೦೮)ವು ತಾಲೂಕು ಕೇಂದ್ರವಾದ ಅಫಜಲ್‌ಪುರದಿಂದ ವಾಯವ್ಯಕ್ಕೆ ೨೭ ಕಿ.ಮೀ. ದೂರದಲ್ಲಿರುವ ಗಡಿಗ್ರಾಮವಾಗಿದ್ದು ಕೇವಲ ಆರು ಕಿ.ಮೀ. ಅಂತರದಲ್ಲಿ ಮಹಾರಾಷ್ಟ್ರದ ಗಡಿಯಿದೆ. ಪ್ರಾಚೀನ ಶಾಸನಗಳಲ್ಲಿ 'ಮಾಸಿವಳ' ಎಂದೇ ಉಲ್ಲೇಖಿತಗೊಂಡಿರುವ ಈ ಊರು ಹಿಂದೆ ಆಲಂದೆ-೧೦೦೦ಕ್ಕೆ ಒಳಪಟ್ಟಿದ್ದ ಆಣಂದೂರು - ೩೦೦ಕ್ಕೇ ಸೇರಿದ ಸರ್ವನಮಸ್ಯದ ಅಗ್ರಹಾರವಾಗಿದ್ದು, ಇಲ್ಲಿಂದ ಈವರೆಗೆ ಮೂರು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಯಾಳಭಾವಿ ತೋಟದ ದೇಗುಲ (ಕೇಶವ)ದಲ್ಲಿರುವ ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ ೧೧೧೫ರ ಶಾಸನವು ಯುವರಾಜ ಮಲ್ಲಿಕಾರ್ಜುನನು ಆಲಂದೆ-೧೦೦೦ ವನ್ನಾಳುತ್ತಿದ್ದಾಗ ಮನೆವೆರ್ಗಡೆ ದಂಡನಾಯಕ ಗೋವಿಂದಮಯ್ಯನು ಮಾಸಿವಳದಲ್ಲಿ ನಿರ್ಮಿಸಿದ ಮಹಾದೇವ, ಕೇಶವ ಹಾಗೂ ಆದಿತ್ಯ ದೇವರುಗಳ ತ್ರಿಕೂಟ ದೇವಾಲಯದ ಪೂಜಾವಿಧಿಗೆಂದು ಗೋದಾವರಿ-ಬಂಜೇರಾ ಸಂಗಮದ ಕೂಡಲ ತೀರ್ಥದಲ್ಲಿ ಯುವರಾಜನು ಸಾಯಬ್ಬೆಯ ಕರ್ಜಗಿಯಲ್ಲಿ ಬೆಂಕೊಳ್ವನ

ಕೋಲಲ್ಲಿ ೧೦೦ ಮತ್ತರು ಹೊಲ, ಒಂದು ಮತ್ತರು ತೋಟವನ್ನು ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ಅದೇ ಕಲ್ಲಿನ ಮೇಲಿರುವ ೧೧೧೯ರ ಇನ್ನೊಂದು ಶಾಸನವು ತೊಳಗನೂರಿನಲ್ಲಿ ಬಿಟ್ಟ ೨೦೦ ಮತ್ತರು ಭೂದಾನದ ಬಗ್ಗೆ ಹೇಳುತ್ತ ಈ ದಾನಭೂಮಿಗಳನ್ನು ಯಾವ ಯಾವ ಉದ್ದೇಶಕ್ಕೆ ಎಷ್ಟೆಷ್ಟು ವಿನಿಯೋಗಿಸಬೇಕೆಂದೂ ಕೂಡ ತಿಳಿಸುತ್ತದೆ. ಈ ಶಾಸನದಿಂದ ಹಿಂದೆ ಇದು ವೇದ, ಶಾಸ್ತ್ರ, ಅಧ್ಯಯನದ ಪ್ರಮುಖ ಕೇಂದ್ರವಾಗಿತ್ತೆಂಬ ಅಂಶ ಸ್ಪಷ್ಟವಾಗುತ್ತದೆ. ಜೊತೆಗೆ ಇದು ಸಾಂದರ್ಭಿಕವಾಗಿ ಅಲ್ಲಿಯ ಪನ್ನಗನಾಥ (ನಾಗದೇವ) ದೇವರ ಬಗ್ಗೆ ಉಲ್ಲೇಖಿಸುತ್ತದೆ. ಇದೇ ಕಲ್ಲಿನ ಎಡಬದಿಯಲ್ಲಿರುವ ಶಾಸನವು ಗೋವಿಂದೇಶ್ವರ ದೇವರಿಗೆ ಬಿಟ್ಟ ದಾನವನ್ನು ದಾಖಲಿಸುತ್ತದೆ. ಇಲ್ಲಿಯ ಕಲ್ಲು ಕಂಬದ ಭಾವಿ ಬಳಿ ಇರುವ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ ಇನ್ನೊಂದು ಶಾಸನ ಅಗ್ರಹಾರ ಮಾಸಿವಳದಲ್ಲಿ ತಿಪ್ಪಣ್ಣನು ಪುಷ್ಕರಣಿಯನ್ನು ವಿಸ್ತರಿಸಿ ಸೋಪಾನವನ್ನು ನಿರ್ಮಿಸಿ ಸುಂದರಗೊಳಿಸುವುದರ ಜೊತೆಗೆ ತಿಪ್ಪಣೇಶ್ವರ ದೇಗುಲವನ್ನು ಕಟ್ಟಿಸಿ ನಾಲ್ಕು ಧರ್ಮೇತಗಳಿಗೆಂದು ಹತ್ತು ಮತ್ತರು ಭೂಮಿಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ.

ಹಿಂದೆ ಚಾರಿತ್ರಿಕ ಮಹತ್ವದ ಸ್ಥಳವಾಗಿದ್ದ ಈ ಊರಲ್ಲಿಂದು ಗತವೈಭವವನ್ನು ಸಾರುವ ಪ್ರಾಚೀನ ದೇವಾಲಯಗಳು ನಾಲ್ಕಾರು ಸಂಖ್ಯೆಯಲ್ಲಿವೆ. ಇವುಗಳಲ್ಲಿ ಊರ ಪಂಚಾಯತಿ ಬಳಿ ಇರುವ ರಾಮಲಿಂಗ ದೇವಾಲಯವು ಸುಮಾರು ೧೨ನೇ ಶತಮಾನಕ್ಕೆ ಸೇರಿದ್ದು, ಗರ್ಭಗೃಹ, ತೆರೆದ ಅಂತರಾಳ ಹಾಗೂ ತೆರೆದ ನವರಂಗಗಳನ್ನು ಹೊಂದಿದ್ದು, ನವರಂಗವನ್ನು ಪ್ರವೇಶಿಸಲು ಮೂರು ದಿಕ್ಕಿನಿಂದಲೂ ಸೌಕರ್ಯವಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ತ್ರಿಶಾಖಾಲಂಕೃತ ಬಾಗಿಲವಾಡವಿದೆ. ನವರಂಗದ ಅಂಚಲ್ಲಿ ಕಕ್ಷಾಸನವಿದ್ದು, ಇಲ್ಲಿರುವ ಎರಡು ದೇವಕೋಷ್ಠಗಳು ಸುಂದರವಾದ ಬಾಗಿಲವಾಡಗಳನ್ನು ಹೊಂದಿವೆ.

ಇಲ್ಲಿಯ ಇನ್ನೊಂದು ಆಕರ್ಷಕ ದೇವಾಲಯವೆಂದರೆ ಭಾಗಶಃ ಶಿಥಿಲಗೊಂಡಿರುವ ನರಸಿಂಹ-ಈಶ್ವರ ದೇಗುಲವಾಗಿದ್ದು ಇದೊಂದು ದ್ವಿಕೂಟವಾಗಿದೆ. ಇದರ ಗರ್ಭಗೃಹಗಳಲ್ಲಿ ನರಸಿಂಹ ಹಾಗೂ ಶಿವಲಿಂಗಗಳಿದ್ದು ಇವುಗಳ ಬಾಗಿಲವಾಡಗಳು ತ್ರಿಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಣಪತಿ ಇದೆ. ನವರಂಗವನ್ನು ಪ್ರವೇಶಿಸಲು ದಕ್ಷಿಣದಲ್ಲಿ ಪ್ರವೇಶದ್ವಾರವಿದ್ದು, ನವರಂಗ ಭಾಗ ಸಂಪೂರ್ಣ ನಾಶವಾಗಿದೆ. ಈ ದೇಗುಲದ ಗರ್ಭಗೃಹಗಳಿಗೆ ಕದಂಬನಾಗರ ಶಿಖರಗಳಿದ್ದು, ಇಂದು ಜೀರ್ಣಾವಸ್ಥೆಯಲ್ಲಿವೆ. ಈ ಗುಡಿಯ ಆವರಣದಲ್ಲಿ ಕೇಶವ ಹಾಗೂ ಗಣಪತಿಯ ಶಿಲ್ಪಗಳಿವೆ. ಊರ ಉತ್ತರಕ್ಕೆ ಇರುವ ಯಾಳಭಾವಿ ತೋಟದ ದೇಗುಲವೇ ಶಾಸನೋಕ್ತ ತ್ರಿಕೂಟ ದೇವಾಲಯವಾಗಿದೆ. ಇದನ್ನು ಗೋವಿಂದಮಯ್ಯನು ೧೧೧೫ರಲ್ಲಿ ನಿರ್ಮಿಸಿ ದಾನ ಬಿಟ್ಟ ವಿಷಯ ಅಲ್ಲೇ ಇರುವ ಶಾಸನದಿಂದ ಗೊತ್ತಾಗುತ್ತದೆ. ಪೂರ್ವಾಭಿಮುಖವಾಗಿರುವ ಈ ತ್ರಿಕೂಟವು ಮೂರು ಪ್ರತ್ಯೇಕ ಗರ್ಭಗೃಹಗಳನ್ನು ಹೊಂದಿದ್ದು, ಪ್ರಧಾನ ಗರ್ಭಗೃಹ ಹಾಗೂ ಉತ್ತರ ಗರ್ಭಗೃಹಗಳು ಬರಿದಾಗಿದ್ದು ದಕ್ಷಿಣದ ಗರ್ಭಗೃಹದಲ್ಲಷ್ಟೆ ಬಲಹರಿ ಶಿವಲಿಂಗವಿದ್ದು, ಶಾಸನೋಕ್ತ ಮಹಾದೇವ ಇದಾಗಿದ್ದು ಉಳಿದೆರಡರಲ್ಲಿ ಕ್ರಮವಾಗಿ ಕೇಶವ ಹಾಗೂ ಆದಿತ್ಯನ ಮೂರ್ತಿಗಳು ಹಿಂದೆ ಇದ್ದು ಈಗ ಕಣ್ಮರೆಯಾಗಿವೆ. ಇವುಗಳ ಬಾಗಿಲವಾಡಗಳು ತ್ರಿಶಾಖಾಲಂಕೃತವಾಗಿದ್ದು ಸುಂದರವಾಗಿವೆ. ನವರಂಗದಲ್ಲಿ ಒಟ್ಟು ನಾಲ್ಕು ದೇವಕೋಷ್ಠಗಳಿದ್ದು, ಒಂದು ಇನ್ನೊಂದಕ್ಕಿಂತ ಸುಂದರವಾಗಿವೆಯಾದರೂ ಎಲ್ಲವೂ ಬರಿದಾಗಿವೆ. ನವರಂಗದ ಮುಂಬದಿಯಲ್ಲಿ ಮುಖಮಂಟಪವಿದ್ದು ಕಕ್ಷಾಸನವಿದೆ. ಈ ದೇವಾಲಯದ ಭಿತ್ತಿಯು ನಿರಾಡಂಬರವಾಗಿದ್ದು, ಶಿಖರಗಳು ನಾಶಗೊಂಡಿವೆ. ಈ ದೇವಾಲಯದ ಮುಂದೆ ವಿಶಾಲವಾದ (೧೦೦x೮೦ ಅಡಿ) ಸೋಪಾನ ಬಾವಿಯಿದ್ದು ಸುಂದರವಾಗಿದೆ. ಈ ದೇವಾಲಯವು ಹಿಂದೆ ಶಿಕ್ಷಣ ನೀಡುವ ಶಾಲೆಯು ಆಗಿತ್ತೆಂಬ ಅಂಶ ಅಲ್ಲೇ ಇರುವ ಶಾಸನದಿಂದ ಗೊತ್ತಾಗುತ್ತದೆ. ಊರ ಹೊರಗೆ ಇರುವ ಮಲಖಾನ್ ಗುಡಿಯು ಪೂರ್ಣ ಜೀರ್ಣೋದ್ಧಾರಗೊಂಡಿರುವ ಪ್ರಾಚೀನ ದೇಗುಲವಾಗಿದ್ದು ಕಲ್ಯಾಣದ ಚಾಳುಕ್ಯರ ಕಾಲದ ಶಿವಲಿಂಗ, ನಂದಿ, ಹಾಗೂ ಕಂಬಗಳನ್ನು ಇಲ್ಲಿ ನೋಡಬಹುದಾಗಿದೆ. ಊರ ಹೊರಗೆ ಗೌಡರ ಹೊಲದಲ್ಲಿರುವ ಕಲ್ಲುಕಂಬ ಬಾವಿ ದೇಗುಲವು ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ಕಟ್ಟಿದ ದೇವಾಲಯವಾಗಿದ್ದು, ಅಲ್ಲೇ ಇರುವ ಶಾಸನದಿಂದ ಇದನ್ನು ತಿಪ್ಪಣ್ಣನು ನಿರ್ಮಿಸಿ ಮುಂದಿರುವ ಸೋಪಾನ ಪುಷ್ಕರಣಿಯನ್ನು ವಿಸ್ತರಿಸಿದ ಅಂಶ ಗೊತ್ತಾಗುತ್ತದೆ. ಇದೊಂದು ಈಶ್ವರ (ಶಾಸನೋಕ್ತ ತಿಪ್ಪೇಶ್ವರ) ಗುಡಿಯಾಗಿದ್ದು, ಗರ್ಭಗೃಹ ಅಂತರಾಳ ಹಾಗೂ ತೆರೆದ ನವರಂಗಗಳನ್ನು ಹೊಂದಿದ್ದು ಪೂರ್ವಾಭಿಮುಖವಾಗಿದೆ. ಈ ದೇವಾಲಯದ ನವರಂಗದ ಬಲಭಾಗವು ಜೀರ್ಣಾವಸ್ಥೆಯಲ್ಲಿದ್ದು ಶಿಖರಗಳು ನಶಿಸಿ ಹೋಗಿವೆ. ಈ ದೇವಾಲಯದ ಬಲಭಾಗದಲ್ಲಿರುವ, ಗುಡಿಯಷ್ಟೇ ಪ್ರಾಚೀನವಾದ ಸುಮಾರು ೧೫ ಅಡಿ ಎತ್ತರದ ದೀಪಮಾಲೆ ಕಂಬವು ಬಹಳ ಆಕರ್ಷಕವಾಗಿದೆ. ಊರ ನಡುವೆ ಇರುವ ಇನ್ನೊಂದು ಮಹತ್ವದ ದೇವಾಲಯವೆಂದರೆ

ಮಹಾದೇವ ದೇಗುಲ. ಇದೂ ಕೂಡ ದ್ವಿಕೂಟವಾಗಿದ್ದು ಒಂದರಲ್ಲಿ ಶಿವಲಿಂಗ-ನಂದಿಗಳಿದ್ದು ಇನ್ನೊಂದು ಈಗ ಬರಿದಾಗಿದ್ದರೂ ಹಿಂದೆ ಸೂರ್ಯನನ್ನು ಹೊಂದಿದ್ದಂತೆ ತೋರುತ್ತದೆ. ಇವುಗಳ ಬಾಗಿಲವಾಡಗಳು ತ್ರಿಶಾಖಾಲಂಕೃತವಾಗಿದ್ದು, ಸುಂದರವಾಗಿವೆ. ಅಂತರಾಳದ ದೇವಕೋಷ್ಠದಲ್ಲಿ ಸಪ್ತಮಾತೃಕಾ ಶಿಲ್ಪವಿದ್ದು, ನವರಂಗದ ದೇವಕೋಷ್ಠಗಳು ಖಾಲಿ ಇವೆ. ನವರಂಗವನ್ನು ಪ್ರವೇಶಿಸಲು ಉತ್ತರದಿಂದ ಸೌಕರ್ಯವಿದ್ದು ಮುಖ ಮಂಟಪವಿದೆ. ದೇವಾಲಯದ ಭಿತ್ತಿಯು ನಿರಾಡಂಬರವಾಗಿದ್ದು ಶಿಖರಗಳು ನಶಿಸಿ ಹೋಗಿವೆ. ಕೊರವರ ಓಣಿಯಲ್ಲಿರುವ ಸೋಮಲಿಂಗನ ಗುಡಿಯು ಕೇವಲ ಗರ್ಭಗೃಹ ಹಾಗೂ ಅಂತರಾಳಗಳನ್ನು ಹೊಂದಿದ್ದು, ನವರಂಗ ಭಾಗ ನಾಶವಾಗಿದೆ. ಚೌಡೇಶ್ವರಿ ದೇವಾಲಯವು ಇಲ್ಲಿಯ ಮತ್ತೊಂದು ಆಕರ್ಷಣೆಯಾಗಿದ್ದು ಸುಂದರವಾದ ನವೀನ ಶಿಖರವನ್ನು ಹೊಂದಿದೆ. ಈ ಗುಡಿಯ ಆವರಣದಲ್ಲಿ ಗಣಪತಿ, ಸಪ್ತಮಾತೃಕಾ ಹಾಗೂ ಮಹಿಷಮರ್ದಿನಿ ಶಿಲ್ಪಗಳಿದ್ದು ಬಾದಾಮಿ ಅಮಾವಾಸ್ಯೆ ಸಂದರ್ಭಗಳಲ್ಲಿ ಒಂದು ತಿಂಗಳು ಜಾತ್ರೆಯಾಗುತ್ತದೆ. ಊರ ಹೊರಗಿರುವ ಹನುಮಂತನ ಗುಡಿಯು ಪ್ರಾಚೀನದ್ದಾಗಿದ್ದು ಹನುಮಂತನ ಸುಂದರ ಮೂರ್ತಿ ಇದೆ. ಈ ಗುಡಿಯ ಮುಂದೆ ಪೀಠಸ್ಥ ಚತುರ್ಮುಖ ಬ್ರಹ್ಮನ ಶಿಲ್ಪವೂ ಇದೆ. ಸುಮಾರು ೧೪ನೇ ಶತಮಾನದಲ್ಲಿದ್ದು ಪುಣ್ಯಾಶ್ರವ ಕೃತಿಯನ್ನು ಬರೆದ ನಾಗರಾಜ ಕವಿಯು ಈ ಊರಿನವನೆಂದು ಅವನೇ ಬರೆದಿರುವ ಕೃತಿಯಿಂದ ವೇದ್ಯವಾಗುತ್ತದೆ. ಉಳಿದಂತೆ ಅಗಸಿ ಬಸವಣ್ಣ, ವಿಠೋಬ, ಲಕ್ಷ್ಮಿ, ಕರಿಬಸವ, ಹಿರೊಡೆ, ಸಿದ್ಧರಾಮೇಶ್ವರ, ಬೀರದೇವ, ಯೋಗಪ್ಪಯ್ಯನ ಗದ್ದುಗೆ ಹಾಗೂ ಲಿಂಗದೇವರ ಗುಡಿಗಳಿದ್ದು ಮಸೀದಿ ಹಾಗೂ ದರ್ಗಾಗಳಿವೆ. **ಬಿಂಗೋಳಿ** ಯು ಮಾಶಾಳದ ಉಪಗ್ರಾಮವಾಗಿದ್ದು, ಇಲ್ಲಿಯ ಚೌಡೇಶ್ವರಿ ಬನದಲ್ಲಿ ಇರುವ ಶಾಸನವು ಕಲ್ಯಾಣದ ಚಾಳುಕ್ಯ ಅರಸ ಇಮ್ಮಡಿ ಜಯಸಿಂಹನ ಕಾಲದ್ದಾಗಿದ್ದು, ೧೦೨೫ರಲ್ಲಿ ಕುರುಬರ ಬಕ್ಕಯ್ಯ, ಅರಸಿಕಬ್ಬೆ, ಸೋವಿಮಯ್ಯ ಹಾಗೂ ಮುದ್ದಯ್ಯರೆಲ್ಲಾ ಒಂದಾಗಿ ನೀಲಕಂಠೇಶ್ವರ ದೇವರ ಪ್ರತಿಷ್ಠಾಪಿಸಿ, ೩೨ ಮತ್ತರು ಹೊಲ, ತೋಟಗಳನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಆದರಿಂದು ಇಲ್ಲಿ ಪ್ರಾಚೀನ ಅವಶೇಷಗಳಾವುವೂ ಲಭ್ಯವಿಲ್ಲ.

**ಮಿರ್ಯಾಣ** (೨೪೩.೨)ವು ತಾಲೂಕು ಕೇಂದ್ರವಾದ ಚಿಂಚೋಳಿಯಿಂದ ಆಗ್ನೇಯಕ್ಕೆ ೧೮ ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಊರಾಗಿದೆ. ಇಲ್ಲಿಂದ ಈವರೆಗೆ ಎರಡು ಶಾಸನಗಳು ವರದಿಯಾಗಿವೆ. ಊರ ಹೊರಗೆ ಪಾಳು ಬಿದ್ದಿರುವ ಈಶ್ವರಾಲಯದ ಮುಂದಿರುವ ವೀರಗಲ್ಲು ಶಾಸನ ಬಹಳ ತ್ರುಟಿತವಾಗಿದ್ದರೆ, ಸುಮಾರು ೧೨ನೇ ಶತಮಾನಕ್ಕೆ ಸೇರಿದ ಇಲ್ಲಿಯ ಇನ್ನೊಂದು ಶಾಸನ ಜ್ಯೋತಿರ್ದೇವ, ಭೀಮೇಶ್ವರ ಹಾಗೂ ಚೌಡೇಶ್ವರಿ ದೇವಾಲಯಗಳಿಗೆ ಭೂದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಹಿಂದೆ ಇದು ಪ್ರಮುಖವಾದ ಜೈನ-ಶೈವ ಕೇಂದ್ರವಾಗಿತ್ತೆಂಬ ಅಂಶವನ್ನು ಇಲ್ಲಿರುವ ದೇಗುಲಗಳೇ ಸೂಚಿಸುತ್ತವೆ. ಊರ ಹೊರಗೆ ತಾಂಡೂರು ರಸ್ತೆಯಲ್ಲಿರುವ ಪಾಪನಾಥ ಗುಡಿಯು ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಗುಡಿಗೆ ಪೂರ್ವದಿಂದ ಪ್ರವೇಶವಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ನಾಲ್ಕು ಶಾಖೆಯ ಬಾಗಿಲವಾಡವಿದೆ. ನವರಂಗದ ಚೌಕಾಕಾರದ ಕಂಬಗಳು ಕಿರಿದಾಗಿದ್ದು ಕೀರ್ತಿಮುಖ, ಹೂಬಳ್ಳಿ, ಮುತ್ತಿನ ಮಾಲೆ ಹಾಗೂ ಪದ್ಮಾಸೀನ ಯತಿಗಳ ಕೆತ್ತನೆಯನ್ನು ಹೊಂದಿದ್ದು ಆಕರ್ಷಕವಾಗಿವೆ. ನವರಂಗದ ದೇವ ಕೋಷ್ಠಗಳಲ್ಲಿ ಸೂರ್ಯ ಹಾಗೂ ಗಣಪತಿಯ ಶಿಲ್ಪಗಳಿದ್ದು ಅಲ್ಲೇ ಮಹಿಷಮರ್ದಿನಿಯ ಶಿಲ್ಪವೂ ಇದೆ. ದೇವಾಲಯದ ಪ್ರಧಾನ ದ್ವಾರವು ಪಂಚಶಾಖಾಲಂಕೃತವಾಗಿದ್ದು ಸುಂದರವಾಗಿದೆ. ಈ ಗುಡಿಯ ಬಲಭಾಗಕ್ಕೆ ಇರುವ ಹನುಮಂತನ ಗುಡಿ ಮುಂದೆ ವೀರಗಲ್ಲು ಹಾಗೂ ಜಲದೇವತಾ ಶಿಲ್ಪಗಳಿವೆ. ಗರ್ಭಗೃಹದ ಮೇಲೆ ಕದಂಬ ನಾಗರ ಶಿಖರವಿದೆ. ಈ ದೇವಾಲಯವು ಸುಮಾರು ೯-೧೦ನೇ ಶತಮಾನದ್ದಾಗಿರುವಂತೆ ತೋರುತ್ತದೆ.

ಊರ ನಡುವೆ ಇರುವ 'ಮೂರು ದೇವರ ಗುಡಿ' ಮೂರು ಪ್ರತ್ಯೇಕ ದೇವಾಲಯಗಳಿರುವ ಸ್ಥಳವಾಗಿದೆ. ಇವುಗಳಲ್ಲಿ ಎರಡು ಪಶ್ಚಿಮಾಭಿಮುಖವಾಗಿದ್ದು, ಇನ್ನೊಂದು ಪೂರ್ವಾಭಿಮುಖವಾಗಿದೆ. ಇವೆಲ್ಲವೂ ಶೈವ ದೇಗುಲಗಳಾಗಿದ್ದು ಕದಂಬ ನಾಗರ ಶಿಖರಗಳನ್ನು ಹೊಂದಿವೆ. ಗರ್ಭಗೃಹಗಳ ಬಾಗಿಲವಾಡಗಳು ನಿರಾಡಂಬರವಾಗಿದ್ದರೂ, ಮೇಲು ಪಟ್ಟಿಕೆಯಲ್ಲಿ ಹಂಸಾವಳಿಯ ಅಲಂಕಾರಗಳಿವೆ. ಒಂದರ ಅಂತರಾಳದಲ್ಲಿ ಮಕರ ತೋರಣವಿದ್ದು, ಇನ್ನೊಂದರಲ್ಲಿ ಗಂಗಾ-ಯಮುನೆಯರ ಆಳೆತ್ತರದ ಸುಂದರ ಉಬ್ಬು ಕೆತ್ತನೆಗಳಿವೆ. ಇವು ಸುಮಾರು ೧೦-೧೧ನೇ ಶತಮಾನದ ರಚನೆಗಳಾಗಿವೆ. ಊರ ಹೊರಗೆ ಇರುವ ಈಶ್ವರ ಗುಡಿಯು ಜೀರ್ಣಾವಸ್ಥೆಯಲ್ಲಿದ್ದು, ಗರ್ಭಗೃಹ ಹಾಗೂ ಅಂತರಾಳಗಳಷ್ಟೆ ಉಳಿದಿವೆ. ಗರ್ಭಗೃಹದಲ್ಲಿ ಬೃಹತ್ತಾದ ಶಿವಲಿಂಗವಿದ್ದು, ಇದರ ಬಾಗಿಲವಾಡವು ಪಂಚಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿ

ಇದೆ. ತೆರೆದ ಅಂತರಾಳದ ತೊಲೆಯನ್ನು ಸುಂದರವಾದ ಮಕರ ತೋರಣದಿಂದ ಅಲಂಕರಿಸಲಾಗಿದೆ. ಈ ಗುಡಿಯ ಮುಂಬದಿಯಲ್ಲಿ ವೀರಗಲ್ಲಿದೆ. ಇದು ಸುಮಾರು ೧೧ನೇ ಶತಮಾನದ ರಚನೆಯಾಗಿದೆ. ಊರ ನಡುವೆ ಇರುವ ಹನುಮಂತನ ಗುಡಿಯನ್ನು ಹಳೆಯ ಕಾಲದ ಕಂಬಗಳನ್ನು ಬಳಸಿ ನಿರ್ಮಿಸಲಾಗಿದೆ. ಇಲ್ಲಿಯ ಬೃಹತ್ತಾದ ಮಕರ ತೋರಣವು ಚಿತ್ತಾಕರ್ಷಕವಾಗಿದೆ. ಈ ಗುಡಿಯ ಆವರಣದಲ್ಲಿ ಸೂರ್ಯ ಹಾಗೂ ಗಣಪತಿಯ ಶಿಲ್ಪಗಳಿವೆ. ಚಿಂಚೋಳಿ ರಸ್ತೆಯಲ್ಲಿರುವ ಜೈನ ಬಸದಿಯ ಗರ್ಭಗೃಹ ಹಾಗೂ ತೆರೆದ ಅಂತರಾಳಗಳಷ್ಟೆ ಉಳಿದಿದ್ದು, ಇದರ ನವರಂಗ ಭಾಗ ಪೂರ್ಣ ನಶಿಸಿಹೋಗಿದೆ. ಗರ್ಭಗೃಹದಲ್ಲಿ ಎತ್ತರವಾದ ಸಿಂಹಪೀಠದ ಮೇಲೆ ಪದ್ಮಾಸೀನ ತೀರ್ಥಂಕರನ ಸುಂದರ ಶಿಲ್ಪವಿದೆ. ಸ್ಥಳೀಕರು ಇದನ್ನು ಶಾಂತಿನಾಥ ಬಸದಿ ಎಂದು ರೂಢಿಯಲ್ಲಿ ಕರೆಯುತ್ತಾರೆ. ಸುಮಾರು ೧೦ ಅಡಿ ಎತ್ತರವಿರುವ ಈ ಶಿಲ್ಪದ ಪ್ರಭಾವಳಿಯಲ್ಲಿ ತೀರ್ಥಂಕರರ ಕಿರು ಕೆತ್ತನೆಗಳಿವೆ. ಊರ ಹೊರಗೆ ಕಲ್ಲು ಗಣಿ ಪ್ರದೇಶದಲ್ಲಿ ವೀರಭದ್ರನ ಜೀರ್ಣೋದ್ಧಾರಗೊಂಡಿರುವ ಗುಡಿ ಇದೆ. ಉಳಿದಂತೆ ಊರಲ್ಲಿ ಹನುಮಂತ, ದ್ಯಾಮವ್ವ, ಮರಗಮ್ಮ ಮುಂತಾದ ನವೀನ ದೇವಾಲಯಗಳಿದ್ದು, ಮಸೀದಿ ಹಾಗೂ ದರ್ಗಾಗಳಿವೆ. ಈ ಊರ ಸುತ್ತಮುತ್ತ ಕಲ್ಲು ಗಣಿಗಳು ಅಧಿಕ ಸಂಖ್ಯೆಯಲ್ಲಿದ್ದು ಇಲ್ಲಿಯ ಪರಸಿಯನ್ನು ಮಿರ್ಯಾಣ ಪರಸಿ ಎಂದೇ ಕರೆಯುತ್ತಿದ್ದು, ಇದು ಈ ಭಾಗದ ಪ್ರಮುಖ ಉದ್ಯಮವಾಗಿದೆ.

**ಮುಗನೂರು** (೬೦೮) ತಾಲೂಕು ಕೇಂದ್ರವಾದ ಸೇಡಂನಿಂದ ಈಶಾನ್ಯಕ್ಕೆ ೧೦ ಕಿ.ಮೀ. ದೂರದಲ್ಲಿ ಕಾಗಿಣಾ ನದಿಯ ಬಲದಂಡೆ ಮೇಲಿದೆ. ಇಲ್ಲಿಂದ ಈವರೆಗೆ ಶಾಸನಗಳಾವುದೂ ವರದಿಯಾಗಿಲ್ಲ. ಆದರೂ ಇಲ್ಲಿರುವ ರಾಮಲಿಂಗೇಶ್ವರ ದೇವಾಲಯದಿಂದಾಗಿ ಮಹತ್ವ ಪಡೆದಿದೆ. ಕಲ್ಯಾಣದ ಚಾಳುಕ್ಯರ ಕಾಲಕ್ಕೆ ಸೇರಿದ ಈ ದೇವಾಲಯವು ತ್ರಿಕೂಟವಾಗಿದ್ದು, ಮೂರು ಪ್ರತ್ಯೇಕ ಗರ್ಭಗೃಹ ಹಾಗೂ ಅಂತರಾಳಗಳನ್ನು ನಡುವೆ ಇರುವ ಒಂದೇ ನವರಂಗವು ಒಗ್ಗೂಡಿಸಿದೆ. ಭಾಗಶಃ ಶಿಥಿಲವಾಗಿರುವ ಈ ದೇವಾಲಯದ ಪ್ರಧಾನ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲ ಚೌಕಟ್ಟು ಆಕರ್ಷಕವಾಗಿದ್ದು, ಕೆಳಬದಿಯಲ್ಲಿ ವೈಷ್ಣವ ದ್ವಾರಪಾಲಕರಾಗಿದ್ದಾರೆ. ಇದರ ಉಳಿದ ಎರಡು ಗರ್ಭಗೃಹಗಳೂ ಕೂಡ ಭಾಗಶಃ ಹಾಳಾಗಿವೆ. ನವರಂಗದ ನಡುವಣ ಛತ್ತಲ್ಲಿ ಸರಳ ಕಮಲಾಲಂಕಾರವಿದ್ದು ಉಳಿದಿರುವ ಒಂದೇ ಗೂಡಲ್ಲಿ ಗಣಪತಿಯ ಶಿಲ್ಪವಿದೆ. ಈ ದೇವಾಲಯದ ಭಿತ್ತಿ ಹಾಗೂ ಅಧಿಷ್ಠಾನಗಳು ಸರಳವಾಗಿದ್ದು, ಶಿಖರಗಳು ನಶಿಸಿಹೋಗಿವೆ.

**ಮುಗುಳನಾಗಾಂವ್**(೨೫೦೭) ತಾಲೂಕು ಕೇಂದ್ರವಾದ ಚಿತ್ತಾಪುರದಿಂದ ವಾಯುವ್ಯಕ್ಕೆ ೩೦ ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಮುಗಳುನಗೆ ಅಮರಗ್ರಾಮ' ಎಂದೇ ಉಲ್ಲೇಖಗೊಂಡಿರುವ ಈ ಊರಿಂದ ಈವರೆಗೆ ಸುಮಾರು ೧೪ನೇ ಶತಮಾನಕ್ಕೆ ಸೇರಿದ ಹಾಳಾಗಿರುವ ಶಾಸನವೊಂದು ವರದಿಯಾಗಿದ್ದು, ಇದರಿಂದ ಮೇಲಿನ ಅಂಶ ಗೊತ್ತಾಗುತ್ತದೆ. ಈ ಶಾಸನವಿರುವ ಭೋಗಲಿಂಗ ದೇವಾಲಯವು ಕಲ್ಯಾಣದ ಚಾಳುಕ್ಯರ ಅರಸರ ಕಾಲಕ್ಕೆ ಸೇರಿದ ಸುಂದರ ರಚನೆಯಾಗಿದ್ದು, ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಇಂದು ಜೀರ್ಣಾವಸ್ಥೆಯಲ್ಲಿದೆ. ಉಳಿದಂತೆ ಊರಲ್ಲಿ ದೇಗುಲ ಎಂದು ಕರೆಯಲ್ಪಡುವ ತಗ್ಗಿನ ಮಂಟಪವಿದ್ದು, ಹನುಮಂತನ ಗುಡಿಯ ಆವರಣದಲ್ಲಿ ಗಣಪತಿ, ಸಪ್ತಮಾತೃಕಾ, ಮೈಲಾರ, ಕೇಶವ ಮುಂತಾದ ಶಿಲ್ಪಗಳಿದ್ದು, ಒಂದು ವೀರಗಲ್ಲೂ ಕೂಡ ಇದೆ. ಕುಂಬಾರ ಸಾಲಿ ಗುಡಿ ಬಳಿ ಎರಡು ಮಾಸ್ತಿಕಲ್ಲುಗಳಿದ್ದು, ಊರ ಹೊರಗೆ ಹಿರೇಮಠವಿದ್ದು, ಸಿದ್ಧಲಿಂಗ ಶಿವಾಚಾರ್ಯರ ಪುಣ್ಯತಿಥಿಯಂದು ವೈಶಾಖ ಬಹುಳ ಪ್ರತಿಪದದಲ್ಲಿ ರಥೋತ್ಸವವಿರುತ್ತದೆ.

**ಮುಡಬೊಳ** (೩೭೯೦)ವು ತಾಲೂಕು ಕೇಂದ್ರವಾದ ಶಹಾಪುರದಿಂದ ಉತ್ತರಕ್ಕೆ ೨೪ ಕಿ. ಮೀ. ಜೇವರ್ಗಿಯಿಂದ ದಕ್ಷಿಣಕ್ಕೆ ೩೦ ಕಿ. ಮೀ. ದೂರದಲ್ಲಿದೆ. ಪ್ರಾಚೀನ ಶಾಸನಗಳಲ್ಲಿ "ಮಾಡುಬಳ" ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಸಗರ-೫೦೦ ಕ್ಕೆ ಸೇರಿದ್ದು, ಇಲ್ಲಿಂದ ಈವರೆಗೆ ಕಲ್ಯಾಣದ ಚಾಳುಕ್ಯರ ಎರಡು ಶಾಸನಗಳು ವರದಿಯಾಗಿವೆ. ಸಿದ್ಧೇಶ್ವರ ದೇಗುಲದ ಬಳಿಯಿರುವ ಇವುಗಳಲ್ಲೊಂದು ಜಗದೇಕಮಲ್ಲನ ಕಾಲಕ್ಕೆ ಸೇರಿದ್ದು, ೧೦೨೭ರಲ್ಲಿ ಮಹಾಮಂಡಳೇಶ್ವರ ಚಂದರಸನು ಸಿದ್ಧೇಶ್ವರ ದೇವರ ಸೇವೆಗೆಂದು ಆ ದೇವರ ಗಡಿಂಬದ ಕೋಲಲ್ಲಿ ೧೦೦ ಮತ್ತರು ಭೂಮಿಯನ್ನು ದಾನ ಕೊಟ್ಟ ವಿಷಯವನ್ನು ಹೇಳುತ್ತ ನೆರೆಯ ಸಿರಿವೊಳಲ ಅಲೇಶ್ವರದ ಮಠದ ಶಾಖೆಯೊಂದು ಇಲ್ಲಿದ್ದ ಅಂಶವನ್ನೂ ತಿಳಿಸುತ್ತದೆ. ಇನ್ನೊಂದು ಶಾಸನ ಅಸ್ಪಷ್ಟವಾಗಿದೆ.

ಮೇಲಿನ ಶಾಸನೋಕ್ತ ಸಿದ್ಧೇಶ್ವರ ದೇವಾಲಯವೇ, ಇಂದಿನ ಸಿದ್ಧೇಶ್ವರ ದೇವಾಲಯವಾಗಿದ್ದು, ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಜೀರ್ಣೋದ್ಧಾರಗೊಂಡಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ನವರಂಗದ ಕಂಬಗಳು ಚರಕಿ ಯಂತ್ರದಿಂದ ಮಾಡಿದ್ದಾಗಿವೆ. ಈ ದೇವಾಲಯದ ಬಾಗಿಲವಾಡಗಳು ಆಕರ್ಷಕವಾಗಿವೆ. ಊರ ನಡುವೆ ಇರುವ ರಾಮಲಿಂಗೇಶ್ವರ ಗುಡಿಯು ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿರುವ ಅಂತರ್ಗತ ದೇವಾಲಯವಾಗಿದ್ದು, ನವರಂಗದ ಛಾವಣಿ ಕಣ್ಮರೆಯಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದೆ. ನವರಂಗದ ಕಂಬಗಳು ಸುಂದರವಾಗಿದ್ದು, ನವರಂಗದ ಬಾಗಿಲ ಮೂಲಕ ಇಳಿಯಲು ಸೋಪಾನವಿದೆ. ಈ ದೇವಾಲಯವೂ ಕೂಡ ಸುಮಾರು ಹನ್ನೊಂದನೆಯ ಶತಮಾನದ ರಚನೆಯಾಗಿದ್ದು ವಿಶಿಷ್ಟವಾಗಿದೆ. ಉಳಿದಂತೆ ಊರಲ್ಲಿ ಗೋಪಾಲಸ್ವಾಮಿ,ಹನುಮಂತ, ಅಕ್ಕಮಹಾದೇವಿ, ದ್ಯಾಮವ್ವ, ದುರ್ಗವ್ವ, ಮಹಾಕಾಳಿ ಮುಂತಾದ ನವೀನ ದೇವಾಲಯಗಳಿದ್ದು, ಕಡಕೊಳದ ಮಡಿವಾಳಪ್ಪಜ್ಜನ ಮಠವೂ ಇದೆ. ಇವುಗಳ ಜೊತೆಗೆ ಮಸೀದಿ ಹಾಗೂ ದರ್ಗಾ ಕೂಡ ಇವೆ.

**ಮುದನೂರು** (೪೦೯೦) ತಾಲೂಕು ಕೇಂದ್ರವಾದ ಸುರಪುರದಿಂದ ವಾಯವ್ಯಕ್ಕೆ ೩೫ ಕಿ. ಮೀ., ಕೆಂಭಾವಿಯಿಂದ ನೈಋತ್ಯಕ್ಕೆ ೧೦ ಕಿ. ಮೀ. ದೂರದಲ್ಲಿ ಕೆಂಭಾವಿ - ಹುಣಸಗಿ ರಸ್ತೆಯಲ್ಲಿದೆ. ಬಸವಪೂರ್ವ ಯುಗದ ವಚನಕಾರ ಜೇಡರ ದಾಸಿಮಯ್ಯನ ಜನಸ್ಥಳವಾದ ಈ ಊರಿಂದ ಈವರೆಗೆ ೨೧ ಶಿಲಾಶಾಸನಗಳು ವರದಿಯಾಗಿವೆ. ಪ್ರಾಚೀನ ಶಾಸನಗಳಲ್ಲಿ ಸರ್ವನಮಸ್ಯದಗ್ರಹಾರ ದಕ್ಷಿಣವಾರಾಣಸಿ ಮುದಿನೀರು, ಮಹಾಗ್ರಹಾರ ಮುದಿನೀರು, 'ಶಾಸನದ ಮನೆ ಮುದಿನೀರು' 'ರಾಮದತ್ತಿ ಅಗ್ರಹಾರ' ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಸಗರ-೫೦೦ಕ್ಕೆ ಸೇರಿದ ಪ್ರಮುಖ ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿತ್ತು. ಎಳಮೇಲ ಸಿಂಹಪರ್ಷೆಯ ಅಭಿನವ ಪಾಶುಪತ ಸಂಪ್ರದಾಯದ ಮೂಲ ಕೇಂದ್ರ ಇದಾಗಿದ್ದು, ಇದರ ಮೂಲ ಪುರುಷನಾದ ಮಲೆಯಾಳ ಪಂಡಿತನು ಇಲ್ಲಿಯವನೆಂದು ತಿಳಿದು ಬರುತ್ತದೆ. ಇಂದು ಎರಡು ಮುದನೂರುಗಳು ಅರ್ಧ ಕಿ. ಮೀ. ಅಂತರದಲ್ಲಿದ್ದು ಕ್ರಮವಾಗಿ ಚಿಕ್ಕಮುದನೂರಲ್ಲಿ ೧೦, ಹಾಗೂ ಹಿರೇಮುದನೂರಲ್ಲಿ ೧೧ ಶಾಸನಗಳಿವೆ.

ಇಲ್ಲಿಯ ಶಾಸನಗಳಲ್ಲಿ ಚಿಕ್ಕಮುದನೂರಿನ ಭೃಂಗಿ ಗುಡಿ ಮುಂದೆ ಬಿದ್ದಿರುವ ಕಂಬದ ಮೇಲಿರುವ ೧೦೯೯ ಶಾಸನವೇ ಅತ್ಯಂತ ಪ್ರಾಚೀನದ್ದಾಗಿದ್ದು, ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ್ದು, ಅಗ್ರಹಾರ ಮುದಿನೀರ ೫೦೦ ಮಹಾಜನರು ೧೦೯೯ರಲ್ಲಿ ಕೋಮಾರಸ್ವಾಮಿ ದಂಡನಾಯ್ಕರು ಪ್ರತಿಷ್ಠಾಪಿಸಿದ ಕುಮಾರೇಶ್ವರ ದೇವರಿಗೆ ಪೂಜೆ-ಪುರಸ್ಕಾರಕ್ಕೆಂದು ಹಗರಟಗಿಯ ಉಗ್ರಭಿಮೇಶ್ವರ ದೇವಾಲಯದ ಆಚಾರ್ಯ ಬ್ರಹ್ಮರಾಶಿ ಪಂಡಿತರಿಗೆ ಧಾರೆ ಎರೆದು ೧೮ ಮತ್ತರು ಹೊಲ, ೪೫೦ ಕಮ್ಮ ಗದ್ದೆ, ಒಂದು ಮತ್ತರು ತೋಟ, ಒಂದು ಗಾಣ ಹಾಗೂ ೧೫ ಅಂಗಡಿಯ ಸುಂಕಗಳನ್ನು ದಾನ ಬಿಟ್ಟಾಗ, ಅಲ್ಲಿಯ ೫೦೦ ನಖರ ಬಣಜಿಗರು ಬಿಟ್ಟ ವಿವಿಧ ಸುಂಕಗಳನ್ನು ಹೇಳುತ್ತ ಸಾಂದರ್ಭಿಕವಾಗಿ ಇಲ್ಲಿಯ ಮಾಚೇಶ್ವರ, ಚಂದೇಶ್ವರ, ಭೈರವ ಹಾಗೂ ಬೊಂಕೇಶ್ವರ ದೇವರನ್ನು ಉಲ್ಲೇಖಿಸುತ್ತದೆ. ಮೇಲಾಗಿ ಕಕ್ಕೇರಿಯ ಕಕ್ಕೇಶ್ವರ ದೇವರನ್ನೂ ಈ ಶಾಸನ ಪ್ರಸ್ತಾಪಿಸುತ್ತದೆ. ಚಿಕ್ಕಮುದನೂರಿನ ಗೋಪಾಲಸ್ವಾಮಿ ಗುಡಿ ಹಿಂದಿರುವ ಮಂಟಪದ ಮೇಲಿನ ಶಾಸನವು ೧೧೪೬ರದಾಗಿದ್ದು ಇಮ್ಮಡಿ ಜಗದೇಕಮಲ್ಲನ ಆಳ್ವಿಕೆಯಲ್ಲಿ ಮುದಿನೀರ ಶ್ರೀರಾಮೇಶ್ವರ ದೇವರ್ಗೆ ಹಾಗೂ ಅಲ್ಲಿಯ ವಿದ್ಯಾಸತ್ರಕ್ಕೆಂದು ಮಹಾಪ್ರಧಾನ ಸುಂಕವೆರ್ಗ್ಗಡೆ ಗಯಾಧರ ದಂಡನಾಯಕನು ಮುದಿನೀರ ೧೮,೦೦೦ ಮತ್ತರು ಭೂಮಿಯೊಳಗಣ ಹೆರ್ಜುಂಕ, ವಡ್ಡರಾವುಳ ತೆರಿಗೆಗಳನ್ನು ೫೦೦ ಮಹಾಜನರ ಸಮ್ಮುಖದಲ್ಲಿ ದಾನ ಬಿಟ್ಟ ವಿಷಯವನ್ನು ಹೇಳುತ್ತದೆ. ಅದೇ ದೇವಾಲಯದ ಮತ್ತೊಂದು ಕಂಬದ ಮೇಲಿನ ೧೧೬೭ರ ಶಾಸನ ಕಳಚೂರಿ ಬಿಜ್ಜಳನ ಆಳ್ವಿಕೆಯಲ್ಲಿ ಅಲ್ಲಿಯ ಲಕ್ಷ್ಮಣೇಶ್ವರ ದೇವರ ಸೇವೆಗೆಂದು ಮಾಣಿಕೇಶ್ವರದ ಕೋಲಲ್ಲಿ ೧೨ ಮತ್ತರು ಭೂಮಿಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಅದೇ ಗುಡಿಯಲ್ಲಿರುವ ೧೧೭೫, ೧೧೮೨ ಹಾಗೂ ೧೧೮೮ರ ಶಾಸನಗಳೂ ಕೂಡ ಲಕ್ಷ್ಮಣೇಶ್ವರ ದೇವರಿಗೆ ಬೇರೆ ಬೇರೆ ಸಂದರ್ಭಗಳಲ್ಲಿ ವಿವಿಧ ಅಧಿಕಾರಿಗಳು ದಾನ ಬಿಟ್ಟ ಅಂಶಗಳನ್ನು ತಿಳಿಸುತ್ತವೆ. ಇದೇ ದೇವಾಲಯದ ಕಂಬಗಳ ಮೇಲಿರುವ ಸುಮಾರು ೧೩ನೇ ಶತಮಾನದ ಎರಡು ಶಾಸನಗಳು ರಾಮೇಶ್ವರ ದೇವರ್ಗೆ ಬಿಟ್ಟ ವಿವಿಧ ಸುಂಕಗಳ ಬಗ್ಗೆ ದಾಖಲಿಸುತ್ತವೆ. ಇದೇ ಗುಡಿಯ ಮತ್ತೊಂದು ಕಂಬದ ಮೇಲಿರುವ ಇನ್ನೊಂದು ಶಾಸನ ಯಾದವ ಸಿಂಘಣದೇವನ ಕಾಲದ್ದಾಗಿದ್ದು, ೧೨೧೮ರಲ್ಲಿ ಅಯ್ಯಾವೊಳೆ ಐನೂರ್ವರೂ

ಸೇರಿದಂತೆ ವಿವಿಧ ವರ್ತಕರು ಮುದಿನೀರ (ರಾಮೇಶ್ವರ) ದೇವಾಲಯವೊಂದಕ್ಕೆ ದಾನ ಬಿಟ್ಟ ಅಂಶವನ್ನು ಅರುಹುತ್ತದೆ. ಮೇಲೆ ಚರ್ಚಿಸಿರುವ ಚಿಕ್ಕಮುದನೂರಿನ ಶಾಸನಗಳಲ್ಲಿ ರಾಮೇಶ್ವರ, ಲಕ್ಷ್ಮಣೇಶ್ವರ, ಕುಮಾರೇಶ್ವರ, ಬೊಂಕೇಶ್ವರ ಹಾಗೂ ಉಗ್ರ ಮಾರ್ತಾಂಡದೇವರ ಉಲ್ಲೇಖವಿದ್ದು ಇವುಗಳನ್ನು ಇಂದು ಗುರ್ತಿಸುವುದು ದುಸ್ಸಾಧ್ಯವೇ ಸರಿ.

ಹಿರೇಮುದನೂರಿನಲ್ಲಿ ೧೧ ಶಾಸನಗಳಿದ್ದು, ಇವುಗಳಲ್ಲಿ ರಾಮನಾಥ ದೇವಾಲಯದ ಬಲಭಾಗದಲ್ಲಿರುವ ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ ೧೧೯೬ರ ಶಾಸನ ಮಹಾಮಂಡಳೇಶ್ವರ ಗೋಮದೇವರಸರು ಹಾಗೂ ಮುದಿನೀರ ಮಹಾಜನರು ಅಗಸ್ತ್ಯೇಶ್ವರ ದೇವರ್ಗ್ಗೆಂದು ಸ್ಥಾನಚಾರ್ಯ ತೇಜೋರಾಶಿ ಪಂಡಿತರಿಗೆ ದಾನವಾಗಿ ಗದ್ದೆಯನ್ನು ಕೊಟ್ಟ ಅಂಶವನ್ನು ಹೇಳುತ್ತ ಸಾಂದರ್ಭಿಕವಾಗಿ ಅಲ್ಲಿಯ ಮಾರ್ಕಂಡೇಶ್ವರ ಹಾಗೂ ನಾರಾಯಣ ದೇವರಿಗೆ ಸೇರಿದ್ದ ಗದ್ದೆಗಳ ಬಗ್ಗೆ ಉಲ್ಲೇಖಿಸುತ್ತದೆ. ಇದೇ ಗುಡಿಯ ಆವರಣದಲ್ಲಿರುವ ೧೧೦೫ರ ಮತ್ತೊಂದು ಶಾಸನವು ಮಹಾಮಂಡಳೇಶ್ವರ ಜೋಗಮರಸನ ರಾಣಿ ತಾರಾದೇವಿಯು ಉತ್ತರೇಶ್ವರ ದೇವಾಲಯಕ್ಕೆಂದು ೫೦ ಗದ್ಯಾಣಗಳನ್ನು ಕೊಟ್ಟು ಮಹಾಜನರಿಂದ ೧೦ ಮತ್ತರ ಭೂಮಿಯನ್ನು ಖರೀದಿಸಿ ದಾನ ಬಿಟ್ಟಾಗ, ಮಹಾಜನಗಳೂ ಕೂಡ ೧೦ ಮತ್ತರು ಹೊಲ ಹಾಗೂ ೧ ಮತ್ತರು ಗದ್ದೆಗಳನ್ನು ದಾನ ಬಿಟ್ಟ ವಿಷಯವನ್ನೂ ತಿಳಿಸುತ್ತದೆ. ರಾಮನಾಥ ದೇವಾಲಯದ ಕಂಬದ ಮೇಲಿರುವ ಆರನೆಯ ವಿಕ್ರಮಾದಿತ್ಯನ ಕಾಲದ ಶಾಸನವು ರಾಮೇಶ್ವರದ ಸ್ಥಾನಾಚಾರ್ಯ ತೇಜೋರಾಶಿ ಪಂಡಿತರಿಗೆ ಭೂಮಿ ಹಾಗೂ ಹಣವನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಇದೇ ಗುಡಿಯ ಆವರಣದಲ್ಲಿರುವ ಮತ್ತೊಂದು ಶಾಸನವೂ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ್ದು, ರಾಮೇಶ್ವರ ದೇವರ ಬ್ರಹ್ಮಪುರಿಯ ಅಗ್ಗಿಷ್ಟಿಕೆಗೆಂದು ಮಹಾಮಂಡಳೇಶ್ವರ ಲಕ್ಷ್ಮರಸನ ಮಗ ಕಪ್ಪರಸರು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಇದೇ ದೇವಾಲಯದ ಒಳ ಗೋಡೆಯಲ್ಲಿರುವ ೧೧೨೯ರ ಶಾಸನವು ಮಹಾಮಂಡಳೇಶ್ವರ ಮಲ್ಲಿದೇವರಸರು ಮಾರ್ಕಂಡೇಶ್ವರ ದೇವರ ಪೂಜೆ-ಪುರಸ್ಕಾರಕ್ಕೆಂದು ೧೨ ಮತ್ತರು ಹೊಲ, ೪೫೦ ಕಮ್ಮ ಗದ್ದೆ, ಒಂದುಗಾಣ, ಮುಂತಾದವನ್ನು ದಾನ ಕೊಟ್ಟಾಗ ಸುಂಕವೆರ್ಗ್ಗಡೆ ಮುಂತಾದವರು ದೇವರ್ಗೆಂದು ಸಗರ-೫೦೦ ಹಾಗೂ ಹಗರಟಗಿ-೭೦೦ ರಲ್ಲಿ ಬಿಟ್ಟ ಸುಂಕಗಳ ಬಗ್ಗೆ ಹೇಳುತ್ತದೆ. ಅದೇ ದೇವಾಲಯದ ಒಂದನೇ ಕಂಬದ ಮೇಲಿರುವ ೧೧೪೪ರ ಶಾಸನವು ಅದೇ ದೇವರ್ಗೆ ಮಹಾಜನಗಳು ದಾನ ಬಿಟ್ಟ ಅಂಶವನ್ನು ಹೇಳುತ್ತದೆ. ಈ ಗುಡಿಯ ಆವರಣದಲ್ಲಿರುವ ೧೧೪೨ ಮತ್ತು ೧೧೫೪ರ ಶಾಸನಗಳು ಕ್ರಮವಾಗಿ ಮಹಾಮಂಡಳೇಶ್ವರ ಕಪ್ಪರಸರು ಹಾಗೂ ಹುಣಸಿಗೆಯ ಅಪ್ಪಣ್ಣ ಭಟ್ಟೋಪಾಧ್ಯಾಯರುಗಳು ರಾಮೇಶ್ವರ ದೇವರ್ಗೆ ಬಿಟ್ಟ ದಾನಗಳನ್ನು ದಾಖಲಿಸಿವೆ. ಅದೇ ರೀತಿ ಇಲ್ಲಿಯ ೧೧೮೦ರ ಮತ್ತೊಂದು ಶಾಸನವು ಅಗ್ರಹಾರ ಮುದಿನೀರ ರಾಮೇಶ್ವರ ಹಾಗೂ ಲಕ್ಷ್ಮಣೇಶ್ವರ ದೇವರುಗಳಿಗೆಂದು ೫೦೦ ಮಹಾಜನರು ದಾನಬಿಟ್ಟ ವಿಷಯವನ್ನು ತಿಳಿಸುತ್ತದೆ. ಮೇಲೆ ಚರ್ಚಿಸಿರುವ ಹಿರೇಮುದನೂರಿನ ಶಾಸನಗಳು ಅಗಸ್ತ್ಯೇಶ್ವರ, ಮಾರ್ಕಂಡೇಶ್ವರ, ನಾರಾಯಣ, ಉತ್ತರೇಶ್ವರ, ರಾಮೇಶ್ವರ ಹಾಗೂ ಲಕ್ಷ್ಮಣೇಶ್ವರ ದೇವಾಲಯಗಳನ್ನು ಹೆಸರಿಸುತ್ತವೆ. ಈ ಎರಡೂ ಊರಿನ ಶಾಸನಗಳಿಂದ ಹಿಂದೆ ಇವೆರಡೂ ಕೂಡಿದ್ದು, ಅಗ್ರಹಾರ ಮುದಿನೀರು ಎಂದೇ ಕರೆಯಲ್ಪಟ್ಟಿದ್ದ ಅಂಶ ವೇದ್ಯವಾಗುತ್ತದೆ. ಶಾಸನಾಧಾರಗಳಿಂದ ಹಿಂದೆ ಇಲ್ಲಿ ಬಹಳ ದೇವಾಲಯಗಳಿದ್ದ ವಿಷಯ ಗೊತ್ತಾಗುತ್ತದೆ. ಆದರೆ, ಇಂದು ಇಲ್ಲಿಯ ದೇವಾಲಯಗಳು ಸಾಕಷ್ಟು ಜೀರ್ಣೋದ್ಧಾರಗೊಂಡಿದ್ದು, ಶಾಸನಗಳು ಸ್ಥಾನಪಲ್ಲಟವಾಗಿರುವುದರಿಂದ ಇವುಗಳ ಬಗ್ಗೆ ಖಚಿತವಾಗಿ ಹೇಳಲು ಸ್ವಲ್ಪ ಕಷ್ಟವಾಗುತ್ತದೆ.

ಚಿಕ್ಕಮುದನೂರಲ್ಲಿ ಇಂದು ಮಲ್ಲಿಕಾರ್ಜುನ, ಭೃಂಗಿ, ವೇಣುಗೋಪಾಲ, ಹನುಮಂತ ಹಾಗೂ ಸಿದ್ಧಲಿಂಗೇಶ್ವರ ಗುಡಿಗಳಿದ್ದು, ಇವುಗಳಲ್ಲಿ ಮಲ್ಲಿಕಾರ್ಜುನ ಗುಡಿಯು ಭಾಗಶಃ ಜೀರ್ಣೋದ್ಧಾರಗೊಂಡಿದೆ. ಶಿಥಿಲವಾಗಿರುವ ಈ ಗುಡಿಯು ಆರಂಭದಲ್ಲಿ ದ್ವಿಕೂಟವಿದ್ದು ನಂತರದಲ್ಲಿ ತ್ರಿಕೂಟವಾಗಿ ಪರಿವರ್ತನೆಗೊಂಡಂತೆ ತೋರುತ್ತದೆ. ಈ ದೇವಾಲಯದ ಕಂಬ, ಬಾಗಿಲವಾಡಗಳನ್ನು ನೋಡಿದರೆ ಇದು ಸುಮಾರು ೧೦-೧೧ನೇ ಶತಮಾನದ ರಚನೆಯಂತೆ ಕಂಡು ಬರುತ್ತಿದ್ದು, ಸಪ್ತ ಮಾತೃಕಾ ಪಟ್ಟಿಕೆಯೊಂದು ಇಲ್ಲಿದೆ. ಮೇಲಿನ ಶಾಸನೋಕ್ತ ಮೂಲಸ್ಥಾನ ಕುಮಾರೇಶ್ವರ-ಬೊಂಕೇಶ್ವರ ದೇಗುಲ ಇದೇ ಇರಬೇಕೆಂದು ತೋರುತ್ತದೆ. ವೇಣುಗೋಪಾಲಸ್ವಾಮಿ ಹಾಗೂ ಹನುಮಂತನ ಗುಡಿಗಳು ಅಕ್ಕಪಕ್ಕದಲ್ಲಿದ್ದು ವೇಣುಗೋಪಾಲಸ್ವಾಮಿ ಗುಡಿಯ ಕಂಬಗಳ ಮೇಲಿನ ಶಾಸನಗಳು ಹೆಚ್ಚಾಗಿ ಲಕ್ಷ್ಮಣೇಶ್ವರ ದೇವಾಲಯಕ್ಕೆ ಬೇರೆ ಬೇರೆ ಕಾಲದಲ್ಲಿ ದತ್ತಿ ಬಿಟ್ಟ ವಿಚಾರವನ್ನು ತಿಳಿಸುತ್ತವೆ. ಇದರ ಗರ್ಭಗೃಹದಲ್ಲಿ ವೇಣುಗೋಪಾಲ ಮತ್ತು ಪಾಂಡುರಂಗರ

ಸುಂದರ ಕೆತ್ತನೆಯುಳ್ಳ ಶಿಲಾಫಲಕವಿದ್ದು ಇಂದು ಆರಾಧಿಸಲ್ಪಡುತ್ತಿವೆ. ಇದರ ಬಳಿಯಲ್ಲಿ ದಕ್ಷಿಣಾಭಿಮುಖವಾಗಿರುವ ಹನುಮಂತನ ಗುಡಿಯನ್ನು ಕೂಡ ಹಳೆಯ ಗುಡಿಯ ಅವಶೇಷಗಳನ್ನು ಬಳಸಿ ನಿರ್ಮಿಸಲಾಗಿದ್ದು, ಇದರ ಬದಿಯಲ್ಲೇ ಮರಾಠರ ಕಾಲದ ದೀಪಮಾಲೆ ಕಂಬವಿದೆ. ಸಿದ್ಧಲಿಂಗೇಶ್ವರ ಹಾಗೂ ಭೃಂಗಿ ಗುಡಿಗಳು ಇಲ್ಲಿಯ ಇತರೆ ಪ್ರಾಚೀನ ದೇವಾಲಯಗಳಾಗಿದ್ದು, ಇವೂ ಕೂಡ ಶಿಥಿಲಾವಸ್ಥೆಯಲ್ಲಿವೆ. ಇಲ್ಲಿ ಮರಳು ತೀರ್ಥ, ಸಕ್ಕರೆ ತೀರ್ಥ ಹಾಗೂ ಹಾಲು ತೀರ್ಥಗಳಿವೆ ಎಂಬ ಪ್ರತೀತಿ ಇದೆ.

ಚಿಕ್ಕಮುದನೂರಿನಿಂದ ಮುಂದೆ ಸಾಗಿದರೆ ಸಿಗುವ ಹಿರೇಮುದನೂರಿನಲ್ಲಿ ಜೇಡರ ದಾಸಿಮಯ್ಯ ಆರಾಧಿಸುತ್ತಿದ್ದ ರಾಮೇಶ್ವರ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವು ದ್ವಿಕೂಟವಾಗಿದ್ದು, ಪೂರ್ವ-ಪಶ್ಚಿಮಾಭಿಮುಖವಾಗಿ ಗರ್ಭಗೃಹ ಹಾಗೂ ತೆರೆದ ಅಂತರಾಳಗಳನ್ನು ಹೊಂದಿದ್ದು ಇವುಗಳನ್ನು ಒಂದೇ ನವರಂಗ ಒಗ್ಗೂಡಿಸಿದ್ದು, ನವರಂಗಕ್ಕೆ ಎರಡು ಬದಿಯಿಂದಲೂ ಪ್ರವೇಶವಿದೆ. ಪೂರ್ವಾಭಿಮುಖವಾಗಿರುವ ಗರ್ಭಗೃಹದಲ್ಲಿ ಬೃಹತ್ತಾದ ರಾಮೇಶ್ವರ ಲಿಂಗವಿದ್ದು ಇದರ ಬಾಗಿಲವಾಡವು ಪಂಚಶಾಖೆಗಳನ್ನು ಹೊಂದಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಇದ್ದರೆ, ಪಶ್ಚಿಮಾಭಿಮುಖವಾಗಿರುವ ಗರ್ಭಗೃಹದಲ್ಲಿ ಈಗ ಉಮಾಮಹೇಶ್ವರ ಶಿಲ್ಪವಿದೆ. (ಹಿಂದೆ ಇಲ್ಲಿ ಸೂರ್ಯನ ಶಿಲ್ಪವಿದ್ದಿರಬೇಕು) ಇದನ್ನು ದಾಸಿಮಯ್ಯನ ಸಮಾಧಿಯೆಂದು ಸ್ಥಳೀಕರು ಅಭಿಪ್ರಾಯ ಪಡುತ್ತಾರೆ. ಅಂತರಾಳದಲ್ಲಿ ಬ್ರಹ್ಮ ವಿಷ್ಣು, ಮಹೇಶ್ವರನ್ನುಳ್ಳ ಸುಂದರವಾದ ಮಕರ ತೋರಣವಿದೆ. ನವರಂಗದಲ್ಲಿ ಗಣಪತಿ ಹಾಗೂ ಉಮಾ ಮಹೇಶ್ವರ ಶಿಲ್ಪಗಳಿವೆ. ಪ್ರವೇಶ ದ್ವಾರದ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಇದೆ. ಮುದಿನೀರ ತೀರ್ಥದ ರಾಮೇಶ್ವರ ದೇವಾಲಯದ ಉಲ್ಲೇಖವು ಹೂವಿನ ಹಡಗಲಿ (ಬಳ್ಳಾರಿ ಜಲ್ಲೆ) ಯ ೧೧೬೧ ಹಾಗೂ ೧೧೬೫ರ ಶಾಸನಗಳಲ್ಲೂ ಕಾಣಿಸಿಕೊಂಡಿದ್ದು, ಇದರಿಂದ ಆ ವೇಳೆಗಾಗಲೇ ಮುದನೂರ ರಾಮೇಶ್ವರ ದೇವಾಲಯದ ಸ್ಥಾನಾಚಾರ್ಯರು ಪ್ರಸಿದ್ಧರಾಗಿದ್ದು ಅವರ ಕೀರ್ತಿ ದೂರದ ಸ್ಥಳಗಳಿಗೆ ಹಬ್ಬಿತ್ತೆಂಬ ಅಂಶ ಅರಿವಾಗುತ್ತದೆ. ಈ ಗುಡಿಯ ಆವರಣದಲ್ಲಿ ಕೇವಲ ಗರ್ಭಗೃಹ ಹಾಗೂ ಅರ್ಧಮಂಟಪಗಳನ್ನುಳ್ಳ ಐದು (ಮೂರು ಪೂರ್ವಾಭಿಮುಖ, ಎರಡು ಪಶ್ಚಿಮಾಭಿಮುಖ) ಕಿರು ದೇವಾಲಯಗಳಿದ್ದು ಒಂದರಲ್ಲಿ ದಕ್ಷಿಣಾಮೂರ್ತಿಯ ಶಿಲ್ಪವಿದೆ. ರಾಮೇಶ್ವರ ದೇವಾಲಯದ ಉತ್ತರಕ್ಕೆ ರಾಮತೀರ್ಥ, ಪೂರ್ವಕ್ಕೆ ಪಾಂಡುತೀರ್ಥಗಳಿದ್ದು ರಾಮಾಯಣ ಹಾಗೂ ಮಹಾಭಾರತಗಳಿಗೆ ಸಂಬಂಧಿಸಿದ ಪೌರಾಣಿಕ ಕಥನಗಳ ಸುಂದರ ಕೆತ್ತನೆಗಳಿಂದ ಗಮನ ಸೆಳೆಯುತ್ತವೆ. ರಾಮೇಶ್ವರ ತೀರ್ಥದಂಚಿನಲ್ಲಿರುವ ಸಿದ್ಧಲಿಂಗ ಗುಡಿಯು ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಗರ್ಭಗೃಹ ಹಾಗೂ ನವರಂಗದ ಬಾಗಿಲವಾಡಗಳು ಕ್ರಮವಾಗಿ ನಾಲ್ಕು-ಐದು ಶಾಖೆಗಳನ್ನು ಹೊಂದಿದ್ದು ಲಲಾಟದಲ್ಲಿ ಗಜಲಕ್ಷ್ಮಿಯರಿದ್ದಾರೆ. ಅಂತರಾಳದ ತೊಲೆಯನ್ನು ಆಕರ್ಷಕವಾದ ಮಕರತೋರಣದಿಂದ ಅಲಂಕರಿಸಲಾಗಿದೆ. ಈ ದೇವಾಲಯದ ಹಿಂಬದಿಯಲ್ಲಿ ಸಂಗಮೇಶ್ವರ ತೀರ್ಥ ಹಾಗೂ ಸಂಗಮೇಶ್ವರ ಗುಡಿಗಳಿದ್ದವೆಂದು ಸ್ಥಳಿಕರು ಹೇಳುತ್ತಾರೆ. ಊರ ಹೊರಗೆ ಭದ್ರಪ್ಪಯ್ಯನ ಮಠವಿದೆ. ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿರುವ ಇದು ಗರ್ಭಗೃಹದಲ್ಲಿ ಶಿವಲಿಂಗವನ್ನು ಹೊಂದಿದೆ. ಇದರ ಪ್ರಧಾನ ಪ್ರವೇಶದ್ವಾರವನ್ನು ಬ್ರಹ್ಮ, ನಟರಾಜ, ವಿಷ್ಣು ಹಾಗೂ ಪರಿವಾರ ದೇವತೆಗಳನ್ನುಳ್ಳ ಸುಂದರವಾದ ಮಕರತೋರಣದಿಂದ ಅಲಂಕರಿಸಲಾಗಿದೆ. ಇದಕ್ಕೆ ಸಮೀಪದಲ್ಲೇ ಲಕ್ಷ್ಮಣತೀರ್ಥವಿದ್ದು ಇದರ ಬದಿಯಲ್ಲೇ ಇದ್ದ ಲಕ್ಷ್ಮಣೇಶ್ವರ ಗುಡಿ ಹೂತು ಹೋಗಿದೆ ಎಂಬ ನಂಬಿಕೆ ರೂಢಿಯಲ್ಲಿದೆ. ಕುರುಬರ ಓಣಿಯಲ್ಲಿ ಚೌಡೇಶ್ವರಿ ಗುಡಿಯಿದ್ದು ಈ ದೇವಿಯ ಶಿಲ್ಪ ವಿಶಿಷ್ಟವಾಗಿದೆ. ಹಿರೇಮುದನೂರಿನಲ್ಲಿ ರಾಮತೀರ್ಥ, ಪಾಂಡುತೀರ್ಥ, ಸಂಗಮತೀರ್ಥ ಹಾಗೂ ಲಕ್ಷ್ಮಣತೀರ್ಥಗಳಿದ್ದವೆಂಬ ಅಭಿಪ್ರಾಯವಿದ್ದು, ಇಂದು ಲಕ್ಷ್ಮಣ ತೀರ್ಥ ಮಾತ್ರ ಸುಸ್ಥಿತಿಯಲ್ಲಿದೆ.

ಬಸವಪೂರ್ವ ವೀರಶೈವ ಶರಣರಲ್ಲಿ, ವಚನಕಾರರಲ್ಲಿ ಅಗ್ರಗಣ್ಯನಾದ ಜೇಡರ ದಾಸಿಮಯ್ಯನು ಈ ಊರಿನವನಾಗಿದ್ದು ಶಿವನನ್ನು ಮೆಚ್ಚಿಸಿ ತವನಿಧಿ ಪಡೆದ ಪವಿತ್ರ ಸ್ಥಳ ಇದೆಂಬ ನಂಬಿಕೆ ಇದೆ. 'ರಾಮನಾಥ' ಇವನ ಅಂಕಿತವಾಗಿದ್ದು, ಈವರೆಗೆ ಇವನು ರಚಿಸಿರುವ ೧೧೦ಕ್ಕೂ ಹೆಚ್ಚಿನ ವಚನಗಳು ಲಭಿಸಿವೆ. ಜೇಡರ ದಾಸಿಮಯ್ಯನ ಮಡದಿಯಾದ ದುಗ್ಗಲೆಯೂ ಶರಣೆಯಾಗಿದ್ದು ನಾಲ್ಕಾರು ವಚನಗಳನ್ನೂ ರಚಿಸಿದ್ದಾಳೆ. ಇವನು ಆರಾಧಿಸುತ್ತಿದ್ದ ರಾಮನಾಥ ದೇವಾಲಯ ಇಲ್ಲಿದೆ. ಇಲ್ಲಿಯ ರಾಮ-ಲಕ್ಷ್ಮಣ ತೀರ್ಥಗಳು ಇಂದಿಗೂ ಸುಮಾರು ೮೦೦ ಎಕರೆಗೆ ನೀರುಣಿಸುತ್ತಿವೆ.

ರಾಮೇಶ್ವರ ದೇವರ ಜಾತ್ರೆಯು ಚೈತ್ರ ಶುದ್ಧ ಪಂಚಮಿಯಿಂದ - ದಶಮಿಯವರೆಗೆ ಜರುಗುತ್ತಿದ್ದು, ದಶಮಿಯಂದು ಜೇಡರ ದಾಸಿಮಯ್ಯನ ಉತ್ಸವ ನಡೆಯುತ್ತದೆ. ಆ ಸಂದರ್ಭದಲ್ಲಿ ಸಾವಿರಾರು ಜನ ಸಡಗರದಿಂದ ಪಾಲ್ಗೊಳ್ಳುತ್ತಾರೆ.

**ಮುಧೋಳ** (೯೯೭೯) ವು ತಾಲೂಕು ಕೇಂದ್ರವಾದ ಸೇಡಂನಿಂದ ಆಗ್ನೇಯಕ್ಕೆ ೩೨ ಕಿ. ಮೀ. ದೂರದಲ್ಲಿದೆ. ಪ್ರಾಚೀನ ಶಾಸನಗಳಲ್ಲಿ 'ಮುದವೊಲು' ಎಂದೇ ಉಲ್ಲೇಖಿತಗೊಂಡಿರುವ ಈ ಊರಿಂದ ಈವರೆಗೆ ರಾಷ್ಟ್ರಕೂಟ ಕನ್ನರದೇವನ ಕಾಲಕ್ಕೆ ಸೇರಿದ ಶಾಸನವೊಂದು ವರದಿಯಾಗಿದೆ. ಸುಮಾರು ೧೦ ನೇ ಶತಮಾನಕ್ಕೆ ಸೇರಿದ ಈ ಶಾಸನವು ಇಲ್ಲಿಯ ರಾಮಲಿಂಗೇಶ್ವರ ಗುಡಿಯ ಕಂಬವೊಂದರ ಮೇಲಿದೆ. ಮುದವಳಲನ್ನು ಗೋಣಯ್ಯನು ಆಳುತ್ತಿದ್ದಾಗ ಗೂಳಿಗಾವುಂಡನು ಮಹಾದೇವರ ದೇಗುಲವನ್ನು ಮಾಡಿಸಿ, ದೇವರ ಸೇವೆಗೆಂದು ಮೂರು ಮತ್ತರು ಹೊಲ, ೧೦ ಮನೆಯ ನಿವೇಶನ, ಒಂದು ತೋಟ ಹಾಗೂ ಒಂದು ಗಾಣವನ್ನು ದಾನ ಕೊಟ್ಟ ಅಂಶವನ್ನು ಈ ಶಾಸನವು ತಿಳಿಸುತ್ತದೆ. ಇದರಿಂದ ಹಿಂದೆ ರಾಷ್ಟ್ರಕೂಟರ ಕಾಲದ ಮಹಾದೇವ ದೇವಾಲಯವಿಲ್ಲಿದ್ದ ಅಂಶ ಗೊತ್ತಾಗುತ್ತದೆ. ಇಲ್ಲಿಯ ರಾಮಲಿಂಗೇಶ್ವರ ದೇವಾಲಯವು ರಾಷ್ಟ್ರಕೂಟರ ಕಾಲದ್ದಾಗಿದ್ದು, ನಂತರದಲ್ಲಿ ಜೀರ್ಣೋದ್ಧಾರಗೊಂಡಿರುವಂತೆ ತೋರುತ್ತದೆ. ಈ ದೇವಾಲಯವು ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಗರ್ಭಗೃಹದಲ್ಲಿ ಬಲಹರಿ ಶಿವಲಿಂಗವಿದೆ. ಇದರ ಬಾಗಿಲವಾಡವು ಮೂರು ಅಲಂಕಾರಿಕ ಶಾಖೆಗಳನ್ನು ಹೊಂದಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಇದೆ. ಈ ಗುಡಿಯ ಮುಂದೆ ಇರುವ ಮೂರು ವೀರಗಲ್ಲುಗಳು ವಿಶಿಷ್ಟವಾಗಿದ್ದು, ಇಲ್ಲಿದ್ದ ಶಾಸನವಿಂದು ನಾಪತ್ತೆಯಾಗಿದೆ. ಉಳಿದಂತೆ ಊರಲ್ಲಿ ಗೋಪಾಲಸ್ವಾಮಿ, ವಿಠಲ, ಗಣೇಶ, ನೀಲಕಂಠೇಶ್ವರ, ವೀರಭದ್ರ, ಹನುಮಂತ, ಉರಡಮ್ಮ ಎಲ್ಲಮ್ಮ ಅಂಬಾಭವಾನಿ, ಚೌಡಮ್ಮ ದ್ಯಾವಮ್ಮ ಮರಗಮ್ಮ ಮುಂತಾದ ನವೀನ ಗುಡಿಗಳಿದ್ದು, ಮಸೀದಿ, ದರ್ಗಾ ಹಾಗೂ ಇಗರ್ಜಿಗಳಿವೆ. ಸಮೀಪದ ಮೇಡಕ್ ಹಾಗೂ ಸಿಲಾರಕೋಟೆಗಳಲ್ಲಿ ಕಲ್ಯಾಣದ ಚಾಳುಕ್ಯರ ಕಾಲದ ದೇಗುಲಗಳಿವೆ. ಬಿಜಾಪುರ ಜಿಲ್ಲೆಯ ಸಾಲೋಟಗಿಯ ನಾರಾಯಣ ಗಜಾಂಕುಶನ ಹುಟ್ಟೂರು ಕಾಂಚಂಪಲ್ಲಿ ಮುಧೋಳ ಎಂದು ಹೇಳಲಾಗಿದ್ದು ಆ ಊರು ಇದೇ ಆಗಿದೆ. ವೀರಾವಳಿಯ ಕರ್ತೃ ವಜ್ರಭಟ್ಟನ ಊರೂ ಇದೇ ಆಗಿದೆ.

**ಮುನವಳ್ಳಿ** (೩೩೯೬)ಯು ತಾಲೂಕು ಕೇಂದ್ರವಾದ ಆಳಂದದಿಂದ ಈಶಾನ್ಯಕ್ಕೆ ೧೨ ಕಿ. ಮೀ. ದೂರದಲ್ಲಿದ್ದು ೧೨ನೇ ಶತಮಾನದಲ್ಲಿದ್ದ ಶಿವಶರಣ ಅಂಗಜೇಶ್ವರ ಮಸಣಯ್ಯನ ಸಮಾಧಿ ಸ್ಥಳ ಇದೆಂಬ ನಂಬಿಕೆಯಿದೆ. ಇಲ್ಲಿ ಮಸಣಯ್ಯ, ಮುತ್ಯ ಮಸಣಯ್ಯ ಹಾಗೂ ಗಜೇಶ ಮಸಣಯ್ಯನ ಗುಡಿಗಳಿದ್ದು ಇವು ಕ್ರಮವಾಗಿ ಮಸಣಯ್ಯನ, ಅವನ ಗುರುಗಳ ಹಾಗೂ ಅವನ ಆರಾಧ್ಯ ದೇವರ ದೇವಾಲಯಗಳೆಂದು ಹೇಳುತ್ತಾರೆ. ಅಕ್ಕಲಕೋಟೆ (ಮಹಾರಾಷ್ಟ್ರ) ಬಳಿಯ ಕರಜಗಿಯು ಮಸಣಯ್ಯನ ಹುಟ್ಟೂರೆಂಬ ಅಭಿಪ್ರಾಯವೂ ಇದ್ದು ಅಲ್ಲಿಯೂ ಗಜೇಶ್ವರ ಹಾಗೂ ಮಸಣಯ್ಯನ ಗುಡಿಗಳಿವೆ. ಮುನವಳ್ಳಿಯಲ್ಲಿ ಮಸಣಯ್ಯನ ಗುಡಿಯ ಜಾತ್ರೆಯು ಧವನದ ಹುಣ್ಣಿಮೆಯಾಗಿ ಐದು ದಿನಕ್ಕೆ ನಡೆಯುತ್ತದೆ.

**ಮುಪ್ಪಾ(ಗ್ಗಾ)** (೧೧೭೩) ತಾಲೂಕು ಕೇಂದ್ರವಾದ ಚಿತ್ತಾಪುರದಿಂದ ನೈಋತ್ಯಕ್ಕೆ ೨೪ ಕಿ. ಮೀ. ದೂರದಲ್ಲಿ ಗುಲಬರ್ಗಾ-ಸೇಡಂ ರಸ್ತೆಯಲ್ಲಿರುವ ಈ ಊರಿಂದ ಈವರೆಗೆ ಕಲ್ಯಾಣದ ಚಾಳುಕ್ಯ ಅರಸ ನೂರ್ಮಡಿ ತೈಲಪ್ಪನ ೧೧೫೭ರ ಶಾಸನ ವರದಿಯಾಗಿದೆ. ಈ ಶಾಸನದಿಂದ ಗೊಂಕ-೧೨೦(೬೦)ರಲ್ಲಿದ್ದ ಮುಪ್ಪಟಿಯಲ್ಲಿ ಮಾದಿರಾಜನು ಕಲಿದೇವ ಹಾಗೂ ಅಚ್ಯುತದೇವರ ಆಲಯವನ್ನು ಮಾಡಿಸಿದಾಗ, ಮಹಾಮಂಡಳೇಶ್ವರ ಗೊಂಕರಸನು ಭೂದಾನ ಬಿಟ್ಟ ಸಂದರ್ಭದಲ್ಲಿ ಊರ ಗೌಡರು ಹಾಗೂ ಮಾದಿರಾಜನೂ ಕೂಡ ದೇವರ ಸೇವೆಗೆಂದು ದಾನ ಬಿಟ್ಟ ಅಂಶವನ್ನು ಹೇಳುತ್ತದೆ. ಊರಲ್ಲಿಂದು ತ್ರಿಕೂಟ ಮಾದರಿಯ ಈಶ್ವರ ದೇವಾಲಯವಿದ್ದು, ಮೇಲಿನ ಶಾಸನೋಕ್ತ ದೇವಾಲಯ ಇದೇ ಆಗಿದೆ. ಪ್ರಧಾನ ಗರ್ಭಗೃಹಕ್ಕಷ್ಟೆ ಅಂತರಾಳವಿದ್ದು ಉಳಿದೆರಡು ಕೇವಲ ಒಂದಂಕಣದ ಗರ್ಭಗೃಹಗಳನ್ನು ಹೊಂದಿದ್ದು ದೇವಾಲಯಕ್ಕೆ ದಕ್ಷಿಣದಿಂದ ಪ್ರವೇಶವಿದೆ. ಪ್ರಧಾನ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದ್ದು ಶೈವದ್ವಾರಪಾಲಕರಿದ್ದಾರೆ. ಅಂತರಾಳದಲ್ಲಿ ಸುಂದರವಾದ ಚಂದ್ರ ಶಿಲೆಯಿದೆ. ಅಂತರಾಳ ಹಾಗೂ ನವರಂಗಗಳಲ್ಲಿ ಒಟ್ಟು ಆರು ದೇವಕೋಷ್ಠಗಳಿದ್ದು ನವರಂಗದಲ್ಲಿ ತ್ರಿದಳ ಕಮಲವಿದೆ. ಈ ಗುಡಿಯ ಉಳಿದೆರಡು ಅಂಕಣಗಳಲ್ಲಿ ಬಹುಶಃ ಹಿಂದೆ ಅಚುತ್ಯ ಹಾಗೂ ಸಂಖರದೇವರ ಶಿಲ್ಪಗಳಿದ್ದಿರಬೇಕು. ಪೂರ್ಣ ಜೀರ್ಣಾವಸ್ಥೆಯಲ್ಲಿರುವ ಈ ಗುಡಿಯ ಪ್ರವೇಶದ್ವಾರಕ್ಕೆ ಮುಖಮಂಟಪವಿದ್ದು ಕಕ್ಷಾಸನವಿದೆ. ಈ ಗುಡಿ ಆವರಣದಲ್ಲಿ ಗಣಪತಿ, ಸಪ್ತಮಾತೃಕಾ, ಮಹಾವೀರ, ಕೇಶವ ಮುಂತಾದ ಮುಕ್ಕಾದ ಶಿಲ್ಪಗಳಿವೆ. ಉಳಿದಂತೆ ಊರಲ್ಲಿ ಹನುಮಂತ, ಸಿದ್ದಯ್ಯ ಮುತ್ಯಾ, ಬೀರದೇವರು,

ಬಸವೇಶ್ವರ, ದ್ಯಾವಮ್ಮ ಮರಗಮ್ಮ ಮುಂತಾದ ನವೀನ ಗುಡಿಗಳಿದ್ದು, ಮಸೀದಿ ಹಾಗೂ ಸೈಯದ್ ಪೀರ್ ದರ್ಗಾಗಳಿವೆ. **ಗುಂಡಗುರ್ತಿ** (೨೫೮೬)ಯು ಮುಪ್ಪಾದಿಂದ ನಾಲ್ಕು ಕಿ. ಮೀ ಉತ್ತರಕ್ಕೆ ಇರುವ ನೆರೆಯ ಗ್ರಾಮವಾಗಿದ್ದು ಚಿತ್ತಾಪುರ ತಾಲೂಕಿನಲ್ಲಿದೆ. ಇಲ್ಲೂ ಕೂಡ ಕಲ್ಯಾಣದ ಚಾಲುಕ್ಯರ ಕಾಲಕ್ಕೆ ಸೇರಿದ ಈಶ್ವರಗುಡಿ ಹಾಗೂ ತಗ್ಗಿನಲ್ಲಿರುವ ಕುಂಬಾರ ದೇಗುಲಗಳಿದ್ದು, ಈಶ್ವರಗುಡಿ ಜೀರ್ಣೋದ್ಧಾರಗೊಂಡಿದ್ದರೆ, ಕುಂಬಾರ ದೇಗುಲ ಪಾಳು ಬಿದ್ದಿದೆ. ಉಳಿದಂತೆ ಊರಲ್ಲಿ ಸಿದ್ಧಲಿಂಗೇಶ್ವರ, ಶರಣಬಸವೇಶ್ವರ, ಬೀರದೇವರು, ಹನುಮಂತ, ದ್ಯಾಮವ್ವ, ಮರಗಮ್ಮ ಮುಂತಾದ ನವೀನ ಗುಡಿಗಳಿವೆ.

**ಮೊಘಾ** (೨೫೦೮)ವು ತಾಲೂಕು ಕೇಂದ್ರವಾದ ಚಿಂಚೋಳಿಯಿಂದ ಪಶ್ಚಿಮಕ್ಕೆ ೨೭ ಕಿ.ಮಿ. ದೂರದಲ್ಲಿರುವ ಚಾರಿತ್ರಿಕ ಮಹತ್ವ ಊರಾಗಿದ್ದು ಊರಿಂದ ಸುಮಾರು ಒಂದೂವರೆ ಕಿ. ಮೀ. ದಕ್ಷಿಣದಲ್ಲಿ ತಗ್ಗಾದ ಸ್ಥಳದಲ್ಲಿರುವ ರಾಮಲಿಂಗೇಶ್ವರ ದೇಗುಲದಿಂದಾಗಿ ಪ್ರಸಿದ್ಧವಾಗಿದೆ. ಇಲ್ಲಿಂದ ಈವರೆಗೆ ಎರಡು ಶಾಸನಗಳು ವರದಿಯಾಗಿದ್ದು, ಇವುಗಳಲ್ಲಿ ಜುಮ್ಮಾ ಮಸೀದಿ ಬಳಿಯಿರುವ ರಾಷ್ಟ್ರಕೂಟರ ಆಳ್ವಿಕೆಗೆ ಸೇರಿದ ೯೧೮ರ ಶಾಸನವು ಬಹಳ ತ್ರುಟಿತವಾಗಿದ್ದು, ಚಂಡಿಗನು ಮೊರಘೆಯಲ್ಲಿ ಆದಿತ್ಯ ದೇವರನ್ನು ಪ್ರತಿಷ್ಠಾಪಿಸಿ, ಅದರ ಪೂಜಾವಿಧಿಗೆಂದು ಬಾಲಚಂದ್ರ ಭಟಾರರಿಗೆ ೩೦೦ ಮತ್ತರು ಭೂಮಿಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ರಾಮಲಿಂಗೇಶ್ವರ ಗುಡಿ ಮುಂದೆ ಎರಡು ತುಂಡಾಗಿ ಹಾಳಾಗಿರುವ ಇನ್ನೊಂದು ಶಾಸನ ಕಳಚುರಿಗಳ ಕಾಲಕ್ಕೆ ಸೇರಿದ್ದು, ೧೧೭೦ರಲ್ಲಿ ಅನಾದಿ ಅಗ್ರಹಾರ ಮೈಗೆಹದ ಸ್ವಯಂಭು ರಾಮನಾಥ ದೇವಾಲಯ ಹಾಗೂ ರಾಮತೀರ್ಥವನ್ನು ವಾಸಪ್ಪಯ್ಯ ದಂಡನಾಯ್ಕನು ಮಾಡಿಸಿದಾಗ ಮಹಾಮಂಡಲೇಶ್ವರ ವೀರಗೊಂಕರಸ, ರಾಣಿ ಮೈಳಲದೇವಿ ಹಾಗೂ ಕುಮಾರ ಮಲ್ಲದೇವರಸರು ಮೈಘೆಯ ಈ ದೇಗುಲಕ್ಕೆ ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ.

ಶಾಸನೋಕ್ತ ರಾಮನಾಥ ದೇವಾಲಯವೇ ಇಂದಿನ ಸುಂದರವಾದ ರಾಮಲಿಂಗೇಶ್ವರ ದೇವಾಲಯವಾಗಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವು ಎತ್ತರವಾದ ಅಧಿಷ್ಠಾನದ ಮೇಲೆ ಬಹುಕೋನಾಕಾರ ತಳವಿನ್ಯಾಸದ ವಿಶಾಲವಾದ ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲವಾಡವು ಪಂಚಶಾಖಾಲಂಕೃತವಾಗಿದ್ದು, ಹೊಸ್ತಿಲ ಬಳಿ ಸುಂದರವಾದ ಚಂದ್ರಶಿಲೆ ಇದೆ. ಅಂತರಾಳದ ಎರಡೂ ದೇವಕೋಷ್ಠಗಳಲ್ಲಿ ಗಣಪತಿಗಳಿವೆ. ನವರಂಗದಲ್ಲಿರುವ ನಾಲ್ಕು ದೇವಕೋಷ್ಠಗಳಲ್ಲಿ ಎರಡರಲ್ಲಷ್ಟೆ ಸಪ್ತಮಾತೃಕಾ ಹಾಗೂ ಮಹಿಷಮರ್ದಿನಿ ಶಿಲ್ಪಗಳಿವೆ. ನವರಂಗದ ನಡುವಣ ನಾಲ್ಕೂ ಕಂಬಗಳ ಮೇಲೆ ನಟರಾಜ, ಬ್ರಹ್ಮ ವಿಷ್ಣು, ಸರಸ್ವತಿ, ಭೈರವಿ, ಗಣಪತಿ, ಉಗ್ರನರಸಿಂಹ, ಸೂರ್ಯ, ಭೀಕ್ಷಾಟನಾ ಮೂರ್ತಿ, ನರ್ತಕಿ ಮುಂತಾದ ಸುಂದರ ಉಬ್ಬು ಕೆತ್ತನೆಗಳಿವೆ. ನವರಂಗದ ಅಂಚಿನುದ್ದಕ್ಕೂ ಕಕ್ಷಾಸನಗಳಿದ್ದು ಮೂರು ಕಡೆಯಿಂದಲೂ ಪ್ರವೇಶವಿದೆ. ನವರಂಗದ ಬಲಗಡೆಯ ಮಂಟಪದಲ್ಲಿ ಮಾಳಚಿಯ ಆಸೀನ ಶಿಲ್ಪವಿದೆ. ಗರ್ಭಗುಡಿಯ ಹೊರಭಿತ್ತಿಯ ಮೇಲೆ ಮೂರು ದಿಕ್ಕಲ್ಲೂ ದೇವಕೋಷ್ಠಗಳಿದ್ದು ಇವುಗಳಲ್ಲಿ ಬ್ರಹ್ಮ ಮಹೇಶ್ವರ ಹಾಗೂ ವಿಷ್ಣು ಶಿಲ್ಪಗಳಿವೆ. ಗರ್ಭಗೃಹದ ಭಿತ್ತಿಯು ನಿರಾಡಂಬರವಾಗಿದ್ದು ಸುಂದರವಾದ ಔತ್ತರೇಯ (ಭೂಮಿಜ) ಶಿಖರವನ್ನು ಹೊತ್ತು ನಿಂತಿದ್ದು ಆಮ್ಲಶಿಲಾ ಹಾಗೂ ಸುಕನಾಸಗಳಿವೆ. ಜಿಲ್ಲೆಯಲ್ಲೇ ವೈಶಿಷ್ಟ್ಯ ಪೂರ್ಣವಾಗಿರುವ ಈ ದೇವಾಲಯದ ಎಡ ಬದಿಯಲ್ಲಿ ಪೂರ್ವಕ್ಕೆ ಮೂರು ಹೊಂಡಗಳಿದ್ದು ಒಂದರಲ್ಲಿ ಅನಂತಪದ್ಮನಾಭ, ಸ್ಥಾನಕ ವಿಷ್ಣುವಿನ ಎರಡು ಹಾಗೂ ಆಸೀನ ವಿಷ್ಣುವಿನ ಒಂದು ಶಿಲ್ಪಗಳಿವೆ. ಈ ದೇವರ ಜಾತ್ರೆ ರಾಮನವಮಿಯಂದು ಜರುಗುತ್ತದೆ. ಉಳಿದಂತೆ ಊರಲ್ಲಿ ಬಸವಣ್ಣ,ಬೀರಲಿಂಗ, ಹನುಮಂತ, ದುರಗಮ್ಮ ಲಕ್ಷ್ಮಿ ದ್ಯಾಮವ್ವ ಮುಂತಾದ ಗುಡಿಗಳಿದ್ದು ಮಸೀದಿ ಹಾಗೂ ದರ್ಗಾಗಳೂ ಇವೆ.

**ಮೊಗ್ಲಾ** (೧೧೬೮)ವು ತಾಲೂಕು ಕೇಂದ್ರವಾದ ಚಿತ್ತಾಪುರದಿಂದ ದಕ್ಷಿಣಕ್ಕೆ ಐದು ಕಿ. ಮೀ. ದೂರದಲ್ಲಿದ್ದು, ಮರಗೋಳ ಕ್ರಾಸ್‌ನಿಂದ ತಲುಪಬಹುದಾದ ಸ್ಥಳವಾಗಿದೆ. ಇಲ್ಲಿಂದ ಈವರೆಗೆ ಸುಮಾರು ೧೪ನೇ ಶತಮಾನಕ್ಕೆ ಸೇರಿದ ಪೂರ್ಣ ಹಾಳಾಗಿರುವ ಶಾಸನ ಲಭಿಸಿದ್ದು, ಶಾಸನವಿರುವ ರಾಮಲಿಂಗೇಶ್ವರ ಗುಡಿಯು ಸುಮಾರು ೧೨ನೇ ಶತಮಾನದ ರಚನೆಯಾಗಿದ್ದು, ಉತ್ಕೃಷ್ಟವಾಗಿದೆಯಾದರೂ ಇಂದು ಪಾಳು ಬಿದ್ದಿದ್ದು ಸಂರಕ್ಷಣಾ ಕಾರ್ಯ ಆಗಬೇಕಾಗಿದೆ.

**ಮೊಘಾ (ಬಿ)** (೧೦೫೧) ಯು ತಾಲೂಕು ಕೇಂದ್ರವಾದ ಆಳಂದದಿಂದ ನೈಋತ್ಯಕ್ಕೆ ೧೨ ಕಿ. ಮೀ. ದೂರದಲ್ಲಿದೆ. ಇಲ್ಲಿಂದ ಈವರೆಗೆ ಶಾಸನಗಳಾವುದೂ ವರದಿಯಾಗಿಲ್ಲ. ಆದರೆ ಊರಲ್ಲಿರುವ ಸುಮಾರು ೧೨ನೇ ಶತಮಾನಕ್ಕೆ ಸೇರಿದ

ಸೋಮಲಿಂಗೇಶ್ವರ ದೇಗುಲದಿಂದಾಗಿ ಮಹತ್ವ ಪಡೆದಿದೆ. ಈ ದೇಗುಲವು ತ್ರಿಕೂಟ ದೇವಾಲಯವಾಗಿದ್ದು ಪೂರ್ವಾಭಿಮುಖವಾಗಿದೆ. ಮೂರು ದಿಕ್ಕಲ್ಲೂ ಇರುವ ಗರ್ಭಗೃಹ ಹಾಗೂ ತೆರೆದ ಅಂತರಾಳಗಳನ್ನು ಒಂದೇ ನವರಂಗದಿಂದ ಒಗ್ಗೂಡಿಸಿದ್ದು ಮುಂದೆ ಮುಖಮಂಟಪವಿದೆ. ಮೂರು ಗರ್ಭಗೃಹಗಳಲ್ಲಿ ಶಿವಲಿಂಗಗಳಿದ್ದು ಇವುಗಳ ದ್ವಾರಬಂಧವು ತ್ರಿಶಾಖಾಲಂಕೃತವಾಗಿದ್ದು, ಸುಂದರವಾಗಿವೆ. ನವರಂಗದಲ್ಲಿ ಆರು ದೇವಕೋಷ್ಠಗಳಿದ್ದು ಹಿಂದೆ ಇವುಗಳಲ್ಲಿದ್ದ ಶಿಲ್ಪಗಳಿಂದು ನಾಪತ್ತೆಯಾಗಿವೆ. ನವರಂಗದ ಕಂಬಗಳು ಸರಳವಾಗಿದ್ದು ನಡುವಣ ಛತ್ತು ಕಮಲಗಳಿಂದ ಅಲಂಕೃತಗೊಂಡಿದೆ. ದೇವಾಲಯದ ಪ್ರಧಾನ ದ್ವಾರಬಂಧವೂ ಕೂಡ ತ್ರಿಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಣಪತಿಯನ್ನು ಕೆತ್ತಲಾಗಿದೆ. ಎತ್ತರವಾದ ಜಗತಿಯ ಮೇಲೆ ನಿಂತಿರುವ ಈ ದೇಗುಲವು ಬಹುಕೋನಾಕಾರದ ತಳವಿನ್ಯಾಸವನ್ನು ಹೊಂದಿದ್ದು, ಇದರ ಭಿತ್ತಿಯು ನಿರಾಡಂಬರವಾಗಿದ್ದು ಶಿಖರಗಳು ನಶಿಸಿ ಹೋಗಿವೆ. ಈ ದೇಗುಲದ ಸಮೀಪದಲ್ಲೇ ಇರುವ ಹನುಮಂತನ ಗುಡಿಯ ಬಳಿ ಸುಮಾರು ಎರಡೂವರೆ ಅಡಿ ಎತ್ತರದ ಕೇಶವ, ಭೈರವ, ಗಣಪ, ಸಪ್ತಮಾತೃಕಾ, ಗಜಲಕ್ಷ್ಮಿ (ಬಾಣಂತಿ ಕಲ್ಲೆಂದು ಸ್ಥಳೀಕರು ಇದನ್ನು ಕರೆಯುತ್ತಾರೆ) ಹಾಗೂ ರಾಶಿಚಕ್ರ ಕಲ್ಲಿನ ಶಿಲ್ಪಗಳಿವೆ. ಇವುಗಳಲ್ಲಿ ರಾಶಿಚಕ್ರ ಕಲ್ಲು ವೃತ್ತಾಕಾರದ್ದಾಗಿದ್ದು, ನಡುವೆ ಸೂರ್ಯನಿದ್ದು ಅವನನ್ನು ಹನ್ನೆರಡು ರಾಶಿಗಳು ಸುತ್ತುವರಿದಿರುವಂತೆ ಕೆತ್ತಲಾಗಿದೆ. ಹಿಂದೆ ಇದು ಜನಪದರ ಆರಾಧನೆಗೆ ಒಳಪಟ್ಟಿದಂತೆ ತೋರುತ್ತಿದ್ದು ಈಗಲೂ ಇದನ್ನು ಪೂಜಿಸುತ್ತಾರೆ. ಈ ರಾಶಿಕಲ್ಲಿನ ಮುಂಬದಿಯಲ್ಲಿ ಸೂರ್ಯನ ರಥದ ಸಪ್ತಾಶ್ವ ಹಾಗೂ ಸಾರಥಿ ಅರುಣನನ್ನು ಕೆತ್ತಿರುವುದು ವಿಶಿಷ್ಟವಾಗಿದೆ. ಉಳಿದಂತೆ ಊರಲ್ಲಿ ಹನುಮಂತ, ಜಟ್ಟಪ್ಪ, ಹಿರೊಡೆ, ಚೌಡಮ್ಮ ಲಕ್ಷ್ಮಿ ಹಾಗೂ ಮರಗಮ್ಮನ ನವೀನ ದೇವಸ್ಥಾನಗಳಿದ್ದು, ಮಸೀದಿ ಹಾಗೂ ಲಾಡ್ಲೆ ಮಶಾಕ್ ದರ್ಗಾ ಕೂಡ ಇವೆ.

**ಯಕ್ತಾಪುರ** (೯೫೪) ವು ತಾಲೂಕು ಕೇಂದ್ರವಾದ ಸುರಪುರದಿಂದ ವಾಯವ್ಯಕ್ಕೆ ೪೦ ಕಿ. ಮೀ., ಕೆಂಭಾವಿಯಿಂದ ಪಶ್ಚಿಮಕ್ಕೆ ೧೦ ಕಿ. ಮೀ ದೂರದಲ್ಲಿದೆ. ಊರಿಂದ ಸುಮಾರು ಎರಡು ಕಿ. ಮೀ. ದೂರದಲ್ಲಿರುವ ಗುತ್ತಿ ಬಸವೇಶ್ವರ ದೇವಾಲಯವು ಜಾಗೃತ ಸ್ಥಳವಾಗಿದ್ದು, ಇದರ ಜಾತ್ರೆಯು ಶ್ರಾವಣದ ಕಡೆಯ ಸೋಮವಾರದಂದು ನಂದಿಕೋಲಿನ ಉತ್ಸವದೊಂದಿಗೆ ಆರಂಭಗೊಂಡು ಮುಂದಿನ ಎರಡು ದಿನಗಳವರೆಗೆ ವಿಜೃಂಭಣೆಯೊಂದಿಗೆ ಜರುಗುತ್ತದೆ. ಇಲ್ಲಿಂದ ಸುಮಾರು ಎರಡು ಕಿ. ಮೀ. ದೂರದಲ್ಲಿರುವ **ಮುನೇರ ಬೊಮ್ಮನಹಳ್ಳಿ** (೧೦೪೬)ಯು ಚಾರಿತ್ರಿಕ ಸ್ಥಳವಾಗಿದ್ದು, ಕಲ್ಯಾಣದ ಚಾಳುಕ್ಯರ ಕಾಲದ ಅವಶೇಷಗಳು ಹರಡಿಕೊಂಡಿವೆ. ಇವುಗಳಲ್ಲಿ, ವರದಿಯಾಗಿರುವ ಜೈನಾವಶೇಷಗಳು ಮಹತ್ವದ್ದಾಗಿವೆ.

**ಯಡ್ರಾಮಿ** (೫೭೭೯) ಯು ತಾಲೂಕು ಕೇಂದ್ರವಾದ ಜೇವರ್ಗಿಯಿಂದ ನೈಋತ್ಯಕ್ಕೆ ಸುಮಾರು ೫೦ ಕಿ. ಮೀ., ಸಿಂಧಗಿಯಿಂದ ಆಗ್ನೇಯಕ್ಕೆ ೩೫ ಕಿ. ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಎಳರಾಮೆ' 'ಎಳರಾವೆ' 'ಸರ್ವನಮಸ್ಯದ ಅಗ್ರಹಾರ ದಕ್ಷಿಣ ವಾರಾಣಾಸಿ ಎಳರಾಮೆ' ಎಂದೆಲ್ಲಾ ಉಲ್ಲೇಖಿತಗೊಂಡಿರುವ ಈ ಊರು ಹಿಂದೆ ಸಗರ-೫೦೦ ಕ್ಕೆ ಸೇರಿದ್ದು ಎಳರಾಮೆ-೫೦ ರ ಆಡಳಿತ ಕೇಂದ್ರವಾಗಿದ್ದಂತೆ ತೋರುತ್ತದೆ. ಈ ಊರಿಂದ ಈವರೆಗೆ ೧೫ ಶಾಸನಗಳು ವರದಿಯಾಗಿದ್ದು, ನೆರೆಹೊರೆ ಊರುಗಳ ಶಾಸನಗಳಲ್ಲೂ ಈ ಊರಿನ ಪ್ರಸ್ತಾಪವಿದೆ. ಇವುಗಳಲ್ಲಿ ೧೦೯೫ ರ ಶಾಸನವು ಹೈಹಯ ಕುಲದ ದಾಸಿರಾಜನು ತನ್ನ ತಂದೆ ಚಾಮುಂಡನು ಕೆಂಭಾವಿ ದಾರಿಯಲ್ಲಿ ಬಾವಿಯನ್ನು ತೋಡಿಸಿ, ಅಲ್ಲಿದ್ದ ಸ್ವಯಂಭುಲಿಂಗಕ್ಕೆ ದೇಗುಲ ಮಾಡಿಸಿದ ಅಂಶವನ್ನು ಹೇಳುತ್ತ, ಆ ದೇವಾಲಯದಲ್ಲಿ ದಿನನಿತ್ಯ ೧೨ ಮಂದಿ ಬ್ರಾಹ್ಮಣರ ಭೋಜನ ವ್ಯವಸ್ಥೆಗೆಂದು ವರ್ಷಕ್ಕೆ ಹತ್ತು ಗದ್ಯಾಣ ಬಡ್ಡಿ ಹುಟ್ಟುವಂತೆ ದೇವರಿಗೆ ೩೦ ಗದ್ಯಾಣಗಳನ್ನು ಮೂಲಧನವಾಗಿ ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಇದೇ ದೇವರಿಗೆ ಸೇರಿದ ೧೨ನೇ ಶತಮಾನದ ಇನ್ನೊಂದು ಶಾಸನ ಎಳಮೇಲ ಸಿಂಹಪರ್ಷೆಯ ಮೋನಿ ಪಂಡಿತರನ್ನು ಹೆಸರಿಸುತ್ತ ದಾಸಿರಾಜನು ಜನ್ನನ ಭಾವಿಯ ಸ್ವಯಂಭು ದೇವರಿಗೆಂದು ಸತ್ರವನ್ನು ನಿರ್ಮಿಸಲು ಭೂಮಿಯನ್ನು ದಾನಕೊಟ್ಟ ವಿಷಯವನ್ನು ತಿಳಿಸುತ್ತದೆ. ಈ ಊರು 'ಬಲ್ಲದ ಕನ್ನಡಕ್ಕರದ ವಿದ್ಯಾಸ್ಥಾನ' ಆಗಿತ್ತೆಂಬ ಮಹತ್ವದ ಅಂಶ ಈ ಶಾಸನದಿಂದ ಗೊತ್ತಾಗುತ್ತದೆ. ಇದೇ ದೇವಾಲಯಕ್ಕೆ ಸಂಬಂಧಿಸಿದ ೧೧೨೧ ರ ಶಾಸನವು ಆರನೆಯ ವಿಕ್ರಮಾದಿತ್ಯನ ಮಹಾಮಂಡಳೇಶ್ವರನಾದ ಹೈಹಯ ಕುಲದ ದೇವರಸನು ಎಳರಾಮೆಯ ಜನ್ನನಬಾವಿಯ ಸ್ವಯಂಭುದೇವರಲ್ಲಿಗೆ ಬಂದಿದ್ದಾಗ ಆ ದೇವರ ಪೂಜಾ ವಿಧಿಗೆಂದು ವಿವಿಧ ಸುಂಕಗಳನ್ನು ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ಇಲ್ಲಿಯ ೧೧೧೧ ರ ಶಾಸನವು ಮಹಾಪ್ರಧಾನ ದಂಡನಾಯಕ ಆದಿತ್ಯಭಟ್ಟಯ್ಯನು

ಹರಿಹರಾದಿತ್ಯೇ (ಹರಿ + ಹರ + ಆದಿತ್ಯ)ಶ್ವರ ದೇವರುಗಳ ಸೇವೆಗೆಂದು ಭೂದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಇಲ್ಲಿಯ ಇನ್ನೊಂದು ಶಾಸನ ಲಕ್ಷ್ಮಣತೀರ್ಥದ ಪಶ್ಚಿಮಕ್ಕೆ ಆದಿತ್ಯ ಭಟ್ಟಯ್ಯನು ತ್ರಿಕೂಟ ಗುಡಿ ಕಟ್ಟಿಸಿದ್ದನ್ನು ಹೇಳುತ್ತದೆ. ಇಲ್ಲಿಯ ೧೧೫೫ರ ಶಾಸನ ಹೈಹಯ ಕುಲಕ್ಕೆ ಸೇರಿದ ಅರಸ ಅರಸಿಯರು ಲಕ್ಷ್ಮಣೇಶ್ವರ ದೇವಗ್ಗೆ ಹಾಗೂ ಆ ದೇವಾಲಯದ ಮಠಕ್ಕೆಂದು ಭೂದಾನ ಬಿಟ್ಟ ವಿಷಯವನ್ನು ಹೇಳುತ್ತದೆ. ಅದರಂತೆ ೧೧೬೯ರ ಇನ್ನೊಂದು ಶಾಸನವು ಇದೇ ದೇವರಿಗೆ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಇಲ್ಲಿಯ ಆರು ಶಾಸನಗಳು ಇದೇ ಎಳರಾಮೆ ತೀರ್ಥದ ರಾಮೇಶ್ವರ ದೇವರ್ಗೆ ಸಂಬಂಧಿಸಿದ್ದು ಅವುಗಳಲ್ಲಿ ೧೧೬೮ರ ಶಾಸನವು ಮಠದಾಚಾರ್ಯ ಚಂದ್ರರಾಶಿ ಪಂಡಿತರಿಗೆ ಎಳರಾವೆಯ ಸರ್ವ ಆದಾಯವನ್ನು ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ೧೨ನೇ ಶತಮಾನದ ಇನ್ನೊಂದು ಶಾಸನ ಭೂದಾನದ ಜೊತೆಗೆ ಕುಕನೂರು (ರಾಯಚೂರ ಜಿಲ್ಲೆ) ಮಠಕ್ಕೆಂದು ಇಲ್ಲಿ ನಿವೇಶನವನ್ನು ಬಿಟ್ಟು ಕೊಟ್ಟ ಅಂಶವನ್ನು ತಿಳಿಸುತ್ತದೆ. ಇನ್ನೊಂದು ಶಾಸನ ಎಳಮೇಲ ಸಿಂಹಪರ್ಷೆಯ ಅಮೃತರಾಶಿ ಪಂಡಿತರು ಶ್ರೀ ರಾಮೇಶ್ವರ ದೇವಾಲಯದ ಮಠದಾಚಾರ್ಯರಾಗಿದ್ದ ಅಂಶವನ್ನು ತಿಳಿಸಿದರೆ ಮತ್ತೊಂದು ಸಂತೆ ಹಣವನ್ನು ದೇವರ್ಗೆ ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಇಲ್ಲಿ ಈಗಲೂ ಸೋಮವಾರದಂದು ಸಂತೆಯಾಗುತ್ತದೆ. ಇಲ್ಲಿನ ಇನ್ನೊಂದು ಶಾಸನ ಸ್ಥಾನಾಚಾರ್ಯ ಸೂರ್ಯರಾಶಿ ಪಂಡಿತರಿಗೆ ಹೊಲ, ಗದ್ದೆ, ತೋಟಗಳನ್ನು ಎಳರಾಮೆಯ ತೀರ್ಥದ ಗಡಿಂಬದಲ್ಲಿ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಹೀಗೆ ಮೇಲಿನ ಶಾಸನಗಳಿಂದ ಎಳರಾವೆ (ಯಡ್ರಾಮಿ)ಯು ಹಿಂದೆ ಪ್ರಮುಖ ಧಾರ್ಮಿಕ, ವಾಣಿಜ್ಯ, ಮತ್ತು ವಿದ್ಯಾಕೇಂದ್ರವಾಗಿ ಮೆರೆದ ಅಗ್ರಹಾರವಾಗಿದ್ದು, ೩೦೦ ಮಹಾಜನರನ್ನು ಹೊಂದಿತ್ತೆಂಬ ಅಂಶ ಗೊತ್ತಾಗುತ್ತದೆ. ಮೇಲಾಗಿ ಇದು ಎಳಮೇಲ ಸಿಂಹಪರ್ಷಾ ಮಂಡಳಿಯ ಆಚಾರ್ಯರ ಚಟುವಟಿಕೆಯ ಕೇಂದ್ರವಾಗಿತ್ತೆಂಬ ಅಂಶವೂ ಗೊತ್ತಾಗುತ್ತದೆ. ಆದರಿಂದು ಯಡ್ರಾಮಿ ತನ್ನೆಲ್ಲಾ ಗತವೈಭವಗಳನ್ನು ನಾನಾ ಕಾರಣಗಳಿಂದ ಕಳೆದುಕೊಂಡು ಮೂಕವಾಗಿ ನಿಂತಿದೆ.

ಶಾಸನದಲ್ಲಿ ಉಕ್ತವಾಗಿರುವ ಎಳರಾಮೆಯ ತೀರ್ಥ, ಇಂದಿನ ರಾಮತೀರ್ಥವಾಗಿದ್ದು, ಇಲ್ಲಿ ೧೧-೧೨ನೇ ಶತಮಾನದ ಅವಶೇಷಗಳು ಚದುರಿಕೊಂಡು ಬಿದ್ದಿವೆ. ತೀರ್ಥದ ನಡುವೆ ಈಗ ಮಸೀದಿ ಇದೆ. ತೀರ್ಥದ ಸುತ್ತ ಇರುವ ಪ್ರಾಂಗಣದಲ್ಲಿ ಹಿಂದಿನ ಅವಶೇಷಗಳನ್ನು ಬೀಳಿಸಿ ಕೊಠಡಿಗಳನ್ನು ನಿರ್ಮಿಸಿದ್ದಾರೆ. ಈ ತೀರ್ಥದ ಬಲಭಾಗದಲ್ಲಿ ಜೀರ್ಣೋದ್ಧಾರ ಗೊಂಡಿರುವ ಬಸವಣ್ಣನ ಗುಡಿ ಇದೆ. ಗುಡಿಯ ಮುಂದೆ ಶಿಲಾಶಾಸನ ಕಲ್ಲು, ಸೂರ್ಯ ಹಾಗೂ ಗಣಪತಿಯ ಶಿಲ್ಪಗಳಿವೆ. ಗೌಡರ ಓಣಿಯಲ್ಲಿ ಪೂರ್ವಾಭಿಮುಖವಾಗಿರುವ ಗರ್ಭಗೃಹ, ತೆರೆದ ಅಂತರಾಳ ಹಾಗೂ ತೆರೆದ ನವರಂಗಗಳನ್ನುಳ್ಳ ರಾಮೇಶ್ವರ ದೇವಾಲಯವಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದೆ. ಇದರ ನವರಂಗ ಭಾಗ ಹಾಳಾಗಿದ್ದು, ಹಿಂದೆ ಇದಕ್ಕೆ ಕಕ್ಷಾಸನವಿದ್ದ ಕುರುಹು ಕಾಣಬಹುದಾಗಿದೆ. ಕಕ್ಷಾಸನದ ಹಿಂಬದಿಯು ತ್ರಿಪುರಾಂತಕ, ನಟರಾಜ, ಮುಂತಾದ ಉಬ್ಬು ಕೆತ್ತನೆಗಳಿಂದ ಕೂಡಿದ್ದು, ಅವುಗಳಲ್ಲಿ ನಡುವೆ ಮಿಥುನ ಶಿಲ್ಪಗಳಿವೆ. ಸುಮಾರು ೧೨ನೇ ಶತಮಾನದ್ದಾದ ಈ ದೇವಾಲಯದ ಶಿಖರವಿಂದು ಹಾಳಾಗಿದೆ. ಉಳಿದಂತೆ ಊರಲ್ಲಿ ಭಾಗ್ಯಮ್ಮ ಹಾಗೂ ಹನುಮಂತನ ಗುಡಿಗಳಿದ್ದು ಎರಡು ಮಸೀದಿ ಹಾಗೂ ದರ್ಗಾ ಇವೆ.

**ಯ(ಎ)ನಗುಂಟಿ** (೭೯೯) ಯು ತಾಲೂಕು ಕೇಂದ್ರವಾದ ಜೇವರ್ಗಿಯಿಂದ ಪೂರ್ವಕ್ಕೆ ೧೮ ಕಿ. ಮಿ., ನರಬೋಳಿಯಿಂದ ವಾಯವ್ಯಕ್ಕೆ ನಾಲ್ಕು ಕಿ. ಮೀ. ದೂರದಲ್ಲಿರುವ ನೆರೆಯ ಗ್ರಾಮವಾಗಿದ್ದು, ಬಳಸಿ ಬ್ರಹ್ಮಚಾರಿ ಇದ್ದ ಚಾರಿತ್ರಿಕ ಮಹತ್ವದ ಇಲ್ಲಿಂದ ಈವರೆಗೆ ವರದಿಯಾಗಿರುವ ಏಕೈಕ ಶಾಸನದಿಂದ ಹಿಂದೆ ಇದೊಂದು ಅಗ್ರಹಾರವಾಗಿದ್ದು ವೆಯನಗುಂಟೆ ಎಂದು ಕರೆಯಲ್ಪಟ್ಟಿತ್ತು; ೧೪೦ ಮಹಾಜನರನ್ನು ಹೊಂದಿದ್ದ ಈ ಊರಿನಲ್ಲಿಯ ಭೋಗೇಶ್ವರದೇವರಿಗೆ ಪೂಜಾವಿಧಿಗೆಂದು ೧೧೨೨ರಲ್ಲಿ ಊರ ಸಮಸ್ತರು ಹಲವಾರು ಸುಂಕಗಳನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತವೆ. ಊರ ನಡುವೆ ಇರುವ ಸುಮಾರು ೧೨ನೇ ಶತಮಾನಕ್ಕೆ ಸೇರಿದ್ದ ಬೃಹತ್ತಾದ ಈಶ್ವರ ದೇವಾಲಯವೇ ಶಾಸನೋಕ್ತ ಭೋಗೇಶ್ವರ ದೇವಾಲಯವಾಗಿದ್ದು ಎತ್ತರವಾದ ಅಧಿಷ್ಠಾನದ ಮೇಲೆ ನಿಂತಿರುವ ಈ ಗುಡಿಯು ನಾಲ್ಕು ಗರ್ಭಗೃಹಗಳನ್ನು ಹೊಂದಿದ್ದು, ಚೌಕಾಕಾರದ ವಿಶಿಷ್ಟವಾದ ವಿನ್ಯಾಸದಿಂದ ಕೂಡಿದೆ. ಇದಕ್ಕೆ ಸೇರಿದಂತೆ ನವರಂಗವಿದ್ದು ಮೂರು ದಿಕ್ಕಿನಿಂದಲೂ ಪ್ರವೇಶ ದ್ವಾರವಿದ್ದು, ಇಂದು ಪೂರ್ಣ ಶಿಥಿಲಾವಸ್ಥೆಯಲ್ಲಿದೆ. ಉಳಿದಂತೆ ಊರಲ್ಲಿ ಹನುಮಂತ, ಬೀರಲಿಂಗ, ಉಂಡುಪವಾಸಿ, ಎಲ್ಲಮ್ಮ, ಪಾಲ್ಕಮ್ಮ ದೇವಮ್ಮ ಹಾಗೂ ಮರಗಮ್ಮನ ಗುಡಿಗಳಿದ್ದು, ಮಸೀದಿ ಹಾಗೂ ದರ್ಗಾ ಕೂಡ ಇವೆ.

**ಯರಗೋಳ** (೭೦೧೦) ವು ತಾಲೂಕು ಕೇಂದ್ರವಾದ ಯಾದಗಿರಿಯಿಂದ ವಾಯವ್ಯಕ್ಕೆ ೨೦ ಕಿ. ಮೀ. ದೂರದಲ್ಲಿರುವ ರೈಲು ನಿಲ್ದಾಣ ಹೊಂದಿರುವ ಧಾರ್ಮಿಕ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಎರಂಗೋಳ' ಎಂದೇ ಉಲ್ಲೇಖಿತಗೊಂಡಿರುವ ಈ ಊರಿಂದ ಈವರೆಗೆ ಕಲ್ಯಾಣದ ಚಾಳುಕ್ಯ ಅರಸ ಒಂದನೇಯ ಸೋಮೇಶ್ವರನ ಕಾಲಕ್ಕೆ ಸೇರಿದ ೧೦೫೮ ರ ಏಕೈಕ ಶಾಸನವು ವರದಿಯಾಗಿದೆ. ಎರಂಗೋಳದ ಪ್ರಭು ಮಾಚಯ್ಯನಾಯಕನು ೧೦೫೮ ರಲ್ಲಿ ಇಲ್ಲಿಯ ಸಿದ್ಧೇಶ್ವರ ದೇವರ ಸೇವೆಗೆಂದು ಹೊಲ ಹಾಗೂ ತೋಟಗಳನ್ನು ದಾನ ಕೊಟ್ಟ ಅಂಶವನ್ನು ಬಂಡೆಯೊಂದರ ಮೇಲಿರುವ ಈ ಶಾಸನ ತಿಳಿಸುತ್ತಿದ್ದು, ಇಂದಿಲ್ಲಿ ಜೀರ್ಣಾವಸ್ಥೆಯಲ್ಲಿರುವ ಸಿದ್ಧೇಶ್ವರ ದೇವಾಲಯವಿದೆ. ಊರಲ್ಲಿಂದು ಸುಮಾರು ೧೧ನೇ ಶತಮಾನಕ್ಕೆ ಸೇರಿದ ಕಲ್ಲಯ್ಯ ಮುತ್ಯಾನ ಗುಡಿ ಇದೆ. ಮೂಲತಃ ತ್ರಿಕೂಟ ದೇವಾಲಯವಾಗಿರುವ ಇದು ಪೂರ್ವಾಭಿಮುಖವಾಗಿದ್ದು, ಮೂರು ಗರ್ಭಗೃಹ, ತೆರೆದ ಅಂತರಾಳ ಹಾಗೂ ಎಲ್ಲಕ್ಕೂ ಸೇರಿದಂತೆ ಒಂದೇ ನವರಂಗವನ್ನು ಹೊಂದಿದ್ದು, ಇಂದು ಪೂರ್ಣ ಪಾಳು ಬಿದ್ದಿದೆ. ಆದರೆ ಗಣಪತಿ, ಪಾರ್ವತಿ-ಪರಮೇಶ್ವರ, ಷಣ್ಮುಖಿ, ಸಪ್ತಮಾತೃಕಾ ಹಾಗೂ ಯಕ್ಷನ ಬಿಡಿ ಶಿಲ್ಪಗಳು ಸುಂದರವಾಗಿದ್ದು ಉಲ್ಲೇಖಾರ್ಹವಾಗಿದೆ. ಉಳಿದಂತೆ ಊರಲ್ಲಿ ಸಿದ್ಧಲಿಂಗೇಶ್ವರ ಸಂಜೀವಿ ಭೀಮಾ, ಹನುಮಂತ ಮುಂತಾದ ನವೀನ ಗುಡಿಗಳಿದ್ದು ಮಸೀದಿ ಹಾಗೂ ಜಮಾಲ್ ಸಾಬ್ ದರ್ಗಾಗಳಿವೆ. ಟೀಕಾಚಾರ್ಯರೆಂದೇ ಪ್ರಸಿದ್ಧರಾದ ಜಯತೀರ್ಥ (೧೩೬೫-೮೮) ರು ೧೪ ವರ್ಷ ಇಲ್ಲೇ ನೆಲೆ ನಿಂತು ತಮ್ಮ 'ನ್ಯಾಯಸುಧಾ' ಮುಂತಾದ ಟೀಕಾಗ್ರಂಥಗಳನ್ನು ರಚಿಸಿದ್ದು, ಈ ಊರಿನ ಹೊರವಲಯದಲ್ಲಿರುವ ಗುಹೆಯೊಂದರಲ್ಲಿ ಎಂಬ ಅಭಿಪ್ರಾಯವಿದೆ. ಮಿಗಿಲಾಗಿ ಇಲ್ಲಿ ಮಾಧ್ವ ಸಂಪ್ರದಾಯಕ್ಕೆ ಸೇರಿದ ರಾಮಚಂದ್ರ ತೀರ್ಥ ಹಾಗೂ ವಿದ್ಯಾನಿಧಿ ತೀರ್ಥರ ಬೃಂದಾವನಗಳಿದ್ದು, ವರ್ಷದುದ್ದಕ್ಕೂ ಭಕ್ತಾದಿಗಳು ಇಲ್ಲಿಗೆ ಭೇಟಿ ನೀಡುತ್ತಿರುತ್ತಾರೆ. ಈ ಊರಿನ ಗುಡ್ಡ-ಗಾಡಲ್ಲಿ ಸೀತಾಫಲವನ್ನು ಸಮೃದ್ಧವಾಗಿ ಬೆಳೆಯುತ್ತಾರೆ.

**ಯಲೇರಿ** (೩೫೫೪) ಯು ತಾಲೂಕು ಕೇಂದ್ರವಾದ ಯಾದಗಿರಿಯಿಂದ ಪಶ್ಚಿಮಕ್ಕೆ ೨೪ ಕಿ. ಮೀ. ದೂರದಲ್ಲಿ ಪೆದ್ದವಾಗು ತೊರೆಯ ಬಲದಂಡೆಯ ಮೇಲೆ ಇರುವ ಧಾರ್ಮಿಕ ಮಹತ್ವದ ಸ್ಥಳವಾಗಿದೆ. ಸುಮಾರು ೧೨ನೇ ಶತಮಾನದಲ್ಲಿದ್ದ ಶರಣ ಏಲೇಶ್ವರ ಕೇತಯ್ಯನ ಜನ್ಮಸ್ಥಳ ಇದೇ ಎಂಬ ಅಭಿಪ್ರಾಯವಿದೆ. ರಾಮೇಶ್ವರ ಎಲೇಶ್ವರ ಲಿಂಗ ಎಂಬ ಅಂಕಿತ ನಾಮದೊಂದಿಗೆ ಸುಮಾರು ೨೦೦ ವಚನಗಳನು ಇವನು ರಚಿಸಿದ್ದಾನೆ.

**ಯಾತನೂರು** (೧೫೨೪) ತಾಲೂಕು ಕೇಂದ್ರವಾದ ಜೇವರ್ಗಿಯಿಂದ ಪಶ್ಚಿಮಕ್ಕೆ ೩೦ ಕಿ. ಮೀ. ದೂರದಲ್ಲಿ, ಜೇವರ್ಗಿ-ಸಿಂಧಗಿ ರಸ್ತೆಯಲ್ಲಿ ಜೇರಟಗಿಯಿಂದ ಉತ್ತರಕ್ಕೆ ನಾಲ್ಕು ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಊರು. ಪ್ರಾಚೀನ ಶಾಸನಗಳಲ್ಲಿ 'ಏವಂತನೂರು' ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ನರಿಯಂಬೊಳೆ - ೭೦ಕ್ಕೆ ಸೇರಿದ್ದು ಇಲ್ಲಿಂದ ಈವರೆಗೆ ಮೂರು ಶಾಸನಗಳು ವರದಿಯಾಗಿವೆ. ಇಲ್ಲಿಯ ಮಲ್ಲಿಕಾರ್ಜುನ ಗುಡಿ ಮುಂದಿರುವ ೧೦೮೦ರ ಶಾಸನವು ಆರನೆಯ ವಿಕ್ರಮಾದಿತ್ಯನು ಮುದ್ದಿಗಲ್ಲ ಭಟ್ಟೋಪಾಧ್ಯಾಯರಿಗೆ ಅಂಕುಲಗೆ-೫೦೦ರ ಬಳಿಯ ಏವಂತನೂರನ್ನು ಸರ್ವನಮಸ್ಯವಾಗಿ ಕೊಟ್ಟ ನಂತರ ೧೦೯೪ರಲ್ಲಿ ಇವನ ತಂದೆ ಕೊಮ್ಮಣ್ಣ ಭಟ್ಟೋಪಾಧ್ಯಾಯರು ತ್ರಿಕೂಟದೇವಾಲಯವನ್ನು ನಿರ್ಮಿಸಿ, ಆ ದೇವರ್ಗೆ ಪೂಜಾವಿಧಿಗೆಂದು ಮಾಣಿಕೇಶ್ವರದ ಕೋಲಲ್ಲಿ ಅಳೆದು ಕೊಟ್ಟ ೮೦ ಮತ್ತರು ಹೊಲ ಹಾಗೂ ಒಂದು ಮತ್ತರು ಹುಲಿಯ ಬಾವಿಯ ತೋಟವನ್ನು ಮಹಾಜನಗಳು ರಕ್ಷಿಸಬೇಕೆಂದು ಹೇಳುತ್ತದೆ. ಇಲ್ಲೇ ಇರುವ ೧೧೧೦ರ ಶಾಸನವು ಅಸ್ಪಷ್ಟವಾಗಿದ್ದು, ಅದರಲ್ಲೂ ಕೊಮಣ್ಣ ಭಟ್ಟೋಪಾಧ್ಯಾಯರ ಉಲ್ಲೇಖವಿದೆ. ಹನುಮಂತನ ಗುಡಿ ಮುಂದಿರುವ ಶಾಸನವು ಈ ಊರನ್ನು ಆರನೆಯ ವಿಕ್ರಮಾದಿತ್ಯನಿಂದ ಸರ್ವಮಾನ್ಯವಾಗಿ ಪಡೆದ ಮುದ್ದಿಗಲ್ಲ ಭಟ್ಟೋಪಾಧ್ಯಾಯರು ೧೧೨೧ರಲ್ಲಿ ಏವಂತನೂರಲ್ಲಿ ಶ್ರೀರಂಗ ದೇವಾಲಯವನ್ನು ನಿರ್ಮಿಸಿ, ದೇವರ ಸೇವೆಗೆಂದು ೩೦ ಮತ್ತರು ಹೊಲ, ೪೫೦ ಕಮ್ಮ ತೋಟ ಹಾಗೂ ಇನ್ನಿತರ ಸುಂಕಗಳನ್ನು ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಜೊತೆಗೆ ಬ್ರಹ್ಮಪುರಿಯ ಬ್ರಾಹ್ಮಣರಿಗೆ ಭೂಮಿಯನ್ನು ದಾನಕೊಟ್ಟ ವಿಷಯವನ್ನೂ ತಿಳಿಸುತ್ತದೆ. ಇಲ್ಲಿಯ ಶಾಸನಗಳಿಂದ ೧೦೯೪ರಲ್ಲಿ ಅಂಕುಲಗೆ-೫೦೦ಕ್ಕೆ ಸೇರಿದ್ದ ಈ ಊರು ೧೧೨೧ರ ವೇಳೆಗೆ ನರಿಯಂಬೊಳೆ - ೭೦ಕ್ಕೆ ವರ್ಗಾವಣೆಗೊಂಡ ಅಂಶ ಗೊತ್ತಾಗುತ್ತದೆ. ಶಾಸನೋಕ್ತ ತ್ರಿಕೂಟ ದೇವಾಲಯವೇ ಇಂದಿನ ಮಲಖಾನ್ (ಮಲ್ಲಿಕಾರ್ಜುನ) ಗುಡಿಯಾಗಿದ್ದು, ಶಿಥಿಲಾವಸ್ಥೆಯಲ್ಲಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವು ಇಂದು ಏಕ ಗರ್ಭಗೃಹ ಹಾಗೂ ಅಂತರಾಳಗಳನ್ನು ಹೊಂದಿದ್ದು ಉಳಿದೆರಡು ಗರ್ಭಗೃಹ ಭಾಗಗಳು ನಶಿಸಿಹೋಗಿವೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲವಾಡವು

ತ್ರಿಶಾಖಾಲಂಕೃತವಾಗಿದ್ದು ಸರಳವಾಗಿದೆ. ನವರಂಗದಲ್ಲಿ ಎರಡು ದೇವಕೊಷ್ಠಗಳಿದ್ದು, ನವರಂಗ ಭಾಗವು ಪೂರ್ಣ ನಾಶವಾಗಿದೆ. ಊರ ದಕ್ಷಿಣಕ್ಕೆ ಇರುವ ಹನುಮಂತನ ಗುಡಿಯ ಪರಿಸರವೇ ಶಾಸನೋಕ್ತ ಶ್ರೀರಂಗ ದೇವಾಲಯವಿದ್ದ ಸ್ಥಳವೆಂದು ತೋರುತ್ತದೆ. ಇಲ್ಲಿ ಪ್ರಾಚೀನ ದ್ವಾರಬಂಧ, ಕಂಬ ಮುಂತಾದ ಅವಶೇಷಗಳು ಚದುರಿಕೊಂಡು ಬಿದ್ದಿವೆ. ಉಳಿದಂತೆ ಊರಲ್ಲಿ ಲಿಂಗರಾಯ, ಜಟ್ಟಿಂಗರಾಯ, ಭಾಗ್ಯವಂತಿ, ಲಕ್ಷ್ಮಿ, ದ್ಯಾಮವ್ವ, ಮರಗಮ್ಮ ಮುಂತಾದ ನವೀನ ಗುಡಿಗಳಿದ್ದು, ಜುಮ್ಮಾ ಮಸೀದಿ ಹಾಗೂ ಸಾತ್‌ಪೀರ್ ದರ್ಗಾಗಳಿವೆ. **ಚೇರಟಗಿ** (೧೬೫೨)ಯು ಇಲ್ಲಿಂದ ನಾಲ್ಕು ಕಿ. ಮಿ. ದೂರದಲ್ಲಿದ್ದು ಅಲ್ಲಿ ಚನ್ನಬಸವೇಶ್ವರ ಹಾಗೂ ರೇವಣಸಿದ್ದೇಶ್ವರ ದೇವಾಲಯಗಳಿವೆ. ಚನ್ನಬಸವೇಶ್ವರ ರಥವು ಬೃಹತ್ತಾಗಿದ್ದು, ಇದರ ಜಾತ್ರೆಯು ಗೌರಿ ಹುಣ್ಣಿಮೆಯಾದ ಆರು ದಿನಕ್ಕೆ ಜರುಗುತ್ತದೆ.

**ಯಾದಗಿರಿ** (೪೩,೭೭೬)ಯು ಜಿಲ್ಲಾ ಕೇಂದ್ರವಾದ ಗುಲಬರ್ಗಾದಿಂದ ಆಗ್ನೇಯಕ್ಕೆ ೮೦ ಕಿ. ಮೀ., ಬೆಂಗಳೂರಿನಿಂದ ಉತ್ತರಕ್ಕೆ ೫೭೦ ಕಿ. ಮೀ. ದೂರದಲ್ಲಿ ಭೀಮಾ ನದಿಯಿಂದ ಎರಡು ಕಿ. ಮೀ. ಅಂತರದಲ್ಲಿರುವ ತಾಲೂಕು ಹಾಗೂ ಉಪವಿಭಾಗಿಯ ಕೇಂದ್ರವಾಗಿದ್ದು, ರೈಲ್ವೆ ಸಂಪರ್ಕವನ್ನೂ ಹೊಂದಿದೆ. ಪ್ರಾಚೀನ ಶಾಸನಗಳಲ್ಲಿ 'ಏತಗಿರಿ' ಎಂದೇ ಉಲ್ಲೇಖಿತಗೊಂಡಿರುವ ಇದು ಕಲ್ಯಾಣದ ಚಾಳುಕ್ಯರ ಆಳ್ವಿಕೆಯಲ್ಲಿ ಸ್ವಲ್ಪ ಕಾಲ ರಾಜಧಾನಿ ಪಟ್ಟಣವಾಗಿತ್ತು. ಇಲ್ಲಿಂದ ಈವರೆಗೆ ಕನ್ನಡ ಹಾಗೂ ಪರ್ಷಿಯನ್ ಭಾಷೆಯಲ್ಲಿರುವ ಐದು ಶಾಸನಗಳು ವರದಿಯಾಗಿವೆ. ಕಳೆದ ವರ್ಷ(೧೯೯೬) ಪತ್ತೆಯಾಗಿರುವ ಎರಡು ಕನ್ನಡ ಶಾಸನಗಳಲ್ಲಿ ಯಾದಗಿರಿಯ ಬೆಟ್ಟದ ಕೋಟೆಯ ದ್ವಾರದ ಮೇಲೆ ಇರುವ ಒಂದು ಸಾಲಿನ ಶಾಸನ, ಇದು (ಕೋಟೆಯ ಅಗಸಿ) ಸಗರದ ಜಗನ್ನಾಥನ ನಿರ್ಮಾಣವೆಂದು ಹೇಳಿದರೆ, ತೀರ್ಥಂಕರ ಗುಹೆಯ ಎಡಭಾಗದ ಬಂಡೆಯ ಮೇಲೆ ಇರುವ ಇನ್ನೊಂದು ಶಾಸನ ಬಸದಿಗೆ ಸಂಬಂಧಿಸಿರುವಂತೆ ತೋರುತ್ತಿದ್ದು ಇವೆರಡು ಸುಮಾರು ೧೦-೧೧ನೇ ಶತಮಾನಕ್ಕೆ ಸೇರಿದ್ದಾಗಿವೆ. ಕೋಟೆಯೊಳಗೆ ಇರುವ ಮೋತಿ ತಲಾಬಿನ ಗೋಡೆಯ ಮೇಲಿರುವ ೧೫೪೬ರ ಶಾಸನ ಒಂದನೆಯ ಇಬ್ರಾಹಿಂ ಆದಿಲ್ ಷಾನ ಕಾಲಕ್ಕೆ ಸೇರಿದ್ದು, ಇದರ ನಿರ್ಮಾಣದ ಬಗ್ಗೆ ತಿಳಿಸಿದರೆ ಅಥಾರ್ ಮಸೀದಿಯ ದ್ವಾರದ ಮೇಲಿರುವ ೧೫೭೩ರ ಶಾಸನ ಒಂದನೇ ಆಲಿ ಆದಿಲ್ ಷಾನ ಆಳ್ವಿಕೆಗೆ ಸಂಬಂಧಿಸಿದ್ದು ಮಿರ್ಜಾ ಆಲಿಯ ಮಗನಾದ ಖ್ವಾಜಾ ಹಸನ್ ಕಿರ್ಮಾನಿಯು ಈ ಮಸೀದಿಯನ್ನು ನಿರ್ಮಿಸಿದ ವಿಷಯವನ್ನು ತಿಳಿಸುತ್ತದೆ. ಊರ ಪೂರ್ವಕ್ಕೆ ಗುಡ್ಡದ ಮೇಲೆ ಇರುವ ಮೂರು ಸುತ್ತಿನ ಕೋಟೆಯು ಕಲ್ಯಾಣದ ಚಾಳುಕ್ಯರ ಕಾಲದ ರಚನೆಯಾಗಿದ್ದು, ನಂತರದಲ್ಲಿ ಇದನ್ನು ಯಾದವರು ಬಲಿಷ್ಠ ಪಡಿಸಿದ್ದು, ಬಹಮನಿ, ಆದಿಲ್ ಷಾಹಿ ಹಾಗೂ ನಿಜಾಮರ ಕಾಲದಲ್ಲೂ ಇದು ಸಾಕಷ್ಟು ಸೇರ್ಪಡೆಗಳೊಂದಿಗೆ ವಿಸ್ತರಿಸಲ್ಪಟ್ಟಿದೆ. ಗುಡ್ಡದ ಮೇಲೆ ಈಶ್ವರ, ಕಾಳಿಕಾ ಹಾಗೂ ಹನುಮಂತನ ಗುಡಿಗಳಿದ್ದು, ಇವುಗಳಲ್ಲಿ ಈಶ್ವರ ಗುಡಿಯು ಪ್ರಾಚೀನದ್ದಾಗಿದೆ. ಕೋಟೆಯ ಮೇಲಿರುವ ನಿಜಾಂ ಬುರುಜು ಶಾಸನ, ನಿಜಾಂ ಆಲಿಖಾನ್ ಯಾದಗಿರಿಗೆ ಭೇಟಿ ನೀಡಿದ್ದ ವಿಷಯವನ್ನು ತಿಳಿಸುತ್ತದೆ. ಇಲ್ಲಿಯ ಜಿನ್ನಪ್ಪನ ಬೆಟ್ಟದ ಮೇಲಿರುವ ಗುಹಾಂತರ ಬಸದಿ ಸುಮಾರು ೧೦-೧೧ನೇ ಶತಮಾನದ ರಚನೆಯಾಗಿದ್ದು, ಬಸದಿಯಿರುವ ಹೆಬ್ಬಂಡೆಯ ಮೇಲಿರುವ ಪಾರ್ಶ್ವನಾಥ ತೀರ್ಥಂಕರನ ಸುಮಾರು ನಾಲ್ಕು ಅಡಿ ಎತ್ತರದ ಉಬ್ಬು ಶಿಲ್ಪ, ಬಸದಿಗೆ ಕಿರೀಟ ಪ್ರಾಯವಾಗಿದ್ದು ದೂರದಿಂದಲೇ ವೀಕ್ಷಕರ ಗಮನ ಸೆಳೆಯುತ್ತದೆ. ಈ ಬಸದಿಯಲ್ಲಿ ಗರ್ಭಗೃಹದ ಬೆನ್ನ ಬಂಡೆಯ ಮೇಲೆ ಕೆತ್ತಿರುವ ಜಿನ ಮೂರ್ತಿಗಳ ಸಾಲಿದ್ದು, ಅವುಗಳಲ್ಲಿ ನಡುವಣ ಪದ್ಮಾಸೀನ ತೀರ್ಥಂಕರನ ಶಿಲ್ಪ ಬಹಳ ಸುಂದರವಾಗಿದೆ. ಇಲ್ಲಿ ಇನ್ನೂ ಹಲವಾರು ಜೈನ ಬಿಂಬಗಳನ್ನು ಕಾಣಬಹುದಾಗಿದೆ. ಯಾದಗಿರಿಯು ಆದಿಲ್ ಷಾಹಿ ಕಾಲಕ್ಕೆ ಸೇರಿದ ಮಸೀದಿ ಹಾಗೂ ದರ್ಗಾಗಳನ್ನು ಹೊಂದಿದ್ದು, ಅವರ ಕಾಲದ ಜುಮ್ಮಾ ಮಸೀದಿ ಹಾಗೂ ಪುಷ್ಕರಣಿಯನ್ನು ಗುಡ್ಡದ ಕೋಟೆಯೊಳಗೆ ನೋಡಬಹುದಾಗಿದೆ. ಇಲ್ಲಿಯ ಯಾಕೂಬ ಖಾದ್ರಿ, ಶಹಾಜಾನ್ ಷಾ ಹಾಗೂ ಪೀರ್ ಗಯಬಸಾಬನ ದರ್ಗಾಗಳು ಪ್ರಸಿದ್ಧ ಬಹುಶಃ ಹಿಂದೆ ಇದೊಂದು ತ್ರಿಕೂಟವಾಗಿದ್ದು ನಂತರದಲ್ಲಿ ಮುಂದಿನ ನವರಂಗ ಭಾಗ ನಾಶವಾಗಿರುವಂತೆ ತೋರುತ್ತದೆವಾಗಿದ್ದು, ವರುಷಕ್ಕೊಮ್ಮೆ ಎರಡು ದಿನಗಳ ಉರುಸು ಜರುಗುತ್ತದೆ. ಉಳಿದಂತೆ ಊರಲ್ಲಿ ಎರಡು ಜೈನ ಬಸದಿ, ರಾಮ, ಬಾಲಾಜಿ, ಶರಣ ಬಸವೇಶ್ವರ, ವೀರಭದ್ರ, ರಾಘವೇಂದ್ರ, ಈಶ್ವರ, ಬಸವಣ್ಣ, ಮೌನೇಶ್ವರ, ಹನುಮಂತ, ಅಂಬಾಭವಾನಿ, ಮಾಶಮ್ಮ, ಗುರುಗಂಗಾಧರೇಶ್ವರ, ದೇವಮ್ಮ, ಎಲ್ಲಮ್ಮ, ಮರಗಮ್ಮ, ಪೋಚಮ್ಮ ಮುಂತಾದ ನವೀನ ದೇವಾಲಯಗಳಿದ್ದು, ಕ್ರೈಸ್ತರ ಮೆಥಾಡಿಸ್ಟ್ ಇಗರ್ಜಿ ಕೂಡ ಇದೆ. ಇದರೊಂದಿಗೆ ಏಕದಂಡಗಿ ಹಾಗೂ ಎಚ್ಚಮಸ್ವಾಮಿಗಳೂ ಇವೆ.

**ಯಾನಾಗುಂದಿ** (೯೭೫)ಯು ತಾಲೂಕು ಕೇಂದ್ರವಾದ ಸೇಡಂನಿಂದ ಆಗ್ನೇಯಕ್ಕಿದ್ದು, ಇಲ್ಲಿರುವ ಮಾಣಿಕೇಶ್ವರಿ ತಾಯಿ ಆಶ್ರಮ ಹಾಗೂ ಮೌಲಾಲಿ ದರ್ಗಾಗಳಿಂದಾಗಿ ಪ್ರಸಿದ್ಧವಾಗಿದ್ದು, ಮಾಣಿಕೇಶ್ವರಿ ತಾಯಿಯ ಉತ್ಸವವು ಶಿವರಾತ್ರಿಯಲ್ಲಿ ಜರುಗುತ್ತದೆ.

**ಯಾಳಗಿ** (೫೧೯೦)ಯು ತಾಲೂಕು ಕೇಂದ್ರವಾದ ಸುರಪುರದಿಂದ ವಾಯವ್ಯಕ್ಕೆ ೩೭ ಕಿ. ಮೀ., ಕೆಂಭಾವಿಯಿಂದ ಆರು ಕಿ. ಮೀ. ದೂರದಲ್ಲಿದ್ದು, ಪ್ರಾಚೀನ ಶಾಸನಗಳಲ್ಲಿ 'ಏಳಗೆ', 'ಅಗ್ರಹಾರ ಏಳಗೆ', ಎಂದೇ ಉಲ್ಲೇಖಿತಗೊಂಡಿದ್ದು, ಇಲ್ಲಿಂದ ಈವರೆಗೆ ಯಾದವ ಚಕ್ರವರ್ತಿ ಮಹಾದೇವನ ಕಾಲದ ಶಾಸನವೊಂದು ವರದಿಯಾಗಿದೆ. ಊರ ಹೊರಗೆ ಇರುವ ಸಿದ್ಧರಾಯನಗುಡಿಯ ನವರಂಗದ ಮೇಲಿರುವ ೧೨೬೫ರ ಈ ಶಾಸನದಿಂದ ಹಿಂದೆ ಈ ಊರು ಸಗರ-೫೦೦ಕ್ಕೆ ಸೇರಿದ್ದು, ಅದರ ಅಧಿಕಾರಿ ಇಮ್ಮಡಿ ಗಣಪತಿರೆಡ್ಡಿಯು, ಏಳಗೆಯ ಮಹಾಪ್ರಭುಗಳು, ೬೦ ಒಕ್ಕಲು ಹಾಗೂ ಮುಮ್ಮುರಿದಂಡಗಳ ಸಮ್ಮುಖದಲ್ಲಿ ಏಳಗೆಯ ಚನ್ನಕೇಶ್ವರ ದೇವರಿಗೆಂದು ಮುಂಜನ ಕೋಲಲ್ಲಿ ಬಿಟ್ಟ ೧೨ ಮತ್ತರು ಸೇರಿದಂತೆ ಒಟ್ಟು ೨೪ ಮತ್ತರು ಭೂಮಿ, ಒಂದೊಂದು ತೋಟ ಮತ್ತು ನಿವೇಶನ ಹಾಗೂ ನಡುವಣ ಕೇಶವ ದೇವರಿಗೆ ಮೂರು ಮತ್ತರು ಭೂಮಿ, ತೋಟ, ನಿವೇಶನ, ಧಾನ್ಯ ಸುಂಕ ಹಾಗೂ ಎಣ್ಣೆ ಸುಂಕಗಳನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ನೆರೆಯ ಊರಾದ ಕೆಂಭಾವಿಯಲ್ಲಿ ಹರಿಜನ ಕೇರಿಯಲ್ಲಿರುವ ೧೧೫೭ರ ಶಾಸನವು ಆಯ್ಯಾವೊಳೆ-೫೦೦ ವರ್ತಕ ಶ್ರೇಣಿಯನ್ನು ಹೊಗಳುತ್ತ - ನಖರರು ಅಗ್ರಹಾರ ಏಳಗೆಯ ನಖರೇಶ್ವರ ದೇವರ್ಗೆ ಭತ್ತದ ಸುಂಕವನ್ನು ದಾನ ಬಿಟ್ಟ ವಿಷಯ ತಿಳಿಸಿದರೆ ೧೧೬೫ರ ಇನ್ನೊಂದು ಶಾಸನ ಏಳಿಗೆಯ ವಿನಾಯಕ ದೇವರಿಗೆ ವಿಳೆಯದೆಲೆಯ ಸುಂಕವನ್ನು ಹಣವಣಿಗರು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಈ ಶಾಸನಗಳಿಂದ ಸು. ೧೧-೧೩ನೇ ಶತಮಾನದಲ್ಲಿ ಯಾಳಗಿಯು ಒಂದು ಅಗ್ರಹಾರವಾಗಿದ್ದು ಇಲ್ಲಿ ಚನ್ನಕೇಶ್ವರ, ಗೋಪಾಲದೇವ, ಕೇಶವದೇವರು, ನಖರೇಶ್ವರ, ವಿನಾಯಕ ಹಾಗೂ ಸವಣರ (ಜೈನ) ಗುಡಿಗಳಿದ್ದವೆಂದು ತಿಳಿದು ಬರುತ್ತದೆ. ಆದರೆ ಇಂದು ಹೆಚ್ಚಿನ ದೇವಾಲಯಗಳು ನಾಶಹೊಂದಿದ್ದು ಉಳಿದವು ಗುರುತಿಸಲು ಬಾರದ ಸ್ಥಿತಿಯಲ್ಲಿವೆ. ಮೇಲೆ ಚರ್ಚಿಸಿರುವ ಶಾಸನವುಳ್ಳ ಸಿದ್ಧರಾಯನ ಗುಡಿಯು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ ಹಾಗೂ ನವರಂಗಗಳನ್ನು ಹೊಂದಿದ್ದು ಪೂರ್ಣ ಜೀರ್ಣೋದ್ಧಾರಗೊಂಡಿದೆ. ಈ ಗುಡಿಯನ್ನು ಪ್ರಾಚೀನ ದೇವಾಲಯದ ಅವಶೇಷಗಳನ್ನು ಬಳಸಿ ನಿರ್ಮಿಸಲಾಗಿದೆ. ಇದರ ಬಳಿಯಲ್ಲೇ ರಾಮಪ್ಪಯ್ಯನ ಗುಡಿ ಇದ್ದು, ಇದರ ಬಾಗಿಲವಾಡವು ಕಲ್ಯಾಣದ ಚಾಳುಕ್ಯರ ಕಾಲದ್ದಾಗಿದ್ದು, ಇದನ್ನು ಬೇರೆಡೆಯಿಂದ ತಂದು ಬಳಸಿಕೊಳ್ಳಲಾಗಿದೆ. ಊರ ನಡುವೆ ಇರುವ ಕುಲಕರ್ಣಿಯವರ ಮನೆಯ ಭಾಗವೇ ಆಗಿರುವ ಮಲ್ಲಿಕಾರ್ಜುನ (ಮೂಲಸ್ಥಾನ) ಗುಡಿಯು ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿರುವ ಸುಮಾರು ೧೨ನೇ ಶತಮಾನದ ರಚನೆಯಾಗಿದ್ದು ಸರಳವಾಗಿದೆ. ಪೂರ್ವಾಭಿಮುಖವಾಗಿರುವ ಈ ಗುಡಿಗೆ ಪ್ರವೇಶವು ದಕ್ಷಿಣದಿಂದಿದೆ. ಕುಂಬಾರ ಓಣಿಯಲ್ಲಿರುವ ಕಾಲಕಂಟೇಶ್ವರ ಗುಡಿ ಅಂತರ್ಗತ ದೇವಾಲಯವಾಗಿದ್ದು ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಮುಂದೆ ಕಲಾತ್ಮಕವಾದ ಚಂದ್ರಶಿಲೆ ಇದೆ. ನವರಂಗದ ಕಂಬಗಳು ಎರಡು ಮಾದರಿಯಲ್ಲಿದ್ದು ಸರಳವಾಗಿವೆ. ಗುಗ್ಗರ ಭಾವಿ ಓಣಿಯಲ್ಲಿರುವ ನೀಲಕಂಠದೇವರ ಗುಡಿಯು ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು ಪೂರ್ವಾಭಿಮುಖವಾಗಿದೆ. ಗರ್ಭಗೃಹದ ಬಾಗಿಲವಾಡವು ಪಂಚಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಇದೆ. ಈ ಬಾಗಿಲವಾಡದ ಒಂದು ಪಟ್ಟಿಕೆಯು ಹಂಸಾವಳಿಯನ್ನು ಹೊಂದಿರುವುದನ್ನು ಆಧರಿಸಿ ಇದರ ಕಾಲವನ್ನು ಸುಮಾರು ೧೧ನೇ ಶತಮಾನಕ್ಕೆ ನಿಗಧಿಪಡಿಸಬಹುದಾಗಿದೆ. ನವರಂಗದ ಕಂಬಗಳು ಸುಂದರವಾದ ಚಿಕಣಿ ಕೆತ್ತನೆಯನ್ನು ಹೊಂದಿದ್ದು ನಡುವಣ ಛತ್ತನ್ನು ಸುಂದರವಾದ ಕಮಲದಿಂದ ಅಲಂಕರಿಸಲಾಗಿದೆ. ಭಾಗಶಃ ಮುಕ್ಕಾಗಿರುವ ವಿಷ್ಣು ಶಿಲ್ಪವೊಂದು ಇಲ್ಲಿದ್ದು ಪ್ರಭಾವಳಿಯಲ್ಲಿ ದಶಾವತಾರ ಕೆತ್ತನೆಯನ್ನು ಕಾಣಬಹುದಾಗಿದೆ. ಈ ದೇವಾಲಯದ ಪ್ರಧಾನ ದ್ವಾರವು ಚತುರ್‌ಶಾಖಾಲಂಕೃತಗೊಂಡಿದ್ದು ಆಕರ್ಷಕವಾಗಿದೆ. ಈ ಗುಡಿಯ ಆವರಣದಲ್ಲಿ ಎರಡು ಹಂತದ ಶಿಲ್ಪ ಕೆತ್ತನೆಯುಳ್ಳ ಸುಮಾರು ೧೩ನೇ ಶತಮಾನದ ವೀರಗಲ್ಲು ಇದೆ. ಊರ ಬಯಲಲ್ಲಿ ಕಲ್ಯಾಣದ ಚಾಳುಕ್ಯರ ಕಾಲದ ಕಂಬಗಳನ್ನು ಬಳಸಿ ನಿರ್ಮಿಸಿರುವ ನಂತರದ ಕಾಲದ ಜೋಡಿ ಹನುಮಂತನ ದೇವಾಲಯವಿದೆ. ಇಲ್ಲಿಯ ಶಾಸನದಲ್ಲಿ ಜೈನ ಬಸದಿಗೆ ಸೇರಿದ ಹೊಲದ ಪ್ರಸ್ತಾಪವಿದ್ದರೂ ಕನ್ನಡ ಶಾಲೆ ಮುಂದಿರುವ ಪದ್ಮಾಸೀನ ಮಹಾವೀರ ತೀರ್ಥಂಕರನ ಸುಮಾರು ನಾಲ್ಕೂವರೆ ಅಡಿ ಎತ್ತರದ ಜೈನ ಶಿಲ್ಪವನ್ನು ಬಿಟ್ಟು ಮತ್ತ್ಯಾವುದೇ ಜೈನಾವಶೇಷಗಳು ಊರಿನಲ್ಲಿ ಲಭ್ಯವಿಲ್ಲ.

ಉಳಿದಂತೆ ಊರಲ್ಲಿ ವೀರಭದ್ರ, ಶರಣಬಸವೇಶ್ವರ, ಬಸವಣ್ಣ, ಲಕ್ಷ್ಮಮ್ಮ ಹಾಗೂ ಮಾರಮ್ಮನ ಗುಡಿಗಳಿದ್ದು ಮಸೀದಿ ಹಾಗೂ ದರ್ಗಾಗಳೂ ಇವೆ.

**ರಟ್ಕಲ್ಲು** (೩೮೫೪) ತಾಲೂಕು ಕೇಂದ್ರವಾದ ಚಿಂಚೋಳಿಯಿಂದ ಪಶ್ಚಿಮಕ್ಕೆ ೪೧ ಕಿ. ಮೀ., ಗುಲಬರ್ಗಾದಿಂದ ವಾಯವ್ಯಕ್ಕೆ ೪೪ ಕಿ. ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಕೇಂದ್ರವಾಗಿದೆ. ಸುಮಾರು ೧೨-೧೩ನೇ ಶತಮಾನದ ಶಾಸನವೊಂದು ಬಂಕನಾಥ ದೇವಾಲಯದ ನವರಂಗದ ಕಂಬವೊಂದರ ಪೀಠದ ಮೇಲಿದ್ದು ಇದು ದೇವರನ್ನು ಬಂಕೇಶ್ವರನೆಂದೇ ಕರೆದಿದೆಯಾದರೂ ಹೆಚ್ಚಿನ ವಿವರ ಲಭ್ಯವಿಲ್ಲ. ಸುಮಾರು ೧೨ನೇ ಶತಮಾನಕ್ಕೆ ಸೇರಿದ ಬಂಕನಾಥ. ರಾಮಲಿಂಗೇಶ್ವರ ಹಾಗೂ ಸಂಗಮನಾಥ ದೇವಾಲಯಗಳಿಂದಾಗಿ ಇಂದಿಗೂ ಈ ಊರು ಪ್ರಸಿದ್ಧವಾಗಿದೆ. ಇವುಗಳಲ್ಲಿ ಊರ ನಡುವೆ ಇರುವ ಬಂಕೇಶ್ವರ ದೇವಾಲಯವು ಎತ್ತರವಾದ ಅಧಿಷ್ಠಾನದ ಮೇಲೆ ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು ಪ್ರಾಕಾರದ ನಾಲ್ಕು ಮೂಲೆಯಲ್ಲೂ ಕಿರು ಪ್ರಮಾಣದ ಶಿವಾಲಯಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಇದರ ಬಾಗಿಲವಾಡವು ಪಂಚಶಾಖಾಲಂಕೃತವಾಗಿದ್ದರೆ, ಅಂತರಾಳದ ಬಾಗಿಲವಾಡವು ಮೂರು ಶಾಖೆಗಳಿಂದ ಅಲಂಕೃತಗೊಂಡಿದ್ದು ತೊಲೆಯಲ್ಲಿ ಮಕರತೋರಣವಿದ್ದು, ಜಾಲಂಧ್ರಗಳಿವೆ. ನವರಂಗದಲ್ಲಿ ಎರಡು ದೇವಕೋಷ್ಠಗಳಿದ್ದು ನಡುವಣ ಕಂಬಗಳು ಸುಂದರವಾಗಿದ್ದು, ಛತ್ತು ಕಮಲ ಹಾಗೂ ಅಷ್ಟದಿಕ್ಪಾಲಕರ ಫಲಕಗಳಿಂದ ಅಲಂಕೃತಗೊಂಡಿದೆ. ನವರಂಗದ ಭಿತ್ತಿಯು ವಜ್ರಪಟ್ಟಿಕೆಯ ಫಲಕಗಳಿಂದ ರೂಪಿತಗೊಂಡಿದ್ದು ಕಕ್ಷಾಸನಗಳಿವೆ. ಇದರ ಶಿಖರವು ಜೀರ್ಣೋದ್ಧಾರಗೊಂಡಿದ್ದು ವೇಸರ ಶೈಲಿಯಲ್ಲಿದೆ. ಈ ದೇವಾಲಯಕ್ಕೆ ಮೂರು ಕಡೆಯಿಂದಲೂ ಪ್ರವೇಶವಿದೆ. ಈ ಗುಡಿಯ ಆವರಣದಲ್ಲಿ ಎರಡು ವೀರಗಲ್ಲುಗಳಿವೆ. ಇದರ ಬಳಿಯಲ್ಲೇ ಇರುವ ರಾಮಲಿಂಗೇಶ್ವರ ಗುಡಿಯು ತ್ರಿಕೂಟ ದೇವಾಲಯವಾಗಿದ್ದು ಶಿವಲಿಂಗಗಳನ್ನು ಹೊಂದಿದ್ದು ಸುಮಾರು ೧೨ನೇ ಶತಮಾನಕ್ಕೆ ಸೇರಿದ ಸರಳ ರಚನೆಯಾಗಿದೆ. ಸಂಗಮೇಶ್ವರ ದೇವಾಲಯವು ಇತ್ತೀಚೆಗೆ ಜೀರ್ಣೋದ್ಧಾರಗೊಂಡಿರುವ ಹಳೆಯ ದೇವಾಲಯವಾಗಿದೆ. ಊರ ಹೊರಗೆ ಇರುವ ಹನುಮಂತನ ಗುಡಿಯಲ್ಲಿ ಹನುಮಂತನ ಪ್ರಾಚೀನ ಶಿಲ್ಪವಿದ್ದು ಮುಂದೆ ಮೂರ್ನಾಲ್ಕು ವೀರಗಲ್ಲುಗಳಿವೆ. ಸಮೀಪದ ಗೌರಿ ಗುಡ್ಡದಲ್ಲಿ ಸಾವಳಗಿ ಸಿದ್ದಲಿಂಗರ ಗುಡಿ ಮುಂತಾದವುಗಳಿವೆ. ಊರಲ್ಲಿ ದೊಡ್ಡದಾದ ವಿರಕ್ತಮಠವಿದ್ದು ಮೂರು ಆಗಸಿಗಳಿವೆ. ಮೇಲಾಗಿ ಆರು ಮಸೀದಿ ಹಾಗೂ ಆರು ದರ್ಗಾಗಳೂ ಕೂಡ ಇಲ್ಲಿವೆ.

**ರಾಜನಕೋಳೂರು** (೪೧೩೪) ತಾಲೂಕು ಕೇಂದ್ರವಾದ ಸುರಪುರದಿಂದ ನೈಋತ್ಯಕ್ಕೆ ೪೨ ಕಿ.ಮೀ. ದೂರದಲ್ಲಿರುವ ಪ್ರಾಗೈತಿಹಾಸಿಕ-ಚಾರಿತ್ರಿಕ ಮಹತ್ವದ ಕೇಂದ್ರವಾಗಿದೆ. ಊರಿಂದ ಪಶ್ಚಿಮಕ್ಕೆ ತೀರ್ಥ ಗ್ರಾಮಕ್ಕೆ ಹೋಗುವ ದಾರಿಯಲ್ಲಿ ಒಂದೂವರೆ ಕಿ. ಮೀ. ದೂರದಲ್ಲಿ ಹುಣಸಗಿ ಮುಖ್ಯಶಾಖಾ ನಾಲೆಯ ಬಳಿಯಲ್ಲಿ ೩-೪ ಎಕರೆ ಪ್ರದೇಶದಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ನೂರಾರು ಸಮಾಧಿಗಳು ಚದುರಿಕೊಂಡಿದ್ದು, ಹಾಲಿ ಊರಿರುವ ಸ್ಥಳವೂ ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಯೇ ಆಗಿತ್ತೆಂಬ ಅಂಶವನ್ನು ವಿದ್ವಾಂಸರು ವ್ಯಕ್ತಪಡಿಸಿದ್ದಾರೆ. ಸಣ್ಣ- ದೊಡ್ಡ ಪ್ರಮಾಣದ ಇಷ್ಟೊಂದು ಬೃಹತ್ ಶಿಲಾಯುಗ ಸಮಾಧಿಗಳು ಒಂದೆಡೆ ಲಭಿಸಿರುವುದು ಗಮನಾರ್ಹವಾಗಿದೆ. ನವಶಿಲಾಯುಗ ಸಂಸ್ಕೃತಿಯ ನೆಲೆಗಳಾದ ಕೊಡೆಕಲ್, ಬೂದಿಹಾಳ, ಹುಣಸಗಿ ಪರಿಸರದಲ್ಲಿ ಅದರ ಮುಂದುವರಿದ ಬೃಹತ್ ಶಿಲಾಯುಗ ಸಂಸ್ಕೃತಿಯ ಸಮಾಧಿಗಳು ಇಲ್ಲಿ ಅಧಿಕ ಸಂಖ್ಯೆಯಲ್ಲಿ ಲಭಿಸಿರುವುದು ಗಮನಾರ್ಹವಾಗಿದೆ. ಶ್ರೀಮಂತ ಪ್ರಾಗೈತಿಹಾಸಿಕ ಹಿನ್ನೆಲೆಯನ್ನುಳ್ಳ ರಾಜನಕೋಳೂರಿನಿಂದ ಈವರೆಗೆ ಮೂರು ಶಾಸನಗಳು ವರದಿಯಾಗಿದ್ದು, ಇವುಗಳಲ್ಲಿ ಊರಿನ ಹೆಸರು 'ಭತ್ತಗ್ರಾಮ ರಾಜನಕೋಳೂರು' ಎಂದೇ ಉಲ್ಲೇಖಿತಗೊಂಡಿದೆ. ಶಂಕರನಾರಾಯಣ ಗುಡಿಯಲ್ಲಿರುವ ಈ ಶಾಸನಗಳಲ್ಲಿ ಆರನೇಯ ವಿಕ್ರಮಾದಿತ್ಯನ ಆಳ್ವಿಕೆಗೆ ಸೇರಿದ ೧೦೯೧ರ ಒಂದು ಶಾಸನ ಅರಸನ ರಾಣಿ ಚಂದಲದೇವಿಯು ರಾಜನ ಕೋಳೂರಿನಲ್ಲಿದ್ದು ಬ್ರಹ್ಮಪುರಿಯ ೩೨ ಬ್ರಾಹ್ಮಣರಿಗೆ ೪೨ ಗೇಣ ಘಳೆಯಲ್ಲಿ ಪಗರಿಟ್ಟಗೆ ಸೀಮೆಯಿಂದ ಪೂರ್ವಕ್ಕೆ ೧೧೧ ಮತ್ತರು ಕರಿಯ ನೆಲವನ್ನು, ಎರಡು ನಿವೇಶನವನ್ನೂ ದಾನ ಕೊಟ್ಟ ವಿಷಯವನ್ನು ಹೇಳಿದರೆ ೧೦೯೭ಕ್ಕೆ ಸೇರಿದ ಇನ್ನೊಂದು ಶಾಸನ ಅದೇ ರಾಣಿಯು ಅಲ್ಲಿಯ ಶಂಕರ ನಾರಾಯಣದೇವರ್ಗೆ ಬಿಟ್ಟ ಹೊಲ, ತೋಟ, ಗಾಣ ಹಾಗೂ ಪೂಜಾ ನಿವೇಶನಗಳ ಬಗ್ಗೆ ಹೇಳುತ್ತದೆ. ಅಲ್ಲೇ ಇರುವ ೧೨೧೪ರ ಮತ್ತೊಂದು ಶಾಸನ ವಿವಿಧ ವರ್ತಕರು ಹಾಗೂ ಊರ ಮಹಾಪ್ರಭುಗಳು ಒಂದಾಗಿ ಶಂಕರನಾರಾಯಣದೇವರ್ಗೆ ಬಿಟ್ಟ ಎಲೆಸುಂಕ ಹಾಗೂ ಇತರ ಸುಂಕದಾನಗಳ ಬಗ್ಗೆ ಹೇಳುತ್ತದೆ. ಈ ಶಾಸನಗಳಲ್ಲಿ ಬರುವ 'ಭತ್ತಗ್ರಾಮ' ಪದದಿಂದ ಈ ಊರು ರಾಣಿ ಚಂದಲದೇವಿಯ ಆಡಳಿತಕ್ಕೆ ಒಳಪಟ್ಟಿದ್ದು ಅವಳ ಜೀವನೋಪಾಯಕ್ಕೆ

ಈ ಗ್ರಾಮದ ರಾಜಾದಾಯವನ್ನು ನೀಡಿದ್ದ ಕಾರಣ 'ಭತ್ತಗ್ರಾಮ' ಎಂಬ ವಿಶೇಷಣ ಬಳಸಿದಂತೆ ತೋರುತ್ತದೆ. ಮೇಲಿನ ಶಾಸನೋಕ್ತ ಶಂಕರನಾರಾಯಣಗುಡಿ ಇತ್ತೀಚೆಗೆ ಪೂರ್ಣ ಜೀರ್ಣೋದ್ಧಾರಗೊಂಡಿದ್ದು, ಮೂಲ ರೂಪ ಉಳಿದಿಲ್ಲ. ಮಾಲಿಗೌಡರ ಓಣಿಯಲ್ಲಿರುವ ರಾಮಲಿಂಗೇಶ್ವರ ಗುಡಿಯು ತ್ರಿಕೂಟವಾಗಿದ್ದು, ಪೂರ್ಣ ಜೀರ್ಣೋದ್ಧಾರಗೊಂಡಿದ್ದರೂ ಮೂಲ ಸ್ವರೂಪ ಉಳಿಸಿಕೊಳ್ಳಲಾಗಿದೆ. ಮೂರು ಗರ್ಭಗೃಹ ಹಾಗೂ ತೆರೆದ ಅಂತರಾಳಗಳನ್ನು ಒಗ್ಗೂಡಿಸಿರುವ ಒಂದೇ ನವರಂಗವನ್ನುಳ್ಳ ಈ ಗುಡಿಯಲ್ಲಿ ಗಣಪತಿ, ಸೂರ್ಯ ಹಾಗೂ ಮಹಿಷಮರ್ದಿನಿಯರ ಶಿಲ್ಪಗಳಿವೆ. ಹನುಮಂತನ ಗುಡಿ ಆವರಣದಲ್ಲಿ ಸ್ಥಾನಕ ಭಂಗಿಯಲ್ಲಿರುವ ಸುಮಾರು ನಾಲ್ಕು ಅಡಿ ಎತ್ತರದ ಭೈರವ-ಭೈರವಿಯರ ಶಿಲ್ಪಗಳಿವೆ. ಇದೇ ರೀತಿ ಆಸೀನ ಭಂಗಿಯಲ್ಲಿರುವ ಮಾತೃಕೆಯರ ನಾಲ್ಕು ಬಿಡಿ ಶಿಲ್ಪಗಳು, ಗಜಲಕ್ಷ್ಮಿ, ವೀರಗಲ್ಲು ಹಾಗೂ ಶಿವಲಿಂಗಗಳಿವೆ. ಇವುಗಳೊಂದಿಗೆ ಪಾರ್ಶ್ವನಾಥ ತೀರ್ಥಂಕರನ ಪದ್ಮಾಸೀನ ಮೂರ್ತಿಯೂ ಇದೆ. ಊರ ಹೊರಗೆ ಶಿಥಿಲಾವಸ್ಥೆಯಲ್ಲಿರುವ ಚೆನ್ನಕೇಶವ ದೇವಾಲಯವಿದೆ. ಇವುಗಳೊಂದಿಗೆ ಊರಲ್ಲಿ ಇತ್ತೀಚಿನದಾದ ಕೊಟ್ಟೂರೇಶ ಬಸವ, ಸೋಮನಾಥ, ಹನುಮಂತ, ಮರಗಮ್ಮ, ದುರ್ಗಮ್ಮ ಹಾಗೂ ವೀರಭದ್ರನ ಗುಡಿಗಳಿದ್ದು ಜುಮ್ಮಾ ಮಸೀದಿ ಹಾಗೂ ದರ್ಗಾಗಳೂ ಇವೆ. ಇಲ್ಲಿಯ ಷೇಕ್ ಆಲಿ ಕಟ್ಟೆಯು ಹಿಂದೂ - ಮುಸ್ಲಿಂ ಭಾವೈಕ್ಯತೆಗೆ ಜೀವಂತ ಸಾಕ್ಷಿಯಾಗಿದೆ.

**ರಾಮತೀರ್ಥ** (೫೩೪)ವು ತಾಲೂಕು ಕೇಂದ್ರವಾದ ಚಿಂಚೋಳಿಯಿಂದ ನೈರುತ್ಯಕ್ಕೆ ಸುಲೇಪೇಟೆ ಮಾರ್ಗವಾಗಿ ೧೮ ಕಿ. ಮೀ. ದೂರದಲ್ಲಿದೆ. ಇಲ್ಲಿಂದ ಈವರೆಗೆ ಯಾವುದೇ ಶಾಸನ ವರದಿಯಾಗಿಲ್ಲ, ಆದರೂ ಇಲ್ಲಿರುವ ಪ್ರಾಚೀನ ರಾಮಲಿಂಗೇಶ್ವರ (ರಾಮ-ಲಕ್ಷ್ಮಣ) ದೇಗುಲದಿಂದಾಗಿ ಪ್ರಸಿದ್ಧವಾಗಿದೆ. ಸುಮಾರು ೧೧ನೇಯ ಶತಮಾನದ ರಚನೆಯಾಗಿರಬಹುದಾದ ಇದೊಂದು ದ್ವಿಕೂಟ ದೇವಾಲಯವಾಗಿದ್ದು ಪೂರ್ವ-ಪಶ್ಚಿಮಕ್ಕಾದಂತೆ ಎದುರು ಬದಿರಾಗಿ ಒಂದೊಂದು ಗರ್ಭಗೃಹ ಹಾಗೂ ತೆರೆದ ಅಂತರಾಳಗಳನ್ನು ಹೊಂದಿದ್ದು, ನಡುವೆ ಇರುವ ಒಂದೇ ತೆರೆದ ನವರಂಗ ಇವೆರಡನ್ನೂ ಒಗ್ಗೂಡಿಸಿದೆ. ಪೂರ್ವಾಭಿಮುಖವಾಗಿರುವ ಪ್ರಧಾನ ಗರ್ಭಗೃಹದಲ್ಲಿ ಶಿವಲಿಂಗವಿದ್ದು ಇದರ ಎದುರಿನ ಗರ್ಭಗೃಹದಲ್ಲಿ ಹಿಂದೆ ಸೂರ್ಯಮೂರ್ತಿ ಇತ್ತು. ಅದರೆ ಇಂದು ಇಲ್ಲಿ ಸೂರ್ಯನ ಪೀಠವಷ್ಟೇ ಉಳಿದಿದೆ. ಈ ಗುಡಿಯ ಗರ್ಭಗೃಹಗಳ ಬಾಗಿಲವಾಡಗಳು ಸರಳವಾಗಿದ್ದು ನಿರಾಡಂಬರವಾಗಿವೆ. ನವರಂಗದ ಕಂಬಗಳು ವೈವಿಧ್ಯಮಯವಾಗಿದ್ದು, ಛತ್ತಲ್ಲಿ ತ್ರಿದಳ ಕಮಲವಿದ್ದು, ನವರಂಗದಂಚಲ್ಲಿ ಕಕ್ಷಾಸನಗಳಿವೆ. ನವರಂಗವನ್ನು ಪ್ರವೇಶಿಸಲು ಉತ್ತರ-ದಕ್ಷಿಣಗಳಿಂದ ಪ್ರವೇಶವಿದೆ. ಇದರ ಶಿಖರಗಳು ನಶಿಸಿಹೋಗಿದ್ದು, ದೇವಾಲಯವಿಂದು ಜೀರ್ಣಾವಸ್ಥೆಯಲ್ಲಿದೆ. ಉಳಿದಂತೆ ಊರಲ್ಲಿ ಬಸವಣ್ಣ, ಹನುಮಂತ, ವೀರಭದ್ರ ಹಾಗೂ ಮರಗಮ್ಮನ ಗುಡಿಗಳಿದ್ದು ಮಸೀದಿ ಹಾಗೂ ಯಾಕುಬ್ ಸಾಬ್ ದರ್ಗಾಗಳಿವೆ.

**ರಾಮಪುರ** (೪೮೩) ವು ತಾಲೂಕು ಕೇಂದ್ರವಾದ ಜೇವರ್ಗಿಯಿಂದ ಆಗ್ನೇಯಕ್ಕೆ ೨೬ ಕಿ.ಮೀ. ದೂರದಲ್ಲಿ ಭೀಮಾನದಿಯ ಬಲದಂಡೆಯ ಮೇಲಿದ್ದು ಸುಮಾರು ೧೭ನೇ ಶತಮಾನದಲ್ಲಿ ಜೀವಿಸಿದ್ದ ಶಿವಶರಣ ಬೊಕ್ಕಪ್ಪಯ್ಯನಿಂದಾಗಿ ಪ್ರಸಿದ್ಧವಾಗಿದೆ. ಸುಮಾರು ೨೧೦ ತ್ರಿಪದಿಗಳನ್ನು ಹಾಗೂ ತತ್ವ ಪದಗಳನ್ನು ರಚಿಸಿದ್ದ ಬೋಕಪ್ಪಯ್ಯನ ಐಕ್ಯಸ್ಥಳ ಇದಾಗಿದೆ. ವಿಶಾಲವಾದ ಪ್ರಾಕಾರದ ನಡುವೆ ಬೊಕ್ಕಪ್ಪಯ್ಯನ ದೇವಾಲಯವಿದ್ದು, ಇದು ಗರ್ಭಗೃಹ ಹಾಗೂ ಅಂತರಾಳಗಳನ್ನು ಹೊಂದಿದ್ದು, ಗರ್ಭಗೃಹದ ಮೇಲೆ ಕದಂಬನಾಗರ ಶಿಖರವಿದೆ. ಬೊಕಪ್ಪಯ್ಯ ಅನುಷ್ಠಾನಕ್ಕೆ ಕುಳಿತುಕೊಳ್ಳುತ್ತಿದ್ದ ಮೂರು ಕಂಬದ ಮಂಟಪ, ಹೊಳೆ ದಂಡೆಯ ಬಳಿಯಿರುವ ಬೊಕ್ಕಪ್ಪಯ್ಯನ ಪಾದಗಟ್ಟೆಗಳು ಬೊಕ್ಕಪ್ಪಯ್ಯನಿಗೆ ಸಂಬಂಧಿಸಿದಂತೆ ಇಲ್ಲಿರುವ ಪ್ರಮುಖ ಕುರುಹುಗಳಾಗಿವೆ. ಉಳಿದಂತೆ ಊರಲ್ಲಿ ಹನುಮಂತ, ದ್ಯಾಮವ್ವ ಮರಗಮ್ಮ ಹಾಗೂ ಪಾಲಕಮ್ಮನ ಗುಡಿಗಳಿದ್ದು, ಮಸೀದಿ ಹಾಗೂ ದರ್ಗಾ ಕೂಡ ಇವೆ. **ಹೋತಿನಮಡು** (೫೧೨) ಇದರ ನೆರೆಯ ಗ್ರಾಮವಾಗಿದ್ದು ಇಲ್ಲಿಯ ದೇಸಾಯಿಗಳ ಹೊಲದಲ್ಲಿರುವ ಸಿದ್ಧಲಿಂಗೇಶ್ವರ ಗುಡಿ ಹಿಂದೂ-ಮುಸ್ಲಿಂ ಭಾವೈಕ್ಯತೆಗೆ ಸಂಕೇತವಾಗಿದ್ದು ಇದರ ಭಿತ್ತಿಯ ಮೇಲೆ ಲೌಕಿಕ ಹಾಗೂ ಆಧ್ಯಾತ್ಮಿಕ ವಿಚಾರಗಳಿಗೆ ಸಂಬಂಧಿಸಿದಂತೆ ಸುಂದರವಾದ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ. ಹಿಂದೆ ಸಾವಳಗಿ (ಗುಲಬರ್ಗಾ ತಾ) ಶಿವಲಿಂಗೇಶ್ವರರು ಇಲ್ಲಿಗೆ ಭೇಟಿ ನೀಡಿದ್ದಾಗ ರುಮಾಲು ಬಿಟ್ಟು ಹೋದ ಸ್ಥಳ ಇದಾಗಿದ್ದ ಕಾರಣ, ಇಲ್ಲಿ ಅವರ ಗದ್ದುಗೆಯನ್ನು ನಿರ್ಮಿಸಿದ್ದಾರೆ. ಬಂದೇ ನವಾಜ್‌ರ ಗುರುಗಳಾದ ನಾಸೀರುದ್ದೀನ್ನರ ದರ್ಗಾ ಕೂಡ ಇಲ್ಲಿದೆ.

**ರುದ್ರವಾಡಿ** (೨೫೦೭)ಯು ತಾಲೂಕು ಕೇಂದ್ರವಾದ ಆಳಂದದಿಂದ ಉತ್ತರಕ್ಕೆ ೧೬ ಕಿ. ಮೀ. ದೂರದಲ್ಲಿದೆ. ಪ್ರಾಚೀನ ಶಾಸನಗಳಲ್ಲಿ 'ಅಗ್ರಹಾರ ರುದ್ರವಾಡಿ, 'ರುದ್ದವಾಡಿ' ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಅಲಂದ ೧೦೦೦ಕ್ಕೆ ಸೇರಿದ್ದ ಮೊರಂಬ-೮೪ ಕಂಪಣಕ್ಕೆ ಒಳಪಟ್ಟಿದ್ದು, ೫೦ ಮಹಾಜನರನ್ನು ಹೊಂದಿದ ಪ್ರಮುಖ ಅಗ್ರಹಾರವಾಗಿದ್ದು ಶೈಕ್ಷಣಿಕ ಹಾಗೂ ಧಾರ್ಮಿಕ ಕೇಂದ್ರವಾಗಿತ್ತು. ಇಲ್ಲಿಂದ ಈವರೆಗೆ ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಗೆ ಸೇರಿದ ಎರಡು ಶಾಸನಗಳು ವರದಿಯಾಗಿವೆ. ಇಲ್ಲಿಯ ಮಲ್ಲಿಕಾರ್ಜುನ ದೇವಾಲಯದ ನವರಂಗದಲ್ಲಿರುವ ಈ ಎರಡು ಶಾಸನಗಳಲ್ಲಿ ೧೧೦೩ರ ಶಾಸನವು ವಿಕ್ರಮಾದಿತ್ಯನ ರಾಣಿ ಚಂದಲದೇವಿಯ ಬೇಡಿಕೆಯಂತೆ ದಂಡನಾಯಕ ಮಲ್ಲಿ ದಂಡನಾಥನು ರುದ್ರವಾಡಿಯಲ್ಲಿ ನಿರ್ಮಿಸಿದ ತ್ರಿಕೂಟ ಲಕ್ಷ್ಮೀಶನ ದೇವಾಲಯಕ್ಕೆ ಹಾಗೂ ಅಲ್ಲಿಯ ೨೪ ವಿವಿಧ (ಚತುರ್ ವಿಂಶತಿ) ವಿಷ್ಣುಮೂರ್ತಿಗಳ ಸೇವೆಗೆಂದು ಮಹಾಮಂಡಳೇಶ್ವರನ ಮಕ್ಕಳು ಅಗ್ರಹಾರದ ಪ್ರಭು ವಾಸುದೇವ ಭಟೋಪಾಧ್ಯಾಯರ ಕೈಯಲ್ಲಿ ಮಾಣಿಕೇಶ್ವರದ ಕೋಲಲ್ಲಿ ೩೦ ಮತ್ತರು ಭೂಮಿಯನ್ನು ೫೦ ಗದ್ಯಾಣಗಳಿಗೆ ಖರೀದಿಸಿ ದಾನ ಬಿಟ್ಟಿದ್ದನ್ನು ದಾಖಲಿಸುತ್ತ, ಈ ಶಾಸನವನ್ನು ರಚಿಸಿದ ವಿಷ್ಣುಭಟ್ಟನನ್ನು ಕವಿರತ್ನ ಭೂಷಣ, ಕರ್ಣಾಟಕ-ಸಂಸ್ಕೃತ-ಆಂಧ್ರ ಕವಿಯೆಂದು ಹೊಗಳುತ್ತದೆ. ಈ ಶಾಸನ ಸಾಂದರ್ಭಿಕವಾಗಿ ನೆರೆಯ ಖಜ್ಜುರಿ (ಖಜೂರಿ) ಹಾಗೂ ಜವಳಿಗೆ (ಜವಳಗಿ) ಗ್ರಾಮಗಳನ್ನು ದಾಖಲಿಸಿದೆ. ಅಲ್ಲೇ ಇರುವ ಇನ್ನೊಂದು ಶಾಸನವು ೧೧೧೯ ರದ್ದಾಗಿದ್ದು ಸೋಮಯಾಜಿ ಪಂಡಿತರ ವಿನಂತಿಯ ಮೇರೆಗೆ ರುದ್ರವಾಡಿಯ ಚೆನ್ನಕೇಶವದೇವರು ಹಾಗೂ ಅಲ್ಲಿಯ ಚತುರ್‌ವಿಂಶತಿ ವಿಷ್ಣು ಮೂರ್ತಿಗಳ ಪೂಜಾವಿಧಿಗೆಂದು ಬ್ರಹ್ಮಪುರಿಯ ೫೦ ಮಹಾಜನರ ಕೈಯಲ್ಲಿ ಒಟ್ಟು ೬೦೦ ಮತ್ತರು ಭೂಮಿ ಇರುವ ಜವಳಿಗೆ ಹಾಗೂ ಬಬ್ಬಲೇಶ್ವರ ಗ್ರಾಮಗಳನ್ನು ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಜೊತೆಗೆ ಈ ಶಾಸನವೂ ಕವಿರತ್ನ ಭೂಷಣ ವಿಷ್ಣುಭಟ್ಟನ ರಚನೆ ಎಂದು ಹೇಳುತ್ತದೆ.

ಈ ಶಾಸನಗಳಿರುವ ಮಲ್ಲಿಕಾರ್ಜುನ ದೇವಾಲಯವೇ ಶಾಸನೋಕ್ತ ತ್ರಿಕೂಟ ಚನ್ನಕೇಶವ ದೇವಾಲಯವಾಗಿದ್ದು ಮೂರು ಪ್ರತ್ಯೇಕ ಗರ್ಭಗೃಹ ಹಾಗೂ ಅಂತರಾಳಗಳನ್ನು ಹೊಂದಿದ್ದು, ಇವುಗಳನ್ನು ನಡುವೆ ಇರುವ ನವರಂಗ ಒಗ್ಗೂಡಿಸಿದೆ. ಪ್ರಧಾನ ಗರ್ಭಗೃಹದಲ್ಲಿ ಶಿವಲಿಂಗವಿದ್ದು ಉತ್ತರದಲ್ಲಿ ನಾಲ್ಕೂವರೆ ಅಡಿ ಎತ್ತರದ ಸ್ಥಾನಕ ವಿಷ್ಣು ಮೂರ್ತಿ ಇದ್ದರೆ ದಕ್ಷಿಣದಲ್ಲಿದ್ದ ಮೂರ್ತಿ ಇಂದು ಕಣ್ಮರೆಯಾಗಿದೆ. ಇವುಗಳ ಬಾಗಿಲವಾಡಗಳು ತ್ರಿಶಾಖಾಲಂಕೃತವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯರಿದ್ದಾರೆ. ನವರಂಗದಲ್ಲಿ ಮೂರು ಮಾದರಿಯ ಕಂಬಗಳಿದ್ದು ನಡುವಣ ಛತ್ತಲ್ಲಿ ಕಮಲವಿದೆ. ನವರಂಗದ ಮುಂಭಾಗವು ಕಕ್ಷಾಸನವನ್ನು ಹೊಂದಿದ್ದು ಇದನ್ನು ಮುಂದಿರುವ ಪುಷ್ಕರಣಿಯವರೆಗೆ ಇತ್ತೀಚಿಗೆ ವಿಸ್ತರಿಸಲಾಗಿದೆ. ದೇವಾಲಯದ ಮುಂದೆ ಇರುವ ಪುಷ್ಕರಣಿಯು ಆಯಾತಾಕಾರದಲ್ಲಿದ್ದು ಇಳಿಯಲು ಎರಡು ಕಡೆಯಲ್ಲಿ ಸೋಪಾನಗಳಿವೆ. ಎತ್ತರವಾದ ಜಗತಿಯ ಮೇಲಿರುವ ಈ ದೇಗುಲವು ಪೂರ್ವಾಭಿಮುಖವಾಗಿದ್ದು ಇದರ ಭಿತ್ತಿಯು ನಿರಾಡಂಬರವಾಗಿದೆ. ಈ ದೇವರ ಜಾತ್ರೆಯು ಚೈತ್ರ ಶುದ್ಧ ದ್ವಾದಶಿಯಂದು ವಿಜೃಂಭಣೆಯಿಂದ ಜರುಗುತ್ತದೆ. ಈ ದೇವಾಲಯದ ಹೊರಗೆ ಸುಮಾರು ನಾಲ್ಕು ಅಡಿ ಎತ್ತರದ ಕಾರ್ತಿಕೇಯ ಹಾಗೂ ಕೇಶವನ ಶಿಲ್ಪಗಳಿವೆ. ಇದರೊಂದಿಗೆ ಊರಲ್ಲಿ ಶಿವಲಿಂಗೇಶ್ವರ, ಹನುಮಂತ, ಲಕ್ಷ್ಮೀ ಹಾಗೂ ಮರಗಮ್ಮನ ನವೀನ ದೇವಸ್ಥಾನಗಳಿದ್ದು ಒಂದು ಮಸೀದಿ, ಸುಲೈಮಾನ್ ಪಾಷಾ ಹಾಗೂ ಹುಸೇನ್ ಪಾಷಾರ ದರ್ಗಾಗಳಿವೆ. **ಕೋತನ ಹಿಪ್ಪರಗಿ (೧೨೨೨)** ಯು ಇಲ್ಲಿಂದ ಹತ್ತು ಕಿ ಮೀ. ದೂರದಲ್ಲಿ ಬೆಣ್ಣೆಹೊಳೆ ನದಿಯ ಎಡದಂಡೆಯ ಮೇಲಿರುವ ಊರು. ಇಲ್ಲಿಯ ಸುಮಾರು ೧೨ನೇ ಶತಮಾನಕ್ಕೆ ಸೇರಿದ ಮಹಾದೇವನ ದೇಗುಲವಿದ್ದು ಇದು ಗರ್ಭಗೃಹ, ಅಂತರಾಳ ಹಾಗೂ ತೆರೆದ ನವರಂಗಗಳನ್ನು ಹೊಂದಿದ್ದು, ನವರಂಗಕ್ಕೆ ಪಾರ್ಶ್ವದಿಂದ ಪ್ರವೇಶವಿದೆ. ಇಲ್ಲಿಯ ಕಲ್ಯಾಣ ಲಿಂಗನ ಗುಡಿಯು ಪ್ರಾಚೀನದ್ದಾಗಿದ್ದು ಇಂದು ಪೂರ್ಣ ಶಿಥಿಲವಾಗಿದೆ.

**ರುಮ್ಮನಗೂಡು** (೧೯೬೦) ತಾಲೂಕು ಕೇಂದ್ರವಾದ ಚಿಂಚೋಳಿಯಿಂದ ಪಶ್ಚಿಮಕ್ಕೆ ೩೧ ಕಿ. ಮಿ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಇಲ್ಲಿಂದ ಈವರೆಗೆ ಶಾಸನಗಳಾವುದೂ ವರದಿಯಾಗಿಲ್ಲ. ಆದರೂ ಶಿಥಿಲಾವಸ್ಥೆಯಲ್ಲಿರುವ ನೀಲಕಂಠೇಶ್ವರ ಹಾಗೂ ರಾಮಲಿಂಗೇಶ್ವರ ದೇವಾಲಯಗಳಿಂದಾಗಿ ಪ್ರಸಿದ್ಧವಾಗಿದೆ. ಊರಿಂದ ಪಶ್ಚಿಮಕ್ಕೆ ಸುಮಾರು ಒಂದು ಕಿ. ಮೀ. ದೂರದಲ್ಲಿರುವ ರಾಮಲಿಂಗೇಶ್ವರ ಗುಡಿಯು ದ್ವಿಕೂಟವಾಗಿದ್ದು, ಪಶ್ಚಿಮಾ ದಕ್ಷಿಣಗಳಲ್ಲಿ ಗರ್ಭಗೃಹ ಹಾಗೂ ತೆರೆದ ಅಂತರಾಳಗಳನ್ನು ಹೊಂದಿದ್ದು, ಇವನ್ನು ಒಂದೇ ನವರಂಗ ಒಂದಾಗಿಸಿದೆ. ಎರಡು ಗರ್ಭಗೃಹಗಳಲ್ಲೂ ಶಿವಲಿಂಗಗಳಿದ್ದು ಅವುಗಳಲ್ಲೊಂದು ಚಂದ್ರ ಶಿಲೆಯದಾಗಿದೆ. ನವರಂಗದಲ್ಲಿ ವಿಷ್ಣು ಹಾಗೂ ಕಾಳಿಯ ಸೊಗಸಾದ

ಶಿಲ್ಪಗಳಿವೆ. ಈ ದೇವಾಲಯದ ಎಡಬದಿಯಲ್ಲಿ ಸುಂದರವಾದ ಸೋಪಾನ ಪುಷ್ಕರಣಿ ಇದೆ. ಭಾಗಶಃ ಶಿಥಿಲವಾಗಿರುವ ಈ ಗುಡಿ ಸುಮಾರು ೧೨ನೇ ಶತಮಾನದ ರಚನೆಯಾಗಿದೆ. ಊರ ನಡುವೆ ಇರುವ ನೀಲಕಂಠೇಶ್ವರ ದೇಗುಲವು ಬೇಲೂರು ಹಳೆಬೇಡಿನ ಶಿಲಾಬಾಲಿಕೆಯರನ್ನು ನೆನಪಿಸುವಂತಹ ಶಿಲ್ಪ ಕೆತ್ತನೆಗಳಿಂದ ಕೂಡಿದ ಅಪೂರ್ವ ವಾಸ್ತುರಚನೆಯಾಗಿದ್ದು, ಜೀರ್ಣಾವಸ್ಥೆಯಲ್ಲಿದೆ. ಎತ್ತರವಾದ ಜಗತಿ ಹಾಗೂ ಅಧಿಷ್ಠಾನದ ಮೇಲೆ ಪೂರ್ವಾಭಿಮುಖವಾಗಿ ನಿಂತಿರುವ ಈ ದೇವಾಲಯವು ಗರ್ಭಗೃಹ, ಅಂತರಾಳ ಹಾಗೂ ತೆರೆದ ನವರಂಗಗಳನ್ನು ಹೊಂದಿದೆ. ನವರಂಗವನ್ನು ಮೂರು ಕಡೆಯಿಂದಲೂ ಪ್ರವೇಶಿಸಲು ದ್ವಾರವಿದ್ದು ಮುಖ ಮಂಟಪಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಹಿಂಬದಿಯಲ್ಲಿ ಸುಮಾರು ನಾಲ್ಕು ಅಡಿ ಎತ್ತರದ ಆಸೀನ ಶಿವ ಹಾಗೂ ವೈಷ್ಣವ ದ್ವಾರಪಾಲಕರ ಶಿಲ್ಪಗಳಿವೆ. ಇದರ ಬಾಗಿಲವಾಡವು ಪಂಚಶಾಖಾಲಂಕೃತವಾಗಿದ್ದು ಹೊಸ್ತಿಲ ಬಳಿ ಸುಂದರವಾದ ಚಂದ್ರಶಿಲೆ ಇದೆ. ಅಂತರಾಳದ ಬಾಗಿಲವಾಡವೂ ಆಕರ್ಷಕವಾಗಿದ್ದು, ಉತ್ತರಾಂಗದಲ್ಲಿ ಕಿರು ಪಂಚಮಂಟಪಗಳಿವೆ. ನವರಂಗದ ಕಂಬಗಳು ದೇವಾನುದೇವತೆಗಳ ವೈವಿಧ್ಯಮಯ ಕಿರುಕೆತ್ತನೆಗಳಿಂದ ಅಲಂಕೃತಗೊಂಡಿದ್ದು ಸುಂದರವಾಗಿವೆ. ಈ ಕಂಬಗಳ ಬೋದಿಗೆಯಲ್ಲಿ ಶಿಲಾಭಂಜಿಕೆಯರಿದ್ದು ಒಂದೆರಡು ಮಿಥುನ ಶಿಲ್ಪಗಳೂ ಇವೆ. ನವರಂಗ ಭಾಗವು ಶಿಥಿಲವಾಗಿದ್ದು, ಉಳಿದಿರುವ ಭಾಗದ ಛತ್ತುಗಳು ಚಿತ್ತಾಕರ್ಷಕವಾದ ಭುವನೇಶ್ವರಿಯನ್ನು ಹೊಂದಿವೆ. ನವರಂಗದಲ್ಲಿ ಐದಾರು ಮಾದರಿಯ ಕಂಬಗಳನ್ನು ನೋಡಬಹುದಾಗಿದೆ. ಒಟ್ಟಾರೆ ಈ ದೇವಾಲಯದ ನವರಂಗ ಭಾಗ, ಗುಡಿಯ ಭಿತ್ತಿ ಭಾಗ, ಕಕ್ಷಾಸನ ಭಾಗಗಳೆಲ್ಲ ಸೂಕ್ಷ್ಮ ಕೆತ್ತನೆಗಳಿಂದಾಗಿ ಗಮನಾರ್ಹವಾಗಿವೆ. ಗರ್ಭಗೃಹದ ಹೊರಭಿತ್ತಿಯಲ್ಲಿ ಮೂರು ದಿಕ್ಕಲ್ಲೂ ದೇವಕೋಷ್ಠಗಳಿದ್ದು, ಉಗ್ರನರಸಿಂಹ ಹಾಗೂ ವಾಮನ ಮೂರ್ತಿಯ ಸುಂದರ ಶಿಲ್ಪಗಳಿವೆ. ಈ ದೇವಾಲಯದ ಭಿತ್ತಿ ಹಾಗೂ ನವರಂಗ ಭಾಗಗಳಲ್ಲಿ ಕಂಡು ಬರುವ ವಿಶೇಷವಾದ ಶಿಲ್ಪಾಲಂಕಾರಗಳು ಗಮನಾರ್ಹವಾಗಿವೆ. ನವರಂಗದ ಹೊರಗೆ ಅಧಿಷ್ಠಾನ ಭಾಗದಲ್ಲಿ ರಾಮಾಯಣದ ಸುಂದರ ಕಥಾವಳಿಯನ್ನು ಕೆತ್ತಿದ್ದಾರೆ. ಊರ ಅಗಸಿ ಹಾಗೂ ಹನುಮಂತನ ಗುಡಿ ಬಳಿ ಪ್ರಾಚೀನ ಶಿಲ್ಪಗಳು ಹರಡಿಕೊಂಡಿವೆ. ಇಲ್ಲೇ ಗಣಪತಿಯ ದ್ವಿಬಾಹು ಶಿಲ್ಪವಿದೆ. ಊರಲ್ಲಿ ವ್ಯಾಪಕವಾಗಿ ಪ್ರಾಚೀನ ಅವಶೇಷಗಳು ಕಂಡು ಬರುತ್ತವೆ. ಉಳಿದಂತೆ ಊರಲ್ಲಿ ಶರಣ ಬಸವೇಶ್ವರ, ಉಗ್ರನರಸಿಂಹ, ಹನುಮಂತ, ದೇವಮ್ಮ, ಲಕ್ಷ್ಮಿ ಮುಂತಾದ ನವೀನ ಗುಡಿಗಳಿದ್ದು, ಎರಡು ಮಸೀದಿ ಹಾಗೂ ಸುಲ್ತಾನ್ ಬಾದ್‌ಷಾ ಕಟ್ಟೆ ಇದೆ. ಸಮೀಪದ ಗುಡ್ಡದ ಮೇಲೆ ಧಾವಲ್ ಮಲ್ಲಿಕನ ದರ್ಗಾ ಇದ್ದು ಉರುಸಾಗುತ್ತದೆ.

**ರೇವೂರು (ಬಿ)** (೨೯೨೮) ತಾಲೂಕು ಕೇಂದ್ರವಾದ ಅಫಜಲಪುರದಿಂದ ಈಶಾನ್ಯಕ್ಕೆ ೨೬ಕಿ. ಮೀ., ಗುಲಬರ್ಗಾದಿಂದ ಪೂರ್ವಕ್ಕೆ ೫೫ ಕಿ. ಮೀ. ದೂರದಲ್ಲಿದೆ. ಇಲ್ಲಿಂದ ಈವರೆಗೆ ಶಾಸನಗಳಾವುದೂ ವರದಿಯಾಗಿಲ್ಲ. ಆದರೂ ಊರಲ್ಲಿರುವ ಕಲ್ಲಾನಿಂಗದೇವರು, ಊರಿನ ಸಮೀಪದ ಮಲ್ಲಯ್ಯನ ಗುಡ್ಡದ ಮೇಲಿರುವ ಮಲ್ಲಯ್ಯನ ಗುಡಿಗಳಿಂದಾಗಿ ಈ ಊರಿನ ಪ್ರಾಚೀನತೆಯನ್ನು ಕಲ್ಯಾಣದ ಚಾಳುಕ್ಯರಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ಊರ ಅಂಚೆ ಕಛೇರಿ ಬಳಿಯಿರುವ ಕಲ್ಲಾನಿಂಗದೇವರ ದೇಗುಲ ಸುಮಾರು ೧೧-೧೨ನೇ ಶತಮಾನಕ್ಕೆ ಸೇರಿದ್ದು, ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು ಪಾಳುಬಿದ್ದಿರುವ ಗರ್ಭಗೃಹದಲ್ಲಿ ಶಿವಲಿಂಗವಿದೆ. ನವರಂಗದಲ್ಲಿರುವ ನಾಲ್ಕು ದೇವಕೋಷ್ಠಗಳಲ್ಲಿ, ಎರಡರಲ್ಲಿ ಸ್ವಲ್ಪ ಮುಕ್ಕಾದ ಗಣಪತಿ ಹಾಗೂ ವಿಷ್ಣು ಮೂರ್ತಿಗಳಿವೆ. ಊರಿಂದ ಸುಮಾರು ಒಂದು ಕಿ. ಮೀ. ದೂರದಲ್ಲಿರುವ ಮಲ್ಲಯ್ಯನ ಗುಡ್ಡದ ಮೇಲಿರುವ ಮಲ್ಲಯ್ಯನ ದೇವಾಲಯವು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ ಹಾಗೂ ನವರಂಗಗಳನ್ನು ಹೊಂದಿದ್ದು, ಪೂರ್ಣ ಜೀರ್ಣೋದ್ಧಾರಗೊಂಡಿದೆ. ಸುಮಾರು ೧೩ನೇ ಶತಮಾನಕ್ಕೆ ಸೇರಿದ ಕಂಬಗಳನ್ನುಳ್ಳ ಇದರ ಗರ್ಭಗೃಹದಲ್ಲಿ ಜೋಡಿ ಲಿಂಗಗಳಿದ್ದು ತ್ರಿಶಾಖಾಲಂಕೃತವಾದ ಬಾಗಿಲವಾಡವನ್ನು ಹೊಂದಿದೆ. ತೆರೆದ ಸಭಾಮಂಟಪದಲ್ಲಿ ನಡುವಣ ಛತ್ತನ್ನು ಕಮಲದಿಂದ ಆಲಂಕರಿಸಲಾಗಿದ್ದು,ಈ ದೇವಾಲಯದ ಭಿತ್ತಿಯು ನಿರಾಡಂಬರವಾಗಿದೆ. ಗುಡಿಯ ಬಳಿಯಲ್ಲಿ ವೀರಗಲ್ಲಿದೆ. ಈ ದೇವರ ಜಾತ್ರೆಯು ಚಟ್ಟಿ ಅಮಾವಾಸ್ಯೆಯಂದು ನಡೆಯುತ್ತದೆ. ಊರಲ್ಲಿರುವ ಹನುಮಂತನ ಗುಡಿ ಮುಂದೆ ಭರಮಪ್ಪನ ಕಲ್ಲೆಂದು ಕರೆಯಲ್ಪಡುವ ಪೀಠಸ್ಥ ಚತುರ್ಮುಖ ಬ್ರಹ್ಮನ ಶಿಲ್ಪವಿದೆ. ಇದರ ಜೊತೆಗೆ ಊರಲ್ಲಿ ಮಲ್ಲಿಕಾರ್ಜುನ, ಬಮ್ಮಲಿಂಗಪ್ಪ, ಸಿದ್ಧರಾಮೇಶ್ವರ, ರೇವಣ ಸಿದ್ಧೇಶ್ವರ, ಬಸವಣ್ಣ, ಜಟ್ಟಿಂಗರಾಯ, ಚೌಡಮ್ಮ, ಲಕ್ಷ್ಮಿ ಹಾಗೂ ಮರಗಮ್ಮನ ನವೀನ ದೇವಸ್ಥಾನಗಳಿದ್ದು, ಮಸೀದಿ ಹಾಗೂ ನಾಸಿರುದ್ದೀನ್ ಮುತ್ಯಾನ ದರ್ಗಾ ಕೂಡ ಇವೆ.

**ಲಖಣಾಪುರ** (೭೬೭) ವು ತಾಲೂಕು ಕೇಂದ್ರವಾದ ಜೇವರ್ಗಿಯಿಂದ ದಕ್ಷಿಣಕ್ಕೆ ೨೪ ಕಿ.ಮೀ., ಶಹಾಪುರದಿಂದ ಉತ್ತರಕ್ಕೆ ೨೫ ಕಿ. ಮೀ., ಜೇವರ್ಗಿ-ಶಹಾಪುರ ರಸ್ತೆಯಲ್ಲಿರುವ ಮೂಡಬಾಳ ಕ್ರಾಸ್‌ನಿಂದ ಪಶ್ಚಿಮಕ್ಕೆ ಆರು ಕಿ. ಮೀ. ದೂರದಲ್ಲಿದೆ. ಇಲ್ಲಿಂದ ಈವರೆಗೆ ಶಾಸನಗಳಾವುದೂ ವರದಿಯಾಗಿಲ್ಲ. ಆದರೂ ಇಲ್ಲಿರುವ ಲಕ್ಕಮೇಶ್ವರಿ ದೇಗುಲದಿಂದಾಗಿ ಪ್ರಸಿದ್ಧಿಯಲ್ಲಿದೆ. ಪೂರ್ವಾಭಿಮುಖವಾಗಿರುವ ಈ ಗುಡಿಯು ಬಹುಕೋನಾಕಾರದ ತಳವಿನ್ಯಾಸವಿರುವ ಅಧಿಷ್ಠಾನದ ಮೇಲೆ ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಮೂಲ ವಿನ್ಯಾಸವನ್ನು ಉಳಿಸಿಕೊಂಡು ಜೀರ್ಣೋದ್ಧಾರ ಮಾಡಲಾಗಿದೆ. ಗರ್ಭಗೃಹದಲ್ಲಿ ಲಕ್ಕಮ್ಮದೇವಿಯ ಶಿಲ್ಪವಿದ್ದು ಇದರ ದ್ವಾರಬಂಧವು ಹಂಸಾವಳಿ ಪಟ್ಟಿಯುಳ್ಳ ಸಪ್ತ ಶಾಖೆಗಳಿಂದ ಅಲಂಕೃತಗೊಂಡಿದ್ದು ಆಕರ್ಷಕವಾಗಿವೆ. ನವರಂಗದ ಇಕ್ಕೆಲದಲ್ಲಿರುವ ಎರಡು ದೇವಕೋಷ್ಠಗಳಲ್ಲಿ ವೈಷ್ಣವಿ ಹಾಗೂ ಸರಸ್ವತಿಯರ ಮುಕ್ಕಾದ ಶಿಲ್ಪಗಳಿವೆ. ತೆರೆದ ನವರಂಗದಂಚಲ್ಲಿ ಕಕ್ಷಾಸನವಿದ್ದು, ಈಗ ಶಿಥಿಲಾವಸ್ಥೆಯಲ್ಲಿದ್ದು, ಇದರ ಜೀರ್ಣೋದ್ಧಾರ ಕಾರ್ಯ ನಡೆದಿದೆ. ಗರ್ಭಗುಡಿಯು ಗುಮ್ಮಟಾಕಾರದ ಶಿಖರವನ್ನು ಹೊಂದಿದ್ದು, ಇದರ ಭಿತ್ತಿಯು ನಿರಾಡಂಬರವಾಗಿದೆ. ಈ ಗುಡಿಯ ಆವರಣದಲ್ಲಿ ಸುಮಾರು ಅರಡಿ ಎತ್ತರದ ಆಸೀನ ಗಣಪತಿಯ ಮುಕ್ಕಾದ ಶಿಲ್ಪ ಹಾಗೂ ಇನ್ನಿತರ ಶಿಲ್ಪಗಳು ಹರಡಿಕೊಂಡಿವೆ. ಉಳಿದಂತೆ ಊರಲ್ಲಿ ರಾಮಲಿಂಗ, ಹನುಮಂತ, ದ್ಯಾವಮ್ಮ, ಪಾಲ್ಕಮ್ಮ ಹಾಗೂ ಮರಗಮ್ಮನ ಗುಡಿಗಳಿದ್ದು, ಮಸೀದಿ ಹಾಗೂ ದರ್ಗಾಗಳೂ ಕೂಡ ಇವೆ.

**ಲಾಡ್ ಚಿಂಚೋಳಿ** (೨೨೫೬) ಯು ತಾಲೂಕು ಕೇಂದ್ರವಾದ ಆಳಂದದಿಂದ ಆಗ್ನೇಯಕ್ಕೆ ೧೫ ಕಿ. ಮೀ. ದೂರದಲ್ಲಿ, ಕಡಗಂಚಿಯಿಂದ ವಾಯವ್ಯಕ್ಕೆ ಐದು ಕಿ. ಮೀ ದೂರದಲ್ಲಿ ಆಳಂದ-ಗುಲಬರ್ಗಾ ರಸ್ತೆಯಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಇಲ್ಲಿಂದ ಈವರೆಗೆ ಶಾಸನಗಳಾವುದೂ ವರದಿಯಾಗಿಲ್ಲ. ಆದರೂ ಇಲ್ಲಿರುವ ಕಲಾತ್ಮಕವಾದ ಸಿದ್ಧೇಶ್ವರ ದೇವಾಲಯದಿಂದಾಗಿ ಪ್ರೇಕ್ಷಣೀಯವಾಗಿದೆ. ಎತ್ತರವಾದ ಜಗತಿಯ ಮೇಲೆ ಪೂರ್ವಾಭಿಮುಖವಾಗಿ ನಿಂತಿರುವ ಈ ದೇವಾಲಯವು ಗರ್ಭಗೃಹ, ತೆರೆದ ಅಂತರಾಳ ಹಾಗೂ ಮೂರು ದಿಕ್ಕಲ್ಲೂ ಅರ್ಧಮಂಟಪಗಳಿರುವ ತೆರೆದ ನವರಂಗವನ್ನು ಹೊಂದಿದ್ದು ಆಕರ್ಷಕವಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಇದರ ಬಾಗಿಲವಾಡವು ಚತುರ್‌ಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಇದೆ. ನವರಂಗವು ನಾಲ್ಕು ಮಾದರಿಯ ಕಂಬಗಳನ್ನು ಹೊಂದಿದ್ದು ಜಾಲಂದ್ರವಿರುವ ಕಕ್ಷಾಸನದುದ್ದಕ್ಕೂ ಕಿರು ಕಂಬಗಳಿದ್ದು ಇದರಿಂದಾಗಿ ನವರಂಗದ ಛಾವಣಿಯು ನಡುವೆ ಚಪ್ಪಟೆಯಾಗಿದ್ದು, ಅಂಚಲ್ಲಿ ಇಳಿಜಾರಾಗಿದೆ. ನವರಂಗದ ನಡುವಣ ಛತ್ತು ಅಷ್ಟದಿಕ್ಪಾಲಕರಿಂದ ಅಲಂಕರಿಸಲ್ಪಟ್ಟಿದೆ. ಗರ್ಭಗೃಹದ ಹೊರಭಿತ್ತಿಯಲ್ಲಿ ಮೂರು ದಿಕ್ಕಲ್ಲೂ ದೇವಕೋಷ್ಠಗಳಿದ್ದು ಅವುಗಳಲ್ಲೆರಡರಲ್ಲಿ ಬ್ರಹ್ಮ ಹಾಗೂ ವಿಷ್ಣು ಮೂರ್ತಿಗಳಿವೆ. ಎತ್ತರವಾದ ಅಧಿಷ್ಠಾನದ ಮೇಲಿರುವ ಭಿತ್ತಿಯಲ್ಲಿ ಸ್ಥಾನಕ ಭಂಗಿಯಲ್ಲಿರುವ ಸುಂದರಿಯರ ಉಬ್ಬು ಶಿಲ್ಪಗಳಿವೆ. ಗರ್ಭಗೃಹದ ಪ್ರನಾಳವು ಮಕರಮುಖಿಯಾಗಿದೆ. ನವರಂಗದಲ್ಲಿ ಇರುವ ಕಕ್ಷಾಸನದ ಹಿಮ್ಮುಖವು ಕಿರುಸ್ತಂಭ, ಕಿರುಶಿಖರ ಹಾಗೂ ಕಿರು ಶಿಲ್ಪಗಳಿಂದ ಅಲಂಕೃತವಾಗಿದೆ. ಗರ್ಭಗೃಹದ ಮೇಲೆ ಜಾತ್ತರೇಯ ಮಾದರಿಯ ಕಿರು ಶಿಖರವಿದೆ. ಸಿದ್ಧೇಶ್ವರ ಜಾತ್ರೆಯು ಐದು ದಿನ ಜರುಗುತ್ತಿದ್ದು ಉಗಾದಿಯಾದ ಐದನೆಯ ದಿನಕ್ಕೆ ದೇವರ ರಥೋತ್ಸವವಾಗುತ್ತದೆ. ಇಲ್ಲಿಯ ಮಲ್ಲಿಕಾರ್ಜುನ ಗುಡಿಯು ಶಿಥಿಲಾವಸ್ಥೆಯಲ್ಲಿದ್ದು ಇದರ ಬಳಿ ಮುಕ್ಕಾದ ಜಿನಶಾಸನ ಹಾಗೂ ಮಾಸ್ತಿಕಲ್ಲುಗಳಿವೆ. ಇಲ್ಲಿಯ ಹನುಮಂತನ ಗುಡಿ ಆವರಣದಲ್ಲಿ ಸ್ಥಾನಕ ಭಂಗಿಯಲ್ಲಿರುವ ಪಾರ್ಶ್ವನಾಥ ತೀರ್ಥಂಕರನ ಭಗ್ನ ಶಿಲ್ಪ, ಸೂರ್ಯ, ಗಣಪ, ಗಜಲಕ್ಷ್ಮಿ ಹಾಗೂ ನಾಗಾರ್ಜುನ ಶಿಲ್ಪಗಳಿವೆ. ಉಳಿದಂತೆ ಊರಲ್ಲಿ ಲಕ್ಷ್ಮಿ ಮರಗಮ್ಮ ಮುಂತಾದ ನವೀನ ದೇವಾಲಯಗಳಿದ್ದು, ಶಾಂತಲಿಂಗೇಶ್ವರ ಹಾಗೂ ಶ್ರೀಧರಸ್ವಾಮಿ ಮಠಗಳಿವೆ. ಶ್ರೀಧರ ಸ್ವಾಮಿಗಳ ಜನ್ಮಸ್ಥಳ ಇದಾಗಿದ್ದು ದತ್ತಾತ್ರೇಯ ಸಂಪ್ರದಾಯಕ್ಕೆ ಸೇರಿದ ಇವರು ಸಜ್ಜನಗಡದ ಸಮರ್ಥ ರಾಮದಾಸರ ಶಿಷ್ಯರಾಗಿದ್ದರು.

**ವಜ್ಜಲ** (೨೭೪೪) ವು ತಾಲೂಕು ಕೇಂದ್ರವಾದ ಸುರಪುರದಿಂದ ಪಶ್ಚಿಮಕ್ಕೆ ೩೨ ಕಿ.ಮೀ. ದೂರದಲ್ಲಿದ್ದು ಇತ್ತೀಚೆಗೆ ಕ್ರಿ. ಶ. ಎರಡನೇ ಶತಮಾನಕ್ಕೆ ಸೇರಿದ ಶಾತವಾಹನರ ಕಾಲದ ಶಿಲ್ಪಕೆತ್ತನೆಯುಳ್ಳ, ಬ್ರಾಹ್ಮಿಲಿಪಿ-ಪ್ರಾಕೃತ ಭಾಷೆಯಲ್ಲಿರುವ ಒಂದು ಸಾಲಿನ 'ಮುಕುಲಿಯಾನ ರಠಿನೀಯ ಸೇಬನಿಕಾಯ' ಎಂಬ ಪಾಠವಿರುವ ಶಾಸನವು ಪತ್ತೆಯಾಗಿದ್ದು, ಇದರಿಂದ ಈ ಊರಿನ ಪ್ರಾಚೀನತೆಯನ್ನು ಶಾತವಾಹನರ ಕಾಲದಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ಊರ ಹಳ್ಳದ ಬಳಿಯಿರುವ ಸಂಗಮೇಶ್ವರ ದೇವಾಲಯದ ಗರ್ಭಗೃಹ ಹಾಗೂ ಅಂತರಾಳ ಭಾಗ ಮಾತ್ರ ಉಳಿದಿದ್ದು, ಶಿಖರ ಭಾಗಶಃ ಶಿಥಿಲವಾಗಿದ್ದು, ಜೀರ್ಣೋದ್ಧಾರ ಮಾಡಿದ್ದಾರೆ. ಇದರ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಇದೆ.

ಗರ್ಭಗೃಹದಲ್ಲಿ ಕಲ್ಯಾಣದ ಚಾಳುಕ್ಯರ ಕಾಲದ ಶಿವಲಿಂಗವಿದ್ದು ಮೂಲೆಯಲ್ಲಿ ಸುಮಾರು ನಾಲ್ಕುವರೆ ಅಡಿ ಎತ್ತರದ ಅಷ್ಟಭುಜ ಹರಿಹರ ಶಿಲ್ಪವಿದೆ. ಈ ಶಿಲ್ಪದ ಬಲಗೈಗಳಲ್ಲಿ ತ್ರಿಶೂಲ, ಅಭಯ ಹಾಗೂ ಬಾಣವಿದ್ದು, ಎಡಗೈಗಳಲ್ಲಿ ಚಕ್ರ, ಶಂಖ, ಬಿಲ್ಲು ಹಾಗೂ ಗದೆಗಳನ್ನು ಧರಿಸಿದ್ದು ವಿಶಿಷ್ಟವಾಗಿದೆ. ಹಳ್ಳದಾಚೆಗೆ ಇರುವ ರಾಮಲಿಂಗ ದೇವರ ಗುಡಿಯು ಪ್ರಾಚೀನದಾಗಿದ್ದು, ಇದರ ಬಳಿಯ ಹೊಲದಲ್ಲೇ ಶಾತವಾಹನರ ಕಾಲದ ಶಿಲಾಫಲಕ ಪತ್ತೆಯಲಾಗಿರುವುದು. ಉಳಿದಂತೆ ಊರಲ್ಲಿ ತಿಮ್ಮಪ್ಪಯ್ಯ, ಚೌಡಮ್ಮ, ಹನುಮಂತ, ಮೈಲಾರ, ಬೀರಲಿಂಗ ಹಾಗೂ ಮಾಳಮ್ಮನ ಗುಡಿಗಳಿದ್ದು ಜುಮ್ಮಾ ಮಸೀದಿ ಹಾಗೂ ದರ್ಗಾಗಳೂ ಇವೆ.

**ವಡಗೇರಿ** (೨೮೪೫)ಯು ತಾಲೂಕು ಕೇಂದ್ರವಾದ ಜೇವರ್ಗಿಯಿಂದ ನೈಋತ್ಯಕ್ಕೆ ಶಹಾಪುರ-ಸಿಂಧಗಿ ರಸ್ತೆಯಲ್ಲಿ ಶಹಾಪುರದಿಂದ ಪಶ್ಚಿಮಕ್ಕೆ ೨೬ ಕಿ.ಮೀ. ದೂರದಲ್ಲಿ ಇರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಇಲ್ಲಿಂದ ಈವರೆಗೆ ವರದಿಯಾಗಿರುವ ಏಕೈಕ ಶಾಸನವು ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಪಟ್ಟಬಂಧೋತ್ಸವ ನಿಮಿತ್ತವಾಗಿ ಅವನ ಆಳ್ವಿಕೆಯ ಮೊದಲ ವರ್ಷದಲ್ಲಿ (೧೦೭೭) ದಾಯಿಮಯ್ಯನು ತಾನು ಸಾಸವಿ ಒಡಂಗೆರೆ ಯಲ್ಲಿ ನಿರ್ಮಿಸಿದ ಧಾಯಿಮೇಶ್ವರ ದೇವರ ಸೇವೆಗೆಂದು, ಮಠದಲ್ಲಿರುವ ತಪೋಧನರ, ವಿದ್ಯಾರ್ಥಿಗಳ ಊಟ-ವಸತಿಗೆಂದು ಆ ದೇವಾಲಯದ ಆಚಾರ್ಯರಾದ ಎಳಮೇಲ ಸಿಂಹಪರ್ಷೆ ಮಂಡಳಿಯ ಶಿಷ್ಯರಾದ ಮಹೇಶ್ವರರಾಶಿ ಪಂಡಿತರಿಗೆ ಮಾಣಿಕೇಶ್ವರ ಕೋಲಲ್ಲಿ ೨೦೦ ಮತ್ತರು ಹೊಲ, ೪೫ ಗೇಣಿನ ಗಳೆಯಲ್ಲಿ ಒಂದು ಮತ್ತರು ತೋಟ ಹಾಗೂ ಅಲ್ಲಿಯ ಅಧ್ಯಾಪಕರಿಗೆಂದು ಬಿಟ್ಟ ಹದಿನಾರು ಮತ್ತರು ಭೂದಾನಗಳ ಬಗ್ಗೆ ಹೇಳುತ್ತದೆ. ಈ ಶಾಸನವು ಇಲ್ಲಿಯ ಬಸವೇಶ್ವರ ದೇವಾಲಯದ ಅಂತರಾಳದ ಬಲಭಾಗದಲ್ಲಿದ್ದು, ಅದರಿಂದ ಶಾಸನೋಕ್ತ ಧಾಯಿಮೇಶ್ವರ ಗುಡಿ ಇದೆಂಬ ಅಂಶ ಮನವರಿಕೆಯಾಗುತ್ತದೆ. ಎತ್ತರವಾದ ಜಗತಿಯ ಮೇಲೆ ನಿರ್ಮಾಣಗೊಂಡಿರುವ ಈ ದೇವಾಲಯದ ಗರ್ಭಗೃಹ ಹಾಗೂ ತೆರೆದ ಅಂತರಾಳ ಭಾಗಗಳಷ್ಟೆ ಇಂದು ಉಳಿದಿದ್ದು, ನವರಂಗ ಭಾಗ ಪೂರ್ಣ ನಾಶಗೊಂಡಿದೆ. ಬಹುಕೋನಾಕಾರದ ತಳವಿನ್ಯಾಸದಿಂದ ಕೂಡಿರುವ ಇದರ ಗರ್ಭಗೃಹದಲ್ಲಿ ಶಿವಲಿಂಗವಿದ್ದು ಇದರ ಬಾಗಿಲವಾಡವು ಪಂಚಶಾಖಾಲಂಕೃತವಾಗಿದ್ದು, ತಳದಲ್ಲಿ ಸುಂದರವಾದ ಕಮಲಾಲಂಕೃತ ಚಂದ್ರ ಶಿಲೆಯಿದೆ. ಅಂತರಾಳದಲ್ಲಿ ಎರಡು ದೇವಕೋಷ್ಠಗಳಿದ್ದು, ಒಂದರಲ್ಲಿ ಸಪ್ತಮಾತೃಕಾ ಶಿಲ್ಪವಿದೆ. ಅಂತರಾಳದಲ್ಲಿರುವ ಮಕರತೋರಣವು ಉತ್ಕೃಷ್ಟ ಕಲಾಕೃತಿಯಾಗಿದೆ. ಜಗತಿ ಹಾಗೂ ಅಧಿಷ್ಠಾನ ಭಾಗವನ್ನು ಏರಿ ಗುಡಿಯನ್ನು ಪ್ರವೇಶಿಸಲು ಆನೆ-ಸಿಂಹಗಳ ಕೆತ್ತನೆಯಿಂದ ಅಲಂಕೃತವಾದ ಕೈಪಿಡಿಯನ್ನುಳ್ಳ ಸೋಪಾನವಿದೆ. ಗರ್ಭಗೃಹ, ಅಂತರಾಳಗಳ ಭಿತ್ತಿಯು ನಿರಾಡಂಬರವಾಗಿದ್ದು, ಕಿರುಸ್ತಂಭಗಳ ಮೇಲಿರುವ ಕಿರು ಶಿಖರಗಳನ್ನು ಹೊಂದಿದ್ದು, ಗರ್ಭಗುಡಿಯ ಶಿಖರ ಭಾಗಶಃ ಜೀರ್ಣವಾಗಿದೆ. ಈ ದೇವಾಲಯವನ್ನು ಹೊತ್ತು ನಿಂತಿರುವ ಜಗತಿಯು ವಜ್ರಾಕಾರದ ಕೆತ್ತನೆಯುಳ್ಳ ಪಟ್ಟಿಕೆಯಿಂದ ಅಲಂಕೃತವಾಗಿದೆ. ಈ ದೇವಾಲಯದ ಎಡಭಾಗದಲ್ಲಿರುವ ಇನ್ನೊಂದು ಗುಡಿಯು ದ್ವಿಕೂಟವಾಗಿದ್ದು, ಪ್ರಾಚೀನ ಕಾಲಕ್ಕೆ ಸೇರಿದೆ. ಪೂರ್ವ-ಪಶ್ಚಿಮದಲ್ಲಿ ಗರ್ಭಗೃಹ ಹಾಗೂ ತೆರೆದ ಅಂತರಾಳಗಳನ್ನು ಉಳ್ಳ ಈ ಗುಡಿಯನ್ನು ಒಂದೇ ನವರಂಗವು ಒಂದಾಗಿಸಿದ್ದು, ಅಂಚಿನುದ್ದಕ್ಕೂ ಕಕ್ಷಾಸನವಿದೆ. ಎರಡೂ ಗರ್ಭಗೃಹಗಳು ತ್ರಿಶಾಖೆಯಿಂದ ಅಲಂಕೃತವಾದ ಬಾಗಿಲವಾಡಗಳನ್ನು ಹೊಂದಿದ್ದು, ನವರಂಗ ಭಾಗ ಪೂರ್ಣ ಹಾಳಾಗಿದೆ. ಪಂಚಾಯಿತಿ ಬಳಿ ಇರುವ ಮಾನಸ ದೇವರ ಗುಡಿಯು (ಮಾಣಿಕೇಶ್ವರ ಗುಡಿ) ಮೂಲದಲ್ಲಿ ತ್ರಿಕೂಟವಾಗಿದ್ದು ಪ್ರಧಾನ ಗರ್ಭಗುಡಿ ಹಾಗೂ ಅಂತರಾಳ ಭಾಗಗಳಷ್ಟೆ ಉಳಿದಿದ್ದು, ಉತ್ತರ ದಕ್ಷಿಣ ಭಾಗಗಳೂ ಸೇರಿದಂತೆ ಉಳಿದ ಭಾಗಗಳು ಶಿಥಿಲಾವಸ್ಥೆಯಲ್ಲಿವೆ. ಈ ಗುಡಿಯು ತಗ್ಗಿನಲ್ಲಿದ್ದು, ಇದರ ಪ್ರಧಾನ ಗರ್ಭಗೃಹದ ಮೇಲಿರುವ ಕದಂಬ ನಾಗರ ಶೈಲಿಯ ಶಿಖರವು ಸುಸ್ಥಿತಿಯಲ್ಲಿದೆ. ಈ ಗುಡಿ ಪರಿಸರದಲ್ಲಿ ಗಣಪತಿ, ಸಪ್ತಮಾತೃಕಾ ಪಟ್ಟಿಕೆಗಳಿವೆ. ಒಕ್ಕಲಿಗರ ಓಣಿಯಲ್ಲಿರುವ ರಾಮಲಿಂಗೇಶ್ವರ ಗುಡಿಯು ತಗ್ಗಿನಲ್ಲಿದ್ದು, ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ಈ ಗುಡಿಯಲ್ಲಿರುವ ಬೃಹತ್ತಾದ ಲಿಂಗ, ಬಾಗಿಲವಾಡ, ಚಂದ್ರಶಿಲೆ, ಭೈರವ, ಗಣಪ,ಸಪ್ತಮಾತೃಕಾ ಪಟ್ಟಿಕೆ ಹಾಗೂ ಸೂರ್ಯಪೀಠಗಳು ಉಲ್ಲೇಖನೀಯ. ಇಲ್ಲಿಯ ಚೌಡಮ್ಮನ ಗುಡಿಯಲ್ಲಿ ನಾಲ್ಕೂವರೆ ಅಡಿ ಎತ್ತರದ ಚಾಮುಂಡೇಶ್ವರಿಯ ಶಿಲ್ಪವಿದೆ. ಪಂಚಾಯಿತಿ ಬಳಿ ಸು.೧೧ನೇ ಶತಮಾನದ ವೀರಗಲ್ಲೊಂದಿದೆ. ಉಳಿದಂತೆ ಊರಲ್ಲಿ ಹಳ್ಳಿರಾಯ, ಅಮರೇಶ್ವರ ಹಾಗೂ ಬೀರದೇವರ ಗುಡಿಗಳಿದ್ದು ರಾಮಲಿಂಗೇಶ್ವರ ಮಠವಿದೆ. ಗಾತ್ರದಲ್ಲಿ ಕಿರುದಾದರೂ ಚಾಂದ್‌ಪೀರ್‌ನ ಸುಂದರವಾದ ದರ್ಗಾ ಊರ ಹೊರಗಿದ್ದು ಯುಗಾದಿಯಲ್ಲಿ ಉರಸು ನಡೆಯುತ್ತದೆ.

**ವನದುರ್ಗ** (೩೭೩೨) ವು ತಾಲೂಕು ಕೇಂದ್ರವಾದ ಶಹಾಪುರದಿಂದ ನೈಋತ್ಯಕ್ಕೆ ೨೪ ಕಿ. ಮೀ., ಗೋಗಿಯಿಂದ ದಕ್ಷಿಣಕ್ಕೆ ೧೨ ಕಿ. ಮೀ. ಅಂತರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳ. ಸುರಪುರದ ನಾಯಕರ ಕಾಲಕ್ಕೆ ಸೇರಿದ ಕೋಟೆಯನ್ನು ಹೊಂದಿರುವ ಇದು ಕಾನನದಿಂದ ಆವೃತ್ತವಾಗಿದ್ದರಿಂದ ಇದಕ್ಕೆ ವನದುರ್ಗ ಎಂಬ ಹೆಸರು ಬಂದಿದೆ. ಕೋಟೆಯ ಮಹಾದ್ವಾರದ ಮೇಲೆ ಎರಡೂ ಬದಿಯಲ್ಲಿ ಐದೈದು ಸಾಲುಗಳಲ್ಲಿರುವ ಸಂಸ್ಕೃತ ಶಾಸನವು ದೇವನಾಗರಿ ಲಿಪಿಯಲ್ಲಿದೆ. ಶಾಲಿವಾಹನ ಶಕೆ ೧೭೨೯ (ಕ್ರಿ. ಶ. ೧೮೦೬)ರ ರಕ್ತಾಕ್ಷಿ ಸಂವತ್ಸರದಲ್ಲಿ ಕ್ಷೇತ್ರಪಾಲನಾದ ವೇಣುಗೋಪಾಲಸ್ವಾಮಿಯ ವರಪುತ್ರನಾದ ಬಹರಿ ಬಹಾದ್ದೂರ ರಾಜಾ ಪಿಡ್ಡ ನಾಯಕನು ತನ್ನ ರಾಣಿ ವೆಂಕಮ್ಮಾಂಬಳ ಬೇಡಿಕೆಯಂತೆ 'ವನದುರ್ಗ' ವನ್ನು ನಿರ್ಮಿಸಲು ಮುಂದಾದನೆಂದು ಈ ಶಾಸನ ದಾಖಲಿಸಿದೆ. ಈ ಕೋಟೆಯು ಪೂರ್ವ-ಪಶ್ಚಿಮವಾಗಿ ೨೫೦ ಮೀ, ದಕ್ಷಿಣೋತ್ತರವಾಗಿ ೨೦೦ ಮೀ. ಪ್ರದೇಶವನ್ನು ವ್ಯಾಪಿಸಿದ್ದು, ನಾಲ್ಕೂ ಮೂಲೆಯಲ್ಲೂ ಭವ್ಯವಾದ ನಾಲ್ಕು ಬುರುಜುಗಳನ್ನು ಹೊಂದಿದೆ. ಕೋಟೆಗೆ ಬೃಹತ್ತಾದ ಪ್ರವೇಶದ್ವಾರಗಳಿದ್ದರೂ, ತಟ್ಟನೆ ಎದುರಾಗುವ ಅರ್ಧಚಂದ್ರಕಾರದ ಎತ್ತರದ ಗೋಡೆಗಳು ಶತ್ರುಗಳು ಗಲಿಬಿಲಿಗೊಳ್ಳುವಂತೆ ಮಾಡುತ್ತವೆ. ಆಯಕಟ್ಟಾದ ಸ್ಥಳದಲ್ಲಿರುವ ಈ ಕೋಟೆಯ ಸುತ್ತ ಆಳವಾದ ಕಂದಕವಿದ್ದು, ಹಿಂದೆ ಇದು ಸುರಪುರದ ನಾಯಕರಿಗೆ ಉತ್ತರದಿಂದ ರಕ್ಷಣೆ ನೀಡುತ್ತಿತ್ತು. ಕೋಟೆಯ ಒಳಗೆ ಅಧಿಕಾರಿಗಳಿಗೆ ಹಾಗೂ ಕಾವಲುಗಾರರಿಗೆಂದು ಕಟ್ಟಿಸಿದ್ದ ವಸತಿ ಗೃಹಗಳ ಅವಶೇಷಗಳನ್ನು ನೋಡಬಹುದಾಗಿದ್ದು, ಇದ್ದುದರಲ್ಲಿ ಸಿಹಿ ನೀರಿನ ಬಾವಿ, ಅಂಜನೇಯ ಗುಡಿ ಮತ್ತು ಸಣ್ಣಪುಟ್ಟ ಕಟ್ಟಡಗಳು ಸುಸ್ಥಿತಿಯಲ್ಲಿವೆ.

**ವಾಗಣಗೇರಿ** (೨೫೭) ಯು ತಾಲೂಕು ಕೇಂದ್ರವಾದ ಸುರಪುರದಿಂದ ಪಶ್ಚಿಮಕ್ಕೆ ಆರು ಕಿ. ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಊರಾಗಿದೆ. ಸುರಪುರದ ಅರಸರ (೧೬೩೬-೧೮೫೮) ಆಳ್ವಿಕೆಯಲ್ಲಿ ಮಹತ್ವದ ಸ್ಥಾನವನ್ನು ಪಡೆದಿದ್ದ ಈ ಊರು ಸದೃಢವಾದ ಕೋಟೆ-ಕೊತ್ತಲಗಳನ್ನು ಹೊಂದಿದೆ. ಇದು ಆರಂಭದಲ್ಲಿ ಸುರುಪುರದ ನಾಯಕರ ರಾಜಧಾನಿಯಾಗಿದ್ದು, ಈ ಕೋಟೆಯನ್ನು ಸುರಪುರದ ಸಂಸ್ಥಾನದ ಮೊದಲ ಅರಸನಾದ ಗಡ್ಡಿ ಪಿಡ್ಡೇನಾಯಕನು ಕಟ್ಟಿಸಿದನೆಂಬ ಅಭಿಪ್ರಾಯವಿದೆ. ಕೋಟೆಯ ಒಳ ಅಂಗಳವು ಸುಮಾರು ೧೮ ಎಕರೆಯಷ್ಟು ವಿಶಾಲವಾಗಿದೆ. ಈ ಕೋಟೆಯು ಸುಮಾರು ೨೫೦ ಅಡಿ ಎತ್ತರದ ಗುಡ್ಡದ ಮೇಲಿದ್ದು, ಅದರ ಹೆಬ್ಬಾಗಿಲು ಒಂಭತ್ತು ಅಡಿ ಅಗಲವಿದ್ದು, ೧೧ ಅಡಿ ಎತ್ತರವಿದೆ. ಕೋಟೆಯಲ್ಲಿ ಪಾವಟಿಗೆಯುಳ್ಳ ಬಾವಿ ಇದ್ದು, ಗೋಪಾಲಸ್ವಾಮಿಯ ಮಂದಿರವಿದೆ. ಮೊಗಲ್ ಚಕ್ರವರ್ತಿ ಔರಂಗಜೇಬ ಹಾಗೂ ಪಿತಾಂಬರ ಬಹರೀ ಪಿಡ್ಡೈನಾಯಕ (ಸುರಪುರದ ಅರಸ ಎರಡನೇ ಗಡ್ಡಿಪಿಡ್ಡೈನಾಯಕ)ನ ನಡುವೆ ಇಲ್ಲಿ ಭೀಕರವಾದ ಕದನ ನಡೆಯಿತು. ಕೋಟೆ ಔರಂಗಜೇಬನ ವಶವಾಯಿತು. ಕೋಟೆಯ ಹೆಬ್ಬಾಗಿಲ ಮೇಲಿರುವ ಪರ್ಷಿಯನ್ ಶಾಸನವು ಮೊಗಲ್ ಚಕ್ರವರ್ತಿ ಔರಂಗಜೇಬನು ತನ್ನ ಆಳ್ವಿಕೆಯ ೪೯ನೇ ವರ್ಷದಲ್ಲಿ (೧೭೦೫) ನೀಡಿದ ಆದೇಶದಂತೆ ಈ ಕೋಟೆಯ ನಿರ್ಮಾಣ ಕಾರ್ಯವು ಹಫಿಜ ಮಸೂದನ ಮೇಲ್ವಿಚಾರಣೆಯಲ್ಲಿ ಪೂರ್ಣಗೊಂಡ ಅಂಶವನ್ನು ತಿಳಿಸುತ್ತ ಇದನ್ನು ಖಚಿತಪಡಿಸುತ್ತದೆ. ಊರಲ್ಲಿ ದೇವರಶೆಟ್ಟಿಯವರ ಹೊಲದಲ್ಲಿ ಬ್ರಹ್ಮಗುಡಿ ಇದೆ.

**ವಾಡಿ** (೨೫,೦೫೦) ಯು ತಾಲೂಕು ಕೇಂದ್ರವಾದ ಚಿತ್ತಾಪುರದಿಂದ ನೈಋತ್ಯಕ್ಕೆ ಸುಮಾರು ೧೫ ಕಿ. ಮೀ. ಅಂತರದಲ್ಲಿರುವ ದೊಡ್ಡ ರೈಲ್ವೆ ಜಂಕ್ಷನ್ ಆಗಿದ್ದು ಹೈದರಾಬಾದ್, ಸೊಲ್ಲಾಪುರ ಹಾಗೂ ಮದ್ರಾಸ್ ರೈಲು ಮಾರ್ಗಗಳ ಕೂಡು ಸ್ಥಳವಾಗಿದೆ. ೧೮೭೪ರವರೆಗೆ ಇದೊಂದು ಅಗಣ್ಯ ಗ್ರಾಮವಾಗಿತ್ತು. ಆದರೆ ಹೈದರಾಬಾದ್ ರೈಲು ಮಾರ್ಗ ಜೋಡಣೆಯಿಂದಾಗಿ ಮಹತ್ವ ಪಡೆಯಿತು. ವಾಡಿಯಲ್ಲಿ ಕೂಡ ಎ.ಸಿ.ಸಿ. ಕಂಪನಿಯ ಸಿಮೆಂಟ್ ಫ್ಯಾಕ್ಟರಿಯೊಂದಿದೆ. ಇಲ್ಲಿಯ ಲಕ್ಷ್ಮಿನಾರಾಯಣ ಗುಡಿಯು ಪ್ರಸಿದ್ಧವಾಗಿದೆ.

**ಶಹಾಪುರ** (೨೪೭೪೦) ವು ಗುಲಬರ್ಗಾದಿಂದ ದಕ್ಷಿಣಕ್ಕೆ ೭೭ ಕಿ. ಮೀ., ಬೆಂಗಳೂರಿನಿಂದ ಉತ್ತರಕ್ಕೆ ೫೪೯ ಕಿ. ಮೀ. ದೂರದಲ್ಲಿರುವ ತಾಲೂಕು ಕೇಂದ್ರವಾಗಿದೆ. ಪೌರಾಣಿಕವಾಗಿ ಸಗರ ಚಕ್ರವರ್ತಿ ಆಳಿದ ಸಗರ ನಾಡಿನ ಕೇಂದ್ರವಾಗಿದ್ದ ಸಗರ ಇದೆಂದೂ, ಸಮೀಪವಿರುವ ಬೆಟ್ಟವೇ ಸಗರಾದ್ರಿ ಎಂದೂ ಐತಿಹ್ಯವಿದೆ. ಸಗರ ಚಕ್ರವರ್ತಿ ನಿರ್ಮಿತ ಕೋಟೆ ಶಹಾಪುರದ ಕೋಟೆ ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಶಹಾಪುರದ ಬೆಟ್ಟದ ಮೇಲಿರುವ ಈ ಸಗರಗಡದ ಕೋಟೆ ಬಹುಶಃ ಕಲ್ಯಾಣದ ಚಾಳುಕ್ಯರ ಕಾಲದ ರಚನೆಯಾಗಿದ್ದು ನಂತರ ಆದಿಲ್ ಷಾಹಿ ಅರಸರ ಆಳ್ವಿಕೆಯಲ್ಲಿ ಮತ್ತಷ್ಟು ಬಲಿಷ್ಟಗೊಂಡಿತು. ಮೊಗಲರ ದಾಳಿಗೂ ಇದು ಸಿಲುಕಿ ನಲುಗಿದಂತೆ ಕಾಣುತ್ತದೆ. ಸುರಪರದ

ನಾಯಕರ ಕಾಲದಲ್ಲಿ ಇದಕ್ಕೆ ಎರಡು ಸುತ್ತನ್ನು ಸೇರಿಸಿ ದ್ವಾರಗಳನ್ನು ನಿರ್ಮಿಸಲಾಯಿತು. ಹೀಗೆ ಸುಮಾರು ೮೦೦ ವರ್ಷಗಳ ಅವಧಿಯಲ್ಲಿ ವಿಸ್ತಾರಗೊಂಡಿರುವ ಇದು ನೆಲಮಟ್ಟದಿಂದ ಸುಮಾರು ೬೦೦ ಅಡಿ ಎತ್ತರದಲ್ಲಿ ನಿರ್ಮಾಣಗೊಂಡಿರುವ ಎಂಟು ಸುತ್ತಿನ ಗಿರಿದುರ್ಗವಾಗಿದ್ದು ಜಿಲ್ಲೆಯ ಅತ್ಯಂತ ಉದ್ದನೆಯ ಕೋಟೆಯಾಗಿದೆ. ಕೃಷ್ಣದೇವರಾಯನು ಆದಿಲ್ ಷಾಹಿಗಳನ್ನು ಸೋಲಿಸಿ ಈ ಕೋಟೆಯನ್ನು ಸ್ವಲ್ಪ ಕಾಲ ವಶಪಡಿಸಿಕೊಂಡಿದ್ದಂತೆ ತೋರುತ್ತದೆ. ಅಳಿಯ ರಾಮರಾಯನಿಗೆ ಸಗರ ಸಂಕ್ರಮಣರಾಯ ಎಂಬ ಬಿರುದಿದ್ದ ಅಂಶ ಗಮನಾರ್ಹವಾಗಿದೆ.

ಪ್ರಾಚೀನ ಶಾಸನಗಳಲ್ಲಿ ಸಗರ-೩೦೦, ಸಗರ-೫೦೦ಎಂದು ದಾಖಲಾಗಿರುವ ಆಡಳಿತ ಘಟಕದ ಕೇಂದ್ರವಾದ ಸಗರ ಇದೇ ಆಗಿರಬೇಕೆಂದು ತೋರುತ್ತದೆ. ಮುಂದೆ ಮುಸ್ಲಿಮರ ಆಳ್ವಿಕೆಯಲ್ಲಿ ಇದೇ ನಸರತಾಬಾದ್ ಆಗಿದ್ದು ಆನಂತರದಲ್ಲಿ ಇಂದಿನ ಶಹಾಪುರ ಆಗಿರುವಂತೆ ತೋರುತ್ತದೆ. ಇಲ್ಲಿಂದ ಈವರೆಗೆ ಏಳು ಪರ್ಷಿಯನ್ ಶಾಸನಗಳು ವರದಿಯಾಗಿವೆ. ಸುಮಾರು ೧೫೫೫ರಿಂದ ೧೮೫೭ರ ಕಾಲಾವಧಿಗೆ ಸೇರಿದ ಈ ಶಾಸನಗಳಿಂದ ಶಹಾಪುರದ ಹಿಂದಿನ ಇತಿಹಾಸವನ್ನು ಗುರುತಿಸಬಹುದಾಗಿದೆ. ಶಹಾಪುರದ ಕೋಟೆಯ ದ್ವಾರಗಳ ಮೇಲೆ ಇರುವ ಇಬ್ರಾಹಿಂ ಆದಿಲ್ ಷಾನ ಕಾಲಕ್ಕೆ ಸೇರಿದ ನಾಲ್ಕು ಶಾಸನಗಳಿಂದ ಇದಕ್ಕೆ ಹಿಂದೆ (ನಸರಾತಬಾದ್) ಎಂಬ ಹೆಸರಿದ್ದ ಅಂಶ ಗೊತ್ತಾಗುತ್ತದೆ. ಜೊತೆಗೆ ಆ ದ್ವಾರಗಳು ನಿರ್ಮಾಣಗೊಂಡ ಬಗೆಗೂ ವಿವರಗಳು ಲಭಿಸುತ್ತವೆ. ಇನ್ನುಳಿದ ಮೂರು ಶಾಸನಗಳು ೧೭೯೯-೧೮೫೭ರ ಕಾಲಾವಧಿಗೆ ಸೇರಿದ್ದು, ಮಸೀದಿ ಹಾಗೂ ಅಷೂರ್‌ಖಾನಗಳ ನಿರ್ಮಾಣಕ್ಕೆ ಸಂಬಂಧಿಸಿದಂತಹ ದಾಖಲೆಗಳಾಗಿವೆ.

ಮಂದಾಕಿನಿ ಮಹಾತ್ಮೆಯಲ್ಲಿ ದಾಖಲಾಗಿರುವಂತೆ ಶಹಾಪುರದ ದಕ್ಷಿಣಕ್ಕೆ ಇರುವ ಪರ್ವತವೇ ಸಗರಾದ್ರಿಯಾಗಿದ್ದು, ಬೆಟ್ಟದ ಮೇಲೆ ಹಲವಾರು ಪವಿತ್ರ ತಾಣಗಳಿವೆ. ಅವುಗಳಲ್ಲಿ ಚರಬಸವೇಶ್ವರರ ಗದ್ದುಗೆ, ಮೌನೇಶ್ವರ ಅನುಷ್ಠಾನ, ಪಾಂಡವರ ಕಲ್ಲು, ಭೀಮನಗವಿ, ಗವಿ ರಂಗನಾಥ, ಸಿದ್ಧಲಿಂಗೇಶ್ವರ, ಗೊಗ್ಗಮ್ಮಾಂಬೆ, ತುಳಜಾಭವಾನಿ, ಅಮರ ಕಲ್ಯಾಣ, ತ್ರಯಂಬಲಿಂಗೇಶ್ವರ, ಗವಿಬಸಪ್ಪ, ನಾಗಬಸಪ್ಪ, ಆಂಜನೇಯ, ನಿರಹಂಕಾರ, ದಿಗ್ಗಿ ಸಂಗಮನಾಥ ಹಾಗೂ ಚಂದಾಸಾಹೇಬ, ತಾವರೆಕೆರೆ, ಮಂದಾಕಿನ ತೀರ್ಥ, ನೀಲಮ್ಮನ ಭಾವಿ ಮುಂತಾದ ತೀರ್ಥಗಳಿವೆ. ಚರಬಸವೇಶ್ವರ ದೇವಾಲಯವು ಸುಂದರ ವಿನ್ಯಾಸಗಳಿಂದ ಕೂಡಿದ್ದು ಬಸವೇಶ್ವರರ ಜಾತ್ರೆಯು ಚೈತ್ರ ಶುದ್ಧ ಪಂಚಮಿಯಂದು ಜರುಗುತ್ತದೆ. ಈ ಬೆಟ್ಟದ ಬುಡದಲ್ಲಿ ಕಲ್ಯಾಣದ ಚಾಳುಕ್ಯರ ಕಾಲಕ್ಕೆ ಸೇರಿದ ೧೮ ಕೈಗಳನ್ನುಳ್ಳ ಚಾಮುಂಡಿಯ ಉಗ್ರ ಮೂರ್ತಿಯೊಂದು ಪತ್ತೆಯಾಗಿದೆ. ಇಲ್ಲಿ ವಿಶ್ವಕರ್ಮ ಸಮಾಜದ ಏಕದಂಡಿ ಮಠವಿದ್ದು, ಅಲ್ಲಿ ಕೃಷ್ಣದೇವರಾಯನ ಕಾಲದ ತಾಮ್ರ ಶಾಸನವೂ ಇದೆ.

ಶಹಾಪುರದಿಂದ ಭೀಮರಾಯನಗುಡಿಗೆ ಹೋಗುವ ಹಾದಿಯಲ್ಲಿ ಎಡಕ್ಕೆ ಮಲಗಿರುವ ಸಗರಾದ್ರಿ ಪರ್ವತಶ್ರೇಣಿಯಲ್ಲಿ ಮುಗಿಲತ್ತ ಮುಖ ಮಾಡಿ ಅಂಗಾತ ಮಲಗಿರುವ ನಿಸರ್ಗ ನಿರ್ಮಿತ ಬುದ್ಧನ ರೂಪ ರೇಷೆ ಪ್ರವಾಸಿಗರನ್ನು ಮಂತ್ರ ಮುಗ್ಧಗೊಳಿಸುತ್ತದೆ. ಅಗಲವಾದ ಹಣೆ, ಚೂಪಾದ ಮೂಗು, ವಿಶಾಲವಾದ ಎದೆಯಂತೆ ಒಡೆದು ಕಾಣುವ ಬುದ್ಧನ ಈ ನಿಸರ್ಗ ರಚನೆ ನಿಜಕ್ಕೂ ವಿಸ್ಮಯವನ್ನುಂಟು ಮಾಡುತ್ತದೆ. ಕೃಷ್ಣಾ ಮೇಲ್ದಂಡೆ ಯೋಜನೆಯ ಪ್ರಧಾನ ಕಛೇರಿ ಹಾಗೂ ವಸಹಾತುಗಳು ಶಹಾಪುರದಿಂದ ೫ ಕಿ. ಮೀ ದೂರದಲ್ಲಿರುವ ಭೀಮರಾಯಗುಡಿಯಲ್ಲಿವೆ. ಚಾರಿತ್ರಿಕ ಮಹತ್ವದ, ಶಿರವಾಳ, ಸನ್ನತಿ, ಗೋಗಿ ಮುಂತಾದ ಸ್ಥಳಗಳು ಶಹಾಪುರದಿಂದ ಅನತಿ ದೂರದಲ್ಲಿದ್ದು, ಹೋಗಲು ಉತ್ತಮ ರಸ್ತೆ ಸೌಕರ್ಯವಿದೆ.

**ಶಹಬಾದ್** (೮೪೨೮) ತಾಲೂಕು ಕೇಂದ್ರವಾದ ಚಿತ್ತಾಪುರದಿಂದ ಪಶ್ಚಿಮಕ್ಕೆ ಸುಮಾರು ೨೫ ಕಿ.ಮೀ. ದೂರದಲ್ಲಿದ್ದು ಇಲ್ಲಿಂದ ೧೨ ಕಿ.ಮೀ. ಅಂತರದಲ್ಲಿ ವಾಡಿ ರೈಲ್ವೆ ಜಂಕ್ಷನ್ ಇದೆ. ಊರ ನಡುವೆ ಹಿಂದೆ ಅರಮನೆ ಪ್ರದೇಶವನ್ನು ಆವರಿಸಿದ್ದ ಪ್ರಾಕಾರವೆಂದು ಹೇಳುವ ಎತ್ತರವಾದ ಗೋಡೆ ಇದ್ದು, ಈ ಪ್ರಾಕಾರದ ಒಳಗೆ ಬೃಹತ್ತಾದ ಒಂದು ಮಸೀದಿ ಹಾಗೂ ಭಾವಿಗಳಿವೆ. ಆದರಿಂದು ಇದು ಎ.ಸಿ.ಸಿ. ಸಿಮೆಂಟ್ ಕಾರ್ಖಾನೆಯಿಂದಾಗಿ ಕೈಗಾರಿಕಾ ಪಟ್ಟಣವಾಗಿ ಪ್ರಾಮುಖ್ಯತೆ ಗಳಿಸಿದೆ. ಈ ಪ್ರದೇಶವು ಸುಣ್ಣದ ಕಲ್ಲಿನ ನಿಕ್ಷೇಪವನ್ನು ಸಮೃದ್ಧವಾಗಿ ಹೊಂದಿದ್ದು, ಇಲ್ಲಿಯ ಶಹಬಾದ್ ಪರಸಿಗೆ ಬಹಳ ಬೇಡಿಕೆ ಇದೆ. ಇಲ್ಲಿ ಕ್ರೈಸ್ತರಿಗಾಗಿ ಮೆಥಾಡಿಸ್ಟ್ ಹಾಗೂ ಕ್ಯಾಥೋಲಿಕ್ ಇಗರ್ಜಿಗಳಿವೆ. **ಗೋಳಾ** (೨೬೩೫)ವು ಶಹಾಬಾದ್‌ನ ನೆರೆಯ ಗ್ರಾಮವಾಗಿದ್ದು ಹೊನಗುಂಟಿ ರಸ್ತೆಯಲ್ಲಿದೆ. ಇಲ್ಲಿ ಕಲ್ಯಾಣದ ಚಾಳುಕ್ಯರ ಕಾಲಕ್ಕೆ ಸೇರಿದ ಈಶ್ವರ ದೇವಾಲಯವಿದ್ದು, ಶಿಲ್ಪಾವಶೇಷಗಳು ಊರಲ್ಲಿ ಎಲ್ಲೆಂದರಲ್ಲಿ ಹರಡಿಕೊಂಡಿವೆ.

**ಶಿರವಾಳ** (೩೬೫೬)ವು ತಾಲೂಕು ಕೇಂದ್ರವಾದ ಶಹಾಪುರದಿಂದ ಈಶಾನ್ಯಕ್ಕೆ ೧೫ ಕಿ.ಮೀ. ದೂರದಲ್ಲಿ ಭೀಮಾನದಿಯ ಬಲ ದಂಡೆಯ ಮೇಲೆ ಸುಮಾರು ಎರಡು ಕಿ.ಮೀ. ಒಳಕ್ಕಾದಂತೆ ಇರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದ್ದು, ಶೈವ ಪುರಾಣೋಕ್ತ ಸಿರಿಯಾಳ ಶೆಟ್ಟಿಯ ಹುಟ್ಟೂರು ಇದೆಂಬ ಐತಿಹ್ಯವಿದೆ. ಪ್ರಾಚೀನ ಶಾಸನಗಳಲ್ಲಿ 'ಶ್ರೀವೊಳಲು', 'ಸಿರಿವೊಳಲು', 'ದಕ್ಷಿಣ ವಾರಣಾಸಿ', 'ಧರ್ಮದ ಮನೆ', 'ಆದಿ ಪಟ್ಟಣ' ಎಂದೆಲ್ಲಾ ಹೊಗಳಿಸಿಕೊಂಡಿರುವ ಇದು ಹಿಂದೆ ಸಗರನಾಡಿಗೆ ಸೇರಿತ್ತು. ಈ ಊರು ಶಾತವಾಹನರಷ್ಟು ಪ್ರಾಚೀನವಾದ ನೆಲೆಯಾಗಿದ್ದು, ಇಲ್ಲಿಂದ ಈವರೆಗೆ ಐದು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ರಾಷ್ಟ್ರಕೂಟ ಚಕ್ರವರ್ತಿ ಅಕಾಲವರ್ಷನ ಕಾಲಕ್ಕೆ ಸೇರಿದ ಶಾಸನವು ಸಗರ ನಾಡ ಗಾವುಂಡ ಚಂದಯ್ಯನಿಗೆ ಊರ ಕೆಲವರು ೧೦೦ ಗದ್ಯಾಣಗಳನ್ನು ಕೊಟ್ಟು ೫೦ ಮತ್ತರು ಭೂಮಿಯನ್ನು ಖರೀದಿಸಿ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಸುಮಾರು ೧೧ನೆಯ ಶತಮಾನದ ಕಿರು ಶಾಸನವೊಂದು ಪಡೆಯಣ್ಣನ ಮಗ ಸಂಪಯ್ಯನ ಧರ್ಮವನ್ನು ದಾಖಲಿಸಿದೆ. ಸಿದ್ಧಲಿಂಗೇಶ್ವರ ದೇವಾಲಯದ ಕಂಬದ ಮೇಲಿರುವ ಶಾಸನವು ಮುಮ್ಮಡಿ ಸೋಮೇಶ್ವರನ ಆಳ್ವಿಕೆಯಲ್ಲಿ ಮಹಾ ಮಂಡಳೇಶ್ವರ ಸೋವಿದೇವರಸನ ತಾಯಿ ಲೋಕಾದೇವಿ, ಮಹಾ ಪ್ರಧಾನ ಅಲ್ಲಹುಲಿಯರಸ ಹಾಗೂ ಸಿರಿವೊಳಲ ಪ್ರಭುಗಳು, ವ್ಯಾಪಾರಿಗಳು ಹಾಗೂ ತಂಬುಲಿಗ ಸಾಸಿರ್ವರು ಒಂದಾಗಿ ಕದಂಬೇಶ್ವರ ದೇವರ ಜೀರ್ಣೋದ್ಧಾರ, ಪೂಜಾ ವಿಧಿಗಳಿಗೆಂದು ೩೨ ಗೇಣ ಕೋಲಲ್ಲಿ ಆರು ಮತ್ತರು ಭೂಮಿ, ಒಂದು ಮತ್ತರು ತೋಟ ಹಾಗೂ ವಿವಿಧ ಸುಂಕಗಳನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತಾ ಸಾಂದರ್ಭಿಕವಾಗಿ ಎರಹೇಶ್ವರ ಹಾಗೂ ಚಟ್ಟೇಶ್ವರ ದೇವರುಗಳ ಬಗ್ಗೆ ಹೇಳುತ್ತದೆ. ಅದೇ ಗುಡಿಯ ದಕ್ಷಿಣ ರಂಗಮಂಟಪದ ಕಂಬದ ಮೇಲಿರುವ ೧೧೭೮ರ ಶಾಸನವು ಮಹಾಮಂಡಳೇಶ್ವರ ಎಳಮೇಲ ಸಿಂಗಿದೇವರಸನ ತಾಯಿ ನಾಗಲದೇವಿ, ಮಹಾಪ್ರಧಾನ ಕೇತಯ ನಾಯಕರು ಹಾಗೂ ಯಾದವ ಭಿಲ್ಲಮದೇವನ ಅಧಿಕಾರಿ ಅಪ್ಪಯ್ಯನಾಯಕನು ಎಳಮೇಲ-೫೦ ರಲ್ಲಿದ್ದ ಮರುವಡಿ ಗ್ರಾಮವನ್ನು ಸಿರವೊಳಲ ಸಿದ್ಧ ಸಾತೇಶ್ವರ ದೇವರ ಪೂಜಾವಿಧಿಗೆಂದು ದಾನ ಬಿಟ್ಟ ವಿಷಯವನ್ನು ತಿಳಿಸುತ್ತ, ಶಿವಯೋಗಿ ಶಾಂತಿಮಯ್ಯ ಹಾಗೂ ಅವನ ಮಗ ರೇವಣದೇವಯ್ಯಗಳ ಪವಾಡಗಳನ್ನೂ ಹೇಳುತ್ತದೆ. ಹೋತಗಲ್‌ನ ೧೧೮೫ರ ಶಾಸನ ಕಲ್ಯಾಣದ ಚಾಳುಕ್ಯ ಅರಸ ನಾಲ್ಕನೆಯ ಸೋಮೇಶ್ವರನ ಕಾಲದ್ದಾಗಿದ್ದು, ಸೌದೊರೆ ಬಮ್ಮಯ್ಯ ಹಾಗೂ ಇತರರು ಹೋತಂಗಲ್ಲನ್ನು ಸಿದ್ಧ ಶಾನ್ತೀಶ್ವರ ದೇವರಿಗೆ ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಹನುಮಂತನ ಗುಡಿ ಬಳಿಯಿರುವ ೧೫೩೭ರ ಶಾಸನವು ಕಲುಬರಿಗಿ ನಾಡಿನ ಮಾಗುಡಿಯ ಮಲ್ಲೋಜನ ಮಗ ದೇವರಸನು ಸಿರಿವೊಳಲ ಗ್ರಾಮದ ಹನುಮಂತನ ಗುಡಿ ನಿರ್ಮಾಣ ಕಾರ್ಯವನ್ನು ಗ್ರಾಮದ ಸೇನಭೋಗ ನಾಗಿಯರ ಆಶ್ರಯದಲ್ಲಿ ಪೂರ್ಣಗೊಳಿಸಿದ ಅಂಶವನ್ನು ದಾಖಲಿಸಿದೆ. ಒಟ್ಟಾರೆ ಶಿರವಾಳ ಹಾಗೂ ನೆರೆಹೊರೆ ಗ್ರಾಮದಲ್ಲಿರುವ ಶಾಸನಗಳಿಂದ ಹಿಂದೆ ಶಿರವಾಳದಲ್ಲಿ ಕದಂಬೇಶ್ವರ, ಎರೆಹೇಶ್ವರ, ಚಟ್ಟೇಶ್ವರ, ಸಿದ್ಧ ಸಾತೇಶ್ವರ, ಅಲ್ಲೇಶ್ವರ, ಮಹಾದೇವ, ಸೋಮೇಶ್ವರ, ಶಾಂತೀಶ್ವರ, (ಸಿದ್ಧ ಸಾತೇಶ್ವರ) ಮುಂತಾದ ದೇವಾಲಯಗಳಿದ್ದ ಅಂಶ ಗೊತ್ತಾಗುತ್ತದೆಯಾದರೂ ಅವುಗಳನ್ನಿಂದು ಖಚಿತವಾಗಿ ಗುರುತಿಸಲಾಗದಾಗಿದೆ. ಊರಲ್ಲಿಂದು ಸುಮಾರು ೨೦ ಪ್ರಾಚೀನ ದೇಗುಲಗಳಿವೆ. ಇವುಗಳಲ್ಲಿ ಅಣಬಿ ಗ್ರಾಮಕ್ಕೆ ಹೋಗುವ ರಸ್ತೆಯ ಇಕ್ಕೆಲದಲ್ಲಿ ಏಳು, ಹಳ್ಳದಾಚೆಗೆ ಮೂರು ಹಾಗೂ ಊರಲ್ಲಿ ಹತ್ತು ದೇವಾಲಯಗಳಿವೆ. ಈ ದೇವಾಲಯಗಳು ರಾಷ್ಟ್ರಕೂಟ-ಕಲ್ಯಾಣದ ಚಾಳುಕ್ಯ ಸಂಕ್ರಮಣ ಕಾಲಾವಧಿ ಹಾಗೂ ಕಳಚೂರಿಗಳ ಕಾಲದ ರಚನೆಗಳಾಗಿದ್ದು, ಇವುಗಳಲ್ಲಿ ಕೆಲವು ಉತ್ಕೃಷ್ಟ ಕಲಾಕೃತಿಗಳಾಗಿವೆ. ಇಲ್ಲಿಯ ಗುಡಿಗಳಲ್ಲಿ ಊರ ಹಳ್ಳದಿಂದಾಚೆಗೆ ಇರುವ ಸುಜ್ಞಾನೇಶ್ವರ, ನಾಗಯ್ಯ ಹಾಗೂ ನನ್ನಯ್ಯನ ಗುಡಿ ಸಂಕೀರ್ಣವು ಪ್ರಾಚೀನದ್ದಾಗಿದ್ದು ಅದರಲ್ಲೂ, ನನ್ನಯ್ಯ ಹಾಗೂ ನಾಗಯ್ಯನ ಗುಡಿಗಳು ರಾಷ್ಟ್ರಕೂಟರ ಕಾಲದ ರಚನೆಗಳೆಂಬ ಅಭಿಪ್ರಾಯ ವಿದ್ವಾಂಸರಲ್ಲಿದೆ. ಈ ಎರಡೂ ಗುಡಿಗಳು ಗರ್ಭಗೃಹ, ಸುಕನಾಸ, ಅರ್ಧಮಂಟಪ, ಕಿರು ಸಭಾ ಮಂಟಪ, ನವರಂಗ ಹಾಗೂ ದ್ವಾರ ಮಂಟಪಗಳನ್ನು ಹೊಂದಿದ್ದು ಬೃಹತ್ತಾಗಿವೆ. ಗರ್ಭಗೃಹಗಳಲ್ಲಿ ಶಿವಲಿಂಗಗಳಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯನ್ನುಳ್ಳ ತ್ರಿಶಾಖಾಲಂಕೃತ ದ್ವಾರಬಂಧಗಳಿವೆ. ಬೃಹತ್ತಾದ ನವರಂಗದ ಕಂಬಗಳು ಆಕರ್ಷಕವಾಗಿದ್ದು, ನಡುವಣ ಛತ್ತು ಸರಳವಾಗಿದೆ. ಅರ್ಧಮಂಟಪ ಹಾಗೂ ನವರಂಗಗಳ ನಡುವೆ ಇರುವ ಕಿರು ಸಭಾ ಮಂಟಪದ ಭಿತ್ತಿಯಲ್ಲಿ ಸುಂದರವಾದ ಶಿವ ತಾಂಡವ ನೃತ್ಯ ಶಿಲ್ಪ ಕೆತ್ತನೆಯಿರುವ ಜಾಲಂಧ್ರವನ್ನು ಒದಗಿಸುವ ಮೂಲಕ ಬೆಳಕಿನ ವ್ಯವಸ್ಥೆ ಮಾಡಿರುವುದು ಗಮನಾರ್ಹವಾಗಿದೆ. ಆಕರ್ಷಕವಾದ ಕೆತ್ತನೆಗಳಿಂದ ಅಲಂಕೃತವಾದ ಅಧಿಷ್ಠಾನದ ಮೇಲೆ ನಿಂತಿರುವ ಈ ಗುಡಿಗಳ ಭಿತ್ತಿಗಳು ಕಿರು ಸ್ತಂಭ ಹಾಗೂ ಕಿರು ಶಿಖರಗಳನ್ನು ಹೊಂದಿದ್ದು ಮಿಥುನ ಶಿಲ್ಪಗಳೂ ಇವೆ.

ಇಲ್ಲಿಯ ಸುಜ್ಞಾನೇಶ್ವರ ಗುಡಿಯು ಜೀರ್ಣೋದ್ಧಾರಗೊಂಡಿದ್ದು, ಅದರ ಬಾಗಿಲವಾಡವು ಸುಮಾರು ೧೧ನೇ ಶತಮಾನದ ಲಕ್ಷಣಗಳನ್ನು ಹೊಂದಿದ್ದು, ಈ ಪರಿಸರದಲ್ಲಿ ಸುಮಾರು ೧೦-೧೧ನೇ ಶತಮಾನಕ್ಕೆ ಸೇರಿದ ಸ್ತಂಭಗಳನ್ನು ನೋಡಬಹುದಾಗಿದೆ. ಈ ದೇವಾಲಯದ ಹಿಂಬದಿಯಲ್ಲಿ ಆಕರ್ಷಕವಾದ ಪುಷ್ಕರಣಿ ಇದ್ದು ಅದರ ಭಿತ್ತಿಯಲ್ಲಿ ರಾಮಾಯಣದ ಕಥನಾವಳಿಯ ಸುಂದರವಾದ ಉಬ್ಬು ಕೆತ್ತನೆಗಳಿವೆ. ಒಟ್ಟಾರೆ ಈ ದೇಗುಲ ಸಮುಚ್ಚಯವು ರಾಷ್ಟ್ರಕೂಟ-ಕಲ್ಯಾಣದ ಚಾಳುಕ್ಯ ಪರಿವರ್ತನಾ (೧೧ನೇ ಶತಮಾನ) ಹಂತದ್ದೆಂದು ಹೇಳಿದರೆ ತಪ್ಪಾಗಲಾರದು. ಆದರಿಂದು ಇವು ಶಿಥಿಲಾವಸ್ಥೆಯಲ್ಲಿವೆ.

ಅಣಬಿ ರಸ್ತೆಯಲ್ಲಿರುವ ಏಳು ಪ್ರಾಚೀನ ದೇವಾಲಯಗಳಲ್ಲಿ ೫ ಏಕ ಕೂಟಗಳಾದರೆ, ಉಳಿದೆರಡು ದ್ವಿಕೂಟಗಳಾಗಿವೆ. ಸುಮಾರು ೧೧-೧೨ನೇ ಶತಮಾನಕ್ಕೆ ಸೇರಿದ ಈ ದೇವಾಲಯಗಳಲ್ಲಿ ಏಕಕೂಟ ಗುಡಿಗಳು ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು ಪಾರ್ಶ್ವ ದ್ವಾರ ಹೊಂದಿದ್ದರೆ, ದ್ವಿಕೂಟ ಗುಡಿಗಳು ತೆರೆದ ನವರಂಗಗಳನ್ನು ಹೊಂದಿದ್ದು, ಜೀರ್ಣಾವಸ್ಥೆಯಲ್ಲಿವೆ. ಇವೆಲ್ಲವೂ ಶೈವ ದೇವಾಲಯಗಳಾಗಿದ್ದು, ಇವುಗಳ ಭಿತ್ತಿಯು ನಿರಾಡಂಬರವಾಗಿವೆ. ಅಣಬಿ ರಸ್ತೆಯ ಬಲಭಾಗಕ್ಕಾದಂತೆ ಇರುವ ಪುಷ್ಕರಣಿಯು ಬಹಳ ಕಲಾತ್ಮಕವಾಗಿದ್ದು ಇದರ ಭಿತ್ತಿಯ ಮೇಲಿರುವ ಗಜಲಕ್ಷ್ಮಿ, ರಾಮ, ಉಗ್ರನರಸಿಂಹ, ಕಿರಾತಾರ್ಜುನ ಮುಂತಾದ ಸುಂದರವಾದ ಉಬ್ಬು ಕೆತ್ತನೆಗಳು ಗಮನಾರ್ಹವಾಗಿವೆ. ಈ ಪುಷ್ಕರಣಿಯ ಎರಡು ದಿಕ್ಕಲ್ಲೂ ಮೇಲೆ ಗರ್ಭಗೃಹವಿದ್ದು ಇಂದು ಶಿಥಿಲವಾಗಿವೆ.

ಊರಲ್ಲಿರುವ ಹತ್ತು ಪ್ರಾಚೀನ ದೇವಾಲಯಗಳಲ್ಲಿ ಸಿದ್ಧಲಿಂಗೇಶ್ವರ ಗುಡಿಯೇ ಮಹತ್ವದ್ದಾಗಿದೆ. ಈ ದೇವಾಲಯವು ಪಂಚಕೂಟವಾಗಿದ್ದು, ನಾಲ್ಕು ದಿಕ್ಕಲ್ಲೂ ಪ್ರತ್ಯೇಕ ಗರ್ಭಗೃಹ, ಅಂತರಾಳ ಹಾಗೂ ನವರಂಗಗಳಿದ್ದು, ಇವುಗಳನ್ನು ಒಗ್ಗೂಡಿಸುವ ನಡುವಣ ಸ್ಥಳದಲ್ಲಿರುವ ಗರ್ಭಗೃಹಕ್ಕೆ ನಾಲ್ಕು ದಿಕ್ಕಿನಿಂದಲೂ ಪ್ರವೇಶವಿದೆ. ಪೂರ್ವ-ಪಶ್ಚಿಮದ ದೇಗುಲಗಳ ನವರಂಗಗಳಿಗೆ ದ್ವಾರಮಂಟಪಗಳಿದ್ದರೆ, ಉತ್ತರ-ದಕ್ಷಿಣದ ದೇಗುಲಗಳು ನವರಂಗಗಳನ್ನಷ್ಟೇ ಹೊಂದಿದ್ದು, ಕಕ್ಷಾಸನಗಳಿವೆ. ಈ ಪಂಚ ದೇಗುಲದ ಎಲ್ಲಾ ಗರ್ಭಗೃಹಗಳಲ್ಲಿ ಶಿವಲಿಂಗಗಳಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯನ್ನುಳ್ಳ ತ್ರಿಶಾಖಾಲಂಕೃತ ಬಾಗಿಲವಾಡಗಳನ್ನು ಹೊಂದಿದ್ದರೆ, ನವರಂಗದ ಪ್ರಧಾನ ದ್ವಾರಗಳು ಸುಂದರವಾದ ಪಂಚಶಾಖಾಲಂಕೃತ ಬಾಗಿಲವಾಡಗಳನ್ನು ಹೊಂದಿವೆ. ಈ ದೇವಾಲಯದ ನವರಂಗಗಳ ಛತ್ತು ಚಿತ್ತಾಕರ್ಷಕವಾಗಿದ್ದು, ಕಂಬಗಳು ಸುಂದರವಾದ ಉಬ್ಬು ಕೆತ್ತನೆಗಳನ್ನು ಹೊಂದಿವೆ. ಈ ದೇವಾಲಯದ ಉತ್ತರ ಭಾಗದ ನವರಂಗದಲ್ಲಿ ಕಂಬಗಳ ಮೇಲೆ ಭೈರವ, ಯೋಗ ನರಸಿಂಹ, ಸೂರ್ಯ, ಕೃಷ್ಣ, ವಿಷ್ಣು, ಶಿವ ಹಾಗೂ ಗಣಪತಿಯ ಉಬ್ಬು ಕೆತ್ತನೆಗಳಿದ್ದು, ಕಂಬವೊಂದರ ಮೇಲೆ ಸಿಂಹ ದೇಹ ಮಾನವ ಶಿರದ ವ್ಯಕ್ತಿಯೊಬ್ಬ ಕಮಂಡಲಧಾರಿಯೋರ್ವನನ್ನು ಅಟ್ಟಿಸಿಕೊಂಡು ಹೋಗುತ್ತಿರುವಂತೆ ಕೆತ್ತಲಾಗಿದ್ದು, ಬದಿಯಲ್ಲಿ 'ಅಧಿಕ್' (+) ಚಿಹ್ನೆ ಇದೆ. ಇದು ಈ ದೇವಾಲಯದ ತಳ ವಿನ್ಯಾಸವನ್ನು ಸೂಚಿಸುವಂತಿದೆ. ಈ ದೇವಾಲಯದ ಆವರಣದಲ್ಲಿ ಪಶ್ಚಿಮಕ್ಕಾದಂತೆ ಇರುವ ಎರಡು ಕಿರು ಗುಡಿಗಳಲ್ಲಿ ಪದ್ಮಾಸೀನ ತೀರ್ಥಂಕರ ಹಾಗೂ ದೇವಿಯರ ಶಿಲ್ಪಗಳಿವೆ. ವಿಶಿಷ್ಟವಾದ ತಳವಿನ್ಯಾಸವನ್ನುಳ್ಳ ಈ ಪಂಚಲಿಂಗ ದೇವಾಲಯದ ಭಿತ್ತಿಯು ನಿರಾಡಂಬರವಾಗಿದೆ. ಈ ಗುಡಿಯ ಬಳಿಯಲ್ಲೇ ಭೈರವ, ದ್ವಿಬಾಹು ಗಣಪತಿ ಮುಂತಾದ ಶಿಲ್ಪಗಳಿವೆ. ಶಿರವಾಳದ ಶಾಸನದಲ್ಲಿ ಬರುವ ಶಿವಯೋಗಿ ಶಾಂತಿಮಯ್ಯ ಹಾಗೂ ಅವನ ಮಗ ರೇವಣದೇವಯ್ಯಗಳು ಹಾಗೂ ಅವರ ಪವಾಡಗಳು ಗಮನಾರ್ಹವಾಗಿದ್ದು, ಅವರಿಗೂ ಈ ಗುಡಿಗೂ ಇದ್ದ ಸಂಬಂಧ ಮಹತ್ವದ್ದಾಗಿದೆ. ಇತ್ತೀಚೆಗೆ ಈ ದೇವಾಲಯದ ಶಿಖರವು ಜೀರ್ಣೋದ್ಧಾರಗೊಂಡಿದ್ದು, ಪುರಾತನರ ಗಾರೆ ನಿರ್ಮಿತ ಮೂರ್ತಿಗಳಿಂದ ಅದನ್ನು ಅಲಂಕರಿಸಲಾಗಿದೆ.

ಊರ ನಡುವೆ ಇರುವ ಬಲಭೀಮೇಶ್ವರ ಗುಡಿಯು ಕಲ್ಯಾಣದ ಚಾಳುಕ್ಯರ ಕಾಲದ ಗುಡಿಯ ಅವಶೇಷಗಳನ್ನು ಬಳಸಿ ಸುಮಾರು ೧೫೩೭ರಲ್ಲಿ ನಿರ್ಮಿಸಿರುವ ದೇವಾಲಯವಾಗಿದೆ. ಈ ಗುಡಿಯ ಬಳಿಯಲ್ಲೇ ಶಿಥಿಲಾವಸ್ಥೆಯಲ್ಲಿರುವ ಎರಡು ಪ್ರಾಚೀನ ದೇವಾಲಯಗಳಿದ್ದು, ಇವಿಂದು ಮನೆಗಳಾಗಿವೆ. ಇಲ್ಲಿಯ ಮಲ್ಲಿಕಾರ್ಜುನ ಗುಡಿಯು ಗರ್ಭಗೃಹ, ತೆರೆದ ಅಂತರಾಳ ಹಾಗೂ ನಕ್ಷತ್ರಾಕಾರ(ಹೊರವಿನ್ಯಾಸ)ದ ನವರಂಗಗಳನ್ನು ಹೊಂದಿರುವ ಸರಳ, ಸುಂದರ ರಚನೆಯಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲವಾಡವು ಚತುರ್‌ಶಾಖಾಲಂಕೃತವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯಿದೆ. ಇದರ ಶಿರೋಭಾಗದಲ್ಲಿ ಹಂಸಾವಳಿಯ ಅಡ್ಡಪಟ್ಟಿಕೆ ಇದೆ. ನವರಂಗದ ನಡುವಣ ಛತ್ತು ಆಕರ್ಷಕವಾಗಿದ್ದು, ಅಷ್ಟ ದಿಕ್ಪಾಲಕರಿಂದ ಆವೃತ್ತವಾದ ನಟರಾಜನ ಶಿಲ್ಪವುಳ್ಳ ಫಲಕದಿಂದ ಅಲಂಕೃತವಾಗಿದೆ. ನವರಂಗದ ಭಿತ್ತಿಯು

ನಿರಾಡಂಬರವಾಗಿದ್ದು, ನಡುವೆ ಸುಂದರವಾದ ಜಾಲಂಧ್ರ ಕಿಟಕಿಗಳಿವೆ. ಈ ದೇವಾಲಯವು ಸುಮಾರು ೧೦-೧೧ನೇ ಶತಮಾನಕ್ಕೆ ಸೇರಿದ್ದೆಂದು ವಾಸ್ತು ರಚನಾ ಹಿನ್ನೆಲೆಯಲ್ಲಿ ಅಭಿಪ್ರಾಯಪಡಬಹುದಾಗಿದೆ. ಸಿದ್ಧಲಿಂಗೇಶ್ವರ ಗುಡಿಗೆ ಹೋಗುವ ಹಾದಿಯಲ್ಲಿ ಬಲಕ್ಕೆ ಮೂರು ಪ್ರಾಚೀನ ದೇಗುಲಗಳಿದ್ದು, ಇವೆಲ್ಲವೂ ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಇವುಗಳಲ್ಲೊಂದಕ್ಕೆ ಪಾರ್ಶ್ವ ದ್ವಾರವಿದೆ. ಈ ದೇವಾಲಯಗಳು ಸುಮಾರು ೧೧-೧೨ನೇ ಶತಮಾನಕ್ಕೆ ಸೇರಿದ ರಚನೆಗಳಾಗಿದ್ದು, ಉಳಿದೊಂದು ಸೂರ್ಯನದಾಗಿದ್ದು, ಅಂತರ್ಗತವಾಗಿರುವ ಆ ಗುಡಿಯಲ್ಲಿ ಸೂರ್ಯನ ಸುಂದರವಾದ ಶಿಲ್ಪವಿದೆ. ಶಿರವಾಳದಿಂದ ಈವರೆಗೆ ಪಂಚತಂತ್ರದ ನಾಲ್ಕು ಕಥಾಫಲಕಗಳು ವರದಿಯಾಗಿದ್ದು, ಗಮನಾರ್ಹವಾಗಿವೆ.

ಹರಿಜನರ ಓಣಿಗೆ ಹೋಗುವ ಹಾದಿಯಲ್ಲಿ ಸುಮಾರು ೧೨ನೇ ಶತಮಾನದ ಮೂರು ಪ್ರಾಚೀನ ದೇವಾಲಯಗಳಿದ್ದು, ಇವೆಲ್ಲವೂ ಇಂದು ಜೀರ್ಣಾವಸ್ಥೆಯಲ್ಲಿವೆ. ಉಳಿದಂತೆ ಊರಲ್ಲಿ ಪಾರ್ವತಿ-ಪರಮೇಶ್ವರ, ಉಮಾ ಮಹೇಶ್ವರ, ವೀರಭದ್ರ, ಮರಗಮ್ಮ ಮುಂತಾದ ನವೀನ ಗುಡಿಗಳಿದ್ದು, ದರ್ಗಾ ಹಾಗೂ ಮಸೀದಿ ಕೂಡ ಇವೆ. ಶಾಬಾದಿ ಕಲ್ಲಿಗೆ ಹೆಸರಾಗಿರುವ ಈ ಪ್ರದೇಶದಲ್ಲಿ ಕಲ್ಗಣಿ ಪ್ರಮುಖ ಉದ್ಯಮವಾಗಿದ್ದು, ಶಿರವಾಳದ ಸುತ್ತಮುತ್ತ ಅಧಿಕ ಸಂಖ್ಯೆಯಲ್ಲಿ ಕಲ್ಗಣಿಗಳಿರುವುದನ್ನು ನೋಡಬಹುದಾಗಿದೆ.

**ಶಿರಸಗಿ** (೨೦೫) ಶಿರಸಗಿಯು ಅಫಜಲ್‌ಪುರದಿಂದ ಸುಮಾರು ೪೦ ಕಿ.ಮೀ. ದೂರದಲ್ಲಿರುವ ಗ್ರಾಮವಾಗಿದ್ದು, ಅಲ್ಲಿಂದ ಎರಡು ಕಿ.ಮೀ. ದೂರದ ಹಾಳೂರಲ್ಲಿ, ಸುಮಾರು ೧೧ನೇ ಶತಮಾನಕ್ಕೆ ಸೇರಿದ ಸುಂದರವಾದ ಮಲ್ಲಿಕಾರ್ಜುನ ದೇವಾಲಯವಿದೆ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ಮೂರು ಗರ್ಭಗೃಹಗಳನ್ನು ಹೊಂದಿದ್ದು, ಇವುಗಳಲ್ಲಿ ಪ್ರಧಾನ ಗರ್ಭಗೃಹಕ್ಕೆ ಅಂತರಾಳವಿದ್ದು, ಇಂದು ಇವೆರಡು ನಾಶಗೊಂಡಿದ್ದು, ವಿಶಾಲವಾದ ನವರಂಗದಲ್ಲಿ, ವಿಷ್ಣು, ಯತಿ ಹಾಗೂ ಮಹಿಷ ಮರ್ದಿನಿ ಶಿಲ್ಪಗಳಿದ್ದು ಇದರ ಛತ್ತು ಚಿತ್ತಾಕರ್ಷಕವಾಗಿದೆ. ನವರಂಗದ ಕಂಬಗಳು ಕುಸುರಿ ಕೆತ್ತನೆಯಿಂದ ಅಲಂಕೃತಗೊಂಡಿದ್ದು, ಬೋದಿಗೆಯಲ್ಲಿ ಯಕ್ಷರನ್ನು ಕೆತ್ತಲಾಗಿದೆ. ನವರಂಗಕ್ಕೆ ಸೇರಿದಂತಿರುವ ಮುಖ ಮಂಟಪದ ಅಧಿಷ್ಠಾನವು ಆನೆ, ವಜ್ರಾಕಾರ ಹಾಗೂ ನರ್ತಕಿಯರ ಕೆತ್ತನೆಗಳಿಂದ ಅಲಂಕೃತಗೊಂಡಿದ್ದು, ಭಿತ್ತಿಗೆ ಜಾಲಂಧ್ರವನ್ನು ಒದಗಿಸಲಾಗಿದೆ. ನವರಂಗದ ಕಕ್ಷಾಸನದ ಅಂಚಲ್ಲಿ ನಾಲ್ಕು ಅಡಿ ಅಂತರದಲ್ಲಿ ತ್ರಿಶೂಲಗಳನ್ನು ಕೆತ್ತಿದ್ದು, ಇದೊಂದು ಅಳತೆಗೋಲಿನ ಪ್ರಾತಿನಿಧಿಕ ರೇಖಾ ಕೆತ್ತನೆಯಾಗಿದ್ದು, ಮೊದಲ ಬಾರಿ ಇಲ್ಲಿ ವರದಿಯಾಗಿದೆ. ಈ ದೇವಾಲಯದ ಮುಮ್ಮುಖವು ಎತ್ತರವಾಗಿದ್ದು, ವಿಶಿಷ್ಟವಾಗಿದೆ. ಉಳಿದಂತೆ ಊರಲ್ಲಿ ಇತ್ತೀಚಿನ ದೇವಸ್ಥಾನಗಳಿದ್ದು ಮಸೀದಿ ಹಾಗೂ ದರ್ಗಾ ಕೂಡ ಇವೆ.

**ಶಿರೂರು ದರ್ಗಾ** (೧೭೭೬) ವು ತಾಲೂಕು ಕೇಂದ್ರವಾದ ಆಳಂದದಿಂದ ನೈಋತ್ಯಕ್ಕೆ ೨೨ ಕಿ.ಮೀ. ದೂರದಲ್ಲಿದ್ದು, ಇಲ್ಲಿಂದ ಈವರೆಗೆ ಶಾಸನಗಳಾವುದೂ ವರದಿಯಾಗಿಲ್ಲ. ಊರ ನಡುವೆ ಇರುವ ಹೇಮಾಡ ಪಂತ್ ದೇಗುಲವೆಂದೇ ಕರೆಯಲ್ಪಡುವ ಪ್ರಾಚೀನವಾದ ಭೋಗೇಶ್ವರ ಗುಡಿ ಹಾಗೂ ಊರ ಹೊರಗಿರುವ ಲಾಡ್ಲೆ ಮಶಾಕ್ ದರ್ಗಾಗಳಿಂದಾಗಿ ಇದು ಪ್ರಸಿದ್ಧವಾಗಿದೆ. ನವರಂಗ ಭಾಗ ಪೂರ್ಣ ನಶಿಸಿ ಹೋಗಿರುವ ಭೋಗೇಶ್ವರ ದೇವಾಲಯವು ಸುಮಾರು ೧೧-೧೨ನೇ ಶತಮಾನದ ರಚನೆಯಾಗಿದ್ದು ಇಂದು ಗರ್ಭಗೃಹ ಹಾಗೂ ಅಂತರಾಳಗಳೊಂದಿಗೆ ನವರಂಗದ ಎರಡು ದೇವಕೋಷ್ಠಗಳಷ್ಟೇ ಉಳಿದಿವೆ. ಎತ್ತರವಾದ ವೇದಿಕೆಯ ಮೇಲೆ ಬಹುಕೋನಾಕಾರದ ತಳವಿನ್ಯಾಸದಿಂದ ಕೂಡಿದ ಈ ದೇವಾಲಯವು ಪೂರ್ವಾಭಿಮುಖವಾಗಿ ನಿಂತಿದ್ದು, ಇದರ ಭಿತ್ತಿಯು ನಿರಾಡಂಬರವಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದೆ. ಗರ್ಭಗೃಹದ ಹೊಸ್ತಿಲ ಮುಂದೆ ಸುಂದರವಾದ ಚಂದ್ರಶಿಲೆಯಿದ್ದು, ಅಂತರಾಳದ ದ್ವಾರಬಂಧವು ದ್ವಿಶಾಖಾ ಪಟ್ಟಿಕೆಯನ್ನು ಹೊಂದಿದ್ದು, ಇವುಗಳ ಉತ್ತರಾಂಗವನ್ನು ಮೂರು ಕಿರು ಶಿಖರಗಳಿಂದ ಅಲಂಕರಿಸಲಾಗಿದೆ. ಊರ ಹೊರಗಿರುವ ಲಾಡ್ಲೆ ಮಶಾಕ್ ದರ್ಗಾ ಚಿಕ್ಕದಾದರೂ ಆಕರ್ಷಕವಾಗಿದ್ದು ಇದರ ಉರುಸು ಗ್ಯಾರವಿ ತಿಂಗಳ ೧೩ನೇ ತಾರೀಖಿನಂದು ಜರುಗುತ್ತಿದ್ದು ಮಸೀದಿಯೂ ಇದೆ. ಊರನ್ನು ಬಳಸಿದ್ದ ಕೋಟೆಯು ಶಿಥಿಲವಾಗಿದ್ದು ಹುಡೆ ಇದೆ. ಉಳಿದಂತೆ ಊರಲ್ಲಿ ಬಸವಣ್ಣ, ಹನುಮಂತ, ಲಕ್ಷ್ಮಿ ಹಾಗೂ ಮರಗಮ್ಮನ ದೇವಸ್ಥಾನಗಳಿದ್ದು, ಹನುಮಂತನ ಗುಡಿಯ ಬಳಿ ಭೈರವನ ಶಿಲ್ಪವಿದೆ.

**ಶಿರೋಳಿ** (೧೫೭೬)ಯು ತಾಲೂಕು ಕೇಂದ್ರವಾದ ಚಿಂಚೋಳಿಯಿಂದ ದಕ್ಷಿಣಕ್ಕೆ ಸೇಡಂ ರಸ್ತೆಯಲ್ಲಿ ೨೮ ಕಿ.ಮೀ. ದೂರದಲ್ಲಿದೆ. ಪ್ರಾಚೀನ ಶಾಸನಗಳಲ್ಲಿ 'ಸಿರಿವಳ್ಳಿ', 'ಸಿರಿವೊಳಲು' ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಅಗ್ರಹಾರವಾಗಿದ್ದು, ಬೆರಣಿ-೫೦೦ಕ್ಕೆ ಸೇರಿತ್ತು. ಇಲ್ಲಿಂದ ಈವರೆಗೆ ಎರಡು ಶಾಸನಗಳು ವರದಿಯಾಗಿದ್ದು ಇವು ಕಲ್ಯಾಣದ ಚಾಲುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲದ್ದಾಗಿವೆ. ಇವುಗಳಲ್ಲಿ ನಾಗಲಿಂಗ ಗುಡಿಯಲ್ಲಿರುವ ೧೧೫೪ರ ಶಾಸನವು ದಂಡನಾಯ್ಕ ವಿಮಲಾದಿತ್ಯ ಹಾಗೂ ಅವನ ಸೋದರ ಚಂದ್ರ ಸಿರಿವೊಳಲಲ್ಲಿ ಮೂರು ದೇವಾಲಯಗಳನ್ನು ಹಾಗೂ ಒಂದು ಕೆರೆಯನ್ನು ನಿರ್ಮಿಸಿ ದಾನ ಬಿಟ್ಟ ವಿಷಯ ತಿಳಿಸಿದರೆ, ಅಲ್ಲಿಯ ಇನ್ನೊಂದು ಶಾಸನ ಈಶ್ವರಸೆಟ್ಟಿಯ ತಮ್ಮ ನಾರಾಯಣಶೆಟ್ಟಿಯು ಸತ್ರವನ್ನು ನಿರ್ಮಿಸಿ ೪೦ ಮತ್ತರು ಭೂಮಿಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಶಾಸನೋಕ್ತ ಹರಿಹರ ದೇವಾಲಯವೇ ಇಂದಿನ ನಾಗಲಿಂಗ ಗುಡಿ ಎಂದೆನಿಸುತ್ತದೆ.

**ಶ್ರೀನಿವಾಸ ಸರಡಗಿ** (೫೦೩೮)ಯು ತಾಲೂಕು ಕೇಂದ್ರವಾದ ಗುಲಬರ್ಗಾದಿಂದ ಪೂರ್ವಕ್ಕೆ ಸುಮಾರು ೧೫ ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಕೇಂದ್ರವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಸರವಡಿಗೆ', 'ಸರ್ವಡಿಗೆ' ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಗೊಂಕ-೧೨೦ (೭೦)ಕ್ಕೆ ಸೇರಿದ ಕಂಪಣವಾಗಿದ್ದ ವಿಷಯ ದೇವಗಿರಿಯ ಯಾದವ ಅರಸ ರಾಮಚಂದ್ರನ ಕಾಲಕ್ಕೆ ಸೇರಿದ ೧೨೮೭ರ ಬೆಣ್ಣೂರು (ಚಿತ್ತಾಪುರ ತಾ.) ಶಿಲಾಶಾಸನದಿಂದ ಗೊತ್ತಾಗುತ್ತದೆ. ಬಹುಶಃ ಇದು ಅರವತ್ತು ಹಳ್ಳಿಗಳ ಆಡಳಿತ ಕೇಂದ್ರವಾಗಿದ್ದಂತೆ ತೋರುತ್ತದೆ. ಇಲ್ಲಿಂದ ಈವರೆಗೆ ಕಲ್ಯಾಣದ ಚಾಲುಕ್ಯ ಅರಸರ ಕಾಲಕ್ಕೆ ಸೇರಿದ ಎರಡು ಶಿಲಾ ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ೧೧೧೧ರ ಶಾಸನವು ಶಂಕರನಾರಾಯಣ ದೇವಾಲಯದ ನೈಷ್ಠಿಕ ಸ್ಥಾನಕ್ಕೂ ಸೇರಿದಂತೆ ಆ ದೇವರ ಪೂಜಾವಿಧಿಗೆ ಹಾಗೂ ವಿದ್ಯಾದಾನ ಮುಂತಾದ ಕಾರ್ಯಗಳಿಗೆಂದು ೪೦ ಮತ್ತರು ಭೂಮಿಯನ್ನು ದಾನ ಬಿಟ್ಟ ಅಂಶವನ್ನು ತಿಳಿಸಿದರೆ, ೧೧೦೭ರ ಇನ್ನೊಂದು ಶಾಸನವು ಸರವಡಿಗೆಯ ಪ್ರಭುಗಳು, ಐನೂರ್ವರು ಹಾಗೂ ನಕರಗಳೂ ಆದಿತ್ಯ ಹಾಗೂ ನಾರಾಯಣ ದೇವರ ಧೂಪ-ದೀಪಾರ್ಚನೆಗಳಿಗೆಂದು ವಿವಿಧ ವಸ್ತುಗಳ ಮೇಲಿನ ಆಯವನ್ನು ದೇವರಿಗೆ ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ಈ ಶಾಸನಗಳಿಂದ ಹಿಂದೆ ಇದೊಂದು ವಿದ್ಯಾಕೇಂದ್ರವಾಗಿದ್ದು, ಶಂಕರ ನಾರಾಯಣ ಹಾಗೂ ಆದಿತ್ಯ ದೇವರುಗಳನ್ನುಳ್ಳ ದೇವಾಲಯವು ಇಲ್ಲಿದ್ದ ಅಂಶ ವೇದ್ಯವಾಗುತ್ತದೆ. ಆದರೆ ಊರಲ್ಲಿಂದು ಪ್ರಾಚೀನ ದೇವಾಲಯಗಳಾವುವೂ ಸುಸ್ಥಿತಿಯಲ್ಲಿ ಉಳಿದಿಲ್ಲ. ಪ್ರಾಚೀನ ಶಿಲ್ಪಾವಶೇಷಗಳು ಶ್ರೀನಿವಾಸ, ಶರಣಬಸವೇಶ್ವರ, ರೇವಣಸಿದ್ಧೇಶ್ವರ, ವೀರಭದ್ರ, ಬಸವಣ್ಣ, ಹನುಮಂತ, ಎಲ್ಲಮ್ಮ ಹಾಗೂ ಅಗಸಿ ಹನುಮಂತನ ಗುಡಿಗಳ ಬಳಿ ಹರಡಿಕೊಂಡಿವೆ. ಉಳಿದಂತೆ ಲಕ್ಷ್ಮಿ, ಮರಗಮ್ಮ, ಹೊಕ್ಕರಣೆ ಬಾವಿ ಹಾಗೂ ದೇವಿಗುಡಿಗಳಿದ್ದು, ಮಸೀದಿ ಹಾಗೂ ಮೆಹಬೂಬು ಸುಬಾನಿಯ ದರ್ಗಾಗಳಿವೆ.

**ಸಂಗಮ** (ಬೇಚಿರಾಕ್) ವು ತಾಲೂಕು ಕೇಂದ್ರವಾದ ಶಹಾಪುರದಿಂದ ಆಗ್ನೇಯಕ್ಕೆ ೭೩ ಕಿ.ಮೀ. ದೂರದಲ್ಲಿ ಕೃಷ್ಣಾ ಹಾಗೂ ಭೀಮಾ ನದಿಗಳ ಸಂಗಮ ಸ್ಥಳದಲ್ಲಿರುವ ಧಾರ್ಮಿಕ ಮಹತ್ವದ ಚಾರಿತ್ರಿಕ ನೆಲೆಯಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಸಂಗವಳ್ಳಿ', 'ಕೂಡಲ ಸಂಗಮ', 'ದಕ್ಷಿಣ ಪ್ರಯಾಗ' ಎಂದೆಲ್ಲಾ ಉಲ್ಲೇಖಿತಗೊಂಡಿರುವ ಇದು ಹಿಂದೆ ಸಗರ-೫೦೦ಕ್ಕೆ ಸೇರಿದ್ದ ಪ್ರಮುಖ ಧಾರ್ಮಿಕ ಹಾಗೂ ಶೈಕ್ಷಣಿಕ ಕೇಂದ್ರವಾಗಿತ್ತು. ಇಲ್ಲಿಂದ ಈವರೆಗೆ ಮೂರು ಶಾಸನಗಳು ವರದಿಯಾಗಿವೆ. ಇಲ್ಲಿಯ ಸಂಗಮೇಶ್ವರ ದೇವಾಲಯದಲ್ಲಿರುವ ಈ ಶಾಸನಗಳಲ್ಲಿ ೧೦೬೭ರ ಶಾಸನವೇ ಪ್ರಾಚೀನದ್ದಾಗಿದ್ದು, ಕಲ್ಯಾಣದ ಚಾಲುಕ್ಯ ಅರಸ ಒಂದನೆಯ ಸೋಮೇಶ್ವರನ ಆಳ್ವಿಕೆಯಲ್ಲಿ ಮಹಾಮಂಡಳೇಶ್ವರ ಗೊಗ್ಗರಸನು ಸಗರ-೫೦೦ ಅನ್ನು ಆಳುತ್ತಿದ್ದಾಗ, ಕೂಡಲ ಸಂಗಮೇಶ್ವರ ದೇವಾಲಯದ ಆಚಾರ್ಯ ಲಾಕುಳ ಪಂಥದ ರುದ್ರ ಶಕ್ತಿ ಪಂಡಿತರಿಗೆ ದೇವರ ಪೂಜೆ ಪುರಸ್ಕಾರ ಹಾಗೂ ಸತ್ರಕ್ಕೆಂದು ಸಗರ-೫೦೦ರ 'ಕೋಬಾಳ' ಗ್ರಾಮವನ್ನು ಸರ್ವಮಾನ್ಯವಾಗಿ ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಮೇಲಾಗಿ ಈ ಶಾಸನ ಮೂವರು ಕೋಣೆಯ ಮಠದ ಬಗ್ಗೆ ಪ್ರಸ್ತಾಪಿಸುತ್ತದೆ. ಇದೇ ಕಲ್ಲಿನ ಮೇಲಿರುವ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ ೧೦೮೪ರ ಇನ್ನೊಂದು ಶಾಸನ ರೇವಣಭಟ್ಟರು ವಿಷ್ಣು ದೇವರನ್ನಿಲ್ಲಿ ಪ್ರತಿಷ್ಠಾಪನೆ ಮಾಡಿದ ಅಂಶವನ್ನು ತಿಳಿಸುತ್ತದೆ. ಈ ಗುಡಿಯ ಆವರಣದಲ್ಲೇ ಇರುವ ೧೧೪೩ರ ಇನ್ನೊಂದು ಶಾಸನದಿಂದ ಕಲ್ಯಾಣದ ಚಾಳುಕ್ಯ ಅರಸ ಜಗದೇಕಮಲ್ಲ ಜಯಸಿಂಹನ ಆಳ್ವಿಕೆಯಲ್ಲಿ, ಮಹಾಪ್ರಧಾನ ಬಮ್ಮಣ್ಣಯ್ಯನ ತಮ್ಮ ಚಿದ್ದರಾಜನು ಸಗರ-೫೦೦ರ ಸಮಸ್ತ ಪ್ರಭುಗಳ ಸಮ್ಮುಖದಲ್ಲಿ ಸಂಗಮೇಶ್ವರ ದೇವರಿಗೆ ಸಗರ - ೫೦೦ರಲ್ಲಿದ್ದ ಗುಂಡಲೂರು, ಸೂಗೂರು ಹಾಗೂ ಕೋಬಾಳಗಳನ್ನು ದೇವರ ಸೇವೆಗೆ, ದೇವಾಲಯದ ಸತ್ರಕ್ಕೆ ಹಾಗೂ ದೇವಾಲಯಕ್ಕೆ

ಸೇರಿದ ವ್ಯಾಖ್ಯಾಯಣ ಶಾಲೆಯಲ್ಲಿದ್ದ ಯತಿ, ಬ್ರಾಹ್ಮಣ ವಿದ್ಯಾರ್ಥಿಗಳನ್ನೊಳಗೊಂಡಂತೆ ಇರುವ ೫೫ ಜನರ ಭೋಜನಕ್ಕೆಂದು ೫೫ ಗೇಣ ಅಣ್ಣನಂಕಕಾರನ ಕೋಲಲ್ಲಿ ೨೬ ಮತ್ತರು ಭೂಮಿಯನ್ನು ಕಾಳಾಮುಖ ರುದ್ರಶಕ್ತಿ ಪಂಡಿತರಿಗೆ ದಾನ ಬಿಟ್ಟ ಅಂಶ ಗೊತ್ತಾಗತ್ತದೆ. ಜೊತೆಗೆ ಕಲುಕುಟಿಗ ಚೌಡೋಜನಿಗೆ ಎರಡು ಮತ್ತರು ಭೂಮಿಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುವ ಈ ಶಾಸನ ಸಾಂದರ್ಭಿಕವಾಗಿ ನೆರೆಯ 'ಹಡಗಿಲೆ' ಗ್ರಾಮದ ಬ್ರಹ್ಮೇಶ್ವರ ದೇವರನ್ನೂ ಉಲ್ಲೇಖಿಸುತ್ತದೆ. ಮೇಲಿನ ಶಾಸನಗಳು ಉಲ್ಲೇಖಿಸುವ ಸಂಗಮೇಶ್ವರ ದೇವಾಲಯವೇ ಇಂದಿಲ್ಲಿ ಶಿಥಿಲಾವಸ್ಥೆಯಲ್ಲಿ ನಿಂತಿರುವ ದೇವಾಲಯವಾಗಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವು ಗರ್ಭಗೃಹ, ತೆರೆದ ಅಂತರಾಳ, ವಿಶಾಲವಾದ ನವರಂಗ ಹಾಗೂ ಮುಖ ಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲ ಚೌಕಟ್ಟು ನಾಲ್ಕು ಶಾಖೆಯ ಅಲಂಕಾರಿಕ ಪಟ್ಟಿಕೆಗಳನ್ನು ಹೊಂದಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಇದೆ. ಉತ್ತರಾಂಗ ಭಾಗದಲ್ಲಿ ಪಂಚ ಕಿರು ಶಿಖರಗಳಿವೆ. ನವರಂಗದ ಛಾವಣಿಯು ಕಮಲಮಯವಾಗಿದ್ದು, ನವರಂಗವನ್ನು ಪ್ರವೇಶಿಸಲು ಮೂರು ದಿಕ್ಕಲ್ಲೂ ಪ್ರವೇಶ ದ್ವಾರಗಳಿವೆ. ನವರಂಗದ ಪೂರ್ವ ಹಾಗೂ ದಕ್ಷಿಣದ ದ್ವಾರಗಳಿಗೆ ಮುಖ ಮಂಟಪಗಳಿದ್ದು, ಕಕ್ಷಾಸನಗಳಿವೆ. ಈ ದೇವಾಲಯದ ಇಟ್ಟಿಗೆಯ ಶಿಖರವು ನಂತರದ ಕಾಲದ್ದಾಗಿದ್ದು, ಗುಡಿಯನ್ನು ಬಳಸಿ ಪ್ರಾಕಾರವಿದೆ. ಈ ಪ್ರಾಕಾರಕ್ಕೆ ದ್ವಾರ ಮಂಟಪವಿದ್ದು ಗುಡಿಯ ಆವರಣದಲ್ಲಿ ಮುಕ್ಕಾಗಿರುವ ಹಲವಾರು ಶಿಲ್ಪಗಳಿದ್ದು, ಇವುಗಳಲ್ಲಿ ಹುಲಿ ಬೇಟೆ ವೀರಗಲ್ಲು ಗಮನಾರ್ಹವಾಗಿದೆ.

**ಸಗರ** (೯೫೪೯) ವು ತಾಲೂಕು ಕೇಂದ್ರವಾದ ಶಹಾಪುರದಿಂದ ನೈಋತ್ಯಕ್ಕೆ ಸುಮಾರು ೧೫ ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ ಸಗರ-೩೦೦, ಸಗರ-೫೦೦, ಎಂದೇ ಉಲ್ಲೇಖಿತಗೊಂಡಿರುವ ಆಡಳಿತ ವಿಭಾಗಕ್ಕೂ ಈ ಊರಿಗೂ ಸಂಬಂಧವೇನಾದರೂ ಇದೆಯೇ ಎಂಬುದು ಪ್ರಶ್ನೆಯಾಗಿಯೇ ಉಳಿದಿದೆ. ಕೃಷ್ಣೆ-ಭೀಮೆಯರ ನಡುವಣ ಪ್ರದೇಶವನ್ನು ಸಗರ ನಾಡೆಂದು (ಸಗರ ಗಡ್ಡೆ) ಈಗಲೂ ಕರೆಯುವ ವಾಡಿಕೆಯಿದೆ. ಶಹಾಪುರದ ಬಳಿಯ ಬೆಟ್ಟವನ್ನು ಸಗರಾದ್ರಿ ಎಂದೂ, ಇಂದಿನ 'ಶಹಾಪುರ', 'ಹಳೆಸಗರ' ಪ್ರದೇಶವೇ ಹಿಂದಿನ 'ಸಗರ'ವಾಗಿದ್ದು ಸಗರ ಚಕ್ರವರ್ತಿಯ ಆಳ್ವಿಕೆಗೆ ಒಳಪಟ್ಟಿತ್ತೆಂಬ ಪೌರಾಣಿಕ ನಂಬಿಕೆಯಿದೆ.

ಸುಮಾರು ೧೧೬೦ರಲ್ಲಿದ್ದ ಶಿವಶರಣ ಬೊಮ್ಮಯ್ಯ ಇಲ್ಲಿಯವನಾಗಿದ್ದು, ಜೈನರೊಂದಿಗೆ ಧಾರ್ಮಿಕ ವಿವಾದಕ್ಕೆ ಸಿಲುಕಿ ಉಕ್ಕಿನ ಗಟ್ಟಿಯನ್ನು ಕೆಂಪಗೆ ಕಾಯಿಸಿ, ಕುದಿವ ಎಣ್ಣೆಯಲ್ಲಿ ಅದ್ದಿ ಕೈಯಲ್ಲಿ ಹಿಡಿದು ಪವಾಡ ಮೆರೆದು ಜೈನರನ್ನು ಸೋಲಿಸುವಲ್ಲಿ ಇವನು ಯಶಸ್ವಿಯಾದನೆಂದು ಹೇಳಲಾಗುತ್ತದೆ. ಇತರ ಶರಣರಂತೆ ವಚನಕಾರನೂ ಆಗಿದ್ದ ಇವನು ಸುಮಾರು ೮೫ ವಚನಗಳನ್ನು "ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರ" ಎಂಬ ಅಂಕಿತದೊಂದಿಗೆ ರಚಿಸಿದ್ದಾನೆ.

ಸಗರವು ದ್ವಾರಸಮುದ್ರ ಹಾಗೂ ಗುಲಬರ್ಗಾಗಳಂತೆ ಪ್ರಮುಖ ಪಟ್ಟಣವಾಗಿತ್ತೆಂದು ಫೆರಿಸ್ತಾ ಹೇಳಿದ್ದಾನೆ. ಅಲ್ಲಾವುದ್ದೀನ ಖಿಲ್ಜಿಯ ಮಗ ಮುಬಾರಕ್ ಖಿಲ್ಜಿಯು ದಖ್ಖನ್ನಿನ ಮೇಲೆ ನಿಯಂತ್ರಣ ಸಾಧಿಸಲು ಇದನ್ನು ತನ್ನ ಸೈನಿಕ ನೆಲೆಯನ್ನಾಗಿ ಮಾಡಿಕೊಂಡಿದ್ದ. ಮಹಮ್ಮದ್ ಬಿನ್ ತುಘಲಕ್‌ನ ದಾಯಾದಿ ಬಹಾವುದ್ದೀನ್ ಗುರಶ್ಕಪ್‌ನ ಅಧೀನದಲ್ಲಿ ಸಗರ ಪ್ರದೇಶವಿತ್ತು. ಫಿರೋಜ್ ಶಾ ಬಹಮನಿಯು ವಿಜಯನಗರದ ಮೇಲೆ ದಾಳಿ ಮಾಡಿದಾಗ ಸಗರದಲ್ಲಿ ಸ್ವಲ್ಪ ದಿನ ತಂಗಿದ್ದು, ಕಂಪಿಲರಾಯ, ಕೃಷ್ಣದೇವರಾಯ ಹಾಗೂ ಅಳಿಯ ರಾಮರಾಯರು ಸಗರದ ಕೋಟೆಗಾಗಿ ಮುಸ್ಲಿಮರೊಂದಿಗೆ ಯುದ್ಧ ಮಾಡಿದ್ದು, ರಾಮರಾಯನಿಗೆ 'ಸಗರ ಸಂಕ್ರಮಣರಾಯ' ಎಂಬ ಬಿರುದಿತ್ತು. ೧೬೯೫ರಲ್ಲಿ ಔರಂಗಜೇಬನು ಸಗರವನ್ನು ಪಿಡ್ಡೇನಾಯಕನಿಂದ ವಶಪಡಿಸಿಕೊಂಡ. ಮೊಘಲರ ಆಳ್ವಿಕೆಯಲ್ಲಿ ಇದು ಟಂಕಸಾಲೆಯಾಗಿತ್ತು.

ಸಗರದಿಂದ ಮುಸ್ಲಿಮ್ ಅರಸರ ಕಾಲಕ್ಕೆ ಸೇರಿದ ೨೧ ಶಾಸನಗಳು ವರದಿಯಾಗಿವೆ. ಸುಮಾರು ೧೩೭೬ರಿಂದ ೧೭೧೩ಕ್ಕೆ ಸೇರಿದ ಈ ಶಾಸನಗಳಲ್ಲಿ ೧೦ ಬಹಮನಿ ಅರಸರ ಕಾಲದ್ದಾಗಿದ್ದು, ಉಳಿದ ೧೧ ಆದಿಲ್‌ಶಾಹಿ ಅರಸರ ಕಾಲದ್ದಾಗಿವೆ. ಇವುಗಳಿಗಿಂತಲೂ ಪ್ರಾಚೀನವಾದ ಸುಮಾರು ೧೧ನೇ ಶತಮಾನಕ್ಕೆ ಸೇರಿದ ಶಾಸನವೂ ಸೇರಿದಂತೆ ಎರಡು ಕನ್ನಡ ಶಾಸನಗಳು ಇಲ್ಲಿ ಪತ್ತೆಯಾಗಿವೆ. ಈ ಶಾಸನಗಳಲ್ಲಿ ೧೦೭೧ರ ಶಾಸನವು ಕಲ್ಯಾಣದ ಚಾಲುಕ್ಯ ಅರಸ ಇಮ್ಮಡಿ ಸೋಮೇಶ್ವರನ ಕಾಲಕ್ಕೆ ಸೇರಿದ್ದು, ರಾಣಿ ದೇವಲ ಮಹಾದೇವಿಯೂ ಸೇರಿದಂತೆ ಅಯ್ಯಾವೊಳೆ ೫೦೦ ವರ್ತಕರು ಹಾಗೂ ವಿವಿಧ ವರ್ತಕರು ನಕರೇಶ್ವರ ದೇವರ ಮಠದ ತಪೋಧನರಿಗೆ ಹಾಗೂ ವಿದ್ಯಾರ್ಥಿಗಳಿಗೆಂದು

ಸ್ಥಾನಾಚಾರ್ಯರಾದ ಅನಂತ ಶಕ್ತಿ ಸಿದ್ಧಾಂತ ದೇವರಿಗೆ ವಿವಿಧ ಮಾರಾಟ ಸುಂಕಗಳನ್ನು ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ಇಲ್ಲಿಯ ೧೭೮೬ರ ಇನ್ನೊಂದು ಶಾಸನ ಲಿಂಗಾಶೆಟ್ಟಿಯ ಮಗ ಯಲಸೆಟ್ಟಿ, ಅಮರ ಕಲ್ಲಸೆಟ್ಟರ ಲೆಂಕ ಕಟ್ಟಿಸಿದ ಬಾವಿಯನ್ನು ದೇವರಿಗೆ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಇಲ್ಲಿಯ ೪ ಅರೇಬಿಕ್ ಹಾಗೂ ೧೭ ಪರ್ಶಿಯನ್ ಶಾಸನಗಳಲ್ಲಿ ೧೪೯೦ರ ಶಾಸನವು ಇಮ್ಮಡಿ ಮಹಮ್ಮದ್ ಷಾ ಬಹಮನಿಯ ಆದೇಶದಂತೆ ಕೊತ್ವಾಲ ಮುಬಾರಕನು ಅಷೂರ್‌ಖಾನವನ್ನು ನಿರ್ಮಿಸಿದ ಬಗ್ಗೆ ತಿಳಿಸಿದರೆ, ಸೂಫಿ ಸಂತ ಹಜರತ್ ಸರಮಸ್ತಾನ ದರ್ಗಾದ ಹೊಂಡದ ಬಳಿಯಿರುವ ಶಾಸನ ಅದೇ ಸುಲ್ತಾನನ ಆದೇಶದಂತೆ ಈ ಕಟ್ಟಡವನ್ನು ಮುಬಾರಕನು ನಿರ್ಮಿಸುವುದರ ಮೂಲಕ ಸಗರವನ್ನು ಸ್ವರ್ಗವನ್ನಾಗಿಸಿದನೆಂದು ಹೇಳುತ್ತದೆ. ಇಲ್ಲಿಯ ತಾಜುದ್ದೀನ್ ಷೇಕ್ ಮುನಾವರ್ ಬಾದ್‌ಷಾನ ದರ್ಗಾದ ಬಳಿ ಇರುವ ಇನ್ನೊಂದು ಶಾಸನ ಈ ದರ್ಗಾವನ್ನು ಅರಸನ ಆದೇಶದಂತೆ ಮುಬಾರಕನು ಕಟ್ಟಿಸಿದನೆಂದು ಹೇಳುತ್ತದೆ. ಇಲ್ಲಿಯ ಎತ್ತರದ ಅಗಸಿ ಬಾಗಿಲ ಮೇಲಿರುವ ೧೪೦೭ರ ಶಾಸನ ಫಿರೋಜ್ ಷಾ ಬಹಮನಿಯ ಆದೇಶದಂತೆ ಕೊತ್ವಾಲನಾದ ಘಾಹಿಮ್‌ಘತ್ ಸುಲ್ತಾನನು ಇದನ್ನು ನಿರ್ಮಿಸಿದನೆಂದು ಹೇಳಿದರೆ, ಅಲ್ಲಿಯ ಇನ್ನೊಂದು ಶಾಸನ ಇದೇ ಸುಲ್ತಾನನ ಆದೇಶದಂತೆ, ಕೋಟೆ ಕೊತ್ತಲಗಳನ್ನು ಕೊತ್ವಾಲನಾದ ಮುಬಾರಕನು ನಿರ್ಮಿಸಿದ ಅಂಶವನ್ನು ತಿಳಿಸುತ್ತದೆ. ಇಲ್ಲಿಯ ೧೪೧೧ರ ಶಾಸನ ಈ ಸ್ಥಳವನ್ನು 'ನಸರತಾಬಾದ್' ಎಂದು ಕರೆದಿದೆ. ಇಲ್ಲಿಯ ಸರಮತ್ ದರ್ಗಾದ ಬಾವಿಯ ಬಳಿ ಇರುವ ಶಾಸನ ೧೪೨೬ರಲ್ಲಿ ಈ ಬಾವಿಯು ನಿರ್ಮಾಣಗೊಂಡ ಅಂಶವನ್ನು ತಿಳಿಸುತ್ತದೆ. ಈ ಶಾಸನಗಳಿಂದ, ಬಹಮನಿಗಳ ಕಾಲದಲ್ಲಿ ಕೋಟೆ-ಕೊತ್ತಲ, ಮಸೀದಿ, ದರ್ಗಾ, ಅಷೂರ್‌ಖಾನಗಳು ಇಲ್ಲಿ ನಿರ್ಮಾಣಗೊಂಡ ಅಂಶ ಗೊತ್ತಾಗುತ್ತದೆ.

ಆದಿಲ್‌ಷಾಹಿ ಸುಲ್ತಾನರ ಕಾಲಕ್ಕೆ ಸೇರಿದ ಶಾಸನಗಳಲ್ಲಿ ಇಸ್ಮಾಯಿಲ್ ಆದಿಲ್ ಷಾ ಕಾಲಕ್ಕೆ ಸೇರಿದ ಶಾಸನಗಳೇ ಪ್ರಾಚೀನದಾಗಿದ್ದು, ಇವುಗಳಲ್ಲಿ ಒಂದು ತಾಜುದ್ದೀನ್ ಷೇಕ್ ಮುನಾವರ್ ಬಾದಷಾ ದರ್ಗಾಕ್ಕೆ ದಾನ ಬಿಟ್ಟ ವಿಷಯವನ್ನು ತಿಳಸಿದರೆ, ಇನ್ನೊಂದು ದಸ್ತೂರ್ ಖಾನನ ಶಿಕ್ಷಕ ಬಿಬಿ ಬರಕತನು ಇಲ್ಲಿಯ ಮಸೀದಿಯನ್ನು ನಿರ್ಮಿಸಿದನೆಂದು ಹೇಳುತ್ತದೆ. ಇದೇ ಕಾಲಕ್ಕೆ ಸೇರಿದ ಇನ್ನೊಂದು ಶಾಸನ ಅಷೂರ್‌ಖಾನದ ನಿರ್ಮಾಣದ ಬಗ್ಗೆ ಹೇಳುತ್ತದೆ. ಇಲ್ಲಿಯ ಐದಾರು ಶಾಸನಗಳು ದಸ್ತೂರ್ ಖಾನನನ್ನು ಉಲ್ಲೇಖಿಸುತ್ತವೆ. ಇಸ್ಮಾಯಿಲ್ ಆದಿಲ್ ಷಾ ನ ಆಳ್ವಿಕೆಯಲ್ಲಿ ಇವನು ಖಾನ್-ಇ-ಆಜಾಮ್ ಆಗಿ ಸೇವೆಯಲ್ಲಿದ್ದ ಅಂಶವೂ ಗೊತ್ತಾಗುತ್ತದೆ. ಸಗರವು ಜುಮ್ಮಾ ಮಸೀದಿ, ಸಂತ ಶೇಕ್ ಸೂಫಿ ಸರ್ಮಸ್ತರ ದರ್ಗಾ, ತಾಜುದ್ದೀನ್ ಶೇಕ್ ಮುನಾವರ್ ಬಾದಷಾರ ದರ್ಗಾಗಳಿಂದಾಗಿ ಪ್ರಸಿದ್ಧವಾಗಿದೆ. ಇವುಗಳಲ್ಲಿ ಸೂಫಿ ಸರ್ಮಸ್ತರ ವಾರ್ಷಿಕ ಉರುಸಿಗೆ ಸಾವಿರಾರು ಜನ ಬಂದು ಸೇರುತ್ತಾರೆ. ಆ ಸಂದರ್ಭದಲ್ಲಿ ಇಲ್ಲಿಯ ಜುಮ್ಮಾ ಮಸೀದಿಯನ್ನು ತೆರೆದಿಡುತ್ತಾರೆ. **ಮಹಲ್ ರೋಜಾ** (೧೧೯೪)ವು ಸಗರದಿಂದ ಸುಮಾರು ೨ ಕಿ.ಮೀ. ಪಶ್ಚಿಮಕ್ಕೆ ಇರುವ ಆದಿಲ್ ಷಾಹಿ ಕಾಲದ ಐದು ಗುಮ್ಮಟಗಳಿರುವ ಊರು. ಇಲ್ಲಿ ಸೈಯದ್ ಅಕೂಸ್ ಖಾನ್, ಸೈಯದ್ ಕೋನಬೆಮೀರ್, ವಸ್ತಾದ್, ಪಂಚಷಾದ್ ಅಲಿ ಮುಂತಾದವರ ಐದು ಗೋರಿಗಳಿದ್ದು, ಅವುಗಳಿಗೆ ಸುಂದರವಾದ ಗುಮ್ಮಟಗಳಿವೆ. ರೋಜಾದ ಎಲ್ಲಮ್ಮ ಗುಡ್ಡದ ಮೇಲಿರುವ ಎಲ್ಲಮ್ಮ ಹಾಗೂ ಮಲ್ಲಮ್ಮನ ಗುಡಿಗಳಿಗೆ ಭಕ್ತರು ಅಧಿಕ ಸಂಖ್ಯೆಯಲ್ಲಿ ನಡೆದುಕೊಳ್ಳುತ್ತಾರೆ.

**ಸನ್ನತಿ** (೧೪೧೨) ಯು ತಾಲೂಕು ಕೇಂದ್ರವಾದ ಚಿತ್ತಾಪುರದಿಂದ ನೈಋತ್ಯಕ್ಕೆ ೪೮ ಕಿ.ಮೀ., ಯಾದಗಿರಿಯಿಂದ ವಾಯವ್ಯಕ್ಕೆ ೫೬ ಕಿ.ಮೀ., ನಾಲ್ವಾರ್ ರೈಲು ನಿಲ್ದಾಣದಿಂದ ೧೯ ಕಿ.ಮೀ. ದೂರದಲ್ಲಿದೆ. ಶಹಾಪುರದಿಂದ ಉತ್ತರಕ್ಕೆ ೧೯ ಕಿ.ಮೀ. ದೂರದಲ್ಲಿರುವ ಇದನ್ನು ಶಿರವಾಳದ ಹೊಳೆಯ ದಂಡೆಯಲ್ಲಿರುವ ದೋಣಿಯ ಮೂಲಕ ಸುಲಭವಾಗಿ ತಲುಪಬಹುದಾಗಿದೆ. ಪ್ರಾದೇಶಿಕವಾಗಿ 'ಸೊಂಥಿ' ಎಂದೇ ಕರೆಯಲ್ಪಡುವ ಈ ಊರು ಭೀಮಾ ನದಿಯ ಎಡ ದಂಡೆಯ ಮೇಲಿರುವ ಪ್ರಾಗೈತಿಹಾಸಿಕ ಹಾಗೂ ಚಾರಿತ್ರಿಕ ಮಹತ್ವದ ಪ್ರಾಚೀನ ನೆಲೆಗಳಲ್ಲಿ ಒಂದಾಗಿದೆ. ಹಳೆ ಶಿಲಾಯುಗದ ಆಯುಧಗಳು, ಮೌರ್ಯ ಚಕ್ರವರ್ತಿ ಅಶೋಕನ ಆಳ್ವಿಕೆಗೆ ಸೇರಿದ ಬೃಹತ್ ಶಿಲಾ ಶಾಸನಗಳು ಇಲ್ಲಿಂದ ಈಗಾಗಲೇ ವರದಿಯಾಗಿದ್ದು, ಶಾತವಾಹನರ ಕಾಲದ ಬೌದ್ಧ ಸ್ತೂಪಾವಶೇಷಗಳನ್ನು ಇತ್ತೀಚಿನ ಉತ್ಖನನಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಪತ್ತೆ ಹಚ್ಚಲಾಗಿದ್ದು, ಇವೆಲ್ಲವೂ ಈ ಊರಿನ ಖ್ಯಾತಿಯನ್ನು ಹೆಚ್ಚಿಸಿವೆಯಾದರೂ ಇಲ್ಲಿರುವ ಚಂದ್ರಲಾಪರಮೇಶ್ವರಿ ದೇವಾಲಯವೇ ಪ್ರವಾಸಿಗರ ಆಕರ್ಷಣೆಗೆ ಕೇಂದ್ರವಾಗಿದೆ. ನಾಡಿನ ಪ್ರಮುಖ ಬೌದ್ಧ ಕೇಂದ್ರಗಳಲ್ಲಿ ಒಂದಾದ ಸನ್ನತಿಯು ಕರ್ನಾಟಕದ ಅತ್ಯಂತ ಪ್ರಾಚೀನ ಬೌದ್ಧ ಕೇಂದ್ರವಾಗಿದ್ದು ಇದನ್ನು ೧೯೫೪ರಲ್ಲಿ ಮೊಟ್ಟ ಮೊದಲ ಬಾರಿಗೆ ಗುರುತಿಸಿ

ಬೆಳಕಿಗೆ ತಂದ ಶ್ರೇಯಸ್ಸು ಕಪಟರಾಳ ಕೃಷ್ಣರಾಯರಿಗೆ ಸಲ್ಲುತ್ತದೆ. ಅಲ್ಲಿಂದೀಚೆಗೆ ಹಲವಾರು ಸಂಶೋಧಕರ ಶ್ರಮದಿಂದಾಗಿ ಸನ್ನತಿಯಿಂದ ಈವರೆಗೆ ಅಶೋಕನ ಕಾಲಕ್ಕೆ (ಕ್ರಿ.ಪೂ. ೩ನೇ ಶತಮಾನ) ಸೇರಿದ ನಾಲ್ಕು ಹಾಗೂ ಶಾತವಾಹನರ ಕಾಲಕ್ಕೆ (ಕ್ರಿ.ಶ. ೨-೪ನೇ ಶತಮಾನ) ಸೇರಿದ ಸುಮಾರು ೭೭ (ಒಟ್ಟು ೮೧) ಪ್ರಾಕೃತ ಭಾಷೆಯಲ್ಲಿರುವ ಬ್ರಾಹ್ಮಿ ಶಾಸನಗಳು ವರದಿಯಾಗಿದ್ದು, ಇಷ್ಟೊಂದು ಅಧಿಕ ಸಂಖ್ಯೆಯಲ್ಲಿ ಬ್ರಾಹ್ಮಿ ಶಾಸನಗಳು ರಾಜ್ಯದಲ್ಲಿ ಲಭಿಸಿರುವ ಏಕೈಕ ಸ್ಥಳ ಇದೊಂದೇ ಎಂಬುದು ಗಮನಾರ್ಹವಾಗಿದೆ. ಇಲ್ಲಿಂದ ವರದಿಯಾಗಿರುವ ಬ್ರಾಹ್ಮಿ ಶಾಸನಗಳಲ್ಲಿ ಅಶೋಕನ ಆಳ್ವಿಕೆಗೆ ಸಂಬಂಧಿಸಿದ ನಾಲ್ಕು ತ್ರುಟಿತ ಶಾಸನಗಳೇ ಪ್ರಾಚೀನದ್ದಾಗಿದ್ದು, ಇವುಗಳಲ್ಲಿ ಎರಡು ಅಶೋಕನ ೧೨ ಹಾಗೂ ೧೪ನೇ ಬೃಹತ್ ಶಿಲಾಲೇಖಗಳ ಪ್ರತಿಗಳಾದರೆ, ಉಳಿದೆರಡು ವಿಶೇಷ ಶಿಲಾಲೇಖಗಳಾಗಿವೆ. ಕರ್ನಾಟಕದಲ್ಲಿ ಈವರೆಗೆ ಅಶೋಕನ ಕಿರು ಶಿಲಾಲೇಖಗಳಷ್ಟೆ ಪತ್ತೆಯಾಗಿದ್ದು, ಸನ್ನತಿಯಲ್ಲಿ ದೊರೆತಿರುವ ಶಾಸನಗಳು ಅಶೋಕನ ಬೃಹತ್ ಶಿಲಾಲೇಖ ಹಾಗೂ ವಿಶೇಷ ಶಿಲಾಲೇಖ ಪ್ರಕಾರಗಳಿಗೆ ಸೇರಿರುವುದರಿಂದ ಮಹತ್ವ ಪಡೆಯುತ್ತವೆ. ಇಲ್ಲಿ ಲಭಿಸಿರುವ ಶಿಲಾಲೇಖಗಳು ತ್ರುಟಿತಗೊಂಡಿದ್ದರೂ, ಉಳಿದೆಡೆ ದೊರೆತಿರುವ ಇದೇ ಮಾದರಿಯ ಶಾಸನಗಳಿಂದ, ಇವು ಅವನ ಧರ್ಮ ಶಾಸನಗಳೆಂದು ಭಾವಿಸಬಹುದಾಗಿದೆ. ಮೇಲಾಗಿ ಭೀಮಾ ನದಿ ತೀರ ಪ್ರದೇಶ ಅಶೋಕನ ಆಳ್ವಿಕೆಗೆ ಒಳಪಟ್ಟಿದ್ದ ಅಂಶ ಮನದಟ್ಟಾಗುತ್ತದೆ.

ಕರ್ನಾಟಕದಲ್ಲಿ ಶಾತವಾಹನರ ಕಾಲಕ್ಕೆ ಸೇರಿದ ಶಾಸನಗಳು ಅಧಿಕ ಸಂಖ್ಯೆಯಲ್ಲಿ ಸನ್ನತಿಯಲ್ಲಿ ದೊರಕಿವೆ. ಕ್ರಿ.ಶ.೨-೪ನೇ ಶತಮಾನದಲ್ಲಿ ಆಳ್ವಿಕೆ ನಡೆಸಿದ ಶಾತವಾಹನ ಅರಸರಾದ ಸಿರಿ ಸಾತಕರ್ಣಿ, ವಾಶಿಷ್ಠ ಪುತ್ರ ಸಿರಿ ಪುಳಮಾಯಿ ಹಾಗೂ ಮಹಾ ಶಾತವಾಹನ ಅಗ್ನಿ ಶರ್ಮರನ್ನು, ಅಮಾತ್ಯರನ್ನು, ಅಧಿಕಾರಿಗಳನ್ನು ಹಾಗೂ ಗಣ್ಯ ವಣಿಕರುಗಳನ್ನು ಉಲ್ಲೇಖಿಸುವ ಈ ಶಾಸನಗಳು ಆ ಕಾಲದ ಚಟುವಟಿಕೆಗಳನ್ನು ದಾಖಲಿಸಿವೆ. ಈ ಶಾಸನಗಳಲ್ಲಿ ಕೆಲವು ವಿಶಿಷ್ಟ ಶಿಲ್ಪ ಕೆತ್ತನೆಗಳಿಂದ ಕೂಡಿದ್ದು, ನಮ್ಮ ಗಮನವನ್ನು ಸೆಳೆಯುತ್ತವೆ. ನೊಗ ಸಿಡಿದ ಬಂಡಿ, ವಿಶ್ರಾಂತಿ ಪಡೆಯುತ್ತಿರುವ ದನಗಳ ಶಿಲ್ಪ ಕೆತ್ತನೆಯುಳ್ಳ ಶಿಲಾ ಫಲಕಗಳು ಇವರ ಕಾಲದಲ್ಲಿ ಅಧಿಕ ಸಂಖ್ಯೆಯಲ್ಲಿ ಹಲವಾರು ಸ್ಥಳಗಳಲ್ಲಿ ಪತ್ತೆಯಾಗಿದ್ದು, ಇವುಗಳನ್ನು ಬೌದ್ಧ ಅನುಯಾಯಿಗಳ ಸ್ಮಾರಕ ಶಿಲ್ಪಗಳೆಂದು ಪರಿಗಣಿಸಲಾಗಿದ್ದು, ಕೆಲವದರ ಮೇಲೆ ಶಾಸನಗಳನ್ನೂ ಬರೆಯಲಾಗಿದೆ. ಮರಣ ಶಯ್ಯೆಯಲ್ಲಿರುವ ಗೌತಮಿ ಪುತ್ರ ಸಾತಕರ್ಣಿ, ತಂದೆಯ ಅಗಲಿಕೆಯ ನೋವನ್ನು ಅನುಭವಿಸುತ್ತಿರುವ ವಾಶಿಷ್ಠ ಪುತ್ರ ಪುಳಮಾವಿಯ ಮನಮಿಡಿಯುವ ಶಿಲ್ಪ ಕೆತ್ತನೆಯುಳ್ಳ ಶಾಸನ ಫಲಕ ಇಲ್ಲಿಯ ಇನ್ನೊಂದು ಗಮನಾರ್ಹ ಶಿಲ್ಪವಾಗಿದ್ದು, ಇಂತಹ ಹಲವಾರು ಶಿಲ್ಪಾವಶೇಷಗಳನ್ನು ಗುಲಬರ್ಗಾದಲ್ಲಿರುವ ರಾಜ್ಯ ವಸ್ತು ಸಂಗ್ರಹಾಲಯದಲ್ಲಿ ನೋಡಬಹುದಾಗಿದ್ದು, ಇಂತಹ ಅಸಂಖ್ಯಾತ ಶಿಲ್ಪಗಳನ್ನು ನಾಡಿನ ವಿವಿಧ ಸಂಗ್ರಹಾಲಯಗಳಲ್ಲೂ ಕಾಣಬಹುದಾಗಿದೆ. ಚಂದ್ರಲಾ ಪರಮೇಶ್ವರಿ ಗುಡಿಯ ಮುಂದಿರುವ ಮರದ ಬದಿಯಲ್ಲಿರುವ ಬೋಧಿ ವೃಕ್ಷ, ಬರಿದಾದ ಸಿಂಹಾಸನ ಹಾಗೂ ಪಾದುಕೆಯ ಸುಂದರ ಕೆತ್ತನೆಯುಳ್ಳ ಬೌದ್ಧ ಶಿಲ್ಪ ಫಲಕ ಹಾಗೂ ಅದರ ಸನಿಹವೇ ಇರುವ ಶಾಸನವುಳ್ಳ ವೀರಗಲ್ಲುಗಳು ಉಲ್ಲೇಖನೀಯ. ಸನ್ನತಿಯಿಂದ ಎರಡು ಕಿ.ಮೀ. ದೂರದಲ್ಲಿರುವ ಕನಕನಹಳ್ಳಿಯಲ್ಲಿ ಸ್ತೂಪಗಳಿದ್ದ ಅಂಶವನ್ನು ಪುತಾತತ್ವಜ್ಞರು ಗುರುತಿಸಿ ಉತ್ಖನನ ನಡೆಸಿ ಹಲವಾರು ಮಹತ್ವದ ಅಂಶಗಳನ್ನು ಬೆಳಕಿಗೆ ತಂದಿದ್ದಾರೆ. ಸನ್ನತಿಯ ಚಂದ್ರಲಾಪರಮೇಶ್ವರಿ ದೇವಾಲಯವು ಎತ್ತರವಾದ ಮಣ್ಣಿನ ದಿಬ್ಬದ ಮೇಲಿದ್ದು, ದೇವಾಲಯ ಸಂಕೀರ್ಣದ ವೈಜ್ಞಾನಿಕ ಅಗೆತ, ಮೌರ್ಯರ ಆಳ್ವಿಕೆಗೆ ಸಂಬಂಧಿಸಿದಂತೆ ಮಹತ್ವದ ಅಂಶಗಳನ್ನು ಹೊರಗಿಡುವ ಸಾಧ್ಯತೆ ಅಧಿಕವಾಗಿದ್ದು, ಕೇಂದ್ರ ಹಾಗೂ ರಾಜ್ಯ ಪುರಾತತ್ವ ಇಲಾಖೆಗಳು ಈಗಾಗಲೇ ಸನ್ನತಿ ಪರಿಸರದಲ್ಲಿ ವೈಜ್ಞಾನಿಕ ಅಗೆತದಲ್ಲಿ ತೊಡಗಿದ್ದು, ಅಶೋಕ ಪೂರ್ವ ಕಾಲಕ್ಕೆ ಸೇರಿದ ಬೌದ್ಧ ಯಕ್ಷಿಯ ಕೆತ್ತನೆಯುಳ್ಳ ಕಲ್ಲಿನ ಪದಕ, ರೋಮನ್ ಚಕ್ರವರ್ತಿ ಟೈಬಿರಿಯಷನ ಚಿತ್ರವುಳ್ಳ ಜೇಡಿ ಮಣ್ಣಿನ ಪದಕಗಳು ಪತ್ತೆಯಾಗಿವೆ. ಸನ್ನತಿಯ ಎದುರು ದಂಡೆಯ ಮೇಲಿರುವ ಹುರಸಗುಂಡಗಿಯಲ್ಲಿ ಬೌದ್ಧ ಸಂಬಂಧವುಳ್ಳ ಎರಡು ದಿಬ್ಬಗಳನ್ನು ಗಮನಿಸಲಾಗಿದ್ದು, ಇಲ್ಲಿಂದ ವರದಿಯಾಗಿರುವ ಬೌದ್ಧ ಅವಶೇಷಗಳಲ್ಲಿ ಆಸೀನ ಭಂಗಿಯಲ್ಲಿರುವ ಗಜಲಕ್ಷ್ಮಿಯ ಸುಂದರ ಕೆತ್ತನೆಯುಳ್ಳ ಪದಕವಿರುವ ಕೊರಳ ಹಾರವನ್ನು ಧರಿಸಿರುವ ಯಕ್ಷನ ಶಿಲ್ಪ ಮಹತ್ವದ್ದಾಗಿದ್ದು, ದಕ್ಷಿಣ ಭಾರತದಲ್ಲಿ ಲಭ್ಯವಿರುವ ಗಜಲಕ್ಷ್ಮಿಯ ಅತ್ಯಂತ ಪ್ರಾಚೀನ ಉದಾಹರಣೆ ಇದೆಂಬ ಅಂಶ ಗಮನಾರ್ಹವಾಗಿದೆ. ಈ ಅಗೆತಗಳು ಸನ್ನತಿ ಹಾಗೂ ಕನಗನಹಳ್ಳಿಗಳಲ್ಲಿ ಸ್ತೂಪಗಳಿದ್ದ ಅಂಶವನ್ನು ಸ್ಥಿರಪಡಿಸಿವೆ. ಇವಷ್ಟೆ ಅಲ್ಲದೆ, ಶಾತವಾಹನರ ಕಾಲದ ಸೀಸ, ಪ್ರೋಟಿನ್ ಹಾಗೂ ತಾಮ್ರದ ನಾಣ್ಯಗಳೂ ಸೇರಿದಂತೆ ವೈವಿಧ್ಯಮಯ ವಸ್ತುಗಳು ಸನ್ನತಿಯಲ್ಲಿ ಲಭಿಸಿವೆ. ಊರಿಂದ ಸುಮಾರು ಒಂದೂವರೆ ಕಿ.ಮೀ. ದಕ್ಷಿಣಕ್ಕೆ ಭೀಮಾ ತೀರದ ಮೇಲೆ 'ರಣಮಂಡಲ'

ಪ್ರದೇಶದಲ್ಲಿ ರಾಜ್ಯ ಪುರಾತತ್ವ ಇಲಾಖೆಯವರು ಉತ್ಖನನ ಕೈಗೊಂಡು ಹಳೆ ಶಿಲಾಯುಗ ಹಾಗೂ ಸೂಕ್ಷ್ಮಶಿಲಾಯುಗದ ಅವಶೇಷಗಳೂ ಸೇರಿದಂತೆ, ಶಾತವಾಹನರ ಕಾಲದ್ದೆಂದು ಹೇಳುವ ಇಟ್ಟಿಗೆಯಿಂದ ನಿರ್ಮಾಣಗೊಂಡಿರುವ ಎರಡು ಸುತ್ತಿನ ಕೋಟೆಯ ಅವಶೇಷ, ರಾಜವಾಡೆ ಹಾಗೂ ಇಟ್ಟಿಗೆಯಿಂದ ನಿರ್ಮಿಸಿರುವ ವೃತ್ತಾಕಾರದ ಎಂಟು ಹಗೆ (ನೆಲ ಕಣಜ)ಗಳು ಹಾಗೂ ಚೌಕಾಕಾರದ ಐದು ಕೋಣೆಗಳಿದ್ದ ಕಟ್ಟಡದ ವಿನ್ಯಾಸವನ್ನು ಗುರುತಿಸುವಲ್ಲಿ ಯಶಸ್ವಿಯಾಗಿದ್ದಾರೆ. ರೋಮನ್ ಮಡಿಕೆ ಚೂರುಗಳು, ಮೌರ್ಯ-ಶಾತವಾಹನ ಮಡಿಕೆ ಚೂರುಗಳೊಂದಿಗೆ ಲಭಿಸಿರುವುದನ್ನು ನೋಡಿದಾಗ ಸನ್ನತಿ ಹಿಂದೆ ಕೇವಲ ಬೌದ್ಧ ಯಾತ್ರಾಸ್ಥಳವಷ್ಟೇ ಆಗಿರದೆ ಪ್ರಮುಖ ವಾಣಿಜ್ಯ ಕೇಂದ್ರವೂ ಆಗಿತ್ತೆಂಬ ಅಂಶ ಗೊತ್ತಾಗುತ್ತದೆ. ಇಲ್ಲಿಂದ ವರದಿಯಾಗಿರುವ ರೋಮನ್ ಪದಕ ಹಾಗೂ ರೋಮನ್ ಮಡಿಕೆ ಚೂರುಗಳಿಂದ ಹಿಂದೆ ಸನ್ನತಿಯು ರೋಮನ್ ಸಂಪರ್ಕ ಹೊಂದಿದ್ದ ಮಹತ್ವದ ಅಂಶ ಗೊತ್ತಾಗುತ್ತದೆ.

ಶಿರವಾಳ ಮಾರ್ಗವಾಗಿ ಸನ್ನತಿಯನ್ನು ತಲುಪಲು ಭೀಮಾನದಿಯನ್ನು ದಾಟುವ ಸ್ಥಳದಲ್ಲಿರುವ ಕಟ್ಟೆಯನ್ನು ಸ್ಥಳೀಕರು 'ಸೇತುರಾಜನ ಕಟ್ಟೆ' ಎಂದು ಕರೆಯುತ್ತಾರೆ. ಇದು 'ಶಾತವಾಹನ ಕೋಟೆ'ಯ ಅಶುದ್ಧ ರೂಪವಾಗಿರಬೇಕೆಂಬ ಅಭಿಪ್ರಾಯವಿದೆ. ಪೌರಾಣಿಕವಾಗಿ ಶ್ರೀರಾಮ ಹಾಗೂ ಸೀತಾದೇವಿಯರು ನಾರಾಯಣ ಹಾಗೂ ಚಂದ್ರವದರಾಗಿ ಇಲ್ಲಿ ಜನಿಸಿ ಜೀವಿಸುತ್ತಿದ್ದಾಗ ಸೇತುರಾಜನು ಚಂದ್ರವದಳಾಗಿ ಜನಿಸಿದ್ದ ಸೀತೆಯನ್ನು ಮೋಹಿಸಿ ಕೆಡಿಸಲೆತ್ನಿಸಿದಾಗ ಭೃಂಗ ರೂಪದಲ್ಲಿ ಚಂದ್ರಲಾ ದೇವಿಯು ಬಂದು ದೈತ್ಯ ಸೇತುವನ್ನು ಸಂಹರಿಸಿ ದೇವಿಯ ಪಾದದಲ್ಲಿ ಐಕ್ಯಲಾದಳೆಂಬ ನಂಬಿಕೆ ಇದ್ದು, ಇಂದಿಗೂ ದೇವಿಯ ಪಾದದ ಬಳಿ ಇರುವ ಐದು ಗುಳಿಗಳನ್ನು ಭೃಂಗಗಳು ಐಕ್ಯಗೊಂಡ ಸ್ಥಳವೆಂದು ತೋರಿಸುವ ವಾಡಿಕೆಯಿದೆ. ಸನ್ನತಿಯಿಂದ ಶಿರವಾಳಕ್ಕೆ ಹೋಗುವ ದಾರಿಯಲ್ಲಿ ಹೊಳೆ ದಂಡೆಯ ಮೇಲೆ ಸುಮಾರು ೧೦-೧೧ನೇ ಶತಮಾನಕ್ಕೆ ಸೇರಿದ ಸೋಮೇಶ್ವರ ದೇವಾಲಯವಿದೆ. ಹಲವಾರು ಸೇರ್ಪಡೆಗಳನ್ನು ಹೊಂದಿರುವ ಈ ದೇವಾಲಯದ ಬಾಗಿಲವಾಡ ಹಾಗೂ ಕಂಬಗಳು ಗಮನಾರ್ಹವಾಗಿವೆ. ಈ ದೇವಾಲಯದ ಬದಿಯಲ್ಲೇ ಇರುವ ಇದೇ ಕಾಲಕ್ಕೆ ಸೇರಿದ ಇನ್ನೊಂದು ದೇಗುಲ, ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಪೀಠವಷ್ಟೇ ಉಳಿದಿದ್ದು, ಇದರ ಬಾಗಿಲ ಚೌಕಟ್ಟು ಐದು ಅಲಂಕಾರಿಕ ಶಾಖಾ ಪಟ್ಟಿಕೆಗಳನ್ನು ಹೊಂದಿದೆ. ನವರಂಗಕ್ಕೆ ಎರಡು ಪಾರ್ಶ್ವದಿಂದಲೂ ಪ್ರವೇಶವಿದ್ದು ನವರಂಗದ ಮುಂಭಾಗದ ಭಿತ್ತಿಯನ್ನು ಆನೆ, ಸಿಂಹ, ಹಂಸ ಮುಂತಾದವುಗಳಿಂದ ಅಲಂಕೃತಗೊಂಡ ಜಾಲಂದ್ರದಿಂದ ಮುಚ್ಚಿದ್ದಾರೆ.

ಊರಿಂದ ಸುಮಾರು ಒಂದೂವರೆ ಕಿ.ಮೀ. ಅಂತರದಲ್ಲಿ ಭೀಮಾ ನದಿ ದಂಡೆಯ ಮೇಲೆ ಚಂದ್ರಲಾ ಪರಮೇಶ್ವರಿಯ ದೇವಾಲಯವಿದೆ. ಮೌರ್ಯರ ಕಾಲಕ್ಕೆ ಸೇರಿದ ಅವಶೇಷಗಳನ್ನು ಹೊಂದಿರಬಹುದಾದ ಮಣ್ಣಿನ ದಿಬ್ಬದ ಮೇಲೆ ಇರುವ ಈ ದೇವಾಲಯವು ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಾಣಗೊಂಡು ಕಲ್ಯಾಣದ ಚಾಳುಕ್ಯರ ಆಳ್ವಿಕೆಯಲ್ಲಿ ವಿಸ್ತಾರಗೊಂಡಿರುವಂತೆ ತೋರುತ್ತದೆ. ಈ ದೇವಾಲಯದ ಪ್ರಾಕಾರಕ್ಕೆ ಇರುವ ಮಹಾದ್ವಾರ ಹಾಗೂ ರಾಜ ಗೋಪುರಗಳನ್ನು ಬಿಜಾಪುರದ ಅಣ್ಣಾ ಸಾಹೇಬ್ ದೇಶಪಾಂಡೆರವರು ೧೯೬೦ರಲ್ಲಿ ದೇವಿಗೆ ಸೇವಾ ರೂಪವಾಗಿ ಕಟ್ಟಿಸಿಕೊಟ್ಟಿದ್ದಾರೆ. ದ್ರಾವಿಡ ಶೈಲಿಯಲ್ಲಿರುವ ಈ ಗೋಪುರವು ಸುಂದರ ಶಿಲ್ಪಗಳಿಂದಾಗಿ ಚಿತ್ತಾಕರ್ಷಕವಾಗಿದೆ. ವಿಶಾಲವಾದ ಪ್ರಾಕಾರದಲ್ಲಿ ಪೂರ್ವಾಭಿಮುಖವಾಗಿರುವ ಈ ದೇವಾಲಯವು ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಇದಕ್ಕೆ ಸೇರಿದಂತೆ ಮುಂದೆ ವಿಶಾಲವಾದ ಸಭಾ ಮಂಟಪವಿದೆ. ಶ್ರೀ ಚಕ್ರದ ತಳವಿನ್ಯಾಸವನ್ನುಳ್ಳ ಈ ಗರ್ಭಗೃಹವನ್ನು ಪದ್ಮಾಕಾರದ ಶಿಖರದಿಂದ ಅಲಂಕರಿಸಲಾಗಿದ್ದು, ಗರ್ಭಗೃಹದಲ್ಲಿ ಸರ್ಪ, ಮಹಾಕಾಳಿ, ಲಕ್ಷ್ಮಿ ಹಾಗೂ ಸರಸ್ವತಿಯರ ಕೆತ್ತನೆಯುಳ್ಳ ಕಂಚಿನ ಪ್ರಭಾವಳಿ ಇದ್ದು, ಪ್ರಭಾವಳಿಯಲ್ಲಿ ಧ್ವಜ, ಶಂಖ ಹಾಗೂ ಚಕ್ರಗಳಿವೆ. ಇದರ ಮುಂದೆ ಬಲತುದಿಯಲ್ಲಿ ಮಹಾಕಾಳಿ, ನಡುವೆ ಶ್ರೀ ಚಕ್ರ ಹಾಗೂ ಎಡಕ್ಕೆ ಚಂದ್ರಲಾ ಪರಮೇಶ್ವರಿಯ ಕಿರು ಶಿಲ್ಪಗಳಿದ್ದು, ಈ ದೇವಿಯೇ ಇಲ್ಲಿಯ ಪ್ರಧಾನ ದೇವತೆಯಾಗಿದ್ದಾಳೆ. ಗರ್ಭಗೃಹದ ಬಾಗಿಲ ಚೌಕಟ್ಟು ನಾಲ್ಕು ಶಾಖೆಯ ಅಲಂಕಾರಿಕ ಪಟ್ಟಿಕೆಯನ್ನು ಹೊಂದಿದ್ದು, ಗಣಪತಿ ಹಾಗೂ ಮಹಿಷಮರ್ದಿನಿಯರ ಕೆತ್ತನೆಗಳಿವೆ. ನವರಂಗದ ಪ್ರವೇಶ ದ್ವಾರವೂ ನಾಲ್ಕು ಶಾಖೆಯ ಅಲಂಕಾರಿಕ ಪಟ್ಟಿಕೆಯನ್ನು ಹೊಂದಿದೆ. ಇದರ ಮುಂದಿರುವ ಸಭಾ ಮಂಟಪದಲ್ಲಿ ಸುಂದರವಾದ ಅಲಂಕಾರಿಕ ಕೆತ್ತನೆಯಿಂದ ಕೂಡಿದ ಕಂಬಗಳು ಗಮನ ಸೆಳೆಯುತ್ತವೆ. ಈ ದೇವಾಲಯದ ಪ್ರಾಕಾರದಲ್ಲಿರುವ ಮಂಟಪವನ್ನು ರಾಷ್ಟ್ರಕೂಟ-ಕಲ್ಯಾಣದ ಚಾಳುಕ್ಯ ಕಂಬಗಳನ್ನು ಬಳಸಿ ಪುನರ್ ನಿರ್ಮಿಸಲಾಗಿದ್ದು, ಗುಡಿಯ ಹಿಂಬದಿಯಲ್ಲಿ ಅಶೋಕನ ಶಾಸನವಿರುವ ಕಲ್ಲು, ಕಾಳಿ ಶಿಲ್ಪ

ಹಾಗೂ ಹಲವಾರು ಶಾತವಾಹನ ಶಿಲ್ಪಗಳನ್ನು ನೋಡಬಹುದಾಗಿದೆ. ಸಂಕ್ರಮಣದ ಜಳಕ, ಶ್ರಾವಣ ಮಾಸದ ಕುಂಕುಮಾರ್ಚನೆ ಹಾಗೂ ನವರಾತ್ರಿಯ ದೀಪೋತ್ಸವಕ್ಕೆ ಈ ಕ್ಷೇತ್ರ ಹೆಸರಾಗಿದ್ದು, ಧವನದ ಹುಣ್ಣಿಮೆಯಿಂದ ಪಂಚಮಿಯವರೆಗೆ ದೇವಿಯ ರಥೋತ್ಸವ ನಡೆಯುತ್ತಿದ್ದು ಶ್ರಾವಣ ಮಾಸದಲ್ಲಿ ಒಂಭತ್ತು ದಿನದ ಜಾತ್ರೆಯಾಗುತ್ತದೆ. ಈ ಗುಡಿಯ ಪ್ರಾಕಾರದಲ್ಲೇ ಎಡಕ್ಕೆ ಸ್ವಲ್ಪ ಹಿಂದಕ್ಕಾದಂತೆ ಇರುವ ಆದಿಶಕ್ತಿ ಗುಡಿಯು ಜೀರ್ಣೋದ್ಧಾರಗೊಂಡಿದ್ದು, ಈ ಗುಡಿಯ ಜೀರ್ಣೋದ್ಧಾರದ ಸಂದರ್ಭದಲ್ಲೇ ಕಾಳಿಕಾ ಪೀಠದ ಮೇಲಿದ್ದ ಅಶೋಕನ ತ್ರುಟಿತ ಶಾಸನಗಳು ಪತ್ತೆಯಾಗಿದ್ದು ಅದನ್ನಿಂದು ದೇವಾಲಯದ ಪ್ರಾಕಾರ ಮಂಟಪದಲ್ಲಿ ಕೇಂದ್ರ ಪುರಾತತ್ವ ಇಲಾಖೆಯವರು ಸಂರಕ್ಷಿಸಿಟ್ಟಿದ್ದಾರೆ. ಇಲ್ಲಿದ್ದ ಸುಮಾರು ಎಂಟು ಅಡಿ ಎತ್ತರದ ಕಾಳಿಕಾ ಮೂರ್ತಿಯು ಎರಡು ತುಂಡಾಗಿದ್ದು, ರಾಷ್ಟ್ರಕೂಟರ ಕಾಲದ ಕೆತ್ತನೆಯಾಗಿರುವಂತೆ ತೋರುತ್ತದೆ. ಹೊಳೆಯಾಚೆಯಿರುವ ಹುರಸಗುಂಡಗಿ, ಅಣಬಿ, ಶಿರವಾಳ, ಹೊಳೆಯೀಚೆ ಇರುವ ಕನಗನಹಳ್ಳಿ ಪ್ರದೇಶಗಳು ಶಾತವಾಹನರ ಕಾಲದ ಅವಶೇಷಗಳನ್ನು ಹೊಂದಿದ್ದು, ಬೌದ್ಧ ಧರ್ಮದ ಪ್ರಧಾನ ನೆಲೆಗಳಾಗಿರುವ ಇವುಗಳ ನಡುವೆ ಇರುವ ಸನ್ನತಿಯು ಚಾರಿತ್ರಿಕವಾಗಿ ಅತ್ಯಂತ ಮಹತ್ವ ಪಡೆದಿದ್ದು, ಮುಳುಗಡೆಯಾಗುವುದರೊಳಗೆ ಹೆಚ್ಚಿನ ಉತ್ಖನನಗಳನ್ನು ಕೈಗೊಂಡು ಮಹತ್ವದ ಅಂಶಗಳನ್ನು ಬೆಳಕಿಗೆ ತರಬೇಕಾಗಿದೆ.

**ಸುಂಬಡ** (೨೯೧)ವು ತಾಲೂಕು ಕೇಂದ್ರವಾದ ಜೇವರ್ಗಿಯಿಂದ ನೈಋತ್ಯಕ್ಕೆ ೫೦ ಕಿ.ಮೀ., ಯಡ್ರಾಮಿಯಿಂದ ಆಗ್ನೇಯಕ್ಕೆ ೫ ಕಿ.ಮೀ. ದೂರದಲ್ಲಿರುವ ಕಲ್ಯಾಣದ ಚಾಳುಕ್ಯರ ಕಾಲದ ದೇವಾಲಯಗಳನ್ನುಳ್ಳ ಚಾರಿತ್ರಿಕ ಮಹತ್ವದ ಊರು. ಇಲ್ಲಿಂದ ಈವರೆಗೆ ಎರಡು ಕಿರು ಶಾಸನಗಳು ವರದಿಯಾಗಿದ್ದು, ಇವುಗಳಲ್ಲಿ ಒಂದು 'ಸುಮುಡ'ದ ಪ್ರಭು ಬಸವೇಶ್ವರ ದೇವರಿಗೆ ದತ್ತಿ ಕೊಟ್ಟ ವಿಷಯ ತಿಳಿಸಿದರೆ, ಇನ್ನೊಂದು ಯಾದವ ರಾಮದೇವನ ಕಾಲಕ್ಕೆ ಸೇರಿದ್ದು ೧೨೬೩ರಲ್ಲಿ ಅರಸನು ಎಳರಾವೆಯ ರಾಮೇಶ್ವರ ದೇವರ್ಗೆಂದು ೩೦ ಮತ್ತರು ಭೂಮಿಯನ್ನು ದಾನವಾಗಿ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಬೇರೆಡೆಯಿಂದ ವರದಿಯಾಗಿರುವ ಸುಮಾರು ೧೨ನೇ ಶತಮಾನದ ಶಾಸನದಲ್ಲಿ ಈ ಊರಿನ ಹೆಸರು ಸಿಂಬಡ ಎಂದು ಉಲ್ಲೇಖಿತಗೊಂಡಿದೆ. ಸುಂಬಡದಲ್ಲಿ ಮೂರು ಪ್ರಾಚೀನ ದೇವಾಲಯಗಳಿಗೆ. ಇವುಗಳಲ್ಲಿ ಊರ ನಡುವೆ ಇರುವ ಮಲ್ಲಿಕಾರ್ಜುನ ದೇಗುಲವು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು ಚಿತ್ತಾಕರ್ಷಕವಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಬಾಗಿಲವಾಡದ ಇಕ್ಕೆಲಗಳಲ್ಲಿ ವೈಷ್ಣವ ದ್ವಾರಪಾಲಕರಿದ್ದಾರೆ. ನವರಂಗದಲ್ಲಿ ನಾಲ್ಕು ದೇವಕೋಷ್ಠಗಳಿದ್ದು, ನಡುವಣ ಛತ್ತು ಸುಂದರವಾದ ಕಮಲವನ್ನು ಹೊಂದಿದೆ. ನವರಂಗದ ಮುಂಭಾಗವು ಕಕ್ಷಾಸನವನ್ನು ಹೊಂದಿದ್ದು, ಹಿಂಬದಿಯಲ್ಲಿ ಆಕರ್ಷಕವಾದ ಉಬ್ಬು ಕೆತ್ತನೆಯಿದ್ದು ಜೊತೆಗೆ ಮಿಥುನ ಶಿಲ್ಪಗಳೂ ಇವೆ. ನವರಂಗದ ಕಂಬಗಳು ಚಿಕಣಿ ಕೆತ್ತನೆಯನ್ನು ಹೊಂದಿದ್ದು ಕಲಾತ್ಮಕವಾಗಿವೆ. ಈ ದೇವಾಲಯವು ಸುಮಾರು ೧೨ನೇ ಶತಮಾನದ ರಚನೆಯಾಗಿರಬೇಕೆಂದು ಊಹಿಸಬಹುದಾಗಿದೆ. ಊರಲ್ಲಿಂದು ಮಸೀದಿ ಎಂದು ಕರೆಯಲ್ಪಡುವ ಕಟ್ಟಡವು ೧೨ನೇ ಶತಮಾನದ ದೇವಾಲಯವಾಗಿದೆ. ಉತ್ತರಾಭಿಮುಖವಾಗಿರುವ ಈ ಗುಡಿಯು ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ನವರಂಗವನ್ನು ಪೂರ್ವ ದಿಕ್ಕಿನಿಂದ ಪ್ರವೇಶಿಸಲು ದ್ವಾರವಿದೆ. ಹಿಂದೆ ಇದು ಶೈವ ಗುಡಿಯಾಗಿದ್ದು ಕಾಲಾಂತರದಲ್ಲಿ ಮಸೀದಿಯಾಗಿ ಪರಿವರ್ತನೆಗೊಂಡಿರುವಂತೆ ತೋರುತ್ತದೆ.

ಊರಲ್ಲಿರುವ ಬಸವಣ್ಣ ಹಾಗೂ ಈಶ್ವರನ ಗುಡಿಗಳೂ ಕೂಡ ಸುಮಾರು ೧೨ನೇ ಶತಮಾನದ ದೇವಾಲಯಗಳಾಗಿದ್ದು, ಈಗ ಶಿಥಿಲಾವಸ್ಥೆಯಲ್ಲಿವೆ. ಈಶ್ವರ ದೇವಾಲಯದ ಬಳಿ ಪ್ರಾಚೀನ ಲಿಂಗ, ಸಪ್ತ ಮಾತೃಕಾ ಪಟ್ಟಿಕೆ ಹಾಗೂ ಸೂರ್ಯ ಪೀಠಗಳಿವೆ. ಊರ ಹೊರಗೆ ಉತ್ತರಕ್ಕೆ ಇರುವ ಸೋಮನಾಥ ಗುಡಿಯೂ ಸುಮಾರು ೧೨ನೇ ಶತಮಾನದಷ್ಟು ಪ್ರಾಚೀನ ದೇಗುಲವಾಗಿದ್ದು, ಗರ್ಭಗೃಹ, ತೆರೆದ ಅಂತರಾಳ ಹಾಗೂ ಕಕ್ಷಾಸನವುಳ್ಳ ತೆರೆದ ನವರಂಗಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಅಂತರಾಳದಲ್ಲಿ ೧೩ನೇ ಶತಮಾನದ ವೀರಗಲ್ಲಿದೆ. ಪೌರಾಣಿಕವಾಗಿ ಶುಂಭನ ಬೀಡು ಇದಾಗಿದ್ದರಿಂದ ಊರ ಹೆಸರು ಸುಂಬಡ ಎಂದಾಯಿತೆಂಬ ಐತಿಹ್ಯವಿದ್ದು, ಸಮೀಪದ ಗುಡ್ಡದ ಮೇಲೆ ದುಬಲಾಂಬ ದೇವಿಯ ಗುಡಿ ಇದೆ. ಉಳಿದಂತೆ ಊರಲ್ಲಿ ಹನುಮಂತ ಹಾಗೂ ಚಾಮುಂಡಿ ಗುಡಿಗಳಿದ್ದು, ಮಸೀದಿ ಹಾಗೂ ದರ್ಗಾಗಳಿವೆ. ಹನುಮಂತನ ಗುಡಿಯ ಮುಂದೆ ಎರಡು ವೀರ ಮಾಸ್ತಿಗಲ್ಲು ಹಾಗೂ ಮಹಿಷ ಮರ್ದಿನಿ ಶಿಲ್ಪಗಳಿವೆ.

**ಸುರಪುರ (ಶೋರಾಪುರ)** (೩೦೫೮೯)ವು ತಾಲೂಕು ಕೇಂದ್ರವಾಗಿದ್ದು ಜಿಲ್ಲಾ ಕೇಂದ್ರವಾದ ಗುಲಬರ್ಗಾದಿಂದ ದಕ್ಷಿಣಕ್ಕೆ ೧೧೦ ಕಿ.ಮೀ., ಬೆಂಗಳೂರಿನಿಂದ ಉತ್ತರಕ್ಕೆ ೫೦೦ ಕಿ.ಮೀ., ಯಾದಗಿರಿ ರೈಲು ನಿಲ್ದಾಣದಿಂದ ಪಶ್ಚಿಮಕ್ಕೆ ೫೦ ಕಿ.ಮೀ. ದೂರದಲ್ಲಿ ಇರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ವಿಜಯನಗರ ಪತನಾ ನಂತರ ತಲೆ ಎತ್ತಿದ್ದ ಪಾಳೇಗಾರರಲ್ಲಿ ಗೋಸಲ ವಂಶದ ಸುರಪುರದ ನಾಯಕರು ಅಗ್ರಗಣ್ಯರಾಗಿದ್ದು, ಕ್ರಿ.ಶ. ೧೬೩೬ರಿಂದ ೧೮೫೮ ರವರೆಗೆ, ಆರಂಭದಲ್ಲಿ ವಾಗಿಣಗೇರಿಯನ್ನು, ನಂತರದಲ್ಲಿ ಸುರಪುರವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ೧೩ ಮಂದಿ ನಾಯಕರಲ್ಲಿ ಔರಂಗಜೇಬನೊಂದಿಗೆ ಹೋರಾಡಿದ ಗಡ್ಡಿ ಪಿಡ್ಡ ನಾಯಕ; ವೆಂಕಟಪ್ಪ ನಾಯಕ, ಇಮ್ಮಡಿ ವೆಂಕಟಪ್ಪ ನಾಯಕ ಹಾಗೂ ನಾಲ್ಕನೆಯ ವೆಂಕಟಪ್ಪ ನಾಯಕರು ಪ್ರಮುಖರಾಗಿದ್ದು, ೧೮೫೮ರಲ್ಲಿ ರಾಷ್ಟ್ರಾದ್ಯಂತ ಎದ್ದ ಮೊದಲ ಸ್ವಾತಂತ್ರ್ಯ ಸಂಗ್ರಾಮ ಚಳುವಳಿಯ ಅಲೆಯಲ್ಲಿ ಭೋರ್ಗರೆದು ಗರ್ಜಿಸಿ ಹೋರಾಡಿದವರಲ್ಲಿ ರಾಜಾ ವೆಂಕಟಪ್ಪ ನಾಯಕನ ಹೆಸರು ನಾಡಿನ ಇತಿಹಾಸದಲ್ಲಿ ಅಜರಾಮರವಾಗಿ ಉಳಿದಿದೆ. ಔರಂಗಜೇಬನ ದಾಳಿಗೆ ನಲುಗಿ ರಾಜಧಾನಿ ವಾಗಿಣಗೇರಿಯನ್ನು ಕಳೆದುಕೊಂಡ ಪಿತಾಂಬರ ಬಹರೀ ಪಿಡ್ಡ ನಾಯಕ (ಎರಡನೇ ಗಡ್ಡಿ ಪಿಡ್ಡ ನಾಯಕ)ನು, ಮರು ಹೋರಾಟದಲ್ಲಿ ಔರಂಗಜೇಬನನ್ನು ಹಿಮ್ಮೆಟ್ಟಿಸುವಲ್ಲಿ ಯಶಸ್ವಿಯಾದರೂ ವಾಗಿಣಗೇರಿಗೆ ಬದಲು ಸುರಪುರವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ. ತತ್ಪರಿಣಾಮವಾಗಿ ಸುರಪುರವು ತ್ವರಿತ ಗತಿಯಲ್ಲಿ ಅಭಿವೃದ್ಧಿ ಹೊಂದಲು ಸಾಧ್ಯವಾಯಿತು.

ನಿಷ್ಠಿ ಮನೆತನಕ್ಕೆ ಸೇರಿದ ಕಡಲಪ್ಪ ಹಾಗೂ ವೀರಪ್ಪ ಸಹೋದರರು ಸುರಪುರದ ನಾಯಕರ ಆಸ್ಥಾನದಲ್ಲಿ ೧೭೫೨ ರಿಂದ ೧೮೦೨ ರ ಅವಧಿಯಲ್ಲಿ ಸಚಿವರಾಗಿದ್ದು, ಗುಡಿ, ಮಠ, ಕೆರೆ, ಬಾವಿ, ದಾಸೋಹ ಛಾವಣಿ ಮಳಿಗೆ, ನ್ಯಾಯದ ಕಟ್ಟೆ, ಬಿಘೇದ ಕಟ್ಟೆಗಳೇ ಮುಂತಾದ ಸಮಾಜ ಕಲ್ಯಾಣ ಕಾರ್ಯಗಳಿಗೆ ಪ್ರಸಿದ್ಧರಾಗಿದ್ದು, ಅಂತಹ ನಿರ್ಮಾಣಗಳನ್ನು ಸುರಪುರ, ತಿಂಥಿಣಿ, ದೇವರಗೋನಾಳ, ಯಾಳಗಿ, ಸಗರ, ಹೊಸಕೆರೆ ಮುಂತಾದೆಡೆ ನೋಡಬಹುದಾಗಿದೆ.

ಗುಡ್ಡಗಾಡುಗಳಿಂದ ಆವೃತ್ತವಾಗಿರುವ ಗುಡ್ಡವೊಂದರ ಮೇಲಿರುವ ಸುರಪುರವು ಹಿಂದೆ ಸಗರ ನಾಡಿಗೆ ಸೇರಿದ್ದು, ನಾಯಕರ ಕಾಲದಲ್ಲಿ ರಾಜಧಾನಿ ಪಟ್ಟಣವಾಗಿ ಮೆರೆಯಿತು. ಇಲ್ಲಿಂದ ಪ್ರಾಗೈತಿಹಾಸ ಕಾಲದ ಶಿಲಾವೃತ್ತ ಸಮಾಧಿಗಳು ವರದಿಯಾಗಿರುವುದು ಮಹತ್ವದ ಅಂಶವಾಗಿದೆ. ಇದರ ಪ್ರಾಚೀನ ಹೆಸರು ಸುರಪುರ ಆಗಿದ್ದು ನಿಜಾಮರ ಆಳ್ವಿಕೆಯಲ್ಲಿ 'ಶೋರಾಪುರ' ಎಂದು ರೂಪಾಂತರಗೊಂಡಿದ್ದು, ಈಗ ಎರಡೂ ರೂಪಗಳು ರೂಢಿಯಲ್ಲಿವೆ. ನಿಸರ್ಗದತ್ತವಾದ ರಕ್ಷಣೆಯನ್ನುಳ್ಳ ಈ ಊರಿನಿಂದ ಈವರೆಗೆ ನಾಲ್ಕು ಪರ್ಷಿಯನ್ ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಅಷೂರಖಾನದಲ್ಲಿರುವ ೧೮೩೯ರ ಶಾಸನವು ರಾಜ ಪೆದ್ದ ನಾಯಕ ಬಹರೀಯನ್ನು ಉಲ್ಲೇಖಿಸುತ್ತ ದೇವದುರ್ಗದ ನಿವಾಸಿಯಾದ ಸತಾರ್ ಸಾಹೇಬನ ಮಗನಾದ ರಾಜಾ ಸಾಹೇಬನು ಈ ಅಷೂರಖಾನವನ್ನು ನಿರ್ಮಿಸಿದನೆಂದು ಹೇಳಿದರೆ, ಮುನ್ಸಿಫ್ ಕೋರ್ಟ್ ಗೋಡೆಯಲ್ಲಿರುವ ಶಾಸನ ಸುಮಾರು ೧೭ನೇ ಶತಮಾನಕ್ಕೆ ಸೇರಿದ್ದ ಪದ್ಯವೊಂದಾಗಿರುವಂತೆ ತೋರುತ್ತದೆ.

ಸುರಪುರದಲ್ಲಿ ಸುರಪುರದ ನಾಯಕರ ಕಾಲದ ಕೋಟೆ, ಕೊತ್ತಲ, ಅಗಸಿ, ಅರಮನೆ, ಗೋಪಾಲಸ್ವಾಮಿ ಗುಡಿ, ಅಷೂರಖಾನ, ಮಸೀದಿ, ದರ್ಗಾ, ಬಜಾರ್, ಟೇಲರ್‌ನ ಬಂಗಲೆ, ಇಂದಿನ ಮುನ್ಸಿಫ್ ಕೋರ್ಟ್ ಕಟ್ಟಡ ಮುಂತಾದವು ಗಮನಾರ್ಹವಾಗಿವೆ. ಇವುಗಳಲ್ಲಿ ನಾಯಕರ ಅರಮನೆ ಹಾಗೂ ಗೋಪಾಲಸ್ವಾಮಿ ದೇವಾಲಯಗಳು ಆಕರ್ಷಕ ರಚನೆಗಳಾಗಿವೆ. ವಿಶಾಲವಾದ ಸಭಾಮಂಟಪವನ್ನುಳ್ಳ ಗೋಪಾಲಸ್ವಾಮಿ ಗುಡಿಯ ಮೇಲಿರುವ ಸುಂದರವಾದ ಗಾರೆ ಶಿಲ್ಪಗಳು ಗಮನಾರ್ಹವಾಗಿದ್ದು, ಆಕರ್ಷಕವಾಗಿವೆ. ಹೈದರಾಬಾದ್ ನಿಜಾಮರ ಆಳ್ವಿಕೆಯಲ್ಲಿ ಸುರಪುರ ಸಂಸ್ಥಾನದಲ್ಲಿ ಕಮೀಶನರ್ ಆಗಿ ೧೮೪೦ರಿಂದ ರಾಜಾ ವೆಂಕಟಪ್ಪ ನಾಯಕನನ್ನು ಸಿಂಹಾಸನದಲ್ಲಿ ಕೂಡಿಸಿ ಅಧಿಕಾರ ನಡೆಸಿದ ಮೆಡೋಸ್ ಟೇಲರನು ಇಲ್ಲಿ ನಿರ್ಮಿಸಿರುವ ಬಂಗಲೆಯು ಭವ್ಯವಾಗಿದ್ದು, ಅತ್ಯುತ್ತಮ ತಾಂತ್ರಿಕತೆಗೆ ಹೆಸರಾಗಿದ್ದು, ವೀಕ್ಷಕರಲ್ಲಿ ವಿಸ್ಮಯವನ್ನುಂಟುಮಾಡುತ್ತಿದ್ದು, ಇಂದು ಇದು ವಿಶ್ರಾಂತಿ ಗೃಹವಾಗಿ ಬಳಸಲ್ಪಡುತ್ತದೆ. ಗುಲಬರ್ಗಾ ಜಿಲ್ಲೆಯ ಹಲವಾರು ಪ್ರಾಗೈತಿಹಾಸಿಕ ನೆಲೆಗಳನ್ನು ಬೆಳಕಿಗೆ ತಂದ ಕೀರ್ತಿ ಮೆಡೋಸ್ ಟೈಲರ್‌ನದಾಗಿದೆ. ಇಲ್ಲಿಯ ಅಷೂರಖಾನವು ಸುಂದರ ರಚನೆಯಾಗಿದ್ದು, ನಮ್ಮ ಗಮನ ಸೆಳೆಯುತ್ತದೆ. ಹಿಂದೆ ಸುರಪುರವು ನಿಜಾಮರ ಸೇನಾಪಡೆಯ ದಂಡು ಪ್ರದೇಶವಾಗಿತ್ತು. ಗೋಪಾಲಸ್ವಾಮಿ ದೇವಾಲಯದ ಜಾತ್ರೆಯು ಗೋಕುಲಾಷ್ಟಮಿಯಂದು ಜರುಗುತ್ತದೆ. ಅಂದು ಇಲ್ಲಿ ೩೫ ಅಡಿ ಎತ್ತರದ ಕಂಬದ ಮೇಲಿಂದ ತೂರುವ ನೀರು ಓಕಳಿ ಹಾಗೂ ಹಾಲೋಕಳಿಗಳನ್ನು ವೀಕ್ಷಿಸಲು ಸುತ್ತಮುತ್ತಲಿನ ಊರಿಂದ

ಸಾವಿರಾರು ಜನ ಬಂದು ಸೇರುತ್ತಾರೆ. ಇಲ್ಲಿ ಕ್ರಿಶ್ಚಿಯನ್ನರಿಗಾಗಿ ಮೆಥಾಡಿಸ್ಟ್ ಇಗರ್ಜಿ ಕೂಡ ಇದೆ. ಸುರಪುರದವರಾದ ಗರುಡಾದ್ರಿಯವರು ಶ್ರೇಷ್ಠ ಚಿತ್ರಕಲಾವಿದರಾಗಿದ್ದು ಸುರಪುರದ ನಾಯಕರಿಂದ ಸನ್ಮಾನಿಸಲ್ಪಟ್ಟಿದ್ದರು. ಸುರಪುರಕ್ಕೆ ಹೊಂದಿಕೊಂಡಂತೆ ಇರುವ ವೆಂಕಟಾಪುರದಲ್ಲಿರುವ ಬಸವಣ್ಣನ ಭವ್ಯ ಶಿಲಾಮೂರ್ತಿಯು ಮೈಸೂರಿನ ಚಾಮುಂಡಿ ಬೆಟ್ಟದಲ್ಲಿರುವ ನಂದಿಯನ್ನು ನೆನಪಿಸುತ್ತದೆ.

**ಸುಲೇಪೇಟೆ** (೫೭೩೦)ಯು ತಾಲೂಕು ಕೇಂದ್ರವಾದ ಚಿಂಚೋಳಿಯಿಂದ ನೈರುತ್ಯಕ್ಕೆ ೧೨ ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಸುಲ್ಲಿಗ್ರಾಮ', 'ಮಹಾ ಅಗ್ರಹಾರ ಸುಲ್ಯಗ್ರಾಮ' ಎಂದೆಲ್ಲಾ ಉಲ್ಲೇಖಿತಗೊಂಡಿರುವ ಈ ಊರಿಂದ ಈವರೆಗೆ ಮೂರು ಶಾಸನಗಳು ವರದಿಯಾಗಿವೆ. ಈಶ್ವರ ದೇವಾಲಯದಲ್ಲಿರುವ ಈ ಶಾಸನಗಳಲ್ಲಿ ೧೦೬೦ರ ಶಾಸನವು ಕಲ್ಯಾಣದ ಚಾಳುಕ್ಯ ಅರಸ ಒಂದನೇಯ ಸೋಮೇಶ್ವರನ ಕಾಲದ್ದಾಗಿದ್ದು, ಸುಲ್ಲಿಗ್ರಾಮ ಎಂಬ ಉಲ್ಲೇಖವಿದ್ದು ಹೆಚ್ಚಿನ ವಿವರಗಳು ಲಭಿಸುವುದಿಲ್ಲ. ಇಲ್ಲಿಯ ಇನ್ನೆರಡು ಶಾಸನಗಳು ಕಲ್ಯಾಣದ ಚಾಲುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲದ್ದಾಗಿದ್ದು,ಒಂದು ಬಹಳ ಹಾಳಾಗಿದ್ದು, ಇನ್ನೊಂದು ಅಗ್ರಹಾರ ಸುಲ್ಯ ಗ್ರಾಮದ ಮಹಾಜನ ಹಾಗೂ ಮಹಾ ಪ್ರಧಾನ ಮಲ್ಲಿಕಾರ್ಜುನ ಭಟ್ಟೋಪಾಧ್ಯಾಯರನ್ನು ಉಲ್ಲೇಖಿಸುತ್ತ, ಇಲ್ಲಿಯ ಸಾರಂಗ ದೇವ ಹಾಗೂ ಮತ್ತೊಂದು ದೇವರಿಗೆ ಭೂಮಿಯನ್ನು ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಸುಲೇಪೇಟೆಯು ಪ್ರಮುಖ ವಾಣಿಜ್ಯ ಕೇಂದ್ರವಾಗಿದ್ದು, ಪ್ರಾಚೀನ ದೇವಾಲಯಗಳಲ್ಲಿ ಹೆಚ್ಚಿನವು ಹಳೆ ಊರಿನಲ್ಲಿವೆ. ಹಳೇ ಊರಿನ ಪ್ರವೇಶದಲ್ಲೇ ಇರುವ ವೀರಭದ್ರ ದೇವಾಲಯವು ಪ್ರಾಚೀನ ಗುಡಿಯಾಗಿದ್ದು ಇತ್ತೀಚೆಗೆ ಜೀರ್ಣೋದ್ಧಾರಗೊಂಡಿದೆ. ಇದೊಂದು ದ್ವಿಕೂಟವಾಗಿದ್ದು (ಹಿಂದೆ ತ್ರಿಕೂಟವಾಗಿದ್ದಿರಬಹುದೇನೋ) ಒಂದರಲ್ಲಿ ಶಿವಲಿಂಗ ಹಾಗೂ ಇನ್ನೊಂದರಲ್ಲಿ ವೀರಭದ್ರನ ಶಿಲ್ಪಗಳಿವೆ. ವೀರಭದ್ರನಿರುವ ಗರ್ಭಗೃಹದ ಶಿಖರದಲ್ಲಿ ಪದ್ಮಾಸೀನ ತೀರ್ಥಂಕರನ ಶಿಲ್ಪವಿದೆ. ನವರಂಗದಲ್ಲಿ ಸರಸ್ವತಿ ಹಾಗೂ ಮಹಿಷಮರ್ದಿನಿ ಶಿಲ್ಪಗಳಿವೆ. ಅಲ್ಲದೇ ಒಕ್ಕಲಿಗರ ಓಣಿಯಲ್ಲಿರುವ ಶಂಭುಲಿಂಗೇಶ್ವರ ದೇಗುಲವು, ಹಿಂದೆ ತ್ರಿಕೂಟ ಬಸದಿಯಾಗಿದ್ದು, ಈಗ ರೂಢಿಯಲ್ಲಿ ಶಿವಾಲಯವಾಗಿದೆ. ಎತ್ತರವಾದ ವೇದಿಕೆಯ ಮೇಲಿರುವ ಈ ಗುಡಿಯು ಪ್ರತ್ಯೇಕವಾದ ಮೂರು ಗರ್ಭಗೃಹ ಹಾಗೂ ತೆರೆದ ಅಂತರಾಳಗಳನ್ನು ಹೊಂದಿದ್ದು, ಇವುಗಳನ್ನು ನಡುವೆ ಇರುವ ನವರಂಗವು ಒಂದಾಗಿಸಿದೆ. ನವರಂಗದ ಮುಂದಿದ್ದ ರಂಗಮಂಟಪವಿಂದು ಪೂರ್ಣ ನಾಶವಾಗಿದೆ. ಈ ಗುಡಿಯ ಗರ್ಭಗೃಹಗಳಿಂದು ಖಾಲಿ ಇವೆ. ಪ್ರಧಾನ ಗರ್ಭಗೃಹದಲ್ಲಿ ತೀರ್ಥಂಕರ ಪೀಠವಷ್ಟೇ ಉಳಿದಿದ್ದು ಶಿವಲಿಂಗವಿದೆ. ಇಲ್ಲಿಯ ಗರ್ಭಗೃಹಗಳ ಬಾಗಿಲವಾಡಗಳು ತ್ರಿಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಜಿನಬಿಂಬದ ಕಿರು ಕೆತ್ತನೆಯನ್ನು ಗಮನಿಸಬಹುದಾಗಿದೆ. ನವರಂಗದ ಕಂಬಗಳು ಆಕರ್ಷಕವಾಗಿದ್ದು, ಛತ್ತನ್ನು ಕಮಲದಿಂದ ಅಲಂಕರಿಸಲಾಗಿದೆ. ನವರಂಗದಲ್ಲಿ ಪಾರ್ಶ್ವನಾಥ ತೀರ್ಥಂಕರನ ಮುಕ್ಕಾಗಿರುವ ಪದ್ಮಾಸೀನ ಶಿಲ್ಪವಿದೆ. ನವರಂಗದ ದ್ವಾರವು ಪಂಚಶಾಖಾಲಂಕೃತವಾಗಿದ್ದು, ಜಿನಬಿಂಬವಿದ್ದ ಲಲಾಟ ಭಾಗವು ಹಾಳಾಗಿದೆ. ಬಹುಕೋನಾಕಾರದ ತಳ ವಿನ್ಯಾಸವನ್ನುಳ್ಳ ಈ ಗುಡಿಯ ಭಿತ್ತಿಯು ನಿರಾಡಂಬರವಾಗಿದ್ದು, ಶಿಖರಗಳು ನಶಿಸಿ ಹೋಗಿವೆ. ಉತ್ತರಾಭಿಮುಖವಾಗಿರುವ ಈ ದೇವಾಲಯವು ಬೃಹತ್ ಪ್ರಮಾಣದ್ದಾಗಿದ್ದು, ಹಿಂದೆ ಜೈನ ಧರ್ಮಕ್ಕೆ ಇಲ್ಲಿದ್ದ ಪ್ರಾಮುಖ್ಯತೆಗೆ ಸಾಕ್ಷಿಯಾಗಿದೆ. ಇದು ಸುಮಾರು ೧೦-೧೧ನೇ ಶತಮಾನದ ರಚನೆಯಾಗಿದೆ. ಊರ ನಡುವೆ ಇರುವ 'ಜೈನ ಬಸದಿ'ಯು ತಗ್ಗಾದ ಸ್ಥಳದಲ್ಲಿರುವ ನವರಂಗವೊಂದರಲ್ಲಿದೆ. ನವರಂಗಕ್ಕೆ ನಾಲ್ಕು ದೇವಕೋಷ್ಠಗಳಿದ್ದು ಸ್ಥಾನಕ ತೀರ್ಥಂಕರ ಶಿಲ್ಪಗಳಿವೆ. ಇಲ್ಲಿಯ ಪ್ರಧಾನ ಶಿಲ್ಪವು ಪದ್ಮಾಸೀನ ಪಾರ್ಶ್ವನಾಥ ತೀರ್ಥಂಕರನದಾಗಿದ್ದು, ಪ್ರಭಾವಳಿಯ ಇಕ್ಕೆಲಗಳಲ್ಲಿ ಉಳಿದ ೨೩ ತೀರ್ಥಂಕರರನ್ನು ಪ್ರಾತಿನಿಧಿಕವಾಗಿ ಕೆತ್ತಲಾಗಿದ್ದು, ಇದೊಂದು ಅಪೂರ್ವ ಶಿಲ್ಪವಾಗಿದೆ. ಈ ಶಿಲ್ಪಗಳು ಬಹುಶಃ ಮೇಲೆ ಚರ್ಚಿಸಿರುವ ತ್ರಿಕೂಟ ಬಸದಿಗೆ ಸಂಬಂಧಿಸಿದ ಶಿಲ್ಪಗಳಾಗಿದ್ದಿರಬೇಕೆಂದು ತೋರುತ್ತದೆ. ಮೇಲಾಗಿ ಇಲ್ಲಿ ಒಂದಕ್ಕಿಂತ ಹೆಚ್ಚು ಜೈನ ಬಸದಿ ಇದ್ದಿರಲೂಬಹುದು.

ಇಲ್ಲಿಯ ಶಂಕರಲಿಂಗ ಗುಡಿಯು ಸುಮಾರು ೧೧ನೇ ಶತಮಾನದ ದೇಗುಲವಾಗಿದ್ದು ಗರ್ಭಗೃಹ ಹಾಗೂ ಅಂತರಾಳಗಳಷ್ಟೆ ಇಂದು ಉಳಿದಿವೆ. ವಿಶಾಲವಾದ ಗರ್ಭಗೃಹದಲ್ಲಿ ಬೃಹತ್ತಾದ ಬಲಹರಿ ಲಿಂಗವಿದ್ದು ಇದರ ಬಾಗಿಲವಾಡವು ಆರು ಶಾಖೆಗಳನ್ನು ಹೊಂದಿದ್ದು, ಮೇಲೆ ಹಂಸಾವಳಿ ಅಲಂಕಾರವಿದೆ. ಇದರ ಮೇಲೆ ಕೆತ್ತಿರುವ ಅಲಂಕಾರಿಕ ಮಾವಿನ ತೋರಣ ಗಮನಾರ್ಹವಾಗಿದೆ. ತೆರೆದ ಅಂತರಾಳದ ತೊಲೆಯನ್ನು ಚಿತ್ತಾಕರ್ಷಕವಾದ ಕೆತ್ತನೆಗಳನ್ನುಳ್ಳ ಸುಂದರವಾದ ಮಕರ ತೋರಣದಿಂದ ಅಲಂಕರಿಸಲಾಗಿದೆ. ಈ ದೇವಾಲಯದ ಭಿತ್ತಿಯು ನಿರಾಡಂಬರವಾಗಿದ್ದು, ತೊಲೆಯಲ್ಲಿ ನವಿಲು,

ಮಿಥುನ ಶಿಲ್ಪ ಮುಂತಾದ ಕಿರು ಕೆತ್ತನೆಗಳಿದ್ದು ಶಿಖರ ನಶಿಸಿ ಹೋಗಿದೆ. ಈ ಗುಡಿಯಿಂದ ಅನತಿ ದೂರದಲ್ಲಿರುವ ಈಶ್ವರ ದೇವಾಲಯವೂ ಪ್ರಾಚೀನ ಕಾಲಕ್ಕೆ ಸೇರಿದ್ದು, ಇಂದು ಗರ್ಭಗೃಹ ಹಾಗೂ ಅಂತರಾಳ ಭಾಗಗಳಷ್ಟೆ ಇದ್ದು ಉಳಿದ ಭಾಗ ನಾಶವಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲವಾಡವು ಪಂಚ ಶಾಖೆಗಳನ್ನು ಹೊಂದಿದ್ದು, ಹಂಸವಾಳಿ ಅಲಂಕಾರವೂ ಇದೆ. ಇಲ್ಲಿಯ ಶೈವ ದ್ವಾರಪಾಲಕರು ಹಾಗೂ ಮಹಿಷ ಮರ್ದಿನಿಯ ಕೆತ್ತನೆ ಗಮನಾರ್ಹವಾಗಿವೆ. ಇಲ್ಲಿಯ ರಾಮಭಟ್ಟರ ಗುಡಿ, ಸುಮಾರು ೧೦-೧೧ನೇ ಶತಮಾನದ ಕಂಬ ಹಾಗೂ ಬಾಗಿಲವಾಡಗಳನ್ನು ಬಳಸಿ ಪುನರ್ ನಿರ್ಮಿಸಿರುವ ಗುಡಿಯಾಗಿದ್ದು ಶಿವಲಿಂಗಗಳಿವೆ. ನಿಜಾಮರ ಆಳ್ವಿಕೆಯಲ್ಲಿ ಹೊಸ ಊರು ನಿರ್ಮಾಣಗೊಂಡಿದ್ದು ಸುಲ್ಲಿಪಳ್ಳಿ, ಸುಲೇಪೇಟೆಯಾಗಿ ಪ್ರಮುಖ ವ್ಯಾಪಾರ ಸ್ಥಳವಾಯಿತು. ಹೊಸ ಊರಲ್ಲಿರುವ "ನಾಲ್ಕು ಪಗಡಿ ಬಜಾರ್" ಇದಕ್ಕೆ ಸಾಕ್ಷಿಯಾಗಿದೆ. ಉಳಿದಂತೆ ಊರಲ್ಲಿಂದು ಬಸವಣ್ಣ, ಕಾಳಿಕಾ, ಪಾಂಡುರಂಗ, ಹನುಮಂತ, ಪೋಚಮ್ಮ, ಮರಗಮ್ಮ ಮುಂತಾದ ನವೀನ ಗುಡಿಗಳಿದ್ದು, ಮಹಾಂತೇಶ್ವರ ಹಾಗೂ ಕಟ್ಟಿಂಗೇಶ್ವರ ವಿರಕ್ತ ಮಠಗಳಿವೆ. ಮಸೀದಿ ಹಾಗೂ ದರ್ಗಾ ಕೂಡ ಇವೆ.

**ಸೇಡಂ** (೨೩.೨೭೦) ಜಿಲ್ಲಾ ಕೇಂದ್ರವಾದ ಗುಲಬರ್ಗಾದಿಂದ ಆಗ್ನೇಯಕ್ಕೆ ೫೨ ಕಿ.ಮೀ., ಬೆಂಗಳೂರಿನಿಂದ ಉತ್ತರಕ್ಕೆ ೬೧೮ ಕಿ.ಮೀ. ದೂರದಲ್ಲಿ ಕಮಲಾ ನದಿಯ ದಂಡೆಯ ಮೇಲಿರುವ ಚಾರಿತ್ರಿಕ ಮಹತ್ವದ ತಾಲೂಕು ಹಾಗೂ ಉಪ ವಿಭಾಗೀಯ ಕೇಂದ್ರವಾಗಿದ್ದು ರೈಲು ಸಂಪರ್ಕವನ್ನೂ ಹೊಂದಿದೆ. ರಾಜ್ಯ ಹೆದ್ದಾರಿ ಸಂಖ್ಯೆ ೧೫ ಈ ಊರ ಮೂಲಕ ಹಾದು ಹೋಗಿದೆ. ಪ್ರಾಚೀನ ಶಾಸನಗಳಲ್ಲಿ 'ಅಗ್ರಹಾರ ಸೇಡಿಂಬಾಪುರ' ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಅರಲು-೩೦೦ ಆಡಳಿತ ವಿಭಾಗಕ್ಕೆ ಸೇರಿದ್ದು, ಇಲ್ಲಿಂದ ಈವರೆಗೆ ೧೧ ಶಾಸನಗಳು ವರದಿಯಾಗಿದ್ದು, ಇತ್ತೀಚೆಗೆ ಶಾತವಾಹನರ ಕಾಲದ ಅವಶೇಷಗಳೂ ಪತ್ತೆಯಾಗಿವೆ. ಇವುಗಳಲ್ಲಿ ೧೦೭೯ರ ಶಾಸನವೇ ಪ್ರಾಚೀನದ್ದಾಗಿದ್ದು, ಇದರಲ್ಲಿ ಸೇಡಿಂಬಾಪಟ್ಟಣದ ಕೋಟೆ, ಪ್ರಾಕಾರ ಹಾಗೂ ಗೋಪುರಗಳೂ ಸೇರಿದಂತೆ, ಚಾಳುಕ್ಯ ವಂಶಾವಳಿ, ಅಗ್ರಹಾರ ಸೇಡಿಂಬದ ಮುನ್ನೂರು ಮಹಾಜನ ಹಾಗೂ ಅವರ ಮುಖಂಡ ಚಂದಿರಾಜನ ಗುಣವರ್ಣನೆಗಳಿದ್ದು, ಸೇಡಿಂಬಾ ನಗರದ ಪ್ರಧಾನ ಬಾಗಿಲಿನ ಅಗ್ರ ಗೋಪುರವನ್ನು ಚಂದಿರಾಜ ಮಾಡಿಸಿದ ಅಂಶವನ್ನು ತಿಳಿಸುತ್ತದೆ. ಮೇಲಾಗಿ ಮಾಡಿಯಾಳದ ಮಲ್ಲೋಜನ ಪುತ್ರ ರಾಮೋಜನು ಈ ಶಾಸನದ ರೂವಾರಿ ಎಂದೂ ಈ ಶಾಸನ ತಿಳಿಸುತ್ತದೆ. ಇದರಿಂದ ಸೇಡಿಂಬಾಪುರ ಹಾಗೂ ಅದರ ಕೋಟೆಗಳ ನಿರ್ಮಾಣ ಕಲ್ಯಾಣದ ಅರಸ ಆರನೇಯ ವಿಕ್ರಮಾದಿತ್ಯನ ಕಾಲದಲ್ಲಿ ಆಗಿರಬೇಕೆಂದು ತೋರುತ್ತದೆ. ಇಲ್ಲಿಯ ಜೈನ ಬಸದಿಯಲ್ಲಿರುವ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ ೧೧೨೪ರ ಶಾಸನ ಅಗ್ರಹಾರ ಸೇಡಿಂಬಾದ ಮುನ್ನೂರು ಮಹಾಜನರು ಬಸದಿಯನ್ನು ನಿರ್ಮಿಸಿ, ಶಾಂತಿನಾಥ ದೇವರನ್ನು ಪ್ರತಿಷ್ಠಾಪಿಸಿ, ಬ್ರಹ್ಮಜಿನಾಲಯವೆಂದು ಹೆಸರಿಟ್ಟು, ದೇವರ ಪೂಜಾವಿಧಿಗೆಂದು ೨೪ ಮತ್ತರು ಹೊಲ, ಒಂದು ತೋಟ ಹಾಗೂ ಗಾಣಗಳನ್ನು ದಾನ ಕೊಟ್ಟ ಮಹತ್ವದ ಅಂಶವನ್ನು ತಿಳಿಸುತ್ತದೆ. ಜೊತೆಗೆ ಸಾಂದರ್ಭಿಕವಾಗಿ ಲೋಕ ಜೀನಾಲಯದ ಬಗ್ಗೆ ಉಲ್ಲೇಖಿಸುತ್ತದೆ. ಇದೇ ಬಸದಿಯ ಕಂಬದ ಮೇಲಿರುವ ೧೧೩೭ರ ಶಾಸನ ಮುಮ್ಮಡಿ ಸೋಮೇಶ್ವರನ ಕಾಲಕ್ಕೆ ಸೇರಿದ್ದು, ಕಾಳಿದಾಸ ದಂಡನಾಯಕನ ಅಳಿಯ ಭೀಮ ಚಮೂಪ ಹಾಗೂ ಅಗ್ರಹಾರದ ಮುನ್ನೂರು ಮಹಾಜನರು ಬಸದಿಯ ಆದಿ ಭಟ್ಟಾರಕ ದೇವರಿಗೆಂದು ೪೫ ಮತ್ತರು ಹೊಲ, ಎರಡು ಮತ್ತರು ಕೇದಗೆಯ ತೋಟಗಳನ್ನು ದಾನ ಕೊಟ್ಟ ಸಂದರ್ಭದಲ್ಲಿ ನಾನಾದೇಶಿ ಮುಮ್ಮರಿ ದಂಡಗಳು ವಿವಿಧ ವಸ್ತುಗಳ ಮೇಲಿನ ಆಯವನ್ನು ದಾನ ಬಿಟ್ಟ ವಿಷಯವನ್ನೂ ತಿಳಿಸುತ್ತದೆ. ಇಲ್ಲಿಯ ಇನ್ನೊಂದು ಕಂಬದ ಮೇಲಿರುವ ಶಾಸನವೂ ಮೂರನೇ ಸೋಮೇಶ್ವರನ ಕಾಲಕ್ಕೆ ಸೇರಿದ್ದು. ಇಲ್ಲಿಯ ಶಾಂತಿನಾಥ ಬಸದಿಯನ್ನು ಸಮ್ಯಕತ್ವ ರತ್ನಾಕರರಾದ ಬಮ್ಮದೇವ ವಿಭುಗಳು ನಿರ್ಮಿಸಿದ ವಿಷಯವನ್ನು ತಿಳಿಸುತ್ತದೆ. ಇದೇ ಬಸದಿಯ ಬಳಿಯಿರುವ ನಿಷಿಧಿ ಶಾಸನ ಮೂಲಸಂಘದ ನೇಮಿಚಂದ್ರ ಪಂಡಿತರ ಸಮಾಧಿ ಮರಣದ ಬಗ್ಗೆ ದಾಖಲಿಸಿದೆ. ಇಲ್ಲಿಯ ಮಾಣಿಕೇಶ್ವರ ಗುಡಿಯ ಕಂಬದ ಮೇಲಿರುವ ಸುಮಾರು ೧೨ನೇ ಶತಮಾನಕ್ಕೆ ಸೇರಿದ ಶಾಸನದಿಂದ ಶಾಲೆಯ ನಿರ್ಮಾಣಕ್ಕಾಗಿ ಮಹಾಜನಗಳು ಮುಂದಾದ ಅಂಶ ಗೊತ್ತಾಗುತ್ತದೆ. ಇದೇ ಗುಡಿಯ ಇನ್ನೊಂದು ಕಂಬದ ಮೇಲಿರುವ ಯಾದವ ಅರಸ ಇಮ್ಮಡಿ ಸಿಂಘಣನ ಕಾಲಕ್ಕೆ ಸೇರಿದ ೧೨೨೮ರ ಶಾಸನವು ದೇವಾಲಯ ಒಂದಕ್ಕೆ ದತ್ತಿ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಇಲ್ಲಿಯ ಇನ್ನೊಂದು ಶಾಸನ ಪಾರ್ಶ್ವದೇವರಿಗೆ ೧೨ ಮತ್ತರು ಭೂಮಿಯನ್ನು ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಮೇಲಿನ ಶಾಸನಗಳಿಂದ ಹಿಂದೆ ಇಲ್ಲಿ ಬ್ರಹ್ಮ ಜೀನಾಲಯ, ಶಾಂತಿನಾಥ ಬಸದಿ, ಲೋಕ ಜಿನಾಲಯ, ಪಾರ್ಶ್ವನಾಥ ಬಸದಿ, ತೆಂಕಣ ಬಸದಿಯ ಆದಿಭಟ್ಟಾರಕ ಹಾಗೂ ನಾರಾಯಣದೇವ ದೇಗುಲಗಳಿದ್ದ ಅಂಶ ಗೊತ್ತಾಗುತ್ತದೆ.

ಸೇಡಂನಲ್ಲಿ ಪ್ರಾಚೀನ ಕಾಲಕ್ಕೆ ಸೇರಿದ ಹದಿನಾಲ್ಕಕ್ಕೂ ಹೆಚ್ಚು ದೇವಾಲಯಗಳಿದ್ದು, ಇವು ಸುಮಾರು ೧೦-೧೨ನೇ ಶತಮಾನದ ಅವಧಿಯಲ್ಲಿ ನಿರ್ಮಾಣಗೊಂಡಿವೆ. ಇವುಗಳಲ್ಲಿ ಊರ ನಡುವೆ ಇರುವ ಲಿಂಗದ (ಮಾಣಿಕೇಶ್ವರ) ಗುಡಿಯು ವಿಶಾಲವಾಗಿದ್ದು, ಸಂಪೂರ್ಣ ಜೀರ್ಣೋದ್ಧಾರಗೊಂಡಿದೆ. ಈ ದೇವಾಲಯದ ವಿಶಾಲವಾದ ಮಂಟಪವನ್ನು ಹೊತ್ತು ನಿಂತಿರುವ ಕಂಬಗಳು ಸುಮಾರು ೧೦-೧೧ನೇ ಶತಮಾನಕ್ಕೆ ಸೇರಿದ್ದಾಗಿವೆ. ಈ ದೇವಾಲಯದ ಎದುರಲ್ಲಿ ಎಡ ಮೂಲೆಯಲ್ಲಿ ಮಾನಸ್ತಂಭವಿದ್ದು, ಇದನ್ನು ಬಳಸಿ ಮಂಟಪವಿದೆ. ಈ ಸ್ತಂಭವನ್ನು ಸ್ಥಳೀಕರು ಬಾಣ ಕಲ್ಲು (ಬಾಣಂತಿ ಕಲ್ಲು) ಎಂದು ಕರೆಯುತ್ತಾರೆ. ಹಳೇ ಬಜಾರನಲ್ಲಿರುವ ಪಂಚಲಿಂಗೇಶ್ವರ ದೇವಾಲಯವು ಐದು ಲಿಂಗಗಳನ್ನುಳ್ಳ ದೇಗುಲವಾಗಿದ್ದು ಸಂಪೂರ್ಣ ಜೀರ್ಣೋದ್ಧಾರವಾಗಿದ್ದು, ಕಲ್ಯಾಣದ ಚಾಳುಕ್ಯರ ಕಾಲದ ರಚನೆಯಾಗಿದೆ. ತಹಶೀಲ್ದಾರರ ಕಛೇರಿ ಬಳಿ ಬಿದ್ದಿರುವ ಕಂಬದ ಮೇಲಿರುವ ಸುಮಾರು ೧೨ನೇ ಶತಮಾನಕ್ಕೆ ಸೇರಿದ ಶಾಸನ ಪಂಚೇಶ್ವರದೇವರಿಗೆ ಸೇರಿದ ಜಮೀನಿಗೆ ಸಂಬಂಧಿಸಿದಂತಹ ದಾಖಲೆಯಾಗಿದ್ದು, ಶಾಸನೋಕ್ತ ಪಂಚೇಶ್ವರವೇ ಇಂದಿನ ಪಂಚಲಿಂಗೇಶ್ವರವಾಗಿದ್ದು ಈ ದೇವರ ಜಾತ್ರೆಯು ಶಿವರಾತ್ರಿಯಂದು ನಡೆಯುತ್ತದೆ. ಪಂಚಲಿಂಗೇಶ್ವರ ದೇವಾಲಯ ಸಂಕೀರ್ಣದಲ್ಲಿ ಒಂದು ದ್ವಿಕೂಟ ಹಾಗೂ ಮೂರು ಏಕಕೂಟ ದೇವಾಲಯಗಳಿವೆ. ಇವುಗಳಲ್ಲಿ ಎರಡು ಪಶ್ಚಿಮಾಭಿಮುಖವಾಗಿ, ಒಂದು ಉತ್ತರಾಭಿಮುಖವಾಗಿ ಉಳಿದೊಂದು ಪೂರ್ವಾಭಿಮುಖವಾಗಿ ಇವೆ. ಪಶ್ಚಿಮಾಭಿಮುಖವಾಗಿರುವ ದೇಗುಲ ಸಮುಚ್ಚಯದ ಪ್ರವೇಶದಲ್ಲೇ ಬಲಕ್ಕಾದಂತೆ ಇರುವ ಎರಡು ದೇಗುಲಗಳು ಚಿತ್ತಾಕರ್ಷಕ ಕೆತ್ತನೆಗಳನ್ನು ಹೊಂದಿದ್ದು, ಕುಸುರಿ ಕೆತ್ತನೆಯಿಂದಾಗಿ ಗಮನ ಸೆಳೆಯುತ್ತವೆ. ಉಳಿದೆರಡು ಸರಳ ರಚನೆಗಳಾಗಿದ್ದು ಏಕಕೂಟಗಳಾಗಿದ್ದು, ಇವುಗಳಲ್ಲಿ ಒಂದಕ್ಕೆ ಇತ್ತೀಚೆಗೆ ಗರ್ಭಗೃಹವೊಂದನ್ನು ಸೇರಿಸಲಾಗಿದೆ. ಒಟ್ಟಾರೆ ಈ ಸಮುಚ್ಚಯ ಸೇಡಂನ ಆಕರ್ಷಣೆಯೆಂದರೆ ತಪ್ಪಾಗಲಾರದು. ಊರ ನಡುವೆ ತ್ರಿಲಿಂಗೇಶ್ವರ ದೇವಾಲಯವೆಂದು ಕರೆಯಲ್ಪಡುವ ದ್ವಿಕೂಟ ದೇವಾಲಯವಿದೆ. ಪೂರ್ವ-ಪಶ್ಚಿಮವಾಗಿ ನಿಂತಿರುವ ಎರಡು ಗರ್ಭಗೃಹ, ಅವುಗಳಿಗೆ ಹೊಂದಿಕೊಂಡಂತೆ ಇರುವ ಅರ್ಧ ಮಂಟಪಗಳನ್ನು ನಡುವೆ ಇರುವ ನವರಂಗವು ಒಗ್ಗೂಡಿಸಿದೆ. ಪೂರ್ವಾಭಿಮುಖವಾಗಿರುವ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲ ಚೌಕಟ್ಟು ಆಕರ್ಷಕವಾಗಿದೆ. ಅರ್ಧ ಮಂಟಪದ ಇಕ್ಕೆಲದಲ್ಲಿ ಹಾಗೂ ಗೋಡೆಗಳಲ್ಲಿ ಎದುರು ಬದುರಾಗಿ ನಾಲ್ಕು ದೇವಕೋಷ್ಠಗಳಿವೆ. ಪಶ್ಚಿಮಾಭಿಮುಖವಾಗಿರುವ ಗರ್ಭಗುಡಿಯು ಇದೇ ಮಾದರಿಯಲ್ಲಿದೆ. ನವರಂಗಕ್ಕೆ ಉತ್ತರ ದಿಕ್ಕಿನಿಂದ ಪ್ರವೇಶ ದ್ವಾರವಿದ್ದು ಇದರ ಬಾಗಿಲವಾಡವೂ ಸುಂದರ ಅಲಂಕಾರಗಳಿಂದ ಕೂಡಿದ್ದು ಆಕರ್ಷಕವಾಗಿದೆ.

ಹೂಗಾರ್ ಓಣಿಯಲ್ಲಿರುವ ಮಹಾದೇವ ದೇವಾಲಯವು ಏಕಕೂಟವಾಗಿದ್ದು, ಇದಕ್ಕೆ ಗರ್ಭಗೃಹ, ತೆರೆದ ಅಂತರಾಳ ಹಾಗೂ ವಿಶಾಲವಾದ ನವರಂಗಗಳಿವೆ. ಪೂರ್ವಾಭಿಮುಖವಾಗಿರುವ ಇದರ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬ್ರಹಸ್ಸೂತ್ರವೂ ತ್ರಿಲಿಂಗೇಶ್ವರ ದೇವಾಲಯದ ಶಿವಲಿಂಗದಂತೆ ವಿಶಿಷ್ಟವಾಗಿದೆ. ಇದರ ಬಾಗಿಲವಾಡವು ಮೂರು ಅಲಂಕಾರಿಕ ಶಾಖೆಗಳನ್ನು ಹೊಂದಿದ್ದು, ನಡುವೆ ಲಲಾಟದಲ್ಲಿ ಗಜಲಕ್ಷ್ಮಿ ಇದೆ. ಅಂತರಾಳದಲ್ಲಿ ನಾಲ್ಕು ದೇವಗೂಡುಗಳಿದ್ದು, ಒಂದರಲ್ಲಿ ಗಣೇಶನ ಶಿಲ್ಪವಿದೆ. ನವರಂಗದ ನಡುವಣ ಛತ್ತಲ್ಲಿರುವ ನಕ್ಷತ್ರಾಕಾರದ ಕಮಲವು ಅಷ್ಟದಿಕ್ಪಾಲಕರಿಂದ ಆವರಿಸಲ್ಪಟ್ಟಿದೆ. ಈ ದೇವಾಲಯದ ಬದಿಯಲ್ಲೇ 'ದೇಗುಲ' ಎಂದು ಕರೆಯಲ್ಪಡುವ ಸಣ್ಣ ದೇವಾಲಯವಿದೆ. ಗರ್ಭಗೃಹ ಹಾಗೂ ಮುಚ್ಚಿದ ಅರ್ಧ ಮಂಟಪವಷ್ಟೇ ಇರುವ ಈ ಗುಡಿಯು ಪೂರ್ವಾಭಿಮುಖವಾಗಿದ್ದು, ಗರ್ಭಗೃಹದಲ್ಲಿ ರಾಷ್ಟ್ರಕೂಟರ ಕಾಲಕ್ಕೆ ಸೇರಿದ ಸುಮಾರು ೯-೧೦ನೇ ಶತಮಾನದ ಶಿವಲಿಂಗವಿದೆ. ಇದರ ಬಾಗಿಲ ಚೌಕಟ್ಟು ಅಲಂಕಾರದಿಂದ ಕೂಡಿದ ಐದು ಶಾಖೆಗಳನ್ನು ಹೊಂದಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಇದೆ. ಇದರ ಮೇಲಿನ ಉತ್ತರಾಂಗದಲ್ಲಿ ರೇಖಾನಗರ ಶೈಲಿಯ ಐದು ಕಿರು ಶಿಖರಗಳಿದ್ದು, ನಡುವೆ ಸಿಂಹಗಳಿವೆ. ಅಂತರಾಳದ ದೇವಗೂಡುಗಳಲ್ಲಿ ನಂತರದ ಕಾಲಕ್ಕೆ ಸೇರಿದ ಶಿವಲಿಂಗಗಳನ್ನು ಬೇರೆಡೆಯಿಂದ ತಂದು ಇಟ್ಟಿದ್ದಾರೆ. ಅಂತರಾಳದ ಬಾಗಿಲ ಚೌಕಟ್ಟು ನಾಲ್ಕು ಅಲಂಕಾರಿಕ ಶಾಖೆಗಳನ್ನು ಹೊಂದಿದ್ದು, ಉತ್ತರಾಂಗವನ್ನು ನಟರಾಜನನ್ನುಳ್ಳ ಮಕರತೋರಣದಿಂದ ಅಲಂಕರಿಸಲಾಗಿದೆ. ಈ ಗುಡಿಯ ಸಮೀಪದಲ್ಲೇ ಗಣೇಶನ ಚಿಕ್ಕ ಗುಡಿ ಇದೆ. ದಕ್ಷಿಣಾಭಿಮುಖವಾಗಿರುವ ಇದು ಏಕಕೂಟವಾಗಿದ್ದು, ಗರ್ಭಗೃಹದಲ್ಲಿ ಚತುರ್ಭುಜ ಗಣಪತಿಯ ಶಿಲ್ಪವಿದೆ. ಇದರ ಬದಿಯಲ್ಲೇ ಈಶ್ವರನ ಇನ್ನೊಂದು ದೇವಾಲಯವಿದೆ. ಗರ್ಭಗೃಹ ಹಾಗೂ ಅರ್ಧ ಮಂಟಪಗಳನ್ನಷ್ಟೇ ಹೊಂದಿರುವ ಈ ಗುಡಿಯ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲ ಚೌಕಟ್ಟು ಸರಳವಾದ ಮೂರು ಶಾಖೆಗಳನ್ನು ಹೊಂದಿದ್ದು ನಿರಾಡಂಬರವಾಗಿದ್ದು, ಲಲಾಟದಲ್ಲಿ ಗಣಪತಿಯ ಕೆತ್ತನೆ ಇದೆ. ವಾಸ್ತು ಶೈಲಿಯ ಸೃಷ್ಟಿಯಿಂದ ಇದು ೧೦-

೧೧ನೇ ಶತಮಾನಕ್ಕೆ ಸೇರಿರುವಂತೆ ಕಾಣುತ್ತದೆ. ಇಲ್ಲಿಯ ಅಲ್ಲಪ್ಪಯ್ಯ ವಿರಕ್ತ ಮಠ ಪ್ರಾಚೀನ ದೇಗುಲವಾಗಿದ್ದು, ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖ ಮಂಟಪಗಳನ್ನುಳ್ಳ ಮೂಲ ಭಾಗವು ಸುಮಾರು ೧೨ನೇ ಶತಮಾನದ ರಚನೆಯಾಗಿದೆ. ಊರಿನ ಅಗಸಿಹಳ್ಳದ (ಚಿಕ್ಕ ಅಗಸಿ) ದಂಡೆಯಲ್ಲಿರುವ ಹನುಮಂತನ ದೇವಾಲಯವು ಕಲ್ಯಾಣದ ಚಾಳುಕ್ಯರ ಕಾಲದ ಸುಂದರವಾದ ಬಾಗಿಲವಾಡವನ್ನು ಹೊಂದಿದೆ. ಪೋಲಿಸ್ ಪಾಟೀಲರ ಗಲ್ಲಿಯಲ್ಲಿರುವ ಈಶ್ವರ ಗುಡಿಯು ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಗರ್ಭಗೃಹದಲ್ಲಿ ಬಲಹರಿ ಲಿಂಗವಿದೆ. ನವರಂಗದ ನಡುವಣ ಛತ್ತು ಆಕರ್ಷಕವಾದ ಕಮಲದಿಂದ ಅಲಂಕೃತಗೊಂಡಿದ್ದು, ಗುಡಿಗೆ ಇಂದು ಪಾರ್ಶ್ವದ್ವಾರವಿದೆ. ಈ ಗುಡಿಯ ಹಿಂಬದಿಯಲ್ಲೇ ಕಾಳಿಕಾ ದೇವಿಯ ನವೀನ ಗುಡಿ ಇದೆ.

ಸಣ್ಣ ಅಗಸಿ ಬಳಿ ಹಳ್ಳದ ಉತ್ತರ ದಂಡೆಯ ಮೇಲೆ ಎರಡು ಜೈನ ಬಸದಿಗಳಿವೆ. ಇವುಗಳಲ್ಲಿ ಮೊದಲನೇ ಬಸದಿಯ ಗರ್ಭಗೃಹ ಹಾಗೂ ಅಂತರಾಳ ಭಾಗಗಳು ಸಂಪೂರ್ಣ ಹಾಳಾಗಿದ್ದು, ನವರಂಗ ಭಾಗವಷ್ಟೆ ಉಳಿದಿದೆ. ಈ ದೇವಾಲಯದ ಅಂತರಾಳ ಹಾಗೂ ನವರಂಗದ ಬಾಗಿಲ ಚೌಕಟ್ಟುಗಳು ಸುಂದರ ಕೆತ್ತನೆಯಿಂದ ಕೂಡಿದ್ದು ಆಕರ್ಷಕವಾಗಿವೆ. ನವರಂಗದ ಪ್ರವೇಶ ದ್ವಾರಕ್ಕೆ ಹೊಂದಿಕೊಂಡಂತೆ ತೆರೆದ ಮುಖ ಮಂಟಪವಿದೆ. ದಕ್ಷಿಣಾಭಿಮುಖವಾಗಿರುವ ಈ ಬಸದಿಯು ಶಾಸನೋಕ್ತ ಲೋಕ ಜಿನಾಲಯವಾಗಿರುವಂತೆ ತೋರುತ್ತದೆ. ಈ ಬಸದಿಯ ಸಮೀಪದಲ್ಲೇ ಮತ್ತೊಂದು ಬಸದಿ ಇದೆ. ದಕ್ಷಿಣಾಭಿಮುಖವಾಗಿರುವ ಈ ಜಿನಾಲಯವು ಇಂದು ಪೂರ್ಣ ಜೀರ್ಣಾವಸ್ಥೆಯಲ್ಲಿದ್ದು, ಅರ್ಧ ಮಂಟಪ, ನವರಂಗ ಹಾಗೂ ಮುಖ ಮಂಟಪಗಳಷ್ಟೆ ಭಾಗಶಃ ಉಳಿದಿವೆ. ನವರಂಗದ ಹಿಂಬದಿಯ ಗೋಡೆಗೆ ಮೂರು ದ್ವಾರಗಳಿದ್ದು, ಇದರಿಂದ ಹಿಂದೆ ಇಲ್ಲಿ ಮೂರು ಗರ್ಭಗೃಹಗಳಿದ್ದ ಅಂಶ ಗೊತ್ತಾಗುತ್ತದೆ. ಆದರಿಂದು ಒಂದರಲ್ಲಿ ಮಾತ್ರ ತೀರ್ಥಂಕರನ ಶಿಲ್ಪವಿದೆ. ಒಂದೇ ಸಾಲಿನಲ್ಲಿ ಮೂರು ದ್ವಾರಗಳಿರುವುದರಿಂದ ಇದನ್ನು ತ್ರಿಕೂಟ ಬಸದಿಯಾಗಿರಬೇಕೆಂದು ತರ್ಕಿಸಬಹುದಾಗಿದೆ. ಮುಂದಿನ ಅರ್ಧ ಮಂಟಪದ ಮೂರು ಅಂಕಣಗಳಲ್ಲಿ ಸುಂದರವಾದ ನಕ್ಷತ್ರಾಕಾರದ ಕಮಲಗಳಿವೆ. ನವರಂಗದ ದ್ವಾರದ ಪಂಚ ಶಾಖೆಯಲ್ಲಿ ಅಲಂಕಾರಿಕ ಪಟ್ಟಿಕೆಗಳಿದ್ದು ಲಲಾಟದಲ್ಲಿ ಪದ್ಮಾಸೀನ ತೀರ್ಥಂಕರನ ಕೆತ್ತನೆ ಇದೆ. ಈ ದೇವಾಲಯದಲ್ಲಿ ಎರಡು ಶಿಲಾ ಶಾಸನಗಳಿದ್ದು, ಅವು ಹೇಳುವ ಬ್ರಹ್ಮ ಜಿನಾಲಯ ಇದೇ ಆಗಿದ್ದು ಇದು ಸುಮಾರು ೧೧೨೪ರ ವೇಳೆಗೆ ನಿರ್ಮಾಣಗೊಂಡ ಅಂಶ ಗೊತ್ತಾಗುತ್ತದೆ. ಇದನ್ನು ಸೇಡಿಂಬಾಪುರದ ಬರ್ಮದೇವನು ನಿರ್ಮಿಸಿದ ಅಂಶ ಅಲ್ಲೇ ಇರುವ ೧೧೩೮ರ ಶಾಸನದಿಂದ ಗೊತ್ತಾಗುತ್ತದೆ. ಮೇಲಾಗಿ ಇಲ್ಲಿಯ ಬೇರೆ ಬೇರೆ ಶಾಸನಗಳಿಂದ ಹಿಂದೆ ಇಲ್ಲಿ ಶಾಂತಿನಾಥ, ವೃಷಭನಾಥ ಹಾಗೂ ಪಾರ್ಶ್ವನಾಥ ತೀರ್ಥಂಕರರು ಆರಾಧನೆಗೆ ಒಳಪಟ್ಟಿದ್ದ ಅಂಶ ಗೊತ್ತಾಗುತ್ತದೆ. ರೇವಣ ಸಿದ್ಧೇಶ್ವರ ಗುಡಿಯ ಬಳಿ ಇರುವ ಇನ್ನೊಂದು ಜೈನ ಬಸದಿಯು ಪ್ರಾಚೀನವಾದ ಗರ್ಭಗೃಹ, ತೆರೆದ ಅಂತರಾಳ, ನವರಂಗ ಹಾಗ ಇತ್ತೀಚಿನ ಪಡಸಾಲೆಗಳನ್ನು ಹೊಂದಿದೆ. ಇಲ್ಲಿ ಪಾರ್ಶ್ವನಾಥ, ಮಹಾವೀರ, ಚೌವ್ವೀಸ್ ತೀರ್ಥಂಕರ, ಯಕ್ಷರೇ ಮುಂತಾದ ಸ್ಥಾನಕ ಹಾಗೂ ಪದ್ಮಾಸೀನ ಭಂಗಿಯಲ್ಲಿರುವ ಜೈನ ಮೂರ್ತಿಗಳಿವೆ.

ಇಲ್ಲಿಯ ಶಾಸನಗಳು ಸೇಡಿಂಬಾಪುರದ ದುರ್ಗಮವಾದ ದುರ್ಗದ ಬಗ್ಗೆ ಮೇಲಿಂದ ಮೇಲೆ ವರ್ಣಿಸಿರುವುದನ್ನು ನೋಡಿದಾಗ ಹಿಂದೆ ಸೇಡಂಗೆ ಇದ್ದ ರಾಜಕೀಯ ಪ್ರಾಮುಖ್ಯತೆಯ ಅರಿವಾಗುತ್ತದೆ. ಆದರೆ ಇಂದು ಸೇಡಂನ ಕೋಟೆ ಸಂಪೂರ್ಣ ನಾಶವಾಗಿದ್ದು, ಎರಡು ಅಗಸಿ ಮಾತ್ರ ಉಳಿದಿವೆ. ಇಲ್ಲಿಯ ಜಂಗಮರ ಗಲ್ಲಿಯಲ್ಲಿರುವ ಶಿವಶಂಕರ ದೇವರ ಮಠವು ಪ್ರಾಚೀನದಾಗಿದ್ದು ಮಠದ ಮಾಳಿಗೆಯಲ್ಲಿರುವ 'ಸೀಸದ ಮಹಲ್'ನ ಭಿತ್ತಿಯ ಕೆಳಭಾಗವನ್ನು ಉದ್ಯಾನವನ, ಗೋಪುರ ಗಡಿಯಾರ, ಚಾರ್‌ಮಿನಾರ್, ಯೋಗಿ, ಸಾಲುಮಂಟಪ ಮುಂತಾದ ತೈಲ ವರ್ಣಚಿತ್ರಗಳಿಂದ ಅಲಂಕರಿಸಲಾಗಿದ್ದು ಸುಸ್ಥಿತಿಯಲ್ಲಿವೆ. ಉಳಿದಂತೆ ಊರಲ್ಲಿ ರಾಮ, ಕೊತ್ತಾಳ ಬಸವೇಶ್ವರ, ವಿಠಲ, ರೇವಣಸಿದ್ಧೇಶ್ವರ, ಮಲ್ಲಿಕಾರ್ಜುನ, ವೀರಭದ್ರ, ಬಾವಿ ಬಸವೇಶ್ವರ, ಗಣಪತಿ, ಎಲ್ಲಮ್ಮ, ವೆಂಕಟರಮಣ ಮುಂತಾದ ನವೀನ ಗುಡಿಗಳಿವೆ. ಹಾಲಪ್ಪೇಶ್ವರ ವಿರಕ್ತ ಮಠ, ಮಸೀದಿ, ದರ್ಗಾ ಹಾಗೂ ಇಗರ್ಜಿಗಳೂ ಇವೆ. ಊರ ಹೊರಗೆ ದೊಡ್ಡದಾದ ವಾಸವದತ್ತ ಸಿಮೆಂಟ್ ಫ್ಯಾಕ್ಟರಿ ಕೂಡ ಇದೆ.

**ಸೊನ್ನ** (೨೦೮೭)ವು ತಾಲೂಕು ಕೇಂದ್ರವಾದ ಜೇವರ್ಗಿಯಿಂದ ಪಶ್ಚಿಮಕ್ಕೆ ೧೬ ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಊರಾಗಿದೆ. ಇಲ್ಲಿಂದ ಈವರೆಗೆ ಯಾವುದೇ ಶಾಸನ ವರದಿಯಾಗಿಲ್ಲ. ಊರಲ್ಲಿ ಹನುಮಂತನ ಗುಡಿ ಆವರಣದಲ್ಲಿರುವ ಆಕರ್ಷಕವಾದ ಬಾಗಿಲವಾಡ, ಕಂಬ, ಸೂರ್ಯ, ಗಣಪ ಹಾಗೂ ಗಜಲಕ್ಷ್ಮಿಯ ಶಿಲ್ಪಗಳಿವೆ. ಊರ

ಹೊರಗೆ ಮುತ್ತುಕೋಡ ರಸ್ತೆಯಲ್ಲಿರುವ ಭರತೇ ಲಿಂಗದೇವರ ಗುಡಿಯಿಂದಾಗಿ ಈ ಊರಿನ ಪ್ರಾಚೀನತೆಯನ್ನು ಸುಮಾರು ೧೧ನೇ ಶತಮಾನದಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ಈ ದೇವಾಲಯವು ತ್ರಿಕೂಟವಾಗಿದ್ದು ಹಿಂದೆ ವಿಶಾಲವಾದ ನವರಂಗವನ್ನು ಮೂರು ದಿಕ್ಕಿನಿಂದಲೂ ಅಪ್ಪಿನಿಂತ ಗರ್ಭಗೃಹ-ಅಂತರಾಳಗಳನ್ನು ಹೊಂದಿತ್ತಾದರೂ, ಇಂದು ಪ್ರಧಾನ ಗರ್ಭಗೃಹ ಹಾಗೂ ಅಂತರಾಳ ಭಾಗಗಳಷ್ಟೇ ಉಳಿದಿದ್ದು, ಇತರ ಭಾಗಗಳು ಕುಸಿದು ಪಾಳು ಬಿದ್ದಿದೆ. ಉಳಿದಿರುವ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲವಾಡವು ಪಂಚ ಶಾಖೆಗಳನ್ನು ಹೊಂದಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಇದ್ದು ಶೈವ ದ್ವಾರಪಾಲಕರಿದ್ದಾರೆ. ತೆರೆದ ಅಂತರಾಳದ ಇಕ್ಕೆಲದಲ್ಲಿರುವ ಕಂಬಗಳು ಚೌಕಾಕಾರದ್ದಾಗಿದ್ದು ಕಲಾತ್ಮಕವಾಗಿವೆ. ಈ ಭಾಗದ ಭಿತ್ತಿಯು ಸುಂದರವಾದ ಕಿರುಸ್ತಂಭ ಶಿಖರಗಳಿಂದ, ಕಿರು ಮಂಟಪಗಳಿಂದ ಅಲಂಕೃತಗೊಂಡಿದ್ದು ಸುಂದರವಾಗಿದೆ. ಈ ಗುಡಿಯ ಬಳಿಯಲ್ಲೇ ಹೊಂಡವಿದ್ದು, ಇಲ್ಲಿನ ಪ್ರಶಾಂತ ವಾತಾವರವು ಮನಸ್ಸಿಗೆ ಮುದ ನೀಡುತ್ತದೆ.

ಇಲ್ಲಿಯ ಶ್ರೀ ಸಿದ್ಧಲಿಂಗೇಶ್ವರ ದಾಸೋಹ ವಿರಕ್ತ ಮಠವು ಸುಮಾರು ೧೭ನೇ ಶತಮಾನದಲ್ಲಿದ್ದ ಸಿದ್ಧಲಿಂಗ ಶಿವಯೋಗಿಗಳದಾಗಿದ್ದು ಈ ಮಠವನ್ನು ಸೂಗೂರ ದಾಸಪ್ಪನವರು ಕಟ್ಟಿಸಿ ತಾವೂ ಯೋಗಿಗಳಾದರು. ಈ ಮಠವಿಂದು ಶಿಕ್ಷಣ ಪ್ರಸಾರಕ್ಕೆ, ಧಾರ್ಮಿಕ ಜಾಗೃತಿಗೆ ಪೂರಕವಾಗಿ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿದೆ. ಉಳಿದಂತೆ ಊರಲ್ಲಿ ಬಸವಣ್ಣ, ಬೀರಲಿಂಗ, ಹನುಮಂತ ಹಾಗೂ ಲಕ್ಷ್ಮಿಯ ಗುಡಿಗಳಿದ್ದು, ಮಸೀದಿ ಹಾಗೂ ದರ್ಗಾ ಕೂಡ ಇವೆ.

**ಸೈಯದ್ ಚಿಂಚೋಳಿ** (೨೧೧೭)ವು ತಾಲೂಕು ಕೇಂದ್ರವಾದ ಗುಲಬರ್ಗಾದಿಂದ ವಾಯವ್ಯಕ್ಕೆ ೧೦ ಕಿ.ಮೀ. ದೂರದಲ್ಲಿದೆ. ಪ್ರಾಚೀನ ಶಾಸನಗಳಲ್ಲಿ 'ಚಿಂಚುವಳ್ಳಿ' ಎಂದೇ ಉಲ್ಲೇಖಿತಗೊಂಡಿರುವ ಈ ಊರು ಹಿಂದೆ ಗೊಂಕ-೧೨೦ಕ್ಕೆ ಸೇರಿತ್ತು. ಇಲ್ಲಿಂದ ಈವರೆಗೆ ಎರಡು ಶಾಸನಗಳು ವರದಿಯಾಗಿವೆ. ಹನುಮಂತನ ಗುಡಿಯ ಬಳಿ ಇರುವ ಒಂದೇ ಶಿಲೆಯ ಮೇಲೆ ಬರೆಯಲ್ಪಟ್ಟಿರುವ ಈ ಎರಡು ಶಾಸನಗಳಲ್ಲಿ ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ ೧೧೨೧ರ ಶಾಸನವು ಮಹಾಮಂಡಳೇಶ್ವರ ಗೊಂಕರಸ, ಮಹಾಪ್ರಧಾನ ಭೀಮನಯ್ಯ ಹಾಗೂ ಊರ ಪ್ರಭು ನಾರಾಯಣ ದಂಡನಾಯಕರು ಸಂಯುಕ್ತವಾಗಿ ಚಿಂಚವಳ್ಳಿಯಲ್ಲಿಯ ನಾರಣೇಶ್ವರ, ಕೇಶವ ಹಾಗೂ ಕಮಲಗರ್ಭ ದೇವರುಗಳ ಪೂಜಾ ವಿಧಿಗೆ, ಸತ್ರಕ್ಕೆ ಹಾಗೂ ಪುರಾಣ ಖಂಡಿಕಕ್ಕೆಂದು ಭೂಮಿಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸಿದರೆ, ಇನ್ನೊಂದು ಶಾಸನ ಕಳಚೂರಿ ಅರಸ ರಾಯಮುರಾರಿ ಸೋವಿದೇವನ ಕಾಲದ್ದಾಗಿದ್ದು ೧೧೭೩ರಲ್ಲಿ ಮಹಾಪ್ರಧಾನ ಮಾಧವಯ್ಯನು ಉಪ್ಪಲವಾವಿಯ ಮೇಲಾಳ್ಕೆಯನ್ನು ಚಿಂಚವಳ್ಳಿಯ ನಾರಾಯಣೇಶ್ವರ ದೇವರಿಗೆ ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ಇದೇ ಶಾಸನ ಇನ್ನೂ ಹಲವಾರು ಅಧಿಕಾರಿಗಳು ಆ ದೇವಾಲಯದ ಸ್ಥಾನಾಚಾರ್ಯ ತೇಜೋರ್‍ರಾಶಿ ಪಂಡಿತರಿಗೆ ಬೇರೆ ಬೇರೆ ಸುಂಕಗಳನ್ನು ದಾನ ಬಿಟ್ಟ ಅಂಶವನ್ನೂ ತಿಳಿಸುತ್ತದೆ. ಈ ಶಾಸನಗಳಿಂದ ಹಿಂದೆ ಇಲ್ಲೊಂದು ತ್ರಿಕೂಟ ದೇವಾಲಯವಿದ್ದ ಅಂಶ ವೇದ್ಯವಾಗುತ್ತದೆ.

ಆದರೆ ಇಲ್ಲಿಂದು ಪ್ರಾಚೀನ ದೇಗುಲಗಳಾವುದೂ ಉಳಿದಿಲ್ಲ. ಇಲ್ಲಿಯ ಸಂಗಮೇಶ್ವರ ಗುಡಿ ಬಯಲಲ್ಲಿ ಕಲ್ಯಾಣದ ಚಾಳುಕ್ಯರ ಕಾಲದ ಕಂಬ ಹಾಗೂ ಶಿಲ್ಪಗಳು ಚದುರಿ ಬಿದ್ದಿವೆ. ಊರ ತುಂಬ ಪ್ರಾಚೀನ ಅವಶೇಷಗಳು ಹರಡಿಕೊಂಡಿವೆ. ಉಳಿದಂತೆ ಊರಲ್ಲಿ ಹನುಮಂತ ಮಲ್ಲಿಕಾರ್ಜುನ, ದುರ್ಗಮ್ಮ ಹಾಗೂ ಮರಗಮ್ಮನ ಗುಡಿಗಳಿದ್ದು, ಜುಮ್ಮಾ ಮಸೀದಿ ಇದೆ. ಇಲ್ಲಿಯ ಸಾತೇ ಸೈಯದ್ ಪೀರ್ ದರ್ಗಾ ಆದಿಲ್ ಷಾಹಿ ಅರಸರ ಕಾಲಕ್ಕೆ ಸೇರಿದ್ದು, ಅಲ್ಲೊಂದು ಪರ್ಷಿಯನ್ ಶಾಸನವಿದ್ದು ಪ್ರಕಟವಾಗಬೇಕಾಗಿದೆ. ಈ ದರ್ಗಾವು ಏಳು ಜನ ಸಹೋದರರ ಮಜಾರಗಳನ್ನು ಹೊಂದಿದ್ದು, ರಬ್ಬಿಲಾವುಲ್ ತಿಂಗಳಲ್ಲಿ ೧೫ ರಿಂದ ೧೭ನೆಯ ತಾರೀಖಿನವರೆಗೆ ಮೂರು ದಿನಗಳ ಉರುಸು ನಡೆಯುತ್ತದೆ.

**ಹಗರಟಗಿ** (೩೪೦೭)ಯು ತಾಲೂಕು ಕೇಂದ್ರವಾದ ಸುರಪುರದಿಂದ ನೈಋತ್ಯಕ್ಕೆ ೪೮ ಕಿ.ಮೀ. ದೂರದಲ್ಲಿ ಡೋಣಿ ನದಿಯ ಎಡ ದಂಡೆಯ ಮೇಲಿರುವ ಚಾರಿತ್ರಿಕ ಮಹತ್ವದ ಪ್ರಾಚೀನ ಕೇಂದ್ರ. ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಯೂ ಆಗಿದ್ದ ಇದು ಶಾತವಾಹನರ ಕಾಲದ ಅವಶೇಷಗಳನ್ನು ಹೊಂದಿದ್ದರೂ ಐತಿಹಾಸಿಕ ದಾಖಲೆಗಳಲ್ಲಿ ನಿಖರವಾಗಿ ಗೋಚರಿಸಲಾರಂಭಿಸುವುದು ಹನ್ನೊಂದನೇ ಶತಮಾನದಿಂದೀಚೆಗೆ. ಸುಮಾರು ೧೧-೧೩ನೇ ಶತಮಾನದ ಹತ್ತಾರು ಶಿಲಾಶಾಸನಗಳಲ್ಲಿ 'ಪಗಲಟೆ-೩೦೦', 'ಪಗರಿಟೆನಾಡು', 'ಹಗರಿಟ್ಟಗೆ-೩೦೦' ಎಂದೇ ಉಲ್ಲೇಖಿತಗೊಂಡು, ಮುನ್ನೂರು ಹಳ್ಳಿಗಳ ಆಡಳಿತ ಕೇಂದ್ರವಾಗಿ, ಧಾರ್ಮಿಕ ಕೇಂದ್ರವಾಗಿ ಮತ್ತು ಶೈಕ್ಷಣಿಕ ಕೇಂದ್ರವಾಗಿ ಮೆರೆದಿರುವ ಈ ಊರಿನಿಂದ

ಈವರೆಗೆ ಹನ್ನೆರಡು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಆರು ಕಲ್ಯಾಣದ ಚಾಳುಕ್ಯರಿಗೂ, ಒಂದು ಕಳಚೂರಿಗಳಿಗೂ ಸೇರಿದ್ದು, ಉಳಿದವು ದೇವಗಿರಿಯ ಯಾದವರ ಕಾಲದ್ದಾಗಿವೆ. ಇವುಗಳಿಂದ 'ಹಗರಟಗಿ'ಯು ಹಿಂದೆ ಸರ್ವನಮಸ್ಯದ ಉತ್ತಮ ಅಗ್ರಹಾರವಾಗಿದ್ದು, ೫೦೦ ಮಹಾಜನರನ್ನು ಹೊಂದಿದ್ದು, ಪಾಂಡವ ದತ್ತಿ ಊರೆಂದೇ ಪ್ರಸಿದ್ಧವಾಗಿತ್ತೆಂದು ತಿಳಿದು ಬರುತ್ತದೆ. ಇವುಗಳಲ್ಲಿ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಗೆ ಸೇರಿದ ೧೦೯೨ರ ಶಾಸನವೇ ಅತ್ಯಂತ ಪ್ರಾಚೀನ ಶಾಸನವಾಗಿದ್ದು, ಮಹಾಪ್ರಧಾನ ದಂಡನಾಯಕ ಅಹಮಲ್ಲರಸನು ಹಗರಿಟ್ಟಿಗೆಯ ನಖರೇಶ್ವರ ದೇವರಿಗೆ ಮುನ್ನೂರು ಮತ್ತರು ಭೂಮಿಯನ್ನು ದಾನ ಮಾಡಿದ ಅಂಶವನ್ನು ಅರುಹಿದರೆ, ಕರ್ಣನ ಗುಡಿ ಮುಂದಿರುವ ೧೧೨೩ರ ತ್ರುಟಿತ ಶಾಸನ ಅದೇ ನಖರೇಶ್ವರ ದೇವರ್ಗೆ ಅಲ್ಲಿನ ಮಹಾಜನಗಳೂ ಸೇರಿದಂತೆ ಇತರರು ನೀಡಿದ ವಿವಿಧ ದಾನಗಳ ಬಗ್ಗೆ ಹೇಳುತ್ತದೆ. ಊರ ಪಶ್ಚಿಮದಲ್ಲಿರುವ 'ಕಳ್ಳರ ಗುಡಿ' ಮುಂದಿರುವ ೧೧೨೬ರ ಭಾಗಶಃ ಹಾಳಾಗಿರುವ ಶಾಸನವು ಮಲ್ಲಿಕಾರ್ಜುನ ಗುಡಿಯ ನಿರ್ಮಾಣದ ಬಗ್ಗೆ ಪ್ರಸ್ತಾಪಿಸುತ್ತ ಸಾಂದರ್ಭಿಕವಾಗಿ ಲಕ್ಕಣೇಶ್ವರ ದೇವಾಲಯದ ಬಗೆಗೂ ಹೇಳುತ್ತದೆ. ಆರನೇಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ ಹಗರಟಗಿಯ ಮತ್ತೊಂದು ಶಾಸನ ಭೋಗಾರ ನಖರ ಸಂಘದ ೧೨೦ ಒಕ್ಕಲುಗಳು ಕೂಡಿ, ಶಿವಾಲಯವನ್ನು ನಿರ್ಮಿಸಿ, ಅನೇಕ ದಾನಗಳನ್ನು ನೀಡಿದ ಅಂಶವನ್ನು ಹೇಳುತ್ತದೆ. ಊರ ಹೊರಗಿರುವ ಬಸವಣ್ಣನ ಗುಡಿಯಲ್ಲಿ ಮೂರು ಶಾಸನಗಳಿದ್ದು, ಇವುಗಳಲ್ಲಿ ಇಮ್ಮಡಿ ಜಗದೇಕಮಲ್ಲನ ಕಾಲಕ್ಕೆ ಸೇರಿದ ೧೧೪೪ರ ಶಾಸನ ಹಗರಟಗಿಯ ಮಹಾಜನರು ಹಾಗೂ ಐಹೊಳೆ-೫೦೦ ವರ್ತಕ ಶ್ರೇಣಿಯೂ ಸೇರಿದಂತೆ ವಿವಿಧ ವರ್ಗದವರು ತಾವೇ ನಿರ್ಮಿಸಿದ ಗವರೇಶ್ವರ ದೇವರ ಅಂಗಭೋಗಕ್ಕೆಂದು ಮಾಣಿಕೇಶ್ವರದ ಕೋಲಲ್ಲಿ ಐದು ಮತ್ತರು ಭೂಮಿಯೂ ಸೇರಿದಂತೆ ವಿವಿಧ ಸುಂಕಗಳನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಮತ್ತೊಂದು ಶಾಸನ ಕೊಳಗದ ಮಲ್ಲಿಮಯ್ಯ ತಾನು ಮಾಡಿಸಿದ ಮಲ್ಲಿಕಾರ್ಜುನ ದೇವರಿಗೆಂದು ಭೂಮಿಯನ್ನು ಕೊಂಡು ಗವರೇಶ್ವರ ದೇವಾಲಯದ ಆಚಾರ್ಯ ಸೂರ್ಯರಾಶಿ ಪಂಡಿತರಿಗೆ ಧಾರೆ ಎರೆದ ಅಂಶವನ್ನು ಹೇಳುತ್ತದೆ. ಇದೇ ಗುಡಿಯಲ್ಲಿರುವ ೧೧೬೬ ರ ಮೂರನೆಯ ಶಾಸನ ಕಳಚೂರ್ಯ ಸಂಕಮದೇವನದಾಗಿದ್ದು, ಅಲ್ಲಿನ ವರ್ತಕರು ಗವರೇಶ್ವರ ದೇವರ ಪೂಜೆ-ಪುರಸ್ಕಾರಕ್ಕೆಂದು ಭೂಮಿಯನ್ನು ಖರೀದಿಸಿ ದಾನ ಬಿಟ್ಟ ವಿಷಯವನ್ನು ಹೇಳುತ್ತ, ಅವರು ಖರೀದಿಸಿದ ಭೂಮಿ ಸತ್ರದ ತ್ರಿಕೂಟೇಶ್ವರ ದೇವಾಲಯಕ್ಕೆ ಸೇರಿದ್ದೆಂಬ ಮಹತ್ವದ ವಿಷಯವನ್ನು ತಿಳಿಸುತ್ತದೆ. ಜೊತೆಗೆ ಅಲ್ಲಿಯ ಭೈರವ ದೇವರಿಗೆಂಡು ಪ್ರತ್ಯೇಕ ಭೂದಾನ ಬಿಟ್ಟ  ಅಂಶವನ್ನೂ ತಿಳಿಸುತ್ತದೆ. ಭೀಮನ ಗುಡಿ ಮುಂದೆ ಬಿದ್ದಿರುವ ಶಿಲಾಶಾಸನವು ಯಾದವ ಇಮ್ಮಡಿ ಸಿಂಘಣದೇವನ ಆಳ್ವಿಕೆಗೆ ಸೇರಿದ್ದು ೧೨೧೮ರಲ್ಲಿ ಹಗರಟಗಿಯ ಮಹಾಜನರು, ಸೆಟಿಗುತ್ತ ರಾಮಿಸೆಟ್ಟಿ, ಮುಮ್ಮುರಿದಂಡರು, ಹಾಗೂ ಬಿಲ್ಲ ಮುನ್ನೂರ್ವರು ಮಹಾಸಭೆಯಾಗಿ ನೆರೆದು ಅಲ್ಲಿಯ ಸ್ವಯಂಭು ಭೀಮೇಶ್ವರ ದೇವರ ಸ್ಥಾನಾಚಾರ್ಯ ಬ್ರಹ್ಮರಾಶಿ ಪಂಡಿತರಿಗೆ ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಹರಿಜನ ಕೇರಿಯ ವೆಂಕಟರಮಣ ಗುಡಿಯ ಬಳಿ ಇರುವ ಶಾಸನವು ಯಾದವ ಇಮ್ಮಡಿ ಸಿಂಘಣನ ಆಳ್ವಿಕೆಗೆ ಸೇರಿದ್ದು ೧೨೨೦ರಲ್ಲಿ ಸೇನಬೋವ ಸಿರಿಯಣ್ಣನು ಹಗರಟಗಿಯ ಸಮಸ್ತರ ಸಮ್ಮುಖದಲ್ಲಿ ತ್ರಿಪುರಾಂತಕದೇವ, ಉಮಾಭವ ಹಾಗೂ ಕೇಶವ ದೇವರ ಸೇವೆಗೆಂದು ಚಂದ್ರಶಿವ ಪಂಡಿತರಿಗೆ ನಾಲ್ಕು ಮತ್ತರು ಭೂಮಿಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಊರ ಅಗಸಿ ಬಾಗಿಲ ಗೋಡೆಯಲ್ಲಿ ಸೇರಿರುವ ೧೨೨೪ರ ನಿಶಿದಿ ಶಾಸನವು ಜೈನ ಧರ್ಮಕ್ಕೆ ಸೇರಿದ್ದು ಇಂಗಳೇಶ್ವರಕ್ಕೆ ಅಧೀನವಾಗಿದ್ದ ಮೂಲಸಂಘ ಪುಸ್ತಕ ಗಚ್ಛ, ದೇಸಿಯ ಗಣದ ಕೊಂಡಕುಂದಯಾದ್ರಿಯ ದೇವಚಂದ್ರ ಮುನಿಗಳು ಸಲ್ಲೇಖನ ವ್ರತವನ್ನು ಆಚರಿಸಿ ನಿರ್ವಾಣ ಹೊಂದಿದ ವಿಚಾರವನ್ನು ತಿಳಿಸುತ್ತ ಈ ನಿಷಿದೆಗೆಯನ್ನು ಬಬ್ಬರ ಕಾಳಿಸೆಟ್ಟಿ ಮಾಡಿಸಿದನೆಂದು ಹೇಳುತ್ತದೆ. ಇದರಿಂದ ಹಗರಟಗಿಯು ಹಿಂದೆ ಜೈನರ ನೆಲೆಯಾಗಿತ್ತೆಂಬ ಅಂಶ ಗೊತ್ತಾಗುತ್ತದೆ.

ಊರ ಹನುಮಂತನ ಗುಡಿಯಲ್ಲಿರುವ ೧೨೨೯ರ ಶಾಸನವು ಯಾದವ ಇಮ್ಮಡಿ ಸಿಂಘಣನ ಕಾಲದ್ದಾಗಿದ್ದು, ಹಗರಟಗಿಯ ಕೇತಗಾವುಂಡನ ಇಬ್ಬರು ಮಕ್ಕಳಾದ ರಾಮಗಾವುಂಡ ಹಾಗೂ ಸಿಂಗಗಾವುಂಡರು ತಾವು ಪ್ರತಿಷ್ಠೆ ಮಾಡಿದ ಸಿಡಿಲಭಾವಿ ರಾಮನಾಥ, ಅಯಿನೂರೇಶ್ವರ, ಬಾಚೇಶ್ವರ, ಕೇತೇಶ್ವರ ಹಾಗೂ ಚೌಡೇಶ್ವರಿ ದೇವರುಗಳಿದ್ದ ಪಂಚಸ್ಥಾನದ ಎಲ್ಲಾ ದೇವರುಗಳಿಗೆಂದು ಭೂದಾನ ಮಾಡಿದ ಸಂದರ್ಭದಲ್ಲಿ ಅಲ್ಲಿಯ ೯೨ ಜೇಡ ಪಟ್ಟೆಗಾರರು ಆ ದೇವರಿಗೆ ಚೈತ್ರ-ಪವಿತ್ರಕ್ಕೆಂದು ಒಕ್ಕಲಿಗೆ ಒಂದೊಂದರಂತೆ ಹಾಗ ದಾನ ಕೊಟ್ಟ ಅಂಶವನ್ನು ತಿಳಿಸುತ್ತದೆ. ಭೀಮನ ಗುಡಿ ಮುಂದೆ ನಾಲ್ಕಾರು ವೀರಗಲ್ಲುಗಳಿದ್ದು ಅವುಗಳಲ್ಲೊಂದರ ಮೇಲಿನ ಶಾಸನವು ತುರುಕಾಳಗದಲ್ಲಿ ಮಡಿದ ತನ್ನಣ್ಣನಿಗಾಗಿ ಈ

ಕಲ್ಲನ್ನು ರೇವಯ್ಯ ನಿಲ್ಲಿಸಿದನೆಂದು ಹೇಳುತ್ತದೆ. ಹಗರಟಗಿಯ ಸಾಂಸ್ಕೃತಿಕ ಇತಿಹಾಸವನ್ನು ತಿಳಿಯಲು ನೆರವಾಗುವ ಈ ಶಾಸನಗಳಿಂದ ಹಿಂದೆ ಇಲ್ಲಿ ಸ್ವಯಂಭು ಭೀಮೇಶ್ವರ, ಲಕ್ಕಣೇಶ್ವರ, ಮಲ್ಲಿಕಾರ್ಜುನ, ತ್ರಿಪುರಾಂತಕ, ತ್ರಿಕೂಟೇಶ್ವರ, ಸಿಡಿಲಭಾವಿ ರಾಮನಾಥನಿದ್ದ ಪಂಚಸ್ಥಾನ, ನಖರೇಶ್ವರ, ಗವರೇಶ್ವರ ಹಾಗೂ ಭೈರವನ ದೇವಾಲಯಗಳಿದ್ದವೆಂದು ಗ್ರಹಿಸಬಹುದಾಗಿದ್ದು ಅವುಗಳನ್ನು ಇಂದು ಹಗರಟಗಿಯಲ್ಲಿ ಗುರುತಿಸಬೇಕಾಗಿದೆ.

ಹಗರಟಗಿಯು ಕೋಟೆಯಿಂದಾವೃತವಾಗಿದ್ದು, ನಾಲ್ಕು ದಿಕ್ಕಿನಲ್ಲೂ ಅಗಸೆಗಳನ್ನು ಹೊಂದಿದ್ದು, ಇದರಿಂದ ಹಿಂದೆ ಅದಕ್ಕೆ ಇದ್ದ ರಾಜಕೀಯ ಪ್ರಾಮುಖ್ಯತೆಯ ಅರಿವಾಗುತ್ತದೆ. ಶಾಸನೋಕ್ತ ಗುಡಿಗಳಿಂದು ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುತ್ತಿದ್ದು, ಊರ ಹೊರಗೆ ಹೊಲಗಳಲ್ಲಿ ಶಿಥಿಲಾವಸ್ಥೆಯಲ್ಲಿ ನಿಂತಿವೆ.

ಊರ ಆಗ್ನೇಯಕ್ಕೆ ಬೂದಿಹಾಳ ರಸ್ತೆಯಲ್ಲಿ ನೀಲಕಂಠೇಗೌಡರ ಹೊಲದಲ್ಲಿ ಶಿಥಿಲಾವಸ್ಥೆಯಲ್ಲಿರುವ ಶಾಸನಸ್ಥ ನಖರೇಶ್ವರ ಗುಡಿಯನ್ನು ಇಂದು ಸ್ಥಳೀಕರು 'ಕರ್ಣನ ಗುಡಿ' ಎಂದು ಕರೆಯುತ್ತಾರೆ. ಪೂರ್ವಾಭಿಮುಖವಾಗಿರುವ ಈ ಗುಡಿಯು ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ನಿರಾಡಂಬರವಾಗಿರುವ ಈ ಗುಡಿಯ ಗರ್ಭಗುಡಿಯಿಂದು ಬರಿದಾಗಿದ್ದು, ಇದರ ಬಾಗಿಲವಾಡವು ಸರಳವಾದ ಮೂರು ಶಾಖೆಗಳನ್ನು ಹೊಂದಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಇದೆ. ನವರಂಗದಲ್ಲಿ ಎರಡು ದೇವಕೋಷ್ಠಗಳಿದ್ದು, ಒಂದರಲ್ಲಿ ನಾಗ ಶಿಲ್ಪವಿದೆ. ಕದಂಬ ನಾಗರ ಶಿಖರವನ್ನುಳ್ಳ ಈ ಗುಡಿಯ ಮುಂದಿರುವ ತ್ರುಟಿತ ಶಾಸನ ಉಲ್ಲೇಖಿಸುವ ನಖರೇಶ್ವರ ಗುಡಿ ಇದಾಗಿದ್ದು, ಹಿಂದೆ ವರ್ತಕರ ಆರಾಧ್ಯ ದೈವವಾಗಿತ್ತು. ಬೂದಿಹಾಳ ರಸ್ತೆಯಲ್ಲೇ ಸ್ವಲ್ಪ ಎಡಕ್ಕೆ ಇರುವ ಮೂರು ಕಳಸದ ಗುಡಿ ಕೂಡ ಪೂರ್ವಾಭಿಮುಖವಾಗಿದ್ದು, ಪಶ್ಚಿಮ, ಉತ್ತರ ಹಾಗೂ ದಕ್ಷಿಣದಲ್ಲಿ ಪ್ರತ್ಯೇಕ ಗರ್ಭಗೃಹ ಹಾಗೂ ಅರ್ಧ ಮಂಟಪಗಳನ್ನು ಹೊಂದಿದ್ದು ಇವುಗಳಿಗೆ ಒಂದೇ ನವರಂಗವಿದೆ. ಗರ್ಭಗೃಹದ ಬಾಗಿಲವಾಡವು ಸರಳವಾಗಿದ್ದು, ಇಕ್ಕೆಲದಲ್ಲಿ ಪೂರ್ಣ ಕಳಸಗಳಿದ್ದು, ಲಲಾಟವೂ ನಿರಾಡಂಬರವಾಗಿದೆ. ನವರಂಗದಲ್ಲಿ ಎಂಟು ದೇವಕೋಷ್ಠಗಳಿವೆ. ಈ ತ್ರೀಕೂಟ ದೇವಾಲಯದ ದಕ್ಷಿಣ ಭಾಗವು ಪೂರ್ಣ ಶಿಥಿಲವಾಗಿದ್ದು, ಕದಂಬ ನಾಗರ ಶೈಲಿಯ ಶಿಖರಗಳು ಉಳಿದೆರಡು ಗರ್ಭಗೃಹಗಳನ್ನು ಅಲಂಕರಿಸಿವೆ. ಇದು ತ್ರಿಕೂಟವಾಗಿದ್ದು ಹಿಂದೆ ಇಲ್ಲಿ ಶಿಕ್ಷಣ ನೀಡುವ ವ್ಯವಸ್ಥೆ ಇರುತ್ತಿತ್ತು.

ಸಂಗನಗೌಡ ಪೋಲೀಸ್ ಪಾಟೀಲರ ಹೊಲದಲ್ಲಿರುವ ನಾರಾಯಣ ಗುಡಿಯು (ಕಳ್ಳರ ಗುಡಿ) ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು ಪೂರ್ವಾಭಿಮುಖವಾಗಿದ್ದು, ಶಿಖರವೂ ಸೇರಿದಂತೆ ಹಲವಾರು ಭಾಗಗಳು ಕಣ್ಮರೆಯಾಗಿದ್ದು, ಶಿಥಿಲಾವಸ್ಥೆಯಲ್ಲಿದೆ. ನವರಂಗದ ಕಂಬಗಳು ಆಕರ್ಷಕವಾಗಿವೆ. ನವರಂಗದಲ್ಲಿ ದೇವಕೋಷ್ಠಗಳಿದ್ದು ಬರಿದಾಗಿವೆ. ಈ ದೇವಾಲಯದ ಮುಂಭಾಗದಲ್ಲಿ ಹೊಂಡವಿದೆ. ಶಾಸನೋಕ್ತ ಮಲ್ಲಿಕಾರ್ಜುನ ಗುಡಿ ಇದೇ ಆಗಿರಬಹುದೇ? ಈ ಗುಡಿಯ ಸಮೀಪದಲ್ಲೇ ಪೂರ್ವಾಭಿಮುಖವಾಗಿ ನಿಂತಿರುವ ಗಂಗಾಧರೇಶ್ವರ ಗುಡಿ ಇದೆ. ಗರ್ಭಗೃಹ, ತೆರೆದ ಅಂತರಾಳ, ನವರಂಗ ಹಾಗೂ ನಂದಿ ಮಂಟಪಗಳನ್ನುಳ್ಳ ಇದರ ಗರ್ಭಗೃಹದ ಬಾಗಿಲವಾಡವು ನಾಲ್ಕು ಶಾಖೆಗಳನ್ನು ಹೊಂದಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಇದೆ. ಈ ಗುಡಿಗೆ ಪಾರ್ಶ್ವದಿಂದ (ಉತ್ತರ) ಪ್ರವೇಶವಿದೆ. ಭಾಗಶಃ ಜೀರ್ಣಾವಸ್ಥೆಯಲ್ಲಿರುವ ಈ ಗುಡಿಗೆ ಕದಂಬ ನಾಗರ ಶಿಖರವಿದ್ದು, ಶಾಸನೋಕ್ತ ಲಕ್ಕಣೇಶ್ವರ ಗುಡಿ ಇದೇ ಆಗಿರಬೇಕೆನಿಸುತ್ತದೆ. ಈ ಗುಡಿಯ ಎಡಬದಿಯಲ್ಲಿ ಪುಷ್ಕರಣಿ ಇದೆ.

ಇಲ್ಲಿಯ ಮತ್ತೊಂದು ದೇವಾಲಯವಾದ ಧರ್ಮಲಿಂಗೇಶ್ವರ ಗುಡಿಯು ಪೂರ್ಣ ಜೀರ್ಣೋದ್ಧಾರಗೊಂಡಿದ್ದರೂ, ಬೃಹತ್ತಾದ ಬಲಹರಿ ಲಿಂಗವನ್ನು ಒಳಗೊಂಡಿದ್ದು, ಆಕರ್ಷಕವಾದ ಬಾಗಿಲವಾಡ, ಚಂದ್ರಶಿಲೆ, ಮಕರತೋರಣ, ಭೈರವ, ನಾಗಶಿಲ್ಪ ಹಾಗೂ ಉಮಾ ಮಹೇಶ್ವರರ ಬಿಡಿ ಶಿಲ್ಪಗಳು, ವಿಶಿಷ್ಟವಾದ ರಾಶಿಕಲ್ಲೇ ಮುಂತಾದ ಶಿಲ್ಪಾವಶೇಷಗಳನ್ನು ಇಲ್ಲಿ ಕಾಣಬಹುದಾಗಿದೆ. ಇಲ್ಲಿಯ ಬಾಗಿಲವಾಡವು ಸುಮಾರು ೧೫ ಅಡಿ ಎತ್ತರವಿದ್ದು, ಸಪ್ತ ಶಾಖೆಗಳನ್ನು ಹೊಂದಿದ್ದು, ಉತ್ತರಾಂಗದಲ್ಲಿ ಕ್ರಮವಾಗಿ ಆದಿತ್ಯ, ಗಣಪ, ಬ್ರಹ್ಮ ಶಿವ, ವಿಷ್ಣು, ಕಾರ್ತಿಕೇಯ ಹಾಗೂ ಸೂರ್ಯನ ಕಿರು ಶಿಲ್ಪಗಳನ್ನುಳ್ಳ ಏಳು ಕಿರು ಮಂಟಪಗಳಿದ್ದು ಅವುಗಳ ಶಿಖರಗಳು ವೈವಿಧ್ಯಮಯವಾಗಿವೆ. ಇದೂ ಕೂಡ ತ್ರಿಕೂಟ ದೇವಾಲಯವಾಗಿದ್ದು ಶಾಸನೋಕ್ತ ತ್ರಿಪುರಾಂತಕ ದೇವ ಇದೇ ಇರಬೇಕೆಂದು ತೋರುತ್ತದೆ.

ಊರ ಉತ್ತರಕ್ಕೆ ಇರುವ ಹನುಮಂತನ ಗುಡಿಯು ಕಲ್ಯಾಣದ ಚಾಳುಕ್ಯರ ಕಾಲದ ಕಂಬಗಳನ್ನು ಬಳಸಿ ನಂತರದಲ್ಲಿ ನಿರ್ಮಿಸಿರುವ ದೇವಾಲಯವಾಗಿದ್ದು, ಈ ಗುಡಿಯಲ್ಲಿರುವ ಶಾಸನ ಉಲ್ಲೇಖಿಸುವ ಸಿಡಿಲ ಬಾವಿ ರಾಮನಾಥನ ದೇವಾಲಯವು ಈಗ 'ಋಷಿ ಗುಡಿ' ಎಂದು ಕರೆಯಲ್ಪಡುತ್ತಿದ್ದು, ಊರ ಪೂರ್ವಕ್ಕೆ ಸುಮಾರು ಒಂದೂವರೆ ಕಿ.ಮೀ. ದೂರದಲ್ಲಿ ನೀರ್ಚಿಲುಮೆಯೊಂದರ ಬಳಿಯಿದ್ದು ಪೂರ್ಣ ಶಿಥಿಲವಾಗಿದೆ

ಊರ ಉತ್ತರಕ್ಕೆ ಇರುವ ಬಸವಣ್ಣನ ಗುಡಿಯೇ ಶಾಸನೋಕ್ತ ಗವರೇಶ್ವರ ದೇವಾಲಯವಾಗಿದ್ದು, ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು ಪೂರ್ವಾಭಿಮುಖವಾಗಿದೆ. ಭಾಗಶಃ ಜೀರ್ಣೋದ್ಧಾರಗೊಂಡಿರುವ ಈ ಗುಡಿಯಲ್ಲಿ ಇರುವ ಮೂರು ಶಾಸನಗಳಿಂದ, ಇದು ೧೨ನೇ ಶತಮಾನದಲ್ಲಿ ವಿವಿಧ ವರ್ತಕ ವೃಂದದವರ ಆರಾಧ್ಯ ದೈವವಾಗಿದ್ದು, ವಿವಿಧ ಬಗೆಯ ದತ್ತಿಗಳನ್ನು ಪಡೆದಿತ್ತೆಂಬ ಅಂಶ ಸ್ಪಷ್ಟವಾಗುತ್ತದೆ. ಈ ಗುಡಿಯ ಗರ್ಭಗೃಹದಲ್ಲಿ ನಂದಿ ಇದ್ದು, ಗುಡಿಗೆ ಗವರೇಶ್ವರ ಎಂದು ಕರೆದಿರುವುದು ಗಮನಿಸಬೇಕಾದ ಅಂಶವಾಗಿದೆ.

ಊರ ಪಶ್ಚಿಮಕ್ಕೆ ಇರುವ ಕುಂತಿಗುಡಿ, ಅರ್ಜುನ ಗುಡಿ ಹಾಗೂ ಭೀಮೇಶ್ವರ ಗುಡಿಗಳು ಕಲ್ಯಾಣದ ಚಾಳುಕ್ಯರ ಕಾಲದ ವಾಸ್ತು ರಚನೆಗಳಾಗಿದ್ದು, ಸರಳ-ಸುಂದರವಾಗಿವೆ. ಈ ಮೂರರಲ್ಲಿ ಕುಂತಿ ಗುಡಿಯು ಗಾತ್ರದಲ್ಲಿ ಕಿರಿದಾಗಿದ್ದು, ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಪೂರ್ವಾಭಿಮುಖವಾಗಿದೆ. ಗರ್ಭಗೃಹದಲ್ಲಿ ಪ್ರಾಚೀನ ಲಿಂಗವಿದ್ದು, ಇದರ ಬಾಗಿಲವಾಡವು ಚತುರ್ ಶಾಖಾಲಂಕೃತವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಇದೆ. ಗುಡಿಯ ಎಡಭಾಗದಲ್ಲಿ ಹೊಂಡವಿದ್ದು, ಈ ದಿಕ್ಕಿನಲ್ಲಿರುವ ದ್ವಾರಬಂಧವು ಆಕರ್ಷಕವಾಗಿದೆ.

ಈ ಗುಡಿಯ ಬಳಿಯಲ್ಲೇ ಇರುವ 'ಅರ್ಜುನ ಗುಡಿ'ಯು ವಿಶಾಲವಾಗಿದ್ದು, ಗರ್ಭಗೃಹ, ಅಂತರಾಳ, ನವರಂಗ ಹಾಗೂ ತೆರೆದ ಸಭಾ ಮಂಟಪಗಳನ್ನು ಹೊಂದಿದ್ದು ಆಕರ್ಷಕವಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ದ್ವಾರಬಂಧವು ನಾಲ್ಕು ಶಾಖೆಗಳಿಂದ ಅಲಂಕೃತಗೊಂಡಿದ್ದು ಶೈವ ದ್ವಾರಪಾಲಕರನ್ನು ಹೊಂದಿದೆ. ಅಂತರಾಳವನ್ನು ಸುಂದರವಾದ ಮಕರ ತೋರಣದಿಂದ ಅಲಂಕರಿಸಲಾಗಿದ್ದು, ನವರಂಗದ ಛತ್ತನ್ನು ಕಮಲಗಳಿಂದ ಅಲಂಕರಿಸಲಾಗಿದೆ. ನವರಂಗದ ಬಾಗಿಲವಾಡವೂ ಆಕರ್ಷಕವಾಗಿದ್ದು, ಮುಂದೆ ತೆರೆದ ಮಂಟಪವಿದೆ. ಈ ಗುಡಿಯಿಂದ ಅನತಿ ದೂರದಲ್ಲಿರುವ ಭೀಮೇಶ್ವರ ಗುಡಿಯೇ ಶಾಸನೋಕ್ತ ಸ್ವಯಂಭು ಭೀಮೇಶ್ವರ ಗುಡಿಯಾಗಿದ್ದು, ಈ ಗುಡಿಯ ಉಲ್ಲೇಖವೂ ಬೇರೆಡೆಯ ಶಾಸನಗಳಲ್ಲೂ ಕಾಣ ಸಿಗುವುದು ಗಮನಾರ್ಹ ಅಂಶವಾಗಿದೆ. ಅರ್ಜುನ ಗುಡಿಯಂತೆ ಇದೂ ಕೂಡ ವಿಶಾಲವಾಗಿದ್ದು, ಅದೇ ತಳವಿನ್ಯಾಸವನ್ನು ಹೊಂದಿರುವುದು ಗಮನಾರ್ಹವಾದರೂ, ಈ ದೇವಾಲಯದ ಗರ್ಭಗೃಹದ ಬಾಗಿಲವಾಡವು ಪಂಚಶಾಖೆಗಳನ್ನು ಹೊಂದಿದ್ದು, ನವರಂಗವನ್ನು ಪ್ರವೇಶಿಸಲು ಉತ್ತರದಿಂದಲೂ ಪ್ರವೇಶದ್ವಾರವಿದ್ದು, ದ್ವಾರಮಂಟಪವಿರುವುದು ಉಲ್ಲೇಖಾರ್ಹವಾದುದಾಗಿದೆ. ಈ ದೇವಾಲಯದ ಬಾಗಿಲವಾಡಗಳು ಆಕರ್ಷಕವಾದ ಅಲಂಕಾರಿಕ ಕೆತ್ತನೆಗಳಿಂದಾಗಿ ಸೆಳೆಯುತ್ತವೆ. ಈ ಗುಡಿಯ ಎಡಭಾಗದಲ್ಲಿ ಹೊಂಡವಿದ್ದು, ಈಗ ಶಿಥಿಲಾವಸ್ಥೆಯಲ್ಲಿದೆ. ಈ ಗುಡಿಯ ಬಳಿ ನಾಲ್ಕಾರು ವೀರಗಲ್ಲುಗಳಿರುವುದು ಉಲ್ಲೇಖನೀಯ. ಇವುಗಳ ಜೊತೆಗೆ ಊರಲ್ಲಿ ಅಕ್ಕತಂಗಿ ಗುಡಿ, ನಾರಾಯಣದೇವರ ಗುಡಿ ಹಾಗೂ ವೆಂಕಟರಮಣ ಗುಡಿಗಳೆಂದು ಹೇಳುವ ಸ್ಥಳಗಳು ಗುಡಿಗಳಾಗಿರದಿದ್ದರೂ ಸುಂದರವಾದ ಶೇಷಶಯನ ವಿಷ್ಣು, ನಾರಾಯಣ, ಲಕ್ಷ್ಮಿ ಭೈರವ, ಸಪ್ತಮಾತೃಕಾ ಹಾಗೂ ಪಂಚಮಾತೃಕಾ ಶಿಲಾಪಟ್ಟಿಕೆಗಳಿಂದಾಗಿ ಉಲ್ಲೇಖನೀಯ. ಇಲ್ಲಿ ಎರಡು ಪಂಚಮಾತೃಕಾ ಶಿಲ್ಪಗಳಿದ್ದು, ಇವುಗಳಲ್ಲಿ, ನಡುವೆ ಪಂಚಮಾತೃಕೆಯರಿದ್ದು, ಇಕ್ಕೆಲದಲ್ಲಿ ವೀಣಾಧಾರಿ ಶಿವ ಹಾಗೂ ಗಣಪತಿಯ ಉಬ್ಬು ಕೆತ್ತನೆಗಳಿದ್ದು ವಿಶಿಷ್ಟವಾಗಿವೆ. ಉಳಿದಂತೆ ಊರಲ್ಲಿ ಇತ್ತೀಚಿನ ದ್ಯಾಮವ್ವನ ಗುಡಿಯಿದ್ದು ಎರಡು ಮಸೀದಿ ಹಾಗೂ ಒಂದು ದರ್ಗಾ ಕೂಡ ಇವೆ.

**ಹಂದರಕಿ** (೩.೨೧೬)ಯು ತಾಲೂಕು ಕೇಂದ್ರವಾದ ಸೇಡಂನಿಂದ ದಕ್ಷಿಣಕ್ಕೆ ಸುಮಾರು ೩೦ ಕಿ.ಮೀ. ದೂರದಲ್ಲಿ, ರಾಜ್ಯ ಹೆದ್ದಾರಿ ಸಂಖ್ಯೆ ೧೫ ರಿಂದ ಸ್ವಲ್ಪ ದೂರದಲ್ಲಿ ಇರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಪಂದಿರ್ಕೆ' ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಅರಲು - ೩೦೦ಕ್ಕೆ ಸೇರಿತ್ತು. ಇಲ್ಲಿಂದ ಈವರೆಗೆ ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯ ಹಾಗೂ ಅವನ ಮಗ ಮುಮ್ಮಡಿ ಸೋಮೇಶ್ವರನ ಕಾಲಕ್ಕೆ ಸೇರಿದ ನಾಲ್ಕು ಶಾಸನಗಳು ಲಭಿಸಿವೆ. ಈ ಶಾಸನಗಳಲ್ಲಿ ಆರನೆಯ ವಿಕ್ರಮಾದಿತ್ಯನ ಕಾಲದ ಎರಡೂ ಶಾಸನಗಳು ಲೋಕೇಶ್ವರ

ದೇವಾಲಯಕ್ಕೆ ದತ್ತಿ ಬಿಟ್ಟ ಅಂಶಗಳನ್ನು ಹೊಂದಿದ್ದರೆ, ಉಳಿದೆರಡು ಅದೇ ದೇವಾಲಯಕ್ಕೆ ಮೂರನೆಯ ಸೋಮೇಶ್ವರನ ಕಾಲದಲ್ಲಿ ಮತ್ತಷ್ಟು ದತ್ತಿ ಬಿಟ್ಟ ಅಂಶವನ್ನು ತಿಳಿಸುತ್ತವೆ. ಈ ದೇವಾಲಯದ ಆಚಾರ್ಯರಾದ ಅಘೋರಶಕ್ತಿ ಪಂಡಿತರಿಗೆ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ಅರಲು - ೩೦೦೦ರ ಮಹಾಮಂಡಳೇಶ್ವರ ಲೋಕರಸನು ಸಾವಿರಕ್ಕೂ ಹೆಚ್ಚು ಮತ್ತರು ಭೂಮಿಯನ್ನು ಹಾಗೂ ಎರಡು ಗ್ರಾಮಗಳನ್ನು ದಾನ ಮಾಡಿದುದನ್ನು ನೋಡಿದಾಗ ಇಲ್ಲಿಯ ಲೋಕೇಶ್ವರ ದೇವಾಲಯವನ್ನು ಇವನೇ ನಿರ್ಮಿಸಿರಬೇಕೆಂದು ತೋರುತ್ತದೆ. ಭೂಲೋಕಮಲ್ಲನ ಕಾಲದಲ್ಲಿ ಬಿಜ್ಜ ಭೂಪಾಲನು ಅರಲು-೩೦೦ಕ್ಕೆ ಮಹಾಮಂಡಳೇಶ್ವರನಾಗಿದ್ದ ಅಂಶ ಶಾಸನಗಳಿಂದ ಗೊತ್ತಾಗುತ್ತದೆ. ದಾನ ನೀಡಿದ ಭೂಮಿಯ ಗಡಿಗಳನ್ನು ಹೇಳುವಾಗ ಸಂನತಿ (ಸನ್ನತಿ) ಪದ ಪ್ರಯೋಗವಿದೆಯಾದರೂ ಇದಕ್ಕೂ ಚಾರಿತ್ರಿಕ ಮಹತ್ವದ ಸನ್ನತಿಗೂ ಏನೇನೂ ಸಂಬಂಧ ಕಲ್ಪಿಸಲಾಗದು. ಊರ ಆಗ್ನೇಯಕ್ಕೆ ಸುಮಾರು ಎಂಟು ದೇವಾಲಯಗಳಿರುವ ಸಮುಚ್ಚಯವಿದೆ. ಈ ಸಮುದಾಯದಲ್ಲಿ ಪಶ್ಚಿಮಾಭಿಮುಖವಾಗಿರುವ ಲೋಕೇಶ್ವರ ದೇವಾಲಯವೇ ಶಾಸನೋಕ್ತ ಲೋಕೇಶ್ವರ ದೇಗುಲವಾಗಿದ್ದು, ಗರ್ಭಗೃಹ, ಅರ್ಧಮಂಟಪ, ನವರಂಗ ಹಾಗೂ ಮುಖ ಮಂಟಪಗಳನ್ನು ಹೊಂದಿದ್ದು, ಎದುರಿಗೆ ನಂದಿ ಮಂಟಪವೂ ಇದೆ. ಗರ್ಭಗೃಹದಲ್ಲಿ ಬೃಹತ್ತಾದ ಬಲಹರಿ ಶಿವಲಿಂಗವಿದ್ದು ಇದರ ಬಾಗಿಲ ಚೌಕಟ್ಟು ಮೂರು ಅಲಂಕಾರಿಕ ಶಾಖೆಗಳನ್ನು ಹೊಂದಿದ್ದು ಬುಡದಲ್ಲಿ ದ್ವಾರಪಾಲಕರ ಬದಲು ಸರಳ ಪಟ್ಟಿಕೆಗಳಷ್ಟೇ ಇವೆ. ಕಪೋತ ಪಟ್ಟಿಯಲ್ಲಿ ನಾಲ್ಕು ಚೈತ್ಯ ನಮೂನೆಗಳಿದ್ದು ನಡುವೆ ಗಜಲಕ್ಷ್ಮಿಯ ಕೆತ್ತನೆಯಿದ್ದು ವಿಶಿಷ್ಟವಾಗಿದೆ. ನವರಂಗದ ನಡುವಣ ಛತ್ತಲ್ಲಿ ಎರಡು ದಳದ ಕಮಲವಿದೆ. ಮುಖ ಮಂಟಪವು ನಂತರದ ಸೇರ್ಪಡೆಯಾಗಿದ್ದು, ನವರಂಗದ ಬಾಗಿಲಲ್ಲಿ ಆಳೆತ್ತರದ ಶೈವ ದ್ವಾರಪಾಲಕರಿದ್ದಾರೆ. ಗುಡಿ ಎದುರಿಗೆ ತೆರೆದ ಮಂಟಪದಲ್ಲಿ ನಂದಿಮೂರ್ತಿ ಇದೆ. ಎತ್ತರವಾದ ಅಧಿಷ್ಠಾನದ ಮೇಲೆ ನಿಂತಿರುವ ಈ ದೇವಾಲಯದ ಹೊರಗೋಡೆಯಲ್ಲಿ ಸರಳವಾದ ಅರೆಗಂಬಗಳ ಸಾಲಿದ್ದು, ಪ್ರನಾಳವಿದೆ. ನವರಂಗದ ಭಿತ್ತಿಯಲ್ಲಿ ಜಾಲಂಧ್ರಗಳನ್ನು ಹೊಂದಿಸಲಾಗಿದೆ. ಗರ್ಭಗೃಹದ ಮೇಲೆ ದ್ರಾವಿಡ ಮಾದರಿಯ ನವೀನ ಶಿಖರವಿದೆ.

ಈ ದೇವಾಲಯದ ಪಕ್ಕದಲ್ಲೇ ಪಶ್ಚಿಮಾಭಿಮುಖವಾಗಿ ಆನೇಶ್ವರ ದೇವಾಲಯವಿದೆ. ಗರ್ಭಗೃಹ, ಅರ್ಧ ಮಂಟಪ ಹಾಗೂ ತೆರೆದ ನವರಂಗಗಳನ್ನುಳ್ಳ ಈ ಗುಡಿಯ ಗರ್ಭಗೃಹದಲ್ಲಿ ಬೃಹತ್ತಾದ ಬಲಹರಿ ಶಿವಲಿಂಗವಿದ್ದು, ಇದರ ಬಾಗಿಲ ಚೌಕಟ್ಟಿನಲ್ಲಿ ಆರು ಅಲಂಕಾರಿಕ ಶಾಖೆಗಳಿವೆ. ಅರ್ಧಮಂಟಪದ ಕಂಬಗಳ ಮೇಲೆ ಗಣೇಶ, ಶಿವ ಪಾರ್ವತಿ, ನಟರಾಜ, ಉಗ್ರನರಸಿಂಹ, ನಂದಿರೂಢ ಶಿವ, ಕಿರಾತಾರ್ಜುನೀಯ, ಹಾಗೂ ಗಜಚರ್ಮಾಂಬರಧಾರಿ ಶಿವನ ಸುಂದರವಾದ ಕಿರು ಉಬ್ಬು ಶಿಲ್ಪಗಳಿವೆ. ಅರ್ಧ ಮಂಟಪದ ಮುಂದೆ ಇಕ್ಕೆಲದಲ್ಲಿ ಚಿಕ್ಕದಾದ ಎರಡು ಗರ್ಭಗೃಹ ಹಾಗೂ ಅರ್ಧಮಂಟಪಗಳಿವೆ. ತೆರೆದ ನವರಂಗದ ಅಂಚಿನಲ್ಲಿ ಕಕ್ಷಾಸನವಿದ್ದು ಇದಕ್ಕೆ ಮೂರು ಕಡೆಗಳಿಂದಲೂ ಪ್ರವೇಶವಿದೆ. ನವರಂಗದ ನಡುವಣ ಛತ್ತು ಆಕರ್ಷಕವಾದ ಕಮಲಾಲಂಕಾರದಿಂದ ಕೂಡಿದ್ದು ವಿಶಿಷ್ಟವಾಗಿದೆ. ಎತ್ತರವಾದ ಅಧಿಷ್ಠಾನ ಹಾಗೂ ಉಪ ಜಗಲಿಯ ಮೇಲೆ ನಿಂತಿರುವ ಈ ಗುಡಿಯ ಭಿತ್ತಿಭಾಗ ಇತ್ತೀಚೆಗೆ ಜೀರ್ಣೋದ್ಧಾರಗೊಂಡಿದೆ. ಲೋಕೇಶ್ವರ ದೇವಾಲಯದ ಬಲಬದಿಗೆ ಬಹಳ ಶಿಥಿಲಗೊಂಡಿರುವ ಜ್ಯೋತಿರ್ಲಿಂಗ ದೇವಾಲಯವಿದೆ. ಈ ದೇವಾಲಯದ ಗರ್ಭಗೃಹ, ಅರ್ಧಮಂಟಪಗಳಷ್ಟೇ ಉಳಿದಿದ್ದು, ಇಲ್ಲಿ ಮೂರು ಪ್ರಾಚೀನ ಶಿವಲಿಂಗಗಳಿವೆ. ಈ ಗುಡಿ ಹಿಂಬದಿಯಲ್ಲಿ ಮೆಟ್ಟಿಲುಳ್ಳ ಒಂದು ಬಾವಿ ಹಾಗೂ ಚಿಕ್ಕದೊಂದು ಗುಡಿಯಿದೆ. ಈ ಗುಡಿಯ ಎದುರಿಗೆ ಪೂರ್ವಾಭಿಮುಖವಾಗಿ ಈಶ್ವರ ಗುಡಿ ಇದೆ. ಗರ್ಭಗೃಹ, ತೆರೆದ ಅರ್ಧಮಂಟಪ ಹಾಗೂ ಮಂಟಪಗಳನ್ನುಳ್ಳ ಇದರ ಗರ್ಭಗೃಹದಲ್ಲಿ ಶಿವಲಿಂಗವಿದ್ದು ಐದು ಅಲಂಕಾರಿಕ ಶಾಖಾ ಪಟ್ಟಿಕೆಯಿಂದ ಇದರ ಬಾಗಿಲ ಚೌಕಟ್ಟನ್ನು ರೂಪಿಸಲಾಗಿದ್ದು ಶೈವದ್ವಾರಪಾಲಕರಿದ್ದಾರೆ. ಕಪೋತದಲ್ಲಿ ಚೈತ್ಯ ಮಾದರಿಗಳಿದ್ದು ಮೇಲೆ ಕಿರು ಶಿಖರಗಳಿವೆ. ತೆರೆದ ಅರ್ಧ ಮಂಟಪದ ಬದಿಗೆ ಗೋಡೆಗಳಲ್ಲಿ ಎರಡು ಗೂಡುಗಳಿದ್ದು ಮುಂದೆ ಮಂಟಪವಿದೆ. ಈ ಗುಡಿಯ ದಕ್ಷಿಣಕ್ಕೆ ಎರಡು ಪ್ರತ್ಯೇಕ ನಂದಿ ಮಂಟಪಗಳಿದ್ದು, ಅವು ಲೋಕೇಶ್ವರ ದೇವಾಲಯದ ಕಡೆಗೆ ಮುಖಮಾಡಿ ನಿಂತಿವೆ. ಆನೇಶ್ವರ ಗುಡಿಯ ಎಡಭಾಗಕ್ಕೆ ಆಯಾತಕಾರದ ಎರಡು ಮಂಟಪಗಳಿದ್ದು, ಇಂದು ಇವನ್ನು ಉಗ್ರಾಣ ಕೊಠಡಿ ಎಂದು ಕರೆಯುತ್ತಾರೆ. ಬಹುಶಃ ಹಿಂದೆ ಇದು ಮಠವಾಗಿದ್ದಿರಬೇಕು. ಇಲ್ಲಿಯ ಆನೇಶ್ವರ ಗುಡಿಯ ಎದುರುಗಡೆ ಪೂರ್ವಾಭಿಮುಖವಾಗಿ ನಿಂತಿರುವ ಮೂರು ಚಿಕ್ಕ ಗುಡಿಗಳಲ್ಲಿ (ಬಹುಶಃ ಹಿಂದೆ ಇದೊಂದು ತ್ರಿಕೂಟವಾಗಿದ್ದು ನಂತರದಲ್ಲಿ ಮುಂದಿನ ನವರಂಗ ಭಾಗ ನಾಶವಾಗಿರುವಂತೆ ತೋರುತ್ತದೆ.) ಕೊನೆಯದೇ ಕಾಳಿ ಗುಡಿಯಾಗಿದೆ. ಗರ್ಭಗೃಹ ಹಾಗೂ ತೆರೆದ ಅರ್ಧಮಂಟಪ ಇರುವ ಇದರ ಗರ್ಭಗೃಹದಲ್ಲಿ ಸೂರ್ಯ ವಿಗ್ರಹದ

ಪೀಠವಿದ್ದು ಅದರ ಮೇಲೆ ಕಾಳಿಕಾ ದೇವಿಯ ನವೀನ ಶಿಲ್ಪವಿದೆ. ಬದಿಯಲ್ಲೇ ಸುಮಾರು ೧೨ನೇ ಶತಮಾನದ ಶಿವಲಿಂಗವೂ ಇದೆ. ಇದರ ದ್ವಾರವು ನಾಲ್ಕು ಅಲಂಕಾರಿಕ ಶಾಖೆಗಳನ್ನು ಹೊಂದಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಇದರ ಶಿಖರವು ಕದಂಬ ಮಾದರಿಯಲ್ಲಿದ್ದು, ಭಿತ್ತಿಯು ನಿರಾಡಂಬರವಾಗಿದೆ. ಈ ಗುಡಿಯ ಬಲಕ್ಕಿರುವ ಇನ್ನೊಂದು ಚಿಕ್ಕ ಗುಡಿ ವಿಷ್ಣು ಗುಡಿಯಾಗಿದ್ದು ಗರ್ಭಗೃಹ ಹಾಗೂ ಅರ್ಧ ಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಸಮಭಂಗಿಯಲ್ಲಿ ನಿಂತಿರುವ ನಾಲ್ಕು ಕೈಗಳುಳ್ಳ ವಿಷ್ಣುವಿನ ಮೂರ್ತಿ ಇದ್ದು ಜೊತೆಗೆ ಗರುಡ, ಶ್ರೀದೇವಿ ಹಾಗೂ ಭೂದೇವಿಯರನ್ನು ಕೆತ್ತಿದ್ದಾರೆ. ಇದರ ಬಳಿಯಿರುವ ಇನ್ನೊಂದು ಚಿಕ್ಕ ಗುಡಿ ಇಂದು ಖಾಲಿ ಇದೆ. ಉಳಿದಂತೆ ಊರಲ್ಲಿ ಹನುಮಂತ, ಬಸವಣ್ಣ, ಈಶ್ವರ, ಗೋಪಾಲಸ್ವಾಮಿ, ಬನ್ನಿಕಾಳಪ್ಪ ಬೀರಲಿಂಗ, ಅಣಿವೀರಭದ್ರ, ಲಕ್ಷ್ಮಿ, ದ್ಯಾವಮ್ಮ, ಮರಗಮ್ಮ ಮುಂತಾದ ನವೀನ ಗುಡಿಗಳಿದ್ದು ತೋಂಟದ ಸ್ವಾಮಿ ಮಠ, ಮಸೀದಿ ಹಾಗೂ ದರ್ಗಾ ಕೂಡ ಇವೆ. **ಗಾಜಲಕೋಟೆ** (ಯಾದಗಿರಿ ತಾಲೂಕು)ಯು ಇಲ್ಲಿಂದ ಸುಮಾರು ಆರು ಕಿ. ಮೀ. ದೂರದಲ್ಲಿದ್ದು, ಇಲ್ಲಿ ಕಲ್ಯಾಣದ ಚಾಳುಕ್ಯರ ಕಾಲದ ಅವಶೇಷಗಳಿವೆ.

**ಹರಸೂರು** (೩೭೬೦) ತಾಲೂಕು ಕೇಂದ್ರವಾದ ಗುಲಬರ್ಗಾದಿಂದ ಈಶಾನ್ಯಕ್ಕೆ ೧೫ ಕಿ. ಮೀ ದೂರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಸರ್ವನಮಸ್ಯದ ಅಗ್ರಹಾರ ಶಾಲೆಯ ಸೀಮಳ' ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಅಲಂದೆ-೧೦೦೦ ಕ್ಕೆ ಸೇರಿದ ಗೊಂಕ ನಾಡಿನಲ್ಲಿತ್ತು. ಇಲ್ಲಿಂದ ಈವರೆಗೆ ಕನ್ನಡದ ಮೂರು ಹಾಗೂ ಸಂಸ್ಕೃತದ ಒಂದು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ೧೦೯೭ರ ಶಾಸನವೇ ಪ್ರಾಚೀನದ್ದಾಗಿದ್ದು ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನು ಅಧಿಕಾರದಲ್ಲಿದ್ದಾಗ, ಭಾಸ್ಕರಶೆಟ್ಟಿ ನಿರ್ಮಿಸಿದ ಬಾಳೇಶ್ವರ ದೇವರ್ಗೆ, ಕೇತಿಸೆಟ್ಟಿ ಆರಂಭಿಸಿದ, ಸಾಗರಶೆಟ್ಟಿ ಪೂರ್ಣಗೊಳಿಸಿದ ಕೇದಾರೇಶ್ವರ ದೇವರುಗಳಿಗೆಂದು ಭೂದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ೧೧೩೭ರ ಸಂಸ್ಕೃತ ಶಾಸನ ಮಾಧವ ಮಂತ್ರಿಯು ಲಕ್ಷ್ಮೀಪತಿ ದೇವಾಲಯ ನಿರ್ಮಿಸಿ ಗೊಂಕ-೧೨೦ರಲ್ಲಿದ್ದ ಅಂಕುಲಗೆಯನ್ನು ದತ್ತಿ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಬೋರಲಿಂಗೇಶ್ವರ ದೇವಾಲಯದಲ್ಲಿರುವ ರಾಯಮುರಾರಿ ಸೇವಿದೇವನ ೧೧೭೨ರ ಶಾಸನ, ನಂದಿ ಮಂಟಪವನ್ನು ಮಾಡಿದ ಗಂಗೋಜನಿಗೆಂದು ೧೦ ಮತ್ತರು ಹೊಲ ಹಾಗೂ ಒಂದು ಮನೆ ನಿವೇಶನವನ್ನು ದಾನ ಕೊಟ್ಟು ದೇವರ ಸೇವೆಗೆಂದು ಅಂಕುಲಗೆ ಗ್ರಾಮವನ್ನು ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ಊರ ಹೊರಗೆ ಇರುವ ಬೋರಲಿಂಗೇಶ್ವರ ದೇವಾಲಯವೇ ೧೧೭೨ರ ಶಾಸನ ಹೇಳುವ ಭೋಗೇಶ್ವರ ದೇಗುಲವಾಗಿರುವಂತೆ ತೋರುತ್ತದೆ. ಪೂರ್ಣ ತಗ್ಗಿನಲ್ಲಿ ಇಂದು ಶಿಥಿಲಾವಸ್ಥೆಯಲ್ಲಿ ನಿಂತಿರುವ ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ಅಂತರಾಳ ಹಾಗೂ ನವರಂಗಗಳೊಂದಿಗೆ ಎದುರಲ್ಲಿ ಪ್ರತ್ಯೇಕವಾದ ನಂದಿ ಮಂಟಪವನ್ನೂ ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಇದರ ಬಾಗಿಲವಾಡವು ನಾಲ್ಕು ಅಲಂಕಾರಿಕ ಶಾಖೆಗಳನ್ನು ಹೊಂದಿದ್ದು ಅಂತರಾಳದಲ್ಲಿ ಸುಂದರವಾದ ಚಂದ್ರಶಿಲೆ ಇದೆ. ನವರಂಗದ ಇಕ್ಕೆಲಗಳಲ್ಲಿ ದೇವಗೂಡುಗಳಿದ್ದು ಒಂದರಲ್ಲಿ ಸ್ಥಾನಕ ಬ್ರಹ್ಮನ ಸುಂದರ ಶಿಲ್ಪವಿದೆ. ನವರಂಗದ ನಡುವಣ ಛತ್ತನ್ನು ಕೀರ್ತಿಮುಖ ಅವೃತ್ತ ಕಮಲದಿಂದ ಅಲಂಕರಿಸಲಾಗಿದ್ದು ನವರಂಗವು ಸಂಪೂರ್ಣ ಕಮಲಮಯವಾಗಿದೆ. ಇದರ ಕಂಬಗಳು ರೇಖಾಲಂಕೃತಗೊಂಡಿದ್ದು ಗರ್ಭಗೃಹದ ಶಿಖರವು ನಶಿಸಿಹೋಗಿದೆ. ಊರ ನಡುವೆ ಇರುವ ಜೈನ ಮಂದಿರವು ತ್ರಿಕೂಟ ಬಸದಿಯಾಗಿದ್ದು, ಸುಮಾರು ೧೧-೧೨ನೇ ಶತಮಾನದ ರಚನೆಯಾಗಿದೆ. ಮೂರು ಪ್ರತ್ಯೇಕ ಗರ್ಭಗೃಹ ಹಾಗೂ ತೆರೆದ ಅಂತರಾಳಗಳನ್ನು ನಡುವೆ ಇರುವ ಒಂದೇ ನವರಂಗವು ಒಗ್ಗೂಡಿಸಿದ್ದು ಇವುಗಳ ಬಾಗಿಲವಾಡಗಳು ನಾಲ್ಕು ಅಲಂಕಾರಿಕ ಶಾಖೆಗಳನ್ನು ಹೊಂದಿದ್ದು ಲಲಾಟಗಳಲ್ಲಿ ಪದ್ಮಾಸೀನ ತೀರ್ಥಂಕರರ ಕಿರು ಶಿಲ್ಪಗಳಿದ್ದು ನವರಂಗದಲ್ಲಿ ಚೌವ್ವೀಸ್ ತೀರ್ಥಂಕರರ ಎರಡು, ಧರಣೇಂದ್ರ ಯಕ್ಷ, ಪದ್ಮಾವತಿ ಯಕ್ಷಿ, ಬಾಹುಬಲಿ, ಯಕ್ಷ ಮುಂತಾದ ಜೈನ ಶಿಲ್ಪಗಳಿದ್ದು ಸುಂದರವಾಗಿವೆ. ಈ ಗುಡಿಗೆ ಹೊಂದಿಕೊಂಡಂತೆ ದಕ್ಷಿಣೋತ್ತರವಾಗಿ ಇರುವ ಸಭಾಮಂಟಪಕ್ಕೆ ಸೇರಿದಂತೆ ಎರಡೂ ಕಡೆ ಚೌಕಾಕಾರದ ಕೊಠಡಿ ಹಾಗೂ ಮುಖಮಂಟಪಗಳಿದ್ದು ಬಹುಶಃ ಹಿಂದೆ ಇದು ಬಸದಿಗೆ ಸೇರಿದ ಮಠವಾಗಿದ್ದಿರಬೇಕು. ಆದರಿಂದು ಸಭಾಮಂಟಪವು ಸಂಪೂರ್ಣ ನಾಶವಾಗಿದೆ. ಉಳಿದಂತೆ ಊರಲ್ಲಿ ಕರಿಬಸವೇಶ್ವರ, ಆನೇಶ್ವರ, ಶರಣಬಸವೇಶ್ವರ, ಹನುಮಂತ, ರುದ್ರಮುನಿ, ಭ್ರಮರಾಂಬ, ಅಂಬಾಭವಾನಿ, ಮರಗಮ್ಮ ಮುಂತಾದ ನವೀನ ಗುಡಿಗಳಿವೆ. ಪರತ್‌ಮಠ ಹಾಗೂ ಕಲ್ಮಠಗಳಿದ್ದು, ಜುಮ್ಮಾ ಮಸೀದಿ, ಮೆಹಬೂಬು ಸುಬಾನಿ ಹಾಗೂ ಹಾಜಿ ಮುಲಾಮ್ ಬಾಬಾ ದರ್ಗಾಗಳಿವೆ. ಕರಿಬಸವೇಶ್ವರ ಜಾತ್ರೆಯು ಧವನದ ಹುಣ್ಣಿಮೆಯಾದ ಐದು ದಿನಕ್ಕೆ ಜರುಗುತ್ತದೆ.

**ಹಲಕರಟಿ** (೩೫೩೬)ಯು ತಾಲೂಕು ಕೇಂದ್ರವಾದ ಚಿತ್ತಾಪುರದಿಂದ ಆಗ್ನೇಯಕ್ಕೆ ೧೯ ಕಿ. ಮೀ., ವಾಡಿ ರೈಲ್ವೆ ನಿಲ್ದಾಣದಿಂದ ನಾಲ್ಕು ಕಿ. ಮೀ. ದೂರದಲ್ಲಿದೆ. ಪ್ರಾಚೀನ ಶಾಸನಗಳಲ್ಲಿ "ಪಲ್ಲಕರಂಟೆ" "ಭತ್ತಗಾಮೆ ಪಲ್ಲಕರಂಟೆ" "ಹಲಕಟೆ" ಎಂದೆಲ್ಲಾ ಉಲ್ಲೇಖಿತಗೊಂಡಿರುವ ಇದು ಹಿಂದೆ ಅರಲು-೩೦೦ಕ್ಕೆ ಸೇರಿದ್ದು, ಇಲ್ಲಿಂದ ಈವರೆಗೆ ಆರು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಮಲ್ಲೇಗೌಡರ ಮನೆ ಬಳಿ ಇರುವ ೧೧೯೬ರ ಶಿಲಾಶಾಸನವೇ ಪ್ರಾಚೀನದ್ದಾಗಿದ್ದು, ಇಲ್ಲಿಯ ಬ್ರಹ್ಮೇಶ್ವರ ದೇವರ ಸೇವೆಗೆಂದು ಮಹಾಮಂಡಳೇಶ್ವರ ಲೋಕರಸ ಹಾಗೂ ಇತರ ಅಧಿಕಾರಿಗಳು ಭೂಮಿಯನ್ನು ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ಇಲ್ಲಿಯ ವೀರಭದ್ರನ ಗುಡಿಯಲ್ಲಿರುವ ಶಾಸನವು ಕಲ್ಯಾಣದ ಚಾಳುಕ್ಯರ ಕಾಲಕ್ಕೆ ಸೇರಿದ್ದು, ನೂರ್ಮಡಿ ತೈಲಪನ ಆಳ್ವಿಕೆಯಲ್ಲಿ ಮಹಾಮಂಡಳೇಶ್ವರ ಆನೆಮರಸ ಹಾಗೂ ಇತರರು ಪಲ್ಲಕರಂಟೆಯ ಬಿಬ್ಬೇಶ್ವರ ದೇವರ ಪೂಜಾವಿಧಿಗೆಂದು ಹೊಲ ಹಾಗೂ ತೋಟಗಳನ್ನು ದಾನ ಬಿಟ್ಟ ಸಂದರ್ಭದಲ್ಲಿ ಎಲೆಯ ವ್ಯಾಪಾರಿಗಳು ದೇವರಿಗೆ ಬೆಳ್ಳಿಯ ಹಾಗವನ್ನು ದಾನ ಕೊಟ್ಟ ಅಂಶವನ್ನು ತಿಳಿಸುತ್ತದೆ. ಮೇಲಾಗಿ ಈ ಶಾಸನ ಪ್ರಾಸಂಗಿಕವಾಗಿ ಬಸದಿಯನ್ನೂ ಉಲ್ಲೇಖಿಸುತ್ತದೆ. ಯಾದವ ಸಿಂಘಣನ ಅಧಿಕಾರಾವಧಿಗೆ (೧೧೯೯) ಸೇರಿದ ಶಾಸನವೊಂದು ಮಲ್ಲೇಗೌಡರ ಮನೆ ಬಳಿ ಇದ್ದು, ಮಹಾಮಂಡಳೇಶ್ವರ ಕಾಚರಸನು ಏಚೇಸ್ವರ ದೇವಾಲಯಕ್ಕೆ ಭೂಮಿ ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ಇಲ್ಲಿಯ ಮಲ್ಲಿಕಾರ್ಜುನ ಗುಡಿಯ ಗೋಡೆಯಲ್ಲಿರುವ ೧೩೨೮ರ ಶಾಸನವು ಜಮಖಂಡಿಯ ಜಕ್ಕದೇವನ ಮಗನಾದ ಬ್ರಹ್ಮದೇವನು ಮೈಲಾರ ಗುಡಿಗೆ ಸೇರಿದಂತೆ ಪಟ್ಟಸಾಲೆ (ಪಡಸಾಲೆ) ಯನ್ನು ಹಾಗೂ ಶಿವಾಲಯವನ್ನು ಮಾಡಿಸಿದ ಅಂಶವನ್ನು ತಿಳಿಸುತ್ತದೆ. ವೀರಭದ್ರ ದೇವಾಲಯದ ಬಳಿಯಿರುವ ಇನ್ನೆರಡು ಶಾಸನಗಳು ಸುಮಾರು ೧೬ನೇ ಶತಮಾನಕ್ಕೆ ಸೇರಿದ್ದು ಸಂಕ್ಷಿಪ್ತವಾಗಿವೆ.

ಊರ ಪ್ರವೇಶದಲ್ಲೇ ಇರುವ ಮಲ್ಲಯ್ಯನ (ಮಲ್ಲಿಕಾರ್ಜುನ) ಗುಡಿಯು ವಿಶಾಲವಾದ ಪ್ರಾಕಾರದೊಳಗೆ ಪೂರ್ವಾಭಿಮುಖವಾಗಿ ನಿಂತಿದ್ದು ಪ್ರಾಕಾರಕ್ಕೆ ಪೂರ್ವ-ಪಶ್ಚಿಮಗಳಲ್ಲಿ ದ್ವಾರಮಂಟಪಗಳಿವೆ. ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿರುವ ಇದರ ಗರ್ಭಗೃಹದಲ್ಲಿ ನಂದಿ ಪೀಠದ ಮೇಲೆ ಸ್ಥಾನಕ ಶಿವನ ಮೂರ್ತಿ ಇದೆ. ಇದರ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಇದೆ. ನವರಂಗದಲ್ಲಿ ನಾಲ್ಕು ದೇವಗೂಡುಗಳಿವೆ. ಇದನ್ನು ಪ್ರವೇಶಿಸಲು ಪೂರ್ವ ಹಾಗೂ ಉತ್ತರ ದಿಕ್ಕುಗಳಲ್ಲಿ ದ್ವಾರಗಳಿವೆ. ಇದಕ್ಕೆ ಕದಂಬ ನಾಗರ ಶಿಖರವಿದೆ. ಇದರ ಎಡಬದಿಯಲ್ಲಿ ಒಂದೆರಡು ಸಣ್ಣ ಗುಡಿಗಳಿವೆ. ಊರ ನಡುವೆ ಇರುವ ವೀರಭದ್ರೇಶ್ವರ ಗುಡಿಯು ಇಂದು ಇಲ್ಲಿಯ ಆರಾಧ್ಯ ದೈವವಾಗಿದ್ದು ದೂರದ ಊರುಗಳಿಂದ ಭಕ್ತರು ಈ ದೇವರ ಸೇವೆಗೆಂದು ಬಂದು ಹೋಗುತ್ತಾರೆ. ಈ ಗುಡಿಯ ಆವರಣದಲ್ಲಿ ಬಲಕ್ಕಾದಂತೆ ಇರುವ 'ಕತ್ತಲಗುಡಿ'ಯು ತ್ರಿಕೂಟವಾಗಿದ್ದು ಉತ್ತರಾಭಿಮುಖವಾಗಿದೆ. ಮೂರು ಪ್ರತ್ಯೇಕ ಗರ್ಭಗೃಹ ಹಾಗೂ ಅಂತರಾಳಗಳನ್ನು ನಡುವೆ ಇರುವ ಒಂದೇ ನವರಂಗದಿಂದ ಒಗ್ಗೂಡಿಸಲಾಗಿದ್ದು ಪ್ರಧಾನ ಗರ್ಭಗೃಹದ ಇಕ್ಕೆಲದಲ್ಲಿ ಶೈವದ್ವಾರಪಾಲಕರ ಬೃಹತ್ ಶಿಲ್ಪಗಳಿವೆ. ನವರಂಗದ ತೊಲೆಗಳು ಕಮಲಮಯವಾಗಿದ್ದು ಅಲ್ಲೇ ಇರುವ ಶಾಸನ ಉಲ್ಲೇಖಿಸುವ ಬಿಬ್ಬೇಶ್ವರ ದೇವಾಲಯ ಇದೇ ಆಗಿರುವಂತೆ ತೋರುತ್ತದೆ. ಇಲ್ಲಿಯ ಶಂಭುಲಿಂಗ ದೇವರ ಗುಡಿಯು ಒಂದೇ ಸಾಲಿನಲ್ಲಿರುವ ಮೂರು ಪ್ರತ್ಯೇಕ ಗರ್ಭಗೃಹ ಹಾಗೂ ಅಂತರಾಳಗಳಿಗೆ ವಿಶಾಲವಾದ ಒಂದೇ ನವರಂಗವನ್ನು ಹೊಂದಿರುವ ತ್ರಿಕೂಟ ದೇವಾಲಯವಾಗಿದ್ದು, ಗರ್ಭಗೃಹಗಳಲ್ಲಿ ಶಿವಲಿಂಗಗಳಿವೆ. ತೆರೆದ ನವರಂಗವಿರುವ ಇದರಲ್ಲಿ ದಶಾವತಾರ ಕೆತ್ತನೆಯುಳ್ಳ ಪ್ರಭಾವಳಿಯನ್ನು ಹೊಂದಿರುವ ವಿಷ್ಣುವಿನ ಮುಕ್ಕಾದ ಶಿಲ್ಪವಿದೆ. ಇದರ ಮುಂದೆ ಬಲಕ್ಕಾದಂತೆ ಕಿರಿದಾದ ಗಣೇಶನ ಗುಡಿಯಿದ್ದು ಇವೆರಡೂ ತಗ್ಗಿನಲ್ಲಿವೆ. ಗಣಪತಿ ಗುಡಿಯ ನವರಂಗದ ಮೇಲೆ ಇಂದು ರಸ್ತೆ ಹಾಯ್ದಿದೆ. ಈ ದೇವಾಲಯಕ್ಕೆ (ತ್ರಿಕೂಟ) ರೇಖಾನಾಗರ ಶಿಖರವಿದ್ದು ಇಂದು ಸುಸ್ಥಿತಿಯಲ್ಲಿವೆ. ಇಲ್ಲಿಯ ಕುಂಬಾರ ಸಾಲಿಗುಡಿ ಇನ್ನೊಂದು ಪ್ರಾಚೀನ ದೇಗುಲವಾಗಿದ್ದು ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ಗರ್ಭಗೃಹವನ್ನು ಮುಚ್ಚಿದ್ದು ಇಲ್ಲಿ ಆಭರಣಾಲಂಕೃತ ದ್ವಾರಪಾಲಕರ ಸುಂದರ ಶಿಲ್ಪಗಳಿವೆ. ಇಲ್ಲಿ ಭಾಗಶಃ ಹಾಳಾಗಿರುವ ಎರಡು ವೈಷ್ಣವ ಶಿಲ್ಪಗಳಿವೆ. ಇಲ್ಲಿಯ ರೇವಣಸಿದ್ಧೇಶ್ವರ ಹಾಗೂ ಕಾಳಮ್ಮನ ಗುಡಿ ಬಳಿ ಶಿಲ್ಪಾವಶೇಷಗಳಿದ್ದು ವೀರಗಲ್ಲುಗಳೂ ಇವೆ. ಹನುಮಂತನ ಗುಡಿಯ ಬಳಿ ಗಣಪತಿ, ಭೈರವ ಹಾಗೂ ವಿಷ್ಣುವಿನ ಸುಂದರ ಶಿಲ್ಪಗಳಿವೆ. ಉಳಿದಂತೆ ಊರಲ್ಲಿ ಅಂಬಿಗರ ಚೌಡಯ್ಯ, ಬೀರಲಿಂಗ, ಬಸವಣ್ಣ, ಬಸವೇಶ್ವರ, ಚೌಡೇಶ್ವರಿ, ದ್ಯಾಮಮ್ಮ, ಪಾಲಕಮ್ಮ, ಪೋಚಮ್ಮ, ಮರಗಮ್ಮ ಮುಂತಾದ ನವೀನ ಗುಡಿಗಳಿದ್ದು ಮುನೀಂದ್ರ ಶಿವಾಚಾರ್ಯ ಗುರುಸ್ಥಲ ಮಠವಿದೆ. ಜೊತೆಗೆ ಎರಡು ಮಸೀದಿ, ಮೆಹಬೂಬು ಸುಬಾನಿ ಮತ್ತು ಪಾಷಾ ಖಾದ್ರಿ ದರ್ಗಾ ಕೂಡಾ ಇವೆ.

**ಹಸರಗುಂಡಗಿ** (೧೪೨೦) ಯು ತಾಲೂಕು ಕೇಂದ್ರವಾದ ಅಫಜಲಪುರದಿಂದ ಆಗ್ನೇಯಕ್ಕೆ ೪೦ ಕಿ. ಮೀ. ದೂರದಲ್ಲಿ, ಚೌಡಾಪುರ-ಚಿನ್ಮಳ್ಳಿ ರಸ್ತೆಯಲ್ಲಿದೆ. ಪ್ರಾಚೀನ ಶಾಸನಗಳಲ್ಲಿ ಹಸಿರುಗುಂಡಿಗೆ (ಬಂದರವಾಡ ೧೧೧೩) ಎಂದೇ ಉಲ್ಲೇಖಿತಗೊಂಡಿರುವ ಈ ಊರು ಹಿಂದೆ ಅತ್ತಿನೂರು-೮೦ಕ್ಕೆ ಸೇರಿದ್ದು, ಇಲ್ಲಿಂದ ಈವರೆಗೆ ಯಾವುದೇ ಶಾಸನ ವರದಿಯಾಗಿಲ್ಲ. ಆದರೂ ಇಲ್ಲಿರುವ ಆದಿಲ್‌ಷಾಹಿ ಕಾಲಕ್ಕೆ ಸೇರಿದ ಮಸೀದಿಯಿಂದಾಗಿ ಪ್ರಸಿದ್ಧವಾಗಿದೆ. ಇದರ ಜೊತೆಗೆ ಎರಡು ದರ್ಗಾ ಹಾಗೂ ಮೂರು ಚಿಲ್ಲಾಗಳು ಕೂಡ ಇವೆ. ಉಳಿದಂತೆ ಊರಲ್ಲಿ ಇತ್ತೀಚಿನದಾದ, ಬಸವಣ್ಣ, ಜಟ್ಟಿಂಗರಾಯ ಹಾಗೂ ಲಕ್ಷ್ಮಿ ಗುಡಿಗಳಿವೆ.

**ಹಾರಣಗೇರಿ** (೧೫೬೬)ಯು ತಾಲೂಕು ಕೇಂದ್ರವಾದ ಶಹಾಪುರದಿಂದ ವಾಯವ್ಯಕ್ಕೆ ೨೦ ಕಿ. ಮೀ. ದೂರದಲ್ಲಿರುವ ಪ್ರಾಗೈತಿಹಾಸಿಕ ಮಹತ್ವದ ಸ್ಥಳ. ಈ ಊರಲ್ಲಿ ನೂತನ ಶಿಲಾಯುಗದ ಅವಶೇಷಗಳೂ ಸೇರಿದಂತೆ ಸುಮಾರು ೧೨ನೇ ಶತಮಾನಕ್ಕೆ ಸೇರಿದ ಎರಡು ಶಾಸನಗಳು ಹಾಗೂ ಗೌತಮಿ ಪುತ್ರ ಸಾತಕರ್ಣಿಯ ಕಾಲಕ್ಕೆ ಸೇರಿದ ೧೫ ಸೀಸದ ನಾಣ್ಯಗಳೂ ಪತ್ತೆಯಾಗಿವೆ. ಸುಮಾರು ೧೧೪೩ಕ್ಕೆ ಸೇರಿದ ಸಂಗಮದ ಶಾಸನದಲ್ಲಿ 'ಹಾರುಣಗೆರೆ' ಎಂದೇ ಉಲ್ಲೇಖಿತಗೊಂಡಿರುವ ಈ ಊರು ಹಿಂದೆ ಸಗರ - ೫೦೦ಕ್ಕೆ ಸೇರಿದ್ದು, ಚಾರಿತ್ರಿಕ ಮಹತ್ವವನ್ನು ಪಡೆದಿತ್ತು. ಊರ ಬಳಿಯಿರುವ ಬೂದಿದಿಬ್ಬದಲ್ಲಿ ನೂತನ ಶಿಲಾಯುಗದ ಕಾಲಕ್ಕೆ ಸೇರಿದ ಕೊಡಲಿ, ಕಪ್ಪು-ಕೆಂಪು ವರ್ಣದ ಮಡಕೆ ಚೂರುಗಳು ದೊರೆತಿದ್ದು, ಊರ ಹಳ್ಳದಲ್ಲಿ ಶಾತವಾಹನ ಅರಸು ಗೌತಮಿ ಪುತ್ರ ಸಾತಕರ್ಣಿಯ ಕಾಲಕ್ಕೆ ಸೇರಿದ ಸೀಸದ ನಾಣ್ಯಗಳು ಸಾಕಷ್ಟು ಸಂಖ್ಯೆಯಲ್ಲಿ ಸ್ಥಳೀಕರಿಗೆ ಲಭಿಸಿದ್ದು, ಅವುಗಳಲ್ಲಿ ಸದ್ಯಕ್ಕೆ ೧೫ ನಾಣ್ಯಗಳು ಪರಿಶೀಲನೆಗೆ ಲಭಿಸುತ್ತವೆ. ವೃತ್ತಾಕಾರದ ಈ ನಾಣ್ಯದ ಮುಮ್ಮುಖದಲ್ಲಿ ಉಜ್ಜಯನಿ ಚಿಹ್ನೆ, ಸೂರ್ಯ-ಚಂದ್ರರಿದ್ದು, ಹಿಮ್ಮುಖದಲ್ಲಿ 'ಗೌತಮಿ ಪುತಸ ಸಾತಕಣಿಸ' ಎಂಬ ಬ್ರಾಹ್ಮಿ ಲೇಖವಿದೆ. ಶಾತವಾಹನರ ಆಳ್ವಿಕೆಗೆ ಈ ಪ್ರದೇಶ ಒಳಪಟ್ಟಿತ್ತೆಂಬ ಅಂಶವನ್ನು ಈ ನಾಣ್ಯಗಳು ಪುಷ್ಟೀಕರಿಸುತ್ತವೆ. ಇಲ್ಲಿಂದ ಈವರೆಗೆ ಎರಡು ಶಾಸನಗಳು ವರದಿಯಾಗಿದ್ದು ಅವುಗಳಲ್ಲೊಂದು ಹಿಂದೆ ಇದೊಂದು ಅಗ್ರಹಾರವಾಗಿದ್ದು, ಇಲ್ಲಿಯ ತ್ರೈಪುರುಷ ದೇವರ ಶಾಲೆಗೆ ಭೂಮಿಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತಾ ಸಾಂದರ್ಭಿಕವಾಗಿ ಕನ್ನರದೇವನನ್ನು ಪ್ರಸ್ತಾಪಿಸುತ್ತದೆ. ಬಹಳ ಹಾಳಾಗಿರುವ ಇನ್ನೊಂದು ಶಾಸನ ಶಾಲೆಗೆಂದು ಗೋವಿಂದಮಗೆರೆಯ ಕೆಳಗೆ ೪೫೦ ಕಮ್ಮ ಗದ್ದೆ, ಒಂದು ಮತ್ತರು ತೋಟ ಹಾಗೂ ಇನ್ನಿತರ ದಾನಗಳನ್ನು ತಿಳಿಸುತ್ತದೆ. ಇದರಿಂದ ಹಿಂದೆ ಇಲ್ಲೊಂದು ತ್ರೈಪುರಷ ದೇವಾಲಯ ಹಾಗೂ ಅದಕ್ಕೆ ಸೇರಿದಂತೆ ಶಾಲೆಯೂ ಇದ್ದ ಅಂಶ ಸ್ಪಷ್ಟವಾಗುತ್ತದೆ. ಆದರೆ ಇಲ್ಲಿಂದು ಯಾವುದೇ ಪ್ರಾಚೀನ ದೇವಾಲಯ ಕಂಡು ಬರುವುದಿಲ್ಲ. ಊರ ಪ್ರವೇಶದಲ್ಲಿ ಬಯಲಲ್ಲಿರುವ ಬಸವಣ್ಣನ ಗುಡಿ ಬಳಿ ಸುಮಾರು ನಾಲ್ಕಡಿ ಎತ್ತರದ ಶಿವನ ಶಿಲ್ಪವಿದ್ದು, ಇಕ್ಕೆಲದಲ್ಲಿ ಗಣಪತಿ ಹಾಗೂ ನಂದಿಯ ಕೆತ್ತನೆಗಳಿವೆ. ಈ ಫಲಕವು ಹಿಂದೆ ಇಲ್ಲಿದ್ದ ತ್ರೈಪುರುಷ ದೇವಾಲಯದ ಭಿತ್ತಿಯನ್ನು ಅಲಂಕರಿಸಿದ್ದ ಫಲಕವಾಗಿದ್ದು, ಇಂದಿಲ್ಲಿ ಅನಾಥವಾಗಿ ಬಿದ್ದಿದೆ. ಮಲ್ಲಯ್ಯನ ಸಿಬಾರ ಕಟ್ಟೆ ಬಳಿಯಿರುವ ಪಟ್ಟಿಕೆಯು ಕಾಳಿ ಸಂಪ್ರದಾಯದ್ದೆಂದು ಹೇಳುತ್ತಾರಾದರೂ ಅದು ಕಕ್ಷಾಸನದ ಹಿಂಬದಿ ಕಲ್ಲಾಗಿದ್ದು, ಮಿಥುನ ಶಿಲ್ಪದ ಕೆತ್ತನೆಯನ್ನು ಹೊಂದಿರುವುದು ಗಮನಾರ್ಹವಾಗಿದೆ. ಉಳಿದಂತೆ ಊರಲ್ಲಿ ಹನುಮಂತ, ಮರಗಮ್ಮ ಮುಂತಾದ ನವೀನ ದೇವಾಲಯಗಳಿದ್ದು, ಮಸೀದಿ ಹಾಗೂ ದರ್ಗಾಗಳಿವೆ.

**ಹಿಪ್ಪರಗಿ** ಎಸ್. ಎನ್. (೩೨೪೪) ಯು ತಾಲೂಕು ಕೇಂದ್ರವಾದ ಜೇವರ್ಗಿಯಿಂದ ನೈಋತ್ಯಕ್ಕೆ ಸುಮಾರು ೨೪ ಕಿ. ಮೀ. ದೂರದಲ್ಲಿ ಜೇವರ್ಗಿ-ಸಿಂಧಗಿ ರಸ್ತೆಯಲ್ಲಿದೆ. ಹಿಂದೆ ಇದೊಂದು ಅಗ್ರಹಾರವಾಗಿದ್ದು ಇಲ್ಲಿಂದ ಈವರೆಗೆ ಸುಮಾರು ೧೨ನೇ ಶತಮಾನಕ್ಕೆ ಸೇರಿದ ಒಂದು ಶಾಸನ ವರದಿಯಾಗಿದೆ. ಗೌರಿಶಂಕರ ದೇವಾಲಯದ ಅಂತರಾಳದ ಕಂಬದ ಮೇಲಿರುವ ಈ ಶಾಸನವು ಪಂಚಾಯತನವನ್ನು ಪ್ರತಿಪಾದಿಸಿದ ಮಾರ್ತಾಂಡದೇವನ ಗುಣವರ್ಣನೆಯನ್ನು ಮಾಡಿರುವಂತೆ ತೋರುತ್ತದೆ. ಈ ದೇವಾಲಯದ ಆವರಣದಲ್ಲಿ ಬಿದ್ದಿರುವ ಬೃಹತ್ತಾದ ಸ್ತಂಭಗಳ ಮೇಲೆ ಇನ್ನೂ ಮೂರ್ನಾಲ್ಕು ಶಾಸನಗಳಿದ್ದು, ಅಸ್ಪಷ್ಟವಾಗಿವೆ. ಈ ದೇವಾಲಯವು ಮೂಲದಲ್ಲಿ ಚತುಷ್ಕೂಟವಾಗಿದ್ದು ಇಂದು ದೇವಾಲಯದ ಪೂರ್ವ ಹಾಗೂ ಪಶ್ಚಿಮಭಾಗಗಳು ಶಿಥಿಲಾವಸ್ಥೆಯಲ್ಲಿದ್ದು ಉಳಿದಿರುವ ಭಾಗಗಳು ಆಕರ್ಷಕವಾಗಿವೆ. ಗುಡಿಯ ಆವರಣದಲ್ಲಿ ಬ್ರಹ್ಮ ವಿಷ್ಣು ಸೂರ್ಯ ಹಾಗೂ ತ್ರೈಪುರುಷರ ಪೀಠಗಳಿವೆ. ಈ ದೇವಾಲಯದ ಆವರಣದಲ್ಲೇ ನೈಋತ್ಯದಲ್ಲಿ ಬ್ರಹ್ಮ ವಿಷ್ಣು ಮಹೇಶ್ವರರ ವಾಹನಗಳ ಕೆತ್ತನೆಯುಳ್ಳ ಅಖಂಡ ಪೀಠವಿರುವ ಸಣ್ಣ ಗುಡಿಯೊಂದಿದ್ದು ಹಿಂದೆ ಇದು ಬಹುಶಃ

ತ್ರೈಪುರುಷ ಶಾಲೆಯಾಗಿದ್ದಂತೆ ತೋರುತ್ತದೆ. ಪಡಶೆಟ್ಟರ ಮನೆ ಬಳಿ ಇರುವ ಕಲ್ಲೇಶ್ವರ ಗುಡಿಯು ಗರ್ಭಗೃಹ ಅಂತರಾಳ ಹಾಗೂ ನವರಂಗಗಳನ್ನುಳ್ಳ ಸುಮಾರು ೧೨ನೇ ಶತಮಾನದ ರಚನೆಯಾಗಿದ್ದು ಸರಳವಾಗಿದೆ. ಈ ಗುಡಿಯ ಆವರಣದಲ್ಲಿ ಸುಮಾರು ೧೩ನೇ ಶತಮಾನದ ಮೂರು ವೀರಗಲ್ಲುಗಳಿವೆ. ಇಲ್ಲಿಯ ರಾಣಿಮಹಲ್ ಹಾಗೂ ಶೀಲವಂತರ ಬಾವಿಗಳು ಉಲ್ಲೇಖನಿಯ ರಚನೆಗಳಾಗಿದ್ದು ಗಾಣಗಾಪುರದ ನರಸಿಂಹ ಸರಸ್ವತಿಗಳ ಶಿಷ್ಯ, ಭೀಮಾಶಂಕರ ಸ್ವಾಮಿಗಳ ಸಮಾಧಿ ಇಲ್ಲಿದೆ. ಉಳಿದಂತೆ ಊರಲ್ಲಿ ಮಲ್ಲಯ್ಯ, ಹನುಮಂತ, ಜಟ್ಟಪ್ಪ, ಭೈರವ, ದೇವಮ್ಮ, ಲಕ್ಕಮ್ಮ ಹಾಗೂ ಪಾಲಕಮ್ಮನ ನವೀನ ದೇವಾಲಯಗಳಿದ್ದು, ಅಷೂರ್‌ಖಾನ, ಮಸೀದಿ ಹಾಗೂ ದರ್ಗಾಗಳೂ ಇವೆ. ಧಾರವಾಡ ಕೃಷಿ ವಿಶ್ವವಿದ್ಯಾಲಯಕ್ಕೆ ಸೇರಿದ ಗುಲಬರ್ಗಾ ಕೃಷಿ ಸ್ನಾತಕೋತ್ತರ ಕೇಂದ್ರದ ಸಂಶೋಧನಾ ಘಟಕವೂ ಈ ಊರಿನಲ್ಲಿದೆ.

**ಹಿರೇ ಝುಳಕಿ** (೯೭೦) ಯು ತಾಲೂಕು ಕೇಂದ್ರವಾದ ಆಳಂದದಿಂದ ನೈಋತ್ಯಕ್ಕೆ ೩೨ ಕಿ. ಮೀ., ದೂರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಮಾವಿನ ಜಳಕಿ' ಒಂದೇ ಉಲ್ಲೇಖಿತಗೊಂಡಿರುವ ಈ ಊರಿಂದ ಈವರೆಗೆ ಯಾದವ ಕನ್ನರದೇವರ ಕಾಲಕ್ಕೆ ಸೇರಿದ ೧೨೫೮ರ ಶಾಸನವು ವರದಿಯಾಗಿದೆ. ಇಲ್ಲಿಯ ಭೋಗೇಶ್ವರ ದೇವಾಲಯದಲ್ಲಿರುವ ಈ ಶಾಸನದಿಂದ ವಿಷಪ್ರಹಾರ ಭೋಗೇಶ್ವರ ದೇವರಿಗೆಂದು ಕಲಿಗೌಡನು ಆರು ಮತ್ತರು ಭೂಮಿಯನ್ನು ದಾನ ಬಿಟ್ಟ ಅಂಶ ಗೊತ್ತಾಗುತ್ತದೆ. ಹಾವು ಕಚ್ಚಿದವರನ್ನು ಇಲ್ಲಿಗೆ ಕರೆ ತಂದು ತೀರ್ಥ ನೀಡಿದರೆ ತತ್‌ಕ್ಷಣ ವಿಷ ಪರಿಹಾರವಾಗುವುದೆಂಬ ನಂಬಿಕೆ ಈಗಲೂ ರೂಢಿಯಲ್ಲಿದೆ. **ಝುಳಕಿ (ಕೆ)** (೧೮೨೧) ಯು ತಾಲೂಕು ಕೇಂದ್ರವಾದ ಆಳಂದದಿಂದ ನೈಋತ್ಯಕ್ಕೆ ೩೦ ಕಿ. ಮಿ. ದೂರದಲ್ಲಿದ್ದು ಇಲ್ಲಿಯ ಭೀಮಾಶಂಕರ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ.

**ಹಿರೇಸಾವಳಗಿ (ಬಿ)** (೩೨೬೨) ಯು ತಾಲೂಕು ಕೇಂದ್ರವಾದ ಗುಲಬರ್ಗಾದಿಂದ ಪಶ್ಚಿಮಕ್ಕೆ ೧೮ ಕಿ. ಮೀ., ಸಾವಳಗಿ ರೈಲ್ವೆ ನಿಲ್ದಾಣದಿಂದ ಪೂರ್ವಕ್ಕೆ ಎರಡು ಕಿ. ಮೀ. ದೂರದಲ್ಲಿದೆ. ಇಲ್ಲಿಂದ ಈವರೆಗೆ ಶಾಸನಗಳಾವುದೂ ವರದಿಯಾಗಿಲ್ಲ. ಆದರೆ ಊರಲ್ಲಿ ರಾಮಲಿಂಗ, ಬಸವಣ್ಣ, ಚೌಡೇಶ್ವರಿ, ಹನುಮಂತ ಹಾಗೂ ವೀರಭದ್ರೇಶ್ವರ ಗುಡಿಗಳ ಮುಂದೆ ಇರುವ ಚಾಳುಕ್ಯ ಕಂಬ, ಆದಿತ್ಯಪೀಠ, ಆದಿತ್ಯ, ಶಿವಲಿಂಗ-ನಂದಿ, ಗಣಪತಿ, ಗಜಲಕ್ಷ್ಮಿ ಮುಂತಾದ ಶಿಲ್ಪಾವಶೇಷಗಳಿಂದ ಈ ಊರಿನ ಪ್ರಾಚೀನತೆಯನ್ನು ಸುಮಾರು ೧೧ನೇ ಶತಮಾನದಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ಶಿವಲಿಂಗಪ್ಪ ಯರಗಲ್ ಅವರ ಮನೆಯ ಬಳಿ ಇರುವ ವೀರಭದ್ರ ದೇಗುಲವು ಸುಮಾರು ೧೧-೧೨ ಶತಮಾನದ ರಚನೆಯಾಗಿದ್ದು, ಒಂದೇ ಸಾಲಲ್ಲಿ ಮೂರು ಗರ್ಭಗೃಹಗಳಿದ್ದು ಅವುಗಳಲ್ಲಿ ವೀರಭದ್ರ, ಶಿವಲಿಂಗ ಹಾಗೂ ಚೌಡಮ್ಮನ ಮೂರ್ತಿಗಳಿವೆ. ಮಹಿಷಾಮರ್ದಿನಿಯ ಶಿಲ್ಪವೂ ಇಲ್ಲಿದ್ದು, ಈ ದೇಗುಲವಿಂದು ಜೀರ್ಣಾವಸ್ಥೆಯಲ್ಲಿದೆ.

ಇಲ್ಲಿ ಶಿವಲಿಂಗೇಶ್ವರ ಹಾಗೂ ಶಾಂತೇಶ್ವರ ಮಠಗಳಿದ್ದು, ಇವುಗಳಲ್ಲಿ ಶಿವಲಿಂಗೇಶ್ವರ ಮಠವು ಸುಮಾರು ೫೦೦ ವರ್ಷಗಳಷ್ಟು ಪ್ರಾಚೀನದ್ದಾಗಿದೆ. ಖ್ವಾಜಾ ಬಂದೆ ನವಾಜ್‌ರ ಸಮಕಾಲೀನ ಹಾಗೂ ಸೊಪ್ಪೆಯ ಸಿದ್ದಬಸವರಿಗಿಂತ ಹಿರಿಯ ಸಮಕಾಲಿನರಾಗಿ ಬದುಕಿದ್ದ ಶಿವಲಿಂಗೇಶ್ವರರು ವೀರಶೈವ ಮತ ಪ್ರಚಾರದೊಂದಿಗೆ ಹಿಂದೂ-ಮುಸ್ಲಿಂ ಭಾವೈಕ್ಯತೆಗಾಗಿ ಶ್ರಮಿಸಿದ್ದು, ಅವರೇ ಹಿರೇಸಾವಳಗಿ ಮಠದ ಸ್ಥಾಪಕರಾಗಿದ್ದು, ಅವರ ಗದ್ದುಗೆ ಇಲ್ಲಿದೆ. ಶಿವಲಿಂಗೇಶ್ವರರಿಗೆ ಸಂಬಂಧಿಸಿದಂತೆ ಇರುವ ಹಲವಾರು ಪವಾಡಗಳು ಜನಪದರಲ್ಲಿ ಹುದುಗಿದ್ದು,ಸುಮಾರು ೧೮ನೇ ಶತಮಾನದಲ್ಲಿದ್ದ ಸಿದ್ಧಲಿಂಗ ಕವಿಯು ರಚಿಸಿರುವ ಶ್ರೀ ಶಿವಲಿಂಗೇಶ್ವರ ಪುರಾಣವು ಶಿವಲಿಂಗೇಶ್ವರರ ಜೀವನ ಚರಿತ್ರೆಯಾಗಿದೆ. ಶಿವಲಿಂಗೇಶ್ವರರ ಹುಟ್ಟೂರಾದ ಕೊಳ್ಳೂರು, ಹಿರೇಸಾವಳಗಿಯಿಂದ ನೈಋತ್ಯಕ್ಕೆ ಸುಮಾರು ೧೦ ಕಿ. ಮೀ. ದೂರದಲ್ಲಿದ್ದು, ಹಿರೇಸಾವಳಗಿಯು ಇವರ ಕಾರ್ಯಕ್ಷೇತ್ರಕ್ಕೆ ಕೇಂದ್ರವಾಗಿದ್ದು, ಗೋಕಾಕ್ ತಾಲೂಕಿನ ಚಿಕ್ಕಸಾವಳಗಿ ಇವರ ಐಕ್ಯ ಸ್ಥಳವಾಗಿದೆ. ಇವರು ಭೇಟಿ ಇತ್ತ ಸ್ಥಳಗಳಲ್ಲಿ ಶಾಖಾ ಮಠಗಳು ಸ್ಥಾಪನೆಗೊಂಡಿವೆ. ಈ ಮಠಕ್ಕೆ ೩೬೦ ಶಾಖಾ ಮಠಗಳು ಕರ್ನಾಟಕ, ಮಹಾರಾಷ್ಟ್ರ ಹಾಗೂ ಆಂಧ್ರಗಳಲ್ಲಿ ಇವೆ ಎಂಬ ಅಭಿಪ್ರಾಯವಿದೆ. ಹಿರೇ ಸಾವಳಗಿಯಲ್ಲಿ ಸಂಕ್ರಮಣದಂದು ಶಿವಲಿಂಗೇಶ್ವರರ ಪಲ್ಲಕ್ಕಿ ಉತ್ಸವ ಜರುಗುತ್ತಿದ್ದು, ಧವನದ ಹುಣ್ಣಿಮೆಯಂದು ರಥೋತ್ಸವ ನಡೆಯುತ್ತದೆ.

**ಹಿರೇಹೆಬ್ಬಾಳ** (೧೫೬೭) ವು ತಾಲೂಕು ಕೇಂದ್ರವಾದ ಸುರಪುರದಿಂದ ನೈಋತ್ಯಕ್ಕೆ ೨೮ ಕಿ. ಮೀ. ದೂರದಲ್ಲಿ ಹುಣಸಗಿ ರಸ್ತೆಯಲ್ಲಿ ಹಿರೇಹಳ್ಳದ ದಂಡೆಯ ಮೇಲಿದೆ. ಊರಿಂದ ಒಂದು ಮೈಲಿ ದೂರದಲ್ಲಿರುವ ಕತ್ತೆ ಬಂಡೆ ಪ್ರದೇಶದಲ್ಲಿ ಡಾ. ಪದ್ದಯ್ಯನವರು ನೂತನ ಶಿಲಾಯುಗ ಸಂಸ್ಕೃತಿಗೆ ಸೇರಿದ ಗೂಳಿಗಳನ್ನುಳ್ಳ ಬಂಡೆ ವರ್ಣಚಿತ್ರಗಳನ್ನು

ಪತ್ತೆಹಚ್ಚಿದ್ದಾರೆ. ಚಾರಿತ್ರಿಕವಾಗಿ ಇಲ್ಲಿ ನಾರಾಯಣದೇವರಗುಡಿ ಮುಂದೆ ನಿಂತಿರುವ ಶಿಲಾಶಾಸನವು ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ್ದು, ೧೦೮೧ರಲ್ಲಿ ಮಾಧವರಾಜನು ನಾರಾಯಣ ದೇವಾಲಯವನ್ನು ನಿರ್ಮಿಸಿ ಆ ದೇವರ ಪೂಜೆ ಪುರಸ್ಕಾರಕ್ಕೆ, ಪೂಜಾರಿಗೆ, ಹಾಗೂ ಕಲುಕುಟಿಗ ಮಾರೋಜನಿಗೆ ಭೂಮಿ, ನಿವೇಶನಗಳನ್ನು ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಈ ಶಾಸನದಲ್ಲಿ ಸಾಂದರ್ಭಿಕವಾಗಿ ಬರುವ ಬಸದಿಯ ಉಲ್ಲೇಖವು ಹಿಂದೆ ಇಲ್ಲಿದ್ದ ಜೈನಬಸದಿಯ ಬಗ್ಗೆ ತಿಳಿಸುತ್ತದೆ. ಪೂರ್ವಾಭಿಮುಖವಾಗಿರುವ ನಾರಾಯಣ ಗುಡಿ ಭಾಗಶಃ ಜೀರ್ಣೋದ್ಧಾರಗೊಂಡಿದ್ದು ಚೌಕಾಕೃತಿಯಲ್ಲಿದ್ದು ಗರ್ಭಗೃಹ ಹಾಗೂ ನವರಂಗಗಳನ್ನು ಹೊಂದಿದೆ. ಗರ್ಭಗೃಹ ಹಾಗೂ ನವರಂಗದ ಪ್ರವೇಶ ದ್ವಾರಬಂಧಗಳು ತ್ರಿಶಾಖಾಲಂಕೃತವಾಗಿದ್ದು ಲಲಾಟಗಳಲ್ಲಿ ಗಜಲಕ್ಷ್ಮಿಯನ್ನು ಹೊಂದಿವೆ. ಗರ್ಭಗೃಹದಲ್ಲಿ ನಾರಾಯಣನ ಮೂರ್ತಿ ಇದ್ದು ಮುಕ್ಕಾಗಿದೆ. ಗುಡಿಯಲ್ಲಿ ಗಣಪತಿ ಹಾಗೂ ಜಲದೇವತಾ ಶಿಲ್ಪಗಳಿವೆ. ಹನುಮಂತನ ಗುಡಿಗೆ ಸೇರಿದಂತೆ ಇರುವ ಚೌಡಮ್ಮನ ಗುಡಿಯಲ್ಲಿ ಪದ್ಮಾಸೀನ ಚೌಡೇಶ್ವರಿಯ ಶಿಲ್ಪವಿದ್ದು ಬಹಳ ಉಗ್ರವಾಗಿದೆ. ಅಲ್ಲೇ ಸಪ್ತಮಾತೃಕಾ ಶಿಲ್ಪವಿದೆ. ಉಳಿದಂತೆ ಊರಲ್ಲಿ ಇತ್ತೀಚಿನ ಕೆಲವು ದೇವಸ್ಥಾನಗಳಿದ್ದು ಮಸೀದಿ ಹಾಗೂ ದರ್ಗಾಗಳಿವೆ.

**ಹುಣಸಗಿ** (೭೦೧೫) ಯು ತಾಲೂಕು ಕೇಂದ್ರದಿಂದ ಸುರಪುರದಿಂದ ಪಶ್ಚಿಮಕ್ಕೆ ೩೬ ಕಿ. ಮಿ. ದೂರದಲ್ಲಿದ್ದು ವಿಶಿಷ್ಟವಾದ ಪ್ರಾಗೈತಿಹಾಸಿಕ ನೆಲೆಗಳಲ್ಲಿ ಒಂದಾಗಿದೆ. ಡಾ. ಪದ್ದಯ್ಯನರರು ೧೯೭೪ರಲ್ಲಿ ಅನ್ವೇಷಣೆ ಕೈಗೊಂಡು ಆದಿ ಹಳೆಶಿಲಾಯುಗ ಸಂಸ್ಕೃತಿಯ ಅವಶೇಷಗಳನ್ನು ಇಲ್ಲಿ ಪತ್ತೆ ಹಚ್ಚಿದ್ದಾರೆ. ಹುಣಸಗಿ ಹಳ್ಳದ ಕಣಿವೆ ಪ್ರದೇಶವನ್ನು ವಿಸ್ತೃತವಾಗಿ ಸರ್ವೇಕ್ಷಣ, ಉತ್ಖನನಗಳನ್ನು ನಡೆಸಿರುವ ಇವರು ಇಲ್ಲಿನ ಅಷೂಲಿಯನ್ ಸಂಸ್ಕೃತಿಯ ಬಗ್ಗೆ ಮಹತ್ವದ ಸಂಶೋಧನೆಯನ್ನು ಮಾಡಿದ್ದಾರೆ. ಪ್ರಾಗೈತಿಹಾಸಿಕ ನೆಲೆಯೂ ಆಗಿದ್ದ ಈ ಊರಿಂದ ಈವರೆಗೆ ಐದು ಶಾಸನಗಳು ವರದಿಯಾಗಿದ್ದು ಒಂದು ಬಹಳ ಹಾಳಾಗಿದೆ. ಇವುಗಳಲ್ಲಿ ಮೇತ್ರಿ ಗೌಡೇಶರ ಮನೆ ಮುಂದೆ ಇದ್ದ ಕಲ್ಯಾಣದ ಚಾಳುಕ್ಯ ಅರಸ ಒಂದನೇಯ ಜಗದೇಕಮಲ್ಲನ ಕಾಲದ ೧೦೩೩ರ ಶಾಸನವು ಸಾಮಂತ ಚಂದನ ಮಡದಿ ಜೋಗನಬ್ಬರಸಿಯು ಅಲದಕೆರೆಯಲ್ಲಿ ತಾನೇ ನಿರ್ಮಿಸಿದ ಸಹಸ್ರಲಿಂಗ ದೇವಾಲಯಕ್ಕೆ ಭೂದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಆದರೆ ಶಾಸನೋಕ್ತ ಆಲದಕೆರೆ ಯಾವುದೆಂದು ಸದ್ಯಕ್ಕೆ ಗುರುತಿಸಲಾಗುತ್ತಿಲ್ಲ. ಇಲ್ಲಿಯ ೧೧೨೦ರ ಇನ್ನೊಂದು ಶಾಸನ ಆರನೆಯ ವಿಕ್ರಮಾದಿತ್ಯನ ಪಿರಿಯರಸಿ, ಪಟ್ಟ ಮಹಾದೇವಿ ಮಲೆಯಮತಿ ದೇವಿಯು ಸರ್ವನಮಸ್ಯದ ಅಗ್ರಹಾರ ವಿಕ್ರಮತೀರ್ಥದಲ್ಲಿ ಮಲ್ಲಪಯ್ಯ ದಂಡನಾಯಕನು ಮಲ್ಲಿಕಾರ್ಜುನ ಹಾಗೂ ಕೇಶವ ದೇವರುಗಳ ಪೂಜೆ ಪುರಸ್ಕಾರಕ್ಕೆಂದು ವಿಕ್ರಮಪುರದಲ್ಲಿ ವಾಸುದೇವಭಟ್ಟೋಪಾಧ್ಯಾಯರಿಂದ ಖರೀದಿಸಿ ಭೂದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ಇಲ್ಲಿನ ಮೂರನೆಯ ಶಾಸನ ಭೂಲೋಕ ಮಲ್ಲ ಮೂರನೆಯ ಸೋಮೇಶ್ವರನ ಕಾಲದ್ದಾಗಿದ್ದು ೧೧೩೭ರಲ್ಲಿ ಸರ್ವನಮಸ್ಯದ ಅಗ್ರಹಾರ ವಿಕ್ರಮಪುರದ ಕೇಶವ ದೇವರಿಗೆ, ಪೂಜಾರಿಗೆ ಶ್ರೋತ್ರಿಗೆ, ಉಪಾಧ್ಯಾಯರಿಗೆ, ಬ್ರಾಹ್ಮಣ ದೇವಿಕವ್ವೆ ಹಾಗೂ ಮಠಕ್ಕೆ ಭೂಮಿ ಹಾಗೂ ನಿವೇಶನಗಳನ್ನು ದಾನ ಕೊಟ್ಟ ವಿಷಯವನ್ನು, ಮಹಾದೇವರ ಪ್ರತಿಷ್ಠಾಪನೆಯನ್ನೂ ಹೇಳಿದರೆ, ನಾಲ್ಕನೇ ಶಾಸನ ಬಹಳ ಹಾಳಾಗಿದ್ದರೂ ಚತುರ ಕವೀಶ್ವರ ಬಿರುದಾಂಕಿತ ಆಧಿಭಟ್ಟನ ಬಗ್ಗೆ ತಿಳಿಸುತ್ತದೆ. ಇಲ್ಲಿಯ ಶಾಸನಗಳು ದಾಖಲಿಸಿರುವ ಅಗ್ರಹಾರ ವಿಕ್ರಮಪುರ, ವಿಕ್ರಮತೀರ್ಥ ಯಾವುದೆಂದು ಖಚಿತವಾಗಿ ಹೇಳಲು ಬರುವುದಿಲ್ಲ. ನೆರೆಯ ಶ್ರೀನಿವಾಸಪುರದಲ್ಲಿ ದೊರೆತಿರುವ ೧೧೮೧ರ ಶಾಸನದಲ್ಲಿ ಹುಣಸಗಿಯ ಉಲ್ಲೇಖವಿರುವುದರಿಂದ ಹುಣಸಗಿಯೇ ಶಾಸನೋಕ್ತ ವಿಕ್ರಮತೀರ್ಥವೆಂದು ಪರಿಗಣಿಸಲು ಬರುವುದಿಲ್ಲ. ಹುಣಸಗಿಯಿಂದ ಪೂರ್ವಕ್ಕೆ ಸುಮಾರು ನಾಲ್ಕು ಕಿ. ಮೀ ದೂರಲ್ಲಿರುವ ಖೋಜಾಪುರ (ಹಾಳೂರು) ಅಥವಾ ಶ್ರೀನಿವಾಸಪುರವೇ ಶಾಸನೋಕ್ತ ವಿಕ್ರಮಪುರವಿದ್ದಿರಬೇಕೆಂದೆನಿಸುತ್ತದೆ.

ಹುಣಸಗಿಯಲ್ಲಿ ಪ್ರಾಚೀನ ದೇವಾಲಯ ರೂಪದಲ್ಲಿ ನೀಲಕಂಠೇಶ್ವರ ದೇವಾಲಯವಿದ್ದು, ಇದೊಂದು ತ್ರಿಕೂಟವಾಗಿದೆ. ಉತ್ತರಾಭಿಮುಖವಾಗಿರುವ ಈ ದೇಗುಲವು ಮೂರು ಗರ್ಭಗೃಹ ಹಾಗೂ ಅಂತರಾಳಗಳನ್ನು ಹೊಂದಿದ್ದು ಇವುಗಳನ್ನು ಒಂದೇ ನವರಂಗ ಒಂದಾಗಿಸಿದ್ದು ಇದರ ಮುಂಭಾಗವು ಹಿಂದೆ ತೆರೆದ ಮಂಟಪವನ್ನು ಹೊಂದಿದ್ದು, ಈಗ ಅದನ್ನು ಮುಚ್ಚಿದ್ದಾರೆ. ಈ ದೇವಾಲಯದ ಗರ್ಭಗೃಹಗಳ ಬಾಗಿಲವಾಡಗಳು ತ್ರಿಶಾಖೆ, ಪಂಚಶಾಖೆಯ ಅಲಂಕಾರ ಪಟ್ಟಿಕೆಗಳನ್ನು ಹೊಂದಿದ್ದು, ಲಲಾಟಗಳಲ್ಲಿ ಗಜಲಕ್ಷ್ಮಿ ಕೆತ್ತನೆಯನ್ನು ಹೊಂದಿವೆ. ಪ್ರಧಾನ ಗರ್ಭಗೃಹದಲ್ಲಿ ಶಿವಲಿಂಗವಿದ್ದು ಉಳಿದ ಗರ್ಭಗೃಹಗಳು ಖಾಲಿ ಇವೆ. ನವರಂಗದ ದೇವಕೋಷ್ಠಗಳಲ್ಲಿ ಹೆಚ್ಚಿನವು ಬರಿದಿದ್ದು, ಅಲ್ಲೇ ಮುಕ್ಕಾಗಿರುವ ಉಮಾ-ಮಹೇಶ್ವರ, ಆದಿತ್ಯ ಹಾಗೂ ಮಹಿಷಾ ಮರ್ದಿನಿಯರ ಬಿಡಿ ಶಿಲ್ಪಗಳಿವೆ. ಗುಡಿಯ ಪ್ರಧಾನ ದ್ವಾರದ ಬಾಗಿಲವಾಡವು

ನಾಲ್ಕು ಶಾಖೆಗಳಿಂದ ಅಲಂಕೃತಗೊಂಡಿದ್ದು, ನಡುವೆ ಗಜಲಕ್ಷ್ಮಿಯನ್ನು ಹೊಂದಿದೆ. ಈ ಗುಡಿಗೆ ಸಂಬಂಧಿಸಿದಂತೆ ಶಾಸನಗಳು ಲಭಿಸಿಲ್ಲವಾದರೂ ವಾಸ್ತು ಶೈಲಿಯಿಂದ ಇದನ್ನು ಸುಮಾರು ೧೧ನೇ ಶತಮಾನದ ಆರಂಭದ ರಚನೆಯೆಂದು ಪರಿಗಣಿಸಬಹುದಾಗಿದೆ.

ಪೇಟೆಯಲ್ಲಿರುವ ಮಲ್ಲಿಕಾರ್ಜುನ ಗುಡಿಯನ್ನು ಸುಮಾರು ೧೧ನೇ ಶತಮಾನದ ದೇವಾಲಯದ ಅವಶೇಷಗಳನ್ನು ಬಳಸಿ ನಿರ್ಮಿಸಲಾಗಿದೆ. ಗುಡಿ ಆವರಣದಲ್ಲಿ ಸಪ್ತಮಾತೃಕಾ ಶಿಲ್ಪ ಪಟ್ಟಿಕೆಯಿದೆ. ಈ ಗುಡಿಯ ಬಳಿಯಲ್ಲೇ ಬಿದ್ದಿರುವ ವೀರಗಲ್ಲು ತುಂಡೊಂದರ ಮೇಲೆ ಶಾಸನವಿದ್ದು, ಅಸ್ಪಷ್ಟವಾಗಿದೆ. ಉಳಿದಂತೆ ಊರಲ್ಲಿ ಇತ್ತೀಚಿನದಾದ ಕೆಂಚಮ್ಮ, ಬಸವಣ್ಣ, ಹನುಮಂತ, ಮೈಲಾರಲಿಂಗ, ಬೀರಪ್ಪ, ಸಿದ್ದಲಿಂಗೇಶ, ಮಹಾಲಿಂಗರಾಯ,ದ್ಯಾಮವ್ವ, ಮದಗಮಾಯಿಯ ದೇವಸ್ಥಾನಗಳಿದ್ದು, ಜುಮ್ಮಾ ಮಸೀದಿ ಹಾಗೂ ಮೆಹಬೂಬು ಸುಬಾನಿಯ ದರ್ಗಾಗಳಿವೆ. ಊರಿನ ಗ್ರಾಮ ಪಂಚಾಯಿತಿ ಕಟ್ಟಡದಲ್ಲೆ ಗ್ಯಾಲರಿಯೊಂದನ್ನು ರೂಪಿಸಿ, ಹುಣಸಗಿ-ಬೂದಿಹಾಳ ಪರಿಸರದಲ್ಲಿ ಪತ್ತೆಯಾಗಿರುವ ಪ್ರಾಗೈತಿಹಾಸಿಕ ಅವಶೇಷಗಳನ್ನು ಪ್ರದರ್ಶಿಸುವ ವ್ಯವಸ್ಥೆ ಮಾಡಿರುವುದು ಗಮನಾರ್ಹ ಅಂಶವಾಗಿದೆ. ರವಿವಾರ ಸಂತೆಯ ದಿನವಾಗಿದ್ದು, ಪ್ರತಿ ವರ್ಷ ಶ್ರಾವಣದ ಕೊನೆಯ ಸೋಮವಾರದಂದು ನೀಲಕಂಠೇಶ್ವರನ ಜಾತ್ರೆಯನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಇಲ್ಲಿ ನೀರಾವರಿ ಇಲಾಖೆಯ ಸುಸಜ್ಜಿತ ವಸತಿ ಗೃಹವಿದೆ.

**ಹುಣಸಿ ಹಡಗಲಿ** (೧೩೭೬)ಯು ತಾಲೂಕು ಕೇಂದ್ರವಾದ ಗುಲಬರ್ಗಾದಿಂದ ಪಶ್ಚಿಮಕ್ಕೆ ೨೭ ಕಿ. ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದ್ದು, ಮೂರು ಕಿ. ಮೀ. ಅಂತರದಲ್ಲಿ ಹುಣಸಿ ಹಡಗಲಿ ರೈಲ್ವೆ ನಿಲ್ದಾಣವಿದೆ. ಪ್ರಾಚೀನ ಶಾಸನಗಳಲ್ಲಿ ಹಡಂಗಿಲೆ ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಆಲಂದೆ - ೧೦೦೦ಕ್ಕೆ ಸೇರಿದ ಗೊಂಕ- ೧೨೦ ಕಂಪಣಕ್ಕೆ ಒಳಪಟ್ಟಿತ್ತು. ಇಲ್ಲಿಂದ ಈವರೆಗೆ ಕಲ್ಯಾಣದ ಚಾಳುಕ್ಯರ ಕಾಲಕ್ಕೆ ಸೇರಿದ ಏಕೈಕ ಶಾಸನ ವರದಿಯಾಗಿದೆ. ಇಲ್ಲಿಯ ಪಾರ್ಶ್ವನಾಥ ಬಸದಿಯಲ್ಲಿರುವ ಈ ಶಾಸನ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ್ದು, ೧೦೯೯ರಲ್ಲಿ ಅರಸನ ಪಿರಿಯರಸಿ ಚಂದಲದೇವಿಯು ಆಲಂದೆ -೧೦೦೦ ದ ಭತ್ತಗ್ರಾಮಗಳನ್ನು ಆಳುತ್ತಿದ್ದಾಗ, ಮಹಾಮಂಡಳೇಶ್ವರ ಬಿಬ್ಬರಸನು ಗೊಂಕ-೧೨೦ ಅನ್ನು ಆಳುತ್ತಿದ್ದಾಗ ಚೌಧರೆ ರಕ್ಕಸಯ್ಯ ನಾಯಕನು ಹಡಂಗಿಲೆಯಲ್ಲಿ ನಿರ್ಮಿಸಿದ ಪಾರ್ಶ್ವನಾಥ ದೇವರ ಬಸದಿ ಹಾಗೂ ಪಟ್ಟಸಾಲೆಯ (ಪಾಠಶಾಲೆ) ಶಾಂತಿನಾಥ ದೇವರುಗಳ ಪೂಜಾವಿಧಿಗಳಿಗೆಂದು ನುಡಿದಂತೆ ಗಂಡನ ಗಡಿಂಬದಲ್ಲಿ ೧೨ ಮತ್ತರು ಹೊಲ, ತೋಟ, ಗಾಣ ಹಾಗೂ ಹತ್ತು ಮನೆಗಳನ್ನು ಮೂಲಸಂಘ, ದೇಸಿಗಣ, ಪುಸ್ತಕಗಚ್ಛದ ಪಿರಿಯ ಸಮುದಾಯಕ್ಕೆ ಸೇರಿದ ಆಚಾರ್ಯರಿಗೆ ಮಹಾ ಪ್ರಧಾನ ಭೀವಣಯ್ಯಗಳ ಬೇಡಿಕೆಯಂತೆ ಆರನೆಯ ವಿಕ್ರಮಾದಿತ್ಯನು ಸೂರ್ಯ ಗ್ರಹಣದಂದು ಗೋದಾವರಿ ತೀರದ ಕೋಟಿ ತೀರ್ಥದಲ್ಲಿ ತುಲಾಪುರುಷ ಮಾಡಿಸಿಕೊಂಡ ಸಂದರ್ಭದಲ್ಲಿ ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ಶಾಸನೋಕ್ತ ಬಸದಿಗಳೆರಡು ಇಂದು ಇಲ್ಲಿವೆ. ಇವುಗಳಲ್ಲಿ ಪದ್ಮಾವತಿ ಗುಡಿಯೇ ಶಾಸನೋಕ್ತ ಪಾರ್ಶ್ವನಾಥ ಬಸದಿಯಾಗಿದ್ದು, ಜೀರ್ಣೋದ್ಧಾರಗೊಂಡಿದೆ. ವಿಶಾಲವಾದ ಪ್ರಾಕಾರದ ನಡುವೆ ಇರುವ ಈ ಬಸದಿಯು ಗರ್ಭಗೃಹ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಸುಮಾರು ನಾಲ್ಕೂವರೆ ಅಡಿ ಎತ್ತರದ ಪಾರ್ಶ್ವನಾಥನ ಸ್ಥಾನಕ ಶಿಲ್ಪವಿದೆ. ನವರಂಗದಲ್ಲಿ ಪದ್ಮಾವತಿ ಯಕ್ಷಿ, ಧರಣೇಂದ್ರ ಯಕ್ಷ, ಹಾಗೂ ಶಾಂತಿನಾಥ ತೀರ್ಥಂಕರರ ಶಿಲ್ಪಗಳಿವೆ. ಈ ದೇವಿ(ಪದ್ಮಾವತಿ)ಯ ಜಾತ್ರೆಯು ಎಳ್ಳ ಅಮಾವಾಸೆಗೆ ಎರಡು ದಿನ ಮೊದಲು ಜರುಗುತ್ತದೆ. ಈ ಬಸದಿಯ ಬಳಿಯಲ್ಲೆ ಇನ್ನೊಂದು ಪ್ರಾಚೀನ ದೇವಾಲಯವಿದೆ. ಪೂರ್ಣಾ ಶಿಥಿಲಾವಸ್ಥೆಯಲ್ಲಿರುವ ಇದೊಂದು ತ್ರಿಕೂಟವಾಗಿದ್ದು ಮೂರು ಪ್ರತ್ಯೇಕ ಗರ್ಭಗೃಹ ಹಾಗೂ ಅಂತರಾಳಗಳನ್ನು ನಡುವೆ ಇರುವ ಒಂದೇ ನವರಂಗದಿಂದ ಒಗ್ಗೂಡಿಸಲಾಗಿದ್ದು, ಶಾಸನೋಕ್ತ ಪಟ್ಟಸಾಲೆಯ ಶಾಂತಿನಾಥ ಬಸದಿ ಇದೇ ಆಗಿರುವಂತೆ ತೋರುತ್ತದೆ. ಈ ಗುಡಿಯ ಅಂತರಾಳದಲ್ಲಿ ಸಪ್ತಮಾತೃಕಾ ಶಿಲ್ಪವಿದೆ. ಅದರಿಂದು ಸ್ಥಳೀಕರು ರೂಢಿಯಲ್ಲಿ ಇದನ್ನು ಈಶ್ವರ ದೇಗುಲವೆಂದು ಕರೆಯುತ್ತಾರೆ. ಇಲ್ಲಿಯ ಅಲ್ಲಮ ಮಹಾಪ್ರಭು ದೇವಾಲಯವು ಇತ್ತೀಚಿನದಾಗಿದ್ದು ಇಲ್ಲಿ ೬೩ ಪುರಾತನರ ಹೆಸರಲ್ಲಿ ಶಿವಲಿಂಗಗಳಿದ್ದು ಇದರ ಜಾತ್ರೆಯು ಯುಗಾದಿ ಅಮಾವಾಸೆಯಂದು ನಡೆಯುತ್ತದೆ. ಇದರೊಂದಿಗೆ ಊರಲ್ಲಿ ಬಸವಣ್ಣ, ಹನುಮಂತ, ಲಕ್ಷ್ಮಿ ಹಾಗೂ ಮರಗಮ್ಮನ ನವೀನ ದೇವಾಲಯಗಳಿವೆ.

**ಹುರಸಗುಂಡಗಿ** (೧೭೨೯) ಯು ತಾಲೂಕು ಕೇಂದ್ರವಾದ ಶಹಾಪುರದಿಂದ ಈಶಾನ್ಯಕ್ಕೆ ೧೬ ಕಿ. ಮೀ. ಶಿರವಾಳದಿಂದ ಪೂರ್ವಕ್ಕೆ ಎರಡು ಕಿ. ಮೀ. ದೂರದಲ್ಲಿ ಭೀಮಾ ನದಿಯ ಬಲ (ಸನ್ನತಿಯ ಎದುರು)ದಂಡೆಯ ಮೇಲಿರುವ ಚಾರಿತ್ರಿಕ

ಸ್ಥಳವಾಗಿದೆ. ಭೀಮಾ ನದಿಯ ಆಚೆಯ ದಡದಲ್ಲಿರುವ ಸನ್ನತಿ, ಈಚೆಯ ದಡದಲ್ಲಿರುವ ನೆರೆಯ ಗ್ರಾಮಗಳಾದ ಶಿರವಾಳ ಹಾಗೂ ಅಣಬಿಗಳು ಶಾತವಾಹನರಿಗಿಂತಲೂ ಪ್ರಾಚೀನವಾದ ಸಾಂಸ್ಕೃತಿಕ ಅವಶೇಷಗಳನ್ನು ಹೊಂದಿದ್ದು, ಇಲ್ಲೂ ಶಾತವಾಹನರ ಕಾಲದ ಬೌದ್ಧ ಸಂಬಂಧವುಳ್ಳ ಎರಡು ದಿಬ್ಬಗಳನ್ನು ಗಮನಿಸಲಾಗಿದ್ದು, ಇಲ್ಲಿಂದ ವರದಿಯಾಗಿರುವ ಬೌದ್ಧ ಅವಶೇಷಗಳಲ್ಲಿ, ಆಸೀನ ಭಂಗಿಯಲ್ಲಿ ಇರುವ ಗಜಲಕ್ಷ್ಮಿಯ ಸುಂದರ ಕೆತ್ತನೆಯುಳ್ಳ ಪದಕವಿರುವ ಕೊರಳ ಹಾರವನ್ನು ಧರಿಸಿರುವ ಯಕ್ಷನ ಶಿಲ್ಪವು ಮಹತ್ವದ್ದಾಗಿದ್ದು, ದಕ್ಷಿಣ ಭಾರತದಲ್ಲಿ ಲಭ್ಯವಿರುವ ಗಜಲಕ್ಷ್ಮಿಯ ಅತ್ಯಂತ ಪ್ರಾಚೀನ ಉದಾಹರಣೆ ಇದಾಗಿದೆ. ಅದೇ ರೀತಿ ನೊಗ ಹಾರಿದ ಚಕ್ಕಡಿಯ ಶಿಲ್ಪ ಕೆತ್ತನೆಯುಳ್ಳ, ಬೃಹತ್ತಾದ ಫಲಕಗಳು ಗಮನಾರ್ಹವಾಗಿದ್ದು, ಊರ ನಡುವೆ ಬಸವಣ್ಣನ ಗುಡಿ ಕಟ್ಟೆಯ ಮೇಲಿರುವ ಆಸೀನ ದಂಪತಿ ಶಿಲ್ಪವೂ ಶಾತವಾಹನರ ಕಾಲದ್ದಾಗಿದೆ. ಊರ ನಡುವೆ ಇರುವ ರಾಮಲಿಂಗೇಶ್ವರ ಗುಡಿಯು ಗರ್ಭಗೃಹ, ತೆರೆದ ಅಂತರಾಳ, ನವರಂಗ ಹಾಗೂ ಇತ್ತೀಚಿನ ಮೊಗಸಾಲೆಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ಬಾಗಿಲವಾಡವು ಸರಳವಾದ ತ್ರಿಶಾಖಾಪಟ್ಟಿಕೆಯನ್ನು ಹೊಂದಿದ್ದು, ಲಲಾಟದಲ್ಲಿ ಗಜಲಕ್ಷ್ಮಿ ಇದೆ. ನವರಂಗದ ನಡುವಣ ಕಂಬಗಳು ಕಲ್ಯಾಣದ ಚಾಳುಕ್ಯರ ಕಾಲದ್ದಾಗಿದ್ದು, ಈ ದೇವಾಲಯವು ಸುಮಾರು ೧೨ನೆಯ ಶತಮಾನದ ರಚನೆಯಾಗಿದೆ. ಉಳಿದಂತೆ ಊರಲ್ಲಿ ನವೀನ ಗುಡಿಗಳಿದ್ದು, ಮಸೀದಿ ಹಾಗೂ ದರ್ಗಾ ಕೂಡ ಇವೆ.

**ಹೆಮ್ಮಡಗಿ** (೬೫೦೭) ಯು ತಾಲೂಕು ಕೇಂದ್ರವಾದ ಸುರಪುರದಿಂದ ಆಗ್ನೇಯಕ್ಕೆ ೧೪ ಕಿ. ಮೀ. ದೂರದಲ್ಲಿದ್ದು, ಪ್ರಾಚೀನ ಶಾಸನಗಳಲ್ಲಿ 'ಎಮ್ಮವಾಡಿ'ಗೆ ಎಂದೇ ಉಲ್ಲೇಖಿತಗೊಂಡಿದೆ. ಕೃಷ್ಣಾ ನದಿಯ ಎಡದಂಡೆಯ ಮೇಲಿರುವ ಇದು ಹಿಂದೆ ಸಗರ ನಾಡಿಗೆ ಸೇರಿದ್ದು, ಇಲ್ಲಿಂದ ಈವರೆಗೆ ನಾಲ್ಕು ಶಾಸನಗಳು ವರದಿಯಾಗಿವೆ. ಇವುಗಳಲ್ಲಿ ಪೂಜಾರಿ ಹೊಲದಲ್ಲಿರುವ ೧೦೧೮ರ ಶಾಸನವೇ ಪ್ರಾಚೀನದ್ದಾಗಿದ್ದು, ಎಮ್ಮವಾಡಿಗೆಯ ಮಲ್ಲಿಕಾರ್ಜುನ ದೇವರಿಗೆ ಹನ್ನೆರಡು ಮತ್ತರು ಭೂಮಿಯನ್ನು ತಿಪ್ಪರಸನು ನೀಡಿದನೆಂದು ತಿಳಿಸಿದರೆ, ಅಲ್ಲೇ ಇರುವ ಮತ್ತೊಂದು ಶಾಸನ, ಬಹಳ ಹಾಳಾಗಿದೆ. ಬಸವೇಶ್ವರ ಗುಡಿ ಮುಂದಿರುವ ಶಾಸನವು ಕಲ್ಯಾಣದ ಚಾಳುಕ್ಯ ಅರಸ ನಾಲ್ಕನೆಯ ಸೋಮೇಶ್ವರ ಕಾಲದ್ದಾಗಿದ್ದು ೧೧೮೨ರಲ್ಲಿ ಮಾಹೇಶ್ವರನಾದ ದಂಡನಾಯಕ ಬಮ್ಮಿದೇವನು ಮಹಾಮಂಡಳೇಶ್ವರ ಅಲ್ಲಹುಲಿದೇವರಸನ ಮೇಲೆ ಏರಿಬಂದು ದೇವಾಪುರದಲ್ಲಿ ತಂಗಿದ್ದಾಗ ಎಮ್ಮವಾಡಿಗೆಯ ಮಹಲಿಂಗಮೂರ್ತಿ ಹಂಡೇಶ್ವರ ದೇವರ ಮಹಿಮೆಯನ್ನು ಆಲಿಸಿ ಆ ದೇವರಿಗೆ ಕನ್ನಡನೂರು ಹಾಗೂ ಹಾಲಂಗೆರೆ ಎಂಬ ಎರಡು ಊರುಗಳನ್ನು ದಾನ ಕೊಟ್ಟ ಸಂದರ್ಭದಲ್ಲಿ ಎಮವಾಡಿಗೆಯ ಪ್ರಭುಗಳು ೬೪ ಗೇಣಿನ ಕೋಲಲ್ಲಿ ನಾಲ್ಕು ಮತ್ತರು, ಮುಂಜನ ಕೋಲಲ್ಲಿ ಎರಡು ಮತ್ತರು ಭೂಮಿ ಹಾಗೂ ಇನ್ನಿತರ ಸುಂಕಗಳನ್ನು ದಾನ ಬಿಟ್ಟರು. ಇವುಗಳನ್ನು ದೇವರಿಗೆ ಹಾಗೂ ೧೬ ಬ್ರಾಹ್ಮಣರಿಗೆ ಸಮಾನವಾಗಿ ಹಂಚಿದ ಪ್ರಭು ಭಾವರಸನು ಅದನ್ನು ತನ್ನ ತಂದೆ ಪಂದಿರಾಜನು ಮಾಡಿಸಿದ್ದ ಪಂದೇಶ್ವರ ದೇವರ್ಗೆಂದು, ಅದರ ಆಚಾರ್ಯರಾದ ಚಾಮುಂಡರಾಶಿ ಪಂಡಿತ ಹಾಗೂ ಅಮಿತರಾಶಿ ಪಂಡಿತರಿಗೆ ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ದೇವಾಲಯದ ಸೌಂದರ್ಯವನ್ನೂ ಭವ್ಯತೆಯನ್ನೂ ಹೊಗಳುವ ಈ ಶಾಸನದ ಸಾಹಿತ್ಯ ರಂಜನೀಯವಾಗಿದೆ. ಗೋಲಗೇರಿಯವರ ಹೊಲದಲ್ಲಿರುವ ಶಾಸನವು, ಸುಮಾರು ೧೨ನೇ ಶತಮಾನಕ್ಕೆ ಸೇರಿದ್ದು, ಅಮಿತರಾಶಿ ಪಂಡಿತರಿಗೆ ಚಂದರಸನ ಮಗ ಎರಡು ಮತ್ತರು ಭೂಮಿಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಇಲ್ಲಿಯ ಶಾಸನೋಕ್ತ ಹಂದೇಶ್ವರ, ಪಂದೇಶ್ವರ, ಮಹಲಿಂಗಮೂರ್ತಿ ಹಂಡೇಶ್ವರ ದೇವಾಲಯವೇ ಇಂದಿನ ಬಸವೇಶ್ವರ ದೇವಾಲಯವಾಗಿದೆ.

**ಹೊಡಲ** (೧೧೫೯) ವು ತಾಲೂಕು ಕೇಂದ್ರವಾದ ಆಳಂದದಿಂದ ಪೂರ್ವಕ್ಕೆ ಕಡಗಂಚಿ ಮಾರ್ಗವಾಗಿ ೪೦ ಕಿ. ಮೀ., ಗುಲಬರ್ಗಾದಿಂದ ಉತ್ತರಕ್ಕೆ ಚಿಂಚನಸೂರು ಮಾರ್ಗವಾಗಿ ೩೭ ಕಿ. ಮೀ. ದೂರದಲ್ಲಿ, ಬೆಣ್ಣೆತೊರೆ ನದಿಯ ಬಲದಂಡೆಯ ಮೇಲಿರುವ ಚಾರಿತ್ರಿಕ ಮಹತ್ವದ್ದಾಗಿದ್ದು, ಈ ಊರಿಗೆ ಗುಲಬರ್ಗಾದಿಂದ ಹೋಗುವುದೇ ಲೇಸು. ಪ್ರಾಚೀನ ಶಾಸನಗಳಲ್ಲಿ 'ಪೊಡಲು', 'ಪೊಡಲ', 'ಹೊಡಲ' ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಗೊಂಕ-೧೨೦ಕ್ಕೆ ಸೇರಿತ್ತು. ಇಲ್ಲಿಂದ ಈವರೆಗೆ ಏಳು ಶಾಸನಗಳು ವರದಿಯಾಗಿದ್ದು, ಇವುಗಳಲ್ಲಿ ಕಳಚೂರಿಗಳ ನಾಲ್ಕು, ಕಲ್ಯಾಣದ ಚಾಳುಕ್ಯರ ಎರಡು ಹಾಗೂ ದೇವಗಿರಿ ಸೇವುಣರ ಕಾಲದ ಒಂದು ಶಾಸನಗಳಿವೆ. ಇವುಗಳಲ್ಲಿ ೧೧೮೦ಕ್ಕೆ ಸೇರಿದ ಕಳಚೂರಿ ಸಂಕಮನ ಶಾಸನವು ದುಗ್ಗಣ ಹಾಗೂ ಅವನ ಮಗ ಬೊಮ್ಮರಸರು ಹೊಡಲದಲ್ಲಿ ಹಬ್ಬೇಶ್ವರ, ರಾಮನಾಥ ಹಾಗೂ ಕೇಶವ ದೇವರುಗಳಿಗೆಂದು ಭವ್ಯವಾದ ತ್ರಿಕೂಟ ದೇವಾಲಯವನ್ನು ನಿರ್ಮಿಸಿದ ಅಂಶವನ್ನು ಹೇಳುತ್ತ, ಆ

ದೇವರುಗಳಿಗೆ ಮಹಾಮಂಡಳೇಶ್ವರರಾದ ವೀರಗೊಂಕರಸ ಹಾಗೂ ಮಲ್ಲಿದೇವರಸರು ೨೦ ಮತ್ತರು ಭೂಮಿಯನ್ನು ದಾನಕೊಟ್ಟ ವಿಷಯವನ್ನು ತಿಳಿಸಿದರೆ ಅದೇ ಸಂದರ್ಭದಲ್ಲಿ ವರ್ತಕರು ದೇವರಿಗೆ ದಾನ ಬಿಟ್ಟ ವಿವಿಧ ಸುಂಕಗಳ ಬಗ್ಗೆ ಇನ್ನೊಂದು ಶಾಸನ ತಿಳಿಸುತ್ತದೆ. ಇದೇ ದೇವರಿಗೆ ಚಿಕ್ಕಜವಳಿಗೆ, ವಗ್ಗದರಿ ಗ್ರಾಮಗಳನ್ನು ದಾನ ಬಿಟ್ಟ ವಿಷಯವನ್ನು ಇನ್ನೆರಡು ಶಾಸನಗಳು ತಿಳಿಸಿದರೆ, ಕಲ್ಯಾಣದ ಚಾಳುಕ್ಯ ಅರಸ ನಾಲ್ಕನೆಯ ಸೋಮೇಶ್ವರನ ಕಾಲಕ್ಕೆ ಸೇರಿದ ೧೧೮೫ರ ಶಾಸನವು ಬೆಟ್ಟ ಜವರಿಗೆ ಗ್ರಾಮವನ್ನು ಹೊಡಲದ ಪ್ರಸನ್ನ ರಾಮೇಶ್ವರ ದೇವರಿಗೆ ದಾನ ಬಿಟ್ಟ ವಿಷಯವನ್ನು ತಿಳಿಸುತ್ತ, ಚಾವನ ದಂಡನಾಯಕನು ಇಲ್ಲಿಯ ಶ್ರನಂದಿಕೇಶಾಲಯ (ನಂದಿ ಮಂಟಪ)ವನ್ನು ನಿರ್ಮಿಸಿದ ಮಹತ್ವದ ಅಂಶವನ್ನು ತಿಳಿಸುತ್ತದೆ. ಜೊತೆಗೆ ಸಾಂದರ್ಭಿಕವಾಗಿ ಇದು ನೆರೆಯ ಸಲಗರ, ಮುದುಡುಗೆ ಹಾಗೂ ಅಂಬುಲಗೆ ಗ್ರಾಮಗಳನ್ನು ಉಲ್ಲೇಖಿಸುತ್ತದೆ.

ಪ್ರಾಚೀನ ಶಾಸನಗಳಲ್ಲಿ ಉಲ್ಲೇಖಿತಗೊಂಡಿರುವ ಹೊಡಲ ಶ್ರೀ ಪ್ರಸನ್ನ ರಾಮೇಶ್ವರ ದೇವಾಲಯವೇ ಇಂದಿನ ರಾಮಲಿಂಗೇಶ್ವರ ದೇವಾಲಯವಾಗಿದೆ. ಇದೊಂದು ತ್ರಿಕೂಟವಾಗಿದ್ದು ಎತ್ತರವಾದ ಜಗತಿಯ ಮೇಲೆ ಪೂರ್ವಾಭಿಮುಖವಾಗಿ ನಿಂತಿದೆ. ಪ್ರತ್ಯೇಕವಾದ ಮೂರು ಗರ್ಭಗೃಹ ಹಾಗೂ ತೆರೆದ ಅಂತರಾಳಗಳನ್ನು ನಡುವಣ ನವರಂಗ ಒಗ್ಗೂಡಿಸಿದ್ದು ಇದರ ಪೂರ್ವಕ್ಕೆ ಮುಖ ಮಂಟಪವಿದೆ. ಪ್ರಧಾನ ಗರ್ಭಗೃಹದಲ್ಲಿ ಶಿವಲಿಂಗವಿದ್ದು ಉಳಿದೆರಡು ಗರ್ಭಗೃಹಗಳು ಬರಿದಾಗಿವೆ. ಇಲ್ಲಿಯ ಎಲ್ಲಾ ಬಾಗಿಲವಾಡಗಳು ಚತುರ್ಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಕೆತ್ತನೆಗಳಿವೆ. ನವರಂಗದಲ್ಲಿ ದೇವಕೋಷ್ಠಗಳಿದ್ದು ಸಪ್ತಮಾತೃಕಾ, ಪಾರ್ವತಿ-ಪರಮೇಶ್ವರ, ಮಹಿಷ ಮರ್ದಿನಿ, ಕಾರ್ತಿಕೇಯ ಹಾಗೂ ಗಣಪತಿಯ ಸುಂದರ ಶಿಲ್ಪಗಳಿವೆ. ನವರಂಗದ ನಡುವಣ ಛತ್ತನ್ನು ಅಷ್ಟದಿಕ್ಪಾಲಕರ ಸುಂದರ ಶಿಲ್ಪಗಳಿಂದ ಅಲಂಕರಿಸಿಲಾಗಿದ್ದು, ಇಲ್ಲಿಯ ಕಂಬಗಳು ಆಲಂಕಾರಿಕ ಕೆತ್ತನೆಯಿಂದ ಕಂಗೊಳಿಸುತ್ತವೆ. ಮುಖಮಂಟಪವು ಕಕ್ಷಾಸನವನ್ನು ಹೊಂದಿದ್ದು, ಆಕರ್ಷಕವಾಗಿದೆ. ಈ ದೇವಾಲಯದ ಮುಖ ಮಂಟಪದ ಇಕ್ಕೆಲದಲ್ಲಿ ಗಾತ್ರದಲ್ಲಿ ಕಿರಿದಾದರೂ, ಕಲಾತ್ಮಕತೆಯ ದೃಷ್ಟಿಯಿಂದ ಮುಖ್ಯವಾಗಿರುವ ಎರಡು ಕಿರು ತ್ರಿಕೂಟ ದೇವಾಲಯಗಳು ಎದುರು ಬದುರಾಗಿ ನಿಂತಿದು, ಬಹಶಃ ಇವನ್ನು ಬೊಮ್ಮರಸನು ತನ್ನ ತಂದೆ ತಾಯಂದಿರ ಸಲುವಾಗಿ ನಿರ್ಮಿಸಿದ್ದಿರಬಹುದೆಂದು ತೋರುತ್ತದೆ. ಇವು ಅಂತರಾಳದ ಸುತ್ತ ಮೂರು ಗರ್ಭಗೃಹಗಳನ್ನು ಹೊಂದಿದ್ದು ಆಕರ್ಷಕವಾದ ಬಾಗಿಲವಾಡಗಳನ್ನು ಹೊಂದಿರುವುದು ಗಮನಾರ್ಹವಾಗಿದೆ. ನವರಂಗದ ಛತ್ತುಗಳೂ ಭವ್ಯವಾಗಿದ್ದು, ಇವುಗಳ ದ್ವಾರಬಂಧಗಳು ದೊಡ್ಡ ಪ್ರಮಾಣದ ಶೈವದ್ವಾರಪಾಲಕರ, ಚೌರಿಧಾರಿ ಪರಿಚಾರಿಕೆಯರ ಹಾಗೂ ನಂದಿರೂಢ ಉಮಾ-ಮಹೇಶ್ವರ ಶಿಲ್ಪಗಳನ್ನು ಹೊಂದಿದ್ದು ನಯನ ಮನೋಹರವಾಗಿದ್ದು, ಮೇಲ್ಭಾಗದಲ್ಲಿ ಮಕರ ತೋರಣಗಳಿವೆ. ಈ ದೇವಾಲಯದ ಹೊರಭಿತ್ತಿಯಲ್ಲೂ ದೇವಕೋಷ್ಠಗಳಿದ್ದು, ಇಂದು ಹಾಳಾಗಿವೆ. ರಾಮೇಶ್ವರ ದೇವಾಲಯದ ಪೂರ್ವಕ್ಕೆ ವಿಶಾಲವಾದ ತೆರೆದ ನಂದಿಮಂಟಪ ಹಾಗೂ ಮುಖಮಂಟಪಗಳಿದ್ದು, ನಂದಿಮಂಟಪದಲ್ಲಿ ನಡುವೆ ನಂದಿ ಇದ್ದು, ಇದರ ಎಲ್ಲಾ ಛತ್ತುಗಳೂ ಕಮಲಮಯವಾಗಿವೆ. ಇದನ್ನು ೧೧೮೫ರಲ್ಲಿ ಚಾವನ ದಂಡನಾಯ್ಕನು ನಿರ್ಮಿಸಿದ ವಿಷಯವನ್ನು ಅಲ್ಲೇ ಇರುವ ಶಾಸನ ತಿಳಿಸುತ್ತದೆ. ಉಳಿದಂತೆ ಊರಲ್ಲಿ ಮಹಾದೇವ, ಬಸವಣ್ಣ, ಬೀರದೇವರು, ಹನುಮಂತ, ಲಕ್ಷ್ಮಿ ಹಾಗೂ ದುರ್ಗಾ ದೇವಿಯ ನವೀನ ದೇವಾಲಯಗಳಿವೆ.

**ಹೊನಗುಂಟಿ** (೪೪೦) ಯು ತಾಲೂಕು ಕೇಂದ್ರವಾದ ಚಿತ್ತಾಪುರದಿಂದ ನೈಋತ್ಯಕ್ಕೆ ೨೭ ಕಿ. ಮೀ., ವಾಡಿ ರೈಲು ನಿಲ್ದಾಣದಿಂದ ಪಶ್ಚಿಮಕ್ಕೆ ೧೦ ಕಿ. ಮೀ. ದೂರದಲ್ಲಿ ಕಾಗಿಣಾ ನದಿಯ ಬಲದಂಡೆಯ ಮೇಲಿರುವ ಚಾರಿತ್ರಿಕ ಸ್ಥಳ. ಹೊನಗುಂಟಿ ಗ್ರಾಮದಿಂದ ದಕ್ಷಿಣಕ್ಕೆ ಸುಮಾರು ಎರಡು ಕಿ. ಮೀ. ದೂರದಲ್ಲಿ ಕಾಗಿಣಾ ನದಿಯು ಭೀಮಾ ನದಿಯೊಂದಿಗೆ ಸಂಗಮಿಸುತ್ತಿದ್ದು, ಆ ಸ್ಥಳದಲ್ಲಿ ಸಂಗಮೇಶ್ವರ ದೇವಾಲಯವಿದೆ. ಕಾಗಿಣಾದ ಆಚೆ ದಡದಲ್ಲಿರುವ ಈ ದೇವಾಲಯದ ಲಿಂಗವು ಅಗಸ್ತ್ಯ ಪ್ರತಿಷ್ಠಾಪನೆಯೆಂಬ ಐತಿಹ್ಯವಿದ್ದು, ಅಗಸ್ತ್ಯ ಆಶ್ರಮವಿದ್ದ ಪವಿತ್ರ ಸ್ಥಳವಿದೆಂಬ ಸ್ಥಳೀಯ ನಂಬಿಕೆಯೂ ಇದೆ. ಪ್ರಾಚೀನ ಶಾಸನಗಳಲ್ಲಿ, 'ಪೊನುಗುಂಟೆ' ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ೧೨೦ ಮಹಾಜನರನ್ನು ಒಳಗೊಂಡಿದ್ದ ಅಗ್ರಹಾರವಾಗಿದ್ದು, ಇಲ್ಲಿಂದ ಈವರೆಗೆ ಒಂದೇ ಶಾಸನ ವರದಿಯಾಗಿದೆ. ಇಲ್ಲಿಯ ಈಶ್ವರ ಗುಡಿಯಲ್ಲಿರುವ ಈ ಶಾಸನ ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ್ದು, ೧೧೨೧ರಲ್ಲಿ ಇಲ್ಲಿಯ ಭೋಗೇಶ್ವರ ದೇವರ ಸೇವೆಗೆಂದು ಮಹಾಜನರ ಸಮ್ಮುಖದಲ್ಲಿ ಎರಡು ಮತ್ತರು ಭೂಮಿ, ಎರಡು ಅಂಗಡಿ ಹಾಗೂ ಕೆಲವು ತೆರಿಗೆಗಳನ್ನು ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ಶಾಸನೋಕ್ತ ಭೋಗೇಶ್ವರ ಗುಡಿಯೇ ಇಂದಿನ ಈಶ್ವರ ಗುಡಿಯಾಗಿದೆ.

ವೀರಭದ್ರನ ಗುಡಿಯ ಆವರಣದಲ್ಲಿರುವ ಇದು ಎರಡು ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿರುವ ದ್ವಿಕೂಟವಾಗಿದ್ದು, ನವರಂಗವನ್ನು ಎರಡು ಕಡೆಗಳಿಂದಲೂ ಪ್ರವೇಶಿಸಬಹುದಾಗಿದೆ. ಪ್ರಧಾನ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇನ್ನೊಂದರಲ್ಲಿ ನಂದಿ ಇದ್ದಂತೆ ತೋರುತ್ತದೆ. ಇದರ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದ್ದು ತೆರೆದ ನವರಂಗದಂಚಿನಲ್ಲಿ ಸುಖಾಸನವಿದೆ. ಇದರ ಬಳಿಯೇ ಇರುವ ವೀರಭದ್ರನ ಗುಡಿಯು ಏಕಕೂಟವಾಗಿದ್ದು, ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಎರಡು ದ್ವಾರಗಳಿವೆ. ಆಂಜನೇಯನ ಗುಡಿ ಹಿಂಬದಿಯಲ್ಲಿರುವ ಈಶ್ವರ ಗುಡಿ, ಹೊಲದಲ್ಲಿರುವ ಮೂರು ಕಣ್ಣಪ್ಪನ ಗುಡಿ, ಬಸ್ತಿಕೇರಿಯಲ್ಲಿರುವ ಈಶ್ವರ ಗುಡಿ ಹಾಗೂ ಕಬ್ಬಲಿಗೇರಾ ಓಣಿಯಲ್ಲಿರುವ ಈಶ್ವರ ಗುಡಿಗಳು ಏಕಕೂಟಗಳಾಗಿದ್ದು, ಸುಮಾರು ೧೨ನೇ ಶತಮಾನದ ರಚನೆಗಳಾಗಿವೆ. ಕಾಶಿಲಿಂಗ (ತಗ್ಗಿನಕೇರಿ) ಇನ್ನೊಂದು ಪ್ರಾಚೀನ ದೇಗುಲವಾಗಿದ್ದು, ಇಂದು ತಗ್ಗಿನಲ್ಲಿವೆ. ಹೊಳೆಯ ದಂಡೆಯ ಮೇಲಿರುವ ಚಂದಲಾಪರಮೇಶ್ವರಿ ದೇವಾಲಯವು ಧಾರ್ಮಿಕ ದೃಷ್ಟಿಯಿಂದ ಮಹತ್ವ ಪಡೆದಿದ್ದು, ಸನ್ನತಿಯಲ್ಲಿ ದೇವಿಯ ಪಾದುಕೆ ಇದ್ದರೆ, ಇಲ್ಲಿ ಸಾಕ್ಷಾತ್ ದೇವಿಯೇ ನೆಲೆಸಿರುವಳೆಂದು ನಂಬಿಕೆ ಇದ್ದು, ಬಂಡೆಗಲ್ಲಿನಲ್ಲಿ ಒಡಮೂಡಿದ ದೇವಿಯ ಆಕೃತಿ ಇದೆ. ಈ ದೇವಿಯ ಜಾತ್ರೆ ಧವನದ ಹುಣ್ಣಿಮೆಯಾದ ಐದನೆಯ ದಿನ ಜರುಗುತ್ತದೆ. ಉಳಿದಂತೆ ಊರಲ್ಲಿ ಬಸವೇಶ್ವರ, ಶರಣಬಸವೇಶ್ವರ, ಹಿರೊಡೆ, ಮೂಲೇಶ್ವರ, ಮೌನೇಶ್ವರ ಮುಂತಾದ ನವೀನ ಗುಡಿಗಳಿವೆ. ಸಿದ್ಧಲಿಂಗೇಶ್ವರ ಮಠ, ಸಾಲಿ ಮಠ, ಜುಮ್ಮಾಮಸೀದಿ, ದರ್ಗಾ ಹಾಗೂ ಎರಡು ಕಾಲಿಗುಂಬಜ್‌ಗಳೂ ಕೂಡ ಇಲ್ಲಿವೆ. ಶರಣ ಉಂಡುಪವಾಸಿಗಳಿದ್ದ ಪವಿತ್ರ ಸ್ಥಳ ಇದಾಗಿದ್ದು, ಎದುರು ದಂಡೆಯ ಮೇಲಿರುವ ಎನಗುಂಟಿ (ಜೇವರ್ಗಿ ತಾ.)ಯು ಬಳಸಿ ಬ್ರಹ್ಮಚಾರಿಗಳಿದ್ದ ಸ್ಥಳ ಎಂಬ ಅಭಿಪ್ರಾಯವಿದೆ.

**ಹೊಲಕುಂದಾ** (೧೮೫೯)ವು ತಾಲೂಕು ಕೇಂದ್ರವಾದ ಗುಲಬರ್ಗಾದಿಂದ ಉತ್ತರಕ್ಕೆ ಹುಮನಾಬಾದ್ ರಸ್ತೆಯಲ್ಲಿ ಸುಮಾರು ೨೮ ಕಿ. ಮೀ. ದೂರದಲ್ಲಿದೆ. ಗುಲಬರ್ಗಾದ ಹಫ್ತ್‌ಗುಂಬಜ್ ಮಾದರಿಯಲ್ಲೇ ಇರುವ ಐದು ಗುಮ್ಮಟಗಳ ಸಮುಚ್ಚಯ ಇಲ್ಲಿದ್ದು, ಬಹುಶಃ ಬಹಮನಿ ಸಾಮ್ರಾಜ್ಯದ ಪ್ರಮುಖ ವ್ಯಕ್ತಿಗಳಿಗೆ ಸಂಬಂಧಿಸಿದಂತಹ ಗುಮ್ಮಟಗಳಾಗಿರುವ ಸಾಧ್ಯತೆ ಇದ್ದು, ಇವು ಬಹಳ ಸುಂದರವಾಗಿವೆ.

**ಹೊಸಕೆರೆ** (೨೧೫೫) ಯು ತಾಲೂಕು ಕೇಂದ್ರವಾದ ಶಹಾಪುರದಿಂದ ನೈರುತ್ಯಕ್ಕೆ ಸುಮಾರು ೨೨ ಕಿ.ಮೀ., ವನದುರ್ಗದಿಂದ ಈಶಾನ್ಯಕ್ಕೆ ಮೂರು ಕಿ. ಮೀ. ಅಂತರದಲ್ಲಿರುವ ಒಂದು ಸಣ್ಣ ಗ್ರಾಮ. ಆದರೂ ಇಲ್ಲಿರುವ ವಿಶಾಲವಾದ ಕೆರೆ, ಅದರ ದಂಡೆಯ ಮೇಲಿರುವ ಬೇಸಿಗೆ (ಬೇಟೆ) ಮಹಲ್‌ಗಳಿಂದಾಗಿ ಪ್ರಸಿದ್ಧವಾಗಿದೆ. ಸುರಪುರದ ನಾಯಕ ಇಮ್ಮಡಿ ವೆಂಕಟಪ್ಪ (೧೭೭೩-೧೮೦೩)ನ ಕಾಲದಲ್ಲಿ ಅವನ ಬಳಿ ದಿವಾನನಾಗಿದ್ದ ನಿಷ್ಠಿ ವೀರಪ್ಪನು ನಾಯಕನಿಗಾಗಿ ಕೆರೆಗೆ ಹೊಂದಿಕೊಂಡಂತೆ ಚಿಕ್ಕ ಅರಮನೆಯನ್ನು ಕಟ್ಟಿಸಿದ್ದು, ಹಿಂದೆ ಇದು ಸುರಪುರದ ನಾಯಕರಿಗೆ ಬೇಟೆ ವಿಹಾರಕ್ಕೆ ವಿಶ್ರಾಂತಿ ಧಾಮವಾಗಿದ್ದು, ಬೇಸಿಗೆಯ ಬೇಗೆಯನ್ನು ನೀಗಿಸುವ ಸ್ಥಳವಾಗಿದ್ದು, ಇಂದು ಶಿಥಿಲಾವಸ್ಥೆಯಲ್ಲಿದೆ.